ಜಯಂತಿ

IYANTI

ಬೆಲೆ
೮ ಆಣೆ.

ಪುಟ್ಟುಪರಿ
೧೯೫೦

EBRUARY
1950

ಕನ್ನಡಿಗರ ಬಾನುಲಿಕಟ್ಟೆ, ಧಾರವಾಡ.



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar– 2134-49

ಜಯಂತಿ

AYANTI

ಬೆಲೆ
೮ ಆಣೆ.

ಫೆಬ್ರುವರಿ
೧೯೫೦.

BRUARY
1950

ಕನ್ನಡಿಗರ ಬಾನುಲಿಕಟ್ಟೆ, ಧಾರವಾಡ.

ಜಯಂತಿ

JAYANTI

ಜನವರಿ ೧೯೫೦

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜೆ. ಬೀಂದ್ರೆ

ಪ್ರಕಾಶಕರು— ಶ್ರೀ ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
½	,,	,,	೨೫	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ೧ನೆಯ ಫೆಬ್ರುವರಿ ೧೯೫೦ | ಸಂಚಿಕೆ ೬

ಈ ಸಂಚಿಕೆಯಲ್ಲಿ:

ಭಾರತಸ್ವಾತಂತ್ರ್ಯ (ಕವನ)
'ಆನಂದಕಂದ' ೪೦೯

ಭಾರತೀಯ ಪ್ರಜಾರಾಜ್ಯದ ಪ್ರಾರಂಭ (ಸಂಪಾದಕೀಯ)
ಸಂಪಾದಕರು ೪೧೧

ಧಾರವಾಡದ ಬಾನುಲಿಕಟ್ಟಿ (ವರದಿ)
'ವಿಹಂಗಮ' ೪೧೫

ನಗೀಗೆ ನೇವೀದ್ಯ
'ನಕಲೀ ನಾರಾಯಣಾಚಾರ್ರು' ೪೧೬

ಸಂಗೀತರತ್ನ (ಸಣ್ಣಕತೆ)
ಶ್ರೀ. ಕೃಷ್ಣರಾವ್ ದೇವಳಿ ಬಿ. ಎ. ವಿಜಾಪುರ ೪೧೯

ರಾಜ್ಯಾಂಗ ರಚನಾಸಭೆಯಲ್ಲಿ ಕನ್ನಡಿಗರು
ಶ್ರೀ. ನಾಡಿಗ ಕೃಷ್ಣಮೂರ್ತಿ, ನ್ಯೂ ದಿಲ್ಲಿ ೪೨೬

ನವಯುಗಾರಂಭ (ಕವನ)
'ಅಂಬಿಕಾತನಯಾವತ್ತ' ೪೩೮

ಸಟೀಕಾ ಸೌಂದರ್ಯಾಖ್ಯಾನ (ಹರಟೆ)
ಶ್ರೀ. 'ಅರವಿಂದ' ಹೊಂಬಳ ೪೩೯

ಶೋಕಚಕ್ರ (ಆರ್ಥಿಕವಿಚಾರ)
ಶ್ರೀ. ಮೋಹನ ಜಾಲೀಹಾಳ
ಬಿ. ಕಾಮ್, ಜೆ. ಡಿ. ಪಿ. ಎಂಪ್ ಎ. ೪೪೭

ನವಯುಗಾರಂಭ (ಕವನ)
'ಆನಂದಕಂದ' ೪೫೫

ನಾ ಕಂಡ ನಾಡು (ಪ್ರವಾಸಪ್ರಬಂಧ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೪೫೪

ಬಾಲಕರಿಗೂ ಪಾಲಕರಿಗೂ ಕೆಲವು ಮಾತು (ಬಾನುಲಿ)
ಶ್ರೀ. ದ. ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ ೪೫೯

ಸುಖದ ಚೌಕ (ಕಿರಿಯರಿಗಾಗಿ ಕಥೆ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೪೬೧

ವಿಮರ್ಶೆಯ ಶಿಕ್ಷಣರಂಗ
ಶ್ರೀ. ಜಯತೀರ್ಥ ರಾಜಪುರೋಹಿತ ಬಿ. ಎ. ಮತ್ತು
ಶ್ರೀಮತಿ ಪದ್ಮಾ ೪೬೯

ಸಾದರ ಸ್ವೀಕಾರ ೪೭೪

ವರ್ಷ ೧೨

★

ಫೆಬ್ರುವರಿ



ಸಂಚಿಕೆ ೯

★

೧೯೫೦

ಭಾರತ ಸ್ವಾತಂತ್ರ್ಯ

' ಆನಂದಕಂದ '

★

ಇದೋ ಬಂದ ಭಾನು ತಂದ, ಸ್ವಾತಂತ್ರ್ಯದ ಕಾಂತಿಯ !
ಅದೋ ಓಡಿ ಹೋಯ್ತು ನೋಡಿ, ಬಲಿದ ನಿಶಾಭ್ರಾಂತಿಯ !

೧

ಓ !— ಮೂಡಣದೀ ನಭದಿ ಹೊಸ್ಮ
ಯುಗದ ಮೊಳಕೆ ಮೂಡಿತೋ !
ಆ—ಮೊಳಕೆಯದೇ ಜೀವಿದು ನಿಜೆಯ
ಕೂಡ ಕದನ ಹೂಡಿತೋ !

ಮಂಗಲಮಯ ಉಷಾ ಸರಸಿ
ಭೃಂಗಕುಲದ ಸೆರೆಯ ಹರಿಸಿ
ಸಂಗೀತದ ಸುಧೆಯ ನೆರಸಿ
ಗಾಳಿಗಳಲಿ ತೇಲಿಸೆ—
ಮುಂಗುಡಿ ಜನವೆದ್ದು ಬಂತು
ಗೀತದ ಶ್ರುತಿಯಾಲಿಸೆ

ಇದೋ ಬಂದ ಭಾನುತಂದ
ಸ್ವಾತಂತ್ರ್ಯದ ಕಾಂತಿಯ—
ಅದೋ ಓಡಿ ಹೋಯ್ತು ನೋಡಿ
ಬಲಿದ ನಿಶಾಭ್ರಾಂತಿಯ !

೨

ಇಗೊ— ಬೀತು ಹೋದ ತರು-ಮರವೂ
ಚಿಗುರಿ ತಳಿತು ನಿಂತಿವೆ ;
ಅಗೊ— ಸೋತು ಬಿಳ್ದ ಲತೆ-ಲತೆಯೂ
ನಗೆಯ ಪೂವನಾಂತಿವೆ !

ಪ್ರಾಣವಾಯು ಬೀಸುತಿದೆ,
ತ್ರಾಣಶರಧಿ ಸೂಸುತಿದೆ,
ಹಿಗ್ಗು ಪಸೆಯೊಳೀಸುತಿದೆ—
ಎಂತಹದಿದು ಕ್ರಾಂತಿ ?
ಜಾಗೃತ ಭಾರತದಿ ಇಂದು
ನೆಲೆಗೈವಳು ಶಾಂತಿ !

ಇದೋ ಬಂದ ಭಾನು ತಂದ,
ಸ್ವಾತಂತ್ರ್ಯದ ಕಾಂತಿಯ—
ಅದೋ ನೋಡಿ ಹೋಯಿತೋಡಿ
ಬಲಿದ ನಿಶಾಭ್ರಾಂತಿಯ !

ಸಂಪಾದಕೀಯ

ಭಾರತೀಯ ಪ್ರಜಾರಾಜ್ಯದ ಪ್ರಾರಂಭ

ಬಹಳ ದಿನಗಳ ಮೇಲೆ ಭಾರತವು ರಾಜಕೀಯ ಸ್ವಾತಂತ್ರ್ಯವನ್ನು ಪಡೆಯುತ್ತಿಷ್ಟೇ ಅಲ್ಲ; ಇತಿಹಾಸ-ಪುರಾಣಕಾಲಗಳಲ್ಲಿಯೂ ಎಂದೂ ಕಂಡುಕೇಳಿ ಅರಿಯದ ಪ್ರಜಾರಾಜ್ಯದ ಪ್ರಾರಂಭೋತ್ಸವವನ್ನೂ ಕಳೆದ ಜನವರಿ ೨೬ನೆಯ ದಿನದ ಶುಭಮುಹೂರ್ತದಲ್ಲಿ ನೆರವೇರಿಸಿಬಿಟ್ಟಿತು.

ಭಾರತೀಯರಿಗೆ ಪ್ರಜಾರಾಜ್ಯವೆಂಬುದು ತೀರ ಹೊಸವಾತು. ಅವರ ಸಂಸ್ಕೃತಿಗೆ ಅರಸು ಗೊತ್ತು; ಅಡಳಿತ ಗೊತ್ತು; ಆದುದರಿಂದಲೆ 'ಯಾವ ರಾಯ ಬಂದರೂ ನಮ್ಮ ರಾಗೀ ಬೀಸುವುದು ತಪ್ಪದು' ಎಂಬ ಗಾದೆಯಾತು ಎಂದೋ ಹುಟ್ಟಿ, ಇಂದಿನ ವರೆಗೂ ಬದುಕಿಕೊಂಡು ಬಂದಿದೆ. ಈ ಗಾದೆಯ ವೇದವಚನವನ್ನು ಹುಸಿಯೆಂದು ತಿಳಿಯುವ ಅನುಭವ, ಇನ್ನು ಮುಂದೆ ಅವರಿಗೆ ಬಂದೀತು; ಬರಬೇಕು!

ಪ್ರಜರೆಂಬವರು ಆಳಿಸಿಕೊಳ್ಳುವವರೆಂಬ ನಮ್ಮ ಜನರ ದೃಢವಾದ ನಂಬುಗೆ, ಶಕ-ಹೂಣರ ಆಳಿಕೆಯನ್ನೂ ಪರಕೀಯರದೆಂದು ಭಾವಿಸಲಿಲ್ಲ; ಮುಸಲ್ಮಾನ-ಕ್ರೈಸ್ತರ ಆಳಿಕೆಯನ್ನೂ ಪರಕೀಯರದೆಂದು ಕಲ್ಪಿಸಲಿಲ್ಲ. ರಾಮ, ಕೃಷ್ಣ, ಧರ್ಮ, ವಿಕ್ರಮ, ಅಶೋಕ, ಚಂದ್ರಗುಪ್ತ, ಚಲುಕ್ಯವಿಕ್ರಮ, ವಿಜಯನಗರದ ನರಪತಿ— ಮೊದಲಾದವರನ್ನು ಕಂಡ ನಿಷ್ಠೆಯಿಂದಲೇ ಇವರು ಅನ್ನಿಗ ಅರಸರನ್ನೂ ಕಾಣುತ್ತಿದ್ದರು. ನಮ್ಮ ಜನರ ಈ ಪ್ರಜಾದಾಸಭಾವನೆಯೇ ಭಾರತವನ್ನು— ಸಂಪೂರ್ಣವಾಗಿ ಅಲ್ಲದಿದ್ದರೂ ಖಂಡಖಂಡವಾಗಿ— ಸಾವಿರಾರು ವರ್ಷಗಳಿಂದಲೂ ಸಾರ್ವಾಧೀನಗೊಳಿಸಿ, ಸಿರ್ಯೋಚನೆಯಿಂದ ಇಟ್ಟು ಬಿಟ್ಟಿತ್ತು. ಹಿಂದಿನಂತೆ ವ್ಯಕ್ತಿಪ್ರಭುತ್ವದಿಂದ ಭಾರತವನ್ನು ಆಳಬೇಕೆಂದರೆ, ಈಗಲೂ ಅಸಾಧ್ಯವಾದ ಮಾತೇನೂ ಅಲ್ಲ. ನಮ್ಮ ಪ್ರಜಾಕೋಟಿಯಲ್ಲಿಯ ಬಹುಸಂಖ್ಯಾಕರ ಭಾವನೆಯಲ್ಲಿ, ಅಂತಹ ಮಹತ್ತ್ವದ ಮಾರ್ಪಾಡು ಇದುವರೆಗೂ ಆಗಿಲ್ಲ. ಆದುದರಿಂದಲೇ ಸಂಪತ್ತು, ಶಕ್ತಿ, ಬುದ್ಧಿ, ಪಂಗಡಧುರೀಣತೆ ಇವೆಲ್ಲ, ಈಗಲೂ ನಮ್ಮ ಜನಮನವನ್ನು ಆಳುತ್ತಲಿವೆ. ಈ ಸ್ಥಿತಿಯನ್ನು ಕಂಡು ವಿಮರ್ಶಿಸುವವರಿಗೆ, ಭಾರತದ ಪ್ರಜಾಪ್ರಭುತ್ವವೆಂಬುದು ಯಾವ ಬಗೆಯಲ್ಲಿ ರೂಪುಗೊಳ್ಳಬಹುದೋ—ಎಂಬುದು ಗೂಢ-ಗುಂಭವಾಗಿ ನಿಲ್ಲುವುದು.

ನಮ್ಮಲ್ಲಿ ಅವತಾರದ ಕಲ್ಪನೆ ಹುಟ್ಟಿದ ಕಾಲದಲ್ಲಿ ಆದು ಅಂದಿನ ಕಾಲಕ್ಕೆ ಅವಶ್ಯಕವೆಂದು ಹುಟ್ಟಿರಬಹುದಾದರೂ, ಮುಂದೆ ಪರಿಸ್ಥಿತಿಗನುಸಾರವಾದ ಬದಲಾವಣೆಗಳು ಮುಂದೆ ಬಾರದುದರಿಂದ, ಅವತಾರದ ಕಲ್ಪನೆ ಜನರಲ್ಲಿ 'ದೀನನಾನು ತನ'ವನ್ನು ಶಾಶ್ವತಗೊಳಿಸಿ ಬಿಟ್ಟಿತು. ಈ 'ದೀನನಾನು ತನ'ವೇ ಇಂದಿನ ರಾಜಕೀಯ ಧುರೀಣರನ್ನೂ ಜನರಿಂದ ದೇವರೆಂದು ತಿಳಿಯಲು ಹಚ್ಚಿದೆ. ಆ ದೇವಾಂಶ-ದೇವಾವೇಶದವರೇ ಆಳಲು ತಕ್ಕವರೆಂದೂ, ತಾವು ಬರೀ ಆಳಿಸಿಕೊಳ್ಳುವ ನರಮನುಷ್ಯರೆಂದೂ ತಿಳುವಳಿಕೆಯಿರುವವರೆಗೆ, ನಮ್ಮಲ್ಲಿ ಪ್ರಜಾಪ್ರಭುತ್ವದ ಅಸ್ತಿತ್ವ-ವಿಕಾಸಗಳಿಗೆ ಅವಕಾಶವೇ ಇರದು.

ಪ್ರಜಾಪ್ರಭುತ್ವದ ನಮ್ಮ ಆಶೆ ಸಿದ್ಧಿಸಬೇಕಾದರೆ, ಭಾರತದ ಪ್ರತಿ ಯೊಬ್ಬ ಪ್ರಜೆಯೂ ತಾನೊಬ್ಬ ಕರ್ತೃತ್ವಶಾಲಿಯಾದ ಮಾನವನೆಂಬ ನಂಬುಗೆಯಿಂದ, ರಾಷ್ಟ್ರಕಲ್ಯಾಣದ ಕಡೆಗೆ ದೃಷ್ಟಿಯನ್ನಿರಿಸಿ, ಕಾರ್ಯಮಾಡುತ್ತಿರಬೇಕು. ಎಲ್ಲಕ್ಕೂ ಮೊದಲು ಮೂಡಬೇಕಾದುದು ನಮ್ಮಲ್ಲಿ ಭಾರತೀಯ ಬಂಧುತ್ವ; ಆ ಮೇಲೆ ಅಷ್ಟೇ ಅವಶ್ಯಕವಾದ ಸಮಾಜನಿಷ್ಠೆ, ಪರಸ್ಪರ ಸಹಾನುಭೂತಿ, ಸಹಕಾರಗಳು. ಇವೇ ನಮ್ಮನ್ನು ಪ್ರಜಾರಾಷ್ಟ್ರವನ್ನಾಗಿ ಸಂಘಟಿಸಿ, ಶಾಶ್ವತವಾದ ಬಲವನ್ನು ಒದಗಿಸಿಕೊಡುವಂತಹವು. ಇವುಗಳ ಅಭಾವದಿಂದಲೇ ಭಾರತೀಯರು, ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡು ಇನ್ನೊಬ್ಬರ ಆಳಾಗಿ ಬಾಳಿದರು.

ಬ್ರಿಟಿಷರು ಬೇಕಾಗಿಯೋ ಬೇಡವಾಗಿಯೋ ಬಿಟ್ಟು ಹೋದರೆಂದು, ನಮಗೆಲ್ಲ ಸ್ವಾತಂತ್ರ್ಯ ಸಿಕ್ಕಿತು. ಭಾರತವನ್ನೆಲ್ಲ ಆಳುವ ಏಕೈಕ ಸಾಮರ್ಥ್ಯವಂತನ ಅಭಾವನೆನ್ನಿ—ಇಂದಿನ ಜಾಗತಿಕ ಪರಿಸ್ಥಿತಿಯ ಪ್ರಭಾವವೆನ್ನಿ—ಭಾರತವೂ ಪ್ರಜಾಪ್ರಭುತ್ವವನೊಪ್ಪಿ, ಆ ರೀತಿಯ ರಾಜ್ಯಘಟನೆಯನ್ನು ನಿರ್ಮಿಸಿ, ಪ್ರಪಂಚದೆದುರು ತನ್ನ ರಾಜಕೀಯ ಗುರಿಯನ್ನು ಸಾರಿಬಿಟ್ಟಿತು. ಆದರೆ ಈ ಗುರಿ ದೂರದ ಗುರಿ. ಬರೀ ಪ್ರಾಥಮಿಕದಾನದ ಚುನಾವಣೆಯ ನಾಟಕಗಳಿಂದ ನಮ್ಮ ಗುರಿ ಸಾಧಿಸದು. ಈ ಚುನಾವಣೆಗಳ ಮೂಲಕ ಆರಿಸಿ ಹೋದ ಧೂರ್ತರ ಕೂಟ, ಪ್ರಜಾಪ್ರಭುತ್ವದ ಅನುಭವವನ್ನು ದೇಶಕ್ಕೆ ಒದಗಿಸಲಿಕ್ಕಿಲ್ಲ. ಇದಕ್ಕೆ ಉದಾಹರಣೆಗಳೆಂದರೆ, ಈಗಿನ ಕಳೆದ ಎರಡು-ಎರಡುವರೆ ವರ್ಷದ ಆಡಳಿತದಲ್ಲಿಯ ದುಷ್ಟ ಅನುಭವಗಳು. ಸರಕಾರ ನಮ್ಮ ಜನರ ಪ್ರತಿನಿಧಿಗಳದೇ ಆದರೂ ಅವರ ವಿಷಯವಲ್ಲಿದ್ದ ಜನತ ಸಂದೇಹಪೃಷ್ಟಿ, ಪ್ರಜೆಗಳ ಸುಖ-ಶಾಂತಿಸಾಧನೆಗೆಂದೇ ಇದ್ದ—ಸರಕಾರವನ್ನು ನಡೆಯಿಸುವ—ಅಧಿಕಾರಿವರ್ಗದ ಸ್ವಾರ್ಥಸಾಧಕ ವೃತ್ತಿ, ಇವೆರಡೂ ದೇಶದ ಸ್ವಾಸ್ಥ್ಯವನ್ನೇ ಕೆಡಿಸಿಬಿಟ್ಟವೆ. ಈ ಗೊಂದಲದ ಶಿವಪೂಜೆಯಲ್ಲಿಯೇ ಕರಡೆಗಳು ಸೇರಿದಂತೆ, ಬೇರೆ ಬೇರೆ ರಾಜಕೀಯ ತತ್ತ್ವವಾದಿಗಳ ದಾಳಿಗಳು ತೊಂದರೆ ಕೊಡುತ್ತಲಿವೆ. ಇವೆಲ್ಲ ಕ್ಲೇಶಕಾರಕ ಅನುಭವಗಳು, ನಮ್ಮ ಪ್ರಜಾಪ್ರಭುತ್ವ ಪದ್ಧತಿಯನ್ನು ವಿಶ್ವಾಸದಿಂದ ಕಾಣಲು ಹಚ್ಚಿದಷ್ಟು ಉಗ್ರವಾಗಿಬಿಟ್ಟವೆ. ಆದರೂ ಇವೆಲ್ಲ, ಸಂಕ್ರಮಣ ಕಾಲದಲ್ಲಿಯ ಅನಿವಾರ್ಯ ಸಂಕಟಗಳೆಂಬ ತಿಳಿವಳಿಕೆ ಮಾಡಿಕೊಂಡು, ಆಸ್ಥೆ—ವಿಶ್ವಾಸಗಳಿಂದ ನಡೆದು, ಬಂದಿರುವ ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಬೇಕಾಗಿದೆ. ಅದಕ್ಕಾಗಿ ನಮ್ಮ ಜನತೆ ಮೊದಲು ಶ್ರೇಷ್ಠ ಪ್ರಜೆಯಾಗಿ ಮಾರ್ಪಡಬೇಕು. ಆ ಪ್ರಜೆ ತನ್ನ ಪ್ರಭುತ್ವದಿಂದ ದೇಶದಲ್ಲಿ ಸುಖ-ಶಾಂತಿಗಳನ್ನು ಖಂಡಿತವಾಗಿ ನೆಲೆಗೊಳಿಸ ಬಲ್ಲದು. —ಸಂ.

ಧಾರವಾಡದ ಬಾನುಲಿಕಟ್ಟೆ

'ವಿಹಂಗಮ'

ಬಲುದಿನಗಳಿಂದ ಕನ್ನಡಿಗರು ಅಪೇಕ್ಷಿಸುತ್ತಿದ್ದ ಬಾನುಲಿ-ಕೇಂದ್ರವು, ಕೊನೆಗೊಮ್ಮೆ ಕಳೆದ ತಿಂಗಳ ೮ನೆಯ ತಾರೀಖಿಗೆ ಧಾರವಾಡದಲ್ಲಿ ಪ್ರಾರಂಭವಾಯಿತು. ಸುದ್ದಿ ಹಾಗು ಬಾನುಲಿ ಶಾಖೆಯ ಮಂತ್ರಿಗಳಾದ ಮಾನ್ಯ ದಿವಾಕರರವರೇ ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಸಮಾರಂಭಕ್ಕೆ ಶ್ರೀ. ಉರವಕೊಂಡದ ಜಗದ್ಗುರುಗಳು, ಮಾನ್ಯ ಎಮ್.ಪಿ. ಪಾಟೀಲರು, ಉಪಕುಲಪತಿಗಳಾದ ಶ್ರೀ. ಆರ್ ಎ. ಜಾಗೀರ್‌ದಾರರವರು, ಶ್ರೀಮಾನ್ ಸಿ. ನಿಜಲಿಂಗಪ್ಪನವರು ದಯೆಮಾಡಿಸಿ, ತಮ್ಮ ಶುಭಾಶಯಗಳನ್ನು ತಾವೇ ಬಿತ್ತರಿಸಿದರು. ಪ್ರಧಾನ ಮಂತ್ರಿಗಳಾದ ಮಾನ್ಯ ಖೇರರು ಹಾಗು ನ್ಯಾಂತದ ಗವರ್ನರರಾದ ರಾಜಾ ಮಹಾರಾಜಾ ಸಿಂಗರು, ತಮ್ಮ ಸಂದೇಶಗಳನ್ನು ಧ್ವನಿಮೂಲಕ ಅರುಹಿದರು. ಪ್ರಾರಂಭೋತ್ಸವಕ್ಕೆ ಸುಮಾರು ಸಾವಿರದ ನಡೆಗೆ ಆಮಂತ್ರಿತರಲ್ಲದೆ, ಊರೊಳಗಿನ ಸಾವಿರಾರು ವಿದ್ಯಾರ್ಥಿ ಹಾಗು ಇತರ ಜನರು, ಮಂಟಪ ಹಿಡಿಸಲಾರದೆ ಸೇರಿದ್ದರು. ತಾವು ಅದುವರೆಗೆ ಎಂದೂ ಕಾಣದ ವಿಜ್ಞಾನದ ಯುಗದ ಒಂದು ಹೊಸ ಬೆಳಕು, ಸಂಸ್ಕೃತಿ ಪ್ರಚಾರದ ಒಂದು ಹೊಸ ಸಾಧನ ಅವರಿಗೆ ದೊರಕುವುದಿತ್ತು. ಪ್ರತಿಯೊಬ್ಬನೂ ಅಂದು ಹರ್ಷ, ಉತ್ಸಾಹ, ಅಭಿಮಾನ, ಗೌರವ ಈ ಸದ್ಭಾವನೆಗಳಿಂದ ಉನ್ಮೀಲಿತನಾಗಿದ್ದನು. ಅದುವರೆಗೆ ಕೇವಲ ಕವಿಯಮೂಲಕವಾಗಿಯೇ ಕೇಳುತ್ತಿದ್ದುದನ್ನು ಇಂದು ಕಣ್ಣಾಣೆಯೆ ನೋಡಿಯೂ ಆನಂದಿಸಿದರು. ಶ್ರೀ. ಆದ್ಯ ರಂಗಾಚಾರ್ಯರ 'ಸ್ವರಗಂಗೆ,' ಕವಿಗಳಾದ ಬೇಂದ್ರೆ ಹಾಗು ಪು. ತಿ. ನರಸಿಂಹಾಚಾರ್ಯರ ಕಾವ್ಯವಾಚನ, ಕರ್ನಾಟಕದ ಹೆಸರುಗೊಂಡ ಸಂಗೀತಜ್ಞರಾದ ಶ್ರೀ. ಮಲ್ಲಿಕಾರ್ಜುನ ಮನಸೂರ, ಗಂಗೂಬಾಯಿ ಹಾನಗಲ್, ಗುರುರಾವ್ ದೇಶಪಾಂಡೆ, ಭೀಮಸೇನ ಜೋಶಿ, ಕಾಗಲಕರ, ಬಸವರಾಜ ರಾಜಗುರು, ಹುಲಗೂರ ಕೃಷ್ಣಾಚಾರ್ಯ, ನಾರಾಯಣನಾಥ, ನೀಲಮ್ಮ ಕಡಾಂಬಿ ಇವರ ಸುಶ್ರಾವ್ಯ ಗಾಯನ, ವಾದ್ಯವಾದನ ಇವು ಅಂದಿನ ಅತ್ಯಂತ ಅಲ್ಲಾದದನ್ನೀಯುವ ಕಾರ್ಯಕ್ರಮಗಳಾಗಿದ್ದುವು. ಸಾಯಂಕಾಲ ೫ ಗಂಟೆಗೆ ಪ್ರಾರಂಭವಾದ ಅಂದಿನ ಕಾರ್ಯಕ್ರಮಗಳು ಬಹು ಮನೋರಂಜಕವಾಗಿ ನಡೆದು, ರಾತ್ರಿ ೧೨ ಗಂಟೆಗೆ ಕೊನೆಗಂಡವು. ಊಟ-ನಿದ್ದೆಗಳನ್ನು ಕೂಡ ಮರೆತಂತಿತ್ತು ಜನ! ಬೇಗ ಪ್ರಾರಂಭವಾಗುವಂತೆ ಮಾಡಿದ ಬಹುಭಾಗ ಶ್ರೇಯಸ್ಸು, ಇಲ್ಲಿಯ ಬಾನುಲಿಕೇಂದ್ರದ ಅಧಿಕಾರಿಗಳಾದ ಶ್ರೀ. ವಾಕನೀಸ್ ಹಾಗು ಅವರ ಸಹಕಾರಿಗಳಿಗಿದೆ.

ಧಾರವಾಡದ ಬಾನುಲಿಕಟ್ಟೆಯ ಪ್ರಾರಂಭ

ಧಾರವಾಡದ ಬಾನುಲಿಕೇಂದ್ರ ಕನ್ನಡ ಸಂಸ್ಕೃತಿ ಪ್ರಚಾರದ ಸರ್ವೋತ್ಕೃಷ್ಟ ಸಾಧನವಾಗಲಿ!

ಜಯಂತಿಯ ಈ ಸಂಚಿಕೆಯಲ್ಲಿ, ಧಾರವಾಡದ ಬಾನುಲಿಕಟ್ಟೆಯ ಮಕ್ಕಳ ಕಾರ್ಯಕ್ರಮದಲ್ಲಿ ನಡೆದ ಭಾಷಣ-ಕಥೆಗಳೂ ಕವಿಸಮ್ಮೇಲನದಲ್ಲಿ ಹೇಳಿದ ಎರಡು ಕವನಗಳೂ ಪ್ರಕಟವಾಗಿವೆ.

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಹೊಸ ಪ್ರಕಟನೆಗಳು

ಶ್ರೀ. ಚೆನ್ನವೀರ ಕಣವಿಯವರ

ಭಾವ ಜೀವಿ

ಶ್ರೀ. ಉರವಕೊಂಡ ಜಗದ್ಗುರುಗಳವರ

ಅಖಿಂಡ ಕರ್ನಾಟಕ

ಶ್ರೀ. ಕೋ. ಚೆನ್ನಬಸಪ್ಪನವರ

'ಗಡೀಪಾರು'

ವಾ. ಚಂದಾ ಕೇವಲ ೫ ರೂ.

ಸಗ್ಗಕ್ಕೆ ನೇವಿದ್ಯ

(೧)

ಕರಿಯಣ್ಣ ಮರಿಯಣ್ಣ ಊರಿಗೆ ಹೊರಟಿದ್ದರು. ಊರ್ಬಂಡಿ ಬಂದು ಪ್ಲ್ಯಾಟ್‌ಫಾರ್ಮಿನ ಮೇಲೆ ನಿಂತಿತು.

ಕರಿಯಣ್ಣ :— ಇಂಜೀನಿಗೆ ಹತ್ತಿರ ಡಬ್ಬೀವೋಳಗಽ ಕುಂಡ್ರೋಣೋ ಮರೆಣ್ಣಾ! ಅಂದರ ಗಡಾನಽ ಹೋಗಿ ಊರ ಮುಟ್ಟೀತೀವಿ.

ಮರಿಯಣ್ಣ :— ಹೋಗೋ ಮಳ್ಳ! ಟೊಕ್ಕಾ ಕೊಟ್ಟಿದ್ದೀನ ಸುಳ್ಳೀನಽ? ಗಾಡ್ಯಾಗ ಬಾಳೊತ್ತಂಕಾ ಕೂಡೂಣಂತ. ಅದಕ್ಕ ಹಿಂದೀನ ಡಬ್ಬೀನಽ ಹಿಡ್ಯೋಣು ನಡಿ!

(೨)

"ನೀ ಯಾವಾಗಲೂ ಗುರುತಿಲ್ಲದ ಹೆಂಗಸರ ಜೋಡೀ ಹ್ಯಾಂಗ ಮಾತಾಡತೀ? ಇದೊಂದು ನನಗ ಆಶ್ಚರ್ಯದ ವಿಷಯನಽ ಆಗೇದ!"

"ಆದೆಲ್ಲಾ ಖರೇ! ಗುರುತು ಇರೂ ಹೆಂಗಸರು ನನ್ನ ಜೋಡೀ ಮಾತಾಡೂದೇ ಇಲ್ಲ!"

(೩)

ಆತ:— ಹೆಂಗಸರು ಮಕ್ಕಳ ತಾಯಂದಿರಾದ ಮ್ಯಾಲ, ಅವರ ಸಿಡುಕು ಸ್ವಭಾವ ಹೋಗಿಬಿಟ್ಟು ಸೌಮ್ಯಸ್ವಭಾವಿಗಳಾಗತಾರ— ಅಂತಾರ. ಆದರ ನಿಂದೆಲ್ಲಾ ಉಪರಾಟೀನಽ ಕಾಣಸತಽವ!

ಆಕೆ:— ಒಂದು ಎರಡು ಮಕ್ಕಳ ತಾಯಂದಿರಿಗೆ ಹತ್ತೂ ಮಾತು ಅದು! ಎಂಟು ಹತ್ತು ಮಕ್ಕಳ ತಾಯಂದಿರಿಗಲ್ಲ!

(೪)

ಆಕೆ:—ಲಗ್ನ ಆಗೂದಕಿಂತಾ ಮೊದಲ ನನಗ ಕ್ಷಣ-ಕ್ಷಣಕ್ಕ ಅನಿಸತಿತ್ತು: 'ಇನ್ನು ಮುಂದ ನನ್ನ ಗತಿ ಹ್ಯಾಂಗಽ?'! ಅಂತ.

ಆತ:— ಈಗ ನನಗ, ಲಗ್ನ ಆದ ಮ್ಯಾಲ ಕ್ಷಣಕ್ಷಣಕ್ಕ ಅನಿಸಲಿಕ್ಕೆ ಹತ್ತೀದ; 'ಇನ್ನ ಮುಂದ ನನ್ನ ಗತಿ ಹ್ಯಾಂಗಽ ಅಂತ.

(೫)

"ಬರೇ ಬಹಳಷ್ಟು ದುಡ್ಡು ಇರೂದರೊಳಗ ಕಾವ್ಯ ಇರೂದಿಲ್ಲ!"

"ಆದರ ಮೈಯೊಳಗ ಕಾವ್ಯ ಇದ್ದು ಮನ್ಯಾಗ ದುಡ್ಡು ಇರದದ್ದರಕಿಂತಾ ಅದು ಒಳ್ಳೇದು!

(೬)

"ಇದೇನಪಾ, ಥೇಟರಿನ ಹೊರಗ ಕೂಗಾಟ ಏನೋ ನಡದಽದಲ್ಲಾ!"


ಶರೀರದಲ್ಲಿಯ
ಅಸಹ್ಯ ಉಷ್ಣತೆಯನ್ನು
ಇದರಿಂದಲೇ ತೆಗೆದ
ಹಾಕಿರಿ
PEARL
Kadha
PURE HERBAL TONIC
ಪರ್ಲ್‌ಕಾಡ ಶರೀರದ ಒಳಗಿನ ಮತ್ತು ಹೊರಗಿನ ಉರುಪನ್ನು ತೆಗೆದು ಹಾಕಿ ಪ್ರಕೃತಿಯನ್ನು ತಂದುಗಾಡುವದು ಅಪಚನ ಶಕ್ತಿಯನ್ನು ಸರಿಪಡಿಸುವದು, ಶರೀರಕ್ಕೆ ಮತ್ತು ಮಾನಸಿಕ ಶಕ್ತಿಯನ್ನು ಬೆಳಸುವದು ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೊಗಲಾಡಿಸಿ ಪುಷ್ಟಿಕರ ಮಾಡುವದು
ನಿಮ್ಮ ಹತ್ತಿರದ ಕಮಿಸ್ತರ ಕಡೆಯಿಂದ ಇಂದೇ ಒಂದು ಬಾಟಲೆಯನ್ನು ತಂದು ಸೇವಿಸಲು ಪ್ರಾರಂಭಿಸಿರಿ
ಪರ್ಲ್ ಎಂಡ್ ಕಂಪನಿ
ಮುಂಬಯಿ ೩೭

"ಅದಽ? ಇಬ್ಬರು ಮಾರವಾಡಿ ಅವಳ ಜವಳಿ ಅಣ್ಣ-ತಮ್ಮಂದಿರು, ಒಂದ ಟಿಕೀಟಿನ ಮ್ಯಾಲ ಇಬ್ಬರನ್ನೂ ಬಿಡು— ಅಂತ ಜಗಳಾಟಾ ನಡಿಸ್ಯಾರ! ದೇವರ ತಮ್ಮಿಬ್ಬರನ್ನೂ ಈ ಲೋಕಕ್ಕ ಕಳಸುವಾಗ ಸುದ್ದಾ ಒಂದಽ ಟಿಕೀಟಿನ ಮ್ಯಾಲ ಕಳಸ್ಯಾನಽ— ಅಂತ ಅವರ ಆಗ್ಯೆಮೆಂಟು!"

(೭)

"ನನ್ನ ಕಡೇ ಏನೇನೂ ತಪ್ಪಲ್ರೀ! ಬ್ಯಾರೇ ಬ್ಯಾರೇ ಜನರಽ ಕೂಡಿ, ನನ್ನ ಸಾಲಗಾರನ ಮಗನ್ನ ಮಾಡಿದರು."

"ಅದ್ಹ್ಯಾಂಗರೀ?"

"ಎಷ್ಟು ಜೇಡತೀನಿ ಅಷ್ಟು ಸಾಲಾ ಕೊಟ್ಟರರೀ!"

(೮)

"ಅಂತ! ಹಿಟ್ಲರ ಕಡಿತನಕಾ ಲಗ್ನಾ ಮಾಡಿಕೊಳ್ಳಲಿಲ್ಲಂತ!"

"ಅಂವಾ ಮೂರ್ಖ ಮನಸ್ಯಾ ಏನು ನಮ್ಹಾಂಗ! ಜಗತ್ತನ್ನಽ ಗೆದ್ದು ಆಳಬಹುದು; ಆದರ ಒಬ್ಬ ಹೆಣತಿನ್ನ ಆಳೂದು ಕಷ್ಟಾ ಅಂತ ತಿಳಕೊಂಡು ಬಿಟ್ಟಿದ್ದ ಆ ಧೂರ್ತ!"

(೯)

ಕಾವಲುಗಾರ:— ಅಲ್ಲೋ, ನಡರಾತ್ರಿ ಆತು.... ನಿನಗ ನಿದ್ದೀನಽ ಬರಪೊಲ್ಲದಲ್ಲಾ!

ಸೆರೆಯಾಳು:— ನಡರಾತ್ರೀ ಒಳಗ ಹಾಸಿಗೀ ಮ್ಯಾಗ ಮಲಕೊಂಡು ನನಗ ಅಬ್ಯಾಸನಽ ಇಲ್ಲೋ ಯಪ್ಪಾ, ಏನ ಮಾಡಲಿ?

(೧೦)

ಅವಳು:— ನೀವು ಅರ್ಥಶಾಸ್ತ್ರದ ಪ್ರೊಫೇಸರೂ ಅಂತ ನಿಮ್ಮನ್ನ ಮದವೀ ಮಾಡಿಕೊಂಡೆ. ಸಂಪೂರ್ಣ ಮೋಸಹೋದೆ!

ಪ್ರೊಫೆಸರ್:— ಅದ್ಹ್ಯಾಂಗ?

ಅವಳು:— ಒಂದೇ ಒಂದು ದುಡ್ಡು ಸುದ್ದಾ ಎಂದೂ ನನ್ನ ಕಣ್ಣಿಗೆ ಬಿಳೂದಿಲ್ಲ!

ಸಂಗೀತರತ್ನ

(ಒಂದು ಕಥೆ)

ಶ್ರೀ. ಕೃಷ್ಣರಾವ ದೇವಳಿ, ಬಿ. ಎ. ವಿಜಾಪುರ

★

ಅನೀತಿವಂತ ಜನರೂ ಮಲ್ಲಿಗೆ ಮುಡಿಯುವರೆಂದು
ಮಲ್ಲಿಗೆಯನ್ನೇ ಬಹಿಷ್ಕರಿಸುವುದೇ? ರಾಯರ
ಸಂಗೀತದ ಬಹಿಷ್ಕಾರ, ಇಂತಹ ಹುಚ್ಚು
ನಂಬುಗೆಯದೇ ಅಲ್ಲವೆ?

★

ರಮೇಶನ ತಂದೆ ರಾಮರಾಯನ ವಿಚಿತ್ರ ವರ್ತನೆಯನ್ನು ಕಂಡು, ಮನೆಯಲ್ಲಿ ಎಲ್ಲರೂ ನಿರುತ್ಸಾಹಿಗಳಾಗಿದ್ದರು. ರಮೇಶನ ತಾಯಿ ರಾಧಾಬಾಯಿ, ಮೊದಲಿನಿಂದಲೂ ಅಶಕ್ತ ಪ್ರಕೃತಿಯನಳಾದುದರಿಂದ, ಮನೆಯಲ್ಲಿಯ ಕಲುಷಿತ ವಾತಾವರಣದ ಮೂಲಕ ನುತ್ತಿಷ್ಟು ಬಾಡಿಹೋಗಿದ್ದಳು. ರಾಮರಾಯರು ಅದೇ ಸರಕಾರೀ ನೌಕರಿಯಿಂದ ನಿವೃತ್ತರಾಗಿದ್ದರು. ನೊದಲಿನಿಂದಲೂ ಪೂಜಾ-ಪುರಾಣಗಳಲ್ಲಿ ಅಪರಿಮಿತ ಉತ್ಸಾಹಿಗಳಾದುದರಿಂದ, ನಿವೃತ್ತರಾದ ಮೇಲೆ ಅವರಿಗೆ, ಪುರಾಣ ಶ್ರವಣ-ಪಠಣಗಳಿಗೆ ಪೂರ್ಣ ಬಿಡುವು ದೊರೆತುಬಿಟ್ಟಿತು. ಅವರ ಹಟಯೋಗದ ಮುಂದೆ ಯಮನು ಕೂಡ ಸೋಲುವಂತಿತ್ತು. ಅವರು ನುಡಿದದ್ದೇ ವೇದ; ತೋರಿಸಿದ್ದೇ ಪೂರ್ವ. ತಮ್ಮ ಹಟದ ಪರಿಣಾಮವಾಗಿ ರಮೇಶನ ಗತಿಯೇನಾಯಿತೆಂದು ತಿಳಿದೂ, ಅದರಿಂದ ತಮ್ಮ ಪ್ರಸಂಚವನ್ನು ನಿರ್ವಹಿಸುವುದು ಅಸಾಧ್ಯವೆಂದು ಕಂಡುಬಂದರೂ, ತಮ್ಮ ಹೆಮ್ಮೆಯಲ್ಲಿಯೇ ಮೈಮರೆತರು. ರಾತ್ರಿ ಮಾತ್ರ ರಮೇಶನ ರೂಪ ಮುಂದೆ ಬಂದು ನಿಂತಂತಾಗಬೇಕು. ಆಗ ಅವರ ವಿಚಾರಲಹರಿಗಳಿಗೆ ಕಡೆಯಿರಲಿಲ್ಲ:

"ರಮೇಶ ಎಷ್ಟು ಸೊಕ್ಕಿನಿಂದ ಹೊರಟುಹೋದನಲ್ಲ! ನನ್ನ ಧ್ಯೇಯವನ್ನೆಲ್ಲ ಬೂದಿಯಲ್ಲಿ ಹಾಕಿದ. ನನ್ನ ಪುರಾಣ ಶ್ರವಣ-ಪಠಣಗಳ ಜಗತ್ತೆಲ್ಲ!.... ಅವನ ಆ ಮಚ್ಚು ಸಂಗೀತ.... ಛೆ! ಸಂಗೀತದ ಹೆಸರನ್ನು ಉಚ್ಚರಿಸಿದರೆ ನೈಯಲ್ಲಿಯ ರಕ್ತ ಕಾಯುತ್ತದೆ. ಈ ಸಂಗೀತಶೂರರೆಲ್ಲ ಸಂಸಾರವನ್ನು ಸೀಳಿ ಶೂಲಕ್ಕೇರಿಸುತ್ತಿದ್ದಾರೆ. ... ಸಕಲನಿಯಾಮಕಾ, ನನ್ನ ಸತ್ತ್ವಪರೀಕ್ಷೆ ಮಾಡಬೇಡ; ಮಾಡಬೇಕೆಂದಿದ್ದರೂ ಸಹಿಸುವ ಶಕ್ತಿಯನ್ನಾದರೂ ಕೊಡು. ರಮೇಶ ವ್ಯರ್ಥವಾಗಿ ತನ್ನ ಜೀವನವನ್ನು ಹಾಳು ಮಾಡಿಕೊಂಡ. ರಮಿಸಿ ನೋಡಿದೆ, ರೇಗಿ ಹೇಳಿದೆ; ರಮೇಶನಿಗೆ ಸಂಗೀತದ ರೋಗವೇ ಅಂಟಿಕೊಂಡಿದೆ. ರಮೇಶನ ಹೆಂಡತಿಯಂತೂ ಈ ವಿಷಯದಲ್ಲಿ ಮೂಕಾವತಾರ ಧರಿಸಿಬಿಟ್ಟಿದ್ದಾಳೆ. ಶ್ರೀಹರೀ-ನಾರಾಯಣಾ—ಪಾಂಡುರಂಗಾ, ರಮೇಶನಿಗೆ ಸುಬುದ್ಧಿ ದೊರೆಯುವ ವಿಚಾರ ನೀನೂ ಮಾಡಲಿಲ್ಲವೆ!"

ಇಂತಹ ವಿಚಾರಲಹರಿಯಲ್ಲಿಯೂ ಎಷ್ಟೋ ಸಾರೆ ಉದರ ಜಪಮಣಿಗಳ ಎಣಿಕೆ, ನದಿಯ ನೀರಿನಂತೆ ಆತಂಕವಿಲ್ಲದೆ ಸಾಗುತ್ತಿತ್ತು.

ಅಂದು ಭಾನುವಾರ. ರಾಮರಾಯರು (ಈಗೀಗ ನಿವೃತ್ತರಾದ ಮೇಲೆ, ರಾಮಾಚಾರ್ಯರೆಂದು ಕರೆಯಬೇಕಾಗಿ ಎಲ್ಲರಿಗೂ ಬಿನ್ನವಿಸಿದ್ದರು.) ಮುಂಜಾವಿನ ೯ ಗಂಟೆಯ ಸುಮಾರಿಗೆ, ಪಡಸಾಲೆಯಲ್ಲಿ ಗೀತಾಪಠಣಮಾಡುತ್ತ ಕುಳಿತಿದ್ದರು. ಮೇಲಿಂದ ಮೇಲೆ ಒಂದು ಬೆಕ್ಕು ಒಳ-ಹೊರಗೆ ಓಡಾಡುತ್ತಿತ್ತು. ಅದಕ್ಕೊಂದು ಒಳ್ಳೆಯ ಏಟು ಕೊಟ್ಟು ಗೀತೆಯಲ್ಲಿ ಪೂರ್ಣವಾಗಿ ಪುನ್ನರಾಗಜೇಕೆಂದು ಸಿದ್ಧರಾಗಿ ಕುಳಿತರು. ೧೦-೧೫ ನಿಮಿಷಗಳಾದಮೇಲೆ, ಅಕಸ್ಮಾತ್ತಾಗಿ ಸಮೀಪದಿಂದ ಹಾಯ್ದು ಹೋಗುವುದನ್ನು ನೋಡಿ "ಫಟ್" ಎಂದು ಹೊಡೆದರು.

"ನಮಸ್ಕಾರ ಆಚಾರ್ಯರೇ!"

ರಾಯರು ದಿಗಿಲುಬಿದ್ದು ನೋಡಿದರು:

"ಓಹೋ ಬಾರಪ್ಪಾ ರಾಘವೇಂದ್ರಾ! ನೀನೂ ನಮ್ಮನ್ನು ಬಿಟ್ಟುಹೋಗಿದ್ದೀಯೆಂದು ತಿಳಿದುಕೊಂಡಿದ್ದೆ. ನಿತ್ಯವೂ 'ಕಾಕಾ' ಎಂದು ಕರೆಯುವಾತ, ಈ ದಿನ ಒಳ್ಳೆಯ ನೆನಪಿನಿಂದ 'ಆಚಾರ್ಯರೇ' ಎಂದು ಕರೆದೆಯಲ್ಲ! ಹುಡುಗರು ಹೀಗಿರಬೇಕು!"

"ಅದಿರಲಿ ಕಾಕಾ, ಗೀತೆಯಲ್ಲಿ ಇವೇ ಈಗ ಗಂಭೀರರಾಗಿ ಪೆ.ಗ್ಸರಾಗಿದ್ದಿದ್ದಲ್ಲ!" ರಾಘವೇಂದ್ರನೆಂದ.

"ಅಂದರೆ! ಕುಜೇಷ್ಟೆ ನೂದುತ್ತೀಯಾ? ಬಿಕ್ಕು ಜೊಡೆದಾಗ ನೀನು ಬಂದಿನ್ತೆಯಾ!" ರಾಯರು ಕುತೂಹಲದಿಂದ ಕೇಳಿದರು.

"ಪ್ರಾಮ ಕಾಕಾ, ನಿಮ್ಮ ಮನಸ್ಸಿನಲ್ಲಿ ನಿತ್ಯ ಕುರುಕ್ಷೇತ್ರ ನಡೆಯುತ್ತಿದೆ. ಈ ದಿನ ನಿಮ್ಮ ಕೋಸ ಬೆಕ್ಕಿನ ಮೇಲೆಯೇ ಆಜ್ಞೆ?...."

ರಾಘವೇಂದ್ರನು ರಮೇಶನ ಮಿತ್ರ. ಇಬ್ಬರೂ ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ್ದರು. ರಾಘವೇಂದ್ರ ಉತ್ತಮ ತರಗತಿಯಲ್ಲಿ ಪಾಸಾಗಿ, ಅದೇ ಊರಿನ ಕಾಲೇಜಿನಲ್ಲಿ ಪ್ರೊಫೆಸರನೆಂದು ನೇಮಿಸಲ್ಪಟ್ಟಿದ್ದ. ಇವನ ವಾಕ್ಚಾತುರ್ಯ, ಆಕರ್ಷಣಿ. ವಿನೋದಶೈಲಿ ಅಗಾಧವಾಗಿದ್ದುವು. ರಮೇಶ ಮಾತ್ರ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ, ದಿವಿನ್ಯೂ ಖಾತೆಯಲ್ಲಿ ನೌಕರಿಗೆ ಸೇರಿದ್ದ.

ರಾಯರು ರಾಘವೇಂದ್ರನ—ಮೇಲಿನ—ಮಾತು ಕೇಳಿ ಕಕ್ಕಾವಿಕ್ಕಿಯಾದರು. ರಮೇಶನ ವಿಷಯ ಮತ್ತೆ ಕಲೆಯಲ್ಲಿ ಭೋಗವಿಯಹಸ್ತಿತು.



ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

"ರಾಘವೇಂದ್ರಾ" ಎಂದರು ರಾಯರು ಒಮ್ಮೆಲೆ, "ನನ್ನ ಮನಸ್ಸಿನಲ್ಲಿಯ ಕುರುಕ್ಷೇತ್ರದ ಸೂತ್ರಧಾರ....."

ರಾಘವೇಂದ್ರ ಅವರ ಮಾತಿಗೆ ಇಂಬುಗೊಡದೆ ಹೇಳಿದ: "ಕುರುಕ್ಷೇತ್ರದ ಸೂತ್ರಧಾರ ರಮೇಶನೇ ಅಲ್ಲವೆ? ನಾನು ನಿಮ್ಮೆದುರಿಗೆ ಚಿಕ್ಕವನಾದ್ದರಿಂದ, ಇಷ್ಟು ಧೈರ್ಯದಿಂದ ಮಾತಾಡಬಾರದು. ಮಾತಾಡುತ್ತಿದ್ದೇನೆ. ಕ್ಷಮಿಸಿರಿ,....ರಮೇಶನ ಕೀರ್ತಿ ಈಗಾಗಲೇ ಚಿಗುರಿತ್ತು. ನೀವು ಕಡ್ಡಿಯಿದ್ದುದನ್ನು ಕಲ್ಪನಾಸಾಮ್ರಾಜ್ಯದಲ್ಲಿ ಸಿಕ್ಕು ಗುಡ್ಡವನ್ನಾಗಿ ಮಾಡಿದಿರಿ. ಅವನ ಒಲವಿಗೆ ನೀವು ಕವಡೆಯ ಕಿಮ್ಮತ್ತೂ ಕೊಡಲಿಲ್ಲ. ಆಫೀಸಿನ ಕೆಲಸ ಸಾಗಿಸಿಕೊಂಡು ತನ್ನ ಕಲೆಯನ್ನೂ ಸಾಧಿಸಿಕೊಳ್ಳುತ್ತಿದ್ದ. ಅವನ್ನು ನೋಡಿ ಕೌತುಕಪಡುವಂತಿತ್ತು. ಆದರೆ ಅವನ ದುರ್ಭಾಗ್ಯ...."

"ರಾಘವೇಂದ್ರಾ!—ಏನು ದುರ್ಭಾಗ್ಯ....ಏನು ಮಾತಾಡುತ್ತಿದ್ದೀ....." ರಾಯರೆಂದರು.

"ನಿಮ್ಮ ಲಕ್ಷ್ಯವೆಲ್ಲಿದೆ! ಅವನ ದುರ್ಭಾಗ್ಯಕ್ಕೆ ನೀವೇ ಕಾರಣರಾದಿರಿ. ನಿಮ್ಮ ಹಟದಿಂದ ರಾಧಾಬಾಯಿಯೂ ಹಣ್ಣಾದರು. ದಿನದಿನಕ್ಕೆ ಅವರ ಪ್ರಕೃತಿ ಕ್ಷೀಣವಾಗುತ್ತಿದೆ. ರಮೇಶನು ಯಾರ ಕೊಲೆ ಮಾಡಲಿಲ್ಲವಷ್ಟೇ! ಅವನನ್ನೇಕೆ ಅಷ್ಟೊಂದು ಕ್ರೂರ ದೃಷ್ಟಿಯಿಂದ ನೀವು ನೋಡುತ್ತಿದ್ದೀರೋ ತಿಳಿಯದ ವಿಷಯವಾಗಿದೆ ಜನರು ಅವನ ಗುಣಗಳಿಗೆ ಸೋತು ಪೂಜೆ ಮಾಡಿದರು. ನೀವು ಮಾತ್ರ ಪಾದರಕ್ಷೆಗಿಂತ ಕೀಳೆಂದು ತಿಳಿದಿರಿ. ನೀವು ನಿತ್ಯ, ದೇವರಿಗೆಂದು ಒಂದು ಮೈಲು ದೂರ ಮುಂಜಾನೆ-ಸಂಜೆಗೆ— ಹೋಗಿ ಬರುತ್ತೀರಿ. ಜನರ ಕೂಡ ಮಾತಾಡಿದರೆ ಮೈಲಿಗೆಯಾಗುವುದೆಂದು ತಿಳಿದು, ಬೀದಿಯಲ್ಲಿ ಮಾತಿಲ್ಲದೆ ಸಾಗುತ್ತೀರಿ. ಜನರ ಭಾವನೆಗಳು ನಿಮಗೆ ತಿಳಿಯಲು ಹೇಗೆ ಸಾಧ್ಯ! ರಮೇಶನ ಆಂದಿನ ಕಾರ್ಯಕ್ರಮ, ಇನ್ನೂ ನನ್ನ ತಲೆಯಲ್ಲಿ ಅಚ್ಚಳಿಯದೆ ಉಳಿದಿದೆ ಅವನ ರಾಗದ ಆಲಾಪ–ವಿಸ್ತಾರಾದಿಗಳನ್ನು ಕೇಳಿ ಕೂಡಿದ ಜನರ ಮೈಮರೆತರು. ಅವರ ಭಾವನೆಗಳು ತುಂಬಿಬಂದುವು. ಅವನ ಕರತಾಡನ ಎಂಥವರ ಕಗ್ಗತ್ತಲನ್ನೂ ಕೇಳುವಂಥದಿತ್ತು. ಆ ಕ್ಷಣದಲ್ಲಿ ಸಕಲಸೃಷ್ಟಿಯೂ ಸಂಗೀತಮಯವಾಗಿತ್ತು....."

"ಸಾಕುಮಾಡು ರಾಘವೇಂದ್ರಾ, ಸಾಕು ನಿನ್ನ ಉಪನ್ಯಾಸ! ನೀನಿದೀಗ ಈ ಜಗತ್ತಿನಲ್ಲಿ ಮುಖ ತೋರಿಸುತ್ತಿರುವಿ. ಇಷ್ಟು ಬೇಗ ವಿಶ್ವಾಮಿತ್ರ ಸೃಷ್ಟಿಯನ್ನು ನಿರ್ಮಿಸಿ ವಿಶ್ವವನ್ನೆಲ್ಲ ವಿನಾಶಕ್ಕೊಪ್ಪಿಸಬೇಡ. ದೇವರು ನಿನ್ನಲ್ಲಿ ಅಮೋಘವಾದ ಸಾಹಿತ್ಯ ಕಲೆಯನ್ನು ಕೊಟ್ಟದ್ದಾನೆ. ನಿನ್ನಲ್ಲಿ ಉತ್ತಮವಾದ ವಾಣಿಯಿದೆ ಸಂಗೀತ–ಸಂಗೀತ! ಈ ಅರ್ಥವಿಲ್ಲದ ಪೊಳ್ಳು ವ್ಯಸನದ ವಿಷಯ ತಲೆಯಿಂದ ತೆಗೆದು ಹಾಕು. ಪುರಾಣಗಳನ್ನೂ, ಉಪನಿಷತ್ತುಗಳನ್ನೂ, ಸೂಕ್ತಗಳನ್ನೂ, ಗೀತೆಯನ್ನೂ ಜೆನ್ನಾಗಿ ಅಭ್ಯಸಿಸು. ಬ್ರಹ್ಮವೃಂದದ ಸಭೆಗಳನ್ನು ಕೂಡಿಸಿ ಉಪನ್ಯಾಸಗಳನ್ನು ಏರ್ಪಡಿಸುವಾ!" ರಾಯರ ಈ ಉಪನ್ಯಾಸವನ್ನು ಕೇಳಿ ರಾಘವೇಂದ್ರನುಡಿದ:

"ಕಾಕಾ, ನಿಮ್ಮ ಸಲಹೆ ನನಗೆ ಮಾನ್ಯವಿದೆ. ಆದರೆ ನಿಮ್ಮ ಪುರಾಣ ಪಠಣಕ್ಕೂ–ಸಂಗೀತಕ್ಕೂ ಯಾವ ಕಲ್ಪನೆಯಿಂದ ವೈರತ್ವವನ್ನು ನಿರ್ಮಿಸಿದ್ದಿರಿ? ಪುರಾಣವನ್ನು ಸರಾಗವಾಗಿ ಹಾಡುವುದನ್ನು ನೀವು ಕೇಳಿಲ್ಲವೇ. ಸಂಗೀತ ಹೀನವಾಗಿದ್ದರೆ, ಕೀರ್ತನೆಗಳಿಗೇಕೆ ನೀವು ಅಷ್ಟೊಂದು ಮಹತ್ವ ಕೊಟ್ಟಿರಿ? ಕನಕದಾಸ–ಪುರಂದರದಾಸರು ಸಂಗೀತದಿಂದಲೇ ಜಗತ್ತಿನಲ್ಲಿ ಬೆಳಕು ಬೀರಲಿಲ್ಲವೇ....ಛೆ! ನಿಮಗೆ ಬೇಸರು ಬರಹತ್ತಿತು. ನನಗೆ ಗೊತ್ತು, ನಿಮಗೆ ಈ ವಿಷಯು ವಿಷದ ಬಟ್ಟಲಿದ್ದಂತೆಯೆಂದು! ಹಿರಿಯರು ಹಟವನ್ನು ಹಿಡಿದರೆ, ಹುಡುಗರಾದ ನಾವು ಹುಡುಗಾಟವನ್ನಾದರೂ ಮಾಡೋಣವೆಂದು ಈ ವಿಷಯ ತೆಗೆದೆ. ಕಾಕಾ, ಕೋಪಗೊಳ್ಳಬೇಡಿರಿ. ನಿಮ್ಮ ಗೀತಾಪಠಣದಲ್ಲಿ ಅಡ್ಡಿ ತಂದೆ!" ಎಂದು ವಿಕಟಹಾಸ್ಯ ಮಾಡಿದ. ರಾಯರು ರಾಘವೇಂದ್ರನಿಗೆ ಸರಿಯಾಗಿ ಉತ್ತರ ಕೊಡಲು ತಿಳಿಯದೆ, ಮನದಲ್ಲಿ ನೊಂದರು. ಸಂಗೀತದ ನೋಲಿನ ಸಿಟ್ಟಿಗಿಂತ ರಾಘವೇಂದ್ರನ ಮುಂದಾದ ತಮ್ಮ ಸೋಲಿನ ಕಲ್ಪನೆಯಿಂದಲೇ ಕಳವಳಗೊಂಡರು. ಮರುಳುಮಾತುಗಳೊಡನೆ ಮೋಸಮಾಡಿ ಮೆರೆಯುವುದಕ್ಕೆ ಈ ಜನ ಶಿಕ್ಷಣ ಪಡೆಯುತ್ತಾರೆಂದು ಸಂತಪ್ತರಾದರು.

ರಾಘವೇಂದ್ರನೇ ಕೇಳಿದ: "ರಮೇಶ ಮನೆಬಿಟ್ಟು ಹೋಗಿ ಎಷ್ಟೋ ದಿನಗಳಾಗಿ ಹೋದುವು. ತಿರುಗಿ ಬರಲಾರನೇ! ಎಲ್ಲಿಗೆ ಹೋಗಿದ್ದಾನೆ? ಏನಾದರೂ ಸುದ್ದಿ ತಿಳಿಯಿತೇ!"

"ನನಗೇನು ಗೊತ್ತು? ಹೋಗಿರಬೇಕು ಹೊಲಗೇರಿಗೆ!" ಎಂದು ರಾಯರು ಸಂತಾಪದ ಭರದಲ್ಲಿ ಹೇಳಿ, ಮುಖದಲ್ಲಿ ತುಂಬಿದ ವಿವರನ್ನು ಒರಸಿಕೊಂಡು, ದೇವರ ಮನೆಯ ಕಡೆಗೆ ನಡೆದರು. ಅವರ ಮಾತಿನಿಂದ ರಾಘವೇಂದ್ರನಿಗೆ ಅತಿ ಖೇದವೆನಿಸಿತು. 'ರಮೇಶನ ಗತಿಯೇನು?' ಎಂದು ವಿಚಾರಿಸುತ್ತ ಹೊರಟು ಹೋದ. ಹೊರಗೆ ಹೋಗುವಾಗ ರಾಧಾಬಾಯಿ ಹೊರಗೆ ಬಂದು 'ರಾಘೂ—ರಾಘೂ' ಎಂದು ಕೂಗಿದುದು ಅವನಿಗೆ ಕೇಳಿಸಲಿಲ್ಲ.

* * * *

ರಮೇಶ ಚಿಕ್ಕವನಿರುವಾಗ, ತನ್ನ ಸೋದರತ್ತೆ (ರಾಯರ ಅಕ್ಕ ವಿಧವೆಯಿದ್ದಳು) ದೇವರ ಪದಗಳನ್ನು ಇಂಪಾಗಿ ಹಾಡುವುದನ್ನು ಮೇಲಿಂದ ಮೇಲೆ ಕೇಳುತ್ತಿದ್ದ. ಆಗಲೇ ಅವನಲ್ಲಿ ಗೀತಗಳ ರುಚಿ ಕುಂಬಿತು. ಅತ್ತೆಯಿಂದ ಕೆಲವು ಹಾಡುಗಳನ್ನೂ ಹೇಳಿಸಿಕೊಂಡಿದ್ದ. ಅಲ್ಲಲ್ಲಿ ಅಂದು ತೋರಿಸಿ, ಜನರ ಮನವನ್ನು ಆಗಲೇ ರಂಜಿಸುತ್ತಿದ್ದ. ಕೆಲವು ದಿನಗಳ ಮೇಲೆ, ಮಡಿ-ಮೈಲಿಗೆಗಳ ವಿಷಯದಲ್ಲಿ ತನ್ನ ತಾಯಿ ಮತ್ತು ಅತ್ತೆಯ ನಡುವೆ ವಾದ ಸುರುವಾಗಿ, ಮುಂದೆ ಕೆಲವು ದಿವಸಗಳಲ್ಲಿಯೇ ವಿಕೋಪಕ್ಕೆ ಹೋಗಿ, ಅತ್ತೆ ಯಾತ್ರಾನಿಮಿತ್ತವಾಗಿ ಹೊರಟು ಹೋದವಳು ತಿರುಗಿ ಬರಲೇ ಇಲ್ಲ. ರಮೇಶ ಮಾತ್ರ ಅನಳ ಸಲುವಾಗಿ ನೊಂದ. ಅವಳು ಹೇಳಿಕೊಟ್ಟ ಹಾಡುಗಳನ್ನು ನಿತ್ಯ ಪಠಣ ಮಾಡಹತ್ತಿದ. ಸಂಗೀತದ ಅಭಿರುಚಿ ದಿನೇ ದಿನೇ ಬಳ್ಳಿಯಂತೆ ಬೆಳೆಯಹತ್ತಿತು. ಕೀರ್ತನೆಗಳೇ ಆಗಲಿ, ಸಂಗೀತ ಕಾರ್ಯಕ್ರಮವೇ ಆಗಲಿ, ಎಲ್ಲೆಡೆಯೂ ತಪ್ಪದೆ ಹೋಗಹತ್ತಿದ. ಶಾಲೆಯಲ್ಲಿ ಇವನ ಇಂಪಾದ ಹಾಡು ಕೇಳಿ ಎಲ್ಲರೂ ತಲೆದೂಗ ಹತ್ತಿದರು. ಅಲ್ಲಲ್ಲಿಯ ಸಂಸ್ಥೆಗಳಲ್ಲಿ ಒಂದೆರಡು ಪದಗಳನ್ನು ಅನ್ನಲೂ ಪ್ರಾರಂಭಿಸಿದ. ಆಗ ತಂದೆ ಅವನನ್ನು ಕರೆಯಿಸಿ ಹೇಳಿದರು: "ರಮೇಶ, ಇದೇನು ಕೇಳುತ್ತಿದ್ದೇನೆ? ಮೊನ್ನೆ ವೀರಶೈವರ ಸಂಸ್ಥೆಯಲ್ಲಿ ಹೊಕ್ಕಿದ್ದೆಯಾ? ಈ ದಿನ ಮುಂಜಾನೆ ಪಾದ್ರಿಗಳೇಕೆ ಕರೆದಿದ್ದರು? ನಿನ್ನ ಲಕ್ಷಣವೇಕೊ ನನಗೆ ವಿಚಿತ್ರವಾಗಿ ಕಾಣಹತ್ತಿದೆ. ನನ್ನ ಧ್ಯೇಯ—ವೃತ್ತಿಗೆ ಆಘಾತವಾಗುತ್ತಿದೆ. ನಾಳೆಯಿಂದ ನೀನು ಹಾಡುವುದನ್ನು ಬಿಡಬೇಕು." ರಮೇಶನಿಗಾಗ ೧೪-೧೫ ವಯಸ್ಸಾಗಿರಬೇಕು. ತಂಧೆಯ ಒತ್ತಾಯದ ಮೇರೆಗೆ ಕೆಲವು ತಿಂಗಳುಗಳ ವರೆಗೆ ಆ ವಿಷಯ ಬಿಟ್ಟು ಬಿಟ್ಟ. ಮರುತಿಂಗಳಲ್ಲಾದ ಸಂಗೀತ ಸ್ಪರ್ಧೆಯಲ್ಲಿ ರಮೇಶನ ಹೆಸರೇಕೆ ಬರಲಿಲ್ಲವೆಂದು ವಿದ್ಯಾರ್ಥಿಗಳ ದೂರುಗಳಿಗೇನು ಕಡಿಮೆಯಾಗಲಿಲ್ಲ. ತಂದೆಯು ಪವನಾದ ಕಾವಲುಗಾರನಾಗಿ, ರಮೇಶನನ್ನು ಎಲ್ಲೆಲ್ಲಿಯೂ ಸಂಗೀತ ಕೇಳುವುದಕ್ಕೆ ಹೋಗದಂತೆ ಜಾಗರೂಕನಾಗಿ ಬಿಟ್ಟಿದ್ದರಿಂದ, ರಮೇಶ ಉಪಾಯಗಾಣದಾಗಿದ್ದ.

ಸುಮಾರು ಒಂದು ವರ್ಷ ದಾಟಿತು. ಅಂದು ದಸರೆ. ಊರಿಗೆ ಪ್ರಖ್ಯಾತನಾದ ಧನವಾನ್ ಲಕ್ಷ್ಮೀಚಂದ ಶೇಡಜಿಯ ಮನೆಯಲ್ಲಿ, ಸಂಜೆಗೆ ಗವಯಿಗಳಲ್ಲಿ ಅಗ್ರಗಣ್ಯನಾದ ರಹಿಮತ್‌ಖಾನನ ಸಂಗೀತ ಕಾರ್ಯಕ್ರಮವಿತ್ತು. ತಂದೆಯು ಬಂಗಾರ ಹಂಚಲೆಂದು ಆಪ್ತೇಷ್ಟರ ಮನೆಗೆ ಹೋಗುವುದನ್ನು ನೋಡಿ, ರಮೇಶ ಶೇಡಜಿಯ ಮನೆಗೆ ಓಡಿದ. ರಮೇಶನನ್ನು ಕಂಡು ಶೇಡಜಿಯು ಬೆನ್ನಮೇಲೆ ಕೈಯಾಡಿಸುತ್ತ ಕರೆದು, ಎಲ್ಲ ಆಮಂತ್ರಿತ ಜನರ ಮುಂದೆ ಕೂಡ್ರಿಸಿದ. ಒಂದು ನಿಮಿತ್ತ ತೆಗೆದು, ಖಾನನ ಕಾರ್ಯಕ್ರಮ ಸುರುವಾಗುವುದಕ್ಕಿಂತ ಮೊದಲು, ರಮೇಶನಿಂದ ಒಂದೆರಡು ಪದಗಳನ್ನು ಹೇಳಿಸಿದ. ರಹಿಮತ್‌ಖಾನನಿಗೆ ರಮೇಶನ ಲಯಬದ್ಧವಾದ ಇಂಪಾದ ಸ್ವರಗಳನ್ನು ಕೇಳಿ ಬಹಳೇ ಸಂತೋಷವಾಯಿತು. "ಬಹುತಚ್ಛಾ ಶರಬೇತೀ ಇದ್ದಾನೆ ಬಚ್ಚಾ!" ಎಂದು ಉದ್ಗಾರವನ್ನು ತೆಗೆದನು. ರಹಿಮತ್‌ಖಾನರ ಕಾರ್ಯಕ್ರಮ ಬೆಳಗಿನ ವರೆಗೂ ಆಯಿತು. ಎಲ್ಲರಿಗೂ ಸಂಗೀತದ ರಸದೂಟವಾಯಿತು. ಬಂದವರು ಮುಗಿದೊಡನೆ ಹೊರಟಿದ್ದು ಹೋದರು. ರಮೇಶ ಮಾತ್ರ ಕದಲಲಿಲ್ಲ. ಅಶ್ರುಗಳು ಧಾರೆಗಟ್ಟಿ ಸುರಿಯುತ್ತಿದ್ದುವು. ರಹಿಮತ್‌ಖಾನನು ಸಖೇದಾಶ್ಚರ್ಯದಿಂದ "ಯಾಕೆ ಏನಾಗಿದೆ?" ಎಂದು ಕೇಳಿದ.

"ನನಗೆ ತಿಳಿಯದು. ನಿಮ್ಮಿಂದ ಸಂಗೀತ ಸಾಮ್ರಾಜ್ಯದ

ZANDU

PROTOCASEN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City

೩೦-೩೨ ವರ್ಷಗಳಿಂದಲೂ ಸಾವಿರಾರು ಜನರನ್ನು ರೋಮುಕ್ತಗೊಳಿಸಿ ಅನುಭವಪಡೆದುಕೊಂಡ

ಶಕ್ತಿವರ್ಧಕ ಧಾತುಪೌಷ್ಟಿಕಪಾಕ

ಈವಿಷಯ ಮೂತ್ರನಿಯಂತ್ರಣೆಯಿಂದಿಗೆ—ಶ್ರದ್ಧೆ—ವೀರ್ಯಸ್ಖಲನ ವಾಗುವುದು, ಸ್ವರಶಕ್ತಿಯು ದಾರಢ್ಯವಾಗಿಯೂ ಉಲ್ಲಾಸದಾಯಕ ಶಕ್ತಿಯೂ, ನಪುಂಸಕತ್ವ, ಇಂದ್ರಿಯಶೈಥಿಲ್ಯ ಇವುಗಳನ್ನೆಲ್ಲ ಕೂಡಿಸುವಾಗಿ, ವೀರ್ಯವನ್ನು ಸತ್ವಯುತವಾಗಿಸುವುದು. ವಂಶಾಭಿವೃದ್ಧಿಯಾಗಿ ತುಂಬ ಹುರಿಯೇಳುವುದು, ಕಂಡಾದಿ ಇದರ ಸ್ಪರ್ಶದಿಂದ ಪಡೆಯಲ್ಪಡಿಯುವುದಿಲ್ಲ; ೭೦-೦ ವಯಸ್ಸಿನ ಮುದುಕರೂ ಇದರ ಸೇವನೆಯಿಂದ ನವಚೈತನ್ಯದ ಉತ್ಸಾಹ ಹೊಂದುವುದರಲ್ಲಿ ಸಂದೇಹವಿಲ್ಲ. ಚೂರ್ಣಮಾತ್ರೆ ರಕ್ತಪ್ರದರ, ಶ್ವೇತಪ್ರದರ, ಬಂಜೆತನ ಅದಾವ ಅಪಸ್ಮಾರಕ್ಕೂ ಸಾಯುವುದು, ಮೊದಲಾದುವುಗಳ ಮೇಲೆ ಇದು ಪ್ರಾಮಾಣಿಕವಾಗಿ ಕೆಲಸಮಾಡುತ್ತದೆ. ಇದರಲ್ಲಿ ಹೆಚ್ಚು ಗಿಡಮೂಲಿಕೆ, ಬೀಜ, ಸುವರ್ಣವಪಲೀವಸಂಗ ಮೊದಲಾದ ಬೆಲೆಯುಳ್ಳ ಔಷಧಿಗಳನ್ನು ಕೂಡಿಸಲಾಗಿದೆ.

೧ಡಬ್ಬಿಯ ಬೆಲೆ ೫ ರೂ. ೭ ದಿವಸಗಳಲ್ಲಿ ಗುಣ. ೨ಂ ರೂ ಬೆಲೆ ೬೫ ದಿವಸಗಳಲ್ಲಿ ಗುಣ. ಶ್ರೀಮಂತ ಕಟ್ಟಿ-ಸಾವ್ಕಾರರ ಕಲುವಾಗಿ ೧ ಡಬ್ಬಿಗೆ ೧೦ ರೂ. ಕೂಡಲೇ ಗುಣ. ಇದರಲ್ಲಿ ಅನೇಕ ಬೇರೆಬೇರೆ ಶಕ್ತಿವರ್ಧಕ ಔಷಧಗಳು ಕೂಡಿವೆ.

ಆರ್ಡರ್ ಜೊತೆಗೆ ಪ್ರತಿಯೊಂದು ಡಬ್ಬಿಗೂ ರೂ. ಯಂತೆ ಅಡ್ವಾನ್ಸು ಕಳುಹಿಸಬೇಕು. ಅದನ್ನು ವಜಾಮಾಡಿ ಉಳಿದ ಹಣಕ್ಕೆ ವ್ಹಿ. ಪಿ. ಮಾಡುತ್ತೇವೆ. ಕಮ್ಮಿಯೇನೂ ಇಲ್ಲ. ೧ಡಬ್ಬಿಗೆ ೩ಲ ದಿವಸಕ್ಕೆ ಸಾಲುವುದು. ೨ಡಬ್ಬಿ ತೆಗೆದುಕೊಳ್ಳುವವರಿಗೆ ಅಂಚೆಯು ವೆಚ್ಚ ವಿಲ್ಲ. ೩ಡಬ್ಬಿ ತೆಗೆದುಕೊಳ್ಳುವವರಿಗೆ ೧ಡಬ್ಬಿ ಬಕ್ಷೀಸು. ಗುಣದಲ್ಲಿಗೆ ಅನೇಕ ಸರ್ಟಿಫಿಕೇಟುಗಳು ಬಂದಿವೆ.

ವಿಳಾಸ:— **ಮ್ಯಾ. ಡಿ. ಎಸ್. ಆ್ಯಂಡ್ ಕೊ. ಔಷಧಾಲಯ**

ಮು. ಪೋ. **ಮಿರಜ** (ಎಸ್. ಎಂ. ಸಿ.)

ವೈಭವ ಕಂಡೆ. ಅವರ ಅಮೃತವನ್ನು ಸವಿದೆ. ನನ್ನ ಅಂತರಂಗ ಶುದ್ಧವಾಯಿತು. ಸಂಗೀತವಲ್ಲಿಯ ಶಕ್ತಿಯ ಪರಮಾವಧಿ ನನಗೀಗ ಕಂಡುಬಂದಿತು. ನಾನಿನ್ನೂ ಬಾಲಕನಿದ್ದೇನೆ. ನೀವು ಮೊದಲು ಹೇಳಿದ ಪೂರ್ವಾಕಲ್ಯಾಣವೊಂದನ್ನು ಬಿಟ್ಟು ಉಳಿದ ರಾಗಗಳು ಏಳಿಯಲಿಲ್ಲ. ಆದರೇನು? ಆವುಗಳ ವಿಸ್ತಾರದ ವೈಚಿತ್ರ್ಯವನ್ನು ನಿಮ್ಮಲ್ಲಿ ಕಂಡು ನಾನು ಧನ್ಯನಾದೆ. ಆದರೇನು! ನಾನು ಮಧ್ಯೆವಿ. ಸಂಗೀತದ ವಿಷಯಕ್ಕೆ ನಾನು ದುರ್ಬೈವಿಯಾಗಿದ್ದೇನೆ!" ಎಂದು ರಮೇಶ ಬಿಕ್ಕಿ ಬಿಕ್ಕಿ ಅಳಹತ್ತಿದನು. ರಹಮತ್ ಖಾನನಿಗೆ ಕನಿಕರ ಹುಟ್ಟಿತು. ರಮೇಶನನ್ನು ತಬ್ಬಿಕೊಂಡು "ನಮಗೂ, ನನ್ನೊಡನೆ ಬರುವಿಯಾ? ನಮ್ಮೂರು ಲಾಹೋರು—ನೀನಿಚ್ಛಿಸಿದ ಪಸ್ತು ಕೊಡುತ್ತೇನೆ," ಎಂದು ಕೇಳಲು, ರಮೇಶನ ಉತ್ಸಾಹ ಮೇರೆ ತಪ್ಪಿತು. ಕುಣಿಯತೊಡಗಿದ.

"ಈಗಲೇ ನಡೆಯಿರಿ! ಉಳಿದ ವಿಷಯ ನನಗೆ ಶೂನ್ಯವಾಗಿವೆ" ಎಂದು ಅವನೂ ಎದ್ದ.

ಎದುರಿನ ಬಾಗಿಲಲ್ಲಿ ತನ್ನ ತಂದೆ ರಾಮರಾಯ. ಕೋಣೆಯಲ್ಲಿ ಝಗಝಗಿಸುವ ವಿದ್ಯುದ್ದೀಪಗಳಲ್ಲಿ ಕತ್ತಲೆ ಕವಿದಂತಾಯಿತು. ಜಗತ್ತು ಕಿತ್ತಿ ತನ್ನ ಮೇಲೆ ಬೀಳುವುದೇನೋ— ಎಂದು ರಮೇಶ ಚೀರಿದ. ಧೊಪ್ಪನೆ ನೆಲಕ್ಕೆ ಬಿದ್ದ.

ರಮೇಶನ ಅಂದಿನ ಕಳ್ಳವೃತ್ತಿಯನ್ನು ಕಂಡು, ರಾಮರಾಯರು ರಮೇಶನ ಮೇಲೆ ಹಲ್ಲುಕಿರಿಯಹತ್ತಿದರು 'ಮೂರ್ಖ, ಮುಸಲನ ಮುಚ್ಚಿಗೆ ಬಿಸ್ದು ಮನೆ ಹಾಳುಮಾಡುತ್ತಿದ್ದನಲ್ಲ!' ಎಂದು ನೆನೆದು ಎದೆ ಎದೆ ಬಡಿದುಕೊಳ್ಳಹತ್ತಿದರು. ರಾಧಾಬಾಯಿ ರಮೇಶನಿಗೂ ತಿಳಿಹೇಳಿ ಬೇಸತ್ತಳು. ರಾಯರಿಗೂ ಹೇಳಿಕೊಂಡು ಸಾಕಾಯಿತು. ರಾಯರ ಹಟ ಬೆಳೆಯುತ್ತ ಹೋಯಿತು. ರಮೇಶನಿಗೆ ಕೆಲವು ಸಾರೆ ಹೊಡೆತಗಳೂ ತಪ್ಪಲಿಲ್ಲ. 'ಹೀಗೇಕೆ ಮಾಡುತ್ತೀರಿ! ಪೂರ್ಣ ವಿಚಾರ ಮಾಡಿಯಾದರೂ ನಿನ್ನ ಮಗನನ್ನು ನಿರ್ಧರಿಸಿಕೊಳ್ಳಿರಿ!' ಎಂದು ಹೇಳುವ ಧೈರ್ಯ ಯಾರಿಗೂ ಆಗಲಿಲ್ಲ. ರಮೇಶನಲ್ಲಿ ತುಂಬಿದ ಕಲೆಯ ಪ್ರೀತಿಯ ಸಲುವಾಗಿ, ರಾಮರಾಯ ಹೇಸಿಗೆಗೊಂಡರು. ಸೂಳೆಯರು ಹಾಡುವ ಈ ಸಂಗೀತವು, ಸೀಮೆಯನ್ನು ಮೀರಿದೆ. ಈ ವ್ಯಸನದಿಂದ ರಮೇಶ, ತಮ್ಮ ಮನಃಸಂಕಲ್ಪಕ್ಕೂ ಆಚರಣೆಗೂ ಮಣ್ಣು ಮುಕ್ಕಿಸುತ್ತಾನೆಂದು ಚಡಪಡಿಸಹತ್ತಿದರು.

ರಮೇಶ ಮ್ಯಾಟ್ರಿಕ್ ಪರೀಕ್ಷೆ ಪಾಸಾಗಿ ಕಾಲೇಜಿಗೆ ಕಾಲಿಟ್ಟ. ಮೂರು ವರ್ಷಗಳಿಂದ ಮನೆಯಲ್ಲಿ ಸಂಗೀತದ ಗಂಧವಿರಲಿಲ್ಲ. ರೊಕ್ಕ ಕೊಡದೆ ಇವನಿಗೆ ಊರಲ್ಲಿ ಕಲಿಸುವರಾರು! ಅಲ್ಲಲ್ಲಿ ಅಲಿಸುತ್ತಿದ್ದ. ಎಷ್ಟೋ ಕಡೆಗೆ ಕ್ಲಾಸುಗಳ ಹೊರಗೆ ನಿಂತು ಕೇಳುತ್ತಿದ್ದ. ಹಾಟೆಲ್ಲುಗಳ ಎದುರಿಗೆ ನಿಂತು ರೇಡಿಯೋಗಳಲ್ಲಿಯ ಹಾಡು ಕೇಳುತ್ತಿದ್ದ. ಅಲ್ಲಲ್ಲಿ ಕೇಳಿದ ಸ್ವರಗಳನ್ನು, ಸಂಜೆಗೆ ಎಲ್ಲಿಯಾದರೂ ಊರ ಹೊರಗೆ ದೂರಹೋಗಿ, ಮನಕ್ಕೆ ತಿಳಿದಂತೆ ಎನ್ನುತ್ತಿದ್ದ. 'ಹೀಗೆ ಹೇಗೆ ಸಂಗೀತ ಕಲಿಯಲು ಸಾಧ್ಯ!' ಎಂದು ವಿಚಾರ ಬಂದೊಡನೆ, ಮೋರೆಯನ್ನು ಮುಚ್ಚಿಕೊಂಡು ಗಳಗಳನೆ ಅತ್ತು ಬಿಡುತ್ತಿದ್ದ.

ಇಂಟರಿನಲ್ಲಿದ್ದಾಗ ಅವನಿಗೆ, ರಾಘವೇಂದ್ರ ಕುಲಕರ್ಣಿ ಎಂಬುವ ನೊಬ್ಬ ಸಂಗಡಿಗ ದೊರೆತ. ಸ್ವಭಾವ ಪರಿಚಯವಾಗಿ ಇಬ್ಬರಲ್ಲಿಯೂ ಗಾಢವಾದ ಮಿತ್ರತ್ವ ಬೆಳೆಯಿತು. ರಾಘವೇಂದ್ರನು ರಮೇಶನ ಕಲೆಯನ್ನು ಕಂಡು ಮುಗ್ಧನಾದ. ಅವನ ಮನೆಯಲ್ಲಿಯ ಪರಿಸ್ಥಿತಿಯನ್ನರಿತು ಕಳವಳಗೊಂಡ. 'ಅಮರವಾದ ಪುಷ್ಪ ಬಾಡಿ ಹೋಗುತ್ತಿದೆಯಲ್ಲ!' ಎಂದು ಚಿಂತೆಗೊಳಗಾದ. ಕಡೆಗೊಂದು ಅವನಿಗೆ ವಿಚಾರ ಹೊಳೆಯಿತು. ತನ್ನ ವೆಚ್ಚದಿಂದ ಒಂದು ಕೋಣೆಯನ್ನು ಬಾಡಿಗೆ ಹಿಡಿದನು. ನಿತ್ಯ ಸಂಜೆಗೆ ವಾಯುಸೇವನದ ನಿಮಿತ್ತ ಮಾಡಿ ರಮೇಶನು ಆ ಕೋಣೆಯಲ್ಲಿ ಸಂಗೀತವನ್ನು ಕಲಿತು, ಅಭ್ಯಾಸಮಾಡುವ ಏರ್ಪಾಡಾಯಿತು. ರಾಘವೇಂದ್ರನ ಮನೆಯಲ್ಲಿಯೂ ಈ ವ್ಯವಸ್ಥೆ ಮಾಡಲು ಅತಂಕ ವಿರಲಿಲ್ಲ ಆದರೆ ರಾಮರಾಯರಿಗೆ ಈ ವಿಷಯ ತಿಳಿದು ರಗಳೆಯಾದೀತೆಂದು, ಈ ಕೋಣೆಯ ವ್ಯವಸ್ಥೆ ಮಾಡಲಾಗಿತ್ತು.

ಇಬ್ಬರೂ B.A. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ರಾಘವೇಂದ್ರನ ಗುಪ್ತತಂತ್ರದಿಂದ, ಇಷ್ಟರಲ್ಲಿ ರಮೇಶನ ಸಂಗೀತಾಭ್ಯಾಸವೂ ಮೂರು ವರ್ಷ ಗುಪ್ತವಾಗಿ ಆಯಿತು. ರಮೇಶ ತನ್ನ ಅಗಾಧ ನೈಪುಣ್ಯದಿಂದ ಪ್ರಮುಖ ರಾಗ–ರಾಗಿಣಿಗಳನ್ನೂ ತಾಳಗಳನ್ನೂ ಸಶಾಸ್ತ್ರವಾಗಿ ಅಭ್ಯಸಿಸಿದ. ಈ ಅಭ್ಯಾಸಕ್ಕೆ ರಾಘವೇಂದ್ರನೇ ಹಣವನ್ನು ಪೂರಯಿಸಿದನೆಂದು ಬೇರೆ ಹೇಳಬೇಕಾಗಿಲ್ಲ.

ರಮೇಶ ಮಾತ್ರ ಮನೆಯಲ್ಲಿಯ ವಿಚಿತ್ರ ವಾತಾವರಣವನ್ನು ಕಂಡು, ಮೊದಲಿನಿಂದಲೂ ಉದಾಸೀನ ವೃತ್ತಿಯಲ್ಲಿಯೇ ಇದ್ದ. ತನ್ನ ಸಂಗೀತಾಭ್ಯಾಸದ ವಿಷಯವಾಗಿ ಈ ಮೂರು ವರ್ಷ ಮನೆಯಲ್ಲಿ ಸಿಟ್ ಎಂದು ಉಸಿರೆತ್ತಿರಲಿಲ್ಲವಾದರೂ, ಸಂಗೀತದ ಚರ್ಚೆ ಬಂದಾಗ, ಆ ವಿಷಯವನ್ನು ಒರೆಗೆ ಹಚ್ಚಲೆ ಬಿಡುತ್ತಿರಲಿಲ್ಲ. ನಿತ್ಯ ಈ ಚರ್ಚೆಯಲ್ಲವೂ ಹೊಳೆಯಲ್ಲಿ ಹುಣಿಸೆ ಹಣ್ಣು ತೊಳೆದಂತಾಗಬೇಕು.

ರಮೇಶನ ಪರೀಕ್ಷೆಯಾದ ನಂತರ ರೆವ್ವಿನ್ಯೂ ಖಾತೆಯಲ್ಲಿ ನೌಕರಿ ಸಿಕ್ಕಿತು. ರಾಮರಾಯರಿಗೆ ಈಗ ಮತ್ತೊಂದು ವಿಚಾರ ಹೊಳೆಯಿತು. ' ರಮೇಶನ ಲಗ್ನ ಹೂಡಿಬಿಟ್ಟರೆ, ಸಂಸಾರವಂತನಾಗಿಬಿಡುವ ಈ ಹುಚ್ಚು ಸಂಗೀತದ ಚಟವು ಕಡಿಮೆಯಾಗುವುದು. ತನ್ನ ವೃತ್ತಿಗಾಗುತ್ತಿದ್ದ ಬಾಧೆತಪ್ಪುವುದು' ಎಂದು ವಿಚಾರಿಸಿದರು. ರಾಮರಾಯರ ಜುಲುಮೆಗಿಂತಲೂ ರಾಘವೇಂದ್ರನ ಗೆಳೆತನದ ಒತ್ತಾಯದಿಂದಾಗಿ ರಮೇಶ ಲಗ್ನಕ್ಕೆ ನಿರೋಧಿಸಲಿಲ್ಲ. ಆದರೆ ರಾಮರಾಯರು ತಿಳಿದುಕೊಂಡಂತೆ ಬೇಳೆ ಬೇಯಲಿಲ್ಲ. ರಾಘವೇಂದ್ರನಿಂದ ರಮೇಶನ ''ಬೇಕು–ಬೇಡ'' ಗಳನ್ನು ತಿಳಿದುಕೊಂಡು, ರಮೇಶನ ಹೆಂಡತಿಯು ಪತಿಗೆ ಸಹಾಯಕಳಾಗಿ ಸಾಗಿದಳು. ತನ್ನ ಸೊಸೆತನದ ಕರ್ತವ್ಯಕ್ಕೆ ಎಳ್ಳಷ್ಟು ಕುಂದು ಬಾರದಂತೆ ನೋಡಿಕೊಳ್ಳುತ್ತಿದ್ದಳು. ಆದರೆ ರಾಮರಾಯರಿಗೆ ಮಾತ್ರ, ಮೊದಲೇ ಮುರಿಯುತ್ತಿದ್ದ ಹೊಟ್ಟೆಗೆ ಹುಣ್ಣು ಹುಟ್ಟಿದಂತಾಯಿತು. ಅವರಿಗೊಂದೇ ಮಹತ್ತ್ವಾಕಾಂಕ್ಷೆ: ತಾವು ಹಿಡಿದ ಹಟ ಸಾಧಿಸಿಯೇಬಿಡಬೇಕೆಂದು

ಕೆಲವು ತಿಂಗಳುಗಳ ಮೇಲೆ.

ಒಂದು ದಿನ ರಮೇಶನ ಹೆಂಡತಿ–ಕಮಲೆಯು–ಕೊಣೆಯಲ್ಲಿ ಹೆಣೆಯುತ್ತ ಕುಳಿತಿದ್ದಳು. ಆ ಗಂಟೆಯಾಗಿರಬೇಕು. ಸೂರ್ಯನ ಪ್ರಬಲವಾದ ಕಿರಣಗಳಲ್ಲಿಯ ಕಾವು ಕಡಿಮೆಯಾಗುತ್ತಲಿತ್ತು. ರಾಮರಾಯರು ಪುರಾಣಶ್ರವಣಕ್ಕೆಂದು ದೇವಮಂದಿರಕ್ಕೆ ಹೋಗಿದ್ದರು. ಹಠಾತ್ತಾಗಿ ರಮೇಶ ಬಂದುದನ್ನು ನೋಡಿ, ಕಮಲೆ ಆಶ್ಚರ್ಯಚಕಿತಳಾದಳು.

'' ಇದೇನು ಇಷ್ಟು ಬೇಗ ಬಂದಿರಿ ? '' ಎಂದಳು.

'' ಅದಿರಲಿ, ಕಾಫೀ ಮಾಡು....ಬೇಗ ಹೋಗಬೇಕಾಗಿದೆ. ''

'' ಎಲ್ಲಿ ? ನನಗೂ ಹೇಳಲಾರದ ವಿಷಯವಾಯಿತೆ ! ''

'' ಹಾಗೇನು ಇಲ್ಲ ! ಇಲ್ಲಿಂದ ಮೂರು ನಾಲ್ಕು ಮೈಲು ಆಚೆಗಿರುವ ಕೇಶವಪುರದಲ್ಲಿ, ಆರು ಗಂಟೆಗೆ ಸಂಗೀತದ ಏರ್ಪಾಡು ಮಾಡಿದ್ದಾರೆ. ನಮ್ಮ ಸಾಹೇಬರನ್ನು ಬೀಳ್ಕೊಡುವ ಸಮಾರಂಭವೂ ಇದೆ. ನನ್ನ ಹೋದ ಮೂರು ವರ್ಷದ ಸಂಗೀತದಲ್ಲಿಯ ಪ್ರಗತಿಯ ವಿಷಯವನ್ನು, ರಾಘವೇಂದ್ರ ಮಾತಿನ ಭರದಲ್ಲಿ ಮೊನ್ನೆ ಆಫೀಸಿನಲ್ಲಿ ಹೇಳಿಬಿಟ್ಟ. ಈ ದಿನ ನಾನು ಹಾಡಲೇ ಬೇಕು.....ಬೇಗ ಏಳನ್ನು ''

'' ನಿಮ್ಮ ತಂದೆಗೆ ಗೊತ್ತಾದರೆ ಏನಾದೀತು ನಿಮ್ಮ ಅನಸ್ಥೆ ! ಈಗೀಗಲಂತೂ ಅವರ ತಲೆಯಲ್ಲಿ ಪರಿಭ್ರಮಣೆಗಳೇ ನಡೆಯುತ್ತವೆ. ''

'' ಇಲ್ಲಿ ನೋಡು ! ಈ ಹೊತ್ತಿನಿಂದ ಮೋರೆಯ ಮೇಲಿನ ಮುಸುಕನ್ನು ತೆರೆದು ಬಿಟ್ಟಿದ್ದೇನೆ. ನಾನೇನು ಕಳ್ಳನಲ್ಲ. ವೇಶಾವರೀ ಬ್ರಾಹ್ಮಣನೂ ಅಲ್ಲ. ಬೀದಿಯಲ್ಲಿಯ ಭಿಕಾರಿಯೂ ಅಲ್ಲ. ಏನು ಹೇಳುವುದು ಉಳಿದಿದೆ ! ಕೃಷ್ಣನ ಕೊಳಲಿನ ನಾದ ಕೇಳಿ ದನಕರುಗಳೂ ಕೂಡ ಅವನೆಡೆಗೆ ಧಾವಿಸಿದ ಸಂಗತಿಯನ್ನು ತಂದೆಗೆ ಹೇಳಿದರೆ, ' ಮೂರ್ಖಾ ! ಪುರಾಣದ ಸಾಕ್ಷಿ ನಿನಗೇಕೆ, ಅವರ ಗಂಧ ಕೂಡ ನಿನಗೆ ಗೊತ್ತಿಲ್ಲ '—ಎಂದು ಅಂದು ಬಿಟ್ಟರು. ' ಸಂಗೀತದ ಬಗ್ಗೆ ನಿಮಗೇಕೆ ಅಷ್ಟು ಸಂತಾಪ ? ' ಎಂದು

ಸುಖಕರವಾದ ವಸತಿ ! .... ರುಚಿಕರವಾದ ಊಟ !

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ
ಸಮೀಪ, ' ಶಕ್ತಿ ಟಾಕೀಜ್ ' ಹತ್ತಿರ

ಒಡೆಯರು—ಎಲ್. ಸಿ. ಮಾರಕೋಡ

ಕೇಳಲು, ' ಅದು ನನ್ನ ಹಟ, ಉಳಿದ ವಿಷಯ ನನಗೆ ಗೊತ್ತಿಲ್ಲ ' ಎಂದು ಮುಗಿಸಿಬಿಟ್ಟರು.—ಇರಲಿ, ವೇಳೆ ಕಳೆಯಬೇಡ."

ರಮೇಶನು ತಂದುಕೊಂಡ ಧೈರ್ಯದಿಂದ ಕಮಲೆಯಲ್ಲಿಯೂ ಹೊಸತೆರನಾದ ಕಳೆ ತುಂಬಿತು. ಆವಳ ಕಪ್ಪೋಲಗಳು ಎಂದಿಗಿಂತಲೂ ಇಂದು ಹೆಚ್ಚು ಸುಂದರವಾಗಿ ತೋರಿದುವು.

ರಮೇಶ ಡ್ರೆಸ್ ಹಾಕಿಕೊಳ್ಳುವಷ್ಟರಲ್ಲಿ. ಕಮಲೆ ಕಾಫೀ ತಂದು ಕೊಟ್ಟಳು. ತಾಯಿಗೆ ಹೇಳಿ ಹೊರಡಬೇಕೆಂದು ಒಳಗೆ ಹೋದ. ರಾಧಾಬಾಯಿ ಹಾಸಿಗೆಯ ಮೇಲಿದ್ದಳು.

" ರಮೇಶ, ಅವರಿಗೆ ಗೊತ್ತಾದರೆ ಎಲ್ಲರಿಗೂ ಮತ್ತೆ ಯಾತನೆ..... ವಿಚಾರ ಮಾಡಿದೆಯಾ..... "

" ಅವ್ವಾ, ಏನು ಮಾಡುವರು! ..... ಬಹಳವಾದರೆ ಶೂಲಕ್ಕೇರಿಸಿಯಾರು! ಇಲ್ಲವಾದರೆ ನನ್ನ ನಾಲಗೆಯನ್ನು ಕತ್ತರಿಸಬಹುದು. ಯಾವುದನ್ನು ಜಗತ್ತು ಕಲೆಗಳಲ್ಲಿ ಶ್ರೇಷ್ಠ ಕಲೆಯೆಂದು ಹೊಗಳುತ್ತಿದೆಯೊ, ಅಂಥ ಸಂಗೀತ ನನ್ನ ದುರ್ಗಂಧಮಯವಾಗಿಬಿಟ್ಟಿದೆ. ಅದೂ ಕೇವಲ ತಂದೆಯ ಹಟದಿಂದ! "

" ನಿನಗೆ ತಿಳಿದಂತೆ ಮಾಡು " ಎಂದು ರಾಧಾಬಾಯಿ ಆ ಕಡೆ ಮುಖ ತಿರುವಿ ಮುಸುಕು ಹಾಕಿಕೊಂಡಳು.

ರಮೇಶನ ತಲೆಯಲ್ಲಿ ಒಮ್ಮೆಲೆ ವಿಚಾರ ಹೊಳೆಯದಂತಾಯಿತು ಕಡೆಗೆ ಕೋಟು ಹಾಕಿಕೊಂಡು, ಹೊರಬಾಗಿಲಿಗೆ ಬಂದ.

ಎದುರಿಗೆ ತಂದೆ:

" ಛೇಷ್-ಛೇಷ್ ರಮೇಶ್, ಇದೇ ಏನು ಆಫೀಸಿನ ಕೆಲಸ.. ನನಗೇನು ನಿಮ್ಮ ಕಾರ್ಯಕ್ರಮ ತಿಳಿಯದೇ ಹೋಗಲಿಲ್ಲ. ಅದಕ್ಕಾಗಿಯೇ ಧಾವಿಸಿ ಬಂದೆ! "

" ನೀವು ಶ್ರದ್ಧೆಯಿಂದ ಪುರಾಣ ಕೇಳಲಿಕ್ಕೆ ನಿತ್ಯ ಹೋಗುತ್ತಿರುವಿರೆಂದು ತಿಳಿದಿದ್ದೆ. "



ಉಮರಜಿ ಸೋನೂಬಾಯಿ ಮತ್ತು ಪಾರ್ಟಿ

GE 8491 ರಿಂದ 8493 } ಮಹಾತ್ಮಾ ಬಸವೇಶ್ವರ ಭಾಗ ೧ ರಿಂದ ೬

GE 8455 ರಿಂದ 8457 } ಶರಣ ಬಸವ ನಾಟಕ ಭಾಗ ೧ ರಿಂದ ೬

GE 8342 ರಿಂದ 8344 } ಅಕ್ಕ ಮಹಾದೇವಿ ನಾಟಕ ಭಾಗ ೧ ರಿಂದ ೬

ಶ್ರೀ. ಭಾಗವತ

GE 8409 } ಏರಿತು ಗಗನಕೆ ನಮ್ಮ ಧ್ವಜ / ಬಂತು ಬಂತು ಮಾಗಿ ಭಾಮೆ

ಶ್ರೀ. ಸುಶೀಲಾ ಟೇಂಬೆ

GE 8394 } ಇದೆ ನಮ್ಮ ದೇವರ ಪೂಜೆ / ಇದು ಸುದರ್ಶನ

ಶ್ರೀ. ಸೋನೂಬಾಯಿ ಹಾವೇರಿ

GE 8359 } ಸಖಿ ಬಾರೆ ಪೋಗಿ ತಾರೆ / ನಗೀ ಸವಾರಿ ಬಂದಿತು ಸ್ವಾರಿ

ಸಮಸ್ತ ವೀರಶೈವ ಬಾಂಧವರಿಗೆ ಮೆಚ್ಚಿನವರಾಗಿರುವ ಸುಪ್ರಸಿದ್ಧ ಬರೆಹಗಾರರಾದ ಶ್ರೀಕಂಠ ಶಾಸ್ತ್ರಿಗಳು ನಾಟಕರೂಪದಲ್ಲಿ ಬರೆದ **'ಮಹಾತ್ಮಾ ಬಸವೇಶ್ವರ'** ಚರಿತ್ರೆಯನ್ನು, ಉಮರಜಿ-ಸೋನುಬಾಯಿ ಮತ್ತು ಸಂಗಡಿಗರ ಬಾಯಿಂದ ಕೊಲಂಬಿಯಾ ಧ್ವನಿಮುದ್ರಿಕೆಗಳ (GE 8491 ರಿಂದ GE8493) ನೀಲೆ ಕೇಳಿರಿ. ಇದೇ ಪಾರ್ಟಿಯವರು ಹಾಡಿದ **ಶರಣ ಬಸವ** ಹಾಗು **ಅಕ್ಕಮಹಾದೇವಿ** ಈ ಧ್ವನಿಮುದ್ರಿಕೆಗಳು ಕೂಡ ಈಗಾಗಲೆ ತುಂಬ ಜನಪ್ರಿಯವಾಗಿವೆ. ನಿಮ್ಮ ಊರ ಗ್ರಾಮೋಫೋನ್ ವ್ಯಾಪಾರಿಗಾರರಲ್ಲಿ ಇವು ಅವಶ್ಯವಾಗಿ ದೊರೆಯುವುವು.

ಕೊಲಂಬಿಯಾ ಗ್ರಾಫೋಫೋನ ಕಂಪನಿ

ಮುಂಬಯಿ ● ಮದ್ರಾಸ ● ದಿಲ್ಲಿ ● ಲಾಹೋರ

COLUMBIA GRAPHOPHONE CO. CALCUTTA BOMBAY, MADRAS, DELHI, LAHORE

" ನಿನ್ನ ಕೊಂಕುಮಾತು ಸಾಕುಮಾಡು! ಈ ದಿನ ನೀನು) ಹೋಗಲಾರೆ! ನನ್ನಾಣೆಯಾಗಿದೆ. ನಿನ್ನ ಕಚೇರಿಯ ಜನ-ೂ ನಿನ್ನೊಡನೆ ಭ್ರಮೆ ಹಿಡಿದಿದೆ....."

" ಈ ದಿನ ನೀವು ನನಗೆ ಆತಂಕ ಮಾಡಲಾರಿರಿ. ಕೈಕೊಂಡ ರ್ಯವನ್ನು ತಿಳಿದೇ ಮಾಡುತ್ತಿದ್ದೇನೆ. ದಾರಿ ಬಿಡಿರಿ! "

ರಾಮರಾಯರಲ್ಲಿ ಸಂತಾಪ ಉಕ್ಕೇರಿತು. ಜಗತ್ತೇ ತನ್ನನ್ನು ರಿಸಿ ಕೇಳುತ್ತಿದೆಯೋ ಎಂದೆನಿಸಿತು. ನೈ ನಡುಗಹತ್ತಿತು. ುಲ್ಲಿ ಹಿಡಿದ ಪುರಾಣ ಪುಸ್ತಕದ ಗಂಟು ಕಳಚಿ ಬಿದ್ದು, ನಡು-ನ ಧ್ವನಿಯಲ್ಲಿಯೇ ರಾಮರಾಯರು ಒದರಿದರು:

" ರಮೇಶ, ಅಲ್ಲಿಗೆ ಹೋಗಬೇಡ! ಅದು ವೇಶ್ಯೆಯ ಮನೆ! ಮನೆ ಹಾಳು ಮಾಡುತ್ತೀ! ನಿನ್ನ ವಂಶ ಹಾಳಾಗುತ್ತದೆ!.."

ರಮೇಶ ಶಾಂತಚಿತ್ತದಿಂದಲೇ ಹೇಳಿದ;

" ಹೌದು, ಅದು ವೇಶ್ಯೆಯ ಮನೆ. ಅವಳು ದುರ್ದೈವದಿಂದ— ತಿಯಿಂದ ವೇಶ್ಯೆಯಾಗಿದ್ದಾಳೆ. ಅವಳ ಗುಣಗಳು ಒಳ್ಳೆಯ ಂಣೆಯನ್ನು ಕೂಡ ನಾಚಿಸುವಂತಿವೆ. ಅವಳ ಇಂಪಾದ ಯನದ ಶ್ರವಣಮಾಡಿದಮಾತ್ರಕ್ಕೆ ಮನಸ್ಸು ಪವಿತ್ರವಾಗುತ್ತದೆ. ತರಂಗ ಪರಿಶುದ್ಧವಾಗುವುದು. ಜಾತಿಗೂ ಗುಣಕ್ಕೂ ಸಂಬಂಧ-ಲ್ಲ. 'ಕೀಳು' ಕನಕದಾಸನ ಕರೆಗೆ ಕೃಷ್ಣ ಓಡಿ ಬಂದ. ತಿಯು ಯಾವುದಿದ್ದರೂ ವೃತ್ತಿ-ಆಚಾರಗಳ ಡಾಂಭಿಕತನ ಅಲ್ಲಿ ುಬಿದ್ದರೆ, ಅವರಂಥ ಹೇಸಿ ಜಾತಿ ಯಾವುದೂ ಇಲ್ಲ. ನನಗೆ ಳ ಮನೆ ಕಲಾಮಂದಿರವಾಗಿದೆ. ಪರಿಶುದ್ಧವಾದ ಕಲೆಗೆ ಪರಿ-ಕವಾಗಿ ಪರಿಣಮಿಸಿದ್ದಾಳೆ ಅವಳು. ನನಗೆ ವಿಲಂಬವಾಯಿತು, ಯಿರಿ....."

ರಾಮರಾಯ " ರಮೇಶ, ಅವಳಲ್ಲಿ ಈ ಮೊದಲೇ ಅಭ್ಯಾಸ-ುದ್ದೀಯಾ ?...."

' ಏನು ಮಾತಾಡುತ್ತಿದ್ದೀರಿ! "

ರಮೇಶ ಬಾಗಿಲ ಹತ್ತಿರವೇ ಬಂದ.

" ರಮೇಶ, ನೀನು ಹೋಗಲಾರೆ " ಎಂದು ರಾಮರಾಯರು ನೇಧದಿಂದ ಆಜ್ಞಾಪಿಸಿದರು.

ರಮೇಶ ಚೀರಿದ: "ಸರಿಯಿರಿ ಆಚೆಗೆ! "

ರಾಮರಾಯರು ಗಾಬರಿಯಾಗಿ ದಾರಿ ಬಿಟ್ಟರು. ರಮೇಶ ಗಿಲ ದಾಟಿದ. ರಾಮರಾಯರು ಹತಾಶರಾಗಿ ಒದರಿದರು:

" ರಮೇಶ, ಇನ್ನು ಮೇಲೆ ನೀನು ಬಾಗಿಲು ದಾಟಿ ಒಳಗೆ ಬರ-ರಿ. ನೀನು ಸಂಪೂರ್ಣ ಭ್ರಮಿಷ್ಟನಾಗಿರುವಿ. ನಿನಗೆ ಸಾಧಾರಣವಾದ ಮೈಲಿಗೆಯಾಗಿದೆ. ನೀನು ಪಿಶಾಚಿ. ನಾನು ನಂತನಿರುವ ವರೆಗೆ ನಿನ್ನ ಮುಖ ನೋಡುವುದಿಲ್ಲ....."

ರಮೇಶನ ಮನಸ್ಸು ಕಲ್ಲಿನಂತಾಯ್ತು. ತಿರುಗಿ ಒನ್ಮೆ ೀಡಿದ; ಹೊರಗೆ ಬಂದು ನಿಂತಿದ್ದ ರಾಧಾಬಾಯಿ ಅಳುತ್ತ ಗೆ ಹೋದಳು. ಕಮಲೆ!!..... ಅಜೇತನ ವಸ್ತುವಿನಂತೆ ನಿಂತುಬಿಟ್ಟದ್ದಾಳೆ. ಕಣ್ಣುಗಳು ರಮೇಶನ ಕಡೆಗೇ ನೋಡುತ್ತಿದ್ದರೂ ಅವುಗಳಲ್ಲಿ ದೃಷ್ಟಿಯೆರಲಿಲ್ಲ.

ರಮೇಶ ತಂದೆಯ " ಆಜ್ಞೆ " ಯನ್ನು ಶಿರಸಾಮಾನ್ಯ ಮಾಡಿ ಹೊರಟುಹೋದ.

ರಾಘವೇಂದ್ರ ರಮೇಶನನ್ನು ಹುಡುಕಿ ಬೇಸತ್ತಿದ್ದ. ರಾಮರಾಯರ ಕಠೋರವರ್ತನೆ, ರಮೇಶನ ಬೆಂದ ಹೃದಯ, ನಿರ್ಗಮನ, ಕಮಲೆಯ ಅವರ್ಣನೀಯ ಅವಸ್ಥೆ ಇವೆಲ್ಲವನ್ನು ನೆನೆದು, ರಾಘವೇಂದ್ರ ಬಹಳವಾಗಿ ಹಲುಬಿದ. ರಮೇಶ ಮನೆಬಿಟ್ಟು ಹೋಗಿ ವರ್ಷವಾಗುತ್ತ ಬಂತು. ಎಲ್ಲಿಯೂ ಅವನ ಸುಳಿವು ಹತ್ತಲಿಲ್ಲ ಮನೆಯಲ್ಲಿಯ ವಾತಾವರಣ ಹದಗೆಟ್ಟಿದೆ. ರಮೇಶ ಹೋದ-ಮೇಲೆ, ರಾಮರಾಯರು ಇತ್ತೀಚೆಗೆ ನಿವೃತ್ತರಾದ್ದರಿಂದ, ಮನೆಯ ಪ್ರಪಂಚ ಸಾಗುವುದು ಕಠಿಣವಾಯಿತು. ರಮೇಶನ ನೌಕರಿಯಂತೂ ಹಾದೀಹಿಡಿದು ಬಿಟ್ಟಿತ್ತು. ಇದೆಲ್ಲಕ್ಕೂ ಮೂಲ ರಮೇಶನ ಮಹತ್ತ್ವಾಕಾಂಕ್ಷೆಯೇ ಕಾರಣವೆಂದು ರಾಮರಾಯರು ಬಡಬಡಿ-ಸುವುದನ್ನು ಬಿಡಲಿಲ್ಲ. ' ರಮೇಶನ ಸಂಗತಿಯೇನಾದರೂ ತಿಳಿದಿದೆಯೇನು ?' ಎಂದು ಕೇಳಲು, ರಾಘವೇಂದ್ರ ಅಂದಿನ ಭಾನುವಾರ ರಾಮರಾಯರ ಮನೆಗೆ ಬಂದಿದ್ದ. ರಾಮರಾಯರ ಕಡೆಯ ವಾಕ್ಯ.... " ನನಗೆ ಗೊತ್ತಿಲ್ಲ, ಹೋಗಿರಬೇಕು ಹೊಲಗೇರಿಗೆ...."

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಸ್ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)—ಈ ಔಷಧಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :

ಮೆಸರ್ಸ್ : ವಿಜ್ಞಾನೇಶ್ವರ ಮತ್ತು ಕಂಪನಿ

ಚ್ಯವನ ಪ್ರಾಶ

(ಅಷ್ಟವರ್ಗಯುಕ್ತ)

ಇದರ ಸೇವನೆಯಿಂದ :—

೧. ಬೇನೆಗಳಿಂದ ಬಂದ ದುರ್ಬಲತೆ ದೂರಾಗುವದು.

೨. ಪೋಷಕ ಆಹಾರದ ಅಭಾವದಿಂದ ಕ್ಷೀಣವಾದ ರಸ-ರಕ್ತಾದಿ ಧಾತುಗಳು ಬಲಗೊಳ್ಳುವವು.

೩. ಅತ್ಯಂತ ಮಾನಸಿಕ ಶಾರೀರಿಕ ಶ್ರಮದಿಂದುಂಟಾದ ವಿಸ್ಮರಣೆ, ಮನೋದೌರ್ಬಲ್ಯ, ನಿರುತ್ಸಾಹಗಳು ಇದರ ಸೇವನೆಯಿಂದ ಕಡಿಮೆಯಾಗಿ, ಮೇಧಾ-ಶಕ್ತಿ ಉತ್ಸಾಹಗಳು ಹೆಚ್ಚಾಗುತ್ತವೆ.

೪. ದುರ್ಬಲವಾದ ರತಿಶಕ್ತಿಯನ್ನು ಸಬಲಗೊಳಿಸುತ್ತದೆ.

ದಿ ನೂತನ
ಆಯುರ್ವೇದ ಕಾರ್ಯಾಲಯ,
ಲಿ. ವಿಜಾಪೂರ.

ಕೇಳಿ, ರಾಘವೇಂದ್ರ ಸಂತಾಪದ ಭರದಲ್ಲಿ ಹೊರಟು ಹೋದುದನ್ನು ಈ ಮೊದಲೇ ತಿಳಿಸಿದೆ.

* * *

ರಾಘವೇಂದ್ರ ರಾಮರಾಯರ ಮನೆಯಿಂದ ಹೊರಟು ಬೀದಿಯಲ್ಲಿದ್ದಾಗ, ಮಿದುಳು ವಿಚಾರಪ್ರವಾಹದಲ್ಲಿ ಮುಳುಗಿತ್ತು. 'ರಾಮರಾಯರಿಗೆ ಇನ್ನೂ ಅದೇ ಹಟ! ಇನ್ನಾದರೂ ವಿವೇಕವೇಕೆ ಬರಬಾರದು! ಆದರೇನು. ಕೈಮೀರಿ ಹೋದ ಮೇಲೆ ವಿವೇಕ ಬಂದೇನು ಫಲ!.....ಈ ದಿನ ಸಂಜೆಗೆ ಕಮಲೆಯನ್ನು ಸಂಗಡ ಕರೆದುಕೊಂಡು ಗಂಗಾಸಾನಿಯು ಮನೆಗೆ ಹೋಗಲೇ ಬೇಕು. ಅವಳಿಗೆ ರಮೇಶನ ವಿಷಯ ಸ್ವಲ್ಪಾದರೂ ಗೊತ್ತಿರಲಿಕ್ಕೆ ಸಾಕು. ಕಮಲೆಯ ಕನಿಕರದ ಮುಖವನ್ನಾದರೂ ಕಂಡು ಅವಳು ತಿಳಿಸಬಹುದು. ನೋಡೋಣ' ಎಂದೇನೋ ವಿಚಾರಲಹರಿಗಳಲ್ಲಿ ತೊಡಗಿದಾಗಲೆ ತನ್ನ ಮನೆ ಮುಟ್ಟಿದ.

* * *

ಸಂಜೆಯ ಸಮಯ.

ಗಂಗಾಸಾನಿಯ ಬಾಗಿಲ ಮುಂದೆ ಈರ್ವರೂ ಬಂದು ಬಾಗಿಲನ್ನು ತಟ್ಟಿದರು. ಗಂಗಾಸಾನಿಗೆ ಅವರು ಹೊಸಬರಾದರೂ, ಅವರನ್ನು ಆದರದಿಂದ ಬರಮಾಡಿಕೊಂಡಳು. ಗಂಗಾಸಾನಿಯ ಮನೆ ಅಷ್ಟೇನು ಅಲಂಕೃತವಾಗಿರಲಿಲ್ಲ. ಎದುರಿನ ದೊಡ್ಡ ಮಹಲಿನಲ್ಲಿ ಗೋಡೆಗಳ ಮೇಲೆ, ದೇವರ ಛಾಯಾಚಿತ್ರಗಳೇ ಇದ್ದುವು. ತಾ ಕೊಡುವ ಕೋಣೆಯಲ್ಲಿ ಸಂಗೀತಗಾರರ ಛಾಯಾಚಿತ್ರಗಳನ್ ತೂಗುಬಿಡಲಾಗಿತ್ತು. ಅಲ್ಲಲ್ಲಿ ಸಂಗೀತದ ಸಾಮಗ್ರಿಗಳು ಶೋ ಸುತ್ತಿದ್ದುವು. ಆದರೂ ವ್ಯವಸ್ಥೆಯಿಂದ ಇಡಲ್ಪಟ್ಟಿರಲಿಲ್ಲ. ಗಂಗ ಸಾನಿ ಆವರೀರ್ವರನ್ನು ಅಲ್ಲಿಗೇ ಕರೆದೊಯ್ದಳು. ಔಪಚಾ ಮಾತುಗಳಾದ ಮೇಲೆ,

ಗಂಗಾಸಾನಿ :— ರಮೇಶನ ಹಿತವಾದಿಗಳೇ ನೀವು? ಒಳ್ಳೇ ಬೇಗ ಬಂದಿರಿ ಸಮಾಚಾರ ಕೇಳಿಕೊಳ್ಳಲಿಕ್ಕೆ!

ರಾಘವೇಂದ್ರ :— ಆದದ್ದಾಗಿದೆ. ರಮೇಶನ ವಿಷಯ ನಿಮ ಗೊತ್ತಿರಬೇಕೆಂದು ನನ್ನ ಮನಸ್ಸು ಹೇಳುತ್ತದೆ. ರಮೇ ಹೆಂಡತಿ— ಈ ಕಮಲೆಯನ್ನಾದರೂ ನೋಡಿ, ನಿಮಗೆ ತಿ ವಿಷಯ ತಿಳಿಸುವಿರಾ?

ಗಂಗಾಸಾನಿ :— ಈ ಸಂಬಂಧವಾಗಿ ಕಮಲಾತಾಯಿಯನ ಇಲ್ಲಿ ಕರೆದು ತಂದು ವ್ಯಥೆಗೊಳಿಸುವ ಆವಶ್ಯಕತೆಯೇನೂ ಇರಲಿ ಇರಲಿ....ಆ ದಿನ ರಮೇಶಬಾಬು ಇಲ್ಲಿ ಬಂದು, ತಮ್ಮ ಅನೋ ಸಂಗೀತ ಕಲೆಯನ್ನು ತೋರ್ಪಡಿಸಿದರು. ಅವರ ಅಂದಿನ ಪ್ರತಿ ಯಾರಿಗೂ ಕೌತುಕವೆನಿಸುವಂತಿತ್ತು. ನಾನಂತೂ ಅವರ ಚಿತ್ರಕ್ಕೆ- ಇಲ್ಲಿದೆ ನೋಡಿ—ನಿತ್ಯ ಮಾಲೆ ಹಾಕುತ್ತೇನೆ. ಅವರು ಅಂ ಹಾಡಿದ ಮೇಲೆ, ನನ್ನ ಸೋಲು ಒಪ್ಪಿ, ಅಂದಿನ ನನ್ನ ಕಾರ್ಯಕ್ರ ವನ್ನು ರದ್ದುಮಾಡಿದೆ. ಅಂದಿನಿಂದ ಅವರೇ ನನ್ನ ಗುರುಗಳೆಂ ನಿರ್ಧರಿಸಿಕೊಂಡೆ. ಕಾರ್ಯಕ್ರಮ ಮುಗಿದನಂತರ, ರಮೇಶಬಾ ಕಳೆಗುಂದಿದಂತೆ ತೋರಿತು. ಅವರ ಆಫೀಸಿನ ಜನರೆಲ್ಲ ಅವ ಧನ್ಯವಾದಗಳನ್ನು ಅರ್ಪಿಸಿ ಹೋದುದು ಅವರ ಗಮನದಲ್ಲಿ ಇರಲಿ ಆಗ ರಾತ್ರಿ ಮೂರು ಹೊಡೆದಿತ್ತು. ನಾನೆಷ್ಟು ಹೇಳಿಕೊಂಡರ ಕೇಳದೆ, ರಮೇಶಬಾಬು ಕತ್ತಲೆಯಲ್ಲಿ ಹೊರಟರು. ಹೊರಡು ವಾಗ ಇಷ್ಟೇ ಹೇಳಿದರು:—"ಗಂಗಾ, ನಾನು ಹೊರಟೆ, ನಾ ಯಿಂದ ನಾನು ಸರ್ವವ್ಯಾಪಿ. ಬಹುದೂರ ಹೋಗುವೆ!" ಮೇಲೇನಾಯಿತೋ, ನನ್ನಾಣೆಯಾಗಿ ನನಗೆ ಗೊತ್ತಿಲ್ಲ. ಅವ ಹೋದಂದಿನಿಂದ ನಾನು ಸಂಗೀತ ವಿಷಯದಲ್ಲಿ ಲಕ್ಷ್ಯ ಹಾಕಿ ಇವೆಲ್ಲ ಸಾಹಿತ್ಯ ನೋಡಿರಿ. ಧೂಳಿಯಿಂದ ತುಂಬಿ ಬಿಟ್ಟಿವೆ.. ನೀವು ನಮ್ಮ ಮನೆಯಲ್ಲಿ ಚಹ ತೆಗೆದುಕೊಳ್ಳಲಿಕ್ಕಿಲ್ಲ!

ರಾಘವೇಂದ್ರ :— ಇದೀಗ ತೆಗೆದುಕೊಂಡೇ ಬಂದಿದ್ದೆವ ಗಂಗಾತಾಯಿ! ನಿಮ್ಮ ಆದರ, ಆತಿಥ್ಯ ಕಂಡು ನಿಮ್ಮ ಸಲುವಾ ಅಭಿಮಾನವೆನಿಸುತ್ತದೆ ಒಳ್ಳೇದು ಬರುತ್ತೇನೆ.

ಹೊರಟರು. ಗಂಗಾಸಾನಿಯ ಮನೆಯಲ್ಲಿ ಕಮಲೆಗೆ ಮಾತ ನಾಡಲು ಧೈರ್ಯವಾಗಲಿಲ್ಲ ಈ ಪರಿಯಿಂದ ತಾನೇಕೆ ಅಲ್ಲಿ ಹೋದನೆಂದು ಅವಳು ನಾಚಿಕೊಂಡಳು. ರಮೇಶನ ಸಲುವಾ ಗಂಗಾಸಾನಿ ತಳೆದ ಪವಿತ್ರವಾದ ಭಾವನೆಯನ್ನು ತಿಳಿದು, ಅವಳನ್ ಮನದಲ್ಲಿ ಎಷ್ಟೋ ಸಾರೆ ವಂದಿಸಿದಳು. ಆದರೆ ರಮೇಶ ವಿಚಾರ!! ಕಮಲೆಯ ಕಳವಳವನ್ನು ಕಂಡು ರಾಘವೇಂದ್ರನ

ಸುರುಗಹೆತ್ತಿದನು. ರಮೇಶನ ಗುಪ್ತ ವನವಾಸದ ಗೂಢ ಅವನಿಗೆ ಳಿಯದಾಯಿತು. ಕಮಲೆಯನ್ನು ಎಷ್ಟು ಸಂತೈಸಿದರೂ ಅವಳ ಳುಪು ನಿಲ್ಲಲಿಲ್ಲ. ತನ್ನ ಗತಿಯೇನು?—ಎಂದು ಒದರಿಕೊಂಡಳು.

* * * *

ರಾಮರಾಯನ ಅವಸ್ಥೆ ಏತಕ್ಕೂ ಬಾರದಾಗಿ ಬಿಟ್ಟಿತು. ಅರ್ಧ-ನುರ್ಧ ಭ್ರಮಿಷ್ಟನಂತಾಗಿಬಿಟ್ಟಿದ್ದನು. ರಾಧಾಬಾಯಿ ಹಾಸಿಗೆ ಹಿಡಿದುಬಿಟ್ಟಿದ್ದಳು. ರಾಮರಾಯ ದಿನೇ ದಿನೇ ಕೊರಗಹತ್ತಿದನು. ಇದೀಗ 'ರಮೇಶ—ರಮೇಶ' ಎಂದು ಅವನ ಬಾಯಿಂದ ನಾಮ-ಸಹಸ್ರ ಹೊರಬೀಳಹತ್ತಿತು. ಆದರೆ ದಿನಗಳು ಕಳೆದಂತೆ, ತಿಂಗಳು-ಗಳು ಹೋದಂತೆ, ರಾಮರಾಯ ತೀರ ಹತಾಶನಾದ. ಅವನ ಅವಸ್ಥೆ ಏತಕ್ಕೂ ಬಾರದಾಗಿಬಿಟ್ಟಿತು.

* * * *

ಎರಡು ವರುಷಗಳನಂತರ. ಮುಂಬಯಿಯಲ್ಲಿ ಬಹು ದೊಡ್ಡ ಪ್ರಮಾಣದ ಒಂದು ಸಂಗೀತ ಸಮ್ಮೇಲನ ಕೂಡಿತ್ತು. ದೇಶದ ಎಲ್ಲ ಮೂಲೆಗಳಿಂದಲೂ ಸಂಗೀತ ಕಲಾಕಾರರು ಕೂಡಿದ್ದರು. ಅಂದಿನ ದೃಶ್ಯ ರಮಣೀಯವಾಗಿತ್ತು. ಅಂದಿನ ರಾತ್ರಿ ಕೆಲವು ಜನರ ಕಾರ್ಯಕ್ರಮಗಳಾಗಿದ್ದುವು. ಅಷ್ಟರಲ್ಲಿ ಒಬ್ಬ ಯುವಕ ಮುಂದೆ ಬಂದ. ಮುಖದ ಮೇಲೆ ಗಡ್ಡ ಬೆಳೆದಿದೆ ಮೈಮೇಲಿನ ಅರಿವೆಯೆಲ್ಲ ಹೊಲಸಾಗಿದೆ. ಎಲಾ—ಅವನ ಹಿಂದಿನಿಂದ ಬಂದಳು ಅವಳು— ಗಂಗಾಸಾನಿ. ಭೀದಿಯ ಬದಿಗೆ ಕೇಳುತ್ತ ಕುಳಿತವ-ನನ್ನೇಕೆ ಒಳಗೆ ಕರೆದುಕೊಂಡು ಬಂದಳು! ಅವನನ್ನು ಪೀಠದ ಮೇಲೆ ಕುಳ್ಳಿರಿಸಿದಳು. ತಾನೂ ಅವನ ಹಿಂದೆ ತಂಬೂರಿ ಹಿಡಿದು ಕುಳಿತಳು. ಸಾಥೀದಾರರನ್ನು ಸನ್ನೆಮಾಡಿ ಕರೆದಳು. ಕೆಲಹೊತ್ತಿನ ವರೆಗೆ ಎಲ್ಲೆಡೆಯೂ ಸ್ತಬ್ಧ. ಸುತ್ತುಮುತ್ತು ಕುಳಿತ ಸಾವಿರಾರು ಶ್ರೋತೃಗಳು 'ಇದೇನು!' ಎಂದು ಕುತೂಹಲದಿಂದ ಪೀಠದ ಕಡೆಗೆ ನೋಡಹತ್ತಿದರು.

ಗಂಗಾಸಾನಿಯ ತಂಬೂರಿಯ ನಾದವು ಶಾಂತಿಯ ತರಂಗ ಭೇದಿಸಿತು. ಯುವಕನಲ್ಲಿ ವಿಲಕ್ಷಣವಾದ ಸ್ಫೂರ್ತಿ ತುಂಬಿತು. ಅವನು ಹಾಡಿದನು. ಅವನು ಹಾಡಿದ ರಾಗ ಮಿಯಾ ಮಲ್ಹಾರ. ಏನೋ, ಹದಿನಾಲ್ಕು ಲೋಕಗಳಿಲ್ಲ ಅವನ ರಾಗದಲ್ಲಿ ಹೊಕ್ಕು ಪ್ರತಿಧ್ವನಿಗೈಯಹತ್ತಿದುವು. ಹಿಮ್ಮೇಳದವರು ಸೋತುಹೋದರು. ಗಂಗಾಸಾನಿ ಮೈಮರೆತಳು. ಕೂಡಿದ ಜನರು ಕಣ್ಣು ರೆಪ್ಪೆಯನ್ನು ಸಹ ಮುಚ್ಚಲಿಲ್ಲ. ಎಲ್ಲರ ಹೃದಯ ರಾಗದಲ್ಲಿ ಬೆರೆತು ಸಮರಸ ವಾಯಿತು. ಎಲ್ಲರ ಭಾವನೆಗಳೂ ಸಂಗೀತಮಯವಾದುವು. ಯುವಕನ ಹೊಲಸು ಅರಿವೆ, ಗಡ್ಡದಿಂದ ಮುಚ್ಚಿದ ಮುಖ ಇವುಗಳ ಕಡೆಗೆ ಯಾರ ಲಕ್ಷ್ಯವಿರಲಿಲ್ಲ. ಅವನಲ್ಲಿ ತುಂಬಿ ತುಳುಕಿ ಹರಿದು ಬಂದ ಆ ಸಂಗೀತ ಸ್ರೋತ, ಎಲ್ಲರ ಹೃದಯದಲ್ಲಿ ತೊಕ್ಕಿತ್ತು. ಪ್ರಮುಖ ಸಂಗೀತಕಲಾವಂತರೆಲ್ಲ ಧಾವಿಸಿ ಬಂದು ತಬ್ಬಿಕೊಂಡರು. 'ಅವನಾರು?' ಎಂಬ ಪ್ರಶ್ನೆಗಳೇ ಅವರ ಬಾಯಿಂದ ಬರಲಿಲ್ಲ. ಸಮ್ಮೇಲನದ ವತಿಯಿಂದ ಅವನಿಗೆ ಹಾರವನ್ನು ಹಾಕಿ-ದರು. ಅವನಿಗೆ 'ಸಂಗೀತ ರತ್ನ' ಎಂದು ಬಿರುದು ಕೊಡುವಾಗ ಕರತಾಡನದ ಮಳೆಗರೆಯಿತು. ಮುಂದಿನ ಕಾರ್ಯಕ್ರಮಗಳನ್ನು ಕೇಳುವ ಗೋಜಿಗೇ ಹೋಗಲಿಲ್ಲ ಜನರು. ಗಂಗಾಸಾನಿ ಸಂಗೀತ ರತ್ನನ ಪಾದಕ್ಕೆರಗಿದಳು. ಕೂಡಲೇ, ಜನರ ಸಂದಣಿಯಲ್ಲಿ ಸೇರಿ. ಇಬ್ಬರು ಜನರನ್ನು ಕರೆದುಕೊಂಡು ಬಂದಳು. ಅವರನ್ನು ಕಂಡು ಸಂಗೀತರತ್ನ ಕೂಗಿದ :

"ಕಮಲಾ— ರಾಘವೇಂದ್ರ!!!"

"ರಮೇಶ" ಎಂದವನೇ ರಾಘವೇಂದ್ರ ಹಾರಿಬಂದು ಅವ-ನನ್ನು ತಬ್ಬಿಕೊಂಡ. ಕಮಲೆ ರಮೇಶನ ಪಾದಕ್ಕೆರಗಿ ಆಶ್ರುಗಳಿಂದ ಅವನ ಪಾದ ತೊಳೆದಳು.

"ರಮೇಶ, ಇಷ್ಟೇನು ನಿನ್ನ ಅವಸ್ಥೆ? ಇಷ್ಟು ದಿನಗಳ ವರೆಗೆ ಎಲ್ಲಿದ್ದಿ?" ಎಂದು ರಾಘವೇಂದ್ರ ಕೇಳಿದ.

"ಆಹೋರದಲ್ಲಿ" ಎಂದು ಉತ್ತರ ಬಂದಿತು.

ರಾಘವೇಂದ್ರನೆಂದ. "ಊರಿಗೆ ನಡೆ."

ರಮೇಶ:— "ಇಲ್ಲಿ ರಾಘವೇಂದ್ರ—ಆ ಮನೆಯಲ್ಲಿ ಕಾಲು ಹಾಕಲಾರೆ! ನನಗೆ ಘೋರವಾದ ಆಜ್ಞೆಯಾಗಿದೆ!"

ರಾಘವೇಂದ್ರ:— ನೀನಾದರೂ ನಿನ್ನ ತಂದೆಯ ಕಟ್ಟ-ಪ್ಪಣೆಯನ್ನು ಪೂರ್ಣವಾಗಿ ಮನ್ನಿಸಿದಿ. 'ನಾನು ಜೀವಂತವಿರುವ ವರೆಗೆ ನಿನ್ನ ಮುಖ ನೋಡುವುದಿಲ್ಲ' ಎಂದು ನಿನ್ನ ತಂದೆ ಕಠೋರವಾದ ನಿರ್ಧಾರ ಮಾಡಿರಲಿಲ್ಲವೆ! ಆದರೆ....!" ರಮೇಶನ ಎದೆ ಹಾರಹೆತ್ತಿತು. "ರಾಘವೇಂದ್ರ! ಏನಾಯಿತು!!!" ಎಂದು ಚೀರಿದನು.

ರಾಘವೇಂದ್ರ:— ಹೋದ ವರ್ಷ, ಮನೋವ್ಯಥೆಯಿಂದ ಬಳಲಿ ಬಳಲಿ 'ರಮೇಶ' 'ರಮೇಶ' ಎನ್ನುತ್ತಲೇ ಸ್ವರ್ಗಸ್ಥ-ರಾದರು. ಅವರು ಸಾಯುವಾಗ ಪೂರ್ಣ ಪಶ್ಚಾತ್ತಾಪವಾಗಿತ್ತು. .....ನಿನ್ನ ತಾಯಿ ನಿನ್ನನ್ನು ಜಪಿಸುತ್ತ ಪ್ರಾಣವನ್ನು ಹಿಡಿದು ಕೊಂಡಿದ್ದಾಳೆ. ರಮೇಶ, ನಮ್ಮೆಲ್ಲರ ಮೇಲೆ ದಯೆ ತೋರಿಸು: ನಡೆ ಮನೆಗೆ...."

ಕೆಲಹೊತ್ತು ರಮೇಶ ದಂಗುಬಡಿದು ನಿಂತ.

ರಾಘವೇಂದ್ರನ ಕಳಕಳಿಯ ಕರೆಯನ್ನೂ, ಗಂಗಾಸಾನಿಯ ಪವಿತ್ರ ನೋಟವನ್ನೂ, ಕಮಲೆಯ ಬೆಂದ ಮನವನ್ನೂ, ತಾಯಿಯ ಅವಸ್ಥೆಯನ್ನೂ, ತಂದೆಯ ಮರಣವಾರ್ತೆಯನ್ನೂ ನೆನಪುಮಾಡಿ, ರಮೇಶ ಕಣ್ಣುಗಳಲ್ಲಿಯ ಅಶ್ರುಪ್ರವಾಹವನ್ನು ಒರಸುತ್ತಲೇ, ಶಬ್ದ-ಗಳಿಲ್ಲದ ಸಮ್ಮತಿಯಿತ್ತ.

ರಾಜ್ಯಾಂಗ ರಚನಾ ಸಭೆಯಲ್ಲಿ ಕನ್ನಡಿಗರು

ಶ್ರೀ. ನಾಡಿಗ ಕೃಷ್ಣಮೂರ್ತಿ, ನ್ಯೂದಿಲ್ಲಿ

●

ಸ್ವತಂತ್ರ ಭಾರತದ ರಾಜ್ಯಘಟನೆಯನ್ನು ಸಿದ್ಧಗೊಳಿಸುವುದರಲ್ಲಿ ಕನ್ನಡ ನಾಡಿನ ಕೆಲವು ಜನ ಮೆದುಳಿಗರೂ ಸೇರಿದ್ದರು. ಅವರು ಯಾರು ಯಾರು? ಅವರ ವೈಶಿಷ್ಟ್ಯವೇನು?

೧೯೫೦ನೆಯ ಇಸ್ವಿ ಜನವರಿ ೨೬ನೆಯ ತಾರೀಖು, ಭಾರತವು 'ಜನತಾರಾಜ್ಯ'ದ ರಾಷ್ಟ್ರವೆಂದು ಸಾರಲ್ಪಟ್ಟಿತು. ನೂರಾರು ವರ್ಷಗಳನಂತರ, ಭಾರತೀಯರಾದ ನಾವು ಸ್ವತಂತ್ರರಾಗಿ ನಮ್ಮದೇ ಆದ ಒಂದು ರಾಜ್ಯಘಟನೆಯನ್ನು ಒಪ್ಪಿ ಸ್ವೀಕರಿಸಿದೆವು. ಸುಮಾರು ೩೮೦ ಜನ ಭಾರತೀಯ ಚುನಾಯಿತ ಪ್ರತಿನಿಧಿಗಳು ಸೇರಿ, ಈ ರಾಜ್ಯಘಟನೆಯನ್ನು ರಚಿಸಿರುವರು. ಅದರಲ್ಲಿ ಕರ್ನಾಟಕದ ಪಾತ್ರವು ಇಲ್ಲದೇ ಇಲ್ಲ. ಬೊಂಬಾಯಿ, ಮದರಾಸು, ಮೈಸೂರು ಮತ್ತು ಕೊಡಗಿನ ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿ, ರಾಜ್ಯಾಂಗ ರಚನೆ ರೂಪುಗೊಳ್ಳಲು ಕಾರಣಕರ್ತರಾಗಿ ಪುಣ್ಯ ಕಟ್ಟಿಕೊಂಡರು. ಆ ಸದಸ್ಯರುಗಳ ಪರಿಚಯವೇ ಪ್ರಸ್ತುತ ಲೇಖನದ ಉದ್ದೇಶ.

ಶ್ರೀ. ರಂಗನಾಥ ರಾಮಚಂದ್ರ ದಿವಾಕರರು.

ಶ್ರೀಯುತ ದಿವಾಕರರ ಹೆಸರನ್ನು ಕೇಳದ ಭಾರತೀಯರಾಗಲಿ, ಕನ್ನಡಿಗರಾಗಲಿ, ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಬೊಂಬಾಯಿ ನ್ಯಾಯವಿಧಾಯಕ ಸಭೆಯಿಂದ ಕರ್ನಾಟಕದ ಪರವಾಗಿ ಆರಿಸಿ ಬಂದವರಲ್ಲಿ ಶ್ರೀ. ದಿವಾಕರರೂ ಒಬ್ಬರು. ಶ್ರೀ. ದಿವಾಕರರ ಈ ಎರಡೂವರೆ ವರ್ಷಗಳ ಜೀವನವನ್ನು ಎರಡು ವಿಧವಾಗಿ ವಿಂಗಡಿಸಬಹುದು. ಮೊದಲು ಒಂದೂವರೆ ವರ್ಷ ಘಟನಾಸಭೆಯ ಸದಸ್ಯರಾಗಿದ್ದರು. ಈಗ ಒಂದು ವರ್ಷದಿಂದ ಕೇಂದ್ರ ಸರಕಾರದ ಸುದ್ದೀಪ್ರಾತಿ ಮತ್ತು ಆಕಾಶವಾಣಿ ಇಲಾಖೆಗಳ ಮಂತ್ರಿಗಳಾಗಿದ್ದಾರೆ. ಘಟನಾಸಭೆಯ ಸದಸ್ಯರಿದ್ದಾಗ, ಘಟನೆಯ ತಿದ್ದುಪಡಿಗಳನ್ನು ಸೂಚಿಸಿ ಗೆಲ್ಲುವುದರಲ್ಲಿ ತುಂಬಾ ಶ್ರಮವಹಿಸುತ್ತಿದ್ದರು. ಅದೇ ಆಸಕ್ತಿಯನ್ನೇ ಭಾರತೀಯ ಕೇಂದ್ರ ಶಾಸನ ಸಭೆಯಲ್ಲೂ ತೋರಿಸುತ್ತಿದ್ದರು. ಜಾತಿ-ಮತ-ಭೇದಭಾವನೆ ಇಲ್ಲದೆ, ಬುದ್ಧಿಶಕ್ತಿಯನ್ನು ಮುಂದಾಗಿಟ್ಟುಕೊಂಡು ಸರಕಾರೀ ಕೆಲಸ—ಶಾಲಾ-ಕಾಲೇಜುಗಳಲ್ಲಿ ಪರಿಗಣನೆ ಮುಂತಾದುವುಗಳನ್ನು ಮಾಡಬೇಕೆಂದು ಧೈರ್ಯದಿಂದ ಹೋರಾಡಿದವರು ಶ್ರೀ. ದಿವಾಕರರು. ಗೃಹಮಂತ್ರಿಗಳಾದ ಸರದಾರ್ ಪಟೇಲರು ಇವರ ತತ್ತ್ವವನ್ನೊಪ್ಪಿ, ಒಂದು ಸಮಿತಿಯನ್ನು ರಚಿಸಿ, ಶ್ರೀ. ದಿವಾಕರರನ್ನೆ ಅದರ ಅಧ್ಯಕ್ಷರನ್ನಾಗಿ ಮಾಡಿದರು. ಶ್ರೀಯುತರು ಮಂತ್ರಿಗಳಾದ ಮೇಲೆ, ಇವರು ಮಾಡುತ್ತಿರುವ ಕೆಲಸ, ಪ್ರತಿದಿನವೂ ಪತ್ರಿಕೆಗಳ ಚಲನಚಿತ್ರಗಳು ಮತ್ತು ಆಕಾಶವಾಣಿಯಿಂದ ತಿಳಿಯುತ್ತದೆ. ಇದೆ. ಕರ್ನಾಟಕದ ಏಕೀಕರಣದ ಬಗ್ಗೆ ಇವರು ಮೊದಲಿನಿಂದಲೂ ಸತತವಾಗಿ ಹೋರಾಡುತ್ತಾ ಬಂದಿದ್ದಾರೆ. ಧಾರ್ ಸಮಿತಿಯ ಕರ್ನಾಟಕದ ಬಗ್ಗೆ ಕೊಟ್ಟ ಒಳ್ಳೆಯ ಅಭಿಪ್ರಾಯಕ್ಕೆ ಶ್ರೀ. ದಿವಾಕರರು ಒಬ್ಬರು ಕಾರಣರೆಂದು ಹೇಳಬಹುದು. ಮೈಸೂರು ಸಹಿತ ಕರ್ನಾಟಕ ರಚನೆಯಾಗಬೇಕೆಂದು ವಾದಿಸುವ ಕಟ್ಟಾವಾದಿಗಳಲ್ಲಿ ಶ್ರೀ. ದಿವಾಕರರು ಒಬ್ಬರು. ಭಾರತ ಶಾಸನ ಸಭೆಯಿಂದ ಚುನಾಯಿತರಾಗಿ ಡಾ. ಬಿ. ವಿ. ಕೇಸ್ಕರರೊಂದಿಗೆ ಪ್ರಪಂಚದ ೩೭ನೇ ಇಂಟರ್ ಪಾರ್ಲಿಮೆಂಟರಿ ಸಭೆಗಾಗಿ ರೋಮು (ಇಟಲಿ) ನಗರಕ್ಕೆ ಹೋಗಿದ್ದರು. ಆಗ ಇವರು ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಜರ್ಲೆಂಡ್ ದೇಶಗಳನ್ನು ನೋಡಿಕೊಂಡು ಬಂದರು.

ಶ್ರೀಯುತರು ತುಂಬಾ ಸರಳ ಸ್ವಭಾವಿಗಳು. ಇವರಿಗೆ ಕನ್ನಡವಲ್ಲದೆ, ಮರಾಠಿ, ಗುಜರಾಥಿ, ಬಂಗಾಲಿ, ಹಿಂದಿ, ಇಂಗ್ಲೀಷ ಭಾಷೆಗಳು ಬರುತ್ತವೆ. ಇವರು ಯಾವಾಗಲೂ ಹಸನ್ಮುಖಿಗಳಾಗಿಯೇ ಇರುತ್ತಾರೆ. ದೆಹಲಿಗೆ ಬಂದ ಕನ್ನಡಿಗರು ಶ್ರೀ. ದಿವಾಕರರ ಆತಿಥ್ಯ ತೆಗೆದುಕೊಳ್ಳದೆ ಹೋದವರಿಲ್ಲ. ಕೇಂದ್ರ ಸರಕಾರದ ಕರ್ನಾಟಕದ ಪರವಾಗಿ ಪ್ರಥಮ ಮಂತ್ರಿಗಳಾಗಿ, ಯಶಸ್ವಿಯಾಗಿ ಕೆಲಸ ಮಾಡುತ್ತಿರುವುದು ಕನ್ನಡಿಗರ ಪುಣ್ಯ ಮತ್ತು ಹೆಮ್ಮೆಯೆ ಸರಿ.

ಶ್ರೀ. ಸಿದ್ಧವ್ವನ ಹಳ್ಳಿ ನಿಜಲಿಂಗಪ್ಪನವರು

ಎಲ್ಲ ಪ್ರಾಂತಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳನ್ನು ಘಟನಾ ಸಮಿತಿಗೆ ಚುನಾಯಿಸಬೇಕೆಂಬ ತತ್ತ್ವದ ಮೇಲೆ, ಶ್ರೀ. ನಿಜಲಿಂಗಪ್ಪನವರು ಮೈಸೂರಿನವರಾದರೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದದ್ದರಿಂದ, ಬೊಂಬಾಯಿ ಶಾಸನ ಸಭೆಯಿಂದ ಘಟನಾಸಭೆಗೆ ಆರಿಸಿ ಬಂದರು. ಘಟನಾಸಮಿತಿಗೆ ಬಂದ ಕೂಡಲೆ ಡಾ. ಪಟ್ಟಾಭಿಯವರ ಕಾಂಗ್ರೆಸ್ ಸಂಸ್ಥೆಯ ಮಂತ್ರಿಮಂಡಲದಲ್ಲಿ ಸದಸ್ಯರಾಗಿ ತೆಗೆದುಕೊಳ್ಳಲ್ಪಟ್ಟರು.

ಶ್ರೀ. ನಿಜಲಿಂಗಪ್ಪನವರು ಘಟನಾ ಸಮಿತಿಯಲ್ಲಾಗಲಿ, ಶಾಸನ ಸಭೆಯಲ್ಲಾಗಲಿ ಅಷ್ಟೊಂದು ಭಾಗ ತೆಗೆದುಕೊಂಡಂತೆ ಕಂಡುಬರ

: ಸಂಸ್ಥಾನಗಳ ಪ್ರಶ್ನೆ ಬಂದಾಗ, ಕೆಲವೊಂದು ಮಾತನಾಡಿದ್ದು ಜ್ಞಿದ್ದೇನೆ. ಆದರೆ ಶ್ರೀ. ನಿಜಲಿಂಗಪ್ಪನವರು ಸಂಪೂರ್ಣ ಶಕ್ತಿ-ಲ್ಲವನ್ನೂ ದೆಹಲಿಯಲ್ಲಾಗಲೀ ಅಥವಾ ಹೊರಗೇ ಆಗಲಿ, ರ್ನಾಟಕ ಪ್ರಾಂತ' ಕಟ್ಟುವುದರಲ್ಲಿ ಉಪಯೋಗಿಸುತ್ತಿದ್ದಾರೆ. ಮುಖಂಡರು ಎನ್ನಿಸಿಕೊಳ್ಳುವ ಬಲವಾದ ದೇಹವಿದೆ ನಿಜ-ಗಪ್ಪನವರಿಗೆ. ಅದೇ ಬಲದಿಂದ, ಮೈಸೂರು ಕಾಂಗ್ರೆಸ್ ಯಿಂದಿರುವ ಮಂತ್ರಿಗಳಿಗೆ 'ನೀವು ಏಕೀಕರಣಕ್ಕೆ ಬೆಂಬಲ ಡದಿದ್ದರೆ ನಿಮ್ಮ ವಿರುದ್ಧ ದಂಗೆ ಏಳುವೆನು' ಎಂಬ ಹೆದರಿಕೆ ಕಿದ್ದರೆ, ಮೈಸೂರು ಮಂತ್ರಿಗಳು ಶ್ರೀ. ನಿಜಲಿಂಗಪ್ಪನವರಿಗೆ ಯದೆ ಇರುತ್ತಿರಲಿಲ್ಲ. 'ನಮ್ಮವರನ್ನೇ ನಾನೇಕೆ ಮೂದಲಿಸ-ಕು?' ಎನ್ನುವಷ್ಟು ಸರಳ ಸ್ವಭಾವದವರು ಶ್ರೀ. ನಿಜಲಿಂಗಪ್ಪ-ರು. ಇವರಿಗೆ ಕನ್ನಡ, ಇಂಗ್ಲಿಷ್ ಇವೆರಡೇ ಚೆನ್ನಾಗಿ ಬರತಕ್ಕ-ವು. ಇತ್ತೀಚೆಗೆ ಹಿಂದಿ, ಮರಾಠಿ ಮಾತನ್ನೂ ಆಡಿ ಆರ್ಥ ಡಿಕೊಳ್ಳುತ್ತಾರೆ. ದೆಹಲಿಯಲ್ಲಿ ಇವರಿರುವುದು ೧೨-ಎ ೋಜಷಾ ರಸ್ತೆಯ ಸರಕಾರೀ ಬಂಗ್ಲೆಯಲ್ಲಿ. ಆದರೂ ಅದಕ್ಕೆ ಡಿಗೆ ಕೊಡಬೇಕು. ಆ ಮನೆಯಲ್ಲಿ ಮತ್ತೆರಡು ಸಂಸಾರಗಳೂ ೆ. ಒಂದು ಕನ್ನಡದ್ದು, ಇನ್ನೊಂದು ಕಾಶ್ಮೀರದ್ದು. ಅವರ ೆಯಿಂದ ದೊರಕಿದ ಕೋಣೆಯೊಂದರಲ್ಲಿ ಶ್ರೀ. ನಿಜಲಿಂಗಪ್ಪ ರು.

ಶ್ರೀ. ಕೆ. ಸಿ. ರೆಡ್ಡಿಯವರು

ಶ್ರೀ. ಚಂಗಲರಾಯ ರೆಡ್ಡಿಯವರು ಮುಖ್ಯಮಂತ್ರಿಗಳಾಗುವ ಂಜೆ, ಸಭೆಯ ಕಾರ್ಯಕಲಾಪಗಳಲ್ಲಿ ಸಂಸ್ಥಾನಗಳ ಪ್ರಶ್ನೆ ಬಂದಾಗಲೆಲ್ಲ ತುಂಬಾ ಭಾಗ ವಹಿಸುತ್ತಿದ್ದರು. ಮೈಸೂರಲ್ಲಿ ರುಗೊಂಡಂತೆ, ಇಲ್ಲಿ ಇವರು ಭಾಷಣ ಮಾಡಿದಾಗಲೆಲ್ಲ ಚತುರ-ದು ಹೆಸರು ಪಡೆದಿದ್ದಾರೆ. ಆದರೆ ಇವರು ಭಾಷಣ ಮಾಡಿದ್ದೇ ಮೆ. ಮುಖ್ಯಮಂತ್ರಿಗಳಾದ ಮೇಲಂತೂ ದೆಹಲಿಯ ಪ್ರವಾಸ ತ್ಯಾದರೂ—ಅವು ಅಧಿಕಾರೀ ಕೆಲಸದವಾಗಿದ್ದುವು. ಹಾಗೆ ದಾಗ ಸಭೆ ಸೇರುತ್ತಿದ್ದರೆ, ಆಗ ಒಮ್ಮೊಮ್ಮೆ ಸಭೆಗೂ ಬರುತ್ತಿ-ರು. ಆದರೆ ಇತ್ತೀಚಿನ ಕೆಲವು ಸಭೆಗಳಲ್ಲಿ ಕಡ್ಡಾಯವಾಗಿ ಜರ್ ಇದ್ದರು. ಮತ್ತು ಸಂಸ್ಥಾನಗಳ ವಿಲೀನೀಕರಣದ ಬಗ್ಗೆ ವರು ಮಾಡಿದ ಭಾಷಣ ಅತ್ಯಂತ ಮಾರ್ಮಿಕವಾಗಿದ್ದಿತು. ೀ. ರೆಡ್ಡಿಯವರು ಸಾರ್ವಜನಿಕ ಸಭೆ-ಸತ್ಕಾರಕೂಟಗಳಿಗೆ ಅನಾ-ವಶ್ಯಕವಾಗಿ ಹೋದದ್ದು ಕಂಡುಬಂದಿಲ್ಲ. ಇದಕ್ಕೆ ಇವರ ದೇಹ-ತಿಯೇ ಕಾರಣವೆನ್ನಬಹುದು. ಸಾಮಾನ್ಯವಾಗಿ ಮೈಸೂರು ತ್ತು ಕರ್ನಾಟಕಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳಲ್ಲಿ ದಕ್ಕೂ ಬಾರದೇ ಇರುವುದಿಲ್ಲ. ಕರ್ನಾಟಕ ಏಕೀಕರಣದ ಬಗ್ಗೆ ೀ. ರೆಡ್ಡಿಯವರು ಇಂದಿನ ವರೆಗೂ ಮೌನ ತಾಳಿದ್ದಾರೆ. ೈಸೂರು ರಾಜಕೀಯ ಮುಖಂಡರ ಶ್ರೇಣಿಯಲ್ಲಿ ಶ್ರೀ. ರೆಡ್ಡಿ-ವರು ಹಿರಿದಾದ ಸ್ಥಾನವನ್ನು ಪಡೆದಿದ್ದರೂ, ಏಕೀಕರಣದ ಜಕೀಯದ ಬಗ್ಗೆ ದೇಶದಲ್ಲಿ ಸ್ವಲ್ಪ ಅಸಮಾಧಾನಕ್ಕೊಳಗಾಗಿ-ದ್ದಾರೆ. ನಾಳಿನ ಕರ್ನಾಟಕದ ಮುಖ್ಯ ಮಂತ್ರಿಪದವು ರೆಡ್ಡಿ-ಯವರದೇ ಎಂಬುದು ಗೊತ್ತಿದ್ದರೂ, ರಾಜಕೀಯ ಮುತ್ಸದ್ದಿಗಳಾದ ಇವರೀಕ ಮೌನ ವಹಿಸಿದ್ದಾರೊ ತಿಳಿಯಲೊಲ್ಲದಾಗಿದೆ.

ಶ್ರೀ. ರೆಡ್ಡಿಯವರು ಯಾವಾಗಲೂ ಪಸನ್ಮುಖಿಗಳಾಗಿದ್ದಾರೆ. ಮಾತು ಕಡಿಮೆ; ಚಾಣಾಕ್ಷ ಬುದ್ಧಿ. ಕ್ಷಣ ಇಂಗಿತವನ್ನು ಅರಿತು-ಕೊಳ್ಳುತ್ತಾರೆ. ಆದರೆ ತೀರ್ಪು ಕೊಡುವ ಧೈರ್ಯ ಕಡಿಮೆ. ಇವರನ್ನು ರಾಜಕೀಯ ಬರೆಹಗಾರರು 'ಹ್ಯಾಮ್ಲೆಟ್' ಎಂದು ಪ್ರೀತಿಯಿಂದ ಕರೆಯುತ್ತಾರೆ. ಶ್ರೀ. ರೆಡ್ಡಿಯವರು ದೆಹಲಿಗೆ ಬಂದಾಗ, ಬರೋಡಾ ಅರಮನೆಯಲ್ಲಿ ಉಳಿದುಕೊಳ್ಳುತ್ತಾರೆ. ಪರಿಚಿತರು ಹೋದರೆ, ಮಮತೆಯಿಂದ ಬೆನ್ನ ಮೇಲೆ ಕೈಹಾಕಿ-ಕೊಂಡು ಮಾತನಾಡುತ್ತಾರೆ.

ಶ್ರೀ. ಯು. ಶ್ರೀನಿವಾಸ ಮಲ್ಯರು

ಶ್ರೀನಿವಾಸ ಮಲ್ಯರು ಅಚ್ಚ ಕನ್ನಡಿಗರು. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಪ್ರಾಂತದವರು. ಮದ್ರಾಸ್ ಅಸೆಂಬ್ಲಿ-ಯಿಂದ ಚುನಾಯಿತರಾಗಿ ಬಂದಿದ್ದಾರೆ. ಇವರ ಚುನಾವಣೆಯೇ ತಮಾಷೆಯಾಯಿತು. ಮೊದಲು ಕನ್ನಡಿತಿಯಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಚುನಾಯಿತರಾಗಿದ್ದರು. ಅಕಸ್ಮಾತ್ ಅವರು ರಾಜೀನಾಮೆ ಕೊಟ್ಟರು. ಅವರ ಬದಲು ಶ್ರೀನಿವಾಸ ಮಲ್ಯರು ಆರಿಸಿ ಬಂದರು.

ಕುಟುಂಬ ದೊಳಗಿನ ಚಿಲ್ಲರೆ ಬೇನೆ

ಚೇಪುಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಶಕ್ಯವಿರುವುದಿಲ್ಲ -- ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅತಿಸಾರ, ಕಂಠಿ, ಹೈನೋವು, ಹಲ್ಲುನೋವು, ಮಕ್ಕಳ ಜ್ವರ ಏಕಾ ಇತ್ಯಾದಿ ಅನೇಕ ಚಿಲ್ಲರೆ ಬೇನೆಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ಪಸ್ಸಾಯಮಾನ ಗುಣಪಡಿಸುತ್ತದೆ. ಕಾಲರಾ ಮತ್ತು ಅತಿಸಾರಗಳಂಥ ಭಾಸಳವಾದ ಪೀಡೆಗಳ ಮೇಲೆ ಇದರ ಪರಿಣಾಮವು ಇದರ ಉಪಯೋಗವಾಗುವದರಿಂದ ಇವ ತ್ಯೆಯಲ್ಲಿದಾಗ ಯಾವಾಗಲೂ ಇದರ ಉಪಯೋಗವಾಗುವದರಿಂದ ಇವ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರವಾಸದಲ್ಲಿ ಪಕ್ಕದಲ್ಲಿ ಇಟ್ಟುಕೊಳ್ಳುವದು (ಉಪಯೋಗ ಮುಂಜಾಗ್ರತೆಯು ಅವಶ್ಯವಾಗಿದೆ) ಮೂರ್ಛೆಗೆ ಲಕ್ಷಣವಾಗಿ ಕೊಡುವ ಔಷಧಿಯೂ (ವಿಷದ ಪ್ರಾಣಿಗಳಲ್ಲಿಯೂ) ಕಲ್ಲುಗಳಲ್ಲಿ ಅಂಗಡಿಕಾರರಲ್ಲಿಯೂ ದೊರೆಯುತ್ತದೆ.

ಎಮ್.ಬಿ. ಜವೇರಿಯನ್ ಮತ್ತು ಪುನಾ ಸ್ಟೋರ್ಸ್ ಮುಂಬಾಯಿ ೨

'ಬಗನ' ಬಾಲಾಮೃತ

ಮಕ್ಕಳ ಸಮೃದ್ಧತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಹುಟ್ಟುಹಾಕಿ ಮಗುವಿಗೆ ಯಕೃತ್ತು ಮತ್ತು ಹೊಟ್ಟೆ ಸರಿಯಾಗಿ ಇರಬೇಕು. ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಶ್ರೀನಿವಾಸ ಮಲ್ಯರು ಕನ್ನಡದ ಚಾಣಕ್ಯರೆಂದು ಹೆಸರುಗೊಂಡಿದ್ದಾರೆ. ಇವರ ಚಾಣಕ್ಯನೀತಿ ಭಾರತದ ರಾಜಕೀಯದಲ್ಲೂ ಪ್ರಭಾವಗೊಂಡಿದೆ. ಹಾಗೆಂದೇ ಇವರೀಗ ಕಾಂಗ್ರೆಸ್ ಪಕ್ಷದ ಡೆಪ್ಯೂಟಿ ವ್ಹಿಪ್ ಆಗಿದ್ದಾರೆ. ಇವರ ಮಾತು, ಒಂದು ಏಟು ಎರಡು ತುಂಡು. ಮುಖ್ಯ ವ್ಹಿಪ್‌ರಾದ ಶ್ರೀ. ಕೃಷ್ಣನಾರಾಯಣ ಸಿಂಹರ ಬಲಗೈ ಇವರು. ಯಾವ ಸಮಿತಿಯ ಸದಸ್ಯರನ್ನು ಆರಿಸುವಾಗಲೆ ಆಗಲಿ, ಭಾರತೀಯ ಪ್ರತಿನಿಧಿಗಳನ್ನು ಹೊರದೇಶಕ್ಕೆ ಕಳಿಸುವಾಗಲೆ ಆಗಲಿ, ಶ್ರೀ. ಮಲ್ಯರ ನಿರ್ಧಾರವೇ ಕೊನೆಯ ನಿರ್ಧಾರವಾಗುವುದು. ಹಾಗೆಂದೇ ಇವರ ಮನೆಗೆ ಟಿಲಿಫೋನಿನ ಗಲಾಟೆ ಹೆಚ್ಚಾಗಿಬಿಟ್ಟಿದೆಯಂತೆ. ಹಾಸಿಗೆಯ ಮಗ್ಗುಲಲ್ಲಿಯೇ ಟಿಲಿಫೋನ್ ಇಟ್ಟುಕೊಂಡಿದ್ದಾರೆ. ಶ್ರೀ. ಮಲ್ಯರು ಇಂದಿನ ಭಾರತೀಯ ಅಸೆಂಬ್ಲಿ ರಾಜಕೀಯದಲ್ಲಿ ಪ್ರಭಾವಶಾಲಿಗಳಾಗಿದ್ದಾರೆ.

ರಾಜ್ಯಾಂಗ ರಚನಾ ಸಭೆಯಲ್ಲಾಗಲಿ, ಅಥವಾ ನ್ಯಾಯ ವಿಧಾಯಕ ಸಭೆಯಲ್ಲಾಗಲಿ, ಶ್ರೀ. ಮಲ್ಯರು ಮಾತನಾಡಿದ್ದೇ ಇಲ್ಲ. ಇವರದು ಅಸೆಂಬ್ಲಿಗಳಲ್ಲಿ ಮಾತು ಕಡಿಮೆ. ಲಾಬಿಗಳಲ್ಲಿಯೇ ಇವರ ಕೈವಾಡ ಹೆಚ್ಚು. ಕಾಫಿ ಕುಡಿಯುತ್ತಾ ಕುಡಿಸುತ್ತಾ ಒಬ್ಬೊಬ್ಬರನ್ನೂ ಜೇಬಿಗೆ ಸೇರಿಸಿ ಬಿಡುತ್ತಾರೆ.

ಶ್ರೀ. ಮಲ್ಯರು ಕುಳ್ಳಾಗಿ ತೆಳ್ಳಗೆ ಇದ್ದಾರೆ. ಯಾವಾಗಲೂ ಕೈಯಲ್ಲಿ ಸಿಗರೇಟು ಇರುತ್ತದೆ. ಮಾತೆತ್ತಿದರೆ ಕಾಫಿ ಬೇಕಾಗುತ್ತದೆ. ಶ್ರೀಮತಿ ಮಲ್ಯರ ಆರೈಕೆ ಇಲ್ಲದಿದ್ದರೆ ಶ್ರೀ. ಮಲ್ಯರು ಈಗಿನ ಸ್ಥಿತಿಯಲ್ಲಿರುತ್ತಿರಲಿಲ್ಲ!' ಎಂದು ಇವರೇ ಒಮ್ಮೆ ನನಗೆ ಹೇಳಿದರು. ಶ್ರೀ. ಮಲ್ಯರ ಮನೆಗೆ ಹೋಗಿ ಕಾಫಿ ಕುಡಿಯದೆ ಬಂದವರೆ ದುರ್ಭಾಗ್ಯರು. ಇವರ ಶ್ರೀಮತಿಯವರು ಬಂದ ಅತಿಥಿಗಳನ್ನು ತುಂಬಾ ಚೆನ್ನಾಗಿ ಉಪಚರಿಸುತ್ತಾರೆ. ಇವರು ವಾಸವಾಡುವುದು ೧೭ನೆಯ ಫಿರೋಜಷಾ ರಸ್ತೆಯಲ್ಲಿ.

ಶ್ರೀ. ಮಲ್ಯರು ಮಂತ್ರಿಗಳಾಗಲಾರರು; ಆದರೆ ಮಂತ್ರಿಗಳನ್ನು ಚುನಾಯಿಸುವುದರಲ್ಲಿ ಇವರ ಕೈವಾಡವು ಚೆನ್ನಾಗಿರುತ್ತದೆ. ದೆಹಲಿಗೆ ಬಂದ ಕನ್ನಡಿಗರು, ಶ್ರೀ. ಮಲ್ಯರನ್ನು ಮಾತನಾಡಿಸಿ ಹೋಗಬೇಡಿ.

ಶ್ರೀ. ಸಂ ನಾ. ಕೃಷ್ಣಮೂರ್ತಿಯವರು.

ಶ್ರೀ. ಕೃಷ್ಣಮೂರ್ತಿಯವರನ್ನು ರಾಜ್ಯಾಂಗರಚನಾ ಸಭೆಗೆ ಮೈಸೂರಿನಿಂದ ಚುನಾಯಿಸಿದಾಗ 'ಇದೇನು, ಮಧ್ಯಮವರ್ಗದವರನ್ನು ಆರಿಸಿಬಿಟ್ಟರಲ್ಲಾ' ಎಂದು ಕೂಗಿದ ಜನಕ್ಕೆ, ಶ್ರೀ. ರಾಯರು, ಅವರ ಪ್ರತಿಭೆ, ಸಾಮರ್ಥ್ಯ ಮತ್ತು ಶ್ರಮದಿಂದ, ತಮ್ಮ ಈ ಮೂರು ವರುಷದ ಕೆಲಸದಿಂದ, ಒಳ್ಳೆಯ ಉತ್ತರ ಕೊಟ್ಟಿದ್ದಾರೆ. ಮೈಸೂರಿನಿಂದ ಬಂದವರ ಪೈಕಿ ತುಂಬಾ ಶ್ರದ್ಧೆಯಿಂದಲೂ ಆಸಕ್ತಿಯಿಂದಲೂ ಸಭೆಯ ಕಾರ್ಯಕಲಾಪಗಳಲ್ಲಿ ಒಳ್ಳೆಯ ಹೆಸರು ಪಡೆದ ಪಾರ್ಲಿಮೆಂಟೇರಿಯನ್ ಶ್ರೀ. ರಾಯರು ಎಂದು ಹೇಳಬಹುದು.

ಇವರ ಮಾತಿನಲ್ಲಿ ಭಾವನಾಪರವಶವಾಗುವ ಕೋಗಿಲ್ಲ. ತಾರ್ಕಿಕವಾಗಿ ಪ್ರಶ್ನೆಗೆ ತಕ್ಕ ಉತ್ತರ ಹೇಳಿ, ಎದುರಾಳಿಗಳನ್ನು ತಮ್ಮ ವಶಕ್ಕೆ ಬರಮಾಡಿಕೊಳ್ಳುತ್ತಾರೆ. ಮೊನ್ನೆ 'ಭಾಷಾಸಮಸ್ಯೆ' ವಿಷಯ ಮಾತನಾಡಿದಾಗ ಶ್ರೀ. ಗೋಪಾಲಸ್ವಾಮಿ ಅಯ್ಯಂಗಾರರು—ಭಾರತದ ರೇಲ್ವೆ ಸಚಿವರು— ಶ್ರೀ. ರಾಯರ ವಾದನೈಖರ್ಯವನ್ನು ಮೆಚ್ಚಿ, ಅವರ ಸಲಹೆಯನ್ನು ಒಪ್ಪಿ Language Commission ನ್ನು ನೇಮಿಸಿದ ವಿಚಾರ ಎಲ್ಲರಿಗೂ ಗೊತ್ತಿದ್ದ ವಿಷಯವೇ ಆಗಿದೆ. ರಾಜ್ಯಾಂಗ ರಚನಾ ಸಭೆಯಲ್ಲಿ ಇವರ ಅನೇಕ ತಿದ್ದುಪಡಿಗಳು ಅಂಗೀಕೃತವಾಗಿವೆ. ಸಂಸ್ಥಾನ ಮತ್ತು ಕರ್ನಾಟಕದ ಹಿತಕ್ಕೆ ಸಂಬಂಧಪಟ್ಟ ಯಾವ ಸಂದರ್ಭದಲ್ಲೂ ತಮ್ಮ ಅಭಿಪ್ರಾಯವನ್ನು ತಿಳಿಸದೆ ಇಲ್ಲ. ನ್ಯಾಯವಿಧಾಯಕ ಸಭೆಯಲ್ಲೂ ಹಾಗೆಯೇ. ಇವರ ಸಮತೋಲ ಮತ್ತು ವಿಚಾರ ಪೂರ್ವಕ ನೀತಿಯನ್ನು ಮನ್ನಿಸಿ ಭಾರತದ ಪಾರ್ಲಮೆಂಟಿನ Panel of Chairmen ಸಮಿತಿಯಲ್ಲಿ, ನಾಲ್ವರಲ್ಲಿ ಒಬ್ಬರಾಗಿ ನೇಮಕ ಹೊಂದಿದ್ದಾರೆ ಭಾರತದ ಪಾರ್ಲಮೆಂಟಿನ ಅಧ್ಯಕ್ಷತೆ ಅನೇಕ ಸಲ ವಹಿಸಿ ತುಂಬಾ ಹೆಸರು ಪಡೆದಿದ್ದಾರೆ ಹಾಗೆ ಪಡೆದವರಲ್ಲಿ ಇವರೇ ಪ್ರಥಮ ಕನ್ನಡಿಗರು.

ಇವರ ಪ್ರತಿಭೆಯನ್ನು ಮನ್ನಿಸಿ ಇಂಗ್ಲೆಂಡಿಗೆ ಹೋದ Commonwealth Parlimentary ಸಮ್ಮೇಲನಕ್ಕೆ ನವನಾ-

ಪುಕರಲ್ಲೊಬ್ಬರಾಗಿ ಇಂಗ್ಲೆಂಡಿಗೆ ತೆರಳಿದ್ದರು. ಇವರು ಅಲ್ಲಿಯೂ ತಮ್ಮ ವಾದಸರಣಿಯಿಂದ ಜನರನ್ನು ಮುಗ್ಧಗೊಳಿಸಿದರು. ಈಗ ಹೋದಾಗ ಫ್ರಾನ್ಸ್, ಬೆಲ್ಜಿಯಮ್, ಹಾಲೆಂಡ್, ಡೆನ್‌ಮಾರ್ಕ್, ಸುತ್ತಿ ಬಂದಿದ್ದಾರೆ.

ಇವರು ಭಾರತದ ನ್ಯಾಯ ವಿಧಾಯಕ ಸಭೆಯ ಬಹು ಮುಖ್ಯನಾದ ಸಮಿತಿಗಳಲ್ಲಿದ್ದಾರೆ. External Affairs ಸಮಿತಿ ಮತ್ತು State Trading and Industrial Corporation ಸಮಿತಿ ಇವೇ ಆವು. ಭಾರತೀಯ ಉಳಿದ ಸದಸ್ಯರೆಲ್ಲರೂ ಇವರನ್ನು ಗೌರವಿಸುತ್ತಾರೆ.

ಶ್ರೀ. ರಾಯರು ಮಲೆನಾಡ ಜಿಲ್ಲೆಯಾದ ಶಿವಮೊಗ್ಗೆಯವರು. ಶಿವಮೊಗ್ಗೆಯ ಕರ್ನಾಟಕ ಸಂಘ ಕಟ್ಟಿದ ಮಹನೀಯರಲ್ಲೊಬ್ಬರು. ಎಲೆಮರೆಯ ಕಾಯಂತೆ ತಮ್ಮ ಸೇವೆ ಸಲ್ಲಿಸಿದವರು. ಈಗಲೂ ಹಾಗೆಯೇ. ಇವರಿಗೆ ಪ್ರಚಾರ, ಹೆಸರು, ಬೇಡ. ಆದರೂ ಇವರನ್ನು ಪತ್ರಿಕೋದ್ಯಮಿಗಳು ಬಿಡುವುದೇ ಇಲ್ಲ. ಇವರು ದೆಹಲಿಗೆ ಬಂದ ಮೇಲೆ, ಕರ್ನಾಟಕ ಸಂಘದ ಯಾವ ಉತ್ಸವದಲ್ಲೂ ಭಾಗಿಯಾಗದೆ ಇಲ್ಲ. ತುಂಬಾ ಸರಳರು. ಇವರಿಗೆ ಜನರ ಸಹವಾಸ ಬೇಕು. ಮಿತಭಾಷಿಗಳಾದರೂ ಸ್ನೇಹಿತರಲ್ಲಿ ತುಂಬಾ ಬಳಕೆ. ಇವರು ವಿದ್ಯಾರ್ಥಿಗಳಂತೆ ರಾತ್ರಿ ಹಗಲೂ ಹರಳೆಣ್ಣೆ ದೀಪದಲ್ಲಿ ಕುಳಿತು ಅಭ್ಯಾಸ ಮಾಡುತ್ತಾರೆಂದು ಕೇಳಿದ್ದೇನೆ. ಮೈಸೂರಿನವರು ದೆಹಲಿಗೆ ಬಂದರೆ, ಶ್ರೀ. ರಾಯರನ್ನು ಕಾಣದೆ ಹೋಗುವುದಿಲ್ಲ. ಇತ್ತೀಚೆಗೆ ಇವರನ್ನು ಸಹಾಯ ಬೇಡಿ ಬರುವವರ ಸಂಖ್ಯೆಯಂತೂ ಹೆಚ್ಚಾಗಿ ಬಿಟ್ಟಿದೆ. ಇವರು ತಮ್ಮ ಕೈಲಾದಮಟ್ಟಿಗೆ ಮಾಡುತ್ತಲೂ ಇದ್ದಾರೆಂದು ಕೇಳಿದ್ದೇನೆ.

ಶ್ರೀ. ರಾಯರಿಗೆ ಅಧಿಕಾರ ಬೇಡವಾದರೂ ತಾನೇ ಬೆನ್ನಟ್ಟಿ ಕೊಂಡು ಬರುತ್ತದೆ. ಹಿಂದೆ ಇವರು ಉಪಮಂತ್ರಿಗಳಾಗುತ್ತಾರೆಂದು ವದಂತಿ ಇತ್ತು. ಒಂದಲ್ಲ ಒಂದು ದಿನ ಇವರು ಕೇಂದ್ರ ಸರಕಾರದಲ್ಲಿ ಅಧಿಕಾರ ವಹಿಸಬಹುದು. ಕೇಂದ್ರ ಅಸೆಂಬ್ಲಿಯಲ್ಲಿಯೇ ಇಟ್ಟು ಕೊಳ್ಳುವ ಭಾಗ್ಯ ಕನ್ನಡಿಗರದ್ದಾದರೆ, ಕನ್ನಡಿಗರಾದ ಇವರು ನಮ್ಮ ಸೇವೆ ಮಾಡಿಯೇ ಮಾಡುವರು.

ಶ್ರೀ ಬಿ. ಎನ್ ಮುನವಳ್ಳಿಯವರು.

ದಕ್ಷಿಣ ಭಾರತದ ಸಂಸ್ಥಾನದ ಪ್ರತಿನಿಧಿಗಳಿವರು. ಸಭೆಯಲ್ಲಿ ಇವರ ಪ್ರತಿಭೆ ಅಷ್ಟಾಗಿ ಕಾಣದಿದ್ದರೂ, ಆಗಾಗ್ಗೆ ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ. ಇವರು ಪಾರ್ಲಿಮೆಂಟಿಗೆ ತೀರ ಹೊಸಬರು. ಇನ್ನೂ ಪಳಗಬೇಕು. ಕರ್ನಾಟಕದ ಏಕೀಕರಣ ವಾದಿಗಳು. ಅಸೆಂಬ್ಲಿ ಸದಸ್ಯರಾಗಿ ಮಾಡಿರುವ ಕಾನ್‌ಸ್ಟಿಟ್ಯೂಶನ್ ಹೌಸಿನಲ್ಲಿ ಇವರ ಬಿಡಾರ. ಇವರಿಗೆ ಬರುವದು ಎರಡೇ ಭಾಷೆ: ಕನ್ನಡ, ಇಂಗ್ಲೀಷು. ಮರಾಠಿ ಬರೇ ಮಾತನಾಡುತ್ತಾರೆ.

ಶ್ರೀ ಟಿ. ಚಿನ್ನಯ್ಯನವರು.

ಇವರು ಮೈಸೂರಿನ ಹರಿಜನ ಪ್ರತಿನಿಧಿ. ರಾಜ್ಯಾಂಗ ರಚನಾ ಸಭೆಯಲ್ಲಿ ಕನ್ನಡದಲ್ಲಿ ಮಾತನಾಡಿ ಒಂದು ವಿಶೇಷ ವಾತಾವರಣವನ್ನೇ ಕಲ್ಪಿಸಿದ್ದರು. ಹಾಗೆ ಮಾತನಾಡಲು ಅಧ್ಯಕ್ಷ ಪ್ರಸಾದರು ಆಪ್ಪಣೆಯಿತ್ತಿದ್ದರು. ಇವರು ಮಾತನಾಡಿದ್ದು ಅದೊಂದೇ ಸಲ. ಶ್ರೀ. ಚಿನ್ನಯ್ಯನವರು ಒಂದು ಸಲವೂ ಸಭೆಯನ್ನು ತಪ್ಪಿಸುವುದಿಲ್ಲ. ಆದರೆ ಇವರಿರುವುದೇ ಉಳಿದವರಿಗೆ ಗೊತ್ತಾಗುವುದಿಲ್ಲ. ಇವರನ್ನು ಯಾವಾಗ ಬೇಕಾದರೂ ಲಾಬಿಯಲ್ಲಿ ನೋಡಬಹುದು. ಇವರೂ ಕಾನ್‌ಸ್ಟಿಟ್ಯೂಶನ್ ಹೌಸಿನಲ್ಲಿದ್ದಾರೆ.

ಶ್ರೀ. ಸಿದ್ಧವೀರಪ್ಪನವರು.

ಮೈಸೂರಿನಿಂದ ಚುನಾಯಿತರಾಗಿ ಬಂದಿದ್ದಾರೆ. ಇಲ್ಲಿಗೆ ಬಂದ ಮೇಲೆ ಇವರು ಕಾಂಗ್ರೆಸಿಗೆ ಸೇರಿದರು. ಹೋದ ಸಲ ಇವರು ಪಾರ್ಲಿಮೆಂಟಿನಲ್ಲಿ ಹಿಂದೂ ಕೋಡಿನ ಮೇಲೆ ತುಂಬಾ ಚೆನ್ನಾಗಿ ಮಾತನಾಡಿದ್ದರು ಅದನ್ನು ಬಿಟ್ಟು ಇವರು ಮುಂದೆ ಯಾವಾಗಲೂ ಮಾತನಾಡಿದ್ದು ಹೆಚ್ಚಿಲ್ಲ. ತುಂಬಾ ಸಾಧುಗಳು. ಯಾವಾಗಲೂ ನಗುತ್ತಿರುತ್ತಾರೆ. ಶ್ರೀ. ಚೆನ್ನಯ್ಯನವರ ಸಹಪಾಠಿಗಳು. ಇವರೂ ಅವರ ಜೊತೆಯಲ್ಲಿಯೇ ಇದ್ದಾರೆ.

ಶ್ರೀ. ಕೊಡಗಿನ ಪೂಣಚ್ಚರು.

ಕನ್ನಡಿಗರಾಗಿ ರಾಜ್ಯಾಂಗರಚನಾ ಸಭೆಗೆ ಬಂದವರಲ್ಲಿ ಶ್ರೀ. ಪೂಣಚ್ಚರು ಮೊದಲಿಗರು. ಕೊಡಗು ಮೈಸೂರಿಗಾಗಲಿ,

ಸರಕಾರಮಾನ್ಯ ಔದ್ಯೋಗಿಕ ಶಿಕ್ಷಣ ಸಂಸ್ಥೆ

ಕರ್ನಾಟಕ

ಹೊಲಿಗೆಯ ವಿದ್ಯಾಲಯ, ಧಾರವಾಡ

ತುಸು ಅವಧಿಯ ವಿವಿಧ ವರ್ಗಗಳು. ಲಂಡನ್, ನ್ಯೂಯಾರ್ಕ್‌ಗಳ ಹೊಲಿಗೆಯ ಶಿಕ್ಷಣ ಸಂಸ್ಥೆಗಳ ನೇರವಾದ ಸಂಬಂಧವನ್ನಿಟ್ಟುಕೊಂಡ ಈ ವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವದು ಒಂದು ಹೆಮ್ಮೆ. ಮಹಿಳೆಯರಿಗಾಗಿ ಕೈಕಸೂತಿ, ಯಂತ್ರದ ಕಸೂತಿಗಳನ್ನು ಅತ್ಯಾಧುನಿಕ ಸಾಧನಗಳ ಸಹಾಯದಿಂದ ಕಲಿಸುವ ಏರ್ಪಾಡು ಇದೆ. ಶಿಕ್ಷಕರಾಗ ಬಯಸುವವರಿಗೆ ಶಿಕ್ಷಕಕೋರ್ಸು ಇದೇ ವರ್ಷದಿಂದ ಪ್ರಾರಂಭಿಸಿದೆ. ವಿಶೇಷ ವಿವರಗಳಗಳಿಗೆ ಎರಡಾಣೆ ಅಂಚೆ ಟಿಕೀಟು ಇಟ್ಟು ಇಂದೇ ಬರೆಯಿರಿ, ಇಲ್ಲವೆ ಪ್ರತ್ಯಕ್ಷ ಭೆಟ್ಟಿಯಾಗಿರಿ.

ಹೊಲಿಗೆಯ ವಿಷಯದ ಬೇರೆ ಬೇರೆ ಭಾಷೆಗಳ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ. ಇದೇ ವಿದ್ಯಾಲಯದ ಪ್ರಿನ್ಸಿಪಾಲರಿಂದ ಬರೆಯಲ್ಪಟ್ಟ 'ಸೂಚಿಶಿಲ್ಪಕಲೆ' ಎಂಬ ಪುಸ್ತಕ, ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾದದ್ದು ಇಲ್ಲಿಯೇ ದೊರೆಯುತ್ತದೆ.

ಬಹುಮಾನ ೫೦೦ ರೂ.
— ಅದ್ಭುತ ಸಂಶೋಧನ —
ಮಾಯಾ ಉಂಗುರ

ಈ ಉಂಗುರವನ್ನು ಮೆಸ್ಮೆರಿಜಮ್ ಹಾಗು ಮಂತ್ರಶಕ್ತಿಯಿಂದ ತಯಾರಿಸಲಾಗಿದ್ದು ಇದರ ಮಂತ್ರಶಕ್ತಿ ಅಪಾರವಾಗಿದೆ. ಈ ಉಂಗುರವನ್ನು ಧರಿಸುವವರು ಇಚ್ಛಿಸಿದ ಯಾವುದೇ ಅಸಾಧ್ಯ ಕಾರ್ಯವು ಸುಲಭವಾಗಿ ಸಾಧಿಸುವದು. ಈ ಉಂಗುರವು ನಿಮ್ಮ ಬೆರಳಿನಲ್ಲಿದ್ದರೆ ನಿಮಗೆ ಯಾವ ಸಂಕಟವೂ ಕಷ್ಟವೂ ಒದಗಿ ಬರದು. ಕೆಟ್ಟ ನಕ್ಷತ್ರಗಳು ನಿಮ್ಮನ್ನು ಪೀಡಿಸಲಾರವು. ಈ ಉಂಗುರ ಧಾರಿಗಳು ಎಂಥ ಗರ್ವಿಷ್ಠ ಹಾಗು ತಲೆಬಾಗದ ವ್ಯಕ್ತಿಯ ಮೇಲೂ (ಆ ವ್ಯಕ್ತಿ ಗಂಡಿರಲಿ, ಹೆಣ್ಣಿರಲಿ) ಅಧಿಕಾರವನ್ನು ನಡಸಬಹುದು. ಇವರ ಮೂಲಕ ನೀವು ಪ್ರೇಮದಲ್ಲಿ, ಕೋರ್ಟು ವ್ಯವಹಾರಗಳಲ್ಲಿ, ನೌಕರಿಯಲ್ಲಿ ಗೆಲವನ್ನು ಪಡೆಯುವದಲ್ಲದೆ ಹೆಣವನ್ನು ಗಳಿಸುವಿರಿ. ನಿಮಗೆ ಈ ಉಂಗುರ ಅಂಗರಕ್ಷಕನಂತೆ ಜೊಬಲವಾಗಿರುವದು. ಒಮ್ಮೆ ಇದನ್ನು ತರಿಸಿ. ಮೊದಲನೆ ರಾತ್ರಿಯೇ ಇದರ ಚಮತ್ಕಾರ ನಿಮ್ಮ ಅನುಭವಕ್ಕೆ ಬಂದೀತು.

ಉಂಗುರ ೧ ಕ್ಕೆ .... ೨—೦—೦
೩ ಉಂಗುರಗಳಿಗೆ .... ೫—೦—೦

ಪ್ಯಾಕಿಂಗು ಪೋಷ್ಟು ಖರ್ಚು ಬೇರೆ.

MAHAKALI ASHRAM
NO 247. KANPUR.

ಕರ್ನಾಟಕಕ್ಕಾಗಲಿ ಸೇರಬೇಕೆನ್ನುವ ಪಂಥದವರಿವರು. ಅಸೆಂಬ್ಲಿಯಲ್ಲಿ ನಾಲ್ವಾರು ಸಲ ಪುಟ್ಟದಾದರೂ ಸುಂದರವಾಗಿ ಮಾತನಾಡಿ, ಕೊಡಗಿನ ಪ್ರಾವಿನ್ಯವನ್ನು ಸಭಿಕರ ನೆನಪಿಗೆ ತಂದಿದ್ದಾರೆ. ಇನ್ನೂ ತರುಣರು. ಬುದ್ಧಿವಂತರು. ಹಸನ್ಮುಖ ಬಳಕೆ ಜಾಸ್ತಿ. ಕನ್ನಡ ಸಮಾರಂಭಕ್ಕೆಲ್ಲ ಹಾಜರ್ ಇರುತ್ತಾರೆ. ಏಕೀಕರಣದ ಭಕ್ತರು.

ಶ್ರೀ. ಗುರುವಾರೆಡ್ಡಿಯವರು.

ಇವರು ಮೈಸೂರು ಕಾಂಗ್ರೆಸ್ಸಿಗರಲ್ಲದಿದ್ದರೂ, ಅಖಿಲ ಭಾರತ ಕಾಂಗ್ರೆಸ್ಸಿನ ಸದಸ್ಯರು. ಹಾಗೆಂತಲೆ ಇಲ್ಲಿಯ ಕಾಂಗ್ರೆಸ್ ಪಾರ್ಟಿಯ ಸದಸ್ಯರು. ಮೈಸೂರಿನಿಂದ ಕಾಂಗ್ರೆಸ್ಸೇತರರಾಗಿ ಚುನಾಯಿತರಾಗಿ ಬಂದಿದ್ದಾರೆ. ಇವರ ಮಾತು ಕಡಿಮೆ ಆಡುತ್ತಾರೆ. ಆಸಾಮಿ ತುಂಬಾ ತೂಕ. ಏಕೀಕರಣ ವಿರೋಧಿಗಳು ಎನ್ನುವುದಕ್ಕಿಂತ 'ಮೈಸೂರಿಗೆ ಉಳಿದವರೆಲ್ಲ ಬಂದು ಸೇರಲಿ' ಎನ್ನುತ್ತಾರೆ. ಕೆಲವು ಪ್ರಗತಿ ವಿರೋಧ ಅಭಿಪ್ರಾಯಗಳು ಇವರಲ್ಲಿವೆ. ಅವನ್ನು ಪ್ರಾಮಾಣಿಕತೆಯಿಂದ ಪ್ರತಿಪಾದಿಸುತ್ತಾರೆ. ಇವರೂ ಶ್ರೀ: ಪೂರ್ಣಚ್ಚರ ಜೊತೆಗೆ ಕಾನ್‌ಸ್ಟಿಟ್ಯೂಶನ್ ಹೌಸಿನಲ್ಲಿ ಇದ್ದಾರೆ. ಅಸೆಂಬ್ಲಿಯಲ್ಲಿ ಹೆಚ್ಚಾಗಿ ಭಾಗ ತೆಗೆದುಕೊಂಡಿಲ್ಲ.

ಶ್ರೀ. ಕೆ. ಹನುಮಂತಯ್ಯನವರು.

ಶ್ರೀ. ಹನುಮಂತಯ್ಯನವರು ರಾಜ್ಯಾಂಗ ಸಭೆಯಲ್ಲೂ ಪಾರ್ಲಿಮೆಂಟನಲ್ಲೂ ಸಾಕಷ್ಟು ಕೂಗಾಡಿದ್ದಾರೆ. ಇವರ ಭಾಷಣಗಳು ಇಲ್ಲಿಯ ರಾಜಕೀಯ ವರ್ಗದಲ್ಲಿ ಏನೂ ಪ್ರಭಾವ ಬೀರಿದಂತೆ ಕಾಣುವುದಿಲ್ಲ. ಇವರ ಭಾಷಣಗಳೆಲ್ಲೆಲ್ಲ ಬರೀ ಟೀಕೆಗಳಿರುತ್ತಿದ್ದುವೇ ವಿನಾ ರಚನಾತ್ಮಕ ಸಲಹೆಗಳೊಂದೂ ಇರುತ್ತಿರಲಿಲ್ಲ. ಒಬ್ಬ ಪ್ರಮುಖ ಸದಸ್ಯರು ಇವರನ್ನು ಸಂಬೋಧಿಸಿ 'Over-enthusiatic and overambitious' ಎಂದು ಕರೆದದ್ದುಂಟು. ಶ್ರೀ. ಹನುಮಂತಯ್ಯನವರು ಇಲ್ಲಿಗೆ ಬಂದಮೇಲೆ, ಅನೇಕ ಕಾರಸ್ಥಾನಗಳನ್ನು ನಡೆಯಿಸಿದರು. ಕೇಂದ್ರ ಮಂತ್ರಿಮಂಡಲದಲ್ಲಿ ಸಂಸ್ಥಾನದ ಪ್ರತಿನಿಧಿಗಳೊಬ್ಬರನ್ನು ಸೇರಿಸಿಕೊಳ್ಳಬೇಕೆಂದು ಸರದಾರರ ಹತ್ತರ ನಿಯೋಗ ಹೋಗಿದ್ದರು. ಕರ್ನಾಟಕದವರೊಬ್ಬರು ಡೆಪ್ಯುಟಿ ಸ್ಪೀಕರ್ ಆಗಬೇಕೆಂದು ಕರ್ನಾಟಕದ ಸದಸ್ಯರನ್ನೆಲ್ಲ ಸೇರಿಸಿ ಪ್ರಯತ್ನಿಸಿದರು. ಭಾರತದ ಹೊರಗೆ ಹೋಗುವ ನಿಯೋಗಗಳಲ್ಲಿ ಸಂಸ್ಥಾನೀ ಪ್ರತಿನಿಧಿಗಳಿರಬೇಕೆಂದು ಪ್ರಯತ್ನಿಸಿದರು. ಕೊನೆಗೆ ಇದೊಂದೇ ಸಾಧಿತವಾದದ್ದು. ಅವರೇ ಸ್ವೀಡನ್ನಿಗೆ ಇಲ್ಲಿನೆಯ ಇಂಟರ್ ಪಾರ್ಲಿಮೆಂಟರಿ ಯುನಿಯನ್ ಸಭೆಗೆ ಹೋಗಿದ್ದರು.

ಶ್ರೀ. ಹನುಮಂತಯ್ಯನವರು ಮೈಸೂರ ಮಂತ್ರಿಮಂಡಲಕ್ಕೆ ಸೇರುವ ವಿಚಾರದಲ್ಲಿ, ಒಂದು ದೊಡ್ಡ ಹಗರಣವೇ ನಡೆಯಿತು. ಎಲ್ಲರೂ 'ಏನು 'ಹನುಮಂತಯ್ಯನವರೇ ನೀವೆಂದು ಮೈಸೂರಿನ ಮುಖ್ಯ ಮಂತ್ರಿಗಳಾಗುವಿರಿ? ಎಂದು ಕೇಳುವವರೆ. ದುರದೃಷ್ಟವಶಾತ್ ಶ್ರೀ. ಹನುಮಂತಯ್ಯನವರು! ಮೈಸೂರ ಕಾಂಗ್ರೆಸ್ ಪಕ್ಷದ ಕಾಂಗ್ರೆಸ್ ನಾಯಕ ಪಟ್ಟದಿಂದ ಉಪನಾಯಕ ಪಟ್ಟಕ್ಕೆ ಇಳಿದುಬಿಟ್ಟರು. ಮೈಸೂರಿನ ಒಂದು ಹಳ್ಳಿಯಲ್ಲಿ ಭಾಷಣ ಮಾಡುತ್ತಾ, ಪಂ. ನೆಹರೂ ಸರದಾರ ಪಟೇಲರನ್ನು ಅನ್ಯಾಯವಾಗಿ ತೆಗಳಿದ್ದು ಇಲ್ಲಿಸ್ವಲ್ಪ ಅಸಮಾಧಾನವನ್ನುಂಟುಮಾಡಿತ್ತು. ಮೊನ್ನೆ ಶ್ರೀ.ಕೆ.ಎಂ. ಮುನ್‌ಷಿಯವರು ಶ್ರೀ. ಹನುಮಂತಯ್ಯನವರನ್ನುದ್ದೇಶಿಸಿ 'Mr. Hanumanthiah, when are you coming to power in the centre?' ಎಂದು ಕೇಳಿದಾಗ ಶ್ರೀ. ಹನುಮಂತಯ್ಯನವರು Non-plus ಆದರು. ಇಂಜನಿಯರಿಂಗ್ ಕಾಲೇಜ ಸಂಘದಿಂದ ಭಾಷಣ ಮಾಡುತ್ತಾ 'ಮೈಸೂರಿನ ಮಂತ್ರಿಪದವಿ ನನ್ನ ಜೇಬಿನಲ್ಲಿಯೇ ಇದೆ. ಕೇಂದ್ರದ ಮಂತ್ರಿಪದವಿಯೂ ಬೇಕಾದರೆ ಸಿಕ್ಕುತ್ತದೆ' ಎಂದು ಹೇಳಿದ ಮಾತುಗಳು ಹೇಗೋ ತೂರಿಕೊಂಡು ಕೇಂದ್ರದವರ ಕಿವಿಗೂ ಮುಟ್ಟಿಬಿಟ್ಟಿತ್ತು.

ಶ್ರೀ. ಹನುವಂತಯ್ಯನವರು ೧೯ನೆಯ ಕ್ವೀನ್ಸ್ ಬಂಗಲೆಯಲ್ಲಿದ್ದಾರೆ. ಇವರ ಮನೆಯಲ್ಲಿ ಒಂದು ಸಿಖ್ಖರ ಸಂಸಾರವಿದೆ. ಇವರಿಗೆ ಕನ್ನಡ-ಇಂಗ್ಲೀಷ್ ಬರುತ್ತದೆ. ಹಿಂದಿ ಸ್ವಲ್ಪ. ತೆಳುವಾದ ದೇಹ. ನೀಳವಾದ ಮುಖ. ತುಂಬು ಮೈಗೊಂಡಿದ್ದಾರೆ ದೆಹಲಿಗೆ ಬಂದಮೇಲೆ. ಸ್ನೇಹಿತರನ್ನು ಚೆನ್ನಾಗಿ ಉಪಚರಿಸುತ್ತಾರೆ.

ಶ್ರೀ. ಹನುಮಂತಯ್ಯನವರು ತುಂಬಾ ಭಾವನಾಪರವಶರು. ಒಂದೊಂದು ಸಾರಿ ತಮ್ಮನ್ನು ತಾವೇ ಮರೆತು ಬಿಡುತ್ತಾರೆ. Free lance ರಾಜಕಾರಣಿಯಾಗಿ, ರಚನಾತ್ಮಕ ಸಲಹೆಗಾರರಾಗಿ ಇರುವುದರಿಂದ ದೇಶಕ್ಕೆ ಕ್ಷೇಮ. ಅದನ್ನವರು ಜಾಗ್ರತೆ ತಿಳಿದುಕೊಂಡಷ್ಟು ಕ್ಷೇಮ.

ಶ್ರೀ. ಹನುಮಂತಯ್ಯನವರು ಏಕೀಕರಣ ವಿರೋಧಿಗಳು ಎಂದರೆ ಕೋಪ ಬರುತ್ತದೆ. ಆದರೆ ಅವರು ನಿಜವಾಗಿಯೂ ವಿರೋಧಿಗಳೇ. ಒಂದು ಸಲವೂ ಇತ್ತೀಚೆಗೆ ಏಕೀಕರಣವಾಗಲೇಬೇಕೆಂದು ಹೇಳಿಲ್ಲ. ಹೇಳುವುದೂ ಇಲ್ಲ. ಅವರಿಗೆ ಸದ್ಯಕ್ಕೆ ಬೇಕಾದದ್ದು ಮೈಸೂರ ಮಂತ್ರಿಮಂಡಲದ ಪುನರ್ರಚನೆ. ಶ್ರೀ. ರೆಡ್ಡಿ ಮಂತ್ರಿಮಂಡಲ ಉರುಳಿಸಲು ಏಕೀಕರಣ ವಾದಿಗಳಾಗಿ ಕೆಲಸಮಾಡಿದರೂ ಮಾಡಿಯಾರು. ಆಮೇಲೆ? ಇಲ್ಲಿಯ ಹಿರಿಯ ಕಾಂಗ್ರೆಸ್ ನಾಯಕರು ಹೇಳಿದ ಹಾಗೆ ಶ್ರೀ. ಹನುಮಂತಯ್ಯನವರು ಮೈಸೂರಿನ Problem Child.

ಶ್ರೀ ಟಿ. ಸಿದ್ಧಲಿಂಗಯ್ಯನವರು.

ಮೈಸೂರ ಕಾಂಗ್ರೆಸ್ ಅಧ್ಯಕ್ಷರಿರುವರು. ಮೈಸೂರಿನಲ್ಲಿ ಕಾಂಗ್ರೆಸ್ ಕೆಲಸಗಾರರು ಇವರನ್ನು 'ಹೀಗೆ ಮಾಡಿ, ಹಾಗೆ ಮಾಡಿ' ಎಂದು ಮನಸ್ಸನ್ನು ಅಶಾಂತಪಡಿಸಿದ ಕೂಡಲೆ, ಇವರು ದೆಹಲಿಗೆ' ಅಸೆಂಬ್ಲಿಗೆ ಶಾಂತಿ ಪಡೆಯಲು ಓಡಿಬಿಡುತ್ತಾರೆ. ಪಾಪ! ಇಲ್ಲಿ ಬಂದರೂ ಇವರಿಗೆ ಸಿಕ್ಕುವುದು ಅಶಾಂತಿಯೇ. ಇಲ್ಲಿಯೂ ಕೇಳುವವರೇ ' ಏಕೀಕರಣ ಏನು ಮಾಡಿದಿರಿ?' ಎಂದು.

ಶ್ರೀ. ಸಿದ್ಧಲಿಂಗಯ್ಯನವರ ಇತ್ತೀಚಿನ ವರ್ತನೆ ಮೈಸೂರಿನ ಜನರನ್ನು ನಿರಾಶೆಗೊಳಿಸಿದೆ. ಇವರ ಪ್ರಾಮಾಣಿಕತನ ಮತ್ತು ವರ್ಚಸ್ಸನ್ನು ಕಾಂಗ್ರೆಸ ಸಂಸ್ಥೆಯ ಕಡೆ ಉಪಯೋಗಿಸದೆ, ಏಕೀಕರಣದ ಜಾಗ್ರತೆ ಆಗುವುದರ ಕಡೆಗೆ ಉಪಯೋಗಿಸದೆ, ಕೇವಲ ಮಂತ್ರಿಮಂಡಲ ಪುನರ್ರಚನೆಯ ವಿಚಾರದಲ್ಲಿ ಶಕ್ತಿಯನ್ನು ವ್ಯಯಮಾಡುತ್ತಿರುವುದು ಇವರ ಬಗ್ಗೆಯೂ ಜನರಲ್ಲಿ ಸಂದೇಹವನ್ನು ಉಂಟುಮಾಡಿದೆ. ಇತ್ತೀಚೆಗೆ ಇವರು ಶ್ರೀ. ಹನುಮಂತಯ್ಯನವರ ಜೊತೆಗೆ ಓಡಾಡುತ್ತಿರುವದು ಆ ಸಂಶಯವನ್ನು ಬಲಗೊಳಿಸಿದೆ.

ಶ್ರೀ. ಸಿದ್ಧಲಿಂಗಯ್ಯನವರು ಅಸೆಂಬ್ಲಿಯಲ್ಲಾಗಲಿ, ಪಾರ್ಲಿಮೆಂಟಿನಲ್ಲಾಗಲಿ ಭಾಗ ತೆಗೆದುಕೊಂಡ ಹಾಗೆ ಕಂಡುಬರುವುದಿಲ್ಲ. ಇವರು ಅನೇಕ ಸಲ ಲಾಬಿಯಲ್ಲಿರುವುದೇ ಹೆಚ್ಚು.

ಶ್ರೀ. ಸಿದ್ಧಲಿಂಗಯ್ಯನವರು ತುಂಬಾ ಒಳ್ಳೆಯವರು. ಸಂಘಟಕರು. ಇವರಿಗೆ ಫಿತೂರಿ ರಾಜಕಾರಣ ಸಲ್ಲದು. ಅಸತ್ಯವಂತೂ ಇವರ ಕಿವಿಗೇ ಬೀಳಕೂಡದು. ಇತ್ತೀಚೆಗಂತೂ ಇವರು ತಪಸ್ವಿ ಆಗುತ್ತಿದ್ದಾರೆ. ಇವರು ಮೈಸೂರ ರಾಜಕೀಯ ಬಿಟ್ಟು ರಚನಾತ್ಮಕ ಕೆಲಸಗಳಲ್ಲಿ ನಿರತರಾಗುವುದು ಇವರ ಹಿಂದಿನ ಕೆಲಸಗಳಿಗೆಲ್ಲ ಶೋಭೆಯನ್ನುಂಟು ಮಾಡುವುದು.

ಶ್ರೀ. ಸಿದ್ಧಲಿಂಗಯ್ಯನವರು ಇಲ್ಲಿಗಂ- ವಿಂಡ್ಸರ್ ಪ್ಲೇಸ್‌ನಲ್ಲಿ- ಇರುತ್ತಾರೆ. ಹಸನ್ಮುಖಿ, ದಯಾಳು.

ಶ್ರೀ. ಎಜ್. ವ್ಹಿ. ಕಾಮತ ಎಂಬ ಮಂಗಳೂರಿನವರೊಬ್ಬರು ಮಧ್ಯಪ್ರಾಂತದಿಂದ ಆರಿಸಿ ಬಂದಿದ್ದಾರೆ. ಇವರು ಆಯ್.ಸಿ.ಎಸ್. ಅಧಿಕಾರಿಗಳಾಗಿದ್ದು, ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿ, ರಾಜೀನಾಮೆ ಕೊಟ್ಟು ನೇತಾಜಿಯವರ ಮುನ್ನಡೆ ಪಕ್ಷದ ಕಾರ್ಯದರ್ಶಿಯಾಗಿದ್ದರು. ಕನ್ನಡ ಚೆನ್ನಾಗಿ ಮಾತನಾಡುತ್ತಾರೆ. ಪಾರ್ಲಿಮೆಂಟಿನಲ್ಲಿ ಇವರು ಕೇಳಿದ ಪ್ರಶ್ನೆಗಳೇ ಇಲ್ಲ. ರಾಜ್ಯಾಂಗ ರಚನಾ ಸಭೆಯಲ್ಲಿ ಇವರನ್ನು ' ತಿದ್ದುಪಡಿ ಕಾಮತ ' Amendment Kamat ' ಎಂದು ಕರೆಯುತ್ತಾರೆ.

ಕನ್ನಡ ಮಾತನಾಡಲು ಬೊಂಬಾಯಿನ ಮುಖ್ಯಮಂತ್ರಿ ಬಿ. ಜಿ. ಖೇರ, ಆಂಧ್ರದ ಶ್ರೀ. ಕಲ್ಲೂರ ಸುಬ್ಬಾರಾಯರು, ಡೆಪ್ಯೂಟಿ ಸ್ಪೀಕರ್ ಶ್ರೀ. ಅನಂತಶಯನ್ ಅಯ್ಯಂಗಾರ ಇವರಿಗೆ ಬರುತ್ತದೆ. ಆದರೆ ಇವರು ಕರ್ನಾಟಕದ ಪ್ರತಿನಿಧಿಗಳಾಗಿ ಅಲ್ಲಿಗೆ ಹೋಗಲಿಲ್ಲ. ವಿಖ್ಯಾತಿ ಪಡೆದ ಕನ್ನಡಿಗರು ಇನ್ನೊಬ್ಬರಿದ್ದಾರೆ. ಅವರೇ ಭಾರತದ U. N. O. ಪ್ರತಿನಿಧಿ ಶ್ರೀ ಬಿ. ಶಿವರಾಯರು.

' ಮಹಾತ್ಮಾ ಗಾಂಧೀಕೆ ಜೈ ' ' ಭಾರತ ಮಾತಾಕಿ ಜೈ ' ಎಂಬ ಕೂಗಿಗೆ ಕನ್ನಡಮ್ಮನ ಕೂಗು ಸೇರಿ, ಕರತಾಡನಗಳ ಮಧ್ಯೆ ಭಾರತ ರಾಜ್ಯಾಂಗವು ಜಾರಿಗೆ ಬರುವುದೇ ನಮ್ಮೆಲ್ಲರ ಹೆಮ್ಮೆ.

ಜಯ ಕರ್ನಾಟಕ

ಮಲೇರಿಯಾ
ಇನ್ ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸೆನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ನವಯುಗಾರಂಭ

' ಅಂಬಿಕಾತನಯದತ್ತ '

೧

ಸಂಕ್ರಾಂತಿಗೆ ಮರ ಬಿರಿಯೆ,
ಪಡುವಲ ಗಾಳಿಯು ಹರಿಯೆ,
ನನೆದೋರಲು ಮೈಮುರಿಯೆ
ಶಿಶಿರದ ಮಾಗಿ—
ರಥವೇರಿದನಿನ್ನು ರವಿ,
ಕಣ್ತೆರೆಸಿದ ಯುಗದ ಕವಿ,
ಬೇವಿನಲ್ಲಿ ಮೂಡಿತು ಸವಿ
ಅನ್ಯತವು ತಾಗಿ.

೨

ತಕ್ಕಡಿಗೋ ಜೇಡ ಕಾಣೆ
ತೂಗುತಿರಲಿ ಸತ್ಯವಾಣಿ
ಕಣ್ಮುಚ್ಚಿಯು ನ್ಯಾಯರಾಣಿ
ಭಾಗ್ಯವ ಕೊಡಲಿ ;
ಹೃದಯ ಕಮಲದೇಕಚಕ್ರ
ಮುರಿಯಲಿ ವಾಸನೆಯ ವಕ್ರ,
ಉಷೆಯ ಹಣೆಗೆ ಬೆಳ್ಳಿ ಶುಕ್ರ
ತಿಲಕವನಿಡಲಿ

೩

ಭಾರತಮಣ್ಣೆನೆ ಬಂತು—
' ನಾನು ಮುಂತು ನೀನು ಮುಂತು '
ಕತಲು ಮೂರು ಮೊತವವಿಂತು
ಊನವಿವೆ ಗಾಳಿ.
ಉತ್ತರೋತ್ತರೋತ್ತರೊಂದು
ಕುಡಿ ಮೂಡಿವೆ ಚಿಗುರು ಬಂದು
ತುತ್ತುತ್ತೂ ತುದಿಗೆಂದೂ
ಮುಗುಳ್ನಗೆ ತಾಳಿ.

೪

ಜ್ಞಾನದಿ ಮತಮತವು ಕೂಡಿ
ರಸವು ಭಾವದಲ್ಲಿ ಮೂಡಿ
ದೈವ-ಪೌರುಷಗಳ ಜೋಡಿ
ತಳಹದಿ ಕೃತಿಗೆ—
ಹಳ್ಳಿಹಳ್ಳಿ ಸಕಲ ಭೋಜ್ಯ
ಭಾರತವಿದು ಅವಿಭಾಜ್ಯ
ಜಗತ್ತಿಲ್ಲ ಏಕರಾಜ್ಯ
ಸಾರಲಿ ಶ್ರುತಿಗೆ.

೫

ಅವರವರಿಗೆ ಅವರ ಹಾದಿ
ಪ್ರತಿಕಿರಣಕು ರವಿಯೆ ಆದಿ
ಸಪ್ತಸ್ವರಕು ಶ್ರುತಿ ಸನಾದಿ
ಸಂಗತಿಗೀತ
ಸೌಜನ್ಯದ ಶಕ್ತಿ ಬೆಳೆದು
ಸತ್ಯದಲ್ಲಿ ಪ್ರೀತಿ ಮೊಳೆದು
ಆನಂದವೆ ರೂಪ ತಳೆದು
ಅಗಲಿ ಸುಸ್ಮಿತ.

೬

ತಾಯಿ ಸಿಂಹವಾಹಿನೀ
ಗಜಾಂತಲಕ್ಷ್ಮಿ ದಾಯಿನೀ
ಅತುಲೆ ಸರ್ವಸಾಹಿನೀ
ವಿಶ್ವಮೋಹಿನೀ
ಅರಳಿಸು ಹೃದಯಾರವಿಂದ
ಸಾವಿರದೀ ಏಕಬಂಧ
ಕುಣಿಯಲಿ ಸ್ವಚ್ಛಂದದಿಂದ
ನವಯುಗದಂದ.

೭

ಹೃದಯ ಸಮತೆ ಮೊದಲ ಪಾಠ
ಬಾಂಧವ್ಯವೆ ಜೀವದಾಟ
ಮೂರು ಮುಖಕು ಒಂದೆ ಪೀಠ
ಸಿಂಹದ ಬಾರಿ.
ಅನೆಯಹೆಂಕಾರ ತುಳಿದು
ಕಾಮನ ಬಿಲ್ಲನ್ನು ಹಳೆದು
ಜಯಮಾಲೆಯ ಕರದಿ ತಳೆದು
ಬರುತಿರಲೇರಿ!

೮

ಸಂಕ್ರಾಂತಿಗೆ ಮರ ಬಿರಿಯೆ,
ಪಡುವಲ ಗಾಳಿಯು ಸರಿಯೆ,
ನನೆದೋರಲು ಮೈಮುರಿಯೆ
ಶಿಶಿರದ ಮಾಗಿ—
ರಥವೇರಿದನಿನ್ನು ರವಿ,
ಕಣ್ತೆರೆಸಿದ ಯುಗದ ಕವಿ,
ಬೇವಿನಲ್ಲು ಮೂಡಿತು ಸವಿ
ಅನ್ಯತವು ತಾಗಿ !

ಸೂರ್ಯಪಾನ

' ಅಂಬಿಕಾತನಯದತ್ತ '

ಏನಿದರ ಔನ್ನತ್ಯ, ಏನಿದರ ಔದ್ಧತ್ಯ !
ಕುಕ್ಕಿಸುವ ಕಣ್ಣುಗಳ ದಿಟ್ಟಿಸುವುದು.
ಬಾನಗಣ್ಣಿನ ಬಿಸಿಯ ಹುಸಿಯಾರದಲಿ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವುದು.
ಗಿರಿನಾರ ಕೋಡಿನಲೊ ಕೈಲಾಸ ಶಿಖರದಲೊ
ವಿಶ್ವದೀಪಕ ದೃಷ್ಟಿಮೂಡುವಂತೆ—
ದಿಂಬಿನಲಿ ಮೊಗದೋರಿ ಎಸಳನಾಯಾಳಿಸುತ
ಸಿಂಹಾವಲೋಕನದಿ ನೋಡುವಂತೆ—
ಸೂರ್ಯಪಾನವು ನೋಡು ಹೇಗೆ ನಿಂತಿಹುದು ?
ಎನುವಂತೆ ದಿವ್ಯತೆಯ ದೀಕ್ಷೆಯಿಂತಹುದು.
ನೇರುದಂಡವು ಚಿಗಿತು ಹೂತ ಹಾಗೆ
ಹೃದಯದಾಕೃತಿಗಿದೆ ಕಣ್ಣು ಮೇಗೆ.

ಸಟೀಕಾ ಸೌಂದರ್ಯಾಖ್ಯಾನ

(ಒಂದು ಹರಟೆ)

ಶ್ರೀ. "ಅರವಿಂದ"

☆

ಹಳೆಯ ಕವಿಗಳು ಕೊಟ್ಟಿರುವ ಉಪಮೇಗಳನ್ನು ಇಂದಿನ ಹೊಸ ಕಾಲದ ಹೊಸ ಕನ್ನಡದಲ್ಲಿ ಹೇಳಲು ತೊಡಗಿದರೆ, ಇಂದಿನ ಸೌಂದರ್ಯಾರಾಧಕರಿಗೆ ರುಚಿಸಬಹುದೆ?

☆

'ಪೆಡಿಂಗ್' ಓದಿದೊಡನೆಯೇ "ಈ ಸೌಂದರ್ಯಾಖ್ಯಾನವನ್ನು ಹೇಳಿದ ಕವಿ ಯಾವನು? ಅವನು ಹುಟ್ಟಿದ ಊರು ಯಾವುದು? ಸುಮಾರು ಅವನ ಕಾಲಮಾನವು ಯಾವುದು?" ಎಂದು ಒಂದರ ಮೇಲೊಂದು— ಮೇಲೆ ಮತ್ತೂ ಒಂದು ಪ್ರಶ್ನೆ ಕೇಳಿ, ವಯವಿಟ್ಟು ನನ್ನನ್ನು ಹೌಹಾರಿಸಿ ಬಿಡಬೇಡಿ ಈ ಪ್ರಕಾರವಾಗಿ ಮಾಡಿದುದೇ ಆದರೆ, ಸೌಂದರ್ಯಾಖ್ಯಾನದಲ್ಲಿಯ ಶೃಂಗಾರ ರಸವನ್ನು ಮನದಣಿ ಉಣ್ಣುವ ಭಾಗ್ಯ ನಿಮಗೆ ಸಿಗಲಿಕ್ಕಿಲ್ಲ. ಆದುದರಿಂದ ಹಲ್ಲಿನಲ್ಲಿ ನಾಲಗೆ ಇಟ್ಟುಕೊಂಡು (ಇದೊಂದು ಪಡೆನುಡಿ. ಆದುದರಿಂದ ವಿಪರೀತಾರ್ಥ ಮಾಡಿಕೊಂಡು ಸಿಟ್ಟಿಗೇಳುವ ಕಾರಣವಿಲ್ಲ) ಕುಳಿತುಕೊಳ್ಳಿ. ಇದು ಮಹತ್ತ್ವದ ವಿಷಯವಾದುದರಿಂದ, ಏಕಾಗ್ರಚಿತ್ತರಾಗಿ ಕೇಳಿರಿ. ಈ ಆಖ್ಯಾನವನ್ನು ಹೇಳಿದವನು ಒಬ್ಬ ಕವಿ. "ಇದೇನು ಮಹಾ ಹೇಳಿಬಿಟ್ಟ? ಇದು ಎಲ್ಲರಿಗೂ ಗೊತ್ತಿದ್ದ ಮಾತಲ್ಲವೇ?" ಎಂದು ಆಡ್ಡ ಪ್ರಶ್ನೆ ಹಾಕಿ ನನ್ನನ್ನು ಮತ್ತೆ ಕೆಣಕಬೇಡಿ. 'ಮನುಷ್ಯನಲ್ಲಿ ಸಹನಗುಣ ಇರತಕ್ಕದ್ದು' ಎಂದು ಪಂಡಿತರು ಹೇಳುತ್ತಾರೆ. ನೀವೂ ಮನುಷ್ಯರಾಗುವುದರಿಂದ, ನಿಮ್ಮಲ್ಲಿಯೂ ಸಹನಗುಣವು ಅವಶ್ಯವಾಗಿ ಇರಬೇಕಾಗುವುದರಿಂದ, ಸ್ವಾಭಾವಿಕವಾಗಿ ನೀವೇನಾದರೂ ಪ್ರಶ್ನೆ ಕೇಳಿದಾಗ, ನಾನು ನಿಮಗೆ ಕೊಳಕು ಉತ್ತರ ಕೊಡುವುದರಿಂದ ನೀವು ಸಿಟ್ಟಾಗುವುದಿಲ್ಲವೆಂದು ಬಲವಾಗಿ ನಂಬಿದ್ದೇನೆ. ಇದನ್ನು ನೋಡುತ್ತಿರಲಾಗಿ. ನಾನು ಅಪರಾಧಿಯೆಂದು ನಾನೇ ಒಪ್ಪಿಕೊಂಡಂತಾಯಿತೆಂದು ನೀವು ತರ್ಕಿಸಬಹುದು. ಆದರೆ ನಾನು ಸರ್ವಥಾ ಅಪರಾಧಿಯಲ್ಲ. ಏಕೆಂದರೆ ನನಗೆ ದೊರೆತ ಸೌಂದರ್ಯಾಖ್ಯಾನದ ಪ್ರತಿಯಲ್ಲಿ, ಕವಿಯ ಹೆಸರಾವುದೂ ಕಂಡುಬರುವುದಿಲ್ಲ. ಇನ್ನು ಅವನ ವಾಸಸ್ಥಾನ? ಅದು ನಮಗೆ ಎಷ್ಟು ವಿಚಾರ ಮಾಡಿದರೂ ಹೊಳೆಯದ ಮೂಲಕ, ಈ ಪ್ರಕಾರವಾಗಿ ನಮ್ಮ ಬುದ್ಧಿಯ ಜಾಣತನದಿಂದ ಉತ್ತರ ಕೊಡುತ್ತೀನೆ. ಆದೇನೆಂದರೆ: "ಕವಿಯ ಊರು ನಿಮ್ಮೂರೇ ಆಗಿರಬಹುದು. ಆಥವಾ ನಿಮ್ಮೂರ ಬಳಿಯಲ್ಲಿಯ ಯಾವುದಾದರೂ ಒಂದು ಹಳ್ಳಿಯಾಗಿರಬಹುದು. ಇಲ್ಲವಾದರೆ ಅವನ ವಾಸಸ್ಥಾನ ನಿಮ್ಮ ಭಾಗದಲ್ಲೇ ಇದ್ದಿರಬಹುದು. ಅದೂ ಇಲ್ಲದಿದ್ದರೆ ಕವಿಯು ಕನ್ನಡಿಗನಾದ ಮೂಲಕ, ಅವನು ಕನ್ನಡ ನಾಡಿನ ಯಾವುದೋ ಒಂದು ಹಳ್ಳಿಯವನೆಂದು ನಿಸ್ಸಂದೇಹವಾಗಿ ಹೇಳಬಹುದು." ಉತ್ತರವು ಸಂದೇಹರೂಪವಾಗಿರುವುದರಿಂದ ಕ್ಷಮಿಸಬೇಕು. ಇನ್ನು ನಿಮ್ಮ ಮೂರನೆಯ ಪ್ರಶ್ನೆಯೆಂದರೆ 'ಕವಿಯು ಆಗಿಹೋದ ಕಾಲ?' ಕವಿಯ ಸುಮಧುರವಾದ ಕಾವ್ಯರತ್ನವನ್ನು ಓದಿ ತಣಿದು ಅವನ ಭಾಷಾಶೈಲಿಯನ್ನು ಕಂಡು ಹಿಡಿವ ನೀವು, ಅವನ ಕಾಲವನ್ನು ಸಹಜವಾಗಿ ಗೊತ್ತು ಹಿಡಿಯಬಹುದು.

ಸೌಂದರ್ಯಾಖ್ಯಾನವು ಪ್ರಾರಂಭವಾಗುವುದು ಒಬ್ಬ ನೈಪಥ್ಯೇಷ್ಮನ ಸ್ನಾನದ ವರ್ಣನೆಯಿಂದ. ನಮ್ಮ ಹಳೆಯ ಜನರು, ಎಂದರೆ ಈಗ ಬದುಕಿದ್ದ ನಮ್ಮ ಅಜ್ಜ-ಮುತ್ತಂದಿರು "ಈಗಿನ ಜನರು ಲಜ್ಜಾನಿಗಳಾಗುತ್ತ ನಡೆದಿದ್ದಾರೆ." ಎಂದು ಹೇಳುವುದು ನಿಜ— ಎಂಬುದು, ನನಗೆ ಈ ಸೌಂದರ್ಯಾಖ್ಯಾನವನ್ನು ಓದಿದ ಮೇಲೆ ಹೊಳೆಯಿತು. ಈಗಿನ ಜನರಿಗೆ ಸೌಂದರ್ಯವೆಂದರೇನೆಂಬುದೇ ಚೆನ್ನಾಗಿ ತಿಳಿದಿಲ್ಲ. ಈ ಸೌಂದರ್ಯಾಖ್ಯಾನವನ್ನು ಬರೆದ ಮಹಾಕವಿಯು, ತನ್ನ ಕಾವ್ಯರತ್ನದಲ್ಲಿ ಒಬ್ಬ ಅರಸುಕುಮಾರನ ಲಕ್ಷ್ಯಂಜನದ ವರ್ಣನೆಯನ್ನು ಈ ರೀತಿ ಕೊಡುತ್ತಾನೆ. ಇವನ್ನು ಓದಿ ಸುಂದರ ಪುರುಷನು ಹೇಗಿರಬೇಕೆಂಬುದನ್ನು ಮನದಲ್ಲೇ ತರ್ಕಿಸಿರಿ. ಕವಿಯ ಮೂಲ ಪದ್ಯಗಳನ್ನು ಕೊಟ್ಟರೆ ಸಾಮಾನ್ಯ ಜನಕ್ಕೆ ಏನೂ ತಿಳಿಯದೆ, ಅವರು ಮುಂದೆ ಈ ಅತ್ಯುಪಯುಕ್ತ ಮತ್ತು ಮಹತ್ತ್ವವಾದ ಲೇಖನವನ್ನು ಓದಲಿಕ್ಕಿಲ್ಲವೆಂದು, ಆ ಪದ್ಯಗಳ ಸಾರವನ್ನು ಇಲ್ಲಿ ಕೊಡಲಾಗಿದೆ:

"ಬಳಿಕ ಪೋರಿಯ ಜಿಗಲಿನಂತೆ ಹೆಗಲುಳ್ಳವನೂ, ತಾಳೆಯ ಮರದಂತೆ ಎತ್ತರವಾಗಿ ಬೆಳೆದವನೂ, ಜಾಣುದೇವನಂತೆ

ವೇಗವುಳ್ಳವನೂ ಆದ ಆ ನೃಪನು, ತತ್‌ಕ್ಷಣ ಸ್ನಾನಗೃಹವನ್ನು ಪ್ರವೇಶಿಸಿದನು."

ಇಷ್ಟರಿಂದಲೇ ಸುಂದರ ಪುರುಷನೆಂದರೆ ಹೇಗಿರಬೇಕೆಂಬುದು ಸಹಜವಾಗಿ ಹೊಳೆಯುವುದು. 'ಅವನ ಹೆಗಲುಗಳು ಹೋರಿಯ ಹೆಗಲಿನಂತೆ ಇದ್ದುವು'—ಎಂದರೆ, ಅವನು ಯಾವಾಗಲೂ ಭುಜ ಹಾರಿಸುತ್ತಿರುವಂಥವನಾಗಿರಬೇಕು. ಏಕೆಂದರೆ ಹೋರಿಗಳು ನೊಗಕ್ಕೆ ಹೆಗಲು ಕೊಡದೆ ಯಾವಾಗಲೂ ಅದನ್ನು ಚಿಮ್ಮಿ ಒಗೆಯಲು ಪ್ರಯತ್ನಿಸುತ್ತಿವೆ— ಎಂಬುದು ಎಲ್ಲರಿಗೂ ಗೊತ್ತಿರಲಿಕ್ಕೆ ಸಾಕು. ಅವನು ತಾಳೆಯ ಮರದಂತೆ ಎಂದರೆ ತಾಳೆಯ ಮರದಷ್ಟು ಎತ್ತರವಾಗಿದ್ದನಂತೆ. ಇದನ್ನು ಕೇಳಿ ಹಲವರಿಗೆ ಆಶ್ಚರ್ಯವಾಗಬಹುದು. ಈಗ ಅತಿಶಯ ಸುಂದರ ಪುರುಷರು ಇಲ್ಲದಿರುವುದರಿಂದ, ಉದಾಹರಣೆ ತೋರಿಸಲು ಬರುವುದಿಲ್ಲ. ಇನ್ನು, ಕೆಳಗೆ ನೆಲದ ಮೇಲೆ ನಿಂತು ಮಾಳಿಗೆಯ ಕುಂಬೆಯನ್ನು ಮುಟ್ಟುವಂಥ ಬಡಕಲು ಶರೀರದ ಕೆಲವು ಜನರೇನೋ ಕ್ವಚಿತ್ತಾಗಿ ಸಿಗುತ್ತಾರೆ. ಆದರೆ ಅವರನ್ನು ಅಜ್ಞಾನಿಗಳಾದ ಈಗಿನ ಜನರು ಸುಂದರ ಪುರುಷರೆಂದು ಅದರಿಸದೆ 'ಉದ್ದನ್ನ ವೀರಭದ್ರ' 'ಲಂಬೋದರ' ಮೊದಲಾದ ಬಿರುದುಗಳಿಂದ ಹಾಸ್ಯಮಾಡುತ್ತಾರೆ. ಆ ಸುಂದರ ರಾಜಪುರುಷನನ್ನು ತಾಳೆಯಮರಕ್ಕೆ ಹೋಲಿಸುವುದರಿಂದ, ಇನ್ನೂ ಒಂದು ಸಂಗತಿ ಕಂಡುಬರುತ್ತದೆ: ಕದಂಬ ವೃಕ್ಷದ ತುದಿಗೆ ಉದ್ದಾದ, ಬಿರುಸಾದ, ಹಸಿರು ಬಣ್ಣದ ಗರಿಗಳು ಸೆಟೆದು ನಿಂತಿರುತ್ತವೆ. ಅದರಂತೆ ಈ ಭೂಪಾಲಕನ ಕೂದಲುಗಳಾದರೂ ಹಸಿರುಬಣ್ಣದುವಾಗಿ, ಡಬ್ಬಣ ಗಡುತರವಾಗಿ, ಸೆಟೆದು ನಿಂತಂಥವುಗಳಾಗಿದ್ದಿರಬೇಕೆಂದು ಸಂದೇಹ ಉಂಟಾಗುತ್ತದೆ. ಈ ತರದ ಮನೋಹರವಾದ ಕೂದಲುಗಳುಳ್ಳ ಸುಂದರ ಪುರುಷರು, ಈಗ ಆಫ್ರಿಕಾಖಂಡದಲ್ಲಿಯೋ ಆಸ್ಟ್ರೇಲಿಯಾದಲ್ಲಿಯೋ 'ಕಾಡುಮನುಷ್ಯ'ರಾಗಿದ್ದಾರೆ. ಆ ಕಾಡು ಜನರ ಕೂದಲುಗಳು ನಿಜವಾಗಿಯೂ ಮನೋಹರವಾಗಿರುತ್ತವೆ. ಏಕೆಂದರೆ ಆ ಕೂದಲುಗಳು ನೋಡಲು ಅತಿಶಯ ವಿಚಿತ್ರವಾಗಿರುವುದರಿಂದ, ನಮ್ಮ ಮನಸ್ಸನ್ನು ಸಹಜವಾಗಿ ಹರಣಮಾಡಿಬಿಡುವುದೆ ಆರ್ಥಾತ್ ನಾವು ಆಶ್ಚರ್ಯಚಕಿತರಾಗಿ ಅವರ ಕೂದಲುಗಳನ್ನೇ ನೋಡತೊಡಗುತ್ತೇವೆ.

ಇನ್ನು ಆ ನರಪತಿಯ ನಡಿಗೆಯ ವಿಚಾರ: ಅವನು ತಾಳೆಯ ಮರದಂತೆ ಇದ್ದುದರಿಂದ, ತಾಳೆಯಮರದ ಚಂಡಿಗೆ (ಎಲೆಗಳಿದ್ದ ಭಾಗಕ್ಕೆ) ಅದರ ಬೊಡ್ಡೆ ಯಾವ ಪ್ರಮಾಣದಿಂದ ದೊಡ್ಡದಿರುತ್ತದೆಯೋ, ಅದೇ ಪ್ರಮಾಣದಿಂದ ಅವನ ಕಾಲುಗಳು ಅವನ ದೇಹದ ಇತರ ಭಾಗಕ್ಕಿಂತ ದೊಡ್ಡವಿರುತ್ತವೆ. ಎಲ್ಲರಿಗೂ ತಿಳಿಯುವಂತೆ ಹೇಳಬೇಕೆಂದರೆ: 'ಅವನಿಗೆ ಆಕಾಶದೆತ್ತರ ಕಾಲುಗಳಿರುತ್ತವೆ. ಆದರೆ ಉಳಿದ ದೇಹ ಈಗ ನಮಗೆ ಇದ್ದಷ್ಟೇ!' ಕಾಲುಗಳೇ ಇಷ್ಟು ದೊಡ್ಡವಿರುವುದೆಂದಮೇಲೆ, ಅವನ ಹೆಜ್ಜೆಗಳು ಎಷ್ಟು ಉತ್ತರವಿರಬಹುದೆಂಬುದನ್ನು ತರ್ಕಿಸಿರಿ. ಆದುದರಿಂದಲೇ ಕವಿಯು ಆ ರಾಜನ ವೇಗವನ್ನು ವಾಯುದೇವನ ವೇಗದೊಡನೆ ಹೋಲಿಸಿದುದು ಅತಿಶಯೋಕ್ತಿಯಾಗಲಾರದು. ಕವಿಯು ಮುಂದೆ ತನ್ನ ಕಾವ್ಯಲಹರಿಯನ್ನು ಈ ರೀತಿಯಾಗಿ ಹರಿಸುತ್ತಾನೆ:

"ಪೊಡವಿಪತಿಯೂ ಬಳಿಕ, ಸ್ನಾನಕ್ಕೆಂದು ಸಿದ್ಧವಾದ ರತ್ನಖಚಿತವಾದ ಮಣೆಯ ಮೇಲೆ ಕುಳಿತೊಡನೆಯೆ, ಹೊಂಬಣ್ಣ ಮೈಯ ನೀರೆಯೊರ್ವಳು, ಹೊನ್ನಿನ ತಂಬಿಗೆಯನ್ನೆತ್ತಿ ಅರಸನ ತಲೆಯ ಮೇಲೆ ಮುತ್ತ್ಹನಿಗಳನು ಸುರಿಸಿದಳು."

ಇಲ್ಲಿ ಕವಿಯು ಅರಸನನ್ನು ಮೋಹಿಸುವ ಒಬ್ಬ ಸುಂದರಿಯನ್ನು ಬಣ್ಣಿಸಿದ್ದಾನೆ. ಅವಳ ಮೈಬಣ್ಣ ಬಂಗಾರದಂತೆ ಹಳದಿಯಾಗಿತ್ತಂತೆ. ಬಹುತರವಾಗಿ ಅವಳಿಗೆ ಕಾಮಿಲಾರೋಗ ಬಡಿದಿರಬೇಕು. ಅಥವಾ ಅವಳನ್ನು ಆ ಅರಸನು ಚೀನಾ ದೇಶದಿಂದ ಕರೆಯಿಸಿಕೊಂಡಿದ್ದನೋ ಏನೋ! ಇದನ್ನು ಓದಿ ಅಂತರ್‌ರಾಷ್ಟ್ರೀಯ ಕೂಟ ಮಂಡಳದವರು 'ಚೀನಿಯರೇ ಜಗತ್ತಿನ ಸುಂದರರು' ಎಂದು ಜಾಹೀರ್ ಮಾಡುವರಾಗಿ ನಂಬಿದ್ದೇವೆ. ಆ ಸುಂದರ ಪೀತವರ್ಣದ ಸ್ತ್ರೀಯು, ಅರಸನ ತಲೆಯ ಮೇಲೆ ನೀರಿನ ಹನಿಗಳೋಪಾದಿಯಲ್ಲಿದ್ದ ಮುತ್ತುಗಳನ್ನು ಸುರಿಸಿದಳಂತೆ. ಇದರಿಂದ, ಆ ಕಾಲದ ಸುಂದರ ಪುರುಷರು ನಮ್ಮಂತೆ ನೀರಿನಿಂದ ಜಳಕ ಮಾಡುತ್ತಿದ್ದಿಲ್ಲವೆಂತಲೂ, ಬರೀ ತಲೆಯ ಮೇಲೆ ಮುತ್ತುಗಳನ್ನು ಸುರಿದುಕೊಳ್ಳುತ್ತಿದ್ದರೆಂತಲೂ ವಿಚಾರಮಾಡುವವರಿಗೆ ತಿಳಿದು ಬರುವುದು. 'ಕವಿಯು ತನ್ನ ಈ ಆಖ್ಯಾನದಲ್ಲಿ, ಅಭ್ಯಂಜನಕಾಲಕ್ಕೆ ಸುಗಂಧದೆಣ್ಣೆಯ ಬಗ್ಗೆ 'ಚ'ಕಾರವನ್ನೂ ತೆಗೆದಿಲ್ಲವಲ್ಲಾ!' ಎಂದು ಕೆಲವರಿಗೆ ಆಶ್ಚರ್ಯವಾಗಬಹುದು. ಆದರೆ ತಲೆ ಕೆದರಿ ನೋಡಿದಲ್ಲಿ ಹೀಗೆ ಕಂಡುಬರುತ್ತದೆ: ಆ ನೃಪತಿಯೇ ಸ್ವಯಂ ಸುಗಂಧಮಯನೇ ಆಗಿದ್ದನು. ಏಕೆಂದರೆ ಅವನ ಮುತ್ತಿನಿಂದ ಜಳಕ ಮಾಡುತ್ತಿದ್ದ ಮೂಲಕ, ಅವನ ಮೈಯಲ್ಲಿಯ ಹೊಲಸು ಹೋಗುತ್ತಿದ್ದಿಲ್ಲ. ಈ ಪ್ರಕಾರ ಮೈಯ್ಲ ಹೊಲಸು ಕೂಡಬೀಳುವುದರಿಂದ, ಒಂದು ತರದ ಸುವಾಸನೆಯು ಹುಟ್ಟುತ್ತದೆ. ಆ ಸುವಾಸನೆಗೆ ಈಗಿನವರು ಹೇಸಿಕೊಳ್ಳುತ್ತಾರೆ. ಅಜ್ಞಾನಿಗಳಿಗೆ ಅದರ ಮಹತ್ತ್ವ ಗೊತ್ತಾಗಬೇಕಾದರೂ ಹೇಗೆ?

ಕವಿಯು ನರಾಧಿಪನ ಸ್ನಾನವರ್ಣನೆಯನ್ನು ಮುಂದುವರಿಸುತ್ತಾ "ಬಳಿಕ ನೀಲಾಂಗಿಯೊರ್ವಳು ಬಂದು, ನೀಲಿ ತಂಬಿಗೆಯಿಂದ ಅರಸನಿಗೆ ಮಜ್ಜನವ ಮಾಡಿಸಿದಳು" ಎಂದು ಹೇಳುತ್ತಾನೆ. ಇಲ್ಲಿ ಒಬ್ಬ ಆಫ್ರಿಕನ್ ಸ್ತ್ರೀಯ ವರ್ಣನೆ ಬಂದಿದೆ. ಅಚ್ಚನೀಲೀ ಬಣ್ಣದ ಆ ನೀರೆಯು, ಕಬ್ಬಿಣದ ತಂಬಿಗೆಯಿಂದ ಅರಸನಿಗೆ ಜಳಕ ಮಾಡಿಸಿದಳಂತೆ. ಇದರಿಂದ ಕಾಡು ನಿಗ್ರೋ ಜನರೂ ಚೆಲ್ವಿಕೆಯಲ್ಲಿ ಅತಿಶಯ ಹೆಸರಾದವರೆಂದು ತಿಳಿದು ಬರುವುದು. ಮತ್ತೂ ಒಂದು ಸಂಗತಿಯೆಂದರೆ: 'ಕಬ್ಬಿಣವು ಕುರೂಪಿ ಧಾತುವಲ್ಲ. ಅದಕ್ಕೂ ಒಂದು ಚೆಲ್ವಿಕೆ ಇದೆ. ಕಬ್ಬಿಣದ ತಂಬಿಗೆಯಿಂದ ಅರಸನಿಗೆ ಜಳಕಮಾಡಿಸಬೇಕೆಂದರೆ!'

ಕಡೆಯದಾಗಿ ಕವಿಯು ಮೂರನೆಯ ಸ್ತ್ರೀಯ ವರ್ಣನೆಯನ್ನು ರೀತಿ ಮಾಡುತ್ತಾನೆ: "ಲತಾಂಗಿಯೊರ್ವಳು ಸುವರ್ಣ-ತ್ರೆಯನೆತ್ತಿ, ಒಲವಿಂದ ನಲವಿಂದ ರಾಯನನು ಮಾಯಿಸಿದಳು." ತಾಂಗಿಯ ಕಲ್ಪನೆಯನ್ನು ಮನಸ್ಸಿನಲ್ಲಿ ತಂದುಕೊಳ್ಳಿರಿ. ಬಳ್ಳಿ ಂತೆ ಬೆರಳುಗಡುತರವಾಗಿ ಬೆಳೆದ ಬೆಡಗುಗಾರ್ತಿಯನು, ಈಗ ಮ್ಮ ದುರ್ದೈವದಿಂದ ನೋಡಲು ಸಹ ಸಿಗುವುದಿಲ್ಲ. ಕ್ಷಯ-ೋಗದಿಂದ ಬಳಲಿ ಬಡಕಲಾದ ಕೆಲವು ಸ್ತ್ರೀಯರೇನೋ ೋಡಲು ಸಿಗುವರು. ಕವಿಯು ವರ್ಣಿಸಿದ ಪ್ರಕಾರ, ಆ ತಾಂಗಿಯೂ ಒಬ್ಬ ಕ್ಷಯರೋಗಿಯಾಗಿರಬೇಕೆಂದು ಸಂದೇಹ-ಾಗುತ್ತದೆ. ಈಗಿನ ಜನರು 'ಕ್ಷಯರೋಗಿಗಳಿಗೆ ಸೌಂದರ್ಯವು ಟ್ಟುಹೋಗುತ್ತದೆ' ಎಂದು ಆಡಿಕೊಳ್ಳುತ್ತಾರೆ. ಆದರೆ ಅದು ುದ್ಧ ತಪ್ಪು. ಕ್ಷಯರೋಗಿಗಳಿಗೆ ಸೌಂದರ್ಯವು ಹೋಗದೆ, ವರು ಲತಾಂಗಿಯರಾಗಿ ಮತ್ತಷ್ಟು ಹೊಸ ಚೆಲ್ವಿಕೆಯನ್ನು ಡೆಯುವರೆಂದು ಕವಿಯ ಅಭಿಪ್ರಾಯವಿದೆ. ಇನ್ನು ಆ ಲತಾಂಗಿಯು ಸುವರ್ಣಪಾತ್ರೆಯಿಂದ ಅರಸನನ್ನು ಮಾಯಿಸಿದ-ಳಂತೆ. 'ಸುವರ್ಣ'ವು ಸೃಷ್ಟಿಯ ಮೂಲಭೂತಗಳಲ್ಲಿ ಸಮಾವೇಶ-ವಾಗುವುದೆಂಬುದು, ಎಲ್ಲ ರಸಾಯನಶಾಸ್ತ್ರ ಓದಿದವರಿಗೂ ಗೊತ್ತಿದ್ದ ಮಾತು. ಈ ಮೂಲಭೂತಗಳಿಗೆಲ್ಲ ಸೃಷ್ಟಿಯೇ ಜನಕ. ಆದುದರಿಂದ 'ಸುವರ್ಣ' ಎಂದರೆ 'ಸೃಷ್ಟಿಯ ತನುಜ' ಮತ್ತು 'ಸುವರ್ಣಪಾತ್ರೆ' ಎಂದರೆ 'ಸೃಷ್ಟಿಯ ತನುಜನ ಪಾತ್ರೆ' ಎಂದು ಅಂದಂತಾಯಿತು. 'ಸೃಷ್ಟಿಯ ತನು' ಎಂದರೆ ಭೂಮಿ. ಭೂಮಿ-ಯಲ್ಲಿ ಹುಟ್ಟುವುದು ತೆಂಗಿನ ಮರ. ಆದುದರಿಂದ 'ಸೃಷ್ಟಿಯ ತನುಜನ ಪಾತ್ರೆ' ಎಂದರೆ 'ತೆಂಗಿನ ಗಿಡದ ಪಾತ್ರೆ' ಅರ್ಥಾತ್ 'ಚಿಪ್ಪು' ಎಂಬ ಹೊಸ ಅರ್ಥವೂ ಉಪ್ಪವಿಸುವುದು. ಒಟ್ಟಿನ ಮೇಲೆ ಆ ಕಾಲಕ್ಕೆ ಚಿಪ್ಪೂ ಸುಂದರವಾದ ಪಾತ್ರೆಗಳಲ್ಲಿ ಸಮಾವೇಶ-ವಾಗುತ್ತಿತ್ತೆಂಬುದು ಕಂಡುಬರುತ್ತದೆ.

ಅರಸನ ಮಜ್ಜನವು ಮುಗಿದ ಬಳಿಕ, ಅವನ ತಲೆಯ ಕೂದಲು-ಗಳಲ್ಲಿ ಸಿಕ್ಕಿಕೊಂಡ ಮತ್ತು ಮೈಗೆ ಅಲ್ಲಲ್ಲಿ ಅಂಟಿಕೊಂಡ ಮುತ್ತು-ಗಳನ್ನು ಝಾಡಿಸಲು ಟಾವೆಲು ಹಿಡಿದುಕೊಂಡು ಬೆಡಗಿನಿಂದ ಬರುವ ಸುಂದರಿಯರ ವರ್ಣನೆಯನ್ನು ಕವಿಯು ಈ ರೀತಿ ಮಾಡುತ್ತಾನೆ:

"ತಳಿರಿನಂತೆ ಅಡಿಗಳುಳ್ಳ, ತೊಂಡೇಹಣ್ಣಿನಂತೆ ತುಟಿಗಳುಳ್ಳ ಮತ್ತು ಸಂಪಿಗೆಯ ಮೂಗುಳ್ಳ ಕಮಲಮುಖಿಯರಾದ ಸುಂದರಿ-ಯರು, ಕೈಯಲ್ಲಿ ವಸ್ತ್ರವನ್ನು ತೆಗೆದುಕೊಂಡು ಸಡಗರದಿಂದ ಬಂದರು."

ಅವರ ಪಾದಗಳು ಮಾವಿನ ತಳಿರಿನಂತೆ ಇದ್ದುವಂತೆ! ಎಂದರೆ ಅವರ ಪಾದಗಳಲ್ಲಿ ಎಲುವಾಗಲಿ ಮಾಂಸವಾಗಲಿ ಇದ್ದಿಲ್ಲವೆಂದೂ, ಈ ಕಾರಣದ ಮೂಲಕವಾಗಿ ಅವು ಕಾಗದದಂತೆ ಜೆಸ್ಟಿ-ಯಾಗಿದ್ದುವೆಂತಲೂ ತಿಳಿಯಬಹುದು. ಬಹುಶಃ ಅವರ ಕಾಲು-ಗಳಿಗೆ ಬೆರಳುಗಳೂ ಇರಲಿಕ್ಕಿಲ್ಲ. ಏಕೆಂದರೆ ಮಾವಿನ ತಳಿರಿಗೆ ಎಂದಾದರೂ ಬೆರಳುಗಳಿದ್ದುದು ಗೊತ್ತಿದೆಯೆ? ಅವರ ತುಟಿಗಳು ತೊಂಡೇಹಣ್ಣಿನಂತೆ ಇದ್ದುವಂತೆ! ಬಹುತರವಾಗಿ ಇರುವೆ ಅಥವಾ ಮತ್ತೇನಾದರೂ— ರಾತ್ರಿ ಮಲಗಿಕೊಂಡಾಗ— ಅವರ ತುಟಿ-ಗಳನ್ನು ಬಲವಾಗಿ ಕಚ್ಚಿರಬೇಕು. ಆದುದರಿಂದ ಅವು ತೊಂಡೇ-ಹಣ್ಣಿನಂತೆ ಬಾತು ಕೆಂಪಾಗಿರಬೇಕು. ಇದನ್ನು ಓದಿ, ಇನ್ನು ಮೇಲೆ ಸುಂದರಿಯರಾಗಲು ಇಚ್ಛಿಸುವವರು, ರಾತ್ರಿ ಮಲಗುವಾಗ ತುಟಿಗೆ ತುಸು ಬೆಲ್ಲವೆತ್ತಿಕೊಳ್ಳುವರೆಂದು ಆಶಿಸುತ್ತೇವೆ. ಅವರ ಮೂಗು-ಗಳು ಸಂಪಿಗೆಯ ಹೂವಿನಂತೆ ಇದ್ದುವಂತೆ—ಎಂದರೆ ಬಹುಶಃ ಅವರು ಜೊಣ್ಣೆ ಮೂಗಿನವರಾಗಿರಬೇಕು. ಕಲಿಕಾಲದ ಮಹಿಮೆ-ಯಿಂದ ಈಗ ಶದ್ಧಿರುದ್ಧವಾಗಿಬಿಟ್ಟಿದೆ. ಈಗ ಸರಳ ಮೂಗುಳ್ಳವರು ಚೆಲುವೆಯರೆಂದು ಹೆಸರಾಗಿದ್ದಾರೆ. ಜೊಣ್ಣೆಮೂಗಿನವರು ರಾಕ್ಷಸ ಕುಲದವರಂತೆ! ಇನ್ನು ಕವಿಯು ಆ ಸುಂದರಿಯರನ್ನು ಕಮಲ-ಮುಖಿಯರೆಂದು ಬಣ್ಣಿಸುತ್ತಾನೆ. ಕಮಲಕ್ಕೆ ಪಕಳೆಗಳಿರುವಂತೆ, ಆ ಸುಂದರಿಯರ ಮುಖಗಳಿಗೂ ಪಕಳೆಗಳಿರಬೇಕು. ಎಂದರೆ ಅವರ ಮುಖ ಹುಳುಕ್ಕುಳುಕು ಇದ್ದಿರಬೇಕು. ಈಗ ಅಜ್ಞಾನಿ-ಗಳಾದ ಜನರು, ಈ ಕಮಲಮುಖಿಯರನ್ನು ಕುರೂಪಿಗಳೆಂದು ಜರೆಯುತ್ತಾರೆ.

ಏನೇ ಆಗಲಿ, 'ಭಾರ್ಯಾ ರೂಪವತೀ ಶತ್ರುಃ' ಎಂಬ ಹಿತೋಪದೇಶದಲ್ಲಿ ಹೇಳಿದ ಮೂಲಕ, ಕವಿಯು ಈ ಆಖ್ಯಾನದಲ್ಲಿ ವರ್ಣಿಸಿದ ಸುಂದರಿಯರನ್ನು ಮೆಚ್ಚಿ, ಅಂಥವರನ್ನೇ ಆರಿಸಿ ಮದುವೆಯಾಗುವ ಹುಚ್ಚಿಗೆ ಯಾರೂ ಹೋಗಲಿಕ್ಕಿಲ್ಲವೆಂದು ಆಶಿಸುತ್ತೇವೆ. ಹಿರಿಯರು ಹೇಳಿದ ನೂತನ್ನು ಮೀರಿನಡೆಯುವ್ರದು ಅಪರಾಧವು. ಆದುದರಿಂದ ಸುಂದರಿಯರನ್ನು ಮದುವೆಯಾಗದೆ, ನಿಜವಾಗಿ ಕುರೂಪಿಗಳಾದ ಈಗಿನ ಚೆಲುವೆಯರನ್ನೇ ಮದುವೆ-ಯಾಗಿರೆಂದು, ತರುಣರೇ, ನಿಮ್ಮಲ್ಲಿ ಕೊನೆಯದಾಗಿ ಈ ಕಳಕಳೆಯ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವವು.

ವಿಳಾಸ :—

ಗಣೇಶ ರಾಮಚಂದ್ರ ಕರ್ಕ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಶೋಕ ಚಕ್ರ

(ನಮ್ಮ ಆರ್ಥಿಕ ದುರವಸ್ಥೆ)

ಶ್ರೀ. ನೋಹರ ಜಾಲಿಹಾಳ ಬಿ. ಕಾಮ್. ಜಿ. ಡಿ. ಸಿ. ಎ.
ಕಲ್ಲೋಸ್ಕರವಾಡಿ

ನಾವು ಈಗ ಸಿಕ್ಕಿರುವ ಆರ್ಥಿಕ ಶೋಕಚಕ್ರದಿಂದ ಪಾರಾಗಬೇಕಾದರೆ, ಮೊದಲು ಸ್ವಾವಲಂಬಿಗಳಾಗಬೇಕು. ಇದಕ್ಕಾಗಿ ಬಂಡವಾಳ, ಒಕ್ಕಲುತನ, ಉದ್ಯಮಗಳು—ರಾಷ್ಟ್ರೀಯ ಭಾವನೆಯಿಂದ ಕೆಲಸವಾಗಬೇಕು!

ಗಾಂಧೀಜಿ ಸತ್ಯಶೋಧನೆ ಮಾಡಿ, ಅರೆಹೊಟ್ಟೆಯಿಂದ ಬಳಲುತ್ತಿದ್ದ ಜರೆಜತ್ತಲೆಯ ದರಿದ್ರನಾರಾಯಣನನ್ನು ಕಂಡರು. ಈ ದರಿದ್ರನಾರಾಯಣನ ಸೇವೆಗಾಗಿಯೇ ತಮ್ಮ ಬಾಳ ಮುಡಿಪನ್ನೂ ಸಲ್ಲಿಸಿದರು. ನಾಡಿನ ಬಿಡುಗಡೆಗಾಗಿ ಅವರು ಆಳರಸರೊಡನೆ ಹೂಡಿದ ಹೋರಾಟವೇ ಅವರ ಬಾಳ ಉಸಿರಾಗಿದ್ದರೂ, ನಾಡಿನ ಮುನ್ನಡೆ—ಏಳ್ಗೆ ಅವರ ಕಣ್ಮರೆಯಾಗಿರಲಿಲ್ಲ. ಅವರದು ಇಡಿಯಾವ ನೋಟ. ಅವರು ಕಟ್ಟಿದ ವಿವಿಧ ಸಂಸ್ಥೆಗಳು: 'ಅಖಿಲ ಭಾರತ ಚರಖಾ ಸಂಘ' 'ಅಖಿಲ ಭಾರತ ಗ್ರಾಮೋದ್ಯೋಗಗಳ ಸಂಘ' 'ಹಿಂದುಸ್ತಾನೀ ಪ್ರಚಾರ ಸಭೆ' 'ಹರಿಜನ ಸೇವಕ ಸಂಘ' ಮೊದಲಾದುವು ಮತ್ತು ಅವರ ಕೊನೆಯ ಸಂದೇಶ "ಸರ್ವೋದಯ" ಇವು, ಅವರ ಅಖಂಡ ದೃಷ್ಟಿಯನ್ನೇ ಸಾರುತ್ತವೆ.

ರಸ್ಕಿನ್‌ರ "ಸರ್ವೋದಯದಿಂದ (Unto this last) ಸ್ಫೂರ್ತಿ ಪಡೆದ ಗಾಂಧೀಜಿಯವರು, ಭಾರತಕ್ಕೆ "ಸರ್ವೋದಯದ" ಕೊನೆಯ ಕಾಣಿಕೆಯನ್ನು ಸಲ್ಲಿಸಿದರು. ಭಾರತ ಸ್ವತಂತ್ರವಾಗಿ ಎರಡು ವರುಷಗಳಾಗಿ ಹೋದರೂ, ಗಾಂಧೀಜಿಯವರ ಕನಸು ಇನ್ನೂ ನನಸಾಗಿಲ್ಲ. ರಾಜಕೀಯ ಸ್ವಾತಂತ್ರ್ಯದೊಡನೆ ಆರ್ಥಿಕ ಸ್ವಾತಂತ್ರ್ಯವನ್ನೂ ಪಡೆದು ಜನಜೀವನದ ಮಟ್ಟವನ್ನು ಎತ್ತರಿಸಬೇಕೆಂಬ ಆಶೆ ಇನ್ನೂ ಫಲಿಸಿಲ್ಲ. ಇದ್ದ ಮಟ್ಟವೇ ಇಳಿಯುತ್ತಲಿದೆ. ಹದಗೆಟ್ಟ ನಮ್ಮ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯನ್ನರಿತರೆ, ಈಗ ಅದನ್ನು ಎದುರಿಸಲು ಕೈಕೊಳ್ಳುತ್ತಿರುವ ಹಂಚಿಕೆಗಳ ಮಹತ್ವ ಮುಂದಟ್ಟಾಗಬಹುದು.

ಬ್ರಿಟಿಷರು ಬಿಟ್ಟುಹೋದ ಆಸ್ತಿ: ಸುಮಾರು ಎರಡುನೂರು ವರ್ಷಗಳ ದಾಸತ್ವದಲ್ಲಿ ಒಂದೇಸವನೆ ಭಾರತದ ಆರ್ಥಿಕ ಸುಲಿಗೆ ನಡೆದು, ಬಂಗಾರದ ಹೊಗೆ ಹಾಯುತ್ತಿದ್ದ ಭಾರತ ಕಂಗಾಲಾಯ್ತು. ನಯ, ಕಲಾಕುಸುರು, ತಾಳಿಕೆ, ಬೆಲೆಗಳಲ್ಲಿ ಭಾರತದ ಕೈಗಾರಿಕೆಗಳು ಎಲ್ಲ ಸರಕುಗಳನ್ನೂ ಮೀರಿ, ಇಂಗ್ಲಂಡಿನ ಪೇಟೆಯು ಗುತ್ತಿಗೆಯನ್ನೇ ಸಂಪಾದಿಸಿದ್ದುವು. ಔದ್ಯೋಗಿಕ ಕ್ರಾಂತಿಯಿಂದ ಇಂಗ್ಲಂಡಿನ ಉದ್ಯಮಗಳು ಹುಟ್ಟಿದವ್ದು, ಅಡ್ಡ ಬಂದ ಭಾರತದ ಕೈಗಾರಿಕೆಗಳನ್ನು, ಕಂಪನಿಯ ಸರಕಾರದ ನೆರವಿನಿಂದ, ಮುರಿದು ಮೂಲೆಗುಂಪು ಮಾಡಿದುವು. ಭಾರತದ ಕುಶಲ ಕೆಲಸಗಾರರ ಕೈ. ಬೆರಳುಗಳನ್ನು ಕತ್ತರಿಸುವಂತಹ ಕ್ರೂರಕೃತ್ಯಗಳನ್ನು ಕೈಕೊಳ್ಳಲೂ ಕಂಪನಿ ಸರಕಾರದ ಕಲ್ಲೆದೆ ಹಿಂಜರಿಯಲಿಲ್ಲವೆಂದು ರಮೇಶಚಂದ್ರ ದತ್ತರು ಬರೆದಿದ್ದಾರೆ.

೧೯೦೬ರಲ್ಲಿ ಪ್ರಾರಂಭವಾದ ಸ್ವದೇಶೀ ಆಂದೋಲನದಿಂದಲೇ ಹಿಂದೀ ಉದ್ಯಮಗಳು ಹುಟ್ಟಿದುವು. ಜವಳಿ, ಕಬ್ಬಿಣ, ಉಕ್ಕು, ಸಕ್ಕರೆ ಮೊದಲಾದ ಉದ್ಯಮಗಳು ಸರಕಾರದ ವಿರೋಧವನ್ನು ಕೂಡ ಲೆಕ್ಕಿಸದೆ ತಳ ಊರಿದ ಮೇಲೆಯೇ ಅವುಗಳಿಗೆ ಸರಕಾರದ ಸಂರಕ್ಷಣೆ ಸಿಕ್ಕಿತು.

- ಭಾರತೀಯನ ವಾರ್ಷಿಕ ಸರಾಸರಿ ಆದಾಯ ೧೯೩೨-೩೩ರಲ್ಲಿ ೬೨ ರೂ. ಎಂದು ಡಾ. ವಿಜಯೇಂದ್ರರಾಯರು ಲೆಕ್ಕ ಹಾಕಿದ್ದಾರೆ. ಭಾರತೀಯನಿಗೆ ಸಿಗುವ ಹಾಲು, ಅವನು ಬಳಸುವ ಸಕ್ಕರೆ, ಅವನಿಗೆ ಸಿಗುವ ಬಟ್ಟೆಯ ತುಂಡು, ಭಾರತೀಯ ಕೂಲೀಕಾರನು ವಾಸಿಸುವ ದನದ ಕೊಟ್ಟಿಗೆಯಂತಹ ಕಟ್ಟಡಗಳು, ಭಾರತದಲ್ಲಿಯ ನಿರಕ್ಷರತೆ, ಮೃತ್ಯುವಿನ ಪ್ರಮಾಣ—ಇವನ್ನೆಲ್ಲ ನಿರೀಕ್ಷಿಸಿದರೆ, ಮತ್ತು ಮುಂದುವರಿದ ಉಳಿದ ರಾಷ್ಟ್ರಗಳೊಡನೆ ಹೋಲಿಸಿದರೆ, ಭಾರತದ ಪಾರತಂತ್ರ್ಯ ಭಾರತದ ಏಳ್ಗೆಗೆ ಎಂತಹ ಅಡ್ಡಗೋಡೆಯಾಗಿತ್ತೆಂಬುದು ಒಡೆದು ಕಾಣಿಸುತ್ತದೆ. ೧೯೪೭ರ ಅಂಕೆಗಳು, ಆಳರಸರು ಬಿಟ್ಟು ಹೋಗುವಾಗ ನಮ್ಮ ಆರ್ಥಿಕ ದುರವಸ್ಥೆ ಯಾವ ಮಟ್ಟವನ್ನು ಮುಟ್ಟಿತ್ತೆಂಬುದನ್ನು ನಿಚ್ಚಳವಾಗಿ ತೋರಿಸುತ್ತವೆ:

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ ಔಷಧಿ!

ಡಾ. ವಾಮನ ಗೋಪಾಳ
ಇವರ
ಸಾರ್ಸಾ ಪರಿಲ್ಲಾ

೧ನೆಯ ಕೋಷ್ಟಕ *

★

ವರುಷಗಳು	೧೯೪೯-೫೦	೫೦-೫೧	೫೧-೫೨	೫೨-೫೩	೫೩-೫೪	೫೪-೫೫	೫೫-೫೬	೫೬-೫೭	೫೭-೫೮	ಅ. ನಂ. ೧
ಭಾರತದ ಜನಸಂಖ್ಯೆ.	೩೯೦	೩೯೪	೪೯೮	೪೦೨	೪೦೫	೪೦೬.೫	೪೧೦	೪೧೪	೪೪೬	೨
	(ಮಿಲಿಯನ್‌ಗಳಲ್ಲಿ)									
ಭಾರತೀಯನ ಸರಾಸರಿ ಆದಾಯ (ವರುಷಕ್ಕೆ)	೬೭	೭೦	೭೮	೧೧೨	೧೯೯	೧೩೯	೧೩೨	೧೪೩	೧೬೦	೩
	(ರೂಪಾಯಿಗಳಲ್ಲಿ)									
ಜೀವನ ವೆಚ್ಚದ ಮೇಲಿಂದ ನಿಜವಾದ ಆದಾಯ	೬೭	೬೭	೬೬	೭೦	೬೪	೬೪	೬೩	೫೯	೬೨	೪
	(ರೂಪಾಯಿಗಳಲ್ಲಿ)									
ಭಾರತೀಯನು ಬಳಸುವ ಆಹಾರ	೩೮೮	೩೬೬	೩೪೮	೩೭೮	೩೮೯	೩೭೦	೩೫೪	೩೫೪	೩೫೭	೫
	(ಪೌ. ಗಳಲ್ಲಿ)									
ಆರಿವೆ	೧೬	೧೬	೧೪	೧೦	೧೪	೧೪	೧೨	೧೨	೧೧	೬
	(ವಾರಗಳಲ್ಲಿ)									
ಉದ್ಯಮಗಳ ಹುಟ್ಟುವಳಿ +	೧೧೦ ೩	೧೧೪.೨	೧೨೩.೨	೧೨೫.೫	೧೨೬.೪	೧೨೧.೭	೧೨೦.೦	೧೦೫	೧೧೫.೩	೭
ಒಕ್ಕಲುತನದ + ಹುಟ್ಟುವಳಿ	೯೯	೯೪	೯೫	೧೦೨	೧೦೬.೦	೧೦.೧	೯೪	೯೬	೯೭	೮
ಆಹಾರ ಧಾನ್ಯಗಳ ಹುಟ್ಟುವಳಿ + ೦೦೦ ಟನ್‌ಗಳಲ್ಲಿ	೪೬.೦೪೩	೪೫.೦೫೧	೪೩.೬೭೫	೪೪.೦೬೩	೪೬.೬೨೨	೪೭.೬೩೭	೪೪.೯೧೪	೪೪.೯೫೯	೪೫.೬೪೩	೯
ಆಹಾರ ಧಾನ್ಯಗಳ ಆಯಾತ	೨೨೭೧	೯೬೩	೪೩೨	-೨೦೨	೨೯೨	೬೯೩	೯೩೧	೨೬೫೮	೨೪೦೦	೧೦

೨ನೆಯ ಕೋಷ್ಟಕ

ರಾಷ್ಟ್ರಗಳು.	ವರುಷಕ್ಕೆ ಬಳಸುವ ಸಕ್ಕರೆಯ ಪ್ರಮಾಣ
ಇಂಗ್ಲೆಂಡ್	೧೧೨ ಪೌ.
ಅಮೇರಿಕಾ	೧೦೩ ,,
ಜಪಾನ	೨೯ ,,
ಭಾರತ	೨೦ ,,
	(ಬೆಲ್ಲ ಸಹಿತ)

೩ನೆಯ ಕೋಷ್ಟಕ.

ರಾಷ್ಟ್ರಗಳು.	ಸಿಗುವ ಬಟ್ಟೆ (ಒಬ್ಬನಿಗೆ)
ಅಮೇರಿಕಾ	೬೪ ವಾರ
ಇಂಗ್ಲೆಂಡ್	೩೫ ,,
ಜಪಾನ	೨೧ ,,
ಭಾರತ	೧೬ ,,

೪ನೆಯ ಕೋಷ್ಟಕ

ರಾಷ್ಟ್ರಗಳು.	ಪ್ರತಿಯೊಬ್ಬನಿಗೆ ಸಿಗಬಹುದಾದ ಹಾಲಿನ ಪ್ರಮಾಣ
ನ್ಯೂಯಿಝೀಲಂಡ್	೭೬ (ಔಂಸು)
ಸ್ವೀಡನ್	೬೧ (,,)
ಅಮೇರಿಕಾ	೩೫ (,,)
ಇಂಗ್ಲೆಂಡ್	೩೯ (,,)
ಭಾರತ	೭ (,,)

* ಈ ಅಂಕಿಗಳನ್ನು ದಿಲ್ಲಿಯಿಂದ ಪ್ರಸಿದ್ಧವಾಗುವ ಈಸ್ಟರ್ನ ಎಕಾನಾಮಿಸ್ಟ್ ಪಾರಪತ್ರಿಕೆಯ ೧೯೪೯ನೇಯ ಸಪ್ಟಾಂಬ್ರ ವಾರ್ಷಿಕ ವಿಶೇಷ ಸಂಚಿಕೆಯಿಂದ ಸಂಗ್ರಹಿಸಿದೆ.

ಫೆಬ್ರುವರಿ ೧೯೫೦

ಎಲ್ಲ ವಿಧದಲ್ಲಿಯೂ ಹಿಂದುಳಿದ ಭಾರತವು, ಜನಸಂಖ್ಯೆ, ನಿರಕ್ಷರತೆ ಹಾಗು ಮೃತ್ಯುವಿನ ಸಂಖ್ಯೆಯಲ್ಲಿ ಮಾತ್ರ ಮುಂದಿದೆ. ಇದು ಆಳರಸರ ಕೊಡುಗೆ.

ಇದಲ್ಲದೆ ಆಳರಸರು ಜಾತೀಯ ಭೂತದ ಸಮಸ್ಯೆಯನ್ನು ನಿರ್ಮಿಸಿ, ಕೊನೆಗೆ ಭಾರತದಿಂದ ಕಾಲ್ಕೆಗೆಯುವ ಹೊತ್ತು ಬಂದಾಗ, ಭಾರತವನ್ನು ಸೀಳಿ, ತುಂಡು ತುಂಡು ಮಾಡಿ ಹೊರಟುಹೋದರು.

ಆಳರಸರು ಕೊಟ್ಟುಹೋದ ಆಸ್ತಿಯೆಂದರೆ : [೧] ಸೀಳಿ ಇಬ್ಭಾಗವಾದ ಭಾರತ. [೨] ಆಹಾರದ ಕೊರತೆ. [೩] ಹಣದ ಉಬ್ಬರ. [೪] ಮಿತಿಮೀರಿ ಏರಿದ ಜೀವನದ ವೆಚ್ಚ. [೫] ನಿಯಂತ್ರಣಗಳ ಸಂಕೋಲೆ. [೬] ಹದಗೆಟ್ಟ ನೈತಿಕ ಮಟ್ಟ. [೭] ಸವೆದು ಸವೆದು ಮುರುಕಳಿಗೆ ಬಂದ ಯಂತ್ರಸಾಮಗ್ರಿ. [೮] ಸಂರಕ್ಷಣೆಯ ನೃಷ್ಟಿಯಿಂದ ಮತ್ತು ಯಂತ್ರಸಾಮಗ್ರಿಗಳನ್ನು ತಯಾರಿಸುವ ನೃಷ್ಟಿಯಿಂದ ಅತ್ಯವಶ್ಯವಾದ ಮೂಲ ಉದ್ಯಮಗಳ ಅಭಾವ.

ಭಾರತ ೧೯೪೭ನೆಯ ಆಗಸ್ಟ್ ೧೫ಕ್ಕೆ ಸ್ವತಂತ್ರವಾಯಿತು. ಅಷ್ಟಗೋಡೆಯಂತಿದ್ದ ದಾಸ್ಯದ ನೊಗ ಕಳಚಿ ಬಿತ್ತು. ನಮ್ಮ ಮುನ್ನಡೆಯನ್ನು ತಡೆದ ಆಳರಸರು ಹೊರಟುಹೋದರು. ಈಗ ತಪ್ಪೂ ಒಪ್ಪೂ ನಮ್ಮದೆ. ಮೊದಲಿನಂತೆ ಆಳರಸರನ್ನು ಬೈಯುವಂತಿಲ್ಲ. ಈ ಎರಡು ವರುಷಗಳಲ್ಲಿ ನಾವು ಏನು ಮಾಡಿದ್ದೇವೆ?

ರಾಜಕೀಯ ರಂಗದಲ್ಲಿ ನಾವು ಅದ್ಭುತ ಕೆಲಸಮಾಡಿದ್ದೇವೆ. ಭಾರತದ ನಕ್ಷೆಯೇ ಇಂದು ಬದಲಾಗಿದೆ. ಸಂಸ್ಥಾನಗಳ ಸಮೀಕರಣವನ್ನು, ಸರದಾರರು ರಕ್ತದ ಒಂದು ಹನಿಯನ್ನು ಕೂಡ ಹರಿಸದೆ ಸಾಧಿಸಿ, ಇಡಿಯ ಭಾರತವನ್ನು ಒಂದೇ ಕೊಡೆಯ (ಆಳಿಕೆ) ಕೆಳಗೆ ತಂದಿದ್ದಾರೆ. ನೆಹರೂರವರು ತಮ್ಮ ವಿದೇಶನೀತಿಯಿಂದ, ಜಾಗತಿಕ ರಾಷ್ಟ್ರಗಳ ಸಾಲಿನಲ್ಲಿ ಭಾರತಕ್ಕೆ ಗಣ್ಯ ಸ್ಥಾನವನ್ನು ಸಂಪಾದಿಸಿದ್ದಾರೆ.

ಆದರೆ ಆರ್ಥಿಕ ರಂಗದಲ್ಲಿ ನಾವು ಹಿಂದುಳಿದಿದ್ದೇವೆ. ಈ ಎರಡು ವರುಷಗಳಲ್ಲಿ ಹುಟ್ಟುವಳಿ ಹೆಚ್ಚಾಗುವುದರಬದಲು ಕಡಿಮೆಯಾಗಿದೆ. ಸರಕಾರದ ಆರ್ಥಿಕ ಧೋರಣ ಇನ್ನೂ ರೂಪುಗೊಳ್ಳುವುದರಲ್ಲಿಯೆ ಇದೆ.

ಸರಕಾರ ನಿಯಂತ್ರಣ–ವಿನಿಯಂತ್ರಣಗಳ ಕಣ್ಣಾಮುಚ್ಚಾಲೆಯಾಡುತ್ತಿದೆಯೆಂದೂ ಬಂಡನಲಗಾರರನ್ನು ಮುತ್ತಿಡುತ್ತಿದೆಯೆಂದೂ ಆರೋಪಕ್ಕೆ ಗುರಿಯಾಗಿದೆ.

ನಾಡಿನ ಜನಸಂಖ್ಯೆ ಬೆಳೆದಂತೆ ಆಹಾರಧಾನ್ಯಗಳ ಹುಟ್ಟುವಳಿ ಬೆಳೆಯದುದರಿಂದ, ಆಹಾರಧಾನ್ಯಗಳ ಕೊರತೆಯಾಗಿ, ಯಂತ್ರಸಾಮಗ್ರಿಗಳಿಗೆಂದು ಮೀಸಲಾಗಿರಿಸಿದ್ದ ಸ್ಟರ್ಲಿಂಗ್ ಸಂಗ್ರಹದಲ್ಲಿಯ ಹೆಚ್ಚು ಭಾಗವನ್ನು, ಆಹಾರಧಾನ್ಯಗಳ ಆಯಾತಕ್ಕಾಗಿಯೇ ವೆಚ್ಚ ಮಾಡಬೇಕಾಯ್ತು. ಯುದ್ಧಕಾಲದಲ್ಲಿ ಆಯಾತಗಳು ಕಟ್ಟಾಗಿದ್ದರಿಂದ, ತಡೆದು ನಿಂತಿದ್ದ ಯಂತ್ರಸಾಮಗ್ರಿಗಳ ಆಯಾತ– ಇದಲ್ಲ ಸರಕಾರದವರ ವಿವಿಧ ಯೋಜನೆಗಳಿಗೆ ಅವಶ್ಯವಾದ ಯಂತ್ರ

ಮಗ್ರಿಗಳ ಆಯಾತ– ಇವುಗಳಿಂದ ವಿದೇಶ ವ್ಯಾಪಾರ ಾರತೆಯದಾಯ್ತು. ವಿದೇಶದಿಂದ ಹೆಚ್ಚಿನ ಸರಕುಗಳನ್ನು ರಿಸಿ ನಾಡಿನಲ್ಲಿ ಮೇಲ್ಮಟ್ಟವನ್ನು ಮುಟ್ಟದ ಬೆಲೆಗಳನ್ನು ಳಿಸುವುದು ಸಾಧ್ಯವಾಗಲಿಲ್ಲ. ಆದುದರಿಂದ ನಿಯಂತ್ರಣದ ಟ್ಟಳೆಗಳು, ಬೆಲೆಗಳನ್ನು ಏರಿದ ಮಟ್ಟದಲ್ಲಿಯೇ ಕಟ್ಟು-ಾಕಿವೆ.

ಹಣದ ಉಬ್ಬರ, ಸರಕುಗಳ ಕೊರತೆ, ಏರಿದ ಬೆಲೆಗಳು ಮಿತಿ ಮೀರಿ ಬೆಳೆದ ಜೀವನ ವೆಚ್ಚ, ಏರುತ್ತಿರುವ ಕೂಲಿ, ಹೆಚ್ಚುತ್ತಿರುವ ಉತ್ಪಾದನೆಯ ವೆಚ್ಚ, ತಗ್ಗುತ್ತಿರುವ ನಿರ್ಯಾತ ವ್ಯಾಪಾರ, ತಗ್ಗಿಸಬೇಕಾಗಿರುವ ಆಯಾತಗಳು, ಬಂಡವಲದ ಬರ, ಸರಕುಗಳ ಕೊರತೆ ಈ ತಿರುಗಣಿಯ ಮಡುವಿನಲ್ಲಿ, ಈ ಶೋಕಚಕ್ರದಲ್ಲಿ ನಾವು ಸಿಕ್ಕಿದ್ದೇವೆ:

ಅಶೋಕ ಚಕ್ರ

ಹೆಚ್ಚಿನ ಹುಟ್ಟುವಳಿ, ಲಾಭ, ವಿಪುಲ ಸರಕುಗಳು, ಬಂಡವಲದ ಸುರಿಮಳೆ.	ಬೆಲೆಗಳಲ್ಲಿ ಇಳಿತ, ತಗ್ಗುವ ಜೀವನ ವೆಚ್ಚ.
ನಿರ್ಯಾತ ಆಯತಗಳಲ್ಲಿ ಹೆಚ್ಚಳ.	ಕೂಲಿ ಕಡಿಮೆ, ಉತ್ಪಾದನೆಯ ವೆಚ್ಚ ಕಡಿಮೆ.

ಶೋಕ ಚಕ್ರ

ಸರಕುಗಳ ಕೊರತೆ, ಹಣದ ಉಬ್ಬರ.	ಹೆಚ್ಚುತ್ತಿರುವ ಜೀವನವೆಚ್ಚ, ಹೆಚ್ಚಿನ ಕೂಲಿ.
ಏರುತ್ತಿರುವ ಬೆಲೆಗಳು ತಗ್ಗಿದ ನಿರ್ಯಾತ ತಗ್ಗಿಸಬೇಕಾದ ಆಯಾತ ಬಂಜವಲದ ಬರ.	ಹೆಚ್ಚುತ್ತಿರುವ ಉತ್ಪಾದನೆಯ ವೆಚ್ಚ.

ಈ ಆರ್ಥಿಕ ದುರವಸ್ಥೆಯ ರೋಗಕ್ಕೆ ಬೆಲೆಗಡಿತದ (ರೂಪಾಯಿಯ ಬೆಲೆಯನ್ನು ಇಳಿಸುವ) ಚುಚ್ಚುಮದ್ದು (ಇಂಜೆಕ್ಶನ್) ಪರಸ್ಪರ ವ್ಯಾಪಾರೀ ಒಪ್ಪಂದದ (Bilateral Trade Agreements) ಶಕ್ತಿವರ್ಧಕ ಔಷಧಗಳು (ಟಾನಿಕ್), ಕೇವಲ ತಾತ್ಕಾಲಿಕ ಉಪಾಯಗಳು. ವ್ಯಾಪಾರ ಮಾಂದ್ಯದ ಅಗ್ನಿಮಾಂದ್ಯ ಹೋಗಿ ತೇಜಿಯ ವ್ಯಾಪಾರದ ತೇಜ ಬರಬೇಕಾದರೆ, ಮೈಬೆವರು ಬರಿಸುವ ದುಡಿತದ ವ್ಯಾಯಾಮದಿಂದ, ಹುಟ್ಟುವಳಿಯ ಹೊಸ ಶಕ್ತಿ ಹರಿಯಬೇಕು.

ನಾಡಬಾವುಟದ ಅಶೋಕ ಚಕ್ರ ರಾಜಕೀಯ ಸ್ವಾತಂತ್ರ್ಯವನ್ನು ಸಾರುತ್ತದೆ. ಆದರೆ ಆರ್ಥಿಕ ಸ್ವಾತಂತ್ರ್ಯ ಇನ್ನೂ ಬರಬೇಕಾಗಿದೆ. ಜನರ ಉಪಜೀವನಕ್ಕೆ ತೀರ ಆವಶ್ಯಕವಿರುವ ಹಿಟ್ಟು (ಆಹಾರ), ಬಟ್ಟೆ, ವಸತಿ ಸೌಕರ್ಯಗಳಲ್ಲದೆ ಶಿಕ್ಷಣ, ವೈದ್ಯಕೀಯ ಸಹಾಯ ಮಾಡಿಯಬಲ್ಲವರಿಗೆಲ್ಲ ಕೆಲಸ, ನಿರುದ್ಯೋಗ ವಿಮೆ, ವಿರಾಮ ವೇತನ (ಪೆನ್ಶನ್), ಆಟ-ನೋಟಗಳು ಇವೇ ಮೊದಲಾದುವುಗಳನ್ನು ಒದಗಿಸಿ, ಜನರ ಜೀವನ ಸುಖಮಯವಾಗುವಂತೆ ಮಾಡಬೇಕಾಗಿದೆ. ಈಗ ಎಲ್ಲೆಡೆಯಲ್ಲಿಯೂ ಕಂಡುಬರುತ್ತಿರುವ ಅತೃಪ್ತಿಯ ತಾಂಡವ ನೃತ್ಯದ 'ಬೇಕು, ಬೇಕು' ಎಂಬ ಸದ್ದು ಅಡಗಿ, ಉಪನಿಷತ್ಕಾರರು ಸಾರಿದಂತೆ ಶಾಂತಿ-ಪುಷ್ಟಿ-ತುಷ್ಟಿಗಳ ತ್ರಿವೇಣೀ ಸಂಗಮದಿಂದ ಎಲ್ಲರ ಜೀವನ ಸುಖಮಯವಾಗಿ, ನಾಡಿನಲ್ಲಿ ರಾಮರಾಜ್ಯ ನೆಲಸಬೇಕಾಗಿದೆ. ಹೆಚ್ಚುತ್ತಿರುವ ಹುಟ್ಟುವಳಿ, ತಗ್ಗುವ ಉತ್ಪಾದನೆಯ ವೆಚ್ಚ, ಬೆಳೆಯುವ ನಿರ್ಯಾತ, ಬೆಳಸಬಹುದಾದ ಆಯಾತ, ಸರಕುಗಳ ವಿಪುಲತೆ, ಇಳಿಯುವ ಬೆಲೆಗಳು ಹಾಗೂ ಕೂಲಿ, ಹೆಚ್ಚುವ ಲಾಭ, ಬಂಡವಲದ ಸುರಿಮಳೆ, ಹುಟ್ಟುವಳಿಯಲ್ಲಿ ಹೆಚ್ಚಳ— ಈ ಆರ್ಥಿಕ ಅಶೋಕ ಚಕ್ರ ತಿರುಗಬೇಕಾಗಿದೆ.

ಹೆಚ್ಚುತ್ತಿರುವ ಜನಸಂಖ್ಯೆ ಹಾಗು ತಗ್ಗುತ್ತಿರುವ ಹುಟ್ಟುವಳಿ ಇದರಿಂದ ಉಂಟಾಗಿರುವ ಆಹಾರದ ಕೊರತೆ—ಈ ಸಮಸ್ಯೆಯನ್ನೇ ಭಾರತವು ಮುಖ್ಯವಾಗಿ ಎದುರಿಸಬೇಕಾಗಿದೆ. 'ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೆ?' ಎನ್ನುವ ಸಂಸಾರಿಗ ವೇದಾಂತಿಗಳ ಮಾತನ್ನು ಬಿಟ್ಟರೂ, ತಜ್ಞರಲ್ಲಿಯೇ— ಭಾರತದ ಜನಸಂಖ್ಯೆ ಭಾರತವು ಪೋಷಿಸಲಾರದಷ್ಟು ಹೆಚ್ಚಿದೆಯೇ ಎನ್ನುವ ವಿಷಯವಾಗಿ, ತೀವ್ರ ಭಿನ್ನಾಭಿಪ್ರಾಯಗಳಿವೆ. ಭಾರತದ ನಿಸರ್ಗಸಂಪತ್ತು ಜನಸಂಪತ್ತು ಇವುಗಳನ್ನು ನೋಡಿದರೆ, ಇದಕ್ಕೂ ಹೆಚ್ಚಿನ ಜನಸಂಖ್ಯೆಯನ್ನು ಭಾರತವು ಪೋಷಿಸಬಲ್ಲದು ಎಂದು ಕೆಲವರು ಹೇಳುತ್ತಾರೆ. 'ಉಣ್ಣುವ ಒಂದು ಬಾಯಿಯೊಡನೆ ದುಡಿಯುವ ಎರಡು ಕೈಗಳೂ ಇವೆ' ಎಂಬುದನ್ನು ಇವರು ನಂಬಿದಂತೆ ಕಾಣುತ್ತದೆ. ಆದರೆ ದುಡಿಯುವ ಕೈಗಳು ದುಡಿಯುವುದಿಲ್ಲವೆಂದೋ ಏನೋ! ಜನಸಂಖ್ಯೆ ಬೆಳೆದರೂ ಹುಟ್ಟುವಳಿ ಹೆಚ್ಚಾಗಿಲ್ಲ.

ಭಾರತದ ವಿಭಜನೆಯಿಂದ ಹುಟ್ಟಿದ ನಿರಾಶ್ರಿತರ ಸಮಸ್ಯೆಯಿಂದ, ಉಣ್ಣುವ ಬಾಯಿಗಳೂ, ದುಡಿಯದ ಇಲ್ಲವೆ ದುಡಿಯಲಾರದ ಕೈಗಳೂ ಹೆಚ್ಚಾಗಿ, ಈ ಪ್ರಮೇಯ ಮತ್ತಿಷ್ಟು ಗಡುಚಾಗಿದೆ.

ಸಿಂಧ, ಪಂಜಾಬಗಳ ನೀರಾವರಿಯ ಹುಲುಸಾದ ನೆಲ— ಭಾರತದ ಧಾನ್ಯದ ಉಗ್ರಾಣ— ಪಾಕಿಸ್ತಾನಕ್ಕೆ ಸೇರಿದುದರಿಂದ, ವಿಭಜನೆಯ ನೋವಲು ಅಕ್ಕೆಯೊಂದನ್ನು ಬಿಟ್ಟು ಉಳಿದ ಆಹಾರ ಧಾನ್ಯಗಳ ವಿಷಯದಲ್ಲಿ ಸ್ವಯಂ ಪರಿಪೂರ್ಣವಾಗಿದ್ದ ಭಾರತ, ಇಂದು ಆಹಾರದ ಕೋಠಾನ್ನ ಭಿಕ್ಷೆಗಾಗಿ ಕಂಡ ಕಂಡ ಕಡೆಗೆ ಅಂಡಲೆಯಬೇಕಾಗಿದೆ. ಈಗ ನಾವು ಹೆಚ್ಚು ಬೆಳೆದರೆಯೇ ಬಾಳ ಬಲ್ಲೆವು.

ಹುಟ್ಟುವಳಿ ಹೆಚ್ಚಾಗಬೇಕಾದರೆ ನೆಲದ ಬಲ ಬೇಕು. ಭೂಮಾತೆಗೆ ನೀರಾವರಿಯ ನೀರನ್ನೂ ಗೊಬ್ಬರದ ಕಾಣಿಕೆಯನ್ನೂ, ಯಂತ್ರ ದೇವತೆಗೆ ಹೊಸ ಯಂತ್ರಗಳ ಮಂತ್ರವನ್ನೂ ಒಪ್ಪಿಸಿ ಆ ಬಲ ಪಡೆಯಬೇಕು. ಸಿಂದ್ರಿಯಲ್ಲಿ ಕೇಂದ್ರ ಸರಕಾರದವರು ಗೊಬ್ಬರದ ಕಾರಖಾನೆಯನ್ನು ಸ್ಥಾಪಿಸಿದ್ದಾರೆ. ನೀರಾವರಿಗಾಗಿ ಅಣೆಕಟ್ಟು ಹಾಗು ಟ್ಯೂಬ್ ಬಾವಿಗಳ ಯೋಜನೆ ನಡೆದಿದೆ. ಜಾಗತಿಕ ಬ್ಯಾಂಕು, ಟ್ರ್ಯಾಕ್ಟರುಗಳನ್ನು ಕೊಳ್ಳಲಿಕ್ಕೆ—ರೇಲ್ವೆಯ ಯಂತ್ರಸಾಮಗ್ರಿಗಳಿಗೆ—ಭಾರತಕ್ಕೆ ಹಣವನ್ನು ಒದಗಿಸಿದೆ.

ಅನ್ನಪೂರ್ಣೆ ಪ್ರಸನ್ನಳಾಗಬೇಕಾದರೆ, ದುಡಿಮೆಯ ತಪಸ್ಸು ಬೇಕು. ಜೊಜ್ಜಲು ಮಕ್ಕಳಾದ ಒಕ್ಕಲಿಗರು, ಆಕ್ಕರೆಯ ಕಾರ್ಮಿಕರು ತೆರಿಲ್ಲದೆ ದುಡಿದು ಭಾರತದ ಭಾಗ್ಯಲಕ್ಷ್ಮಿಯನ್ನು ಬರಮಾಡಿಕೊಳ್ಳಬೇಕು. ದುಡಿಯುವವರ ಸ್ಥಿತಿಗತಿ ಸುಧಾರಿಸಿ, ಅವರಿಗೆ ದುಡಿಮೆಯ ಸರಿ ಾದ ಫಾಲು ಸಿಗಬೇಕೆಂದೇ ಸರಕಾರದವರು ಜಮೀನುದಾರಿಕೆಯನ್ನು ನಿರ್ಮೂಲಮಾಡಿದ್ದಾರೆ. ಒಕ್ಕಲಿಗರ ಸಾಲಪರಿಹಾರದ ಕಾಯ್ದೆಗಳನ್ನು ಮಾಡಿದ್ದಾರೆ. ರೈತ ಕಾಯ್ದೆ (Tenancy Act) ಮಾಡಿ, ಉಳುವವನೇ ಹೊಲದೊಡೆಯನೆಂಬ ತತ್ತ್ವವನ್ನು ಬಳಕೆಯಲ್ಲಿ ತಂದಿದ್ದಾರೆ. ಕಾರಖಾನೆಗಳಲ್ಲಿಯ ಕೂಲಿಕಾರರಿಗಾಗಿ ಉದ್ಯಮಗಳಲ್ಲಿಯ ಹಿತಸಂಬಂಧಗಳ (Industrial Relations Act) ಕಾಯದೆ ಮೊದಲಾದವುಗಳನ್ನು ಮಾಡಿದ್ದಾರೆ.

ಅನ್ನಪೂರ್ಣೆಯರಾದ ಭೂಮಾತೆ ಹಾಗು ಯಂತ್ರದೇವತೆ ಇವರ ಪೂಜೆಗೆ ಬಂಡವಲದ ದಕ್ಷಿಣೆ ಬೇಕು. ಸರಕಾರ ತಮ್ಮ ಉದ್ಯೋಗಗಳನ್ನು ರಾಷ್ಟ್ರೀಕರಣ ಮಾಡುವುದೆಂಬ ಅಂಜಿಕೆಯಿಂದ, ಬಂಡವಾಗಾರರು ಹಿಂದೆ ಸರಿದಿದ್ದಾರೆ. ಬಂಡವಲ ಪೇಟೆಯ ಆಧಾರಸ್ತಂಭವಾಗಿದ್ದ ಮಧ್ಯಮ ವರ್ಗ, ಯುದ್ಧದಿಂದ ಉಧ್ವಸ್ತವಾಗಿದೆ.

ಜನಸಾಮಾನ್ಯರು, ಒಕ್ಕಲಿಗರು, ಕೂಲಿಕಾರರು ಮುಂದೆ ಬಂದು ನ್ಯಾಶನಲ್ ಸೇವಿಂಗ್ ಸರ್ಟಿಫಿಕೇಟುಗಳನ್ನು ಕೊಂಡು, ಒತ್ತಾಯದ ಉಳಿತಾಯದ ಯೋಜನೆಯಲ್ಲಿ ಸರಕಾರದೊಡನೆ ಸಹಕಾರ ಮಾಡಿ, ಬಂಡವಲದ ಬರವನ್ನು ದೂರಮಾಡಬೇಕು.

ನೆಲದ ಬಲಕ್ಕೆ ಬಂಡವಲದ ಬೆಂಬಲ ದೊರೆತು, ದುಡಿತದ ಜೋಡು ಕೂಡಿದರೆ, ಈ ತ್ರಿವೇಣೀ ಸಂಗಮದಿಂದ ಹೆಚ್ಚಿನ ಹುಟ್ಟುವಳಿಯ ಧಾರೆಹರಿಯುವುದು.

ನಾವು ಹೆಚ್ಚು ದುಡಿದು ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯಬೇಕು. ಉದ್ಯಮಗಳ ಹುಟ್ಟುವಳಿಯನ್ನು ಹೆಚ್ಚಿಸಬೇಕು. ಮಿತವ್ಯಯದಿಂದ ಹಣವನ್ನು ಉಳಿಸಿ, ಹೆಚ್ಚಿನ ಹುಟ್ಟುವಳಿಗೆ ಅವಶ್ಯವಿರುವ ಬಂಡವಲವನ್ನು ಬೆಳೆಸಬೇಕು. ಆಂದರೆಯೇ ನಮ್ಮ ಆರ್ಥಿಕ ದುರವಸ್ಥೆ ದೂರವಾಗುವುದು.

ನಿರೀಕ್ಷಕ

●

(ಪಕ್ಷಾತೀತ ವಾರಪತ್ರಿಕೆ) ಧಾರವಾಡ

ಸಂಪಾದಕರು : ಮುಳಿಯೆ ಗೋವರ್ಧನರಾಯರು

ವಾರ್ಷಿಕ ಚಂದಾ ೭ ರೂ. ಸ್ಥಳಿಕರಿಗೆ ೬-೪-೦

ಇಂದೇ ಚಂದಾದಾರರಾಗಿರಿ.

ನಮ್ಮಲ್ಲಿ ದೊರೆಯುವ ಪುಸ್ತಕಗಳು

ಪ್ರೇಮಕಲಾ	....	....	೧—೮—೦
ಅನಂಗರಂಗ	....	....	೧—೮—೦
ಕಾಮಕುಂಜ	....	....	೧—೮—೦
ವಿಕೃತಕಾಮ	....	....	೧—೮—೦
ಕಾಮಶಾಸ್ತ್ರ	....	....	೧—೮—೦
(ವಾತ್ಸ್ಯಾಯನ ಸೂತ್ರಸಾರ)			
ದಾಂಪತ್ಯ ದರ್ಶನ	....	....	೧—೮—೦
ಬಾಳಿನ ಹದ	....	....	೧—೮—೦
ಸೌಂದರ್ಯವಿಚಾರ	....	....	೦—೪೦—

ಹಣ ಮುಂಗಡ ಕಳಿಸಬೇಕು.

ಶ್ರೀಕಾಂತ ಮತ್ತು ಕಂಪನಿ, ಧಾರವಾಡ.

ನವಯುಗಾರಂಭ

'ಆನಂದಕಂದ'

೧

ಇಂದಿನುದಯ ರವಿ ತಂದಿಹನ್ನೈ ತ-
ನ್ನೊಂದಿಗೆ ನವಯುಗವ;
ಇಂದಿನ ಮಧುರ ಸಮೀರ ಹರಡುತಿಹ
ಸ್ವಾತಂತ್ರ್ಯದ ಸೊಗವ-
ಇಂದಿನ ಉಸಿರಾಟಕೆ ತಡೆಯಿಲ್ಲವು; ಕಳಚಿ ಕೊರಳ
ನೊಗವ—
ಹೊಂದಿಹನ್ನೈ ಮನ-ಮನವು ರೆಕ್ಕೆಗಳ—ವಿಹರಿಸಿಹವು
ಖಗವ,
ಪ್ರಳಯದಿಳೆಯ ತಮ ಮರೆಯಾಯ್ತೋ—ಕಡ-
ಲೊಳಗಿನ ನೌಕೆಯು ಕರೆಗಾಯ್ತೋ—ಮನು-
ಕುಲದ ಬಾಳ ಗೋಳದು ಹೋಯ್ತೋ!
ಉಳಿದಿವೆ ಶಕ್ತಿಯ ಬೀಜಗಳೆಲ್ಲವು; ಕಂಡೆವು ನವ-
ಯುಗವ—
ಬೆಳೆಯು ಕೊಂಡು ನಾವಿನ್ನು ಬಲಿಯಬೇಕಾಗಿದೆ ಹೊಸ-
ಜಗವ!
ಇಂದಿನುದಯ ರವಿ ತಂದಿಹನ್ನೈ ತ-
ನ್ನೊಂದಿಗೆ ನವಯುಗವ;
ಮುಂದಿ ಕಾಣುತಿದೆ ಭಾರತಮಾತೆಯ
ಚೆಂದದ ನಗುಮೊಗವ.

೨

ಇಂದು ಹುಟ್ಟಿದಣುಗನಿಗೆ ಇಲ್ಲವೈ
ಪರದಾಸ್ಯದ ಹೊಲೆಯು—
ಬೆಂದು ಹೋಯ್ತು ದೆಸೆದೆಸೆಗಳಲ್ಲಿಯೂ
ಹಗೆಯು ಹೆಣೆದ ಬಲೆಯು.
ಹಿಂದೆ ತಿಂದ ಕೂಳೇನು ಕೊಟ್ಟಿತೋ—ಬರಿಯೆ ಹೆಂದೆ-
ತನವ!
ಇಂದು ಉಂಡ ಊಟವಿದು ತುಂಬುತಿದೆ ಮನದಿ ಮನುಜ-
ಗುಣವ!
ತುಂಡುಗೊಂಡ ಎದೆ ಬೆಸೆದಿಹವೋ—ಜನ-
ಮುಂಡಲದಸುಗಳ ಹೊಸೆದಿಹವೋ—ರಣ-
ಚಂಡಿಯ ಕಂಗಳ ಕೊಸೆದಿಹವೋ!
ಯಾವ ಭಾವ ಕಂಡಿರುವ ಕನಸು ಮೈಗೊಳುತಲಿಂದು
ಬಂತೋ!
ಯಾವ ಯೋಗ ಸಾಧನವು ನಮಗೆ ಸಂಸಿದ್ಧಿಯನ್ನು
ತಂತೋ!
ಇಂದಿನುದಯ ರವಿ ತಂದಿಹನ್ನೈ, ತ-
ನ್ನೊಂದಿಗೆ ನವಯುಗವ;
ಕುಂದದಿರುವ ಪ್ರಭೆಯಿಂದ ಬೆಳಗುವನು
ಭಾಗ್ಯೋದಯ ನಗವ!

೩

ದೇವನು ಮಾನವ ಮಾನಕಳಿದು ಲ—
ಪ್ರಳಯ ಕಳೆದನಂದು;
ಮಾನವ ದೇವನ ಸ್ಥಾನಕೇರಿ ಈ—
ಪ್ರಳಯುವಳವದನಿಂದು.
ದೇವನೊಬ್ಬನೇ ತಂದ ಯುಗಗಳವು ವೈಷಮ್ಯದ ಒಡಲು—
ಮಾನವನೇ ಮೂಡಿಸಿದೀ ನವಯುಗ ಸಮತೆಯ
ಸವಿಗಡಲು!
ಭಾರತ ಶಕ್ತಿಯು ದುಡಿದುಡಿದು—ಕರೆ
ತಂದಿದೆ ಕಾಲದ ಕೈ ಹಿಡಿದು—ಇದೆ
ಲೋಕದ ಕಂಗಳ ತೆರೆಸುವುದು....!
ದಾನವತೆಯ ಮೂಲವನೇ ಮುರಿಯುವೆನೆನ್ನುವುದೀ
ಯುಗವು.
ಮಾನವರೆದೆಯೊಳೆ ದೇವನಿರುವುದನು ಕಾಂಬುದಿನ್ನು
ಜಗವು!
ಇಂದಿನುದಯರವಿ ತಂದಿಹನ್ನೈ, ತ-
ನ್ನೊಂದಿಗೆ ನವಯುಗವ—
ಇಂದಿನ ಗಾಳಿಯು ಗೀತಿಸುತಿದೆ ಇದೆ
ಸ್ವಾತಂತ್ರ್ಯದ ಸೊಗವ!

೪

ತಾರಾ ಲೋಕದ ಮೇಗಣಿಂದ ಋಷಿ-
ವೃಂದವು ಹರಸುತಿದೆ;
ಭಾರತಕುಲ ಪಿತೃಗಣವು ಸ್ವರ್ಗದಿಂ
ಹೂಮಳೆ ಸುರಿಸುತಿದೆ.
ಬೆಳ್ಳಿಯ ಬೆಟ್ಟದ ಮೇಲೆ ತ್ರಿಶೂಲಿಯು ತಾಂಡವ
ತೊಡಗಿರುವ—
ಯಕ್ಷ-ರಕ್ಷ-ಗಂಧರ್ವ-ಕಿನ್ನರರ ಮೇಳ ಕೂಡಿಸಿರುವ!
ಪೂರ್ವ ಪಶ್ಚಿಮದ ಕಡಲುಗಳು— ಉ-
ಬ್ಬೇರಿ ಕುಣಿಯುತಿವೆ ಲಹರಿಗಳು—ದನಿ-
ಬೀರುತಿಹವು ದಿಗ್ಭೇರಿಗಳು!
ಕೃತ-ತ್ರೇತಾ-ದ್ವಾಪಾರ ಯುಗಂಗಳು ಕಾಣಿಕೆ
ತಂದಿಹವೋ—
ನವಯುಗಪುರುಷನ ಭವ್ಯಭವಿಷ್ಯವ ಉದ್ಘೋಷಿಸು-
ತಿಹವೋ!
ಇಂದಿನುದಯರವಿ ತಂದಿಹನ್ನೈ, ತ-
ನ್ನೊಂದಿಗೆ ನವಯುಗವ—
ಇಂದಿನ ಪಾವನ ಪವನ ಹರಡುತಿಹ
ಸ್ವಾತಂತ್ರ್ಯದ ಸೊಗವ!

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

★

(೨) ಶ್ರೀ ಶಾಂತಿಸಾಗರರಿಂದ ಸಮ್ಮೇದ ಶಿಖರದ ಯಾತ್ರೆ

" ಸತ್ತ್ವೇಷು ಮೈತ್ರೀಂ ಗುಣಿಷು ಪ್ರಮೋದಂ
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ
ಮಾಧ್ಯಸ್ಥಭಾವಂ ವಿಪರೀತವೃತ್ತೌ
ಸದಾ ಮಮಾತ್ಮಾ ವಿದಧಾತು ದೇವ! "

ಈ ಸಾಮಯಿಕ ಶ್ಲೋಕವು ನಮ್ಮನ್ನೆಚ್ಚರಿಸಿತು. ಪ್ರವಾಸದ ದಣಿವು, ನಿದ್ರೆಯ ಕೊರತೆಗಳಿಂದ—ನಾವೆಲ್ಲಿ ಮಲಗಿರುವೆವೆಂಬುದರ ಅರಿವೂ ಅಳಿಯುವಂತೆ, ಆ ಬೆಳಗಿನ ನಿದ್ರೆ ನಮ್ಮನ್ನು ಆವರಿಸಿದ್ದಿತು. ಮೇಲಿನ ಶ್ಲೋಕವು ಕಿವಿಗೆ ಬಿದ್ದಾಗ, ನಾವು ನಾಂದಗಾಂವದ ಬಸದಿಯಲ್ಲಿ ವಸತಿ ಮಾಡಿದ್ದೇವೆಂಬುದರ ಅರಿವುಂಟಾಯಿತು. ಗಡಬಡಿಸಿ ಎದ್ದು ಕುಳಿತೆ. ಸುತ್ತಲೂ ನೋಡಿದೆ. ದೂರದಲ್ಲಿ ಬ್ರಹ್ಮಚಾರಿಗಳು ಧ್ಯಾನಸ್ಥರಾಗಿ ಕುಳಿತಿದ್ದಾರೆ. ಊರೊಳಗಿನ ಶ್ರಾವಕರಲ್ಲಿ ಒಬ್ಬಿಬ್ಬರು, ಆಗೊಮ್ಮೆ ಈಗೊಮ್ಮೆ ಜಿನದರ್ಶನಕ್ಕೆ ಬಂದು ಹೋಗುತ್ತಿದ್ದಾರೆ. ಮಂದಿರದಲ್ಲಿ ಸುಳಿದಾಡುವವರಲ್ಲೆಲ್ಲ ಚಟುವಟಿಕೆ ಕಂಡು ಬರುತ್ತಲಿದೆ. 'ದೇವಾ, ನನ್ನ ಆತ್ಮನು ಸಾತ್ತ್ವಿಕರಲ್ಲಿ ಮೈತ್ರಿಯನ್ನೂ ಗುಣಿಗಳಲ್ಲಿ ಪ್ರೇಮವನ್ನೂ ದುಃಖಿಗಳಲ್ಲಿ ದಯವನ್ನೂ ದುಷ್ಟರಲ್ಲಿ ಮಧ್ಯಸ್ಥ ಭಾವವನ್ನೂ ತಾಳಲಿ!' ಎಂಬ ಶ್ರುತಿಯನ್ನು ತಿರುತಿರುಗಿ ವಿಚಾರಿಸುತ್ತ— ಆ ಧ್ವನಿಯು ಕೇಳಬಂದ ಜಿನಮಂದಿರದ ಮೇಲ್ಮಾಳಿಗೆಯ ಕಡೆಗೆ ನೋಡುತ್ತ— ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಬರಲಿಕ್ಕೆ ಹೊರಗೆ ಹೊರಟೆ.

ಆಸರಿಚಿತ ಸ್ಥಳವಾದುದರಿಂದ, ತಿರುಗಿ ಬರಲಿಕ್ಕೆ ಸ್ವಲ್ಪ ವಿಲಂಬವಾಯಿತು ತಂದೆ–ತಾಯಂದಿರು ಸ್ನಾನವನ್ನು ತೀರಿಸಿಕೊಂಡುದೂ ಇದಕ್ಕೊಂದು ಕಾರಣವಾಗಿದ್ದಿತು. ನಾವೆಲ್ಲ 'ಶಿಸ್ತಾಗಿ' ಬಂದೆವೆಂದುಕೊಂಡಿದ್ದರೆ, ಬ್ರಹ್ಮಚಾರಿಗಳು 'ಸುಸ್ತಾಯಿತಲ್ಲ!' ಎಂದು ಛೇಡಿಸಿದ್ದರು. ಊರ ಜನರೆಲ್ಲ ಬಂದು ಶ್ರೀಗಳವರ ದರ್ಶನ ತಕ್ಕೊಂಡು ಹೋದರೂ ನಿಮ್ಮ ಸುಳಿವಿಲ್ಲವೆಂದು ಕೂಗಾಡಿದರು. ಅವಸರದಿಂದ ಪೇಟೆಗೆ ಹೋಗಿ ತೆಂಗಿನ ಕಾಯಿಗಳನ್ನು ತರಲಿಕ್ಕೆ ಹೇಳಿದರು. ಅಗಿನ್ನೂ ಅಂಗಡಿಗಳ ಬಾಗಿಲು ತೆರೆದಿರಲಿಲ್ಲ. ಹತ್ತೆಂಟು ಸಲ ಪೇಟೆಯನ್ನೆಲ್ಲ ಸುತ್ತಾಡಿದೆ. ಹಾಗೇ ಹೋಗಿ ಮುನಿಗಳನ್ನು ಬರಿಗೈಯಿಂದ ಕಾಣುವಂತಿರಲಿಲ್ಲ. ಕಾಯಿಗಳನ್ನು ಕೊಳ್ಳಬೇಕಾದರೆ ಹೊತ್ತೇರುವಂತಿದ್ದಿತು. ಏನು ಮಾಡಬೇಕೆಂಬ ವಿಚಾರದಲ್ಲಿ ನಿಂತಿರುವಾಗ, ಹಿರಿಯರೂ ಅಲ್ಲಿಗೆ ಬಂದರು. ಅತುರಗೊಂಡು ಬ್ರಹ್ಮಚಾರಿಗಳು ಅವರನ್ನೂ ಪೇಟೆಗೆ ಅಟ್ಟಿದ್ದರು ನಾವು ಎಷ್ಟು ಅವಸರ ಮಾಡಿದರೂ—ನೊದಲುಕ್ಕು ತೆರೆದ ಅಂಗಡಿಯಲ್ಲಿ ನಾಲ್ಕು ತೆಂಗಿನ ಕಾಯಿಗಳಿಗೆ ಎಂಟಾಣೆ ಹೆಚ್ಚು ಕೊಟ್ಟು ಕೊಂಡೂ ಕೂಡ ಶ್ರೀಗಳವರ ದರ್ಶನವನ್ನು ಪಡೆಯಲಿಕ್ಕೆ ತಾಸು ಹೊತ್ತೇರಿತು!

ಕೃಶವಾದ ದೇಹ, ನೀರನ್ನು ಕಾಣದೆ ಪರೆಯೆದ್ದು ಬಿಳುಪು ಗೊಂಡ ಹುಣಿಸೆ ಬಣ್ಣದ ಶುಷ್ಕ ಮೈ, ಉದ್ದವಾದ ದೇಹಯಷ್ಟಿ, ಒಳಹೊಕ್ಕ ಗಲ್ಲಗಳು, ವಿಶಾಲವಾದ ಹಣೆ, ನೀಟಾದ ಮೂಗು, ಎಂಥವರ ಮೇಲೂ ಪ್ರಭಾವವನ್ನು ಬೀರುವಂತಹ ಕಣ್ಣುಗಳುಳ್ಳ ಚಾರಿತ್ರ್ಯ ಚಕ್ರವರ್ತಿಗಳು. ಜಿನಮಂದಿರದ ಮೇಲಂತಸ್ತಿನಲ್ಲಿ ಕುಳಿತಿದ್ದಾರೆ. ಅವರ ಹತ್ತಿರವೇ ಕುಳಿತು ಶ್ರೀನೇಮಿಸಾಗರರು ಪ್ರಾತಃಕಾಲದ ಪ್ರಾರ್ಥನೆಗಳನ್ನು ಉಚ್ಚ ಕಂಠದಿಂದ ಓದುತ್ತಿದ್ದಾರೆ. ಅವರೂ 'ನಿರ್ಗ್ರಂಥ' ಮುನಿಗಳು. ಜನ ಬಂದು ದರ್ಶನ ಪಡೆದು ಹೋಗುತ್ತಿದೆ. ಹಣ್ಣು–ಹೂಗಳು ರಾಶಿರಾಶಿಯಾಗಿ ಎದುರಿಗೆ ಬಿದ್ದಿವೆ. ವಿಶೇಷ ಆಸ್ಥೆಯುಳ್ಳ ಹಲವರು ಅಲ್ಲಿಯೇ ಕುಳಿತಿದ್ದಾರೆ. ನಾವೂ ಹೋಗಿ ದರ್ಶನ ತಕ್ಕೊಂಡು ಕುಳಿತು ಕೊಂಡೆವು. ಶ್ರೀಗಳೊಮ್ಮೆ ಬ್ರಹ್ಮಚಾರಿಗಳನ್ನು ಬೆರಗಿನ ದೃಷ್ಟಿಯಿಂದ ಕಂಡು, ತಮ್ಮ ನೋಟವನ್ನು ಮರಳಿ ಮೂಗಿನ ತುದಿಯಲ್ಲಿ ನಿಲ್ಲಿಸಿದರು. ಪ್ರಾರ್ಥನೆ ಹಾಗೆಯೆ ಮುಂದೆ ಸಾಗಿದ್ದಿತು.

ಸ್ವಲ್ಪ ಹೊತ್ತು ನನಗೆ ಶ್ರೀಶಾಂತಿಸಾಗರರನ್ನು ನಿರೀಕ್ಷಿಸಲಿಕ್ಕೆ ಅವಕಾಶ ಸಿಕ್ಕಿತು. ನಮ್ಮೂರಿಗೆ ಶ್ರೀಗಳವರು ಬಂದರೂ ಅವರ ದರ್ಶನಕ್ಕೆ ಹೋಗದ ಜೈನ ಶ್ರಾವಕ ನಾನು! ಕನ್ನಡದ ಕೆಲಸ ವಾಗುವುದು, ಸಮಾಜವನ್ನು ಕಟ್ಟಲಿಕ್ಕೆ—ರಾಷ್ಟ್ರದ ಮುಂದಿನ ಪ್ರಜೆಗಳನ್ನು—ಅಲ್ಲ—ಮುಂದಾಳುಗಳನ್ನು ನಿರ್ಮಾಣ ಮಾಡುವುದಕ್ಕೆ—ಒಂದು ಆಶ್ರಮ ನನಗೆ ಕೆಲಸ ಮಾಡಲಿಕ್ಕೆ ದೊರೆಯುವುದು; ಶ್ರೀಶಾಂತಿಸಾಗರ ಆಶ್ರಮವನ್ನು ಕರ್ನಾಟಕದ ಶಾಂತಿನಿಕೇತನವನ್ನಾಗಿ ಮಾಡಬಹುದೆಂದು ನಿರೀಕ್ಷಿಸಿ, ಆಗ ಅವರ ಹತ್ತಿರ ನಾನು ಹೋಗಿದ್ದೆ. ಅರೇಳು ತಿಂಗಳುಗಳಿಂದ ಧಾನ್ಯಾಹಾರವನ್ನು ತ್ಯಜಿಸಿ, ಹರಿಜನ ಮಂದಿರಪ್ರವೇಶ ಬಿಲ್ಲಿನ ವಿರುದ್ಧ ಎದ್ದ ಚಳವಳಿಯ ಸೂತ್ರಧಾರರಾಗಿದ್ದ ಅವರ ಕೃಶವಾದ ದೇಹವು ಮಾತ್ರ ನನ್ನ ಮನಸ್ಸಿನ ಮೇಲೆ ಪರಿಣಾಮ ಮಾಡುವಂತಿರಲಿಲ್ಲ. ಆತ್ಮಶ್ರೀಯನ್ನು ಬಯಸುವ ಕನ್ನಡ ತರುಣನಿಗೆ, ಆ ದೇಹದಂಡನೆಯನ್ನು ಕಂಡು, ಮೊದಲ ಕ್ಷಣಕ್ಕೆ ಮಗುಕವುಂಟಾಯಿತು.

ಪ್ರಾರ್ಥನೆಯು ಮುಗಿದ ತರುವಾಯ, ಶ್ರೀಗಳವರೇ ಮಾತನಾಡಿಸಿದರು. ಮೊದಲು ಆಶ್ರಮದ ಸ್ಥಿತಿಗತಿಗಳನ್ನು ಕೇಳಿ ಕೊಂಡರು. ನಮ್ಮ ಪರಿಚಯ ಮಾಡಿಕೊಂಡರು. ಅವರ ಮನಸ್ಸು ಪ್ರಸನ್ನವಾಗಿದ್ದುದನ್ನು ಕಂಡು, ಬ್ರಹ್ಮಚಾರಿಗಳು, ನನಗೆ ಆಶ್ರಮದ ಹೊಣೆಯನ್ನು ಒಪ್ಪಿಸುವ ವಿಚಾರವನ್ನು ಆಚಾರ್ಯರ ಮುಂದಿಟ್ಟರು. ಕನ್ನಡ ಕಲಿಸುವ ಯೋಜನೆಯನ್ನೂ ಹೇಳಿದರು. ಮಹಾರಾಜರು, ನನಗೆ ಸದ್ಯಕ್ಕೆ ಆಶ್ರಮದಲ್ಲಿ ಮುಖ್ಯಾಧ್ಯಾಪಕನಾಗಿರ.

ಲಿಕ್ಕೆ ಸೂಚಿಸಿದರು. ಬ್ರಹ್ಮಚಾರಿಗಳೇ ಇನ್ನೂ ಕೆಲವು ದಿನ ಆಶ್ರಮವನ್ನು ನೋಡಿಕೊಳ್ಳುವುದೆಂದು ಗೊತ್ತಾಯಿತು. ಕನ್ನಡವನ್ನು ಕ್ರಮದಿಂದ ಆರಂಭಿಸಬಹುದೆಂದೂ ಒಪ್ಪಿದರು.

ಅಲ್ಲಿ ನನ್ನ ಕೆಲಸ ತೀರಿತು. ಆಶ್ರಮದ ಆರ್ಥಿಕ ಹೊಣೆಯನ್ನು ಬ್ರಹ್ಮಚಾರಿಗಳು ನೋಡಿಕೊಳ್ಳುವರು; ನಾನು ಶಿಕ್ಷಕನಾಗಿದ್ದು, ನಾಡಿನ ಜನತೆಗೆ ಬೇಕಾದಂತೆ ಸಂಸ್ಥೆಯನ್ನು ರೂಪಿಸಬಹುದು. ಇದೊಂದು ಒಳ್ಳೆಯದೇ ಆಯಿತೆಂದೆ. ಮರುಕ್ಷಣದಲ್ಲಿ 'ಬ್ರಹ್ಮಚಾರಿಗಳ ದೃಷ್ಟಿಕೋಣಕ್ಕೂ ನನಗೂ ಹೊಂದಿಕೆಯಾಗುವುದೆಂತು?' ಎಂಬ ಪ್ರಶ್ನೆಯೂ ನನ್ನ ಬಗೆಗಣ್ಣಿನೆದುರಿಗೆ ನಿಲ್ಲದಿರಲಿಲ್ಲ. ಆದರೆ ನನ್ನ ಮನಸ್ಸಿನ ಒಲವು ಆಗ ಕನ್ನಡದ ಕಡೆಗೆ ಹೆಚ್ಚಾಗಿದ್ದುದರಿಂದ, ಆ ಪ್ರಶ್ನೆಗೊಂದು ಸಮಾಧಾನ ಸಿಕ್ಕಲಿಕ್ಕೆ ಹೆಚ್ಚು ಹೊತ್ತು ಹತ್ತುವಂತಿರಲಿಲ್ಲ. ಅಲ್ಲದೆ, ಶ್ರೀಗಳವರ ತಿಳಿವಳಿಕೆಯ ಬಗ್ಗೆ ನನ್ನಲ್ಲಿ ಆದರವೂ ಉತ್ಪನ್ನವಾಗಿತ್ತು. ಆದರೂ ಶ್ರೀಶಾಂತಿಸಾಗರರನ್ನು ಶ್ರಾವಕರು ಭಯ ಭಕ್ತಿ, ನಯ ವಿನಯಗಳಿಂದ ಅಷ್ಟು ಸೇವಿಸುವುದನ್ನು ಕಂಡರೆ, ನನಗಿನ್ನೂ ಆಶ್ಚರ್ಯವಾಗುತ್ತಿತ್ತು! ಇಂಥದೇನಿದೆ ಇವರಲ್ಲಿ? ಜನತೆಗೆ ಇವರಿಂದ ಸಿಗಬೇಕಾದುದೇನು? ನಾಡು ಇವರ ತಪಸ್ಸಿನಿಂದ ಪಡೆದದ್ದೇನು? ಸಮಾಜಕ್ಕೆ ಇವರು ತೋರಿಸುವ ದಾರಿಯಾವುದು? ಇವರು ತಮ್ಮ ಆತ್ಮಕಲ್ಯಾಣಕ್ಕೆ ತಪಸ್ಸನ್ನಾಚರಿಸುವುದಾದರೆ, ಜನರು ಇವರನ್ನೇಕೆ ಸೇವಿಸಬೇಕು? ಒಂದು ವೇಳೆ ಇವರು ಜನರನ್ನೆಲ್ಲ ಹೀಗೆಯೇ ಇರಿಸಿ, ತಾವೊಬ್ಬರೇ ಮುಕ್ತರಾಗುವಂತಿದ್ದರೆ ಅದಕ್ಕೇನು ಬೆಲೆ? ಮಹಾತ್ಮಾಜಿಯವರಿಗೂ ಇವರಿಗೂ ಇರುವ ಸ್ಥಾನ-ಮಾನಗಳು ಭಿನ್ನಭಿನ್ನವಾಗಿರಲಿಕ್ಕೆ ಇದೇ ಕಾರಣವಾಗಿರಬೇಕೆ?—ಇತ್ಯಾದಿ ನೂರಾರು ಪ್ರಶ್ನೆಗಳು ನನ್ನ ತಲೆಯಲ್ಲಿ ಉದ್ಭವಿಸಿದ್ದುವು. ಶಾಂತಿಸಾಗರರ ಸನ್ನಿಧಿಯಲ್ಲಿ ಶಾಂತನಾಗಿರುವುದನ್ನು ಬಿಟ್ಟು ಕಳವಳಗೊಂಡಿದ್ದೆ, ತಳಮಳಿಸುತ್ತಿದ್ದೆ.

"ನಿಮಗೆ ಅಡಿಗೆ ಮಡಿಯಿಂದ ಆಗಬೇಕೋ, ಹಾಗೇ ಇದ್ದರೆ ನಡೆಯುವುದೋ?

ಬಸದಿಗೆ ಬಂದ ಶ್ರಾವಕರೊಬ್ಬರ ಈ ಪ್ರಶ್ನೆಯಿಂದ, ಮನೋಲೋಕದಿಂದ ಮನುಲೋಕಕ್ಕಿಳಿದೆ. ಮೆಲ್ಲಗೆ ಹೇಳಿದೆ:

"ಯಾವುದಿದ್ದರೂ ಆಗಬಹುದು!"

"ಹಾಗಾದರೆ ಬನ್ನಿರಿ!"

ಎಂದು ಕರೆದು ಅವರು ಮುಂದೆ ಸಾಗಿದರು. ನಾನು ಬೆಪ್ಪನಾಗಿ ಹುಸು ಹೊತ್ತು ನಿಂತೆ. ಮುನಿಗಳು ಆಹಾರಕ್ಕೆ ತೆರಳಿದ ಮೇಲೆ, ನಮ್ಮ ಅಡಿಗೆಯನ್ನು ನಾವು ಮಾಡಿಕೊಳ್ಳತಕ್ಕದ್ದೆಂದು ನಮ್ಮ ನಮ್ಮಲ್ಲಿ ಮಾತಾಡಿಕೊಂಡಿದ್ದೆವು. ಅದರಿಂದ ಸ್ವಲ್ಪ ಗೊಂದಲದಲ್ಲಿ ಬಿದ್ದೆ. ಅದನ್ನು ಕಂಡು ಅಲ್ಲಿಯ ವ್ಯವಸ್ಥಾಪಕರು ನನ್ನ ಹತ್ತಿರ ಬಂದು ಹೀಗೆ ತಿಳಿಸಿಹೇಳಿದರು:

"ನಿಮ್ಮೆಲ್ಲರಿಗೂ ಒಂದೊಂದು ಕಡೆಗೆ ವ್ಯವಸ್ಥೆ ಮಾಡಿದೆ. ಹೋಗಲಿಕ್ಕೆ ಅಡ್ಡಿಯಿಲ್ಲ. ಸ್ವಾಮಿಗಳೂ ಇಷ್ಟರಲ್ಲಿಯೇ ಭಿಕ್ಷೆಗೆ ಹೊರಡಬಹುದು."

ಆಯಿತು. ನಾಸಿಕ ಜಿಲ್ಲೆಯ ಜನರ ಊಟದ ಪದ್ಧತಿಯೊಂದನ್ನು ನೋಡಲಿಕ್ಕೆ ಸಿಕ್ಕಿತಲ್ಲ—ಎಂದುಕೊಂಡು, ಅವರ ಬೆನ್ನು ಹತ್ತಿದೆ. ಸ್ವಾಮಿಗಳ ಪ್ರಭಾವದಿಂದ ಶ್ರಮವಿಲ್ಲದೆ ಊಟಕ್ಕೆ ದೊರೆಯಿತಲ್ಲ—ಎಂಬ ವಿಚಾರವು ಮನದಲ್ಲಿ ಮೂಡಿದಾಗ, ಮುಖದಲ್ಲಿ ಮುಗುಳುನಗೆಯೊಂದು ಮಿಂಚಿತು. ಹಾಗೆಯೇ ಅವರ ಸಂಗಡ ಸಾಗಿದೆ. ಹೋಗಿ ಅವರ ಕೂಡ ಊಟವನ್ನು ಮಾಡಿದೆ. ಅಲ್ಲಿಯ ಊಟದಲ್ಲೇನೂ ವಿಶೇಷವೆನಿಸಲಿಲ್ಲ. ಕರ್ನಾಟಕದಲ್ಲಿಯ ಜನರ ಊಟಕ್ಕೂ ನಾಸಿಕ ಜಿಲ್ಲೆಯ ಜನರ ಊಟಕ್ಕೂ ಹೆಚ್ಚಿಗೇನೂ ವ್ಯತ್ಯಾಸವಿಲ್ಲ. ಇಲ್ಲಿ ನಮ್ಮ ಮನೆ ಬಿಟ್ಟು ಇನ್ನೊಬ್ಬರಲ್ಲಿ ಊಟಕ್ಕೆ ಹೋದಾಗ, ಅಡಿಗೆಯೊಳಗೆ ಕಾರ, ಹುಳಿ, ಸೀಗಳಲ್ಲಿ ಆಲ್ಪ ಸ್ವಲ್ಪ ಅಂತರ ಕಂಡುಬರುವಂತೆ, ಆ ಊಟದಲ್ಲಿ ಕಂಡು ಬಂದಿತಷ್ಟೇ. ನಮ್ಮಲ್ಲಿಯ ಊಟದಂತೆಯೇ ಅಲ್ಲಿಯ ಊಟವಾದರೂ ಇದ್ದಿತು ಅತಿಥಿಗಳಿಗಾಗಿ ಮಾವಿನ ಹಣ್ಣಿನ ರಸ—ಗೋದಿಯ ರೊಟ್ಟಿಗಳನ್ನು ತಯಾರಿಸಿದಂತಿತ್ತು.

ಊಟದಲ್ಲಿ ವಿಶೇಷ ವೈಶಿಷ್ಟ್ಯವನ್ನು ಕಾಣದಿದ್ದರೂ, ಆ ಮನೆತನದ ಸಂಸ್ಕೃತಿಯಲ್ಲಿ ಒಂದು ವಿಶೇಷತೆಯನ್ನು ಕಾಣುವಂತಿದ್ದಿತು. ಮುನಿಗಳ ದರ್ಶನಕ್ಕೆ ಬಂದ ಆ ಮನೆತನದ ಮುಖ್ಯಸ್ಥನು, ಸಂಪ್ರದಾಯ ಶರಣನಾದ ಒಬ್ಬ ಸದ್‌ಗೃಹಸ್ಥನಂತೆ ಕಾಣುತ್ತಿದ್ದ. ಅವರ ಮನೆಯಲ್ಲಿ ಹೋಗಿ ಬಂಕದಲ್ಲಿ ಕುಳಿತಾಗ—ಅತ್ಯಾಧುನಿಕ ಉಪಕರಣಗಳಿಂದ ಸುಸಜ್ಜಿತವಾದ ಆ ಸ್ಥಳವನ್ನು ಕಂಡರೆ— ಅವನು ಎಷ್ಟು ಪ್ರಾಂಭಿಕನಿರುವನೆಂಬುದು ತಿಳಿದು ಬರುವಂತಿತ್ತು. ಒಳಗೆ

ಭಿಷಗ್ರತ್ನ ಆಯುರ್ವೇದ ವಿದ್ಯಾನ್ ಬಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಡಿ. ಮಿಡ್ಡಿ ಅಣ್ಣಾರಾಯರು, ಉಗಾರ

★

(೨) ಶ್ರೀ ಶಾಂತಿಸಾಗರರಿಂದ ಸಮ್ಮೇದ ಶಿಖರದ ಯಾತ್ರೆ

" ಸತ್ತ್ವೇಷು ಮೈತ್ರೀಂ ಗುಣಿಷು ಪ್ರಮೋದಂ
ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ
ಮಾಧ್ಯಸ್ಥಭಾನಂ ವಿಪರೀತವೃತ್ತೌ
ಸದಾ ಮಮಾತ್ಮಾ ವಿದಧಾತು ದೇವ! "

ಈ ಸಾಮುಯಿಕ ಶ್ಲೋಕವು ನನ್ನನ್ನೆಚ್ಚರಿಸಿತು. ಪ್ರವಾಸದ ನನೆವು, ನಿದ್ರೆಯ ಕೊರತೆಗಳಿಂದ—ನಾನೆಲ್ಲಿ ಮಲಗಿರುವೆನೆಂಬುದರ ಅರಿವೂ ಆಳಿಯುವಂತೆ, ಆ ಬೆಳಗಿನ ನಿದ್ರೆ ನಮ್ಮನ್ನು ಆವರಿಸಿದ್ದಿತು. ಮೇಲಿನ ಶ್ಲೋಕವು ಕಿವಿಗೆ ಬಿದ್ದಾಗ, ನಾವು ನಾಂದಗಾಂವದ ಬಸದಿಯಲ್ಲಿ ವಸತಿ ಮಾಡಿದ್ದೇವೆಂಬುದರ ಅರಿವುಂಟಾಯಿತು. ಗಡಬಡಿಸಿ ಎದ್ದು ಕುಳಿತೆ. ಸುತ್ತಲೂ ನೋಡಿದೆ. ದೂರದಲ್ಲಿ ಬ್ರಹ್ಮಚಾರಿಗಳು ಧ್ಯಾನಸ್ಥರಾಗಿ ಕುಳಿತಿದ್ದಾರೆ. ಊರೊಳಗಿನ ಶ್ರಾವಕರಲ್ಲಿ ಒಬ್ಬಿಬ್ಬರು, ಆಗೊಮ್ಮೆ ಈಗೊಮ್ಮೆ ಜಿನದರ್ಶನಕ್ಕೆ ಬಂದು ಹೋಗುತ್ತಿದ್ದಾರೆ. ಮಂದಿರದಲ್ಲಿ ಸುಳಿದಾಡುವವರಲ್ಲೆಲ್ಲ ಚಟುವಟಿಕೆ ಕಂಡು ಬರುತ್ತಲಿದೆ. 'ದೇವಾ, ನನ್ನ ಆತ್ಮನು ಸಾತ್ತ್ವಿಕರಲ್ಲಿ ಮೈತ್ರಿಯನ್ನೂ ಗುಣಿಗಳಲ್ಲಿ ಪ್ರೇಮವನ್ನೂ ದುಃಖಿಗಳಲ್ಲಿ ದಯವನ್ನೂ ದುಷ್ಟರಲ್ಲಿ ಮಧ್ಯಸ್ಥ ಭಾವವನ್ನೂ ತಾಳಲಿ!' ಎಂಬ ಶ್ರುತಿಯನ್ನು ತಿದುತಿರುಗಿ ವಿಚಾರಿಸುತ್ತ— ಆ ಧ್ವನಿಯು ಕೇಳಬಂದ ಜಿನಮಂದಿರದ ಮೇಲ್ಮಾಳಿಗೆಯ ಕಡೆಗೆ ನೋಡುತ್ತ— ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಬರಲಿಕ್ಕೆ ಹೊರಗೆ ಹೊರಟೆ.

ಅಪರಿಚಿತ ಸ್ಥಳವಾದುದರಿಂದ, ತಿರುಗಿ ಬರಲಿಕ್ಕೆ ಸ್ವಲ್ಪ ವಿಲಂಬವಾಯಿತು ತಂದೆ-ತಾಯಂದಿರು ಸ್ನಾನವನ್ನು ತೀರಿಸಿಕೊಂಡುನೂ ಇದಕ್ಕೊಂದು ಕಾರಣವಾಗಿದ್ದಿತು. ನಾವೆಲ್ಲ 'ಶಿಸ್ತಾಗಿ' ಬಂದೆವೆಂದುಕೊಂಡಿದ್ದರೆ, ಬ್ರಹ್ಮಚಾರಿಗಳು 'ಸುಸ್ತಾಯಿತಲ್ಲ!' ಎಂದು ಕೇಳಿದ್ದರು. ಊರ ಜನರೆಲ್ಲ ಬಂದು ಶ್ರೀಗಳವರ ದರ್ಶನ ತಕ್ಕೊಂಡು ಹೋದರೂ ನಿಮ್ಮ ಸುಳಿವಿಲ್ಲವೆಂದು ಕೂಗಾಡಿದರು. ಅವರಿಂದ ಪೇಟೆಗೆ ಹೋಗಿ ತೆಂಗಿನ ಕಾಯಿಗಳನ್ನು ತರಲಿಕ್ಕೆ ಹೇಳಿದರು. ಆಗಿನ್ನೂ ಅಂಗಡಿಗಳ ಬಾಗಿಲು ತೆರೆದಿರಲಿಲ್ಲ. ಹತ್ತೆಂಟು ಸಲ ಪೇಟೆಯನ್ನೆಲ್ಲ ಸುತ್ತಾಡಿದೆ. ಹಾಗೇ ಹೋಗಿ ಮುನಿಗಳನ್ನು ಬರಿಗೈಯಿಂದ ಕಾಣುವಂತಿರಲಿಲ್ಲ. ಕಾಯಿಗಳನ್ನು ಕೊಳ್ಳಬೇಕಾದರೆ ಹೊತ್ತೇರುವಂತಿದ್ದಿತು. ಏನು ಮಾಡಬೇಕೆಂಬ ವಿಚಾರದಲ್ಲಿ ನಿಂತಿರುವಾಗ, ಹಿರಿಯರೂ ಅಲ್ಲಿಗೆ ಬಂದರು. ಅತುರ ಗೊಂಡು ಬ್ರಹ್ಮಚಾರಿಗಳು! ಅವರನ್ನೂ ಪೇಟೆಗೆ ಅಟ್ಟಿದ್ದರು ನಾವು ಎಷ್ಟು ಅವಸರ ಮಾಡಿದರೂ—ನೊದಲು ತೆರೆದ ಅಂಗಡಿಯಲ್ಲಿ ನಾಲ್ಕು ತೆಂಗಿನ ಕಾಯಿಗಳಿಗೆ ಎಂಟಾಣೆ ಹೆಚ್ಚು ಕೊಟ್ಟು ಕೊಂಡೂ ಕೂಡ ಶ್ರೀಗಳವರ ದರ್ಶನವನ್ನು ಪಡೆಯಲಿಕ್ಕೆ ತಾವು ಹೊತ್ತೇರಿತು!

ಕೃಶವಾದ ದೇಹ, ನೀರನ್ನು ಕಾಣದೆ ಪರೆಯೆದ್ದು ಬಿಳುಪುಗೊಂಡ ಹುಣಿಸೆ ಬಣ್ಣದ ಶುಷ್ಕ ನೈ, ಉದ್ದವಾದ ದೇಹಯಷ್ಟಿ ಒಳಹೊಕ್ಕ ಗಲ್ಲಗಳು, ವಿಶಾಲವಾದ ಹಣೆ, ನೀಟಾದ ಮೂಗು ಎಂಥವರ ಮೇಲೂ ಪ್ರಭಾವವನ್ನು ಬೀರುವಂತಹ ಕಣ್ಣುಗಳು ಚಾರಿತ್ರ್ಯ ಚಕ್ರವರ್ತಿಗಳು. ಜಿನಮಂದಿರದ ಮೇಲಂತಸ್ತಿನ ಕುಳಿತಿದ್ದಾರೆ. ಅವರ ಹತ್ತಿರವೇ ಕುಳಿತು ಶ್ರೀನೇಮಿಸಾಗರರು ಪ್ರಾತಃಕಾಲದ ಪ್ರಾರ್ಥನೆಗಳನ್ನು ಉಚ್ಚ ಕಂಠದಿಂದ ಓದುತ್ತಿದ್ದಾರೆ. ಅವರೂ 'ನಿರ್ಗ್ರಂಥ' ಮುನಿಗಳು. ಜನ ಬಂದು ದರ್ಶನ ಪಡೆದು ಹೋಗುತ್ತಿದೆ. ಹಣ್ಣು-ಹೂಗಳು ರಾಶಿರಾಶಿಯಾಗಿ ಎದುರಿಗೆ ಬಿದ್ದಿವೆ. ವಿಶೇಷ ಆಸ್ಥೆಯುಳ್ಳ ಹಲವರು ಅಲ್ಲಿಯೇ ಕುಳಿತಿದ್ದಾರೆ. ನಾವೂ ಹೋಗಿ ದರ್ಶನ ತಕ್ಕೊಂಡು ಕುಳಿತು ಕೊಂಡೆವು. ಶ್ರೀಗಳೊಮ್ಮೆ ಬ್ರಹ್ಮಚಾರಿಗಳನ್ನು ಬೆರಗಿನ ದೃಷ್ಟಿಯಿಂದ ಕಂಡು, ತಮ್ಮ ನೋಟವನ್ನು ಮರಳಿ ಮೂಗಿನ ತುದಿಯಲ್ಲಿ ನಿಲ್ಲಿಸಿದರು. ಪ್ರಾರ್ಥನೆ ಹಾಗೆಯೆ ಮುಂದೆ ಸಾಗಿದ್ದಿತು.

ಸ್ವಲ್ಪ ಹೊತ್ತು ನನಗೆ ಶ್ರೀಶಾಂತಿಸಾಗರರನ್ನು ನಿರೀಕ್ಷಿಸಲಿಕ್ಕೆ ಅವಕಾಶ ಸಿಕ್ಕಿತು. ನಮ್ಮೂರಿಗೆ ಶ್ರೀಗಳವರು ಬಂದರೂ ಅವರ ದರ್ಶನಕ್ಕೆ ಹೋಗದ ಜೈನ ಶ್ರಾವಕ ನಾನು! ಕನ್ನಡದ ಕೆಲಸ ವಾಗುವುದು, ಸಮಾಜವನ್ನು ಕಟ್ಟಲಿಕ್ಕೆ—ರಾಷ್ಟ್ರದ ಮುಂದಿನ ಪ್ರಜೆಗಳನ್ನು—ಅಲ್ಲ—ಮುಂದಾಳುಗಳನ್ನು ನಿರ್ಮಾಣ ಮಾಡುವುದಕ್ಕೆ—ಒಂದು ಆಶ್ರಮ ನನಗೆ ಕೆಲಸ ಮಾಡಲಿಕ್ಕೆ ದೊರೆಯುವುದು; ಶ್ರೀಶಾಂತಿಸಾಗರ ಆಶ್ರಮವನ್ನು ಕರ್ನಾಟಕದ ಶಾಂತಿನಿಕೇತನವನ್ನಾಗಿ ಮಾಡಬಹುದೆಂದು ನಿರೀಕ್ಷಿಸಿ, ಆಗ ಅವರ ಹತ್ತಿರ ನಾನು ಹೋಗಿದ್ದೆ. ಅರೇಳು ತಿಂಗಳುಗಳಿಂದ ಧಾನ್ಯಾಹಾರವನ್ನು ತ್ಯಜಿಸಿ, ಹರಿಜನ ಮಂದಿರಪ್ರವೇಶ ಬಿಲ್ಲಿನ ವಿರುದ್ಧ ಎದ್ದ ಚಳವಳಿಯ ಸೂತ್ರಧಾರರಾಗಿದ್ದ ಅವರ ಕೃಶವಾದ ದೇಹವು ಮಾತ್ರ ನನ್ನ ಮನಸ್ಸಿನ ಮೇಲೆ ಪರಿಣಾಮ ಮಾಡುವಂತಿರಲಿಲ್ಲ. ಆತ್ಮಶ್ರೀಯನ್ನು ಬಯಸುವ ಕನ್ನಡ ತರುಣನಿಗೆ, ಆ ದೇಹದಂಡನೆಯನ್ನು ಕಂಡು, ಮೊದಲ ಕ್ಷಣಕ್ಕೆ ಮರುಕವುಂಟಾಯಿತು.

ಪ್ರಾರ್ಥನೆಯು ಮುಗಿದ ತರುವಾಯ, ಶ್ರೀಗಳವರೇ ಮಾತನಾಡಿಸಿದರು. ಮೊದಲು ಆಶ್ರಮದ ಸ್ಥಿತಿಗತಿಗಳನ್ನು ಕೇಳಿಕೊಂಡರು. ನನ್ನ ಪರಿಚಯ ಮಾಡಿಕೊಂಡರು. ಅವರ ಮನಸ್ಸು ಪ್ರಸನ್ನವಾಗಿದ್ದುದನ್ನು ಕಂಡು, ಬ್ರಹ್ಮಚಾರಿಗಳು, ನನಗೆ ಆಶ್ರಮದ ಹೊಣೆಯನ್ನು ಒಪ್ಪಿಸುವ ವಿಚಾರವನ್ನು ಆಚಾರ್ಯರ ಮುಂದಿಟ್ಟರು. ಕನ್ನಡ ಕಲಿಸುವ ಯೋಜನೆಯನ್ನೂ ಹೇಳಿದರು. ಮಹಾರಾಜರು, ನನಗೆ ಸದ್ಯಕ್ಕೆ ಆಶ್ರಮದಲ್ಲಿ ಮುಖ್ಯಾಧ್ಯಾಪಕನಾಗಿರೆ.

ಲಿಕ್ಕೆ ಸೂಚಿಸಿದರು. ಬ್ರಹ್ಮಚಾರಿಗಳೇ ಇನ್ನೂ ಕೆಲವು ದಿನ ಆಶ್ರಮವನ್ನು ನೋಡಿಕೊಳ್ಳುವುದೆಂದು ಗೊತ್ತಾಯಿತು. ಕನ್ನಡವನ್ನು ಕ್ರಮದಿಂದ ಆರಂಭಿಸಬಹುದೆಂದೂ ಒಪ್ಪಿದರು.

ಅಲ್ಲಿ ನನ್ನ ಕೆಲಸ ತೀರಿತು. ಆಶ್ರಮದ ಆರ್ಥಿಕ ಹೊಣೆಯನ್ನು ಬ್ರಹ್ಮಚಾರಿಗಳು ನೋಡಿಕೊಳ್ಳುವರು; ನಾನು ಶಿಕ್ಷಕನಾಗಿದ್ದು, ನಾಡಿನ ಜನತೆಗೆ ಬೇಕಾದಂತೆ ಸಂಸ್ಥೆಯನ್ನು ರೂಪಿಸಬಹುದು. ಇದೊಂದು ಒಳ್ಳೆಯದೇ ಆಯಿತೆಂದೆ. ಮರುಕ್ಷಣದಲ್ಲಿ 'ಬ್ರಹ್ಮಚಾರಿಗಳ ದೃಷ್ಟಿಕೋಣಕ್ಕೂ ನನಗೂ ಹೊಂದಿಕೆಯಾಗುವುದೆಂತು?' ಎಂಬ ಪ್ರಶ್ನೆಯೂ ನನ್ನ ಬಗೆಗಣ್ಣಿನೆದುರಿಗೆ ನಿಲ್ಲದಿರಲಿಲ್ಲ. ಆದರೆ ನನ್ನ ಮನಸ್ಸಿನ ಒಲವು ಆಗ ಕನ್ನಡದ ಕಡೆಗೆ ಹೆಚ್ಚಾಗಿದ್ದುದರಿಂದ, ಆ ಪ್ರಶ್ನೆಗೊಂದು ಸಮಾಧಾನ ಸಿಕ್ಕಲಿಕ್ಕೆ ಹೆಚ್ಚು ಹೊತ್ತು ಹತ್ತುವಂತಿರಲಿಲ್ಲ. ಅಲ್ಲದೆ, ಶ್ರೀಗಳವರ ತಿಳಿವಳಿಕೆಯ ಬಗ್ಗೆ ನನ್ನಲ್ಲಿ ಆದರವೂ ಉತ್ಪನ್ನವಾಯಿತು. ಆದರೂ ಶ್ರೀಶಾಂತಿಸಾಗರರನ್ನು ಶ್ರಾವಕರು ಭಯ ಭಕ್ತಿ, ನಯ ವಿನಯಗಳಿಂದ ಅಷ್ಟು ಸೇವಿಸುವುದನ್ನು ಕಂಡರೆ, ನನಗಿನ್ನೂ ಆಶ್ಚರ್ಯವಾಗುತ್ತಿತ್ತು! ಇಂಥದೇನಿದೆ ಇವರಲ್ಲಿ? ಜನತೆಗೆ ಇವರಿಂದ ಸಿಗಬೇಕಾದುದೇನು? ನಾಡು ಇವರ ತಪಸ್ಸಿನಿಂದ ಪಡೆದದ್ದೇನು? ಸಮಾಜಕ್ಕೆ ಇವರು ತೋರಿಸುವ ದಾರಿಯಾವುದು? ಇವರು ತಮ್ಮ ಆತ್ಮಕಲ್ಯಾಣಕ್ಕೆ ತಪಸ್ಸನ್ನಾಚರಿಸುವುದಾದರೆ, ಜನರು ಇವರನ್ನೇಕೆ ಸೇವಿಸಬೇಕು? ಒಂದು ವೇಳೆ ಇವರು ಜನರನ್ನೆಲ್ಲ ಹೀಗೆಯೇ ಇರಿಸಿ, ತಾವೊಬ್ಬರೇ ಮುಕ್ತರಾಗುವಂತಿದ್ದರೆ ಅದಕ್ಕೇನು ಬೆಲೆ? ಮಹಾತ್ಮಾಜಿಯವರಿಗೂ ಇವರಿಗೂ ಇರುವ ಸ್ಥಾನ-ಮಾನಗಳು ಭಿನ್ನಭಿನ್ನವಾಗಿರಲಿಕ್ಕೆ ಇದೇ ಕಾರಣವಾಗಿರಬೇಕೆ?—ಇತ್ಯಾದಿ ನೂರಾರು ಪ್ರಶ್ನೆಗಳು ನನ್ನತಲೆಯಲ್ಲಿ ಉದ್ಭವಿಸಿದ್ದುವು. ಶಾಂತಿಸಾಗರರ ಸನ್ನಿಧಿಯಲ್ಲಿ ಶಾಂತನಾಗಿರುವುದನ್ನು ಬಿಟ್ಟು, ಕಳವಳಗೊಂಡಿದ್ದೆ, ತಳಮಳಿಸುತ್ತಿದ್ದೆ.

"ನಿನುಗೆ ಅಡಿಗೆ ಮಡಿಯಿಂದ ಆಗಬೇಕೋ, ಹಾಗೇ ಇದ್ದರೆ ನಡೆಯುವುದೋ?

ಬಸದಿಗೆ ಬಂದ ಶ್ರಾವಕರೊಬ್ಬರ ಈ ಪ್ರಶ್ನೆಯಿಂದ, ಮನೋಲೋಕದಿಂದ ಮನುಲೋಕಕ್ಕಿಳಿದೆ. ನೆಲ್ಲಗೆ ಹೇಳಿದೆ:

"ಯಾವುದಿದ್ದರೂ ಆಗಬಹುದು!"

"ಹಾಗಾದರೆ ಬನ್ನಿರಿ!"

ಎಂದು ಕರೆದು ಅವರು ಮುಂದೆ ಸಾಗಿದರು. ನಾನು ಬೆಪ್ಪನಾಗಿ ತುಸು ಹೊತ್ತು ನಿಂತೆ. ಮುನಿಗಳು ಆಹಾರಕ್ಕೆ ತೆರಳಿದ ಮೇಲೆ, ನಮ್ಮ ಅಡಿಗೆಯನ್ನು ನಾವು ಮಾಡಿಕೊಳ್ಳತಕ್ಕದ್ದೆಂದು ನಮ್ಮ ನಮ್ಮಲ್ಲಿ ಮಾತಾಡಿಕೊಂಡಿದ್ದೆವು. ಅದರಿಂದ ಸ್ವಲ್ಪ ಗೊಂದಲದಲ್ಲಿ ಬಿದ್ದೆ. ಅದನ್ನು ಕಂಡು ಅಲ್ಲಿಯ ವ್ಯವಸ್ಥಾಪಕರು ನನ್ನ ಹತ್ತಿರ ಬಂದು ಹೀಗೆ ತಿಳಿಸಿಹೇಳಿದರು:

"ನಿಮ್ಮೆಲ್ಲರಿಗೂ ಒಂದೊಂದು ಕಡೆಗೆ ವ್ಯವಸ್ಥೆ ಮಾಡಿದೆ. ಹೋಗಲಿಕ್ಕೆ ಆಡ್ಡಿಯಿಲ್ಲ. ಸ್ವಾಮಿಗಳೂ ಇಷ್ಟರಲ್ಲಿಯೇ ಭಿಕ್ಷೆಗೆ ಹೊರಡಬಹುದು."

ಆಯಿತು. ನಾಸಿಕ ಜಿಲ್ಲೆಯ ಜನರ ಊಟದ ಪದ್ಧತಿಯೊಂದನ್ನು ಸದ್ಯ ನೋಡಲಿಕ್ಕೆ ಸಿಕ್ಕಿತಲ್ಲ—ಎಂದುಕೊಂಡು, ಅವರ ಬೆನ್ನು ಹತ್ತಿದೆ. ಸ್ವಾಮಿಗಳ ಪ್ರಭಾವದಿಂದ ಶ್ರಮವಿಲ್ಲದೆ ಊಟಕ್ಕೆ ದೊರೆಯಿತಲ್ಲ—ಎಂಬ ವಿಚಾರವು ಮನದಲ್ಲಿ ಮೂಡಿದಾಗ, ಮುಖದಲ್ಲಿ ಮುಗುಳುನಗೆಯೊಂದು ಮಿಂಚಿತು. ಹಾಗೆಯೇ ಆವರ ಸಂಗಡ ಸಾಗಿದೆ. ಹೋಗಿ ಅವರ ಕೂಡ ಊಟವನ್ನು ಮಾಡಿದೆ. ಆಲ್ಲಿಯ ಊಟದಲ್ಲೇನೂ ವಿಶೇಷವೆನಿಸಲಿಲ್ಲ. ಕರ್ನಾಟಕದಲ್ಲಿಯ ಜನರ ಊಟಕ್ಕೂ ನಾಸಿಕ ಜಿಲ್ಲೆಯ ಜನರ ಊಟಕ್ಕೂ ಹೆಚ್ಚಿಗೇನೂ ವ್ಯತ್ಯಾಸವಿಲ್ಲ. ಇಲ್ಲಿ ನಮ್ಮ ಮನೆ ಬಿಟ್ಟು ಇನ್ನೊಬ್ಬರಲ್ಲಿ ಊಟಕ್ಕೆ ಹೋದಾಗ, ಅಡಿಗೆಯೊಳಗೆ ಕಾರ, ಹುಳಿ, ಸೀಗಳಲ್ಲಿ ಅಲ್ಪ ಸ್ವಲ್ಪ ಅಂತರ ಕಂಡುಬರುವಂತೆ, ಆ ಊಟದಲ್ಲಿ ಕಂಡು ಬಂದಿತಷ್ಟೇ. ನಮ್ಮಲ್ಲಿಯ ಊಟದಂತೆಯೇ ಅಲ್ಲಿಯ ಊಟವಾದರೂ ಇದ್ದಿತು ಅತಿಥಿಗಳಿಗಾಗಿ ಮಾವಿನ ಹಣ್ಣಿನ ರಸ—ಗೋದಿಯ ರೊಟ್ಟಿಗಳನ್ನು ತಯಾರಿಸಿದಂತಿತ್ತು.

ಊಟದಲ್ಲಿ ವಿಶೇಷ ವೈಶಿಷ್ಟ್ಯವನ್ನು ಕಾಣದಿದ್ದರೂ, ಆ ಮನೆತನದ ಸಂಸ್ಕೃತಿಯಲ್ಲಿ ಒಂದು ವಿಶೇಷತೆಯನ್ನು ಕಾಣುವಂತಿದ್ದಿತು. ಮುನಿಗಳ ದರ್ಶನಕ್ಕೆ ಬಂದ ಆ ಮನೆತನದ ಮುಖ್ಯಸ್ಥನು, ಸಂಪ್ರದಾಯ ಶರಣನಾದ ಒಬ್ಬ ಸದ್‌ಗೃಹಸ್ಥನಂತೆ ಕಾಣುತ್ತಿದ್ದ. ಆವರ ಮನೆಯಲ್ಲಿ ಹೋಗಿ ಬಂಕದಲ್ಲಿ ಕುಳಿತಾಗ—ಅತ್ಯಾಧುನಿಕ ಉಪಕರಣಗಳಿಂದ ಸುಸಜ್ಜಿತವಾದ ಆ ಸ್ಥಳವನ್ನು ಕಂಡರೆ— ಅವನು ಎಷ್ಟು ಪ್ರಾಂಭಿಕನಿರುವನೆಂಬುದು ತಿಳಿದು ಬರುವಂತಿತ್ತು. ಒಳಗೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚತವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ಸಂಜೀವಿನಿ ಪ್ರಕಾಶನ, ಹುಬ್ಬಳ್ಳಿ

ಮುಂದಿನ ೬೦ ದಿನಗಳಲ್ಲಿ ನಾಲ್ಕು ಗ್ರಂಥಗಳು

ನಾಮಿಕ ಚಂದಾ ೫೦೦ ರಜಿಸ್ಟರ್) ಪೂರ್ಣ ವೆಚ್ಚಕೇರಿ

ಸಂಪಾದಕರು— ಕಲಮುದಾನಿ ಗುರುರಾಯರು

ಹೊಸೆಯ ವರ್ಷದ ಎರಡನೆಯ ಗ್ರಂಥ

ಆಶಾ

[ಸಾಮಾಜಿಕ ಕಾದಂಬರಿ]

ಇದೀಗ ಹೊರಟಿದೆ. ಬೇಗ ಚಂದಾದಾರರಾಗಿರಿ.

ಊಟಕ್ಕೆ ಹೋದಾಗ, ಮಡಿಯುಟ್ಟುಕೊಂಡು ಮೌನಿಯಾಗಿ ಅತ ಊಟ ಬಡಿಸುವುದನ್ನು ಕಂಡಿತೆ, ಮತ್ತೆ ನಮ್ಮ ಕಲ್ಪನೆಯು ತಲೆಕೆಳಗಾಗಿ ಬಿಡುವುದು. ಆ ಮೇಲೆ ಆತ ಬಿ. ಎ, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ವ್ಯಾಪಾರವೆ ರಂಗವಲ್ಲಿ ಕಾಲಿಟ್ಟವನೆಂಬುದನ್ನು ತಿಳಿದುಕೊಂಡಿತೆ, ಅವರ ಮನೆತನದಲ್ಲಿಯ—ಪೂರ್ವ-ಪಶ್ಚಿಮ ಸಂಸ್ಕೃತಿಗಳ ಸಂಗಮದಿಂದುಂಟಾದ—ಒಳ್ಳೆಯ ಸಂಸ್ಕಾರದ ಕಲ್ಪನೆಯು ಬರುತಿತ್ತಿದ್ದಿತು. ನಮ್ಮ ಬಾಳಿನಲ್ಲಿಯೂ ಬೆಳಕು ಬೀರುತಿತ್ತಿದ್ದಿತು.

ನಾನು ಆ ಮನೆಯಲ್ಲಿ ಊಟ ತೀರಿಸಿಕೊಂತು ಬೀದಿಗೆ ಇಳಿಯುವಷ್ಟರಲ್ಲಿ, ತಂದೆ-ತಾಯಂದಿರೂ ಇನ್ನೊಬ್ಬರಲ್ಲಿ ಊಟ ಮುಗಿಸಿಕೊಂತು ಅಲ್ಲಿಗೇ ಬಂದರು. ಎಲ್ಲರೂ ಕೂಡಿ ಜಿನಮಂದಿರದ ಕಡೆಗೆ ನಡೆದವು. ಜಾದಿಯಲ್ಲಿ ಹಿರಿಯರು ಸಮ್ಮೇದ ಶಿಖರದ ಯಾತ್ರೆಗೆ ಹೊರಡುವುದನ್ನು ನಿಶ್ಚಯಿಸಿರುವುದಾಗಿ ತಿಳಿಸಿದರು. ಅವಕ್ಕೆ ಆಚಾರ್ಯರ ಆಶೀರ್ವಾದವೂ ಸಿಕ್ಕಿದೆಯೆಂದು ಸೂಚಿಸಿ ದೃಢಪಡಿಸಿದರು. ಅವರೂ ನಾನು ವಿಚಾರವಲ್ಲಿರುವುದನ್ನು ಕಂಡು, ತಾವು ದುಡ್ಡು ತಂದಿರುವುದಾಗಿಯೂ ಹೇಳಿದರು. ಅಲ್ಲದೆ ತಂದೆಯು :—

"ನಿನಗೆ ಹೆಚ್ಚಿಗೆ ರಜ ಸಿಕ್ಕುವುದಿಲ್ಲವೇ?" ಎಂದು ಕೇಳಿ, ಕುತೂಹಲದಿಂದ ನನ್ನ ಮುಖವನ್ನು ನೋಡತೊಡಗಿದರು.

"ರಜದ ಬಗ್ಗೆ ಬೇಕಾದದ್ದನ್ನು ಮಾಡಲಿಕ್ಕೆ ಬಂದೀತು."

"ಹಾಗಾದರೆ ನಮ್ಮನ್ನಿಷ್ಟು ಯಾತ್ರೆಮಾಡಿಸಿ ತಂದುಬಿಡು. ಇಲ್ಲಿಯ ವರೆಗೆ ಬಂದು ತಿರುಗಿಹೋಗುವುದು ಬೇಡ." ಎಂದು ತಾಯಿಯೂ ಮಾತನ್ನು ಮುಂದೆಚಾಚಿದರು.

'ಆಗಲಿ' ಎಂದುಕೊಂಡು ಮುನ್ನಡೆದೆ. ನನಗೂ ಪ್ರವಾಸ ಮಾಡುವ ಇಚ್ಛೆಯಿದ್ದಿತು. ಅಲ್ಲದೆ ಕನ್ನಡ ನಾಡಿನಲ್ಲಿ ಒಳ್ಳೆಯ ಶಿಕ್ಷಣ ಸಂಸ್ಥೆಯನ್ನು— ಗುರುಕುಲ ಪದ್ಧತಿಯಲ್ಲಿ— ಕಟ್ಟುವ ಪೂರ್ವದಲ್ಲಿ, ಗುರು ರವೀಂದ್ರರ ಶಾಂತಿನಿಕೇತನವನ್ನು ನೋಡಿ ಬರುವುದು ಸಯುಕ್ತಿಕವಾಗಿದ್ದಿತು. ಎರಡೂ ಸಾಧಿಸುವುದೆಂದು ಹಿಗ್ಗಿ, ಮುಂದಿನ ಪ್ರವಾಸದ ಚಿತ್ರವನ್ನು ಕಲ್ಪಿಸುತ್ತ ಕೇಳಿದೆ:

"ಮೂವರ ಯಾತ್ರೆಗೂ ಹಣ ಸಾಲುವಷ್ಟಿದೆಯೆ?"

"ಅದರ ಚಿಂತೆ ಬೇಡ; ನಿನ್ನ ರಜೆಯ ವಿಚಾರಮಾಡು!" ಎಂದು ಹಿರಿಯರಿಬ್ಬರೂ ಒಂದೇ ಕಂಠದಲ್ಲಿ ಹೇಳಿದರು.

ಆ ಮೇಲೆ ಮುಂದಿನ ಪ್ರವಾಸದ ಸಿದ್ಧತೆಗೆ ತೊಡಗಿದೆವು. ಜೇಟಿಯಲ್ಲಿ ಹೋಗಿ, ಪ್ರವಾಸದಲ್ಲಿ ಅಗತ್ಯವೆನಿಸುವ ಒಂದೆರಡು ಪಾತ್ರೆಗಳನ್ನೂ ಇದ್ದಲಿಯ ಒಲೆಯನ್ನೂ (ಸಿಗಡಿ) ಒಂದು ಚಿಕ್ಕ ಬಕೆಟ್ಟು-ನೂಲಿನ ಹಗ್ಗಗಳನ್ನೂ ಕೊಂಡೆವು. ಅಲ್ಲದೆ ಒಂದು ಬ್ಯಾಟರಿಯನ್ನೂ ಕಬ್ಬಿಣ ಹಂಚನ್ನೂ ಕೊಂಡುಕೊಂಡೆವು. ಈ ಸಂತೆಯನ್ನು ಮಾಡುವಾಗ, ನಾವು ಮುನಿಗಳ ದರ್ಶನಕ್ಕೆ ಬಂದವರೆಂಬುದು ಎಲ್ಲರಿಗೂ ಗೊತ್ತಾಯಿತು. ಮೇಲಾಗಿ ಇಲ್ಲಿ ಬಂದ ಮೇಲೆಯೇ ಸಮ್ಮೇದಗಿರಿಯ ಯಾತ್ರೆಗೆ ಹೋಗುವುದನ್ನು ನಿಶ್ಚಯಿಸಿರುವುದಾಗಿಯೂ ಸುದ್ದಿಯಾಯಿತು. ಇದನ್ನೆಲ್ಲ ಕೇಳಿದಾಗ, ಮುಂಜಾನೆ ತೆಂಗಿನಕಾಯಿಗಳನ್ನು ಕೊಳ್ಳಲಿಕ್ಕೆ ಹೋದಾಗ ನಮ್ಮಿಂದ ಎಂಟಾಣೆಗಳನ್ನು ಸುಲಿದ ಆ ವ್ಯಾಪಾರಿಗೆ ಏನೆನ್ನಿಸಿತೋ ಏನೋ! ನಮ್ಮನ್ನು ಅಂಗಡಿಯಲ್ಲಿ ಕರೆದು, ಎಂಟಾಣೆಗಳನ್ನು ತಿರುಗಿ, ಕೊಟ್ಟ. ಆ ಸಂದರ್ಭದಲ್ಲಿಯ ಅವನ ನಡೆ-ನುಡಿಗಳನ್ನು ಕಂಡರೆ, ಮಾನವನಲ್ಲಿಯ ಒಳ್ಳೆಯತನವು ಮುನಿಗಳ ಸನ್ನಿಧಿಯಲ್ಲಿ ಹೇಗೆ ವ್ಯಕ್ತವಾಗುವುದೆಂಬುದು ಒಡೆದುಕಾಣುವಂತಿದ್ದಿತು. ಆ ಒಂದು ದಿನದ ಬಳಕೆಯಲ್ಲಿ, ನಾಂದಗಾಂವದ ಜನರು ನಮ್ಮೊಡನೆ ನಡೆದುಕೊಂಡ ರೀತಿಯನ್ನು ನೆನೆದರೆ, ಆಚಾರ್ಯ ಶ್ರೀಶಾಂತಿಸಾಗರರ ಪ್ರಭಾವ ಆ ಊರ ಜನರ ಬಾಳಿನ ಮೇಲಾದುದನ್ನು ಅರಿತುಕೊಳ್ಳುವಂತಿದೆ. 'ಅವರೇಕೆ ಮಹಾತ್ಮಾ ಗಾಂಧೀಜಿಯವರಂತಾಗಿಲ್ಲ?' ಎಂಬ ಪ್ರಶ್ನೆಯು ನಮ್ಮ ಬಯಕೆಯ ಫಲವೇ ಹೊರತಾಗಿ ಬೇರೇನಿಲ್ಲ ಅವರ ಜೀವನದ ದೃಷ್ಟಿ, ಅವರಿಗಿದೆ, ಅದಕ್ಕೆ ತಕ್ಕ ಫಲವೂ ಇದೆ. ಇದ್ದುದನ್ನು ಇದ್ದಂತೆ—ಅದರಲ್ಲಿ ತಮ್ಮ ಬಯಕೆಯನ್ನು ಬೆರೆಸದೆ—ಕಾಣುವ ದೃಷ್ಟಿ ಮಾತ್ರ ಜನತೆಯಲ್ಲಿ ಬರಬೇಕು.

ಅದೇ ದಿನ ಇರುಳು, ನಾನು ಹಿರಿಯರನ್ನು ಕರೆದುಕೊಂಡು ಸಮ್ಮೇದ ಶಿಖರದ ಯಾತ್ರೆಗಾಗಿ ಮುಂದಿನ ಪ್ರಯಾಣ ಬೆಳೆಯಿಸಿದೆ. ಮುಂಬಯಿ-ಕಲಕತ್ತೆಗಳ ರೇಲ್ವೆ ಮಾರ್ಗದ ಮೇಲಿರುವ ಗೋಪೊ ನಿಲ್ದಾಣದಲ್ಲಿಳಿದು, ತಿರುಗಿ ಪಾರಿಶ್ವನಾಥ ನಿಲ್ದಾನೆಗೆ ಬಂದು, ಸಮ್ಮೇದ ಶಿಖರಕ್ಕೆ ಹೋಗುವುದೆಂದು ಮಾತ್ರ ನನಗೆ ಗೊತ್ತಿದ್ದಿತು. ಪಾರಿಶ್ವನಾಥ ಸ್ಟೇಶನಿನಲ್ಲಿ ಮೇಲು ಎಕ್ಸ್‌ಪ್ರೆಸ್ಸುಗಳು ನಿಲ್ಲುವುದಿಲ್ಲೆಂದು ಹೀಗೆ ಮಾಡಬೇಕಾಗುತ್ತಿದ್ದಿತು. ನಾನು ಕೇವಲ ಯಾತ್ರೆಗೆಂದು ಹೊರಟಿರಲಿಲ್ಲ. ಪ್ರವಾಸಕ್ಕೆಂದು ಹೊರಟಿದ್ದೆ. ನಾಡಿನ ನಾಡಿಗಳನ್ನು ಸಾಧ್ಯವಿದ್ದಷ್ಟು ಹಿಡಿದು ನೋಡಬೇಕೆಂಬಾಸೆ ಇತ್ತು. ಅದು ಸ್ವತಂತ್ರ ಭಾರತದಲ್ಲಿಯ ನನ್ನ ಮೊದಲ ಪ್ರವಾಸವಾಗಿತ್ತು. ಇದನ್ನೆಲ್ಲ ನೆನೆದು, ನಾನು ಅಲಹಾಬಾದದ ಟಿಕೀಟನ್ನು

ಪೊದಲು ಕೊಂಡೆ. ಆಗ ಅಲ್ಲಿಯ ಕರ್ನಾಟಕ ಸಂಘದ ನೆನಪೂ ನನಗೆ ಆಗದಿರಲಿಲ್ಲ.

ಮರುದಿನ ಇಳಿಹೊತ್ತಿನಲ್ಲಿ, ಐದು ಗಂಟೆಯ ಸುಮಾರಿಗೆ ನಮ್ಮ ರೈಲು ಜಿ. ಆಯ್. ಪಿ. ರೈಲ್ವೆಯ ಕಟನೀ ನಿಲ್ದಾಣಕ್ಕೆ ಬಂದು ತಲುಪಿತು. ಕಟನಿಯು ಸೀಸೆಂಟು ಕಾರಖಾನೆಗಾಗಿ ಉತ್ತರ ಹಿಂದುಸ್ತಾನದಲ್ಲೆಲ್ಲ ಪ್ರಸಿದ್ಧವಾಗಿದೆ. ಅಲ್ಲಿ ಗಾಡಿಯಲ್ಲಿ ಜನರು ಹೆಚ್ಚಾಗಿ ನುಗ್ಗಿದರು. ಇಲ್ಲಿಯ ವರೆಗೆ ಹಾಯಾಗಿ ಕುಳಿತ ನಮಗೆ —ದೀರ್ಘಕಾಲದ ಪ್ರವಾಸದಿಂದ ಬೇಸತ್ತುದರಿಂದಲೂ—ಈಗ ಸಂಕಟದಲ್ಲಿ ಸಿಕ್ಕಂತೆ ಎನಿಸಹತ್ತಿತು. ಹಿರಿಯರಂತೂ 'ನಮ್ಮ ಸಾಡು ಎಲ್ಲುಳಿಯಿತೋ, ನಾವೆಲ್ಲಿ ಬಂದೆವೋ!' ಎಂದುಕೊಂಡು ಗಾಬರಿಯಾದರು. ಅಪರಿಚಿತ ಜನ, ಅಪರಿಚಿತ ಭಾಷೆಗಳು ಅವರಿಗೆ ದಿಕ್ಕು ತಪ್ಪಿಸಿದ್ದುವು.

"ಇನ್ನೂ ಎಷ್ಟು ದೂರ ಸಮ್ಮೇದ ಶಿಖರ?" ಎಂದರು ತಂದೆ.

"ಹೀಗೆಯೇ ಹೋದರೆ ನಾಳೆ ಮಧ್ಯಾಹ್ನ ಮುಟ್ಟಬಹುದು!"

"ಅವ್ವಾ! ಬಹಳ ದೂರ ಅದ ಅಲ್ಲ!" ಎಂದು ಉದ್ಗಾರ ಹೊರಟಿತು, ತಾಯಿಯ ಬಾಯಿಂದ.

'ನಾಶಿಕದ ವರೆಗೆ ಹೋಗುವಿರಿ; ಸಮ್ಮೇದ ಶಿಖರಕ್ಕೂ ಹೋಗಿಯೆ ಬನ್ನಿರಿ' ಎಂದು ಮೊದಲಾಗಿ ಊರೊಳಗಿನ ಜನರು ಹೇಳಿದುದನ್ನು ಕೇಳಿ, ನಾಶಿಕದಿಂದ ಬಿಹಾರದೊಳಗಿರುವ ಸಮ್ಮೇದಗಿರಿಯು ಸಮೀಪದಲ್ಲಿಯೇ ಇರಬೇಕೆಂದು ಅವರು ಭಾವಿಸಿದ್ದರು. ಆದುದರಿಂದ, ಈಗ ಅವರು ವಿಚಾರಕ್ಕೆ ಒಳಗಾದರು. ಕಟನಿಯಿಂದ ಅಲಹಾಬಾದಕ್ಕೆ ಹೋಗಿ ತಲುಪುವಷ್ಟರಲ್ಲಿ ಚಿಂತೆಗೆ ಒಳಗಾಗುವಂತಹ ಒಂದು ಪ್ರಸಂಗವೂ ಒದಗಿತು.

ನಾವು ಆ ಸೀಮೆಗೆ ಹೊಸಬರೆಂಬುದನ್ನು ಅರಿತುಕೊಳ್ಳಲಿಕ್ಕೆ ಆ ರೈಲಿನ ಪ್ರಯಾಣಿಕರಿಗೆ ಹೆಚ್ಚು ಹೊತ್ತು ಹಿಡಿಯುವಂತಿರಲಿಲ್ಲ. ಅವರಲ್ಲಿಯೇ ಇದ್ದ ಜೇಬುಗಳ್ಳರು ನಮ್ಮನ್ನು ಆವರಿಸಿದರು. ನನ್ನ ತಾಯಿಯ ಹತ್ತಿರ ಸ್ಥಳವನ್ನು ಮಾಡಿಕೊಂಡು ಕುಳಿತ ಹೆಂಗುಸೊಬ್ಬಳನ್ನು ಶಮ್ಮ ಹಸ್ತಕಳನ್ನಾಗಿ ಮಾಡಿಕೊಂಡರು. ಅವಳೂ ಆ ಗುಂಪಿನವಳೇ ಇರಬಹುದೆಂದು, ಅಲಹಾಬಾದಿನಲ್ಲಿ ಅವರೊಡನೆಯೇ ಅವಳೂ ಕೆಳಗಿಳಿಯಲು ನಮಗೆ ಗೊತ್ತಾಯಿತು. ಅವಳು ನನ್ನ ತಾಯಿಯ ಕೊರಳೊಳಗಿನ ಆಭರಣಗಳನ್ನು ಕತ್ತರಿಸಿಕೊಳ್ಳುವ ಹವಣಿಕೆಯಲ್ಲಿದ್ದಳು. ಇನ್ನೊಬ್ಬ, ನನ್ನ ತಂದೆಯ ಜೇಬು ಕತ್ತರಿಸುವ ಯೋಚನೆಯಲ್ಲಿದ್ದ. ಅದರಿಂದ ನಮ್ಮ ಹತ್ತಿರ ಹೆಚ್ಚಾಗಿ ಜನದಟ್ಟಣೆಯಾಗುವಂತೆ ಮಾಡಿದರು. ಈ ಕಳವಿನ ಹೊಂಚು, ನಮಗೆ ತಿಳಿಯುವುದಕ್ಕಿಂತ ಮುಂಚಿತವಾಗಿ ನಮ್ಮ ಹತ್ತಿರ ಕುಳಿತ ಶ್ರೀ. ಸಿ. ಹರಿಶ್ಚಂದ್ರನೆಂಬ ಮಧ್ಯಪ್ರಾಂತದ ಪೋಲೀಸನೊಬ್ಬನಿಗೆ ಗೊತ್ತಾಗಿದ್ದಿತು. ಆವನು ರಜೆಯ ಮೇಲೆ ತಮ್ಮೂರಿಗೆ ಹೊರಟಿದ್ದ. ಅವರಂತೆ ಅಲ್ಲಿದ್ದ ಇನ್ನೊಬ್ಬ ಪ್ರಯಾಣಿಕನಿಗೂ ಇದರ ಸುಳಿವು ಹತ್ತಿದ್ದಿತು. ಅವನು ಕಾಶೀಯಾತ್ರೆಗೆ ಹೋದ ತನ್ನ ಅಣ್ಣನನ್ನು ಕರೆದು ತರಲಿಕ್ಕೆ ಹೊರಟಿದ್ದನು. ಅವರಣ್ಣನು, ಕಾಶಿಯಿಂದ ತಿರುಗಿ ಬರಲಿಕ್ಕೆ ದುಡ್ಡಿಲ್ಲದೆ ಊರಿಗೆ ತಂತಿಯನ್ನು ಕೊಟ್ಟಿದ್ದ. ಅವನ ಹಣವನ್ನು ಜೇಬುಗಳ್ಳರು ಅಪಹರಿಸಿದ್ದರಂತೆ. ಅದರಿಂದ ಜನವು ಬರುವಾಗ ರೈಲಿನಲ್ಲಿ ಎಚ್ಚರದಿಂದ ಬರಲಿಕ್ಕೆ ತನ್ನ ತಮ್ಮನಿಗೆ ತಿಳಿಸಿದ್ದ. ಹೀಗಾಗಿ ಅವನು ನಮಗಿಂತ ಹೆಚ್ಚು ಜಾಗೃತನಾಗಿದ್ದ. ಆದರೂ ಅವನಿಗೆ ಆ ಕಳ್ಳರ ಎದುರಿಗೇನೇ ನಮಗೆ ಜೇಳುವ ಧೈರ್ಯವಿರಲಿಲ್ಲ. ಆದುದರಿಂದ,



ತ್ವರೆ ಮಾಡಿರಿ ! ಪ್ರತಿಗಳು ಸ್ವಲ್ಪೇ ಉಳಿದಿವೆ !!

"ನಕ್ಷತ್ರಗಾನ"

★

ಶ್ರೀ ಡಿ. ಎಸ್. ಕರ್ಕಿ ಎಮ್. ಎ., ಪಿ ಎಚ್.ಡಿ.
ಬೆಳಗಾಂವ–ಇವರ

ಉತ್ಕೃಷ್ಟ ಕವನ ಸಂಗ್ರಹ

ಶ್ರೀ. ದ. ರಾ. ಬೇಂದ್ರೆ, ಮಧುರಚೆನ್ನ. ವಿ. ಕೃ. ಗೋಕಾಕ, ಮುಗಳಿ ಮುಂತಾದ ಕವಿಶ್ರೇಷ್ಠರು ಇದನ್ನು ತುಂಬಾ ಹೊಗಳಿದ್ದಾರೆ. ಜಯಂತಿ **ಜಯಕರ್ನಾಟಕ**, **ನವಯುಗ** ಮುಂತಾದವರಿಂದ ಒಳ್ಳೇ ಅಭಿಪ್ರಾಯಕ್ಕೆ ಪಾತ್ರವಾಗಿದೆ. **ಬೆಲೆ ರೂ ೧-೪-೦.**

ದೊರೆಯುವ ಸ್ಥಳ

ರಬಕವಿ ಮಿತ್ರಸಮಾಜ ಪ್ರೆಸ್, ಬನಹಟ್ಟಿ ಕರ್ನಾಟಕ ಪುಸ್ತಕ ಮಂದಿರ } **ಡಿ ಎಸ್. ಕರ್ಕಿ.** ಕೊತವಾಲಗಲ್ಲಿ ಬೆಳಗಾವ ಸಾಹಿತ್ಯ ಮಂದಿರ ಧಾರವಾಡ.

ಸೂ. ಸಾಹಿತಿಗಾರರಿಗೆ ವಿಶೇಷ ಸವಲತ್ತು ಕೊಡಲಾಗುವದು.

ತಮ್ಮಣ್ಣನು ಜಾಣನನ್ನು ಕಳೆದುಕೊಂಡ ಸಂಗತಿಯನ್ನು ಮಾತ್ರ ವಿವರಿಸಹತ್ತಿದ. ಪ್ರವಾಸದಲ್ಲಿ ವೈಗೆಲ್ಲ ಕಣ್ಣಿರಬೇಕೆಂಬುದನ್ನು ಸೂಚಿಸಿದ. ಆಗ ನಮಗೆ ಸ್ವಲ್ಪ ಸಂಶಯ ಬಂದಿತು. ಎಚ್ಚರದಿಂದ ಇದ್ದೆವು. ಆ ಪೊಲೀಸನ ಕಾವಲುಗಣ್ಣುಗಳಂತೂ ನಮ್ಮ ಮೇಲೆಯೇ ಇದ್ದುವು. ಅವನನ್ನೂ ತಮ್ಮ ಪಾಲುಗಾರನನ್ನಾಗಿ ಮಾಡಿಕೊಳ್ಳಬೇಕೆಂದು, ಕಳ್ಳರು ಅವನೊಡನೆ ಹಾಗೆ ಮಾತಿಗೆ ಆರಂಭಿಸಿದರು. ಆದರೆ ಆ ಹರಿಶ್ಚಂದ್ರನು ಅವರ ಬಲಿಗೆ ಬೀಳಲಿಲ್ಲ. ಅಲ್ಲವೆ ಸ್ಪಷ್ಟವಾಗಿ ಅವರನ್ನು ವಿರೋಧಿಸಿದ. ಮೇಲಾಗಿ ನಮಗೂ ಕಳವಿನ ವಿಷಯ ಹೇಳಿದ. ಅದರಿಂದ ಅವನೊಡನೆಯೂ ಜಗಳ ಹೂಡಿದರವರು. ಆದರೆ ಅವನು ಪೋಲೀಸ ಖಾತೆಯವನಾದುದರಿಂದ ಹೆದರಲಿಲ್ಲ. ನಮ್ಮನ್ನು ಸುರಕ್ಷಿತವಾಗಿ ಅಲಹಾಬಾದಿಗೆ ತಂದು ಮುಟ್ಟಿಸಿದನು.

ಈ ಪ್ರಸಂಗದಿಂದ, ಹಿರಿಯರು ಅಲಹಾಬಾದನ್ನು ಈಗ ನೋಡಲಿಕ್ಕೆ ಒಪ್ಪಿಗೆಯನ್ನು ಕೊಡಲಿಲ್ಲ. ಸಮ್ಮೇದ ಗಿರಿಯ ದರ್ಶನ ಮಾಡಿಕೊಂಡು, ಬೇಗನೆ ನಮ್ಮೂರಿಗೆ ತಿರುಗುವ ಹವಣಿಕೆಯುಳ್ಳವರಾದರು. ಆದರೂ ಮರುದಿನ ಮಧ್ಯಾಹ್ನದ ವರೆಗೆ, ಆ ಹಾಬಾದಿನ ನಿಲ್ದಾಣದಲ್ಲಿಯೇ ನಾವು ವೇಳೆ ಕಳೆಯಬೇಕಾಯಿತು. ಅಲ್ಲಿಳಿದು ಮುಂದೆ ಹೋಗುವ ಗಾಡಿಯನ್ನು ಈಗಾಗಲೇ ಕಳೆದ ಕೊಂಡು ಬಿಟ್ಟಿದ್ದೆವು. ಆದರೂ ಆ ನಿಲ್ದಾಣದಲ್ಲಿ ಯಾವ ಹೆದರಿಕೆಯೂ ಇರಲಿಲ್ಲ. ಭವ್ಯವಾದ ನಿಲ್ದಾಣ, ವಿಸ್ತೀರ್ಣವಾದ ನಿಲ್ದಾಟ್ಟಿಗಳು ಎಲ್ಲೆಲ್ಲೂ ವಿದ್ಯುದ್ದೀಪಗಳಿಂದ ಬೆಳಗುತ್ತಿದ್ದುವು. ಅದರಲ್ಲೂ ಪೋಲೀಸಿನವರ ಕಾವಲು ಇತ್ತು. ನಿಶ್ಚಿಂತೆಯಿಂದ ಇರುಳು ಕಳೆದೆವು.

ಬೆಳಗಾಯಿತು. ಭರತವರ್ಷದ ರೈಲ್ವೆಯ ವೇಳಾಪತ್ರಿಕೆಯೊಂದನ್ನು ಕೊಂಡೆ. ನಮ್ಮ ಪ್ರಯಾಣದ ಗೊತ್ತು-ಗುರಿಗಳನ್ನು ಮನಸ್ಸಿನಲ್ಲಿಯೇ ಲೆಕ್ಕ ಹಾಕಿದೆ. ಇನ್ನೆರಡು ತಾಸುಗಳಲ್ಲಿ ಅಲ್ಲಿಂದ ಹೊರಡುವ ಹೊಗೆಬಂಡಿಯನ್ನು ಹಿಡಿದು, ಮುಂದೆ ಸಾಗುವುದೆಂದು ನಿರ್ಣಯಿಸಿದೆ. ಅದಕ್ಕಾಗಿ ಹತ್ತಿರಿದ್ದ ಫಲಾಹಾರವನ್ನು ಬೇಗನೆ ತೀರಿಸಿಕೊಳ್ಳುವುದೆಂದು ಯೋಚಿಸಿ, ಉಪಾಹಾರ ಗೃಹದಿಂದ ಬಿಸಿನೀರನ್ನು ಕೊಂಡುತರಲಿಕ್ಕೆ—ಪ್ರಯಾಣದಲ್ಲಿ ಅವಶ್ಯ ಬಿದ್ದಾಗ ಬಿಸಿನೀರನ್ನೂ ಕೊಂಡು ಕುಡಿಯುತ್ತಿದ್ದೆವು—ಹೋದೆ. ನನ್ನಹತ್ತಿರ ಬಿಡಿ ಕಾಸು ಇರಲಿಲ್ಲ. ಹಾಟೇಲಿನವನ ಬೇಳಿಕೆಯಂತೆ ನನಗೆ ಚಿಲ್ಲರೆ ಕೊಡಲಿಕ್ಕೆ ಬಂದ ಟಿಕೀಟ್ ಕಲೆಕ್ಟರನೂ, ನಾನು ನೋಡುತ್ತಿರುವಾಗಲೇ ನನಗೆ ಮೋಸಮಾಡಿ, ಐದು ರೂಪಾಯಿಯ ಪಾಕಿಸ್ತಾನದ ನೋಟೊಂದನ್ನು ಹಾಕಿ ಹೋದ. ಮೇಲೆ, ಪಾಕಿಸ್ತಾನದ ನೋಟುಗಳನ್ನೂ ತಪ್ಪಿ ತಕ್ಕೊಳ್ಳುವ ಸಂಭವವುಂಟು ನೋಡಿ ತಕ್ಕೊಳ್ಳುತ್ತಿರುವೆದು ! ' ಎಂದು ನಗುತ್ತ ಸೂಚಿಸಿ ತೆರಳಿದ. ಆಗ ಜಗವೆಲ್ಲ ನನಗೆ ಕಳ್ಳರ ಸಂತೆಯಂತೆ ತೋರಿತು !

ಮುಂದಿನ ಪ್ರಯಾಣದಲ್ಲಿ ನಾವು, ಗಾಡಿಯಲ್ಲಿ ಕಲಕತ್ತೆಗೆ ಹೋಗುವ ಗಿರಣಿಯ ಕೂಲಿಗಳ ಸಂಖ್ಯೆಯನ್ನೇ ಹೆಚ್ಚಾಗಿ ಕಂಡೆವು. ಅವರು ಸಿರಿವಂತರನ್ನು ಕಂಡರೆ ತೆಗಳುವುದೇ ಹೆಚ್ಚು. ನಮ್ಮ ಬಿಳಿಯ ಒಟ್ಟೆಗಳನ್ನು ನೋಡಿ, ಮೊದಮೊದಲು ನಮ್ಮ ಕೂಡ ಅವರು ಸಮರಸರಾಗಲಿಲ್ಲ. ನಾವೂ ಬಡವರೆಂದು ತಿಳಿಯಲು, ನಮ್ಮೊಡನೆ ಸೇರಿದರು. ತಮ್ಮ ಕರುಣಕತೆಯನ್ನು ಹೇಳಿದರು. ಜೂಟಿನ ಗಿರಣಿಗಳಲ್ಲಿ ಕೆಲಸಮಾಡುವ ಜನವದು. ಅವರಲ್ಲಿ ಬೆರೆತು ಅವರ ಸುಖ-ದುಃಖಗಳಲ್ಲಿ ಒಂದಾಗಿ, ನಾವು ಎಂಟು ತಾಸಿನ ರೈಲಿನ ಪ್ರಯಾಣವನ್ನು ಮುಗಿಸಿದೆವು. ಆ ಮೇಲೆ ನಾವಿಳಿಯುವ ಗೊಪೋ ನಿಲ್ದಾಣ ಬಂದಿತು. ಅಲ್ಲಿಂದ ಮರಳಿ ಪಾರಿಶ್ವನಾಥ ನಿಲ್ದಾಣಕ್ಕೆ ಲೋಕಲ್ ಗಾಡಿಯಿಂದ ಬಂದೆವು. ಆಗ ನಮಗೆ ದೂರದಲ್ಲಿರುವ ಸಮ್ಮೇದ ಶಿಖರದ ಮೊದಲ ದರ್ಶನವಾಯಿತು. ಸಮ್ಯಕ್ತ್ವಗಿರಿಯ ಸಾನ್ನಿಧ್ಯದಲ್ಲಿಯೇ ಅಲ್ಲವೆ ' ಕಾಲಲಬ್ಧಿ ' ದೊರೆಕೊಳ್ಳುವುದು ?

ಪಾಲಕರಿಗೂ ಬಾಲಕರಿಗೂ ಕೆಲವು ಮಾತು

(ಬಾನುಲಿ ಮಾತು)*

ಶ್ರೀ. ದ. ರಾ. ಬೇಂದ್ರೆ ಎಂ. ಎ. ಸೊಲ್ಲಾಪುರ

★

ಕನ್ನಡನಾಡ ಮಕ್ಕಳೆ, ಇಂದಿನಿಂದ ಧಾರವಾಡ ಆಕಾಶವಾಣಿಯ ಕೇಂದ್ರದಲ್ಲಿ ಚಿಕ್ಕಮಕ್ಕಳ ಕೂಟ ಪ್ರಾರಂಭವಾಗುವುದು. ಅದನ್ನು **'ಗಿಳಿವಿಂಡು'** ಎಂದು ಕರೆದದ್ದು ಯಥಾರ್ಥವಿದೆ. ನಮ್ಮ ದಕ್ಷಿಣಕನ್ನಡದ ಕವಿಲೇಖರ ಗೋವಿಂದ ಪೈಗಳು, ತಮ್ಮ ಕವಿತೆಗಳಿಗೆ **'ಗಿಳಿವಿಂಡು'** ಎಂದು ಹೆಸರು ಕೊಟ್ಟರು. ಒಂದೊಂದು ಕವಿತೆಯೂ ಗಿಳಿ. ಅರಗಿಳಿಯಂತೆ ಮಾತನಾಡಿ, ಮನೆ-ಮನೆಯನ್ನು ನಂದನವನ ಮಾಡುವ ನೀವೂ ಕವನ-ಕವಿತೆ. ನಿಮ್ಮ ಹಿಂಡೂ, ಗುಂಪೂ, ಬಳಗವೂ 'ಗಿಳಿವಿಂಡೇ' ಸೈ.

"ಮಾತೆಲ್ಲ ಮುತ್ತಿನಃ ಎಳೀ
ಜೇನಿನಃ ಥಳಿ—
ಹಿಗ್ಗಿನಃ ತೊಳಿ—
ಮುಂಗೈಯ ಮ್ಯಾಲೆ ಮುದ್ದುಂಡು ಬೀರಕಾವ
ಮುದ್ದು ಮಾತಿನಃ ಗಿಳಿ"—ಎಂದು

ಮಕ್ಕಳ ಮಾಣಿಕದ ಕಣಿಯನ್ನು ನೆಚ್ಚಿ ನಾನು ಹಾಡಿದ್ದೆ. ಮನೆ-ಮನೆಗೆ ಇಂದಿನ ಸಿಂಗಾರ, ನಾಳಿನ ಆಧಾರ ನೀವು. ನಿಮ್ಮೊಡನೆ ನಕ್ಕು ನಲಿದು, ನಿಮ್ಮ ನಗುವು ನಲಿವುಗಳಿಂದ ನಾಡನ್ನು ನಲಿಸಿ, ಒಂದು ಜನ ಪಾವನವಾಗಬೇಕು. ಆಕಾಶವಾಣಿಯು ವಿನೋದ—ಹೊತ್ತುಗಳೆಯುವ ಹಂಬಿಕೆಯೆಂದು ತಿಳಿಯಬೇಡಿ, ಮನೋರಂಜನೆಯ ಕೂಡ ಚಿತ್ತವನ್ನು ನಿರ್ಮಲ ಮಾಡಿಕೊಳ್ಳುವ ಹದವನ್ನು, ನಾವು ನೀವು ಹುಡುಕಬೇಕು.

ಆಕಾಶವಾಣಿ ನಿನಗೆ ಕಥೆ, ಕವಿತೆ, ನಾಟಕ, ಆಟ, ವಿನೋದ, ಒಡಪು, ಜ್ಞಾನದಾನ, ಶಿಕ್ಷಣ, ಎಲ್ಲವನ್ನೂ ಒದಗಿಸುವುದು. ಅದಕ್ಕೆ ನಿಮ್ಮ ಸಹಕಾರ ಬೇಕು, ಸಮಭಾಗ ಬೇಕು. ನೀವೂ ಕಥೆ, ಕವಿತೆ ಹೇಳಬೇಕು, ಕೇಳಬೇಕು. ಒಡಪು ಕಟ್ಟಬೇಕು. ಒಡೆಯಬೇಕು. ನಾಟಕ ಆಡಬೇಕು. ಕಿವಿಯಿಂದ ಕೇಳಿ ನೋಡಬೇಕು. ಆಕಾಶವಾಣಿಯ ನಿಮ್ಮ ಕಾರ್ಯಕ್ರಮಕ್ಕೆ— ಸಕ್ಕರೆಗೆ ಇರುವೆ ಮುಕ್ಕುರುವಂತೆ, ಡೋಲು ಕೇಳಿ ಜೊಂಬರ ಆಟ ನೋಡಲು ಓಡಿ ಹೋಗುವಂತೆ— ನೀವು ಓಡಿ ಬರಬೇಕು, ಕೂಡಿ ಬರಬೇಕು. ಪುರಾಣ ಕೇಳಲು ಹಿರಿಯರು ಗುಡಿಗೆ ಹೋಗುವುದಿಲ್ಲವೇ? ನಿಮ್ಮ ಮನೆಯೆ ನಿಮ್ಮ ಗುಡಿ; ನಿಮ್ಮ ರೇಡಿಯೋ ಯಂತ್ರ ಮೂರು ಲೋಕದ ಸುದ್ದಿ ಸೂರುವ ಬೀರುವ ನಾರದ. ಅವನಂತೆ ಇದೂ ಯಾವಾಗಲೂ ಹಾಡುತ್ತ ಬರುತ್ತದೆ. ಜಗಳ ಬೆಳೆಯಿಸುವ ಚಟ, ಯುದ್ಧಕಾಲ ಬಿಟ್ಟರೆ ಇದಕ್ಕಿಲ್ಲ. ಆಕಾಶವಾಣಿಯ ತರಂಗ ತರಂಗದೊಡನೆ—ದಿಕ್ಕುದಿಕ್ಕಿಗೆ ಅನುಕಂಪನ, ಸಹಾನುಭೂತಿ, ಹಿಗ್ಗು ಹಬ್ಬುತ್ತದೆ. ಈ ಕೇಂದ್ರವು ಹೀಗೆ ಕನ್ನಡನಾಡ ಚಿಕ್ಕಮಕ್ಕಳಿಗೆಲ್ಲ ಆನಂದವನ್ನು ಹಂಚುವಂತೆ, ನೀವೂ ಆನಂದವನ್ನು ಹಬ್ಬಿಸುವ, ಹರಹುವ, ಕೇಂದ್ರಗಳಾಗಿರಿ. ಆನಂದವನ್ನು ಹಂಚುವುದರಿಂದ, ಅದು ಹೆಚ್ಚಾಗುತ್ತದೆ ಹೊರತು ಕಡಿಮೆಯಾಗುವುದಿಲ್ಲ. ನಿಮ್ಮತಿಂಡಿ-ತಿನಿಸು. ಹಂಚಿದಂತೆ ಕಡಿಮೆ ಕಡಿಮೆಯಾಗುವುವು. ನೀವು ಹೇಳುವ ಕೇಳುವ ಕಥೆ-ಕವಿತೆಗಳು, ನಾಟಕ ಸಾಠಗಳು ಹಿಗ್ಗು ಹಬ್ಬಿಸುವ ಸಾಧನಗಳು.

ನಿಮ್ಮ ಈ ವಿನೋದದಿಂದ ಮನೆಯಲ್ಲಿ ತಂದೆ-ತಾಯಿಗಳಿಗೂ ಸುಖವಾಗುವುದು. ಆಕಾಶವಾಣಿಯನ್ನು ಕೇಳುವಾಗ ಗಲಾಟೆ ನಿಂತು, ಮೌನದಿಂದ ಏಕಚಿತ್ತರಾಗುವ ಅಭ್ಯಾಸ ಬೆಳೆಯುತ್ತದೆ. ಜಗಳ ಕ್ಷಣಕಾಲವಾದರೂ ತಡೆದು ನಿಲ್ಲುತ್ತದೆ. ಒಂದುಮಾತಿನ ಆಪ್ತ ಸಂಬಂಧದಿಂದ, ನಿಮ್ಮ ಬಳಗ ಎಷ್ಟಗಲ ಹಬ್ಬಿದೆ—ಎಂಬುದನ್ನು ದಿನದಿನವೂ ಅನುಭವಿಸುವಾಗ, ಹೃದಯ ಉಬ್ಬುತ್ತದೆ. ಕನ್ನಡ ಮಾತನ್ನಾಡುವವರಿದ್ದಲ್ಲೆಲ್ಲಾ ನಿಮ್ಮ ಸಂಬಂಧ ಬೆಳಸಬಹುದೆಂಬ ಆಶೆ-ಆಕಾಂಕ್ಷೆಯುಂಟಾಗುತ್ತದೆ. ಇಷ್ಟಾಗಿ ನೀವು ಕನ್ನಡದಲ್ಲಿ ಕೇಳದಷ್ಟಿಲ್ಲವೂ—ನಿಮ್ಮ ದೇಶ ನಿಮ್ಮ ಜನಗಳದೇ ಅಲ್ಲ—ಪ್ರಪಂಚದ ಸುದ್ದಿಯೆಲ್ಲ ನಿಮ್ಮೆಡೆಗೆ ಓಡಿ ಬರುತ್ತದೆ ಆಕಾಶವಾಣಿಯ ಬಾಯಿಂದ.

ಮಕ್ಕಳ ಮನಸಿನಲ್ಲಿ ಹಿಗ್ಗು ತುಂಬಲು, ನಮ್ಮ ನಾಡ ಸಾಹಿತಿಗಳನೇಕರು ದುಡಿದಿದ್ದಾರೆ, ದುಡಿಯುತ್ತಿದ್ದಾರೆ:

ಪಂಜೆ ಮಂಗೇಶರಾಯರು 'ತೆಂಕಣ ಗಾಳಿ' ಯು ಕೊಂಕಣ ಸೀಮೆಗೆ ತಂದ ದಾಳಿಯನ್ನೂ, ಹಾವಿನ ಹೂವಿನ ತಲೆತೂಗಾಟವನ್ನೂ ಬಣ್ಣಿಸಿ ಹಾಡಿ, ಕುಣಿದು, ಕುಣಿಸಿ ಹೋದರು. ರಾಜರತ್ನಂ ಕಜ್ಜೆಪುರಿ ತಿನಿಸಿ, ತುತ್ತೂರಿ ಊದಲು ಕಲಿಸಿದರು. ಹೊಯ್ಸಳರು ಮಕ್ಕಳಿಗಾಗಿ ಕಥೆಯ ಹೊನಿನ ಹಾಸಿಗೆಗಳನ್ನು ಹಾಸಿದ್ದಾರೆ. ಆದರಲ್ಲಿ ಎಂಥೆಂಥ ಜೆಂದ ಜೆಂದದ ಕನಸು! ಆನಂದಕಂದರು ಮುದ್ದಿನ ಮಾತಿನಿಂದ ಮುದ್ದಾದ ಮಾತು ಹೇಳಿ-

---

* ತಾ. ೧೪-೧-೫೦ರಂದು ಧಾರವಾಡ ಬಾನುಲಿಕಟ್ಟೆಯಿಂದ ಪ್ರಸ್ಥತವಾದ "ಗಿಳಿವಿಂಡು" ಎಂಬ ಹೆಸರಿನ ಮಕ್ಕಳ ಕಾರ್ಯಕ್ರಮದ ಪ್ರಾರಂಭ ಭಾಷಣವಿದು. —ಸಂ. ಜ.

ಹಳ್ಳಿ ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ
ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

● ಧ್ವನಿವಾಹಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ
ಪ್ರಚಾರ ಮಾಡುವೆವು

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಕೊಟ್ಟರು; ಅಂಬಿಕಾತನಯರು ಕರುಳಿನ ವಚನಗಳಿಂದ ತಾಯಿ-ಕರುಳಿನ ಸವಿ ತೋರಿಸಿದರು. ಪುಟ್ಟಪ್ಪನವರು ಚಂದ್ರನನ್ನು ಮೀವರ ಪೆಪ್ಪರುಮೆಂಟು ಮಾಡಿ, ನಿಮ್ಮ ಕಲ್ಪನೆ ಅರಳಿಸಿದರು. ನೀವೂಡು ಇವರು, ತಿಂಗಳು ತಿಂಗಳೂ ನಿಮಗಾಗಿ ಒಂದು ಪ್ರಪಂಚವನ್ನೇ ನಿರ್ಮಿಸಿ, ನಿಮ್ಮ ಜ್ಞಾನಗ್ರಹಣ ಶಕ್ತಿಯನ್ನು ವಿಕಾಸ ಪಡಿಸಲು ಅನೇಕ ವರ್ಷ ತಪಿಸುತ್ತಿದ್ದಾರೆ. ಕಾರಂತರ ಬಾಲ-ಪ್ರಪಂಚವು ನಿಮ್ಮ ದೊಡ್ಡಿತೆಯ ಬಗ್ಗೆ ಅವರಿಗಿರುವ ಆಕಾಂಕ್ಷೆ ಪ್ರಕಟ ಮಾಡಿದೆ. ಕಲ್ಯಾಣಮ್ಮನವರು, ಮಕ್ಕಳ ಕೂಟಗಳನ್ನೇ ರ್ಪಡಿಸುವುದನ್ನು, ತಮ್ಮ ಜೀವನದುತ್ಸವವನ್ನಾಗಿ ಮಾಡಿಕೊಂಡಿರುವರು. ಹೀಗೆ ಒಬ್ಬರೇ, ಇಬ್ಬರೇ, ನಿಮಗಾಗಿ ದುಡಿಯುವವರು?

ಆದರೆ ಈ ದುಡಿತ ವ್ಯರ್ಥವಲ್ಲ. ಮಕ್ಕಳ ಮನಸ್ಸಿನ ವಿಕಾಸದಿಂದ, ಮನೆಮನೆಯ ಅಭಿರುಚಿಯೂ ಉಚ್ಚತರಗತಿಯದಾಗುವುದು. ಇಂದಿನ ಹುಡುಗರು ನಾಳಿನ ನಾಗರಿಕರು. ಜರ್ಮನಿಯು ಎರಡನೆಯ ಮಹಾಯುದ್ಧ, ಅಲ್ಲಿಯ ಮಕ್ಕಳ ಮನಸ್ಸಿನ ತಿಕ್ಕಾಟದ ಫಲ. ಮಕ್ಕಳು ಮೇಣದ ಮುದ್ದೆಯಿದ್ದ ಹಾಗೆ. ಅವು ಕಲಿಸಿದಂತೆ ಕಲಿಯುತ್ತವೆ. ದೊಡ್ಡವರು ಚಿಕ್ಕವರ ಮನಸ್ಸಿನಲ್ಲಿ ತಮ್ಮ ರೊಜ್ಜನ್ನೇ ತುಂಬಬಾರದು. ಮಕ್ಕಳೂ ಮನೆಯ ಜಂಜಾಟ ಮರೆತು ಆಡಿ ಬೆಳೆಯುವಂತೆ, ಜಗತ್ತಿನ ಯುದ್ಧದ ಹಿಂಸಕ ಬುದ್ಧಿಯಿಂದ ಅಲಿಪ್ತರಾಗಿ, ಸಾಹಿತ್ಯ-ಸಂಗೀತಗಳಿಂದ ಬರುವ ಸಮತೂಕ, ಸಾಂಗತ್ಯಗಳನ್ನೇ ತಮ್ಮ ಜೀವನದ ಸೂತ್ರಗಳನ್ನಾಗಿ ಮಾಡಿಕೊಳ್ಳಬೇಕು. ಇವರನ್ನು ಕುರಿತು ಮಾತನಾಡುವ ಹಿರಿಯರೂ ಆ ಬಲವನ್ನೇ ಇವರಲ್ಲಿ ಬೆಳೆಯಿಸಬೇಕು.

ತಾಯಿ ಹೇಳುವ ಜೋಗುಳ, ಅಜ್ಜಿ ಹೇಳುವ ಕಥೆ, ಅಕ್ಕ ಹೇಳುವ ಒಡಪು, ಗೆಳೆಯರ ವಾದ-ಸಂವಾದ, ಊರ ತಿರುಕರ ವಿಧ ವಿಧವಾದ ಆಟನೋಟಗಳಿಂದ ನಿಮ್ಮ ಜಗತ್ತು ಪ್ರಾರಂಭವಾಗುತ್ತದೆ. ಇದರಲ್ಲಿ ಏರಾಟ ದೊಡ್ಡದಲ್ಲ. ಸೋಲು-ಗೆಲುವಿಗೆ ಚಿಪ್ಪು ಬೆಲೆಯಿಲ್ಲ. ಎಲ್ಲದರಿಂದ ಆಡುವ ಕೌಶಲ್ಯ, ನೋಡುವ ರಸಿಕತೆ ಬೆಳೆಯುತ್ತದೆ. ಅದು ಬಹು ದೊಡ್ಡ ಫಲ. ನಿಮ್ಮಲ್ಲಿ ವೈವಿಧ್ಯ ಬಹಳ. ಕವಾಯಿತು ಕಲಿತು ಎಲ್ಲರೂ ಒಂದೇ ಬಗೆ ಕೈಕಾಲು ಮಾಡುವುದು, ಹೆಜ್ಜೆ ಹಾಕುವುದು, ಜಿಪ್ಪಾಳೆ ಇಕ್ಕುವುದು, ಧ್ವನಿಗೆಗೆಯುವುದು ಮುಖ್ಯ ಕೆಲಸವಲ್ಲ. ಹೂವಿನಂತೆ ನಿಮ್ಮ ರೀತಿ:

"ಒಂದರೊಲು ಒಂದಿಲ್ಲ,
ಒಂದರೊಳು ಕುಂದಿಲ್ಲ,
ಒಂದೊಂದು ಅಂದವೂ ತನತನಗೆ
ಚೆಂದ!

ಚೆಂದಕ್ಕೆ ಒಂದೆ ಮೈ
ಸಾಲದೆಂಬಂತೆ ಸೂ -
ರೊಂದು ಮೈತಾಳಿ ಕುಣಿಯುವುದು
ಸ್ವಚ್ಛಂದ!

ಹೂವಿನಂತೆಯೆ ಹಕ್ಕಿಗಳಾದರೂ
ನೂರು ಮರ ನೂರು ಸ್ವರ
ಒಂದೊಂದೂ ಅತಿ ಮಧುರ
ಬಂಧವಿರದ ಬಂಧುರ....
ಸ್ವಚ್ಛಂದ ಸುಂದರ!

ಮಕ್ಕಳೆ, ನಿಮ್ಮ ರೀತಿ ಈ ಹೂವು-ಹಕ್ಕಿಗಳ ಹಾಗೆ. ಚಿಕ್ಕ ಮಕ್ಕಳಿಗೆ ಚಿಕ್ಕ ಮಕ್ಕಳನ್ನು ಕಂಡರೆ ಅಕ್ಕರತೆ ಬಹಳ.

ಈ ಅಕ್ಕರತೆಯಿಂದಲೆ—ಗಿಳಿಗಳು ಹಿಂಡು-ಹಿಂಡಾಗಿ ಹಾರಾಡುವಂತೆ— ನೀವಾದರೂ ಗುಂಪುಗುಂಪಾಗಿ ಮೆರೆಯುವಿರಿ. ಅದರಲ್ಲಿಯೂ ಗೆಳೆತನ ಮುಖ್ಯ. ಗಿಳಿಯ ಗುಣ ಗೆಳೆತನ. ಅವು ಜೋಡಿ-ಜೋಡಿಯಾಗಿ ಪಾರಿವಾಳಗಳಂತೆ ಗೂಡುಗಟ್ಟುವುವು. ತಮ್ಮ ಸರಿ-ಜೋಡಿಯವರನ್ನು ಕಂಡುಕೊಂಡು, ಒಬ್ಬರಿಗೊಬ್ಬರು ಆಸರಾಗಿ ನಿಂತು, ಬೆಳೆವಣಿಗೆ ಮಾಡಿಕೊಳ್ಳಬಹುದು ನೀವು. ಗಿಳಿಯ ಗುಣ ಎನ್ನಿರಿ..... ದೋಷ ಎನ್ನಿರಿ..... ಅದಕ್ಕೆ ಅದರ ಸಂಗತಿಯ ಫಲ ಬಿಡದು. ಕಟುಕರವನ ಗಿಳಿ 'ಕಡಿ, ಕೊಲ್ಲು,' ಎಂಬ ಮಾತು ಕಲಿಯುವುದು; ಸಂಡಿತನ ಗಿಳಿ ಸುಭಾಷಿತಗಳನ್ನೇ ಪಾಠ ಮಾಡುವುದು. ಆಕಾಶವಾಣಿಯಲ್ಲಿ ಒಳ್ಳೊಳ್ಳೆಯವರಿಂದ ನಿಮಗೆ ಸಾಹಿತ್ಯ ಸಂಗೀತ ಕೇಳಲು ಸಿಕ್ಕುವುದು. ನಿಮ್ಮ ರುಚಿಯಂತೆ ಒಳ್ಳೆಯದನ್ನು ನೀವು ಆರಿಸಿಕೊಳ್ಳಬೇಕು. ಇದಲ್ಲದೆ ನಿಮ್ಮ ನಿಮ್ಮ ಜೀವಕ್ಕೆ ಸುಖ ಕೊಡುವ ಸಂಗತಿಗಳನ್ನು ಅಂದ ಮಾಡಿ ಹೊಂದಿಸಿ ಹೊರಪಡಿಸಬೇಕು.

ತಾಳಕ್ಕೆ ನಿಮ್ಮ ಮೈ ಕುಣಿಯುತ್ತದೆ; ನಾದಕ್ಕೆ ನಾದ ಕೊಡುತ್ತದೆ. ಮಾತಿಗೆ ಮಾತು ಹುಟ್ಟಿಸುತ್ತದೆ. ಕ್ಷಣಕ್ಷಣಕ್ಕೂ ಹೊಸ ಲೋಕ ಕಟ್ಟುತ್ತದೆ. ನಿಮ್ಮ ಕಲ್ಪನೆ ಭೃಂಗದಂತೆ ಗಾಳಿಯೊಡನೆ ತಿಳಿಯಾಡುವುದು. ನಕ್ಕುನಗುವ ಚಿಕ್ಕೆಯೊಡನೆ ಕೂಟ ಬೆಳೆಸುವುದು. ಪಾತರಗಿತ್ತಿಯಂತೆ,

'ಇಪ್ಪು ಎಲ್ಲ ಮಾಡಿ—
ಸಪ್ಪಳಿಲ್ಲದಾಡಿ.
ತಾಳಃ ಚವ್ವ ಚಳ್ಳಾ
'ಕುಣಿತ ತಕ್ಕ ತಕ್ಕಃ!' ಎನಿಸಿ, ನಂದಳಿದ ಕೋಟಿದತ್ತ ಬೊಟ್ಟು ಮಾಡುವುದು.

ಸುಖದ ಚೌಕ

(ಚಿಕ್ಕವರಿಗಾಗಿ ಒಂದು ಕಥೆ) *

ಶೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಕಥೀ ಹೇಳ್ರಿ...., ಕಥೀ ಹೇಳ್ರಿ....! ಎಷ್ಟರಿಸಾ ನಿಮ್ಮ ಕಾಟಾ! ನಿಮ್ಮ ಕಾಟಾ ತಡೀಲಾರದಕ್ಕ, ಬೆಣ್ಣೀ ಮುದ್ದೀಲೇನs ತಲೀ ಒಡಕೋಬೇಕು— ಅನ್ನೂ ಹಾಂಗ ಆಗೇದ ಖರೇ! ಅದರೂ 'ಪಾಪ! ನಮ್ಮ ಹುಡುಗರೂ' ಅಂತ, ನಿಮಗ ಇಂದೊಂದು ಕಥೀ ಹೇಳತೀನಿ ಕೇಳ್ರಿ! ಎಲ್ಲಾರೂ ಲಕ್ಷ ಕೊಟ್ಟು ಕೇಳಬೇಕs ಮತ್ತ!

ಹೀಂಗs ಒಂದು ಪಟ್ಟಣದೊಳಗ, ಚಿಂತಾಮುಖರಾಜ— ಅಂತ ಒಬ್ಬ ಅರಸ ಇದ್ದ. ಆತಗ ಆಶಾಪತಿ, ಲೋಭರಾಯ, ಮುದ್ದಣ್ಣ ಅಂತ ಮೂರು ಮಂದಿ ಮಕ್ಕಳಿದ್ದರು. ಆಶಾಪತಿ ಎಲ್ಲಾರೊಳಗ ಹಿರಿಯ; ಮುದ್ದಣ್ಣ ಎಲ್ಲಾರಿಗಿಂತ ಕಿರಿಯ.

ನೋಡಿದರ ಚಿಂತಾಮುಖರಾಜ, ಒಂದು ನಾಡಿನ ಅರಸ. ಇರಲಿಕ್ಕೆ ಸುಂದರವಾದ ಅರಮನಿ. ಉಡಲಿಕ್ಕೆ ಕಡಿಮಿಲ್ಲ; ತೊಡಲಿಕ್ಕೆ ಕಡಿಮಿಲ್ಲ. ತಿನ್ನಲಿಕ್ಕೆ ಉಣ್ಣಲಿಕ್ಕೆ ಬೇಕಾದಷ್ಟು. ಹೇಳಿದ ಕೆಲಸಮಾಡುವ ಊಳಿಗದವರಿದ್ದರು. ಅರಸಗ ಯಾಪ ಅನುಕೂಲತೆಗೂ ಕಡಿಮಿ ಇರಲಿಲ್ಲ— ಆದರೂ ಅಂವ, ಸದಾಸರ್ವದಾ ಚಿಂತಿಯೊಳಗs ಇರತಿದ್ದ.

ದೇಶದಾಗ ಜನಾ ಬಡವರಾದರೂ ಚಿಂತಿ— ಸಿರಿವಂತರಾದರೂ ಚಿಂತಿ. ಮಳಿ ಸಾಕಷ್ಟು ಆಗಿ, ಭೂಮಿ ಚೆನ್ನಾಗಿ ಬೆಳದರೂ ಚಿಂತಿ— ಬರಗಾಲ ಬಿದ್ದು ಬೆಳೀ ಬಾರದೇ ಹೋದರೂ ಚಿಂತಿ. ಮಿತ್ರರ ಸಲುವಾಗಿ ಒಂದೂ ರೀತಿಯ ಚಿಂತಿ— ಶತ್ರುಗಳ ಸಲುವಾಗಿ ಇನ್ನೊಂದು ರೀತಿಯ ಚಿಂತಿ. ಹೀಂಗಾಗಿ, ಅರಸನ ಅರಮನಿಯೊಳಗ, ನಾಡಿನೊಳಗ, ಸುಖ ಅಂಬೋದಕ್ಕ ಅಪ್ಪದಾನೇ ಇರಲಿಲ್ಲ. ಆಳೂ ಯಜಮಾನನs ಚಿಂತಿಯೊಳಗ ಮುಳುಮುಳುಗಿ ಏಳತಿರುವಾಗ, ಮಿಕ್ಕ ಮಂದಿಗಾದರೂ ಸುಖ ಅಂಬೂದು ಸಿಗುವ ಬಗಿ ಹ್ಯಾಂಗ? ತನ್ನ ಚಿಂತಿಯ ಸಲುವಾಗಿ ಅರಸ ಬ್ಯಾಸತ್ತಿದ್ದ. ಅವನ ಸಲುವಾಗಿ ಜನರೆಲ್ಲಾ ಬ್ಯಾಸತ್ತಿದ್ರು.

ಹೀಂಗs ಇರುವಾಗ ಒಂದು ದಿವಸ, ಒಬ್ಬ ಸಂನ್ಯಾಸಿ ಅರಸನ ಮನಿಗೆ ಬಂದ. ಅರಸ ಎದುರುಗೊಂಡು ಹೋಗಿ ಕರೆತಂದು, ಸಂನ್ಯಾಸಿಗೆ ಸತ್ಕಾರಮಾಡಿದ. ಅರಸನ ಚಿಂತಿ ತುಂಬಿದ ಮುಖಾ ನೋಡಿ, ಸಂನ್ಯಾಸಿ ತವಕಪಟ್ಟು ಕೇಳಿದ:

"ಯಾಕಪ್ಪಾ ಮಹಾರಾಜಾ ಬಹಳ ಚಿಂತಿಯೊಳಗ ಇದ್ದಾಂಗ ಕಾಣಿಸತಕದ?"

ಆಗ ಅರಸ ಅಳುಮಾರಿಯಿಂದಲೇ ಹೇಳಿದ:

"ಹೌದು ಸ್ವಾಮೀ! ಇಷ್ಟೆಲ್ಲಾ ಇದ್ದರೂ, ನನಗ ಜೀವನದೊಳಗ ಸುಖಾ ಅಂಬೂದು ಎಳ್ಳಷ್ಟೂ ಇಲ್ಲ ನನಗ ಸುಖಾ ಉಂಟಾಗೂ ಹಾಂಗ— ಏನಾದರೂ ಒಂದು ಉಪಾಯ ತೋರಬಾರದೇ?"

ಅರಸನ ಮಾತು ಕೇಳಿ ಸಂನ್ಯಾಸಿ, ದೊಡ್ಡನಗೀ ನಕ್ಕುಬಿಟ್ಟ: ಆ ಮ್ಯಾಲೆ ಸ್ವಲ್ಪ ತಡೆದು ಕುಳಿತು, ಪೆಲ್ಲಗೆ ಹೇಳಿದ:

"ರಾಜಾ, ನಿನಗ ಸುಖಾ ಉಂಟಾಗಲಿಕ್ಕೆ ಒಂದು ಉಪಾಯ ಅದ ಏನಪಾ! ಅದರ ಅದಕ್ಕ ಸ್ವಲ್ಪ ಕಷ್ಟಪಡಬೇಕಾಗತಕದ. ಶ್ರೀಪರ್ವತ ನಿನಗ ಗೊತ್ತs ಅದ.... ಅದರ ದಕ್ಷಿಣ ಶಿಖರದ ಮ್ಯಾಲ, ಒಬ್ಬಾಕಿ ಯಕ್ಷಿಣಿ ಇದ್ದಾಳ. ಆಕೀ ಪತ್ತರ ಒಂದು ಕೈವಸ್ತ್ರ ಅದ. ಅದಕ್ಕ 'ಸುಖದ ಚೌಕ' ಅಂತ ಹೆಸರು. ಅದನ್ನ ಸಂಪಾದಿಸಿಕೊಂಡು ಬಂದು, ಅರಮನಿಯೊಳಗ ಇಟ್ಟು, ಅದರ ಪೂಜೀ ಮಾಡತs ಹೋದರ, ನಿನಗ— ನಿನ್ನ ಮನಿಯ ಜನಕ್ಕ— ಸುಖಾ ಅಂಬೂದು ತಪ್ಪೂದಿಲ್ಲ ನೋಡು!"

ಸಂನ್ಯಾಸಿಯ ಮಾತು ಕೇಳಿದ ಅರಸ, ಮತ್ತೆ ಚಿಂತಿ ಕೂಡಿದ ದನೀ ತಗದು ಹೇಳತೊಡಗಿದ:

"ಯಾರು ಸ್ವಾಮೀ ಅಲ್ಲಿಗೆ ಹೋಗವರು....ಯಾರು ಆ ಚೌಕ ಪನ್ನ ಸಂಪಾದಿಸಿ ತರುವವರು....? ಎಲ್ಲಾ...."

ಅರಸ ಹೀಂಗ ಮಾತಾಡತಿರುವಾಗs ಆಶಾಪತಿ ಅಶುರದಿಂದ ಹೇಳಿದ:

"ನಾ ಹೋಗತೀನಿ....ಅದನ್ನ ಸಂಪಾದಿಸಿ ತರತೀನಿ!"

ಲೋಭರಾಜ ಹೇಳಿದ:

"ನಾ ಹೋಗತೀನಿ; ಹ್ಯಾಂಗಾರೆದರೂ ಮಾಡಿ ಆ ಯಕ್ಷಿಣಿಯ ಕೈಯಿಂದ ಆ ಚೌಕಾ ಇಸಕೊಂಡು ಬರತೀನಿ!"

ಮುದ್ದಣ್ಣ ಹೇಳಿದ:

"ಹಿರಿಯರು ನನಗ ಅಪ್ಪಣೀ ಮಾಡಿದರ, ನಾ ಹೋಗಿ ಅದನ್ನ ಸಂಪಾದಿಸಿಕೊಂಡು ಬರತೀನಿ!"

ಆಗ ಸಂನ್ಯಾಸಿ ಆಶಾಪತಿಯನ್ನ ಕರೆದು ಹೇಳಿದ:

"ರಾಜಕುಮಾರಾ, ನೀನು ಹಿರಿಯ ಮಗ! ಇದು ನಿನ್ನ ಕರ್ತವ್ಯ. ಸುಖದ ಚೌಕವನ್ನ ತರಲಿಕ್ಕೆ ನೀನೇ ಹೋಗು! ಏನೇ ಆಗಲಿ, ಮೂರು ತಿಂಗಳೊಳಗ ನೀನು ಇಲ್ಲಿಗೆ ಮರಳಿ ಬರಲಿಕ್ಕೇ ಬೇಕು"

ಪಯಣದ ದಾರಿಯ ಗುರುತುಗಳನ್ನೆಲ್ಲಾ ಆಶಾಪತಿ ಕೇಳಿ ಕೊಂಡ ತನ್ನ ಕರಿಯ ಕುದುರೆಯನ್ನೇರಿ, ಶ್ರೀಗಿರಿಯ ದಕ್ಷಿಣ ಶಿಖರಕ್ಕ ಹೊರಟ. ನಾಡೆಲ್ಲಾತೀರಿ, ಹಾದಿ ಕಾಡಿನೊಳಗ ಸಾಗಿತು. ದಟ್ಟವಾದ ಮುಳ್ಳುಗಿಡಗಳಿಂದ ತುಂಬಿದ ಕಗ್ಗಾಡು. ಹತ್ತು ಮಂದಿ ಕೂಡಿ ಹೋದರೂ ಅಲ್ಲಿ ಹೆದರಿಕೆ ಬರಬೇಕು— ಅಂಥಾ

---

* ತಾ. ೧೪-೧-೫೦ ರಂದು ಧಾರವಾಡದ ಬಾನುಲಿಕಟ್ಟೆಯಲ್ಲಿ ಕೂಡಿದ ಗೆಳೆಯಿಂದಿನ ಮುಂದೆ ಹೇಳಿದ್ದು.

ಸಂ. ಜ.

ಘೋರಾರಣ್ಯ. ಆಶಾಪತಿ ಗಟ್ಟಿಯೆದೆ ಮಾಡಿಕೊಂಡು, ಕಾಡಿನ ದಾರಿಯೊಳಗ ನಡಿದಿದ್ದ. ಆಗ ದಾರಿಯ ಪಕ್ಕದೊಳಗ, ಒಬ್ಬ ಮುಪ್ಪಿನ ಮುದುಕ ಬಿದ್ದುಕೊಂಡಿದ್ದ. ಮೈತುಂಬ ಕೈತುಂಬ ಮುಳ್ಳು ನೆಟ್ಟಿದ್ದುವು. ಮುದುಕ ಒಂದೇ ಸವನೆ ನೋವಿನಿಂದ ನರಳತಿದ್ದ. ಅತ ಆಶಾಪತಿನ್ನ ನೋಡಿ ಕೂಗಲಾರಂಭಿಸಿದ:

"ಅಪ್ಪಾ, ಏ ಕುದರೀ ದೊರೀ! ಇಲ್ಲಿ ಸ್ವಲ್ಪ ಬಾರಪಾ!....ಒಂದಕ ಒಂದು ಅರಗಳಿಗಿ ನನ್ನ ಹತ್ತೀಲಿ ಕೂಡು. ಈ ನಟ್ಟಿರುವ ಮುಳ್ಳನ್ನೆಲ್ಲಾ ಕಿತ್ತಿ ತಗಿ! ಬಾ ಮಾರಾಯಾ! ನಿನಗ ಪುಣ್ಯಾ ಬರತಕದ"

ಆಶಾಪತಿ ತಿರುಗಿ ಕೂಡ ನೋಡಲಿಲ್ಲ. ಹಾಂಗs ಮುಂದಕ್ಕ ಕುದರೀ ಹೊಡೆದ. ಕೆಲವು ಮೈಲು ನಡೆದು ಹೋದ ಮ್ಯಾಲೆ, ದಾರಿಯ ಬಲಗಡೆಗೆ ಒಂದು ದೊಡ್ಡ ಮಾವಿನ ಮರ ಕಂಡಿತು. ಮರವ ತುಂಬಾ ಹಣ್ಣು ತೂಗಾಡತಿದ್ದುವು. ಕೆಳಗ ಒಬ್ಬ ಚಿಕ್ಕ ಹುಡುಗ ನಿಂತುಕೊಂಡಿದ್ದ. ಬಡಕಲು ಮೈ—ಬಳಲಿದ ಮುಖಭಾವ. ಹುಡುಗ ಆಶಾಪತಿಗೆ ಹೇಳಿದ:

"ಅಣ್ಣಾ, ಮೂರು ದಿನಾ ಆಯ್ತು,.....ನಮ್ಮ ತಾಯಿ ಸತ್ತು ಹೋದಳು. ಮೂರು ದಿನದಿಂದಲೂ ನನಗ ಹೊಟ್ಟಿಗೇನೂ ಇಲ್ಲ. ಕಾಡಿನೊಳಗ ಇಲ್ಲೆ, ಈ ಮಾವಿನ ಹಣ್ಣು ತಿಂದುಕೊಂಡೇ ನಾನು ಬದುಕಬೇಕು. ಮರ ಎತ್ತರ, ನನ್ನ ಕೈಗೆ ಎಟಕೂದಿಲ್ಲ. ನೀನು ಕುದರೀ ಮ್ಯಾಲೆ ಕೂತುಕೊಂಡೀದಿ....ನಿನಗ ನಿಲಕತಾವ. ನನಗೊಂದು ನಾಲ್ಕು ಹಣ್ಣು ತಗಮಕೊಡು ಅಣ್ಣಾ! ನಿನಗ ಒಳ್ಳೀದಾಗತಕದ!"

ಆಶಾಪತಿ ಹುಡುಗನ ಮಾತನ್ನ ಲೆಕ್ಕಿಸಲೇ ಇಲ್ಲ. ಕೈಗೆ ನಿಲುಕಿದ ಹತ್ತಾರು ಹಣ್ಣುಗಳನ್ನ ತಾನೇ ತೆಗೆದುಕೊಂಡು, ತಿನ್ನುತ್ತ ಕುದುರಿಯನ್ನ ಮುಂದ ನೂಕಿದ. ಹುಡುಗ ದೈನ್ಯದ ನೋಟದಿಂದ ನೋಡತಾ ನಿಂತಿತ್ತು. ಕುದುರಿ ಮುಂದೆ ಸಾಗಿತು.

ಕೆಲವು ಹರದಾರಿ ಪ್ರಯಾಣ ಮುಂದುವರಿಯಿತು. ಮುಂದೆ ದಾರಿಯ ಬದಿಯಲ್ಲಿಯೆ ಒಂದು ತುಂಬಿದ ಸರೋವರ ಕಂಡಿತು. ಸರೋವರದ ತುಂಬಾ ತಾವರೆಯ ಬಳ್ಳಿ ಹಬ್ಬಿಕೊಂಡಿತ್ತು. ಸರೋವರದ ನಟ್ಟನಡುವೆ, ಒಂದು ಕಮಲದ ಬಳ್ಳಿಯನ್ನ ಹಿಡಿದುಕೊಂಡು, ತೇಲತಾ ಮುಳುಗುತಾ ಇದ್ದ ಒಬ್ಬ ಹೆಂಗುಸು ಕೂಗತೊಡಗಿದ್ದಳು:

"ಅಯ್ಯಯ್ಯೋ! ನೀರೊಳಗ ಮುಳಿಗಿ ಸಾಯತೀನಿ... ಯಾರಾದರೂ ಬರ್ರಿ! ಸಹಾಯ ಮಾಡಿರಿ! ಅಯ್ಯೋ... ಬೇಗನೆ ಬರ್ರಿ!"

ಆಶಾಪತಿ ನಿಂತು ನೋಡಿದ. ಆ ಹೆಂಗುಸು ಮತ್ತೆ ಕೂಗಿಕೊಂಡಳು:

"ಅಣ್ಣಯ್ಯಾ, ಕೈಕಾಲು ಸೋತುಹೋಗಿವೆಯಪ್ಪಾ! ಬ್ಯಾಗನ ಬಂದು ನನ್ನ ಪ್ರಾಣಾ ಉಳಿಸು! ನಿನ್ನ ಮನಿತನಕ್ಕ ಸುಖಾಸಿಗಲಿ!"

ಆಶಾಪತಿ ಹಾಂಗs ಕುದರಿ ಮುಂದಕ್ಕ ಸಾಗಿಸಿದ; ದಟ್ಟವಾದ ಕಾಡಿನೊಳಗ ಹೊಕ್ಕಾಂವ ಹೋಗಿಯೇ ಬಿಟ್ಟ.

ತಿಂಗಳಾಯಿಶು; ಎರಡು ತಿಂಗಳಾಯಿಶು; ಮೂರನೆಯ ತಿಂಗಳೂ ಮುಗಿಯಿತು. ಆಶಾಪತಿ ಹೋದಂವ ಮರಳಿ ಬರಲೇ ಇಲ್ಲ. ಚಿಂತಾಮುಖರಾಜನ ಚಿಂತಿ ಹೆಚ್ಚಾಗಿಬಿಟ್ಟಿತು. ಆಗ ಸಂನ್ಯಾಸಿ ಲೋಭರಾಯನ್ನ ಕರೆದು ಹೇಳಿದ:

"ರಾಜಕುಮಾರಾ, ಈಗ ನಿನ್ನ ಸರತಿ ಬಂತು. ನೀನು ಹೊರಡು! ಆ ಸುಖದ ಜೌಕವನ್ನ ಸಂಪಾದಿಸಿಕೊಂಡು ಬಾ! ಅದು ನಿನಗ ಸಿಕ್ಕಿತಂದರ, ನಿನ್ನ ಅಣ್ಣಾ ಎಲ್ಲಿ ಇದ್ದಾನಂಬೂದೂ ನಿನಗ ಗೊತ್ತಾಗತಕದ. ಮೂರು ತಿಂಗಳೊಳಗ ರಾಜಧಾನಿಗೆ ಮರಳಬೇಕು.

ತನ್ನ ಪ್ರೀತಿಯ ಕೆಂಗುದುರಿಯನ್ನ ಏರಿಕೊಂಡು, ಲೋಭರಾಯ ಪಯಣ ಹೊರಟ. ನಾಡನೆಲ್ಲಾ ದಾಟಿ, ಕಗ್ಗಾಡಿನೊಳಗ ಸೇರಿದ. ದಾರಿಯಲ್ಲಿ ಈತನಿಗೂ—ಮುಳ್ಳುನೆಟ್ಟು ಬಿದ್ದ ಮುದುಕ, ಹಸಿದು ಕಂಗೆಟ್ಟ ಹುಡುಗ ಭೆಟ್ಟಿಯಾದರು. ಕೆರೆಯೊಳಗ ತೇಲತಾ ಮುಳಗತಾ ಬಿದ್ದಿದ್ದ ಹೆಂಗುಸೂ ಕಣ್ಣಿಗೆ ಬಿದ್ದಳು. ಇವನೂ ಆಶಾಪತಿಯಂತೆಯೆ ಅವರೆಲ್ಲರ ಬೇಡಿಕೆಗಳನ್ನು ಬೀಳುಗಳೆದು ಮುಂದೆ ಮುಂದೆ ಸಾಗಿದ. ಕಗ್ಗಾಡು ತುಂಬಿದ ಬೆಟ್ಟದೆದೆಯೊಳಗ ಸೇರಿದ. ಎಲ್ಲಿಗೆ ಹೋದನೇನೋ! ಲೋಭರಾಯನ ಸಮಾಚಾರವೇ ಇಲ್ಲ.

ಮತ್ತೆ ಮೂರು ತಿಂಗಳು ಮುಗಿದು ಹೋದುವು. ಅರಸ ಹೊರಲಾರದ ಚಿಂತಿಯಿಂದ ಹಾಸಿಗೆಯನ್ನೇ ಹಿಡಿದುಬಿಟ್ಟ. ಆಗ ಸಂನ್ಯಾಸಿ ಮುದ್ದಣ್ಣನ್ನ ಕರೆದು ಹೇಳಿದ:

"ಮುದ್ದಣ್ಣಾ, ಸುಖದ ಜೌಕವನ್ನ ಸಂಪಾದಿಸುವುದು ನಿನ್ನ ಇಬ್ಬರು ಅಣ್ಣಂದಿರ ಕೈಯಿಂದೇನೂ ಸಾಧ್ಯವಾಗಲಿಲ್ಲಾ ಅಂತ ಕಾಣತಕದ. ಈಗ ನೀನು ಏನಾದರೂ ಪ್ರಯತ್ನ ಮಾಡಬಲ್ಲೆಯೇನು?"

"ತಾವು ಆಶೀರ್ವಾದ ಕೊಟ್ಟು ಕಳಿಸಿದರ, ಅವಶ್ಯ ಪ್ರಯತ್ನ ಮಾಡತೀನಿ!"

ಸಂನ್ಯಾಸಿ ಮತ್ತೆ ಪ್ರೀತಿಯಿಂದ ಹೇಳಿದ:

"ಹೋಗು, ಜಯಶಾಲಿಯಾಗಿ ಬಾ!"

ತನ್ನ ಪ್ರೀತಿಯ ಬಿಳಿಯ ಮರಿಗುದರಿಯನ್ನು ಹತ್ತಿ ಮುದ್ದಣ್ಣ ಹೊರಟ. ನಾಡನೆಲ್ಲಾ ದಾಟಿ ಕಾಡಿನೊಳಗ ಸೇರಿದ. ದಾರಿಗುಂಟ ಹೋಗತಿರುವಾಗ, ದನಿಯೊಂದು ಕೇಳಿಸಿತು:

"ಆಯ್ಯೋ ಮುಳ್ಳು! ಮೈತುಂಬಾ ಮುಳ್ಳು ನೆಟ್ಟಿವೆ. ಯಾರಾದರೂ ಬಂದು ನೆರವಾಗಿರಿ!"

ಮುದ್ದಣ್ಣ ಗಕ್ಕನೆ ಕುದರಿಯನ್ನ ನಿಲ್ಲಿಸಿ, ಇಳಿದು ಹೋಗಿ ನೋಡಿದ. ತ್ರಾಣಗುಂದಿದ ಮುದುಕನೊಬ್ಬ ತಗ್ಗಿನಲ್ಲಿ ಬಿದ್ದುಕೊಂಡಿದ್ದ; ಮೈತುಂಬ ಮುಳ್ಳುಗಳು ಮುತ್ತಿದ್ದವು. ಮುದ್ದಣ್ಣ ಓಡಿಹೋಗಿ, 'ಅಯ್ಯೋ!' ಎಂದು ಮರುಗಿದ. ಕರಗಿದ ಎದೆಯಿಂದ ಮುದುಕನ ಬಳಿ ಕುಳಿತು, ಒಂದೊಂದಾಗಿ ಮುಳ್ಳುಗಳನ್ನ ಕಿತ್ತಿ ತೆಗೆದ. ತನಗೆ ಗೊತ್ತಿದ್ದ ಕಾಡುಸೊಪ್ಪನ್ನ ತಂದು, ಅರೆದು ರಸಾತೆಗೆದು, ಮುದುಕನ ಮೈಗೆ ಲೇಪಿಸಿದ. ಮುದುಕ ಸಮಾಧಾನದಿಂದ ಎದ್ದುನಿಂತು 'ನಿನಗೆ ಸುಖವುಂಟಾಗಲಿ!' ಎಂದು ಹರಸಿ, ಕಾಡಿನಲ್ಲಿ ಮಾಯವಾದ.

ಹಾಗೇ ಮುಂದೆ ಮುಂದೆ ದಾರಿ ನಡೆಯುತಿರುವಾಗ, ದೊಡ್ಡ-

ದಾದ ಮಾವಿನ ಮರ ಕಂಡಿತು. ಅದರ ಅಡಿಯಲ್ಲಿ ನಿಂತ ಬಡಕಲು ಮೈಯ ಹುಡುಗ ಕೂಗಿ ಹೇಳಿತು :

" ಅಣ್ಣಯ್ಯಾ, ಮೂರು ದಿನಾ ಆಯ್ತಾಗ....ಹೊಟ್ಟೆಗೇನೇನೂ ಇಲ್ಲ. ನಮ್ಮ ಅವ್ವ ಸತ್ತುಹೋಗಿದ್ದಾಳೆ. ಈ ಮಾವಿನ ಹಣ್ಣುತಿಂದೇ ನಾನು ಬದುಕಬೇಕು. ನನ್ನಕ್ಕೆಗೆ ಹಣ್ಣು ನಿಲುಕುವುದಿಲ್ಲ. ನೀನು ಬಂದು, ಒಂದು ನಾಲ್ಕು ಹಣ್ಣು ತೆಗೆದುಕೊಡು ಅಣ್ಣಯ್ಯಾ ! "

ಮಗುವಿನ ದೈನ್ಯಸ್ವರಾ ಕೇಳಿ ಮುದ್ದಣ್ಣ, ಕುದುರೆಯನ್ನ ನಿಲ್ಲಿಸಿದ. ಕೆಳಗಿಳಿದು ಹೋಗಿ, ಮಗುವಿನ ಮೈಮೇಲೆ ಕೈಯಾಡಿಸಿದ. ಸೆಲ್ಲೆಯದ ಸೆರಗಿನಿಂದ ಅದರ ಕಣ್ಣೀರು ಒರಸಿದ. ಮರ ಹತ್ತಿ, ಬೇಕಾದಷ್ಟು ಹಣ್ಣು ತೆಗೆದು, ಮುಂದೆ ಕುಳಿತು ತಾನೇ ತಿನ್ನಿಸಿದ. ತಿಂದು ತೃಪ್ತನಾದ ಹುಡುಗ ' ಅಣ್ಣಾ, ನಿನಗ ಸುಖಾ-ಸಂಪತ್ತು ಸಿಕ್ಕಲಿ ! ' ಅಂತ ಕೈಯೆತ್ತಿ ಹರಸಿ, ಕಾಡಿನಲ್ಲಿ ಮಾಯವಾದ.

ಮತ್ತೆ ಮುಂದುವರಿಯಿತು ಮುದ್ದಣ್ಣನ ಸವಾರಿ. ಕಳೆದುವು ನಾಲ್ಕಾರು ಹರದಾರಿ ! ದಾರಿಯ ಬಳಿಯ ಕೆರೆಯೊಳಗಿಂದ ಕೂಗೊಂದು ಕೇಳಬಂತು :

" ಅಯ್ಯೊ, ಮುಳಿಗಿ ಸಾಯುತ್ತೇನೆ,.....ಕೈಕಾಲು ಸೋತು ಹೋಗಿವೆ !! ಸಹಾಯ.....ಯಾರಾದರೂ ಬಂದು ಸಹಾಯ ಮಾಡಿರಪ್ಪಾ ! "

ಮುದ್ದಣ್ಣ ಮತ್ತೆ ಕುದುರಿಯನ್ನು ನಿಲ್ಲಿಸಿದ. ಕೆರೆಯ ನಟ್ಟ ನಡುವೆ, ಕಮಲದ ಬಳ್ಳಿಯ ತುದಿಯೊಂದನ್ನು ಹಿಡಿದು, ತೇಲುತ್ತ ಮುಳುಗುತ್ತ ಒದ್ದಾಡುತ್ತಿರುವ ಹೆಂಗುಸನ್ನು ಕಂಡು, ಜಿಕ್ಕನೆ ಕುದುರಿಯಿಂದ ಕೆಳಗೆ ಜಿಗಿದ. ಹಿಂದೆ ಮುಂದೆ ಏನನೂ ನೋಡದೆ, ತುಂಬಿದ ಕೆರೆಯೊಳಗೆ ಧುಮುಕಿ ಈಜುತ್ತ ಹೊರಟ. ದಾರಿಯಲ್ಲಿ ಕಮಲದ ಬಳ್ಳಿಗಳು ಕಾಲಿಗೆ ತೊಡಕತಿದ್ದುವು. ಬಿಡಿಸಿಕೊಂಡು ಮುಂದೆ ಸಾಗತಿದ್ದ. ನೀರ ಹಾವುಗಳು ಭುಸ್ಸೆಂದು ಬಾಯ್ದೆರೆದು ಬರತಿದ್ದುವು. ಕೈಯಿಂದಲೇ ಅವುಗಳನ್ನ ಹಿಂದಕ್ಕ ನೂಕತಿದ್ದ. ಈಜತಾ ಈಜತಾ ನಡುಗೆರೆಗೆ ಹೋಗಿ, ಆ ಹೆಂಗುಸನ್ನು ಕೈಕೊಟ್ಟು ಕರೆದುಕೊಂಡು, ದಂಡೆಗೆ ತಂದು ಬಿಟ್ಟ. ಆ ಹೆಂಗುಸು ಹೊರಗ ಬಂದು, ಮುದ್ದಣ್ಣನ್ನ ಮೆಚ್ಚಿಕೆಯ ನೋಟದಿಂದ ನೋಡಿದಳು. ಕೈಯಲ್ಲಿ ಹಿಡಿದಿದ್ದ ಕಮಲದ ಎಲೆಯನ್ನ ಆತನಿಗೆ ಕೊಡತಾ ಹೇಳಿದಳು :

" ರಾಜಕುಮಾರಾ ! ನೀನು ಯಾರೆಂಬುದನ್ನು ನಾನು ಬಲ್ಲೆ. ನೀನು ನನಗೆ ಮಾಡಿದ ಉಪಕಾರ ಘನವಾದದ್ದು. ಇದನ್ನು ನಾನು ಹೇಗೆ ತೀರಿಸಲಿ ? ಇದನ್ನು ತೆಗೆದುಕೊ ! ಈ ಕಮಲದ ಎಲೆ ನನ್ನ ಕೃತಜ್ಞತೆಯ ಗುರುತಾಗಿ ನಿನ್ನ ಬಳಿಯಲ್ಲಿಯೆ ಇರಲಿ ! "

ಅಂತ ಹೇಳಿ, ಕಮಲದ ಎಲೆಯನ್ನ ಕೊಟ್ಟು, ಆ ಹೆಂಗುಸು ಕಾಡಿನಲ್ಲಿ ಮಾಯವಾದಳು.

ಮುದ್ದಣ್ಣ ಒದ್ದೆಬಟ್ಟೆ ಕಳೆದು, ಒಣಬಟ್ಟೆ ಉಟ್ಟುಕೊಂಡ. ಕೆರೆಯ ದಂಡೆಯ ಮರದ ಕೆಳಗೆ ಕುಳಿತು, ಅಂದಿನ ಊಟ ಮುಗಿಸಿದ. ಹಾಗೆಯೆ ಕುಳಿತಿರುವಾಗ, ಕಣ್ಣಿಗೆ ನಿದ್ದೆ ಕವಿಯತೊಡಗಿತು. ಕುಳಿತಲ್ಲಿಯೆ ಒರಗಿಕೊಂಡ. ನಿದ್ದೆ ಹತ್ತಿ ಒಂದರಹಿಂದೊಂದು ಸುಂದರವಾದ ಕನಸುಗಳು ಬೀಳತೊಡಗಿದುವು. ಇದ್ದುದಿದ್ದ ಹಾಗೆಯೆ, ಕನಸಿನಲ್ಲಿ ಜೊಲುವೆಯಾದ ದೇವಿಯೊಬ್ಬಳು ಕಾಣಿಸಿಕೊಂಡು ಹೇಳಿದಳು :

" ಮುದ್ದಣ್ಣಾ, ನೀನು ನನ್ನ ಪರೀಕ್ಷೆಯಲ್ಲಿ ಒರೆಗೆ ಇಳಿದಿ. ನಾನು ನಿನಗೆ ಮೆಚ್ಚಿ ಸುಖದ ಚೌಕವನ್ನು ಒಪ್ಪಿಸಿದ್ದೇನೆ. ನೀನಿನ್ನು ನಿನ್ನ ಪ್ರಯಾಣ ಮುಗಿಸಿ ಮನೆಗೆ ಹೊರಡು ! "

ಮುದ್ದಣ್ಣನಿಗೆ ಫಕ್ಕನೆ ಎಚ್ಚರಾಯಿತು. ಎದ್ದು ಕುಳಿತು, ಕಣ್ಣು ತಿಕ್ಕಿಕೊಳ್ಳುತ್ತ ಸುತ್ತಲೂ ನೋಡತೊಡಗಿದ. ಮೇಲಗು ವಾಗ ಕಲೆಯ ಬಳಿಯಲ್ಲಿಯೆ ಇಟ್ಟುಕೊಂಡಿದ್ದ ಕಮಲದ ಎಲೆ ಅಲ್ಲಿ ಇರಲಿಲ್ಲ. ಅದೇ ಸ್ಥಳದಲ್ಲಿ ಒಂದು ಸುಂದರವಾದ ರೇಶಿಮೆಯ ಕೈವಸ್ತ್ರವಿತ್ತು. ಆಶ್ಚರ್ಯದಿಂದ ಅದನ್ನು ಕೈಯಲ್ಲಿ ತೆಗೆದುಕೊಂಡ. ಮಡಿಕೆಯನ್ನು ಬಿಚ್ಚಿ ನೋಡಿದ. ಅದರ ಮೇಲೆ, ಮುತ್ತಿನಂತಹ ಕನ್ನಡ ಅಕ್ಷರಗಳಿಂದ ಬರೆದಿದ್ದಿತು : ' **ಸುಖದ ಚೌಕ** ' ಎಂದು. ಅದರ ಕೆಳಗೆ ಮತ್ತೆ ಎರಡು ಸಾಲುಗಳಿದ್ದುದನ್ನ ಮುದ್ದಣ್ಣ ನೋಡಿದ , ಆತುರದಿಂದ ಓದಿಕೊಂಡ :

" ಇನ್ನೊಬ್ಬರ ಸುಖಕೆಂದೇ ನೀ ದುಡಿಯಲು ಬೇಕು !
ಇನ್ನೊಬ್ಬರ ಸುಖದಲ್ಲಿಯೆ ನಿನ್ನ ಸುಖವ ಹುಡುಕು ! "

ಮುದ್ದಣ್ಣನಿಗೆ ತುಂಬ ಸಂತೋಷವಾಯಿತು. ಹಾಗೇ ಎದ್ದು, ಕುದುರೇಹತ್ತಿ, ರಾಜಧಾನಿಯ ಕಡೆಗೆ ಮರುಪಯಣ ಬೆಳಸಿದ. ಬ್ಯಾಗಬ್ಯಾಗನೆ ಕುದುರೆಯನ್ನೋಡಿಸಿ ತನ್ನ ಪಟ್ಟಣವನ್ನು ಕಲ್ಪಿದ.

ಮುದ್ದಣ್ಣ ಗೆಲವಿನಿಂದ ಬಂದನೆಂಬುದು ಚಿಂತಾಮುಖರಾಜನಿಗೆ ತಿಳಿಯಿತು. ಆಗ ಅಂವ ಸಂತೋಷಚಿತ್ತನಾಗಿ ಎದ್ದು, ಸಂಭ್ರಮದಿಂದ ಹೋಗಿ ಮಗನ್ನ ಎದುರುಗೊಂಡು ಮನಿಗೆ ಕರೆದು ತಂದ. ಮುದ್ದಣ್ಣ ಸಂನ್ಯಾಸಿಗೆ ನಮಸ್ಕರಿಸಿ, ತಾನು ತಂದ ಸುಖದ ಚೌಕವನ್ನ ಆತನಿಗೆ ಒಪ್ಪಿಸಿ, ನಡೆದ ಸಂಗತಿಯನ್ನೆಲ್ಲಾ ವಿಸ್ತರಿಸಿ ಹೇಳಿದ. ಸಂನ್ಯಾಸಿ ಮೆಚ್ಚಿ, ಮುದ್ದಣ್ಣನ ಮೈಯನ್ನ ನೇವರಿಸಿ, ಆಶೀರ್ವಾದ ಮಾಡಿದ. ಸುಖದ ಚೌಕವನ್ನ ಅರಮನೆಯ ದೇವರ ಜಗುಲಿಯಲ್ಲಿರಿಸಿ ಪೂಜೆ ಮಾಡಿಸಿದ. ಅಂದಿಯೆ ಚಿಂತಾಮುಖರಾಜನ ಹೆಸರನ್ನ ಬದಲಿಸಿ ' ಸಂತೋಷಚಿತ್ತ ' ಅಂತ ಹೊಸಾ ಹೆಸರನ್ನು ಇಟ್ಟು, ತನ್ನ ಆಶ್ರಮಕ್ಕೆ ಹೊರಟುಹೋದ.

ಆಶಾಪತಿ, ಲೋಭರಾಯ ಇಬ್ಬರೂ ಹೋದವರು ತಿರುಗಿ ಬರಲೇ ಇಲ್ಲ. ಸಂತೋಷಚಿತ್ತರಾಜ, ಹೋದ ಮಕ್ಕಳ ನೆನಪನ್ನೂ ಮರೆತು, ಸುಖದಿಂದ ನಲಿಯ ತೊಡಗಿದ. ತನಗೆ ವಯಸ್ಸಾದುದರಿಂದ, ರಾಜ್ಯದ ವ್ಯವಸ್ಥೆಯನ್ನೆಲ್ಲಾ ಮುದ್ದಣ್ಣನ ಕಡೆಗೆ ಒಪ್ಪಿಸಿಕೊಟ್ಟ. ಮುದ್ದಣ್ಣ ತನ್ನ ಪಟ್ಟಣದ ಆಗಸೆಬಾಗಿಲ ಮೇಲೆ ಹೀಂಗ ಬರೆಯಿಸಿದ :

" ಇನ್ನೊಬ್ಬರ ಸುಖಕೆಂದೇ ನೀ ದುಡಿಯಲು ಬೇಕು !
ಇನ್ನೊಬ್ಬರ ಸುಖದಲ್ಲಿಯೆ ನಿನ್ನ ಸುಖವ ಹುಡುಕು ! "

ಮುದ್ದಣ್ಣನ ರಾಜ್ಯದಲ್ಲಿ ಎಲ್ಲರೂ ಸುಖದಿಂದಿದ್ದರು. ಶಾಂತಿಯಿಂದಿದ್ದರು. ನಾವೂ ಹಾಗೆಯೆ ಇರೋಣ--ಅದಕ್ಕಾಗಿ ನಾವೂ ಸುಖದ ಚೌಕವನ್ನ ಸಂಪಾದಿಸೋಣ ! !

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

'ಸಾಹಿತ್ಯವಿಮರ್ಶೆಯ ಶಿಕ್ಷಣರಂಗ' ನಮ್ಮ ಜನರಿಗೆ ಹೆಚ್ಚು ಪ್ರಿಯವೂ ಉಪಯುಕ್ತವೂ ಎನಿಸುತ್ತಿರುವುದು ಸಂತೋಷದ ಸಂಗತಿ. ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ರಾಮಿ' ಕತೆಯನ್ನು ಕುರಿತು ೧೬ ಜನರಿಂದಲೂ 'ಒಂದು ದಿನದ ತಾಯ್ತನ' ಎಂಬುದನ್ನು ಕುರಿತು ೭ ಜನರಿಂದಲೂ ವಿಮರ್ಶೆಗಳು ಬಂದಿವೆ.

'ರಾಮಿ'ಯ ವಿಮರ್ಶಕರು :— ೧ ಶ್ರೀ. ಫತ್ತೇಪುರ ಶಾಮಣ್ಣ, ಗದಗು; ೨ ಶ್ರೀ. ವಿರೂಪಾಕ್ಷ ಎಸ್. ಸೆಟ್ಟಿ ಭೋಜ; ೩ ಶ್ರೀ. 'ಪೀರಾ' ಹಾಸನ; ೪ ಶ್ರೀ. ಪೋತ ಶ್ರೀಕಾಂತ, ಶಮನೇವಾಡಿ; ೫ ಶ್ರೀ. ಸಂ. ವಿ. ಸೆಟ್ಟಿ, ಶಮನೇವಾಡಿ; ೬ ಶ್ರೀ. ಎಂ. ಕೆ. ಸುವರ್ಣ, ಮುಂಬಯಿ; ೭ ಶ್ರೀ. ಅನಂತ ಬುರ್ಲಿ, ಬಾಗಲಕೋಟೆ; ೮ ಶ್ರೀ. ಜಯತೀರ್ಥ ರಾಜಪುರೋಹಿತ ಬಿ. ಎ. ಹೈದರಾಬಾದ್; ೯ ಶ್ರೀ. ಎಸ್. ಎಸ್. ಪುರುಹನ್, ಬಂಕಿಕೊಡ್ಲು; ೧೦ ಶ್ರೀ. ಡಿ. ಜಿ. ಗುಮಾಸ್ತೆ ಡಿ ಎ. ವಿ. ಕಾಲೇಜ್, ಸೊಲ್ಲಾಪುರ; ೧೧ ಶ್ರೀ. ಬಾಳು ಬಿ. ಉಪಾಧ್ಯೆ, ಶಮನೇವಾಡಿ; ೧೨ ಶ್ರೀ. ಗೌತಮ, ಚಿತ್ರದುರ್ಗ; ೧೩ ಶ್ರೀ. ಮುರಡೇವ, ಧಾರವಾಡ; ೧೪ ಶ್ರೀ. ಕೆ. ವಿ. ಸುಬ್ಬಣ್ಣ, ಇಂ. ವಿಜ್ಞಾ. ಕಾಲೇಜ್, ಶಿವಮೊಗ್ಗ; ೧೫ ಶ್ರೀ. ಜಿ. ಎಸ್. ಮತಕರ್ ಎಂ. ಎ, ಬಿ. ಟಿ. ಪುಣೆ ೧೬ ಶ್ರೀಮತಿ ಭಾಗೀರಥಿಬಾಯಿ, ಕನ್ನಡ ಅಧ್ಯಾಪಿಕೆ, ನಿಡಸೋಸಿ.

'ಒಂದು ದಿನದ ತಾಯ್ತನ'ದ ವಿಮರ್ಶಕರು :— ೧ ಶ್ರೀ. ವಿರೂಪಾಕ್ಷ ಎಸ್. ಸೆಟ್ಟಿ, ಭೋಜ; ೨ ಶ್ರೀ. ದಾರಥಿ ಚಿತ್ರದುರ್ಗ; ೩ ಶ್ರೀ. ಪೋತ ಶ್ರೀಕಾಂತ, ಶಮನೇವಾಡಿ; ೪ ಶ್ರೀ. 'ಮಹಾದೇವ' ಬಾದಾಮಿ; ೫ ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ; ೬ ಶ್ರೀಮತಿ ಪದ್ಮಾ, ಬೆಂಗಳೂರು; ೭ ಶ್ರೀ ಎಚ್. ಟಿ. ನರಸಿಂಹಮೂರ್ತಿ, ಬೆಂಗಳೂರು.

ಈ ಸಲದ ವಿಮರ್ಶೆಗಳನ್ನು ಸಂಪಾದಕ ಸಮಿತಿಯೇ ಪರೀಕ್ಷಿಸಿ ತೀರ್ಮಾನವನ್ನು ಕೊಟ್ಟಿದೆ: 'ರಾಮಿ' ಕತೆಯನ್ನು ವಿಮರ್ಶಿಸಿ ಬರೆದು ಬಂದವುಗಳಲ್ಲಿ **ಶ್ರೀ ಜಯತೀರ್ಥ ರಾಜಪುರೋಹಿತ ಬಿ.ಎ.** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ ಅನಂತ ಬುರ್ಲಿ, ಬಾಗಲಕೋಟೆ, ಶ್ರೀ. ಕೆ. ವಿ. ಸುಬ್ಬಣ್ಣ, ಶಿವಮೊಗ್ಗ ಅವರ ವಿಮರ್ಶೆಗಳೂ ಉತ್ತಮವಾಗಿವೆ. ಶ್ರೀ. ಪೋತ ಶ್ರೀಕಾಂತ, ಶ್ರೀ. ಡಿ. ಜಿ. ಗುಮಾಸ್ತೆ, ಶ್ರೀ. ಬಾಳು ಬಿ. ಉಪಾಧ್ಯೆ ಅವರ ವಿಮರ್ಶೆಗಳು ಚೆನ್ನಾಗಿವೆ.

'ಒಂದು ದಿನದ ತಾಯ್ತನ'ದ ವಿಮರ್ಶೆಗಳಲ್ಲಿ ಶ್ರೀಮತಿ ಪದ್ಮಾ ಬೆಂಗಳೂರು ಅವರದು ಅತ್ಯುತ್ತಮ. ಶ್ರೀ. ಎಚ್. ಟಿ. ನರಸಿಂಹ ಮೂರ್ತಿ, ಶ್ರೀ. ಎಸ್. ಶ್ರೀಕೃಷ್ಣ ಪೆರಡಾಲ, ಶ್ರೀ. 'ಮಹಾದೇವ' ಬಾದಾಮಿ ಅವರ ವಿಮರ್ಶೆಗಳು ಉತ್ತಮ. ಶ್ರೀ. ಜಿ. ಎಸ್. ಮತಕರ್, ಶ್ರೀ. ಪೋತ ಶ್ರೀಕಾಂತ, ಶ್ರೀ. ವಿರೂಪಾಕ್ಷ ಸೆಟ್ಟಿ ಅವರ ವಿಮರ್ಶೆಗಳು ಚೆನ್ನಾಗಿವೆ.

ವಿಶೇಷ ಸಂಗತಿ :— 'ರಾಮಿ' ಕತೆಯು, ಅಶ್ಲೀಲತೆಯ ಮೇರೆಯನ್ನು ಮುಟ್ಟಿದೆಯೆಂದು ಆಕ್ಷೇಪಿಸಿ, ಜಯಂತಿಯ ಹಿತಚಿಂತಕರು ಕೆಲವರು ಬರೆದು ತಿಳುಹಿದ್ದಾರೆ; ಮತ್ತೆ ಕೆಲವರು ಸಮಕ್ಷಮ ಕಂಡು ತಿಳುಹಿದುದೂ ಉಂಟು. ವಿಮರ್ಶಕರಲ್ಲಿ ಬಹುಜನರು ಆ ಕತೆಯನ್ನು ಕುಂಬ ಮೆಚ್ಚಿ ಬರೆದಿದ್ದಾರೆ. ವಾಸ್ತವಮಾರ್ಗದ ಮನೋವಿಶ್ಲೇಷಣಾತ್ಮಕವಾದ ಕತೆಗಳಲ್ಲಿ 'ರಾಮಿ'ಯಲ್ಲಿಯಂತಹ ಚಿತ್ರಣ ಬರುತ್ತಿರುವುದು ಅನಿವಾರ್ಯ. ಇಂದಿನ ಸಭ್ಯಲೋಕದಲ್ಲಿ ಸುಪ್ರಸಿದ್ಧರಾಗಿರುವ ಹಲವರ ಸಾಹಿತ್ಯದಲ್ಲಿ, ಇದಕ್ಕಿಂತ ಹೆಚ್ಚು ಸ್ಪಷ್ಟವಾದ ಚಿತ್ರಣಗಳಿವೆಯೆಂಬುದನ್ನು, ಪರದೇಶೀಯ—ಪರಪ್ರಾಂತೀಯ ಕತೆ-ಕಾದಂಬರಿಗಳನ್ನು ಓದುತ್ತಿರುವವರು ಅರಿಯದ ಸಂಗತಿಯಲ್ಲ ಆ ದೃಷ್ಟಿಯಿಂದ ನೋಡಿದರೆ 'ರಾಮಿ' ಕತೆಯಲ್ಲಿ ಸಾಕಷ್ಟು ಸಂಯಮವೂ ಸೂಚ್ಯತೆಯೂ ಇದೆಯೆಂದು ಹೇಳಬಹುದು. ಆಕ್ಷೇಪಕರು, ಮುಂದೆ ಪ್ರಕಟಿಸಿರುವ ಸಹೃದಯರ ವಿಮರ್ಶೆಯನ್ನು ಓದಿದರೆ, ಆ ಕತೆಯನ್ನು ನೋಡಬೇಕಾದ ದೃಷ್ಟಿಯನ್ನು ಅರಿತುಕೊಳ್ಳಬಹುದೆಂದು ನಮ್ಮ ವಿಶ್ವಾಸ.

ಮುಂದಿನ ತಿಂಗಳಿಗೆ :— ಇದುವರೆಗಿನ ವಿಮರ್ಶೆಯ ಮೇಲಾಟಗಳೆಲ್ಲ ಗದ್ಯಸಾಹಿತ್ಯವನ್ನು ಕುರಿತೇ ನಡೆದಿವೆ. ಮುಂದಿನ ತಿಂಗಳಿಗಾಗಿ ಕವನವಿಮರ್ಶೆಯ ಮೇಲಾಟವನ್ನು ನಡೆಯಿಸಬೇಕೆಂದು ಅಪೇಕ್ಷೆ. ಈ ಸಂಚಿಕೆಯಲ್ಲಿ 'ಅಂಬಿಕಾತನಯದತ್ತ' ಮತ್ತು 'ಆನಂದಕಂದ'ರ '**ನವಯುಗಾರಂಭ**' ಎಂಬ ವಿಷಯದಲ್ಲಿ, ಬೇರೆ ಬೇರೆ ಎರಡು ಕವಿತೆಗಳು ಬಂದಿವೆ. ಇವೆರಡು ಕವನಗಳನ್ನೂ ತೆಗೆದುಕೊಂಡು ವಿಮರ್ಶೆ ಬರೆದು, ಫೆಬ್ರುವರಿ ೨೨ ರೊಳಗಾಗಿ ತಲ್ಪುವಂತೆ ಕಳುಹಿಜೀಕು. ಕವನವಿಮರ್ಶೆಯಲ್ಲಿಯೂ ನಮ್ಮ ರಸಿಕ ವಾಚಕರು ತಮ್ಮ ನೈಪುಣ್ಯವನ್ನು ತೋರಿಸದಿರರೆಂದು ನಮ್ಮ ನಿರೀಕ್ಷೆ.

—ಸಂಪಾದಕರು

'ರಾಮಿ'

ವಿಮರ್ಶೆ

ಶ್ರೀ. ಜಯತೀರ್ಥ ರಾಜಪುರೋಹಿತ ಬಿ. ಎ. ಹೈದರಾಬಾದ

'ಧರ್ಮಕೊಂಡದ ಕತೆ' ಯನ್ನು ಬರೆದು, ಕನ್ನಡಪಲ್ಲೊಂದೇ ಅಲ್ಲ—ಮರಾಠೀ ಸಾಹಿತ್ಯಸ್ರಪಂಚಕ್ಕೂ—ಈಗಾಗಲೇ—ಉತ್ತಮ ಕತೆಗಾರರೆಂದು ಪರಿಚಿತರಾದ ಶ್ರೀಯುತ ಅಶ್ವತ್ಥನಾರಾಯಣ ರಾಯರು 'ರಾಮಿ' ಕತೆಯಿಂದ ಮತ್ತೊಂದು ಒಳ್ಳೆಯ ಕಲಾಕೃತಿಯನ್ನು ನಮಗೊದಗಿಸಿದ್ದಾರೆ ಕತೆಯ ಶೀರ್ಷಿಕೆಯನ್ನು ನೋಡಿದ ಕೂಡಲೆ, ಇದೊಂದು ವ್ಯಕ್ತಿಪರಿಚಯಾತ್ಮಕ ಕತೆಯೆಂದೆನಿಸುತ್ತದೆ. ಕತೆ ಮುಗಿದ ಮೇಲೆ, ಈ ಎನಿಸಿಕೆಯ ಸತ್ಯತೆಯೂ ತಿಳಿಯುತ್ತದೆ. 'ರಾಮಿ' ಯ— ನಾಗರಿಕಲೋಕ, ಬಾಯಿಂದಕೂಡ ಹೊರಡದಂತಹ ವ್ಯವಸಾಯದಲ್ಲಿರುವ ರಾಮಿಯ—ಮನದ, ಯಾವ ನಾಗರಿಕ ಮನಸ್ಸಿಗೂ ಕಡಮೆಯೆನಿಸದ ಔನ್ನತ್ಯವನ್ನು ತೋರಿಸುವುದೇ ಇಲ್ಲಿ ಕತೆಗಾರರ ಉದ್ದೇಶ. ಕತೆಗಾರರು ತಮ್ಮ ಈ ಉದ್ದೇಶದ ಸಾಧನೆಯಲ್ಲಿ ಸಫಲರಾಗಿರುವರೆಂದು ಧೈರ್ಯವಾಗಿ ಹೇಳಬಹುದು. ಏಕೆಂದರೆ ಕತೆ ಮುಗಿದಾಗ, ರಾಮಿಯ ಸಂಪೂರ್ಣ ಚಿತ್ರವು ಅವಳ ಆ ಮೃದುವಾದ ಉದಾರಹೃದಯದೊಂದಿಗೆ ನಮ್ಮೆದುರು ನಿಲ್ಲುತ್ತದೆ.

ಕತೆಯ ಆರಂಭ, ಯಾವ ಆಡಂಬರವೂ ಇಲ್ಲದೆ, ನೇರವಾಗಿ ಕತೆಯ 'ಸ್ಥಾನ'ವಾದ ಬಳೇಪೇಟೆಯಿಂದ ಆಗಿದೆ. ಬಳೇಪೇಟೆಯನ್ನು ಪ್ರವೇಶಿಸುವಷ್ಟರಲ್ಲಿಯೆ, ಕತೆಗಾರರು ನಮ್ಮನ್ನು ನೇರವಾಗಿ ರಾಮಿಯ ಮುಂದೆ— ಮೂರು ಮಕ್ಕಳ ತಾಯಿಯಾದ, ರೂಪಹೀನೆ, ಮತ್ತು ಇಳಿದ ಯೌವನವಂತಿ, ಅದಕ್ಕಾಗಿಯೇ ಬಡವಿಯೂ ಆದ ರಾಮಿಯ ಮುಂದೆ— ಒಯ್ದು ನಿಲ್ಲಿಸಿಬಿಡುತ್ತಾರೆ. ಓದುಗರನ್ನು ಅತ್ತಿತ್ತ ನೋಡಲು ಸಹ ಬಿಡುವುದಿಲ್ಲ ಕತೆಗಾರರು. ಪಾಪ! ರಸ್ತೆಯಲ್ಲಿ ಹೋಗುವ ನೋಣಗಳು ರಾಮಿಯನ್ನು ಬಿಟ್ಟು ಬೇರೆಯ ಕಡೆಗೆ ಹೋದಾವೆಂಬ ಹೆದರಿಕೆ ಕತೆಗಾರರಿಗೂ ಇದೆಯೋ ಏನೋ! ಹೀಗೆ ನೇರವಾಗಿ ಕತೆಯ ನಿರುಗೆಯನ್ನು ಚುಚ್ಚುವುದು ಕಲಾವಂತಿಕೆಯ ಲಕ್ಷಣ. ರಾಮಿಯ ಆಕಾರ ಸ್ಪಷ್ಟವಾಗಿ ಮೂಡುವಂತೆ ವಿವರಗಳನ್ನು ಕೊಟ್ಟಿದ್ದಾರೆ: "ಕೊಟ್ಟಸುಖಕ್ಕೆ ಕೊಂಡ ಕಷ್ಟವಾಗಿ ಮಕ್ಕಳು ಬೇರೆ" ಅವೂ ಗಂಡುಮಕ್ಕಳು. "ದೇವರ ದಯೆಯಿಂದ ಮೂರನೆಯದೊಂದು ಹೆಣ್ಣು ಮುದ್ದಾಗಿದ್ದಿತು" ಇಲ್ಲಿ ವೇಶ್ಯಾಮನೋವೃತ್ತಿ ಸ್ಪಷ್ಟವಾಗಿದೆ. ಸೂಳೆಯರಿಗೆ, ವ್ಯವಸಾಯಕ್ಕೆ ಅಡ್ಡಿಮಾಡುವ ಮಕ್ಕಳು ಕಷ್ಟಪ್ರದವಾಗುತ್ತವೆ. ಏಕೆಂದರೆ ಹೆಡೆದ ಸೂಳೆಯರೆಂದರೆ ವಿಟರಿಗೆ ಅದೇಕೋ ಹೊಟ್ಟಿನೋವು. "ದೊಡ್ಡೊಂದ್ಹಾಟಾತೊಂದ್ರೆ" ಹುಟ್ಟದ ಮಗು! ಒಂದು ವೇಳೆ ಮಗು ಹೆಣ್ಣಾದರೆ, ತಮ್ಮ ಮುಪ್ಪಿನ ಕಾಲದ ಗಳಿಕೆಯ ಆಶೆಯಿಂದ, ಈ ಸದ್ಯದ ತೊಂದರೆಯನ್ನು ಸೂಳೆಯರು ಹೇಗಾದರೂ ಸಹಿಸಬಹುದು. ಇದು ವೇಶ್ಯೆಯರ ಸಹಜ ಮನೋಭಾವ. 'ರಾಮಿ' ಇದಕ್ಕೆ ಹೊರತಲ್ಲ. ಮಾತೃದತ್ತವಾದ ಆಸ್ತಿಯೆಂದರೆ ಸೂಳೆಗಾರಿಕೆ. ರಾಮಿ ತನ್ನ ಹಿರಿಯ ಮಗ ಗೋಪಾಲ ಹೆಣ್ಣಾಗಿದ್ದರೆ ಇದೇ ವ್ಯವಸಾಯಕ್ಕೆ ಹಚ್ಚುವುದಾಗಿ ವಿಚಾರಿಸಿದ್ದರೂ, ಆದೇನು ಅಸ್ವಾಭಾವಿಕವಲ್ಲ.

ಆದರೆ ಅಷ್ಟೇಕೋ ರಾಮಿಯ ವಿಚಾರಧಾರೆ ಬೇರೆಡೆ ಸಾಗಿದೆ. ಅವಳ ಕರುಳು ಮಕ್ಕಳನ್ನು ಕಂಡು "ಛೇ! ಪಾಪ!" ಎನ್ನುತ್ತದೆ. ಇದಕ್ಕೆ ಕಾರಣ ದೇವರು ಅವಳ ಸ್ವಭಾವದಲ್ಲಿ ಅನ್ಯಾಯಮಾಡಿಲ್ಲ'. ರಾಮಿ ಸಂಪೂರ್ಣ ತಾಯಿ. ತನ್ನ ಮಕ್ಕಳು ಶ್ರೀಮಂತರೂ, ಗರತಿಯರೂ ಆಗಬೇಕೆಂಬ ಆಶೆ. "ತನ್ನ ಗಂಡು ಮಕ್ಕಳು ತನ್ನ ಶ್ರೀಮಂತ ಗಿರಾಕಿಗಳಂತಾಗಬೇಕು" ಎನ್ನುತ್ತಾಳೆ ರಾಮಿ. ಆದರೆ 'ಸುತ್ತುಮುತ್ತು House full ಆದ ಮೇಲೆ ಮಿಕ್ಕ ನೋಣಗಳನ್ನು ಸ್ವಾಗತಿಸುವ ಪರಿಸ್ಥಿತಿ ರಾಮಿಗೆ ಯೌವನದಲ್ಲಿಯೇ ಇದ್ದ ಮೇಲೆ, ಅವಳಿಗೆ ಶ್ರೀಮಂತ ಗಿರಾಕಿಗಳಾದರೂ ಇದ್ದಾರೆ?' ಎಂಬ ಸಂಶಯ ಬರುತ್ತದೆ.

ರಾಮಿಗೆ ತನ್ನ ಜೀವನ ಕೊಳಕು, ಅದರ ಸಂಪರ್ಕ ಮಕ್ಕಳಿಗೆ ಬೇಡ— ಎಂಬ ಪರಿಜ್ಞಾನ ಸಂಪೂರ್ಣವಿದೆ. ಗೋಪಾಲನನ್ನು ದುಡಿಯಲು ಹಚ್ಚಿ, ಅವಳು ಅದರಿಂದ ಕೆಲಮಟ್ಟಿಗೆ ಮುಕ್ತಿಪಡೆಯಬಹುದಿತ್ತೇನೋ! ಆದರೆ ಅವಳ ತಾಯ್ತನದ ಹಿರಿಯಾಶೆ, ಬೆಳೆವಣಿಗೆಗಾಗಿ— ತನ್ನ ಕೊಳಕು ತನಗೆ ಇನ್ನೂ ಕೆಲದಿನ ಇದ್ದರೂ ಅಡ್ಡಿಯಿಲ್ಲವೆಂಬ ನಿರ್ಧಾರಕ್ಕೆ ತಂದಿದೆ.

ರಾಮಿ ಪಾರ್ಕಿಗೆ ಹೊರಡುವಾಗಿನ "ತಯ್ಯಾರಿ" ಬಹಳ ವಾಸ್ತವವಾಗಿ ಚಿತ್ರಿತವಾಗಿದೆ. ಹೀಗೆಯೇ ವೇಶ್ಯಾಗೃಹದ ಎಷ್ಟೋ ಒಳಸತ್ಯಗಳನ್ನು ಕತೆಗಾರರು ಸಹಜವಾಗಿ ಬಯಲಿಗೆಳೆದಿದ್ದಾರೆ. ಉದಾ: "ತುಟಿಯರಂಗು, ಒಂದು ಲಕ್ಷಣವಾದ ಸೀರೆ ಇತ್ಯಾದಿ ಇತ್ತಾದರೂ, ಒಂದು ಕಾಳು ಅಕ್ಕಿಯಾಗಲಿ, ರಾಗಿಯಾಗಲಿ ಇರಲಿಲ್ಲ." "ಕೈಮಗುವಿಗೆ ಅಫೀಮು ಹಾಕಿ...." "ಜೋಲುಬಿದ್ದ .... ಎತ್ತಿಕಟ್ಟಿಕೊಂಡಳು." "ರೂಪಾಯಿ ಬೆಂಡೋಲೆ ... ಹಿತ್ತಾಳೆ ಬಳೆಗಳನ್ನುಹಾಕಿ ..." ....

"ನೋಡೇ ರತಿ ಹೊರಟೆದಾಳೆ" ಮತ್ತು "ಗೂಸಿ-ಕೊಕ್ಕರಿ" ಇತ್ಯಾದಿ ಮಾತುಗಳಿಂದ ಸೂಳೆಗೇರಿಯ ಯೌವನ ಮದೋನ್ಮತ್ತ ವಾತಾವರಣದ ಝಲಕು ಮೂಡಿದೆ. ಪಾರ್ಕಿನಲ್ಲಿಯು ಮಬ್ಬುಗತ್ತಲೆಯ ಕಲ್ಪನೆ "ಗರತಿಯರೂ ಗೃಹಸ್ಥರೂ ಮನೆಗಳಿಗೆ ಹಿಂದಿರುಗುತ್ತಿದ್ದರು" ಎಂಬ ವಾಕ್ಯದಿಂದ ಬಹು ಸ್ಪಷ್ಟವಾಗಿ ಆಗುತ್ತದೆ. ಮನ್ಮಥನ ಬೇಟೆಗೆ ಹೊರಟ ರಾಮಿಯ ತಾಯ ಕರುಳು, ಪಾರ್ಕಿನಲ್ಲಿ ಆಡುವ ಶ್ರೀಮಂತರ ಮಕ್ಕಳನ್ನು ನೋಡಿ "ಏನು ಶ್ರೀಮಂತಿಕೆ....ನನ್ನ ಮಕ್ಕಳು....?" ಎಂದು ಭಾವನಾಮಯವಾಗಿ ಬಿಡುತ್ತದೆ. ಅವನ್ನು ಲೋಕವೆಲ್ಲಿ ಅರಿಯುವುದು? ಇಲ್ಲಿ ರಾಮಿ, 'ಸೂಳೆ'ಗಿಂತ ಹೆಚ್ಚಾಗಿ ನಮಗೆ ತಾಯಿಯಾಗಿ ಕಾಣುತ್ತಾಳೆ.

ವಿಕೃತರೂಪ ಮತ್ತು ಇಳಿದ ಯೌವನ ವೇಶ್ಯಾವೃತ್ತಿಗೆ

ಶೋಷಕವಾದುವೆಂಬುದನ್ನು ಕತೆಗಾರರು, ಒಂದೆರಡು ಪರಿಣಾಮಕಾರಿಯಾದ ಸನ್ನಿವೇಶಗಳಿಂದ ಮನವಮುಟ್ಟುವಂತೆ ಚಿತ್ರಿಸಿದ್ದಾರೆ. ಹಾಗೆಯೇ 'ಸೋತರೂ ಬಿಡೆ' ನೆಂಬ ವೇಶ್ಯಾಸಹಜ ಹಟವನ್ನೂ ಮಾರ್ಮಿಕವಾಗಿ ತೋರಿಸಿದ್ದಾರೆ. ಕೊನೆಗೆ ಒಂದು 'ಆಸಾಮಿ' ಸಿಕ್ಕಾಗ, ''ಪಾಲಿಗೆ ಬಂದದ್ದೇ ಪರಮಾನ್ನ'' ಎನ್ನುತ್ತಾಳೆ ರಾಮಿ. ಇದೇ ವೇಶ್ಯಾವೇದಾಂತದ ಪ್ರಥಮಸೂತ್ರವಲ್ಲವೆ? ಅವಳ ಕೃತಕ ಉತ್ಸಾಹ, ಅವನ ಹೊಸತನದ ಭೀರುತ್ವ ಮತ್ತು ಅವನ ನೊಂದ-ಬಾಳಿನ ಪರಿಚಯ— ಇವುಗಳನ್ನು, ಅವರ್ಣರ ಸಂಕ್ಷಿಪ್ತ ಸಂಭಾಷಣೆಯಲ್ಲಿಯೇ— ಪರ್ಯಾಯವಾಗಿಯಾದರೂ ಸ್ಪಷ್ಟವಾಗಿ— ಮೂಡಿಸಿದುದು ಸಳಗಿದ ಕತೆಗಾರಿಕೆಯ ಲಕ್ಷಣ.

''ಮಗುವು ಮೊದಲನೆಯ ಆಟದ ಸಾಮಾನನ್ನು ಕಂಡಂತೆ'' ಹೊಸತಾಗಿ ಸ್ತ್ರೀಯ ಸಮೀಪದಲ್ಲಿ ಬಂದವನ ವರ್ಣನೆಗೆ ಈ ಮಾತು ಬಹು ಒಪ್ಪಾಗಿ ಕಾಣುತ್ತದೆ. ರಾಮಿಯ ಮನೆಯಲ್ಲಿ ಆಸಾಮಿಯು ಸಿತ್ಯವಾಗಬೇಕೆಂಬ ಹೃದಯ, ಅವಳ ಮಕ್ಕಳನ್ನು ನೋಡಿ "ನನಗಿಂಥ ಮಕ್ಕಳಿದ್ದರೆ ಎಷ್ಟು ಚೆನ್ನಾಗುತ್ತಿತ್ತು" ಎಂದಾಗ, ರಾಮಿಯ ತಾಯಿ ಹೃದಯ, ಸ್ವಾಭಾವಿಕವಾಗಿ ಮಕ್ಕಳಿಗಾಗಿ ಹೆಮ್ಮೆ ಪಡುತ್ತದೆ. ಪರಪುರುಷನ ಮುಂದೆ, ಎದ್ದ ಮಗುವಿಗೆ ಸೆರಗ್ಕ ಮುಚ್ಚಿಕೊಳ್ಳದೆ ಮೊಲೆಕೊಡುವ ಧೈರ್ಯ, ರಾಮಿಗೆ ಬಿಟ್ಟರೆ ಮತ್ತಾರಿಗಾದರೂ ಬರುವುದುಂಟೆ? ರಾಮಿ ಮತ್ತು ರಾಮಿಯಂಥವರಿಗೆ ಅದು ಸ್ವಾಭಾವಿಕವೇ ಸರಿ!

'ತಾಂಬೂಲಕ್ಕೆ ಏನು ಇಡುತ್ತೀರಿ' ಮತ್ತು ಇದರ ಮುಂದಿನ ಮಾತುಗಳು, ಒಮ್ಮೆ ಸೂಳೆಯ ಮನೆ ಹೊಕ್ಕು ಬಂದವರಿಗೆ ಹೊಸವೇನೂ ಅಲ್ಲ. ಹಣವಿಲ್ಲದೆ 'ಮಜಾ' ಮಾಡಲು ಬಂದವನ ದೈನ್ಯ "ರಾಮಮ್ಮ" ಎಂಬ ಒಂದೇ ಮಾತಿನಿಂದ ಸ್ಪಷ್ಟವಾಗಿ ಆಗುತ್ತದೆ. ಮನ್ಮಥಕೇಲಿಗಾಗಿ ಸಿದ್ಧನಾಗಿ ಬಂದ ಪುರುಷ— ಹಣದ ದೌರ್ಬಲ್ಯವೊಂದಿರದಿದ್ದರೆ—ತನ್ನ ತಾತ್ಪರ್ಯಕ ಪ್ರೇಯಸಿಯನ್ನು 'ಅಮ್ಮ' ಎಂದು ಎಂದೂ ಸಂಬೋಧಿಸಲಾರ.

ಸರಿ! ವೇಶ್ಯಾಸಹಜವಾದ ಬಿರುಸುಮಾತುಗಳ ಸುರಿಮಳೆ ಆಗುತ್ತದೆ ಅದರ ಜೊತೆಗೆ ''ಇನ್ನಾರು ಸಿಕ್ಕುತ್ತಾರೆ- ನಾಳೆಯೂ ಉಪವಾಸವೊ ನಿಮ್ಮಿಂದ?" ಎಂಬ ನಾಳಿನ ಗಂಜಿಯ ಚಿಂತಾಗ್ನಿಯೂ ಕೋಪವಾಗಿ ಕೂಡಿಕೊಳ್ಳುತ್ತದೆ. ಈಗ ಅವಳು ಹೆಚ್ಚಾಗಿ ತನ್ನ ಮಕ್ಕಳ ಗಂಜಿಗಾಗಿ ವ್ಯವಸಾಯ ಮಾಡುತ್ತಿದ್ದಾಳೆಂದ ಮೇಲೆ, ಗಂಜಿ ತರಲಾರದ ಇವನ ಸಂಗ ಅವಳಿಗೆ ಬೇಡವೆನಿಸುವುದರಲ್ಲಿ ಆಶ್ಚರ್ಯವಿಲ್ಲ. 'ಹಣವಿಲ್ಲದೆ ಸೂಳೆಗೇರಿಯಲ್ಲಿ ಹೋಗುವುದು ಪಾಪ' ಎಂಬುದು, ಸೂಳೆಗೇರಿಯ ನೀತಿ. ಹೊಟ್ಟೆ ತುಂಬಿದ ಸೂಳೆಯರೂ ಈ ನೀತಿ ಬಿಟ್ಟು ಚಲಿಸಲಾರರು. ಆದರೆ ರಾಮಿಗೆ ನಾಳಿನ ಗಂಜಿಯ ಚಿಂತೆಯೊಂದಿರದಿದ್ದರೆ, ಈ ನೀತಿಯ ಕಡೆಗೆ ಕಣ್ಣೆತ್ತಿ ಕೂಡ ನೋಡುತ್ತಿರಲಿಲ್ಲವೇನೊ! ಆದೇನೆ ಇದ್ದರೂ, ಈಗ ಆಸಾಮಿಯನ್ನು ನಿರ್ದಯದಿಂದ ಹೊರಗೆ ಹಾಕಿದುದು ಕೇವಲ ಅವನಲ್ಲಿ ಹಣವಿಲ್ಲವೆಂದಲ್ಲ. ನಾಳಿನ ಗಂಜಿಯ ಚಿಂತೆಯು ಉದ್ವೇಗದಿಂದ.

ಆದರೆ ರಾಮಿ— ಕತೆಗಾರರು ತೋರಿಸಿದಂತೆ— ಕೇವಲ ವೇಶ್ಯೆಯಲ್ಲ. ವೇಶ್ಯೆಯಲ್ಲಿ ಇರಲಾರದಂತಹ ಇರಬಾರದಂತಹ ಮೃದು ಹೃದಯ ಅವಳಲ್ಲಿದೆ. ತನ್ನದೂ ನೊಂದ ಬಾಳು. ನೊಂದ ಬಾಳಿನ ಇನ್ನೊಂದು ವ್ಯಕ್ತಿಗಾಗಿ ಸಹಾನುಭೂತಿಯನ್ನು ತೋರಿಸುತ್ತದೆ. 'ಸಮಾನ ಶೀಲ-ವ್ಯಸನೇಷು ಸಖ್ಯಂ' ಎಂಬ ಸುಭಾಷಿತ ನಿಜವಾದಂತೆ ಕಾಣುತ್ತದೆ. ಆ ಆಸಾಮಿ ಹೊರಗೆ ಹೋಗುವಾಗಿನ ಮಾತು ''ನಾನು ಅವ್ಯಕ್ತಹೀನ, ನಾನು ಯಾರಿಗೂ ಬೇಡ. ನಿನಗೂ ಬೇಡವಾದೆ!" ಅವಳನ್ನು ಆಲುಗಿ ಬಿಡುತ್ತದೆ. ಈಗ ಅವಳ ಪರಿಸ್ಥಿತಿಯೂ ಸ್ವಲ್ಪ ಹೆಚ್ಚುಕಡಿಮೆ ಹಾಗೆಯೇ ಇರುತ್ತದೆ. ಅವಳ ಹೃದಯದ ಔದಾರ್ಯ ಜಾಗೃತವಾಗುತ್ತದೆ. ಇಡೀ ಜೀವಮಾನದಲ್ಲಿ ಹೆಣ್ಣಿನ ಸಂಗವನ್ನೇ ಕಾಣದ ಜೀವಕ್ಕಾಗಿ, ಅವಳ ಕರುಣಾಪೂರ್ಣ ಹೃದಯ ''ಏ! ಬನ್ನಿ'' ಎನ್ನುತ್ತದೆ.

ಕತೆ ಎಲ್ಲಿಯೂ ಹಿಡಿತ ತಪ್ಪಿಲ್ಲ. ಅಸ್ವಾಭಾವಿಕತೆ, ಅವಾಸ್ತವತೆಗಳು ಎಲ್ಲಿಯೂ ತಲೆದೋರಿಲ್ಲ 'ರಾಮಿ'ಯ ಮನದ ಏರಿಳಿತಗಳು ಸ್ಪಷ್ಟವಾಗಿ ವಿವಿಧರೂಪಗಳಲ್ಲಿ ಮೂಡಿವೆ. ಎತ್ತರಪಾತ್ರೋಷ್ಟರಂತೆ ಇದ್ದ 'ರಾಮಿ,' ಕುಳ್ಳನಾಗಿದ್ದ ಹಣವಿಲ್ಲದ ಆಸಾಮಿಯನ್ನು ಗದರಿಸುವಾಗಿನ ಚಿತ್ರ ಓದುಗರನ್ನು ನಗಿಸುತ್ತದೆ. ಕತೆ ಹೇಳುವ ರೀತಿ ಸೊಗಸಾಗಿದೆ. ಸಣ್ಣಕತೆಯಲ್ಲಿ, ಹೇಳುವುದನ್ನೆಲ್ಲ ಸ್ವಲ್ಪದರಲ್ಲಿ ಪರಿಣಾಮಕಾರಿಯಾಗಿ ಹೇಳುವುದು ಉತ್ತಮ ಕಲೆಯ ಲಕ್ಷಣ. ಈ ಲಕ್ಷಣವನ್ನು ಈ ಕತೆಯಲ್ಲಿ ನಾವು ಕಾಣಬಹುದು. ಒಟ್ಟಿನಲ್ಲಿ 'ರಾಮಿ' ಒಂದು ಉತ್ತಮ ಕಲಾಕೃತಿ. ಯಾವ ಭಾಷೆಯ ಸಣ್ಣ ಕತೆಗಳಲ್ಲಿಯಾದರೂ ಉಚ್ಚಸ್ಥಾನ ಪಡೆಯಲು ಯೋಗ್ಯವಿದೆ.

ಒಂದು ದಿನದ ತಾಯ್ತನ

ಶ್ರೀಮತಿ ಪದ್ಮಾ, ಬೆಂಗಳೂರು

ಈ ಕತೆಯು, ಬಹುಕಾಲದಿಂದಲೂ ಮಕ್ಕಳಿಲ್ಲದಿದ್ದ ಪುತ್ರವಿಹೀನೆಯಾದ ಸ್ತ್ರೀಯೊಬ್ಬಳಿಗೆ, ಅನಿರೀಕ್ಷಿತವಾಗಿ ತನ್ನ ಬಂಧುಗಳೊಬ್ಬರ ಅನಾಥ ಶಿಶುವನ್ನು ಪೋಷಿಸಬೇಕಾದ ಪ್ರಸಂಗ ಬಂದರೆ ಅವಳ ಮನಸ್ಸಿನಲ್ಲಿ ಉದ್ಭವಿಸಬಹುದಾದ ಭಾವಾವೇಶಗಳ ಅಂದೋಲನವನ್ನು ಚಿತ್ರಿಸುತ್ತದೆ.

ಸುಭದ್ರಮ್ಮ ಶಂಕರಪ್ಪನವರ ಪತ್ನಿ. ಇಡೀ ಮನೆಯನ್ನು ಸುತ್ತ-ಹೋದರೆ ಒಂದು ಜಾವ ಸಾಕಾಗದಷ್ಟು' ವಿಸ್ತಾರವಾದ ಮನೆಯಲ್ಲಿ, ಅಲ್ಪಭಾಷಿಯಾದ ಪತಿಯ ಹೊರತು ಬೇರಾವ ನರಪ್ರಾಣಿಯ ಮುಖವನ್ನೂ ಕಾಣದೆ, ಯಾಂತ್ರಿಕವಾಗಿ ಜೀವನನ್ನಾವೆಯನ್ನು ನಡೆಸುತ್ತಿದ್ದಳು. ಅನಿರೀಕ್ಷಿತವಾಗಿ ತನ್ನ ಪತಿಯ ದೂರದ ತಂಗಿಯ ಅನಾಥ ಮಗುವನ್ನು ಸಾಕಬೇಕಾಗಿ ಬಂದಿತು. ಅದುವರೆಗೆ ಆ ಮಗುವಿನ ಪಾಡು ಏನಾದೀತೋ ಎಂದು ಯೋಚಿಸಿದ್ದಳೇ ವಿನಾ ಅದನ್ನು ಸಾಕುವ ಜವಾಬ್ದಾರಿಯು ತನ್ನ ಮೇಲೆ ಬರಬಹುದೆಂದು ತಿಳಿದಿರಲಿಲ್ಲ. ಆದ್ದರಿಂದ, ಅದುವರೆಗೆ ಮಗುವಿನ ಬಗ್ಗೆ ಕರುಣೆಗೆ

ಪೆಕೊಟ್ಟಿದ್ದ ಮನಸ್ಸು ಕಠೋರತೆಯನ್ನು ತಾಳಿತು. ತಮ್ಮ ಂಜೆತನದ ಅಪಹಾಸ್ಯ ಮಾಡುವುದಕ್ಕೆಂದೇ ವಿಧಿಯು ಹೂಡಿದ ೊಟವಿದೆಂದು, ಅವ್ಯಕ್ತ ದನಿಯೊಂದು ನುಡಿಯುತ್ತಿದ್ದಂತೆ ಭಾಸ- ಾಯಿತು. ತಮ್ಮ ದುರದೃಷ್ಟದ ಕುತ್ಸಿತ ವ್ಯಂಗ್ಯವನ್ನು ಸಹಿಸ- ಾರದ ಮನಸ್ಸು, ಮಗುವಿನ ವಿಷಯಕ್ಕೆ ಅಲಕ್ಷ್ಯ-ಅಸಡ್ಡೆಗಳನ್ನೇ ೋರಿಸಹಚ್ಚಿತು. ಆದರೆ ತಾನು ಸಾಕಬಹುದೆಂಬ ದೃಢನಂಬಿಕೆ- ಿಂದಲೇ ಕರೆತಂದಿದ್ದ, ದೂರ ಪ್ರಯಾಣದಿಂದ ಬಳಲಿ ಬಂದಿದ್ದ ತಿಯೆದುರು, ತಾನು ಸಾಕಲಾರೆನೆಂದು ನಿಶ್ಚಿತವಾಗಿ ನುಡಿಯುವ ೈರ್ಯ ಬರಲಿಲ್ಲ. ಉದ್ದಿಶ್ಯಪೂರ್ವಕವಾಗಿ ತಿರಸ್ಕಾರ ತೋರಿಸಬೇ- ಂದೇ ಇದ್ದರೂ, ಕಠೋರತೆಯೆಲ್ಲವೂ ಜಾರಿಹೋಗುತ್ತ, ಅವರೆಡೆ- ುಲ್ಲಿ ಒಳದನಿಯೊಂದು ಸುಪ್ತವಾಗಿದ್ದ ಮಾತೃಹೃದಯವನ್ನು ಬಡಿದೆಬ್ಬಿಸಿ ಪ್ರೀತಿತಾಳುವಂತೆ ಪ್ರೇರೇಪಿಸಿತು. ಒಳದನಿಯೆದುರು ಾವು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು; ನಾಟಕೀಯ- ನೆನಿಸಿತು. ಆದರೆ ಪತಿಯೆದುರು ಮಗುವನ್ನು ಹಿಂದಿರುಗಿಸುವ ಮಾತೆತ್ತಿ ಔದಾಸೀನ್ಯ ಪ್ರಕಟಿಸಿದ್ದರಿಂದ, ಆದೇ ನಾಟಕವನ್ನೇ ಮುಂದುವರಿಸಬೇಕಾಯಿತು. ಹೀಗೆ ಪ್ರೀತಿ-ಅಂತಃಕರಣಗಳಿಗೂ, ಕಠೋರತೆ-ಔದಾಸೀನ್ಯಗಳಿಗೂ ಘರ್ಷಣೆ ನಡೆದು, ಆ ಹೋರಾಟ- ದಲ್ಲಿ ಆಕೆ ತೀರಾ ನಿರ್ವಿಣ್ಣರಾದರು.

ಪತಿಯ ಆಗಮನದ ಹಾದಿಯನ್ನು ನೋಡುವಾಗಿನ ಕಾತರತೆ, ಜನವಿಹೀನವಾದ ನೋಣ-ಸೊಳ್ಳೆಗಳು ಆಧಿಪತ್ಯ ನಡೆಸಿದ್ದ ವಿಸ್ತಾರ- ವಾದ ಮನೆಯ ನಿಶ್ಶಬ್ದತೆ-ಶೂನ್ಯತೆಗಳು, ಮನೆಯೊಡತಿಗೆ ಮುಂಬ- ರುವ ಶೂನ್ಯ ಮನಸ್ಸಿನ ವೇದನಾಮಯ ವಾತಾವರಣದ ಪ್ರತೀಕ- ದ್ದಂತಿವೆ. ತಾಯನ್ನು ಕಳೆದುಕೊಂಡು ಸುಭದ್ರಮ್ಮನಲ್ಲಿಯೇ ತಾಯಿಯನ್ನು ಕಂಡು, ತಿನಿಸು-ಉಣಿಸುಗಳಲ್ಲಿ ಅವಳ ಸ್ನೇಹವನ್ನು ಬಯಸಿದ ಮಗುವಿನ ಚಿತ್ರ ಕರುಣಾಜನಕವಾಗಿದೆ. ಜನವಿಹೀನ- ವಾದ ಮನೆ, ರಾತೋರಾತ್ರಿಯೇ ಪಂಜುರಿಸಿಕೊಂಡು ನೆರೆ- ಯೂರಿಗೆ ಹೊರಟ ದೃಶ್ಯ, ಒಕ್ಕಲುಮಕ್ಕಳ ಓ ಓ ದ ಅಲಾಪನೆ, ಕೋಳಿಗಳ ಕೊಕ್ಕೋ ಧ್ವನಿ, ಕೊಟ್ಟಿಗೆಯ ದನಗಳ ಒದರಾಟ, ಎಮ್ಮೆಯ ಗದ್ದೆಯ ಬಯಲು ಇವುಗಳು, ಹಳ್ಳಿಯ ಸೋಟವನ್ನೊ ದ- ಗಿಸುತ್ತವೆ. ದೂರದ ತಂಗಿಯ ಅವಸಾನಕಾಲವೆಂದು ಇದ್ದಕ್ಕಿದ್ದಂತೆ ಹೊರಟುನಿಂತುದರಲ್ಲಿರುವ ಕಳವಳ, ಮಗುವನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡು ಆದರ ಉಣಿಸು-ತಿನಿಸುಗಳನ್ನು ನೋಡಿದುದು, ಮಗುವನ್ನು ಸಾಕುವ ವಿಷಯದಲ್ಲಿ ಬಲಾತ್ಕಾರ ಪಡಿಸದೆ ತನಗಿಷ್ಟ- ವಿಲ್ಲದಿದ್ದರೂ ನೆಂಟರಲ್ಲಿಗೆ ಬಿಡುವುದರಲ್ಲಿರುವ ಭಾವುಕತನ, ಇವು- ಗಳು ಶಂಕರಪ್ಪನ ಪಾತ್ರದ ಮೂಲಕ ಹಳ್ಳಿಗರ ಸ್ವಭಾವವನ್ನು ಚಿತ್ರಿಸುತ್ತವೆ.

ಎರಡು ವಿರುದ್ಧ ಭಾವನಾಪ್ರವಾಹಕ್ಕೆ ಸಿಲುಕಿದ ಮನಸ್ಸಿನ ಚಿತ್ರವನ್ನು ಅಂದವಾಗಿ ಚಿತ್ರಿಸಿದ್ದಾರೆ. ನೊದಲು ತಿರಸ್ಕಾರ ತೋರಿದರೂ, ನಂತರ ವಾತ್ಸಲ್ಯತಳೆದ ಮನಸ್ಸು ಅದನ್ನು ತೋರ- ಲಾರದೆ ತಿರಸ್ಕಾರಭಾವಪನ್ನೇ ಮುಂದುವರಿಸಿದ್ದರಲ್ಲಿಯ ಕೃತ್ರಿ- ಮತೆಯನ್ನು ಚೆನ್ನಾಗಿ ನಿರೂಪಿಸಿದ್ದಾರೆ. ಒಂದು ಮಗುವು ತನ್ನ ತಿಂಡಿಯನ್ನೇ ತನ್ನ ಮಲಅಣ್ಣನಿಗೆ ಹಂಚಿ ಕೊಡುವಾಗ, ತನ್ನ ತಾಯಿಯೆಲ್ಲಿ ನೋಡುವಳೋ ಎಂಬ ಹೆದರಿಕೆಯನ್ನೇ, ಸುಭದ್ರ- ಮ್ಮನಲ್ಲೂ ಮಗುವಿಗೆ ಉಣಿಸುವಾಗ ಕಾಣುತ್ತೇವೆ. ವಿರುದ್ಧ ಮನೋಭಾವಗಳ ಸೆಳೆತಕ್ಕೆ ಸಿಕ್ಕಿದ ಮನಸ್ಸಿನ ಚಿತ್ರವನ್ನು, ನೆಳಲು ಬೆಳಕಿನ ಆಟವನ್ನು ತೋರಿಸುತ್ತಾ ಕುತೂಹಲದಿಂದಲೇ ಕರೆದೊ- ಯ್ದಿದ್ದಾರೆ. ಸುಭದ್ರಮ್ಮ ಮಗುವನ್ನು ಮಲಗಿಸಿ ನಿದ್ರೆಮಾಡಿಸಿದ ಸನ್ನಿವೇಶ, ಹಿಂದಿನ ದಿನ ತಾನೇ ಮಗುವನ್ನು ಕರೆದೊಯ್ಯಲು ಸಮ್ಮತಿಸುವುದನ್ನೂ ಮರೆಯಿಸುವಷ್ಟು ಕಲಾತ್ಮಕವಾಗಿ, ತಾಯ್ತನದ ಪ್ರೀತಿಯ ಪರಾಕಾಷ್ಠೆಯನ್ನು ತೋರಿಸಿದೆ.

ಸುಭದ್ರಮ್ಮ ಮಗುವಿನ ಬಗೆಗೆ ತಿರಸ್ಕಾರ ತಾಳುವುದರ ಕಾರಣ- ವನ್ನೂ, ಮುಖ್ಯವಾಗಿ ಶಂಕರಪ್ಪನವರೆದುರಿಗೆ ಇಲ್ಲದ ಔದಾಸೀನ್ಯ ತೋರಿದ್ದರ ಕಾರಣವನ್ನೂ 'ಇವನನ್ನು ಇಲ್ಲಿಯ ವರೆಗೆ ಕರೆತರ- ದಿದ್ದರೆ ಏನಾಗುತ್ತಿತ್ತು?' ಎಂದು ಮರುಗುವಾಗ ತಮ್ಮ ಮನದಳ- ಲನ್ನು ತೋಡಿಕೊಳ್ಳುವ ಸ್ವಗತ ಮಾತುಗಳಲ್ಲಿ ಹೇಳಿಸಿದ್ದರೆ ಉತ್ತಮವಾಗುತ್ತಿತ್ತು. ಅವಳ ವಿಚಿತ್ರ ನಡೆವಳಿಯ ಕಾರಣವನ್ನು ಸುಸ್ಪಷ್ಟವಾಗಿ ತೋರಿಸಿದಂತಾಗುತ್ತಿತ್ತು.

ಸನ್ನಿವೇಶಗಳಿಗೆ ಸಿಲುಕಿ, ಪುತ್ರವಿಹೀನೆಯಾದ ಸ್ತ್ರೀಯು ಪರರ ಮಗುವನ್ನು ದ್ವೇಷಿಸತೊಡಗಿದರೂ, ಸ್ತ್ರೀಸಹಜವಾದ ಮಾತೃ- ವಾತ್ಸಲ್ಯವು ಎಲ್ಲವನ್ನೂ ಮೀರಿನಿಲ್ಲಬಹುದೆಂದು ತೋರಿಸುವುದೇ ಕಥೆಗಾರರ ಉದ್ದಿಶ್ಯವಾಗಿದೆ. ಈ ಉದ್ದೇಶವು ಕೃತಿಯಲ್ಲಿ ಸೋತಿ- ದ್ದರೂ, ಭಾವದಲ್ಲಿ ಗೆದ್ದಿದೆ. ನಾಟಕೀಯವಾದ ಔದಾಸೀನ್ಯ- ಅಸಡ್ಡೆಗಳು, ಕೃತಿಯಲ್ಲಿ ಗೆದ್ದರೂ ಭಾವದಲ್ಲಿ ಸೋತಿವೆ.

ಕಥೆಯ ಅಂತ್ಯವು ಸಹಜವಾಗಿ ಸುಂದರವಾಗಿದೆ. ಉಕ್ಕಿ ಬಂದ ದುಃಖೋದ್ವೇಗ, ಭಾವಾವೇಶ, ಹಿಂದಣ ದಿನವೇ ಮಗುವನ್ನು ಹಿಂದಿರುಗಿಸಲು ಒಪ್ಪಿದುದು, ಈಗಲೂ ಮಾತು ಮೀರದಂತೆ ಹೊಸಿಲ ಬಳಿ ಬಂದಾಗಲೇ ಪತಿ ಮಗನನ್ನು ಕರೆದುಕೊಳ್ಳಲು ಕೈಚಾಚಿದುದು—ಇವುಗಳು ಕಥೆಯ ಮುಕ್ತಾಯಕ್ಕೆ ಕಳಿಗೊಟ್ಟಿವೆ. ದೈವಾಯತ್ತವಾಗಿ ಬಂದಿದ್ದ ಅದೃಷ್ಟವನ್ನು ತಾನಾಗಿಯೇ ತನ್ನ ಕೈಮೀರಿದ ಕಾರಣಗಳಿಂದ ಕಳೆದುಕೊಂಡುದನ್ನು ಸಮ- ರ್ಥಿಸಿದೆ. ಒಂದು ದಿನದ ಮಟ್ಟಿಗೆ ತಾಯ್ತನದ ಸುಖವನ್ನು ಗುಪ್ತವಾಗಿ, ಯಾರೂ ಅರಿಯದಂತೆ, ಮೊದಲು ತನಗೆ ಅರಿವಿಲ್ಲ- ದಂತೆ ಅನುಭವಿಸಿ, ತಾನಾಗಿಯೇ ದೂರಮಾಡಿಕೊಂಡುದರಲ್ಲಿರುವ ವೇದನೆಯ ನುಡಿಗಳು ಮನಮಿಡಿಯುವಂತಿವೆ.

ಇದು ಒಟ್ಟಿನಲ್ಲಿ ಕಲಾತ್ಮಕವಾಗಿ ಮನೋವಿಶ್ಲೇಷಣಾತ್ಮಕ ಕಥೆಗೆ ಒಪ್ಪುವ ರೀತಿಯಲ್ಲಿ ಚಿತ್ರಿತವಾಗಿದೆ. ಇಂತಹ ಉತ್ತಮ ಕಥೆಗಳು ಇನ್ನೂ ಅಧಿಕವಾಗಿ ಬಂದು, ಕನ್ನಡ ಕಥಾಸಾಹಿತ್ಯವನ್ನು ವೃದ್ಧಿಗೊಳಿಸಲಿ.

ಸಾದರ ಸ್ವೀಕಾರ

★

೧೧೪. **ಶಾಪ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ವಿ. ಎಂ. ಇನಾಮದಾರರು. ಮೈಸೂರಿನ ಉಷಾ ಸಾಹಿತ್ಯಮಾಲೆಯ ೧೯-೨೦ನೆಯ ಗ್ರಂಥ. ಕ್ರಾ.ಅ. ೩೧೦ ಪುಟಗಳು. ಬೆಲೆ ೩-೦-೦.

೧೧೯. **ಭಾವಜೀವಿ** (ಚಿಕ್ಕ ಕಾವ್ಯ). ಬರೆದವರು ಶ್ರೀ. ಚೆನ್ನವೀರ ಕಣವಿ. ಧಾರವಾಡದ ಪ್ರಗತಿಶೀಲ ಸಾಹಿತ್ಯಮಾಲೆಯ ೨ನೆಯ ಗ್ರಂಥ. ಕ್ರಾ. ಅ. ೧೨+೩೦ ಪುಟಗಳು. ಬೆಲೆ ೦-೮-೦.

೧೨೦ **ಎಣೆಸದ ಹಣ** (ಎರಡು ಕಥೆಗಳು). ಬರೆದವರು ಶ್ರೀ. ಕ. ವೆಂ. ರಾಜಗೋಪಾಲ ಶೆಟ್ಟಿ, ಜವಳಿವ್ಯಾಪಾರಿ, ಕೊಣನೂರು. ಕ್ರಾ. ಅ. ೭೮ ಪುಟಗಳು. ಬೆಲೆ ೧-೦-೦.

೧೨೧. **ನೀವಾರ** (ಅನುವಾದಿತ ಕಥಾಸಂಕಲನ). ಮೂಲ ಉರ್ದು ಕತೆಗಳ ಅನುವಾದಕರು ಶ್ರೀ. ಎಸ್. ಕೆ ಕರೀಮಖಾನ್. ಬೆಂಗಳೂರಿನ 'ರಾಮರಾಜ್ಯ' ಗ್ರಂಥಮಾಲೆಯ ೧೧ನೆಯ ಕುಸುಮ. ಕ್ರಾ. ಅ. ೧೫೯ ಪುಟಗಳು. ಬೆಲೆ ೧-೪-೦.

೧೨೨. **ತೆರೆದ ಕಣ್ಣು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ. ಬೆಳಗಾಂವಿಯ ವಿಜಯ ಗ್ರಂಥಮಾಲೆಯ ೨ನೆಯ ವರ್ಷದ ೨ನೆಯ ಪುಷ್ಪ. ಕ್ರಾ. ಅ. ೨೨೪ ಪುಟಗಳು. ಬೆಲೆ ೩-೦-೦.

೧೨೩. **ವಿಕಾಸ** (ಹೊಸ ಮಾಸಪತ್ರಿಕೆ). ವಾಣಿಜ್ಯ ಮತ್ತು ಚಲಚ್ಚಿತ್ರಕ್ಕೆ ಮೀಸಲಾದುದು. ಸಂಪಾದಕರು ಶ್ರೀ. ಎನ್. ಕೆ. ದೇಶಪಾಂಡೆಯವರು. ಪ್ರಕಾಶಕರು ಇಕೊ ಅಡ್ವರ್ಟೈಜಿಂಗ್ ಬ್ಯೂರೊ. ಕಲಬುರ್ಗಿ ಬಿಲ್ಡಿಂಗ್, ಮೋಟರ್ ಸ್ಟ್ಯಾಂಡ್, ಹುಬ್ಬಳ್ಳಿ.

ತನ್ನದೇ ಒಂದು ಗುರಿಯನ್ನಿರಿಸಿಕೊಂಡು ಹೊರಟಿರುವ ಈ ಹೊಸ ಮಾಸಪತ್ರಿಕೆಗೆ ಚಿರಜೀವಿತ್ವವನ್ನು ಬಯಸುತ್ತೇವೆ.

೧೨೪. **ಪತಿವ್ರತೆಯ ಪ್ರಭಾವ**



(ಕಲ್ಪಿತ ಕಾದಂಬರಿ). ಬರೆದವರು ಶ್ರೀಮಾನ್ ಕೌಜುಲಗಿ ಬಂಡಾಚಾರ್ಯರು. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೬ನೆಯ ವರ್ಷದ ೬ನೆಯ ಕಿರಣ. ಕ್ರಾ. ಅ. ೯೫ ಪುಟಗಳು. ಬೆಲೆ ೧-೪-೦.

೧೨೫. **ಪ್ರಣಯಸಮಾಧಿ** (ಕಥಾಸಂಕಲನ) ಬರೆದವರು ಶ್ರೀ. ಮಿರ್ಜಿ ಅಣ್ಣಾರಾಯರು. ಮೇಲಿನ ಪ್ರತಿಭಾ ಗ್ರಂಥಮಾಲೆಯ ೬ನೆಯ ವರ್ಷದ ೬ನೆಯ ಕಿರಣ. ಕ್ರಾ. ಅ. ೯೩ ಪುಟಗಳು. ಬೆಲೆ ೧-೪-೦.

೧೨೬. **ಹೊಸಲು ದಾಟಿದ ಹೆಣ್ಣು** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀಮಾನ್ ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರಾ.ಅ. ೨೫೪ ಪುಟಗಳು. ಬೆಲೆ ೨-೧೫-೦.

೧೨೭. **ಶಿಲ್ಪಿ** (ಆರು ಕತೆಗಳು) ಬರೆದವರು ಶ್ರೀಮಾನ್ ಅ. ನ. ಕೃಷ್ಣರಾಯರು. ಪ್ರಕಾಶಕರು ಆನಂದ ಬ್ರದರ್ಸ್, ಬೆಂಗಳೂರು ೨. ಕ್ರಾ. ಅ. ೯೫ ಪುಟಗಳು. ಬೆಲೆ ೧-೪-೦.

೧೨೮. **ಕಿಲೋರ್ಸ್ಕರ್** (ಮರಾಠೀ ಮಾಸಪತ್ರಿಕೆಯ ಶರೀರಸಂವರ್ಧನ ವಿಶೇಷಾಂಕ). ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಶಂ. ವಾ. ಕಿಲೋರ್ಸ್ಕರ್, ಕಿಲೋರ್ಸ್ಕರವಾಡಿ, ಸಾತಾರಾ. ಡೆ. ೧೫೬ ಪುಟಗಳು. ಬೆಲೆ ೦-೧೨-೦

ಇಂದು ಸ್ವತಂತ್ರ ಭಾರತದ ಪ್ರಜಾರಾಜ್ಯಕ್ಕೆ ಸುದೃಢ ಶರೀರದ ಜನರ ಅಗತ್ಯತುಂಬ ಇದೆ. ಈ ಅಗತ್ಯವನ್ನರಿತು, ಕಿಲೋರ್ಸ್ಕರ ಮಾಸಪತ್ರಿಕೆಯು, ಸುಪ್ರಸಿದ್ಧ ಲೇಖಕರಿಂದ ಶರೀರಸಂವರ್ಧನ ಕುರಿತು ವಿವಿಧವಿಚಾರದ ಲೇಖನಗಳನ್ನು ಬರೆಯಿಸಿ, ಈ ವಿಶೇಷ ಸಂಚಿಕೆಯಲ್ಲಿ ಸಂಗ್ರಹಿಸಿಕೊಟ್ಟಿದೆ. ಸಂಪಾದಕರ ಈ ಪ್ರಯತ್ನ ಅಭಿನಂದನೀಯವಾದುದು.

ಜನೆಯ ಅಖಿಲ ಕರ್ನಾಟಕ ಔದ್ಯೋಗಿಕ ಮತ್ತು ಪಕ್ಕಲತನ

ಪ್ರದರ್ಶನ

ತಾ. ೨೧-೨-೫೦ ರಿಂದ ತಾ. ೨-೩-೫೦ ರ ವರೆಗೆ

ಧಾರವಾಡದಲ್ಲಿ ಜರುಗುವದು.

ಉದ್ದಿಮೆದಾರರಿಗೆ, ಅಂಗಡಿಕಾರರಿಗೆ ಒಳ್ಳೆಯ ಸುಸಂಧಿ. ಸ್ಟಾಲುಗಳಿಗೆ ಈಗಾಗಲೇ ಬಹಳ ಬೇಡಿಕೆ ಬಂದಿವೆ.
ಬೇಗ ನಿಮ್ಮ ಸ್ಟಾಲು ಕಾದಿಡಿರಿ. ನಿರಾಶೆ ಹೊಂದಬೇಡಿರಿ.

ನಿವರಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ :

ಗೌರವ ಕಾರ್ಯದರ್ಶಿ,
ಪ್ರದರ್ಶನ ಸಮಿತಿ
ಧಾರವಾಡ.

ನಿಮಗೆ ಬೇಕಾದ ಕನ್ನಡ
ರಿಕಾರ್ಡುಗಳು

ಬಾಳಪ್ಪ ಹುಕ್ಕೇರಿ ಮುರಗೋಡ

N. 25933 — ಸಟ್ಟಿಯುಂಚಿನೆ ನಿರಿಯಾಳನಾ / ಕೋಟಾನು ಕೋಟಿ ಜನವನುಾ

ಬಸಪ್ಪ ಮಾಸ್ಟರ ಹುಲಕುಂದ ಪಾರ್ಟಿ

N. 25934 — ವೀರರಾಣಿ ಚನ್ನಮ್ಮಾ / ಭಾಗ ೧—೨

ಕು. ವಿಜಯಾ ದೇಸಾಯಿ

N. 25935 — ಆಕಾಶ ತಾರೆ ಬಾರೆ / ಒಕೆ ನೋಟದಿ ಬೇಟಿಯಾಡಿವೆ

ಪಂ. ಭೀಮಸೇನ ಜೋಶಿ

N. 25936 — ದೀಪ (ಬಂತಿಹೊ ಶೃಂಗಾರ ಮಾಸ) / ನಾನು ಬಡವಿ

ಕು. ಕೃಷ್ಣಾ ಹಾನಗಲ್

N. 25937 — ನನು ನಾಡಿನ ಚೆಲುವ ಬೀಡಿನ / ಬೀಸುತಿನೆ ಬೀಸುತಿನೆ

ನನ್ನು ಯಾವತ್ತು ಡೀಲರ್ಸ್ ಕಡೆಗೆ ಈ ರಿಕಾರ್ಡುಗಳು ನೋರೆಯುತ್ತ ವೆ.

His Master's Voice



Printed by V. Y. jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar– 2134-49.





ಪ್ರಜಾರಾಜ್ಯ' ದ ದಿನ ಧಾರವಾಡ ಬಾನುಲಿ ಕಟ್ಟೆಯಲ್ಲಿ ನೆರೆದ ಕವಿಸಮ್ಮೇಲನ

(ಎಡದಿಂದ ಬಲಕ್ಕೆ)

ಶ್ರೀ. ಡಿ. ಎಸ್. ಕರ್ಕಿ, ಶ್ರೀ. ಮುಗಳಿ, ಶ್ರೀ. ಚಿಟ್ಟಿಗೇರಿ ಕೃಷ್ಣಶರ್ಮ, ಶ್ರೀ. ದ. ರಾ. ಬೇಂದ್ರೆ, ಶ್ರೀ. ಖಾಡಿ ರಾಮಚಂದ್ರರಾಯರು, ಶ್ರೀ. ಕೆ. ಟಿ. ಪುರಾಣಿಕ, ಶ್ರೀ. ಈಶ್ವರ ಸಣಕಲ್, ಶ್ರೀ. ಎಸ್. ಆರ್. ಸುಳಗಿಯವರು.

ಜಯಂತಿ

JAYANTI

ಮಾರ್ಚ್ ೧೯೫೦

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ

ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು—ಶ್ರೀ. ಎಲ್.ಜಿ. ಬೇಂದ್ರೆ

ಪ್ರಕಾರಕರು— ಶ್ರೀ ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

ಪೂರ್ಣ	ಪುಟ	ರೂ.	೪೦	ಒಂದು ಸಲ
ಅರ್ಧ	,,	,,	೨೫	,,
ಕಾಲ್	,,	,,	೧೫	,,
ಅಷ್ಟಮ	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.

For particulars write to

Advt: *Manager* Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಈ ಸಂಚಿಕೆಯಲ್ಲಿ:

ಕನ್ನಡದ ಕಾಣ್ಕೆ (ಸಂಪಾದನ)
'ಸಾಮಾಜಿಕ' ೪೫೨

ಈ ಸಲದ ಕ. ಸಾ. ಸಮ್ಮೇಳನ (ಸಂಪಾದಕೀಯ)
ಸಂಪಾದಕರು ೪೫೪

ನಗೀಗೆ ನೇಮೀದ್ಕ
'ನಕಲೀ ನಾರಾಯಣಾಚಾರ್ರು' ೪೫೬

ಸಮರದ ಕಾಲದ ಕಥೆ (ಸಣ್ಣಕತೆ)
ಶ್ರೀ. ಎ. ಎಂ. ಜೋಶಿ, ಧಾರವಾಡ ೪೫೭

ಪುಸ್ತಕವಿಮರ್ಶೆ (ಒಂದು ವ್ಯಬಂಧ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೪೬೪

ನವಯುಗಾರಂಭ (ಕವನ)
ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಏ., ಬಿ. ಟಿ. ಗೋಕಾಕ ೪೬೪

ನಾನು ಕಂಡ ನಾಡು (ಪ್ರವಾಸಪ್ರಬಂಧ)
ಶ್ರೀ ವಿಜ್ಜಿ ಅಣ್ಣಾರಾಯರು, ಉಗಾರ ೪೬೯

ನಾನೇನಾಗುವೆ (ಆಕಾಶ ಸಂಭಾಷಣ)
'ಆನಂದಕಂದ' ೪೭೫

ಸಾಕ್ಷಾತ್ಕಾರ (ಕವನ)
ಶ್ರೀ. ಚೆನ್ನವೀರ ಕಣವಿ, ಧಾರವಾಡ ೪೭೯

ಇರುಳ ಮೌನ (ಕವನ)
ಶ್ರೀ. ಎಚ್ ಜೆ. ಉಪಾಧ್ಯಾಯ ಎಂ. ಏ. ಹೈದರಾಬಾದ್ ೪೭೯

ವ್ಯಾಪಾರದ ರಾಷ್ಟ್ರೀಕರಣ (ಆರ್ಥಿಕ ವಿಚಾರ)
ಶ್ರೀ. ಎಚ್. ಬಿ. ಶಿವಮೊಗ್ಗ ಮುಂಬಯಿ ೪೮೦

ಮಲೆನಾಡ ರಾಣಿ (ಒಂದುಕತೆ)
ಶ್ರೀ. ಕೊ. ಸು. ಸೀತಾರಾಮ ಸೆಂ. ಕಾಲೇಜ್, ಬೆಂಗಳೂರು ೪೮೨

ಕ್ಷಮಾಗುಣ (ವಿಚಾರಲಹರಿ)
ಶ್ರೀ. ಎಸ್. ಕೆ. ಕುಲಕರ್ಣಿ ಎಂ. ಏ., ಬಿ. ಟಿ. ಧಾರವಾಡ ೪೮೪

ಸಾಹಿತ್ಯವಿಮರ್ಶೆಯು ಶಿಕ್ಷಣರಂಗ
ಶ್ರೀ. ಯ. ರಾ ಭಟ್ಟ, ಪುತ್ತೂರ ೪೯೦

ಪುಸ್ತಕ ವಿಮರ್ಶೆ (ಗಂಗಾಸಾನಿ, ಹುಡುಗಾಟ)
ಶ್ರೀ ಎನ್. ಪಿ. ಕುಲಕರ್ಣಿ ಬಿ. ಏ ಮತ್ತು
ಎಲ್. ಜಿ. ಬೇಂದ್ರೆ ...

ಸಾದರ ಸ್ವೀಕಾರ ೪೯೬

ವರ್ಷ ೧೨

ಸಂಚಿಕೆ ೧೦

ಮಾರ್ಚ್

೧೯೫೦



ಕನ್ನಡದ ಕಾಣ್ಕೆ

'ಸಾಮಾಜಿಕ'

★

ಓ, ಕನ್ನಡ! ಸಿರಿಗನ್ನಡ, ತಿರುಗನ್ನಡ! ಶಿವಗನ್ನಡ, ಸವಿಗನ್ನಡ! ಓ, ತುಂಬುಗನ್ನಡ, ಇಂಬುಗನ್ನಡ! ನಲ್ಗನ್ನಡ, ಮುದ್ದು ಕನ್ನಡ!

* * *

ಪಂಪ-ರನ್ನರ ತಿರುಳ್‌ಗನ್ನಡ, ನಾರಣಪ್ಪನ ಸಿಡಿಲ್‌ಗನ್ನಡ! ರಾಯ ನೃಪತುಂಗನ ಪಿತ್ತರಗನ್ನಡ, ಮುದ್ದಣ ಮುದ್ದಣನ ಕತ್ತುರಿಗನ್ನಡ! ರತ್ನಾಕರ ಸಿದ್ಧನ ರಸಗನ್ನಡ, ಪೈಣಿಕ ಲಕ್ಷ್ಮೀಶನ ಜೇನುಗನ್ನಡ! ಶಿವಶರಣರ ಕೆಚ್ಚುಗನ್ನಡ, ಹರಿದಾಸರ ಬಿಚ್ಚುಗನ್ನಡ! ನಾಡವರ ನಗೆಗನ್ನಡ, ಗರತಿಯರ ಬಗೆಗನ್ನಡ!

* * *

ಗುರುಮನೆಯಲ್ಲಿ ಬೆಳೆದ ಅರುಹುಗನ್ನಡ! ಅರಮನೆಯಲ್ಲಿ ಅಳೆದ ಅರಳುಗನ್ನಡ! ಹರದರಂಗಡಿಯೊಳು ಹರಿದಾಡಿದ ಪದಗನ್ನಡ! ಹೊಲ-ತೋಟಗಳಲಿ ಹುಲುಸುಗೊಂಡ ಹುರಿಮಳುಗನ್ನಡ! ಎಳೆಯರ ತೊಟ್ಟಿಲ ತೂಗಿದ ತಾಯಿಗನ್ನಡ! ಬೆಳೆವರ ಅಟವ ಕಳೆಗೊಳಿಸಿದ ಕೆಳೆಗನ್ನಡ! ನಲ್ಲ-ನಲ್ಲರೆದೆಯ ಬೆರಸಿದ ಜೆಲುಗನ್ನಡ! ಬಲ್ಲ-ಬಲ್ಲಾಳುಗಳನು ಕಾದಿಸಿದ ಗೆಲುಗನ್ನಡ!

* * *

ಓ, ಮಂತ್ರವಾಗಲು ಬಲ್ಲದು ಕನ್ನಡ; ಸೂತ್ರವಾಗಲು ಸಲ್ಲುದು ಕನ್ನಡ! ಶಾಸ್ತ್ರವಾಗಲು ಬಲ್ಲದು ಕನ್ನಡ; ಶಾಸನವಾಗಲು ಸಲ್ಲುದು ಕನ್ನಡ! ಒಗಟಾಗಲಪ್ಪದು ಕನ್ನಡ; ಒಕ್ಕಣೆಯಾಗಲು ತಕ್ಕುದು ಕನ್ನಡ! ಕಬ್ಬದೂಟವಾಗಬಲ್ಲದು ಕನ್ನಡ; ಕುಜಿತವಾಟವಾಗಬಲ್ಲದು ಕನ್ನಡ! ಕತೆಯನೊರೆಯಲಪ್ಪದು ಕನ್ನಡ; ಹಿತವಚನವಾಗಬಲ್ಲದು ಕನ್ನಡ!

* * *

ಹೂವಾಗಬಲ್ಲದು ಕನ್ನಡದ ಪೆಲ್ಲು, ಸಿಡಿಲಾಗಬಲ್ಲದು ಕನ್ನಡದ ಬಲ್ಲು! ಅಮರ್ದಾಗ ಬಲ್ಲದು ಕನ್ನಡದ ಇಂಪ್ಪ, ಮರ್ದಾಗ ಬಲ್ಲದು ಕನ್ನಡದ ಕೊಂಕು! ಬೆಳಕಾಗಬಲ್ಲದು ಕನ್ನಡದ ಕಿಡಿನುಡಿ, ಬೆಳುದಿಂಗಳಾಗಬಲ್ಲದು ಕನ್ನಡದ ಪದನುಡಿ! ಕೆಳೆಯನೆಳೆಯಲಪ್ಪದು ಕನ್ನಡ ಸಲುಗೆನುಡಿ, ಪಗೆಯ ಹಿಂಜರಿಸಲಪ್ಪದು ಕನ್ನಡ ಗುಡುಗುನುಡಿ!

* * *

ಓ, ಕನ್ನಡವೆ! ಕನ್ನಡಿಗನ ಉಸಿರೆ, ಕರುಳೆ, ಬಾಳೆ, ಬಿದುನದೆಯೆ! ನಿನ್ನ ಮರೆದೆನಪ್ಪೊಡೆ ನಾನು ಬೀಳ್ವೆ, ಅಳಾಗುವೆ, ಗೋಳಪ್ಪವೆ! ನಿನ್ನನಾದೆನಪ್ಪೊಡೆ ಏಳುವೆ, ಬಾಳುವೆ, ಅಳುವೆ!

ಈ ಸಲದ ಕನ್ನಡ ಸಾಹಿತ್ಯಸಮ್ಮೇಳನ

ಕಳೆದ ತಿಂಗಳ ದಿನಾಂಕ ೧೬-೧೭-೧೮ ರಲ್ಲಿ, ಕನ್ನಡ ಸಾಹಿತ್ಯ ಸಮ್ಮೇಳನದ ೩೩ನೆಯ ಅಧಿವೇಶನವು, ಕನ್ನಡದ ಗಂಡುಮೆಟ್ಟಿನ ಪಟ್ಟಣವಾದ ಸೊಲ್ಲಾಪುರದಲ್ಲಿ ವಿಜೃಂಭಣೆಯಿಂದ ಜರುಗಿತು. ಬ್ರಿಟಿಷರ ರಾಜಕೀಯವಿಭಾಗದ ದುಷ್ಪರಿಣಾಮದಿಂದ, ಅಂದಿನ ಸಿದ್ಧರಾಮಶರಣರ ಕನ್ನಡ ಸೊನ್ನಲಿಗೆ 'ಸೋಲಾಪುರ' ವಾಗಿ ಕಿವಿಗೆ ಬೀಳುತ್ತಲಿದೆಯಾದರೂ, ಅಲ್ಲಿಯ ಸಿದ್ಧರಾಮನ ನಿಜಭಕ್ತರಾವ ಇಂದಿನ ಕನ್ನಡಿಗರು, ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸೇರಿಸಿ, 'ಸೋಲಾಪುರ' ವನ್ನು ಮತ್ತೆ 'ಸೊನ್ನಲಿಗೆ'ಯನ್ನಾಗಿ ಮಾಡುವ ಭರವಸೆಯನ್ನು ನಮ್ಮಲ್ಲಿ ಹೆಚ್ಚಿಸಿದ್ದಾರೆ.

ಇಂದಿನ ಪ್ರಜಾಧಿಪತ್ಯದ ಯುಗದಲ್ಲಿಯೂ–ರಾಜಕೀಯ ದೃಷ್ಟಿಯಿಂದ–ಕನ್ನಡಿಗರ ವಿಷಯದಲ್ಲಿ ಅನ್ಯಾಯ, ಆಕ್ರಮಣಗಳು ಬೇಕಾದಷ್ಟು ನಡೆಯುತ್ತಿರುವಾಗ, ಬ್ರಿಟಿಷರ ಬಲುಮೆಯ ಅಡಳಿತದಲ್ಲಿ ಕನ್ನಡಿಗರ 'ಸೊನ್ನಲಿಗೆ' ಮಹಾರಾಷ್ಟ್ರ ಪ್ರಾಂತಕ್ಕೆ ಒಳಪಟ್ಟು 'ಸೋಲಾಪುರ' ವಾದುದರಲ್ಲಿ ಆಶ್ಚರ್ಯಪಡಬೇಕಾದುದೇನೂ ಇಲ್ಲ. ಹದಿನಾರಾಣೆ ಕನ್ನಡಿಗರ ನಗರವಾದ ಸೊಲ್ಲಾಪುರದಲ್ಲಿ ಇಂದು ಕನ್ನಡ ಓದು-ಬರೆಹ ಬಲ್ಲವರು ಅಸರೂಪವಾಗಿದ್ದಾರೆ. ಶಿಕ್ಷಣದ ಭಾಷೆ, ಆಡಳಿತದ ಭಾಷೆ ಮರಾಟೆಯೇ ಆದುದರಿಂದ, ಎಲ್ಲರೂ ಮರಾಟೆಯನ್ನೇ ಕಲಿಯಬೇಕಾಯಿತು; ಮರಾಟೆಯನ್ನೇ ಬಳಸಬೇಕಾಯಿತು. ಮರಾಟೆ ಕಲಿಯುವುದು ಅನಿವಾರ್ಯವಾದುದರಿಂದ, ಕಲಿತ ತಪ್ಪಿಗಾಗಿ ಅದರ ಬಗೆಗೇ ಜನರ ಆಕರ್ಷಣೆ ಹೆಚ್ಚಿತು; ಕನ್ನಡದಪ್ರೀತಿ ಕಡಿಮೆಯಾಯಿತು. ಮಹಾರಾಷ್ಟ್ರದ ತೇಜಸ್ವಿಯಾದ ರಾಜಕಾರಣವೂ ಆಕರ್ಷಕವಾದ ಸಾಹಿತ್ಯನಿರ್ಮಿತಿಯೂ ಅಲ್ಲಿಯ ಜನರಿಗೆ ಕನ್ನಡದ ಆತ್ಮೀಯತೆಯನ್ನು ಇನ್ನಿಷ್ಟು ಕಡಿಮೆಮಾಡಿದುವು. ಸೊಲ್ಲಾಪುರದಲ್ಲಿ ಇಂದು ಕನ್ನಡವನ್ನು ಉಳಿಸಿದ ಶ್ರೇಯಸ್ಸು ಯಾರಿಗಾದರೂ ಸಲ್ಲಬೇಕಾದರೆ, ಅದು ಅಲ್ಲಿಯ ಹೆಣ್ಣುಮಕ್ಕಳಿಗೆ ಸಲ್ಲಬೇಕು; ಕಲಿಯದ ಜನಸಾಮಾನ್ಯರಿಗೆ ಸಲ್ಲಬೇಕು. ಆದರೆ ಹಾಗದು ಉಳಿದುದು ಕನ್ನಡದ ಜಾಗೃತಿಯಿಂದ ಅಲ್ಲ. ಸ್ವಾಭಾವಿಕವಾಗಿ.

ಹೊರಗೆ ಬೀಸುತ್ತಲಿದ್ದ ಕನ್ನಡ ಚಳವಳಿಯ ಗಾಳಿ ಸೊಲ್ಲಾಪುರವನ್ನೂ ಸೋಂಕಿತು. ಈ ಗಾಳಿಗೆ ಶ್ರೀಸಿದ್ಧರಾಮೇಶ್ವರನ ಮಾಹಾತ್ಮ್ಯದ ನೆರವು ದೊರೆತು, ಇಂದು ಅಲ್ಲಿಯ ಎಲ್ಲ ಕನ್ನಡಿಗರಲ್ಲಿಯೂ ಆತ್ಮಜಾಗೃತಿ ನೂಡುವಂತಾಯಿತು. ನಗರದ ಸಿರಿವಂತ ಮುಂದಾಳುಗಳಾದ ಶ್ರೀ. ವಾರದ, ಶ್ರೀ. ಕಾಡಾದಿ, ಶ್ರೀ. ಅಬ್ದುಲ ಪುರಕರ್, ಬ್ಯಾ, ಸರದಾರ ಇವರೆಲ್ಲ ಕನ್ನಡದ ಉನ್ನತಿಯ ಕಾರ್ಯ ತಮ್ಮದೆಂದು ಭಾವಿಸಿ ಸನ್ನದ್ಧರಾದುದು, ಕರ್ನಾಟಕದ ಶುಭಭವಿಷ್ಯದ ಸುಚಿಹ್ನವೆಂದೇ ಹೇಳಬಹುದು. ಶ್ರೀಮತಿ ಜಯದೇವೀಬಾಯಿ ಲಿಗಾಡೆಯವರಂತಹ ಕರ್ತೃತ್ವಶಾಲಿ ಮಹಿಳೆ ಅಲ್ಲಿಯ ಹೆಣ್ಣುಮಕ್ಕಳನ್ನು ಕನ್ನಡತಿಯರನ್ನಾಗಿಯೆ ಇರಿಸುವ ಕಾರ್ಯದಲ್ಲಿ ತುಂಬ ದುಡಿದಿದ್ದಾರೆ; ದುಡಿಯುತ್ತಲಿದ್ದಾರೆ. ಸೊಲ್ಲಾಪುರದ ಕನ್ನಡ ತರುಣರ ಆತ್ಮಜಾಗೃತಿಯೂ ಸ್ಪೃಹಣೀಯವಾದುದಾಗಿದೆ. ಇವರೆಲ್ಲರ ಇದುವರೆಗಿನ ದುಡಿಮೆಯ ಪ್ರತೀಕ ಈ ಸಲದ ಸಾಹಿತ್ಯ ಸಮ್ಮೇಳನ.

ಸಾಹಿತ್ಯ ಸಮ್ಮೇಳನದೊಂದಿಗೆ ಎಂದಿನಂತೆ ಮಹಿಳಾಗೋಷ್ಠಿ ಕವಿಗೋಷ್ಠಿಗಳು ನಡೆದುವೆಲ್ಲದೆ 'ಗಮಕಗೋಷ್ಠಿ' ಯೊಂದು ಈ ಸಲದ ವಿಶೇಷ ಕಾರ್ಯಕ್ರಮವಾಗಿದ್ದಿತು. ಅದರಂತೆ ಶ್ರೀಮಾನ್ ಬಡಿಗೇರ ಅವರಿಂದ ಉದ್ಘಾಟಿತವಾದ 'ಕಲಾಪ್ರದರ್ಶನ' ವೂ ಈಸಲದ್ದೊಂದು ವೈಶಿಷ್ಟ್ಯ.

ಪದ್ಧತಿಯಂತೆ ಡಿಸೆಂಬರ್ ಕೊನೆಯ ವಾರದಲ್ಲಿಯೆ ಸಮ್ಮೇಳನ ಸೇರಿದ್ದರೆ, ಹೊರಗಿನಿಂದ ಬರುವ ಸಾಹಿತ್ಯಿಕರಿಗೆ ಹೆಚ್ಚು ಅನುಕೂಲವಾಗುತ್ತಿದ್ದಿತು. ಹೆಚ್ಚು ಜನ ಬರಬಹುದಾಗಿದ್ದಿತು ಆದರೂ ಸ್ಥಳೀಯ ಕನ್ನಡಿಗರ ಉತ್ಸಾಹ, ಹೊರಗಿನವರ ಬರುವಿಕೆಯ ಕೊರತೆಯನ್ನು ಮರೆಯಿಸಿ ಸಮ್ಮೇಳನವನ್ನು ಯಶಸ್ವಿಯಾಗಿ ನೆರವೇರಿಸಿದುದು ಸಂತೋಷದ ಸಂಗತಿ.

ಸಮ್ಮೇಳನಾಧ್ಯಕ್ಷರು

ಅಧ್ಯಕ್ಷರಾಗಿ ಆಯ್ಕೆ ಹೊಂದಿದ ಶ್ರೀಮಾನ್ ಎಂ. ಆರ್. ಶ್ರೀನಿವಾಸ ಮೂರ್ತಿಗಳು ಕನ್ನಡಕ್ಕಾಗಿ ತುಂಬ ದುಡಿದವರು. ವಿಶೇಷವಾಗಿ ಸಾಹಿತ್ಯವನ್ನು ಒಳಹೊಕ್ಕು ಅಭ್ಯಾಸ ಮಾಡಿದವರು. ನಾಟಕಕಾರರು ಕಾದಂಬರಿಕಾರರು, ಕವಿಗಳು, ಒಳ್ಳೆಯ ವಿಮರ್ಶಕರು, ಸಾಹಿತ್ಯ ಸಂಶೋಧಕರು. ಸಮ್ಮೇಳನದ ಅಧ್ಯಕ್ಷಪೀಠದ ಮೇಲೆ ಕುಳಿತು ಕೊಳ್ಳುವ ಯೋಗ್ಯತೆಯನ್ನು, ತಮ್ಮ ಇದುವರೆಗಿನ ಕೃತಿಗಳಿಂದ ಕನ್ನಡಿಗರಿಗೆ ಚೆನ್ನಾಗಿ ಮನಗಾಣಿಸಿಕೊಟ್ಟಿದ್ದಾರೆ. ಕನ್ನಡ ನಾಡು ನುಡಿಗಳ ವಿಷಯದಲ್ಲಿರುವ ಶ್ರೀ. ಶ್ರೀನಿವಾಸಮೂರ್ತಿಗಳ ಗಾಢವಾದ ಅಭಿಮಾನ–ವಿಶ್ವಾಸಗಳನ್ನು, ಅವರ ಮೊದಲನೆಯ ಸ್ವತಂತ್ರ ಕೃತಿಯಾದ 'ನಾಗರಿಕ' ಎಂಬ ಸರಳರಗಳೆಯ ನಾಟಕ, ಅಖಿಲ ಕರ್ನಾಟಕಕ್ಕೂ ಚೆನ್ನಾಗಿ ಪರಿಚಯ ಮಾಡಿಕೊಟ್ಟಿದೆ. ಅದರಲ್ಲಿಯ ಗುಣವನ್ನರಿತೇ ಮಾನ್ಯ ದಿವಾಕರ ರಂಗರಾಯರು, ಅದನ್ನು ಹಿಂದಿಯಲ್ಲಿ ಭಾಷಾಂತರಿಸಿ ಪ್ರಕಟಿಸಿದರು. 'ಭಕ್ತಿಭಾಂಡಾರಿ ಬಸವಣ್ಣನವರು' ಎಂಬುದು ಶ್ರೀಯುತರ ವಚನವಾಙ್ಮಯದ ಅಳವಾದ ಅಭ್ಯಾಸದ ಪ್ರಥಮಫಲ. ಬಹುಜನ ವಿದ್ವಾಂಸರಿಂದ ಮನ್ನಣೆ ಪಡೆ

ಕೃತಿಯದು. ಶ್ರೀಯುತರ ಯಾವ ಸಾಹಿತ್ಯನಿರ್ಮಿತಿಯನ್ನೇ ತೆಗೆದು ಕೊಂಡು ನೋಡಿದರೂ, ಅದರಲ್ಲಿ ಅವರ ಸೂಕ್ಷ್ಮವಾದ ಅಭ್ಯಾಸ, ಸೌಂದರ್ಯೋಪಾಸನೆ, ರಸಿಕತನಗಳು ಕಾಣದೆ ಇರವು. ಇವರು ಸಮ್ಮೇಳನ ಪ್ರಾರಂಭದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣವನ್ನು ನೋಡಿದರೆ, ಕನ್ನಡಕ್ಕಿರುವ ತೊಂದರೆ–ಕೊರತೆಗಳನ್ನು ಎಷ್ಟೊಂದು ವಿಶ್ಲೇಷಣಾತ್ಮಕ ಬುದ್ಧಿಯಿಂದ ನೋಡಿದ್ದಾರೆಂಬುದು ಗೊತ್ತಾಗದೆ ಹೋಗದು. ಆ ತೊಂದರೆ–ಕೊರತೆಗಳನ್ನು ಕುರಿತು ರೇಗಿಕೊಂಡಂತೆಯೂ ಕಾಣುವುದು. ಅಲ್ಲಲ್ಲಿ ದುಡುಕಿನ ಮಾತುಗಳು ಹೆಚ್ಚಾಗಿ ಬಂದಿವೆ. ಬೇಕಾದವರಿಂದ ಆ ಮಾತುಗಳು ಚಿಪ್ಪಾಳಿಯನ್ನು ತೆಗೆದು ಕೊಂಡಿರಬಹುದಾದರೂ, ಬೇಡವಾದವರನ್ನು ಅವು ಕೆಣಕಿ ಕೆರಳಿಸದೆ ಬಿಡವು. ಸಾಹಿತ್ಯಪರಿಷತ್ತು ಮಾಡಬೇಕಾಗಿರುವ ಕನ್ನಡದ ವಿಧಾಯಕ ಕಾರ್ಯದ ದೃಷ್ಟಿಯಿಂದ ನೋಡಿದರೆ, ಅಧ್ಯಕ್ಷಸ್ಥಾನದ ಹೊಣೆಗಾರಿಕೆಯನ್ನು ಹೊರಲಿರುವವರು, ಇಂತಹ ದುಡುಕನ್ನು ಬಳಸದಿರುವುದು ಒಳ್ಳೆಯದಾಗಿತ್ತು—ಎನಿಸುವುದು. ಇವರು ವಿಕ್ಷೇಪಿಸಿ ಹೇಳಿರುವ ಮಾತುಗಳೆಲ್ಲ ಸತ್ಯವೆಂದು ತಿಳಿದರೂ, ಅದು ಪ್ರಿಯವಾದ ಸತ್ಯವೆನಿಸದು. ಹಳೆಯಕಾಲದ ಪ್ರಾಥಮಿಕ ಶಾಲೆಯ ಮಾಸ್ತರರು ಚಿಕ್ಕಮಕ್ಕಳನ್ನು ಅವರ ತಪ್ಪಿಗಾಗಿ ಗದ್ದರಿಸುತ್ತಿದ್ದಂತೆ, ಸಾಹಿತ್ಯ ಸಮ್ಮೇಳನಾಧ್ಯಕ್ಷರೂ ಗದ್ದರಿಸಿಬಿಟ್ಟರೆ, ತಿದ್ದುವಿಕೆಗಿಂತ ತಪ್ಪುಗಳೇ ಇನ್ನಿಷ್ಟು ಹೆಚ್ಚಾಗುವ ಸಂಭವನವಿದೆ.

ಕನ್ನಡ ಕುಲಪತಿಗಳಾದ ಶ್ರೀ. ಜಹಾಗಿರದಾರ ರಂಗಾಚಾರ್ಯರು ಸಮ್ಮೇಳನವನ್ನು ಪ್ರಾರಂಭಿಸಿಕೊಟ್ಟರು. ಸ್ವಾಗತಾಧ್ಯಕ್ಷರು ಬಳಕೆ ತಪ್ಪಿದ ಬಾಯಿಂದ ಕನ್ನಡನನ್ನು ಮಾತನಾಡುವಾಗ ಅಡೆತಡೆಸಟ್ಟರೂ, ಅವರು ಕನ್ನಡದಲ್ಲಿ ಮಾತನಾಡಿದರಲ್ಲಾ—ಎಂಬುದೇ ಹಲವರಿಗೆ ಸಂತೋಷದ ಸಂಗತಿ.

ಗೊತ್ತುವಳಿಗಳು

ಸಮ್ಮೇಳನದಲ್ಲಿ ಪುರಸ್ಕೃತವಾದ ಗೊತ್ತುವಳಿಗಳನ್ನು ನೋಡಿದರೆ, ಯಾವುವರಲ್ಲಿಯೂ ಹೊಸತನವೆನಿಸುವಂತಿಲ್ಲ. ಇನೇ–ಇಂತಹವೇ–ಗೊತ್ತುವಳಿಗಳು ಪ್ರತಿಸಮ್ಮೇಳನದಲ್ಲಿಯೂ ಬಂದು ಬಂದು ಪಾಸಾಗಿರುತ್ತವೆ. ಸಾಹಿತ್ಯ ಪ್ರಚಾರ–ಪ್ರಸಾರಗಳ, ಜ್ಞಾನಸಾಹಿತ್ಯ ನಿರ್ಮಿತಿಯ ಯೋಜನೆಗೆ ಸಂಬಂಧಿಸಿದ ಗೊತ್ತುವಳಿಗಳೇನೂ ಬಂದಿಲ್ಲ. 'ಜ್ಞಾನಕೋಶ'ದ ನೆನಪು, ಪ್ರತಿಸಲವೂ ಸಾಹಿತ್ಯ ಸಮ್ಮೇಳನದ ಗೊತ್ತುವಳಿಯ ಕಾಲದಲ್ಲಿ ಮಾತ್ರ ಆಗುವಂತೆ ಕಾಣುತ್ತದೆ.

ಗೋಷ್ಠಿಗಳು

ಮಹಿಳಾಗೋಷ್ಠಿ ಅಕ್ಕಲಕೋಟೆಯ ಮಹಾರಾಣಿಯವರಿಂದ ಪ್ರಾರಂಭವಾಯಿತು. ಸ್ವಾಗತಾಧ್ಯಕ್ಷಿಣಿಯರಾದ ಶ್ರೀಮತಿ ಜಯದೇವೀಬಾಯಿ ಲಿಗಾಡೆ ಅವರು, ತಮ್ಮ ಸ್ವಾಗತಭಾಷಣದಲ್ಲಿ, ಸೊಲ್ಲಾಪುರದಲ್ಲಿ ಕನ್ನಡವನ್ನು ಪುನರುಜ್ಜೀವನಗೊಳಿಸುವ ವೀರವಾಣಿಯನ್ನು ಸಾರಿದ್ದಾರೆ. ಶ್ರೀಮತಿ ಮೇಲುಕೋಟೆಯವರ ಅಧ್ಯಕ್ಷತೆಯಲ್ಲಿ ಮಹಿಳಾಗೋಷ್ಠಿ ಉತ್ತಮರೀತಿಯಿಂದ ಜರುಗಿತು.

ಶ್ರೀಮಾನ್ ಚೆನ್ನಮಲ್ಲಪ್ಪ ಹೆಲಸಂಗಿಯವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಕವಿನರ ದತ್ತಾತ್ರೇಯ ಬೇಂದ್ರೆಯವರು ಸ್ವಾಗತಾಧ್ಯಕ್ಷರಾಗಿದ್ದರು. ಅಧ್ಯಕ್ಷರ ಪರಿಚಯ ಮಾಡಿಕೊಟ್ಟ ಮೇಲೆ ಶ್ರೀ. ಬೇಂದ್ರೆಯವರು ಕೆಲವೇ ಮಾತುಗಳನ್ನು ಸ್ವಾಗತ ಭಾಷಣವೆಂದು ಹೇಳಿದರೂ, ಒಂದೊಂದು ಮಾತುಗಳು ಮುತ್ತಿನಂತಹವಿದ್ದವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಮ್ಮ ಕಾವ್ಯಾಭ್ಯಾಸ ಜೀವನದ ಕಥೆಯನ್ನೂ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತಗಳ ಮೇಲ್ಮೆಯನ್ನೂ ಮಹರ್ಷಿ ಅರವಿಂದರ ಸಾಹಿತ್ಯದ ಪರಿಚಯವನ್ನೂ ಹೇಳಿದ್ದಾರೆ. ಕನ್ನಡ ಕಾವ್ಯದ ವಿಚಾರದಲ್ಲಿ ಹೇಳಿದುದೆಂದರೆ: ಭಾಷಣದ ಕೊನೆಯಲ್ಲಿ ಹೇಳಿದ ಕೆಲವು ಜನ ಅಧುನಿಕ ಕವಿಗಳ ಹೆಸರಿನ ಪಟ್ಟಿ. ಕವಿಗೋಷ್ಠಿಯಲ್ಲಿ ಕೆಲವು ಜನರು ತಂತಮ್ಮ ಕವನಗಳನ್ನು ಓದಿ ತೋರಿಸಿದರು. ಕವಿಗೋಷ್ಠಿಯ ಕಾರ್ಯಕ್ರಮವನ್ನು ಧಾರವಾಡದ ಬಾನುಲಿಕಛೇರಿಯವರು ಆದೇ ಕಾಲದಲ್ಲಿ ಬಿತ್ತರಿಸಿದುದು ಅಭಿನಂದನೀಯ ಉಪಕ್ರಮ.

ಶ್ರೀಮಾನ್ ಜೋಳದ ರಾಶಿ ದೊಡ್ಡನಗೌಡರ ಅಧ್ಯಕ್ಷತೆಯಲ್ಲಿ ಗಮಕಗೋಷ್ಠಿ ನಡೆಯಿತು. ಕವನಕ್ಕೆ ಗಮಕದ ನೆರವು ದೊರೆತಾಗಲೇ ನಾಡಿಗೆ ಅದು ಪ್ರಯೋಜನಕಾರಿಯಾಗಿ ಪರಿಣಮಿಸಬಲ್ಲದು. ನಮ್ಮ ಪ್ರಾಚೀನ ಸಾಹಿತ್ಯಪ್ರಪಂಚದಲ್ಲಿ, ಗಮಕಿಗಳಿಗಿರುವ ಸ್ಥಾನ ತುಂಬ ದೊಡ್ಡದಾಗಿದೆ. ಆಧುನಿಕ ಕವನಗಳನ್ನಂತೂ ಗಮಕಿಗಳು ಹಾಡಿಯೆ ತೋರಿಸಬೇಕಾಗುವುದು. ಮಹಾರಾಷ್ಟ್ರದಲ್ಲಿ ಆಧುನಿಕ ಗಮಕಪದ್ಧತಿ, ಸಂಗೀತ-ಸಾಹಿತ್ಯಗಳೆರಡನ್ನೂ ಕಳೆಗೊಳಿಸುತ್ತಲಿದೆ. ನಮ್ಮನಾಡಿನಲ್ಲಿಯೂ ಅಂತಹ ಗಮಕಿಗಳು ಹೆಚ್ಚಬೇಕು. ಅದರ್ಥಾಗಿ ಗಮಕಗೋಷ್ಠಿಯ ಉಪಕ್ರಮವನ್ನು ಮುಂದುವರಿಸುವುದು ಅತ್ಯಂತ ಅಗತ್ಯದ ಮಾತಾಗಿದೆ.

ಕರ್ನಾಟಕದ ಹೃದಯದಿಂದ ದೂರವಾಗಿಬಿಟ್ಟಿದ್ದ ಸೊಲ್ಲಾಪುರವು ಈ ಸಮ್ಮೇಳನದಿಂದ ಸಮೀಪಕ್ಕೆ ಬಂದಂತಾಯಿತು. ಈ ಸಲದ ಸಮ್ಮೇಳನಕಾಲದ ಕೊರತೆಗಳನ್ನು ಕುರಿತು ಯಾರು ಏನನೇ ಮಾತನಾಡಲಿ; ಅದು ಸಾಧಿಸಿದ ಸಾಂಸ್ಕೃತಿಕ ಏಕೀಕರಣದ ಕಾರ್ಯ ಸಣ್ಣದಲ್ಲ. ಎಲ್ಲ ಕೊರತೆಗಳನ್ನೂ ಮರೆಯಿಸಲು ಹಚ್ಚುವಂತಹದು. ಅದಕ್ಕಾಗಿ ಸೊಲ್ಲಾಪುರದ ಕನ್ನಡಿಗರನ್ನು ಮನವಾರೆ ಅಭಿನಂದಿಸುತ್ತೇವೆ.

ನಗೆ ನೋವಿದ್ಯಾ

(೧)

'ಮಂಗನಂತೆ ಮೋತಿಯಿರುವ ಆ ಮನುಷ್ಯ ಯಾರ್ರೀ—ಅಲ್ಲಿ ಕೂತವರು?'

'ಅವರಾ? ಅವರು ನಮ್ಮ ಅಣ್ಣ!'

'ಓ, ಕ್ಷಮಸ್ರಿ! ನಿಮ್ಮಾಂಗಸ ಅವರ ಹೋಲಿಕಿದ್ದದ್ದು ನನ್ನ ಲಕ್ಷ್ಯದಾಗಸ ಬರಲಿಲ್ಲ!'

(೨)

ಒಬ್ಬ ಸಿನೆಮಾ ತಾರೆಗೆ ಡಾಕ್ಟರು ಸಲಹೆಕೊಟ್ಟರು—'ಆರೋಗ್ಯಕ್ಕಾಗಿ ಬದಲಾವಣೆ ಅಗತ್ಯ' ಎಂದು.

ತಾರೆ ಉತ್ತರಿಸಿದಳು:— ಆದೆಷ್ಟು ಬದಲಾವಣೆ ಬೇಕು, ಡಾಕ್ಟರ್? ಈಗ ೧೦ ತಿಂಗಳಲ್ಲಿ ೯ ಮನೆಗಳನ್ನು, ೮ ಕಾರುಗಳನ್ನು, ೭ ಜನ ಆಡಿಗೆಯವರನ್ನು, ೬ ಆಳುಗಳನ್ನು, ೫ ಜನ ಗಂಡಂದಿರನ್ನು ಬದಲಾಯಿಸಿದೆ. ಇದಕ್ಕೂ ಇನ್ನೇನು ಬದಲಾವಣೆ ಬೇಕು ಅಂತೀರಿ?

(೩)

ಇಬ್ಬರು ಸ್ನೇಹಿತರು ಬಹಳ ದಿನಗಳ ನಂತರ ಬೆಟ್ಟಿಯಾದರು. ಇಬ್ಬರಿಗೂ ಹೊಸತಾಗಿ ಮದುವೆಯಾಗಿದ್ದಿತು.

"ಏನೋ ಶಿವು, ನಿನ್ನ ಹೆಣ್ತಿ ಹ್ಯಾಂಗಿದ್ದಾಳ?"

"ನನ್ನ ಹೆಣ್ತಿ ನೋಡಪಾ, ಸ್ವರ್ಗಲೋಕದ ದೇವತಿ! ಮತ್ತ ನಿನ್ನ ಹೆಣ್ತಿ?"

"ಏನು ಮಾಡಬೇಕು, ಶಿವ್? ಆಕಿ ಇನ್ನೂ ಜೀವಂತ ಇದ್ದಾಳ. ಅದಕ್ಕs ಏನೂ ಅನ್ನಲಿಕ್ಕೆ ಬಾರದ್ದಾಂಗಪ!"

(೪)

"ನಿಮ್ಮ ಹೆಣ್ತಿ ಕೂಸಿನ್ನ ಜೋಗಳಾ ಹಾಡಿ, ಯಾಕ ಮಲಗಿಸುವದಿಲ್ಲ?"

"ನೆರಮನಿಯವರಂತಾರ — ನನ್ನ ಹೆಣ್ತಿಯ ಜೋಗುಳ ಹಾಡಿನಕಿಂತಾ ಕೂಸು ಅತ್ತದ್ದೇ ನಡದೀತು!—ಅಂತ.

(೫)

ಪುಟ್ಟು ಅಳುತ್ತಿದ್ದುದನ್ನು ಕಂಡು ಅಜ್ಜ ಕೇಳಿದರು: 'ಪುಟ್ಟು, ಯಾಕ ಅಳ್ತೀ?'

'ಅಣ್ಣ, ಅಕ್ಕ ಇವರಿಗೆಲ್ಲಾರಿಗೂ ಸೂಟ ಸಿಕ್ಕsದ, ನನಗ ಇಲ್ಲೇ ಇಲ್ಲ.'

'ಯಾಕ? ನಿನಗ್ಯಾಕ ಸಿಗಲಿಲ್ಲ?'

'ನಾ ಸಾಲಿಗೇ ಹೋಗೋದಿಲ್ಲ.'

(೬)

ಒಂದೂ ಆಕ್ಸಿಡೆಂಟ್ ಮಾಡದೆ ಹಪ್ಪ ಲಕ್ಷ ಮೈಲು ಡ್ರೈವ್ ಮಾಡಿದ ಒಬ್ಬ ಬಸ್ ಡ್ರೈವರನಿಗೆ ರೆಡಿಯೋದಲ್ಲಿ ಮಾತಾಡುವ ಪ್ರಸಂಗ ಬಂದಿತು, ಅವನು ಹೀಗೆ ಹೇಳಿದ:

'ನಾನು ಒಂದೇ ಮಾತನ್ನು ಹೇಳತ್ತೇನೆ: ಡ್ರೈವರ್ ನಾದವನು ಯಾವಾಗಲೂ, ಕಾಲು ನಡಿಗೆಯಿಂದ ಹೋಗುವವನು ಅರಿವ್ಯಗೇಡಿ ಇರುತ್ತಾನೆ ಎಂದು ತಿಳಿದೇ ಗಾಡಿಯನ್ನು ನಡಿಸತಕ್ಕದ್ದು.

(೭)

'ಈ ಸಲದ ಅಧ್ಯಕ್ಷರ ಭಾಷಣ ಚೆನ್ನಾಗಿತ್ತು; ಇಷ್ಟೇ ಅಲ್ಲ, ಸ್ವತಂತ್ರವಾಗಿತ್ತು.'

'ಚೆನ್ನಾಗಿದ್ದದ್ದು ಅವರದಿರಲಿಲ್ಲ; ಅವರದಿದ್ದದ್ದು ಚೆನ್ನಾಗಿರಲಿಲ್ಲ!'

(೮)

'ಅಪ್ಪಾ, ರಾಜಕಾರಣಿ ಅಂದ್ರ ಯಾರು?'

'ಯಾವನು ನಾಲಗೆಯನ್ನು ತಾಗೆಟ್ಟು ಓಡಿಸುತ್ತಾನೋ ಅವನು!'

'ಮತ್ತ, ಮುತ್ಸದ್ದಿ ಅಂದರ ಯಾರು?'

'ಯಾವನು ಪ್ರಸಂಗದಲ್ಲಿ ಅದನ್ನು ಬಿಗಿಹಿಡಿಯುತ್ತಾನೋ ಅವನು!'

(೯)

ನ್ಯಾಯಮೂರ್ತಿ:— ಏನು? ಇಲ್ಲಿ ಗಡಬಿಡಿ ಮಾಡಿದವರು ಕೋರ್ಟಿನಿಂದ ಹೊರಗ ಹಾಕಿಸಿಕೋತಾರ....ತಿಳೀತೇನು?

ಅಪರಾಧಿ:— ಹೀಂಗೇನ್ರಿ! ನಿಮ್ಮ ಕಾಯಿದೇದೊಳಗ ಇದ್ದಾಂಗs ಮಾಡ್ರಿ. ಥೋಡೇ ದಿನಮೇ ಮಜದೂರ್ ರಾಜ್ಯ ಇನ್‌ಕಿಲಾಬ್ ಝಿಂದಾಬಾದ್! ಸದ್ಯ ಸರಕಾರ್ ಹಾಳಾಗಲಿ!

ಸಮರದ ಕಾಲದ ಕಥೆ

ಡಿ. ಸಿ. ಎಂ. ಮು. ಜೋಶಿ, ಧಾರವಾಡ*

★

ಕಳೆದ ಮಹಾಯುದ್ಧದಲ್ಲಿ, ಸತ್ತು ಮನೆತನವನ್ನು ಹಾಳುಮಾಡಿಕೊಂಡ ಸೈನಿಕರು ಬೇಕಾದಷ್ಟು! ಮಲ್ಲ-ರಾಜನಂತೆ, ಪರದೇಶದಲ್ಲಿಯೇ ಮನೆಕಟ್ಟಿ, ಹೆಂಡತಿ-ಮಕ್ಕಳ ರಮ್ಯಸಂಸಾರ ನಡೆಯಿಸಿರುವವರು. ಎಷ್ಟು ಜನರಿರಬಹುದು?

★

"ಢಂ! ಢಂ!! ಢಂ!!!

ಎದುರು ಗುಂಡುಗಳು ಸಿಡಿಯುತ್ತಿದ್ದವು. ಅದು ಕೊನೆಯ ಹೊಡೆದಾಟ.

× × ×

ನಮ್ಮ ಬಟಾಲಿಯನ್ ಮಲಯದಲ್ಲಿ, ಪ ರಾಜಧಾನಿ "ಕೊಲಾಲಂಪೂರ"ದಿಂದ ೧೬ ಮೈಲಿನ ವೆ ನ 'ಮುಸಾಂತ ತುವಾ' ಎಂಬ ಸಣ್ಣಹಳ್ಳಿಯ ಕೆಳಬದಿಯ ಎಬ್ಬಡವಿಯ ಹತ್ತಿರ ಚಾಕೆಯ ಹಾಕಿತ್ತು. ಮಲಯದ ಕೆಲಭಾಗವು ಆಗಲೇ ಮಿತ್ರರ ಕೈಸೇರಿ ಹೋಗಿತ್ತು. ಜಪಾನಿಗಳು ಪೂರ್ಣ ಶರಣಾಗತರಾಗುವ ಪೂರ್ವದಲ್ಲಿ ಒಂದುದಿನ, ನಮ್ಮ ಬಟಾಲಿಯನಿನಲ್ಲಿ ಎಲ್ಲರ ಮುಖದ ಮೇಲೆ ಚಿಂತೆಯ ಮುಸುಕು ಕವಿದಿದ್ದಿತು. ರಾತ್ರಿಯ ಎಂಟು ಹೊಡೆದು ಹೋಗಿತ್ತು. ಅದೇ ವೇಳೆಗೆ, ನಮ್ಮ ಬಟಾಲಿಯನ್ ಕಮಾಂಡರ್ ಮೇಜರ್ ಸ್ಮಿಥ್‌ರು, ಹೆಡ್‌ಕ್ವಾರ್ಟರಿನಿಂದ ಮರಳಿ ಬಂದರು. ಹವಾಲ್ದಾರ್ ಮೇಜರ್, ಮತ್ತು ಪ್ಲಾಟೂನ್ ಹವಾಲ್ದಾರ್ ಎಲ್ಲರನ್ನೂ ಅವರ ತಂಬೂಕ್ಕೆ ಕರೆಯಲಾಯಿತು. ನಾನೂ ಒಬ್ಬ ಪ್ಲಾಟೂನ್ ಹವಾಲ್ದಾರ: ನನಗೂ ಹೋಗಲೇ ಬೇಕಿತ್ತು. ಅಲ್ಲಿಯ ರುಕ್ಷಜೀವನಕ್ಕೆ ಬೇಸತ್ತು ಹೋಗಿದ್ದೆ. ಸ್ವರ್ಗವೂ ಇಲ್ಲ, ಪಾತಾಳವೂ ಇಲ್ಲ. ಸೋಕ್ಷ್ಮ ಮೋಕ್ಷಗಳ ನಿರ್ಣಯ-ವಾಗಿರಲಿಲ್ಲ. 'ಹೊಸ ಹುರುಪು' ಎಂದು ಚತುರಭಾವದಿಂದಲೇ ಒಳಸೇರಿದೆವು.

"ಪ್ಲಾಟೂನ್ ಹಾಲ್ಟ್."
"ಸೆಲ್ಯೂಟ್."
"ಡೌನ್."
"ಸ್ಟ್ಯಾಂಡ್ ಅ್ಯಟ್ ಈಜ್!"

ಪದ್ಧತಿಯ ಪ್ರಕಾರ ನಮ್ಮ ಬಟಾಲಿಯನ್ ಹವಾಲ್ದಾರ್ ಮೇಜರ್— ಕೆ. ಜಿ. ಮುಲ್ಲರಾಜ, ಹವಾಲ್ದಾರರ ಪ್ಲಾಟೂನನ್ನು ಮಾರ್ಚ್‌ಮಾಡಿ, ಪ್ರಣಾಮ ಸಲ್ಲಿಸಿ ನಿಂತನು.

ಪ್ರತಿಯೊಬ್ಬರೂ ಮೇಜರ್ ಸ್ಮಿಥ್‌ರ ಕಡೆಗೇ ನೋಡುತ್ತಿದ್ದರು. ಒಮ್ಮೆ ಸಾಹೇಬರು ಬಾಯ್ತೆರೆದರು:

"ಇಂದಿನ ರಾತ್ರಿಯನ್ನೊಂದು ಕಳೆದರೆ ಸಾಕು. ಜಪಾನಿಗಳು ಶಸ್ತ್ರಗಳನ್ನು ಕೆಳಗಿರಿಸುವುದಾಗಿ ತಿಳಿದು ಬಂದಿದೆ. ಆದರೂ ಎಚ್ಚರಿಕೆ! ದೀಪ ನಂದುವ ಮುಂದೆ ಭಯಾನಕರೂಪ ತಾಳುತ್ತದೆ. ಎಲ್ಲರೂ ತಮ್ಮ ತಮ್ಮ ಪ್ಲಾಟೂನಿನೊಂದಿಗೆ ತಯಾರಿರಲಿ!"

"ಕೆ. ಜಿ. ಮುಲ್ಲರಾಜ!" ಸಾಹೇಬರು ಮತ್ತೆ ಮುಲ್ಲರಾಜನನ್ನು ಕೂಗಿದ ಕ್ಷಣವೇ, ಮುಲ್ಲ ಬೂಟಿನ ಸಪ್ಪಳದೊಂದಿಗೆ ಸೆಲ್ಯೂಟ್ ಕೊಟ್ಟು "ಎಸ್ ಸರ್" ಎಂದು ನಿಂತನು.

"ಹುಕುಮನ್ನು ಕಾರ್ಯರೂಪದಲ್ಲಿ ತನ್ನಿರಿ!" ಸಾಹೇಬರು ಎಚ್ಚರಿಕೆ ಕೊಟ್ಟು ಹೇಳಿದರು.

ಮುಲ್ಲರಾಜನು ಮತ್ತೊಂದು ಸೆಲ್ಯೂಟ್ ಕೊಟ್ಟು; ನಮ್ಮನ್ನು ತಂಬೂದಿಂದ ಮಾರ್ಚ್ ಮಾಡಿ ಹೊರಬಂದು, ಡಿಸಮಿಸ್ ಆಜ್ಞೆ ಕೊಟ್ಟು. ಮುಂದಿನ ಕೆಲಸದಲ್ಲಿ ನಿರತರಾಗಲು ಆಜ್ಞೆಯಿತ್ತನು. ಎಲ್ಲ ಹವಾಲ್ದಾರರೂ ತಮ್ಮ ತಮ್ಮ ಪ್ಲಾಟೂನ ಕಡೆ ನಡೆದರು. ಮುಲ್ಲರಾಜ ಮಾತ್ರ ನನ್ನ ಜತೆಯಲ್ಲಿಯೇ ಬಂದನು. ಅವನು ಬರಲೇ ಬೇಕು. ಏಕೆಂದರೆ ಅವನು ನನ್ನ ಜೀವದ ಗೆಳೆಯ—ನಾನು ಅವನ ಜೀವದ ಗೆಳೆಯ. ಇಡೀ ಬಟಾಲಿಯನ್‌ನಲ್ಲಿ ನಾವೇ ಇಬ್ಬರು ಕನ್ನಡಿಗರು. ಕನ್ನಡ ನಾಡನ್ನು ಬಿಟ್ಟು ಬರಡು—ಎರಡುವರೆ ಸಾವಿರ ಮೈಲು ಸಮುದ್ರದಾಚೆಯಲ್ಲಿದ್ದವರು. ಜಾತಿಯ ಭೂತದ ಕಲ್ಪನೆಯೇ ನಮಗಿರಲಿಲ್ಲ. ನಾವಿಬ್ಬರೂ ಒಂದೇ ತಟ್ಟೆಯಲ್ಲಿ ಊಟಮಾಡಿದ್ದುಂಟು. ಒಡಹುಟ್ಟಿದವರಲ್ಲಿಯೂ ಅಷ್ಟೊಂದು ಸೌಹಾರ್ದ ಇರಲಿಕ್ಕಿಲ್ಲ. ನಾನು ಅವನನ್ನು ಕರೆಯುವುದು "ಮುಲ್ಲ" ಎಂದು; ಅವನು ನನ್ನನ್ನು ಕರೆಯುವುದು "ವಾಸು" ಎಂದು. ನಮ್ಮಿಬ್ಬರ ನಿಕಟ ಗೆಳೆತನ ನೋಡಿ, ಒಮ್ಮೆ ಸ್ಮಿಥ್ ಸಾಹೇಬರು ಮುಲ್ಲನನ್ನು ಕೇಳಿದ್ದರಂತೆ: "ನಿಮ್ಮಿಬ್ಬರ ಜಾತಿ ಒಂದೇ ಇರದಾಗ, ಇಷ್ಟೊಂದು ಪ್ರೀತಿ ಹೇಗೆ?" ಎಂದು. ಹಿಂದುಸ್ತಾನಕ್ಕೆ ತಮಗೆ ಬೇಕಾದ ರೀತಿಯಲ್ಲಿ ಬಣ್ಣ ಬಳಿಯಲು ಹೊರಟ ಈ ಬಡಾಸಾಹೇಬರಿಗೆ, ಈ ನಮ್ಮ ರೀತಿ ಕೊಂಚ ಸೋಜಿಗವಾಗಿ ಕಂಡಿರಬೇಕು. ಆದರೆ ಮುಲ್ಲನ ಉತ್ತರ ಕೇಳಿ ಬಡೇಸಾಹೇಬರೂ ಬೆಪ್ಪರಾಗಿಬಿಟ್ಟರು. "ಜಾತಿ ಮನೆಯೊಳಗೆ. ಮೈದಾನಿನಲ್ಲಿ ಮಾತ್ರ ನಮ್ಮದೆಲ್ಲ ಒಂದೇ ಜಾತಿ!" ಮುಲ್ಲ ಸಾಹೇಬರಿಗೆ ಕೊಟ್ಟ ಉತ್ತರವಿದು.

---

*ಈ ಲೇಖಕರು ಕಳೆದ ಮಹಾಯುದ್ಧದಲ್ಲಿ ಸೈನಿಕರಾಗಿದ್ದು, ಮಲಯಾ ರಣಾಂಗಣದಲ್ಲಿ ಕೆಲಸಮಾಡಿದ್ದರು. ಈಗ ಸಂಗತಿಯನ್ನೆ ಕತೆಮಾಡಿ ಹೇಳಿದ್ದಾರೆ. —ಸಂ. ಜ.

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಏನೋ ಹೇಳಲು ಹೊರಟು ಮತ್ತೇನನ್ನೋ ಹರಟುತ್ತಿದ್ದೇನೆ. ಅಂದಿನ ರಾತ್ರಿ ಭೀಕರ ರಾತ್ರಿ. ಕಾರ್ಗತ್ತಲೆ. ನಮ್ಮ ಬಟಾಲಿಯನ್ನಿನ ಮೂರೂ ದಿಕ್ಕಿನಿಂದ ಹೊಳೆಯೊಂದು ಹರಿಯುತ್ತಿದೆ. ಅದಕ್ಕೊಂದು ಬಿಸಿನೀರಿನ ಬುಗ್ಗೆಯೂ ಕೂಡಿಕೊಂಡಿದೆ. ನಾಲ್ಕನೆಯದೇ ದಾರಿ. ಅಲ್ಲಿ ಬಲಪಾದ ಗಸ್ತುಗಳು ದಿನದ ೨೪ ತಾಸೂ ಪಹರೆ ಕೊಡುತ್ತಿದ್ದರು. ನಮ್ಮ ಬಟಾಲಿಯನ್ನಿನ ನಾಲ್ಕೂ ನಿಟ್ಟಿಗೂ ತಂತಿ ಬಿಗಿದು, ಅದಕ್ಕೆ ಖಾಲೀ ಸಿಗರೇಟಿನ ಡಬ್ಬಿಗಳನ್ನು ಕಟ್ಟಿದ್ದೆವು. ಶತ್ರುಗಳು ಕಳ್ಳತನದಿಂದ ಒಳನುಗ್ಗಬಯಸಿದರೆ, ಅದನ್ನು ಮುಟ್ಟದೆ ನುಗ್ಗುವಂತಿರಲಿಲ್ಲ. ಮುಟ್ಟಿದರೆ ಪ್ರಮಾಧ್ವನಿ ಹೊರಡುತ್ತಿತ್ತು. ಆ ಧ್ವನಿಗೆ ಗಸ್ತುಗಳಂತೂ ಸರಿಯೇ, ತಮ್ಮ ತಮ್ಮ ತಂಬೂಗಳಲ್ಲಿ ಸಮರ ಸಾಧನ ಸಹಿತ ಸನ್ನಡಿಸಿದ ಸೈನಿಕರೂ ಎಚ್ಚರುಗೊಳ್ಳುವರು. ಇದೊಂದು ಇತ್ತೀಚಿನ ಸಮರದ ರೀತಿ.

ಇಲ್ಲಿ ಇನ್ನೂ ಒಂದು ಮಾತನ್ನು ಹೇಳುವುದು ಅಗತ್ಯ: ಸಮರ-ಸಮಯದಲ್ಲಿ, ಬಟಾಲಿಯನಿನಲ್ಲಿ ಇರುಳು ಬೆಳಕನ್ನು ಬೀರುವ ಯಾವುದೇ ವಸ್ತುವನ್ನೂ ಇಡುವಂತಿರಲಿಲ್ಲ. ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡುವ ಶತ್ರುಗಳಿಗೆ ನಮ್ಮ ಸ್ಥಾನದ ಅರಿವಾದರೆ? ಅದರಂತೆ ಇನ್ನೂ ಒಂದು ಪದ್ಧತಿ: ರಾತ್ರಿ ಹತ್ತರ ತರುವಾಯ ಯಾರಾದರೂ ನಮ್ಮ ಬಟಾಲಿಯನ್ನಿನ ಒಳಕ್ಕೆ ಬರಲು ಬಯಸುವವರನ್ನು, ಅಲ್ಲಿಯ ಗಸ್ತುಗಳು ತಡೆಯುವರು. ಸಂಕೇತಶಬ್ದಕ್ಕೆ ಸರಿಯಾಗಿ ಉತ್ತರವಿತ್ತರೆ, ಗಸ್ತುಗಳು ಆವನನ್ನು ಒಳಕ್ಕೆ ಬಿಡುವರು. ದಿನವೂ ಸಂಕೇತಶಬ್ದಗಳು ಬದಲಾಗುತ್ತಿದ್ದುವು. ಪ್ರತಿದಿನ ಒಕ್ಕೆ ಸಂಕೇತಶಬ್ದಗಳನ್ನು ಬಟಾಲಿಯನ್‌ನಲ್ಲಿ ಬಿತ್ತರಿಸುವುದು ಒಂದು ಪದ್ಧತಿ. ಗಸ್ತು ಸಂಕೇತಶಬ್ದಗಳನ್ನು ಕೇಳಿದೊಡನೆ, ಒಳಗೆ ಬರಬಯಸುವವನು ನಮ್ಮ ಸೈನಿಕನೇ ಆದಲ್ಲಿ, ತೊದಲದೇ ಉತ್ತರಿಸಿ ಬಿಡುತ್ತಾನೆ. ಪರರಿಗೂ, ಪಂಚಮದಲದವರಿಗೂ ಆ ಶಬ್ದದ ಅರಿಕೆ ಇರಲಾರದು. ಆದುದರಿಂದಲೆ ಸರಿಯಾದ ಉತ್ತರ ಬಾರದೆ ಹೋಯಿತೆಂದರೆ, ಎದುರು ಗುಂಡು ಸಿಡಿದು, ಎದೆಯೊಳಗೆ ನೆಟ್ಟು ಅವರನ್ನು ನೆಲಕ್ಕುರುಳಿಸಿ ಬಿಡುತ್ತಿತ್ತು.

ನನಗೆ ಆ ಬಟಾಲಿಯನಿಗೆ ವರ್ಗವಾಗಿ ಎರಡು ವರುಷಗಳು ಕಳೆದು ಹೋಗಿತ್ತು. ಮಲ್ಲನಿಗೆ ಮಾತ್ರ ೪॥ ವರ್ಷಗಳ ದೀರ್ಘಾವಧಿ ಕಳೆದು ಹೋಗಿತ್ತು. ಮಲಯವು ಶತ್ರುಗಳ ಸೆಳೆತಕ್ಕೆ ಒಳಗಾಗಿದ್ದರೂ, ಆ ಬಟಾಲಿಯನ್ ಅಡವಿಯ ಮಧ್ಯದಲ್ಲಿ ಬೀಡು ಬಿಟ್ಟಿತ್ತು. ಆಗ ಆದರ ಹೆಸರು " ಗೋರಿಲ್ಲಾ ಫಾಯ್ಟರ್ಸ್ " ಎಂದು. ಬೆಳಕು ಸರಿದು ಇರುಳು ನಡೆದು ಬಂದಾಗ, ಈ ಸೈನಿಕರಿಗೆ ಬೆಳಗು ಹರಿಯುತ್ತಿತ್ತು. ಮೆಲ್ಲನೆ ತಮ್ಮ ಅಡವಿಯಿಂದ ಹೊರಕ್ಕೆ ಬಂದು, ಹತ್ತಿರಿನ ಹಳ್ಳಿಗೆ ನುಸುಳಿ, ಹತ್ತಿದಪ್ಪ ಸುದ್ದಿಯನ್ನು ಮಿತ್ರರ ಠಾಣೆಗೆ ಮುಟ್ಟಿಸುವುದು ಈ ಸೈನಿಕರ ಸಮರಕರ್ತವ್ಯವಾಗಿತ್ತು. ಮಲ್ಲನ ಪಾಲಿಗೆ ಬಂದದ್ದು " ದುಸಾಂತ ತುವಾ " ಮತ್ತು " ಉಲು ಲಂಗಾತ " ಎಂಬೆರಡು–ಅಡವಿಗೆ ಹತ್ತಿಕೊಂಡ ಹಳ್ಳಿಗಳು ಮಾತ್ರ.

ಆಗಿನ ಒಂದು ರಾತ್ರಿ, ಮಲ್ಲನ ಮೇಲೆ ನಡೆದು ಬಂದಿತ್ತು. ಅವನ ಪೂರ್ವಪುಣ್ಯದ ಫಲದಿಂದಲೇ ಅವನು ಆ ಕುತ್ತದಿಂದ ಪಾರಾದದ್ದು. ಈ ಅದ್ಭುತ ರಮ್ಯ ಕತೆ ನಡೆದ ಸಮಯ, ನಾನು ಅಲ್ಲಿರಲಿಲ್ಲ. ಇದನೆಲ್ಲ ನಾನು ಕೇಳಿದ್ದು ಒಬ್ಬ ಚೀನೀ ತರುಣಿಯ–ಮೇಂಗಲೀಯಳ–ಬಾಯಿಂದ. ಮೇಂಗಲೀ ೨೦ ನ್ನು ಮೀರದ ನವತರುಣಿ. ಮುಖದ ಮೇಲೆ ಸೌಮ್ಯಕಳೆ. ಮೃದುಹಾಸ್ಯ ಯಾವಾಗಲೂ ಮುಖದಲ್ಲಿ ನರ್ತನವಾಡುತ್ತಿತ್ತು. ನಿಲುವು ಅಷ್ಟೊಂದು ಎತ್ತರವದ್ದಲ್ಲ. ಆನೆಯ ಕಣ್ಣುಗಳಂತಹ ಮಾಟವಾದ ಕಣ್ಣುಗಳು. ಅವಳು ಉಡುತ್ತಿದ್ದುದು ಒಂದು ಪಾಯ್ಜಮಾ, ಚೀನೀ ಬುಶ್ ಶರ್ಟ್ ಮಾತ್ರ. ತಲೆಗೂದಲುಗಳು ಮೊಣಕಾಲನ್ನು ಮುಟ್ಟಿ, ಮುಂದೆ ಮತ್ತೂ ಇಳಿಬೀಳಲು ಹಾತೊರೆಯುತ್ತಿದ್ದುವು. ಕೇಶಗಳನ್ನು ಕೂಡಿಸಿ ತುರುಬು ಕಟ್ಟಿಕೊಂಡಾಗ, ಅವಳ ನಾಜೂಕಾದ ಮುಖ, ಒಂದೆಡೆ ಬಾಗಿಹೋದಂತಿರುತ್ತಿತ್ತು. ಅದು ಆವಳ ಸ್ವಾಭಾವಿಕ ಅಂಗಾಕೃತಿಯಾಗಿದ್ದರೂ—ಹೊಸದಾಗಿ ಅವಳನ್ನು ನೋಡುವವರಿಗೆ ಮಾತ್ರ—ಭಾರವಾದ ತುರುಬಿನಿಂದಲೇ ಅವಳ ಮುಖ ಒಂದೆಡೆ ಬಾಗಿದೆ.... ಎಂದೆನಿಸುವಂತಿತ್ತು.

ಮಹಾಯುದ್ಧದ ಜಳಕ್ಕೆ ಅವಳ ಮನೆಮಾರು ಸುಟ್ಟು ಬೂದಿಯಾಗಿ ಹೋಗಿದ್ದರೂ, ಅವಳ ಶೀಲಕ್ಕೆ ಇನ್ನೂ ಆ ಜಳ ಬಡಿದಿರಲಿಲ್ಲ. ಆ ರಾತ್ರಿ ಮಾತ್ರ ಅವಳ ಶೀಲಕ್ಕೂ ಕೊಳ್ಳಿ ಕೊಡಲೆಂದು ಕೆಲ ಜನ ಕಂಸರು ಬಂದಿದ್ದರು. ನಟ್ಟಿರುಳು. ಮೆಂಗಲೀಯಳ ಗುರುಕುಮನೆಯ ದ್ವಾರವನ್ನು ಯಾರೋ ನೂಕುತ್ತಿದ್ದರು. ಮೆಂಗಲೀಯಳಿಗೆ ತನ್ನ ಮಿತ್ರ ಮಲ್ಲರಾಜನೇ ಬಂದಿರಬಹುದೆಂದು ಎನಿಸಿ, ಆಕೆ ಬಾಗಿಲ ಕಡೆಗೆ ನಡೆದಳು. ಹೊರಗೆ ನಾಲ್ಕಾರು ಜನರ ಗುಸು ಗುಸು ಶಬ್ದವನ್ನು ಕೇಳಿ ಬೆಚ್ಚಿದಳು. 'ಬಂದವನು ಮಲ್ಲನಲ್ಲ. ಜಪಾನೀ ಧಾಂಡಿಗರು' ಎಂದು ಮನದಟ್ಟಾಯಿತವಳಿಗೆ. ಮನೆಯಲ್ಲಿಯೋ ಮುದುಕ ತಂದೆ; ಹಾಸಿಗೆಯ ಮೇಲೆ ನರಳುತ್ತ ಬಿದ್ದ ರೋಗಿ ಅಣ್ಣ. ಅವರಿಬ್ಬರೂ ಅವಳನ್ನು ಕಾಪಾಡಲು ಅಸಮರ್ಥರಿದ್ದರು. ಗತಿಗಾಣದ ಮೆಂಗಲೀ, ಉರುವಲು ಕಟ್ಟಿಗೆಯ ಸಂದಿಯಲ್ಲಿ ಒಳಸೇರಿ, ಕಾಣದ ಹಾಗೆ ಕುಳಿತುಕೊಂಡು ಬಿಟ್ಟಳು. ಸಾಮ-ದಾನ-ಭೇದೋಪಾಯಗಳಿಗೆ ಬಗ್ಗದ್ದರಿಂದ, ಹೊರಗಿನ ಧಾಂಡಿಗರು ದಂಡಕ್ಕೆ ಕೈಹಾಕಿದರು. ಬಾಗಿಲನ್ನು ಮುರಿದೇ ಒಳಸೇರಿದರು. ಆದರೆ ಅವರ ದೃಷ್ಟಿಗೆ ಅವರಿಚ್ಛಿಸಿದ ರತ್ನ ಕಾಣಲಿಲ್ಲ. ಹಸಿದ ಹೆಬ್ಬುಲಿಯಂತೆ ಚೀರಾಡಿದರು. ತಂದೆ-ಮಗ ಇಬ್ಬರಿಗೂ ಚಿತ್ರಹಿಂಸೆ ಕೊಟ್ಟರು. ಎಲ್ಲವೂ ನಿಷ್ಫಲವಾದಾಗ ಒಬ್ಬ ಸೈನಿಕ, ಕೈಗತ್ತಿಯಿಂದ ಮೆಂಗಲೀಯಳ ಅಣ್ಣನ ಎದೆಗೆ ಬಲವಾಗಿ ತಿವಿದು ಬಿಟ್ಟನು. ಒಂದು ಆರ್ತ ಸ್ವರದೊಂದಿಗೆ ಅವನು ಅಸು ತೊರೆದನು. ಆ ಭಯಾನಕ ಚೀತ್ಕಾರ ಕೇಳಿದ ಮೆಂಗಲೀ, ಎಚ್ಚರುದಪ್ಪಿ ಕಿರುಚಿಕೊಂಡು ಬಿಟ್ಟಳು. "ಮೂಗು ಮುಚ್ಚಿದಾಗ ಬಾಯಿ ತಾನೇ ತೆರೆಯುತ್ತದೆ," ಎಂದೆನ್ನುತ್ತ ಎಲ್ಲ ಸೈನಿಕರೂ, ಬೇಟೆ ಸಿಕ್ಕ ಮಬ್ಬಿನಲ್ಲಿ ಧ್ವನಿ ಹೊರಟತ್ತ ಧಾವಿಸಿದರು. ನಿಮಿಷದ ಅವಶ್ಯಕತೆಯೂ ಇರಲಿಲ್ಲ.

ಹರಿಣಿ ವ್ಯಾಘ್ರಗಳ ದವಡೆಗೆ ಬಿದ್ದಳು. ಕಚ್ಚುವುದೊಂದೇ ಉಳಿದಿತ್ತು.

ಆರೆಕ್ಷಣದಲ್ಲಿ, ಮೆಂಗಲೀ ನಗ್ನಳಾಗಿ—ಸೈನಿಕರ ಆಟದ ಗೊಂಬೆಯಾಗಿ—ನಡುಗುತ್ತ ನಿಂತಳು. ಇನ್ನೊಂದು ನಿಮಿಷವಾಗಿದ್ದರೆ, ಅವಳ ಶೀಲ ಸುಟ್ಟು ಬೂದಿಯಾಗಿ ಹೋಗುತ್ತಿತ್ತು.

ಇದ್ದಕ್ಕಿದ್ದಂತೆ ದೀಪ ನೆಲಕ್ಕುರುಳಿ ನಂದಿಹೋಯಿತು. ಢಂ! ಢಂ! ಢಂ!'

ಗುಂಡಿನ ಸಪ್ಪಳಕ್ಕೆ—ಹೊಡೆತಕ್ಕೆ—ಕೆಲ ಸೈನಿಕರು ನೆಲಕ್ಕುರುಳಿದರು, ಕೆಲವರು ತೆರೆದಿದ್ದ ಬಾಗಿಲಕಡೆಗೆ ಧಾವಿಸಿ ಅದೃಶ್ಯರಾದರು. ಎಲ್ಲವೂ ಶಾಂತವಾದಾಗ, ಕಡ್ಡಿ ಕೊರೆದಾಗ, ಎರಡೇ ಎರಡು ಮುಖಗಳು ಒಂದನ್ನೊಂದು ದೃಷ್ಟಿಸುತ್ತಿದ್ದುವು.

'ಮಲ್ಲ!'

'ಮೆಂಗಲೀ!'

ಮೆಂಗಲೀಯಳ ನಗ್ನಮೂರ್ತಿಯನ್ನು ಕಂಡು ಮಲ್ಲನಿಗೆ ಸಂಕೋಚವೆನಿಸಿರಬೇಕು. ಎಷ್ಟೆಂದರೂ ಅವನು ಭಾರತೀಯನು! ತನ್ನ ತಲೆಯ ಮೇಲಿದ್ದ ಪೇಟಾದಿಂದಲೇ, ಮೆಂಗಲೀಯಳ ಮೈ ಮರೆಯಾಗುವ ಹಾಗೆ ಮುಚ್ಚಿದನು. ಗಾಢ ಕಾರ್ಗತ್ತಲೆಯಲ್ಲಿ, ಮಲ್ಲ ಕೊರೆದ ಕಡ್ಡಿಯೇ ಮೆಂಗಲೀಯಳಿಗೆ ತೆಜದ ಪುಂಜವಾಗಿ ಕಂಡಿತ್ತು. ಅಧಾರ ತಪ್ಪಿದ ಅವಳು ಮಲ್ಲನನ್ನು ಅಪ್ಪಿ, ಅವನ ಎದೆಯನ್ನು ತೋಯಿಸಿ ಬಿಟ್ಟಳು. ಮೆಂಗಲೀಯಳ ಪರಿಚಯವಾಗಿ ಮಲ್ಲನಿಗೆ ವರುಷವೊಂದು ಸಂದು ಹೋಗಿದ್ದರೂ, ಮಲ್ಲ ಅವಳನ್ನು ಎಂದೂ ಸ್ಪರ್ಶಿಸಿಗಲಿಲ್ಲ. ಇಂದು ಪ್ರೇಮದಿಂದ ಮೆಂಗಲೀಯಳ ತಲೆಗೂದಲನ್ನು ಸಾವರಿಸಿ, ಸಹಾನುಭೂತಿಯನ್ನು ತೋರಿದನು. ಕೈಲಾಗದ ಮೆಂಗಲೀಯಳ ಮುದುಕ ತಂದೆ, ಕಣ್ಣಿಂದಲೇ ಕೃತಜ್ಞತೆಯನ್ನು ಬೀರಿದನು.

ಮಲ್ಲನ ನೆರವಿನಿಂದಲೇ ಮೆಂಗಲೀ, ಅಣ್ಣನಿಗೆ ಮಣ್ಣು ಕೊಟ್ಟು, ಮುದುಕ ತಂದೆಯೊಡನೇ ಅಡವಿಸೇರಿ, ಮುರುಕು ಗುಡಿಸಲನ್ನು ಕಟ್ಟಿಕೊಂಡು ಇರಹತ್ತಿದಳು.

ಮುಂದೆ ಮೆಂಗಲೀ ಮತ್ತು ಮಲ್ಲನ ಸಂಸಾರ—ಅಜ್ಞಾತವಾಸದಲ್ಲಿಯೇ—ಅಡೆತಡೆಯಿಲ್ಲದೇ ಸಾಗಿತು. ಯಾವ ಪುರೋಹಿತನೂ ಬಂದು ಮಂತ್ರೋಚ್ಚಾರಣೆ ಮಾಡಿ ಮದುವೆಯ ಗಂಟನ್ನು ಬಿಗಿದಿರಲಿಲ್ಲ. ಅವರಿಬ್ಬರ ಮನ-ಮನಗಳು ಮಿಲನವಾಗಿ, ಮುರುಕು ಝೋಪಡಿಗೇ ಮನೆಯ ರೂಪ ತಂದಿತ್ತು.

ZANDU

PROTOCASEN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.

BOMBAY 14.

Sole Agents:—

M/s. Pranlal and Sons

Chemists, Druggists

Station Road. HUBLI

(H. O. Bangalore City

ಚ್ಯವನ ಪ್ರಾಶ

(ಅಷ್ಟವರ್ಗಯುಕ್ತ)

ಇದರ ಸೇವನೆಯಿಂದ :—

೧. ಬೇನೆಗಳಿಂದ ಬಂದ ದುರ್ಬಲತೆ ದೂರಾಗುವದು.

೨. ಪೋಷಕ ಆಹಾರದ ಅಭಾವದಿಂದ ಕ್ಷೀಣವಾದ ರಸ-ರಕ್ತಾದಿ ಧಾತುಗಳು ಬಲಗೊಳ್ಳುವವು.

೩. ಅತ್ಯಂತ ಮಾನಸಿಕ ಶಾರೀರಿಕ ಶ್ರಮದಿಂದುಂಟಾದ ವಿಸ್ಮರಣೆ ಮನೋದೌರ್ಬಲ್ಯ, ನಿರುತ್ಸಾಹಗಳು ಇದರ ಸೇವನೆಯಿಂದ ಕಡಿಮೆಯಾಗಿ, ಮೇಧಾ-ಶಕ್ತಿ ಉತ್ಸಾಹಗಳು ಹೆಚ್ಚಾಗುತ್ತವೆ.

೪. ದುರ್ಬಲವಾದ ರತಿಶಕ್ತಿಯನ್ನು ಸಬಲಗೊಳಿಸುತ್ತದೆ.

ದಿ ನೂತನ
ಆಯುರ್ವೇದ ಕಾರ್ಯಾಲಯ,
ಲಿ. ವಿಜಾಪೂರ.

ನಾನು ಆ ಕಂಪನಿಗೆ ವರ್ಗವಾಗಿ ಹೋದಾಗ, ನವಮಾಸ ತುಂಬಿದ ಗರ್ಭಿಣಿಯಾಗಿದ್ದಳು ಮೆಂಗಲೀ. ಮಲ್ಲ ಕನ್ನಡಿಗನಾದುದರಿಂದ, ಅವನ ಇತಿಹಾಸ ತಿಳಿಯಲು ನನಗೆ ಪೇಳೆ ಹಿಡಿಯಲಿಲ್ಲ. ಆದರೂ ಮಲ್ಲ, ತನ್ನ ಪೂರ್ವೇತಿಹಾಸ ತಿಳಿಸಲು ಹಿಂಜರಿಯುತ್ತಿದ್ದ. ನಾನು ಬಹುವಾಗಿ ಪೀಡಿಸಿದಾಗ, ತನ್ನ ಊರು " ಕುರುಬಗಟ್ಟಿ " ಎಂದು ಹೇಳಿದ್ದನು. ಬರುಬರುತ್ತ, ನಾನೂ ಎಷ್ಟೋಸಲ. ಮಲ್ಲನ ಜತೆಯಲ್ಲಿ ಮೆಂಗಲೀಯಳ ಮುರುಕುಗುಡಿಸಿಲಿಗೆ ಹೋಗಿ ಹರಟೆ ಹೊಡೆದು ಬರುತ್ತಿದ್ದೆನು. ಪರಿಚಯ ನಿಕಟವಾಗಲು ತೊಡಗಿತು. ಮೆಂಗಲೀ ನನ್ನನ್ನು " ಅಣ್ಣಾ " ಎಂದು ಕರೆಯುವುದಕ್ಕೆ ನೊದಲು ಮಾಡಿದಳು. ನಾನೂ ಅವಳನ್ನು ಒಡಹುಟ್ಟಿದ ತಂಗಿಯಂತೆಯೆ ಕಾಣಹತ್ತಿದೆ. ಇಷ್ಟು ನಿಕಟ ಪರಿಚಯವಾದ ನಂತರವೇ, ಮೆಂಗಲೀ ತನ್ನ ಜೀವನನಾಟಕದ ತೆರೆ ತೆಗೆದು, ಪೂರ್ವಾರ್ಧವನ್ನು ತೋರಿಸಿದ್ದಳು.

× × × ×

ಹೀಗೆಯೇ ಎರಡು ವರ್ಷಗಳು ಕಳೆದ ನಂತರ, ಹಿಂದೆ ಹೇಳಿದ ದಿನ ಬೆಳಗಾದದ್ದು. ಮೇಜರ್ ಸ್ಮಿಥರು ಬಂದು ನಮ್ಮನ್ನೆಲ್ಲ ಎಚ್ಚರಿಸಿದ್ದರು : " ದೀಪ ಅರುವ ಮೊದಲು ಭಯಾನಕ ರೂಪ ತಾಳುತ್ತದೆ. " ಆ ಶಬ್ದ ಎಲ್ಲರನ್ನೂ ನಡುಗಿಸಿ ಬಿಟ್ಟಿತ್ತು. ಎಲ್ಲ ಪ್ಲಾಟೂನ್ ಹವಾಲ್ದಾರರು, ತಮ್ಮ ತಮ್ಮ ತಂಬುಗಳ ಕಡೆಗೆ ನಡೆದು, ತಮ್ಮ ಕಾರ್ಯದಲ್ಲಿ ತೊಡಗಿದರು. ಮಲ್ಲ ನನ್ನ ಜತೆಯಲ್ಲೆ ನನ್ನ ತಂಬೂಕ್ಕೆ ಬಂದುಬಿಟ್ಟನು. ನಮ್ಮ ಪ್ಲಾಟೂನ್ ಸೈನಿಕರಿಗೆ ತಿಳಿಸುವುದನ್ನೆಲ್ಲ ತಿಳಿಸಿ, ಇಬ್ಬರೂ ಇಳಿದ್ವನಿಯಲ್ಲಿಯೇ ಹರಟೆ ಜೊಡೆಯುತ್ತ ಕುಳಿತೆವು ಆದರೆ ಮಲ್ಲನ ಮನಸ್ಸು ಮಾತ್ರ ಮೆಂಗಲೀಯಳ ಕಡೆಗೆ ಸುಳಿಯುತಲಿತ್ತು. ದಿನಕ್ಕೊಂದು ಸಲವಾದರೂ ಅವಳನ್ನು ಕಂಡು ಬರುತ್ತಿದ್ದ ಅವನಿಗೆ, ಆಂದು ಬಿಡುವೆ ಸಿಕ್ಕಿರಲಿಲ್ಲ. ಆದರೂ ನಾನು ಅವನ ಹತ್ತಿರ ಸಂತಯಿಸುವುದಕ್ಕೆ ಇದ್ದುದರಿಂದಲೇ, ಅವನು ಕೊಂಚ ತಾಳ್ಮೆಯನ್ನು ತಂದುಕೊಂಡಿದ್ದ. ಹಾಗಾಗುವುದು ಸ್ವಾಭಾವಿಕವಾಗಿತ್ತು. ಮನೆಯಲ್ಲಿ ಮೆಂಗಲೀಯ ಒಬ್ಬಳೇ ಇರಲಿಲ್ಲ,—ಅವಳ ಮಗ್ಗುಲಲ್ಲಿ ಮಗುವೊಂದಿತ್ತು.

ಹೀಗೆ ಹರಟೆ ಸಾಗಿಸಿ-ಒಳಗೊಳಗೆ ಚಿಂತೆ ಭಯಗಳು ಕುದಿಯುತ್ತಿದ್ದರೂ-ನಾವಿಬ್ಬರೂ ಹಾಸ್ಯವನ್ನು ತೋರಲು ಯತ್ನಿಸುತ್ತಿರುವಾಗಲೇ, ನಮ್ಮ ಬಟಾಲಿಯನ್ನಿನ ಗೇಟಿನ ತುದಿಯಲ್ಲಿ, ಎದೆ ನಡುಗಿಸಿಬಿಡುವಂತಹ ಗುಂಡಿನ ಸಪ್ಪಳ ನಮ್ಮನ್ನೆಚ್ಚರಿಸಿತು.

" ದೀಪ ಅರುವಾಗ ಭಯಾನಕರೂಪ ತಾಳುತ್ತದೆ ! " ಎಂಬ ಸ್ಮಿಥನ ವಾಕ್ಯ ನನಗೆ ಜ್ಞಾಪಕವಾಯಿತು. ಎದೆ ಝಲ್ಲೆಂದಿತು. ಹೆಗಲಿಗಿದ್ದ ಟಾಮೀಗನ್ನನ್ನು ಕೈಯಲ್ಲಿರಿಸಿಕೊಂಡು, ನಾವಿಬ್ಬರೂ ಗೇಟಿನತ್ತ ಧಾವಿಸಿದೆವು. ಒಂದೇ ಉಸಿರಿಗೆ ಪ್ಲಾಟೂನುಗಳೆಲ್ಲ ಮಾರ್ಚ್ ಆಗಿ, ತಗ್ಗು-ದಿನ್ನೆಗಳಲ್ಲಿ ಭದ್ರ ಸ್ಥಳ ಪರಿಪಡಿಸಿಕೊಂಡು, ಸಮರಕ್ಕೆ ಸಜ್ಜಾದರು. ನಾನು ಮಲ್ಲ ಇಬ್ಬರೂ ಗೇಟನ್ನು ಮುಟ್ಟಿದಾಗ, ಕತ್ತಲೆಯಲ್ಲಿಯೇ ಗಸ್ತಿಯವನು ನಡೆದ ಸಂಗತಿ ಸ್ವಲ್ಪದರಲ್ಲಿಯೇ ವಿವರಿಸಿದನು:

"ಕೋಯೀ ಪರಾಯಾ ಆದಮೀ ಅಂದರ್ ಘುಸನಾ ಚಾಹತಾ ಥಾ. ಕೋಡ್ ವರ್ಡ್ ಪೂಛಾ, ತೋ ಜವಾಬ್ ನಹಿ ದಿಯಾ. ಹಮನೇ ಉಸ್ ಪರ್ ಗೋಲೀ ಚಲಾಯಾ !" ಇದನ್ನು ಕೇಳಿದ ನಾವಿಬ್ಬರೂ, ಗುಂಡಿಗೆ ಎದೆಗೊಟ್ಟು ನೆಲಕ್ಕುರುಳಿ ನರಳುವವನ ಕಡೆಗೆ ಹೊರಳಿದೆವು. ಬ್ಯಾಟ್ರಿಯ ಬೆಳಕಿನಲ್ಲಿ ತಿಳಿಯಿತು: ಬಿದ್ದವನು ಶತ್ರುವಿರಲಿಲ್ಲ, ಮೆಂಗಲೀಯಳ ಮುದುಕ ತಂದೆ. ಅದನ್ನು ಕಂಡ ಮಲ್ಲ ನೆಲಕ್ಕೆ ಕುಸಿದುಬಿಟ್ಟನು. ಮುದುಕ ತಡೆ-ತಡೆದು ಏನನ್ನೋ ಉಸುರುತ್ತಲಿದ್ದ. ಅವನೆಲ್ಲ ಮಾತುಗಳನ್ನೂ ನಾನೊಬ್ಬನೇ ಗ್ರಹಿಸುತಲಿದ್ದೆನು.

"ಜಪಾನಿಗಳಿಗೆ ನಮ್ಮ ಗುಪ್ತಸ್ಥಾನದ ಅರಿವಾಗಿತ್ತು. ಅವರು ಬಹುಸಂಖ್ಯಾಕರಾಗಿ ನಮ್ಮ ಮೇಲೆ ಧಾವಿಸಿ ಬರುವವರಿದ್ದಾರೆ." ಇಷ್ಟನ್ನು ಆ ಮುದುಕನ ಮಾತಿನಿಂದ, ಅತಿ ಪ್ರಯಾಸದಿಂದಲೆ ತಿಳಿದುಕೊಂಡೆನು. ಮತ್ತೇನನ್ನೋ ಕಣ್ಸನ್ನೆಯಿಂದ ಹೇಳುತ್ತಿದ್ದ. " ನಿಮ್ಮಿಬ್ಬರನ್ನೂ ಉಳಿಸುವುದಕ್ಕೆ ನಾನಿಲ್ಲಿ ಓಡಿ ಬಂದದ್ದು ! " ಎಂದು ನೀರು ತುಂಬಿದ ಅವನ ಕಣ್ಣುಗಳು ಸಾರುತ್ತಿದ್ದುವು.

ಮುದುಕನಿಗೆ ಬಹುವೇಳೆ ಸಿಕ್ಕಲಿಲ್ಲ. ನಿಮಿಷಾರ್ಧವೂ ಹಿಡಿಯಲಿಲ್ಲ– ಅವನ ಪ್ರಾಣಪಕ್ಷಿ ದಿಗಂತ ಭೇದಿಸಿ ಹಾರಿ ನಡೆಯಿತು.

ಶತ್ರುಗಳ ಬರುವಿನ ಪೂರ್ವಸೂಚನೆ ಸಿಕ್ಕದ್ದರಿಂದ, ಸಜ್ಜಾದ ಸೈನ್ಯದ ಪಡೆಗಳನ್ನು, ಮೇಜರ್ ಸ್ಮಿಥ್‌ನ ಅಪ್ಪಣೆಯೊಂದಿಗೆ ಮುನ್ನಡೆಯಿಸಿದೆವು.

* * * *

ಮರುದಿನ ಮಹಾಯುದ್ಧದ ಮುಕ್ತಾಯವಾಯಿತು. ಜಪಾನಿಗಳು ಸಂಪೂರ್ಣ ಶರಣಾಗತರಾದರು. ಬಟಾಲಿಯನ್ನಿನಲ್ಲಿಯ ಎಲ್ಲರೂ ಬಂಟರೆನಿಸಿಕೊಂಡರು ನನಗೂ ಮಲ್ಲನಿಗೂ—ನಮ್ಮಿಬ್ಬರ ಧೀರತನಕ್ಕಾಗಿ—ಪದವಿಗಳು ದೊರಕಿದುವು.

* * * *

ಮಲ್ಲ ಈಗ ಮೆಂಗಲೀಯಳನ್ನು ಗುಡಿಸಿಲನ್ನು ಬಿಡಿಸಿ ಹೊರಟಂದು, ವರಿಷ್ಠರ ಅಪ್ಪಣೆ ತೆಗೆದುಕೊಂಡು, ರಜಿಸ್ಟರ್ ಮದುವೆ ಮಾಡಿಕೊಂಡ; ಊರಲ್ಲಿ ಮನೆಯೊಂದನ್ನು ಹಿಡಿದ. ಮೆಂಗಲೀಯಳ ಅಜ್ಞಾತವಾಸ ಮುಗಿದು,ಮತ್ತೆ ಸುಖದ ದಿನಗಳು ಉದಯಿಸಿದುವು. ಆದರೂ ತಂದೆಯ ಮರಣದ ದುಃಖವನ್ನು ಮರೆಯಲು ಅವಳಿಗೆ ಮೂರು ಮಾಸಗಳು ಬೇಕಾದುವು. ಮಗು–ಮೆಂಗಲೀಯಳೊಂದಿಗೆ ಮನೆ ಮಹಲಿನಂತೆ ಕಾಣುತ್ತಿತ್ತು.

* * * *

ಅಂದು ನಮ್ಮ ಬಟಾಲಿಯನಿನ ಸೈನಿಕರಿಗೆಲ್ಲರಿಗೂ ಸಂತಸದ ಸುದ್ದಿಯೊಂದು ಬಂದಿತು: ಮರುದಿನ ನಮ್ಮ ಬಟಾಲಿಯನ್ ಸ್ವದೇಶಕ್ಕೆ ಮರುಳುವುದಿತ್ತು. ಎಲ್ಲರ ಮುಖವಲ್ಲಿ ಸಂತೋಷದ ಜಿಹ್ನೆ ನರ್ತನವಾಡುತ್ತಲಿತ್ತು. ಕೆಲವರಿಗೆ ತಮ್ಮ ತಾಯಿ-ತಂದೆಗಳನ್ನು ಕಾಣದೆ ವರುಷಗಳೆಷ್ಟೋ ಸಂದು ಹೋಗಿದ್ದುವು. ಕೆಲವರಿಗೆ ತಮ್ಮ ಪ್ರಿಯರ ದರುಶನವಿಲ್ಲದೆ ಯುಗ-ಯುಗಗಳು ಕಳೆದಂತೆ ಭಾಸವಾಗಿತ್ತು. ಕೆಲವರಿಗೆ ತಮ್ಮ ಚಿಕ್ಕ ಮಕ್ಕಳನ್ನು ಕಾಣಬೇಕೆಂಬ ಹಂಬಲು. ಆದರೆ ಮಲ್ಲನ ಬಗ್ಗೆ ಮಾತ್ರ ವಿಚಿತ್ರ ಸುದ್ದಿ ಹರಡಿತು. ಹರಡಿದ್ದೇನು? ನೂರಕ್ಕೆ ನೂರು ನಿಜವಾಗಿತ್ತು.

"ಅವನಿಚ್ಛೆಯ ಪ್ರಕಾರ, ಅವನನ್ನು ಸೈನ್ಯಾತೆಯಿಂದ ಬಿಡುಗಡೆ ಮಾಡಿ, ಮಲಯದಲ್ಲಿಯೇ ವಾಸಿಸಲು ಅಪ್ಪಣೆ ಕೊಟ್ಟಿದೆ" ಎಂದು ಹೆಡ್ ಕ್ವಾರ್ಟರಿನಿಂದ ತಂತಿ ಬಂದಿತ್ತು.

ನನಗಾಶ್ಚರ್ಯವಾಯಿತು. ಮಲ್ಲ ಮಾತೃಭೂಮಿಯನ್ನು ಮರೆತುಬಿಟ್ಟನೇ? ತನ್ನ ತಾಯಿ, ತಂದೆ, ಬಂಧು, ಬಳಗ ಎಲ್ಲವನ್ನೂ ಬಿಟ್ಟನೇ?

ಮೆಂಗಲೀಯಳ ಸಲುವಾಗಿ ಈ ಎಲ್ಲ ತ್ಯಾಗವೇ? ಸಮಯ ನೋಡಿ ಮಲ್ಲನ ಮುಂದೆ ಈ ಬಗ್ಗೆ ಮಾತನ್ನೂ ಎತ್ತಿದೆ. ಆದರೂ ಪ್ರಯೋಜನವಾಗಲಿಲ್ಲ, ಮನದೊಳಗೇ ಮಲ್ಲನನ್ನು "ದೇಶದ್ರೋಹಿ" ಎಂದು ಕರೆದು ಬಿಟ್ಟೆ. ಮುಂದೆ ನಮ್ಮಿಬ್ಬರಲ್ಲಿ ಹೆಚ್ಚು ಮಾತು-ಕತೆಗಳಾಗಲಿಲ್ಲ. ಅವನ ಮುಖದಲ್ಲಿ ಮಾತ್ರ ನಿರುತ್ಸಾಹದ ಕಳೆ ಮೂಡಿತ್ತು. ತನ್ನ ಮಿತ್ರ ತನ್ನಿಂದ ದೂರವಾಗುವನಲ್ಲಾ– ಎಂದು.

* * * *

ಮರುದಿನ ನಾವೆಲ್ಲರೂ ಪೋರ್ಟ್ ಸ್ವೆಟನ್ ಹ್ಯಾಮ್ ಬಂದರದಲ್ಲಿ ಹಡಗಿನ ಬಳಿ ನಡೆದೆವು. ನನ್ನನ್ನು ಬೀಳ್ಕೊಡಲು ಮಲ್ಲ, ಮೆಂಗಲೀ, ಮಗುವಿನೊಂದಿಗೆ ಬಂದಿದ್ದರು.

ಮೆಂಗಲೀ—ಸದ್ಗದಿತಳಾಗಿಯೇ ಕೇಳಿದಳು:

"ಅಣ್ಣಾ ಇನ್ನೆಂದು ನಿನ್ನ ಭೆಟ್ಟಿ?"

ಅವಳ ಕಂಕುಳದಲ್ಲಿದ್ದ ಮಗುವನ್ನೊಮ್ಮೆ ಎತ್ತಿ ಅಪ್ಪಿ ಮುದ್ದಿಸಿದೆ. ಕಿಸೆಯೊಳಗಿಂದ ನನ್ನ ಭಾವಚಿತ್ರವೊಂದನ್ನು ತೆಗೆದು, ಅವಳ ಕೈಗಿರಿಸುತ್ತ ಹೇಳಿದೆ:

"ನಿನ್ನ ಅಣ್ಣ ಸದಾವ ಕಾಲ ನಿನ್ನ ಮನೆಯಲ್ಲಿ!" ಪ್ರತಿಯಾಗಿ ಅವಳೂ ಒಂದೂ ಭಾವಚಿತ್ರವನ್ನು ನನ್ನ ಕೈಗಿರಿಸಿದಳು ಅದರಲ್ಲಿ ಮೂರು ಮೂರ್ತಿಗಳು ತಾನೇ ತಾನಾಗಿ ಮೂಡಿದ್ದುವು: ಮಲ್ಲ, ಮೆಂಗಲೀ, ಮಗು.

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ಮೇಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)—ಈ ಔಷಧ ಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವಅವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು:

ಮೆಸರ್ಸ್: ಮಿರ್ಜಾನಕರ ಮತ್ತು ಕಂಪನಿ

ಒಮ್ಮೆ ಭಾವಚಿತ್ರದ ಕಡೆಗೆ ನೋಡಿ ಮಲ್ಲನತ್ತ ದೃಷ್ಟಿ ಹೊರಳಿಸಿದೆನು. ಕ್ಷಮೆ ಕೋರುವ ಅಪರಾಧಿಯಂತೆ ನನ್ನ ಕಡೆಗೇ ನೋಡುತ್ತಲಿದ್ದ. ಇಬ್ಬರೂ ಬಿಗಿದಪ್ಪಿದೆವು. ಮೂವರ ಕಣ್ಣಲ್ಲಿ ನೀರು ಧಾರೆಯಾಗಿ ಹರಿಯಿತು. ಮಗು ಮಾತ್ರ ನಕ್ಕು ನಲಿಯುತ್ತಿತ್ತು. "ಜೀವನವೂ ಒಂದು ಪ್ರವಾಸ!" ಆ ಎಳೆಯ ಮಗುವಿನ ನಗೆಯಲ್ಲಿ ಈ ಅರ್ಥ ಮೂಡಿತ್ತೆನೋ!

ಗಂಟೆಯಾದೊಡನೆ ಹಡಗವನ್ನೇರಿದೆ; ಮಲಯದ ದಂಡೆಯನ್ನು ಬಿಟ್ಟು ನಡೆದೆವು. ಕಣ್ಣು ಮರೆಯಾಗುವವರೆಗೂ ನಮ್ಮ ಮೂವರ ಕಣ್ಣುಗಳೂ ಒಂದಾಗಿದ್ದುವು.

* * * *

ಜಬ್ಬಲ್‌ಪೂರದಿಂದ ನಾನು ಮನೆಯತ್ತ ನಡೆದಿದ್ದೆನು. ಮೂರು ತಿಂಗಳ ರಜೆ ಸಿಕ್ಕಿತ್ತು. ಮನೆಯ ಮಂದಿಯನ್ನು ಕಾಣುವ ಕುತೂಹಲ ಕೆರಳುತ್ತಿತ್ತು. ಮೂರುವರೆ ವರ್ಷಗಳ ದೀರ್ಘ ಅವಧಿಯ ನಂತರ ಮನೆಯತ್ತ ಹೊರಟಿದ್ದೆ. ಪುಣೆ ಸ್ಟೇಶನನ್ನು ಮುಟ್ಟಿ ಧಾರವಾಡದ ಗಾಡಿಯನ್ನೇರಿದೆನು. ಗಾಡಿ ಕಿಕ್ಕಿರಿದು ತುಂಬಿ ಹೋಗಿತ್ತು. ನಮಗೆ ಮಾತ್ರ ತೊಂದರೆ ಇರಲಿಲ್ಲ. ನನಗಾಗಿ ಸ್ಪೆಶಲ್ ಮಿಲಿಟರೀ ಡಬ್ಬಿಯೊಂದಿತ್ತು. ಮೂವತ್ತು ಜನ ಕುಳಿತುಕೊಳ್ಳುವ ಡಬ್ಬಿಯಲ್ಲಿ ನಾವು ಬರೀ ಹತ್ತು ಜನರು ಹಾಸಿಗೆ ಉರುಳಿಸಿ ಕುಳಿತಿದ್ದೆವು. ಎಷ್ಟೋ ಜನರು ಸ್ಥಳದ ಸಲುವಾಗಿ ನಮ್ಮನ್ನು ದೈನ್ಯದಿಂದ ಕೇಳಿ, ನಿರಾಶರಾಗಿ ತೆರಳುತ್ತಿದ್ದರು. ಎಲ್ಲರನ್ನೂ ಬೆದರಿಸಿ ಕಳುಹಿಸಿ ಬಿಡುತ್ತಿದ್ದೆವು. ಗಾಡಿ ಬಿಡಲು ಬರೀ ಅರ್ಧ ನಿಮಿಷ ಮಾತ್ರ ಉಳಿದಿತ್ತು. ಒಬ್ಬ ಮುದುಕ ಬಂದು "ಯಪ್ಪಾ ಬಡವ ಮುದಕರೀ! ತೆಳಗಽ ಕೂಡತೇನ್ರಿ, ನಿಮ್ಮ ಕಾಲು ಬೀಳತೇನ್ರಿ! ಆsಟ ಜಾಗಾ ಕೊಡ್ರಿ ಯಪ್ಪಾ!" ಎಂದು ಕನ್ನಡದಲ್ಲಿ—ದೈನ್ಯವಾಗಿ ಪ್ರಾರ್ಥಿಸ ತೊಡಗಿದನು. ಬಾಗಿಲ ಬಳಿಯೇ ಬೆಚ್ಚಗೆ ಪವಡಿಸಿದ ಸೈನಿಕನೊಬ್ಬ, ಅವನನ್ನು ಗದರಿಸಿ ಬಿಟ್ಟನು. ಮುದುಕ ನಿಂತಲ್ಲಿಯೇ ಕುಳಿತು ಬಿಟ್ಟನು. ಗಾಡಿ ಹೊರಡುವ ಗಂಟೆಯಾಯಿತು. ನನಗೇಕೋ ತಡೆಯದಾಯಿತು. ಬಾಗಿಲನ್ನು ತೆರೆದವನೇ ಮುದುಕನನ್ನು ಒಳಗೆಳೆದು ಕೊಂಡೆನು. ಮುದುಕನಿಗೆ ಹಿಡಿಸದಷ್ಟು ಆನಂದವಾಗಿತ್ತು. ಅವನನ್ನು ನನ್ನ ಹಾಸಿಗೆಯ ಪಕ್ಕದಲ್ಲಿಯೇ ಕುಳ್ಳಿರಿಸಿಕೊಂಡೆ. ಪ್ರವಾಸವೆಂದರೆ ಕೇಳುವಿರಾ! ಸ್ವಂತ ಮನೆಯವರಂತೆ ಮಾತು-ಕತೆಗಳು ನಡೆಯುತ್ತವೆ. ಹಾಗೇ ಆಯಿತು ನನ್ನದೂ ಮುದುಕನ ಜತೆಯಲ್ಲಿ. ನಮ್ಮಿಬ್ಬರಲ್ಲಿ ಹರಟೆಗೆ ಮೊದಲಾಯಿತು. ನಾನೇ ಮಾತಿಗೆ ಮೊದಲುಮಾಡಿದೆ. :

"ನಿನ್ನ ಹೇಸರೇನಪಾ?"

"ಸಂಗಪ್ಪರಿ!"

"ಕೆಲ್ಸಾ ಏನು ಮಾಡ್ತೀಯೋ?"

"ಏನರೀಽ ಯಪಾ, ನಿಮ್ಹಾಂಗ ಓದು ಬರಾ ಕಲಿತೆವರ್ರೆ ನಾವು!"

"ಕಲೀದಿದ್ದರ ಏನಾತೋ? ಕೆಲ್ಸಾನಾರೂ ಮಾಡ್ತೀಯಿಲ್ಲೊ?"

"ಹೂಂನರಿ ಯಪ್ಪಾ! ಹೊಟ್ಟ ಒಂದ ಐತಲ್ರಿ ಯಪ್ಪಾ! ನಮ್ಮೂರ ಸಾವಕಾರ್ರ ಮನೀ ಒಳಗ, ಜೀತದಾಳಾಗಿ ಇದ್ದಿನ್ರಿ ಯಪ್ಪಾ!"

"ಪುಣೇಕ್ಕ ಯಾಕ ಬಂದಿದ್ದಿ? ಸಾವಕಾರ ಜೋಡೀ ಏನು?"

"ನಮ್ಮ ಸಾವಕಾರ್ರು ಸತ್ತು ಸುಮಾರsಟ ದಿನಾ ಆತು ಯಪ್ಪಾ! ಅವ್ವನಾsರ ಜೋಡಿ ಬಂದೀನರಿ!"

"ಊರ ಯಾವುದೋ?"

"ಧಾರವಾಡದ ಹಂತೀಲೀ— ಕುರುಬಗಟ್ಟ್ರಿ!"

'ಕುರುಬಗಟ್ಟ' ಎಂದಾಕ್ಷಣವೇ ನನ್ನ ಕಿವಿ ನಿಮಿರಿದುವು. ನನ್ನ ಮಿತ್ರ ಮಲ್ಲನ ಊರದು. ನಾನೇ ಮುದುಕನನ್ನು ವಿಚಾರಿಸಿದೆ:

"ಕುರುಬಗಟ್ಟಿಯೊಳಗ ಮಲ್ಲರಾಜನ ಗುರ್ತ ಐತೇನೋ?"

"ಮಲ್ಲರಾಜ ಯಾರ್ರಿ?"

ಜೇಬಿನೊಳಗಿಂದ ಭಾವಚಿತ್ರ ತೆಗೆದು, ಮಗು ಮತ್ತು ಮೊಂಗಲೀಯಳ ಚಿತ್ರವನ್ನಷ್ಟು ಮರೆಮಾಡಿ, ಮುದುಕನಿಗೆ ತೋರಿಸಿದೆನು. ಮುದುಕನ ಮುಖದಲ್ಲಿ ಆನಂದದ ಸೆಳೆಮಿಂಚು ಮೂಡಿತು. ಒಮ್ಮೆಲೆ ಬಾಯಿ ತೆರೆದ:

"ಓ, 'ಕುಸ್ತೀಗಡೀ ಮಲ್ಲಪ್ಪರಿ!" ಮತ್ತೆ ಅವನೇ ನನ್ನನ್ನು ಕೇಳಿದನು: "ಮಲ್ಲ ಆದಾನ್ರೀಯಪಾ? ಒಳೇ ಸಂಪನ್ನ ಮನಸ್ಯಾರಿ ಕಾಡೂ ಕಾಲರಿ. ಕೆರೀ—ಭಾಂವಿ ಬಿದ್ದು ಹಾಳಾಗಿ ಹೊದಾ ಅಂತ ತಿಳಿದೀನ್ರಿ!"

ಮುದುಕನನ್ನು ಮತ್ತೆ ವಿಚಾರಿಸಿದೆ:

"ಅವರ ತಾಯಿ-ತಂದಿ ಎಲ್ಲಾರೂ ಊರಾಗ ಇದ್ದಾರೇನೋ?"

"ಯಪಾ, ಅದೊಂದು ದೊಡ್ಡ ಕತೀನರಿ ಯಪ್ಪಾ! ಸಾವಕಾರತಿ ಮಾತು ಕೇಳಿಕೊಂತss ದಿನಾ ಕಳಿದಿದ್ದರ, ಅಂವನss ನಮ್ಮ ಯಜಮಾನ ಆಗ್ತಿದ್ದನಗೀ ಯಪಾ! ಆದರೇನರಿ, ಕೀರೇದಿಂದ ನಡೆಯೊವ್ರು, ಸುಳ್ಳಿನ ರಾಜ್ಯೇದ ಸುಕಕ್ಕ ಮೋಸ ಹೋಗೂದಿಲ್ಲರೀ" ಎಂದು ನಿಟ್ಟುಸಿರು ಬಿಟ್ಟು, ಕಿಸೆಯೊಳಗಿಂದ ಚಿಲಿಮಿ ತೆಗೆದು ಹೊತ್ತಿಸಿದನು. ನನಗೇನೋ 'ಅದ್ಭುತರಮ್ಯ ಪತ್ತೇದಾರಿ ಕತೆಯನ್ನು ಓದುತ್ತಿರುವಂತೆ ಭಾಸವಾಯಿತು. ನಾನು ಮತ್ತೆ ಮುದುಕನನ್ನು ನಡೆದ ಕತೆ ಹೇಳಲು ಒತ್ತಾಯ ಪಡಿಸಿದೆ. ಮುದುಕ ಮತ್ತೆ ಹೇಳತೊಡಗಿದನು:

"ಯಪಾss. ಈಗ ಹೇಳಿದಿನಲ್ರೀ....ನಮ್ಮ ಸಾವಕಾರ್ತೀ ಅಂತ ಈ ಅವ್ವನಾರು ನಮ್ಮ ಸಾವಕಾರರ ಮೂರನೇ ಹೆಂಡ್ತಿರಿ. ಮೊದಲಿನ ಇಬ್ಬರೂ ಹೆಂಡರು ಮಕ್ಕಳನ್ನು ಹಡೀದೇ ನಡದ ಬಿಟ್ರು. ಮೂರನೆಯಾಕಿನ್ನ ಮದುವಿಯಾಗಿ, ಒಂದು ವರ್ಸ ಆಗಿರಲಿಲ್ರಿ; ಸಾವಕಾರರು ಮನೀ-ಮಠಾ ಎಲ್ಲಾ ಬಿಟ್ಟಗೊಟ್ಟು

ನಡದು ಬಿಟ್ಟರ್ರಿ! ಪಾಪರಿ, ಆಗ ಮೂರನೇ ಹೆಂಡ್ತಿ, ಇನ್ನೂ ಹುಡಿಗಿ; ಬುದ್ಧಿನೂ ಆಟಬಲಿತಿದ್ದಿಲ್ರಿ. ಮನ್ಯಾಗ ಹನ್ನೆರಡೆತ್ತಿನ ಕಮತ! ದೊಡ್ಡ ಆಸ್ತಿರಿ! ಊರ ಹಿರೇರು ಬಂದು 'ದತ್ತಕ ತಗೋ ಅವ್ವಾ' ಅಂತ ಉಪದೇಸಾ ಮಾಡಿದರ್ರಿ. ಈ ಹೆಣ್ತಿಗೆ ತವರು ಮನಿಯವರು ಯಾರೂ ಇದ್ದಿದ್ದಿಲ್ಲರಿ. ಮುಂದ ಮೂರು ತಿಂಗಳದಾಗ ಮಲ್ಲರಿ—ಮಲ್ಲಗ ತಾಯಿ ತಂದಿ? ಎನೂ ಕೇಳಬ್ಯಾಡರೀ ದಿಕ್ಕೇಡಿ ಹುಡುಗ ಅಂತ, ಊರ ಮಂದೀನs ಕೂಳ ಕೊಡತಿದ್ದ್ರು. ಸಗತೀಗಡ್ಡಿ-ತಾಲೀಮು ಮಾಡೋದು. ಮಂದೀ ಮನೀ ಕೂಳ ತಿನ್ನೋದರಿ! ಹುಡುಗ ಹ್ಯಾಂಗ ಆಗಿದ್ದನಂತ ಹೇಳ್ರಿ ಯಪ್ಪಾ, ಕಾಮಣ್ಣ ಝುಕ್ಕೆಸಿದರಿ ಅವನ ಮುಂದ. ನಮ್ಮ ಸಾವಕಾರ್ತಿ, ಮಲ್ಲನ್ನ ದತ್ತಕ ತಕ್ಕೊಂಡ್ರು. ಮಲ್ಲ್ಯಾರಿ, ಅವ್ವನಾಕರಿಗಿಂತ ಎರಡು ವರ್ಸದಲೆ ಕಿರಿಯಾಂವ್ರಿ! ಮಲ್ಲ್ಯಾಗ ಏನರಿ. ಮಾಲಚ್ಚಿ ಸುನೀತನಕಾ ನಡಕೋತ್ಸ ಬಂದಾಂಗಾತರಿ. ಆದರ ಏನರಿ, ಮುಂದಿನ ಹಕೀಕತ ನಾವು ಹೇಳಬಾರದ್ರಿ!" ಎಂದು ನಿಟ್ಟುಸಿರು ಬಿಟ್ಟು ಮುದುಕ, ಸ್ತಬ್ಧನಾಗಿ ಬಿಟ್ಟನು.

ನಾದಮಾಧುರ್ಯದಲ್ಲಿ ಸರ್ಪವನ್ನು ಮಬ್ಬಾಗಿರಿಸಿ, ಒಮ್ಮೆಲೇ ಪುಂಗಿಯನ್ನು ಬಾರಿಸುವುದನ್ನು ನಿಲ್ಲಿಸಿದಂತಾಯಿತು. ಮುದುಕನನ್ನು ಮತ್ತೆ ಮತ್ತೆ ಒತ್ತಾಯ ಪಡಿಸಿದೆ. ಗತಿಗಾಣದ ಮುದುಕ ನೆಲ್ಲನೆ ಉಸುರ ಹತ್ತಿದನು: "ಯಪ್ಪಾ, ಒಂದ್ಮಾತರಿ! ಕಿರೇ ಮಾಡಿ ಹೇಳ್ರಿ. ಮತ್ತ ಯಾರ ಮುಂದೂ ಈ ಮಾತು ತಗೀ ಬಾರದ್ರಿ!"

"ಹೂಂ" ಎಂದು ಸಂತಯಿಸಿದೆ.

ಮುದುಕ ಮತ್ತೆ ಪ್ರಾರಂಭ ಮಾಡಿದ:

"ಮಲ್ಲ ಮನೀಗೆ ಬಂದ ಮೊದಲ ದಿವ್ಸರೀ....ಸಜ್ಜಾಗಿ ಊಟ ಆಗಿತ್ತರಿ. ಎಂದೂ ಪಲ್ಲಂಗ ಕಂಡಿದ್ದಿಲ್ಲರಿ. ಎಚ್ಚರದಪ್ಸಿದವ ನ್ಹಾಂಗ ತನ್ನ ಕೋಣ್ಯಾಗ ಬಿದ್ದು ಬಿಟ್ಟನರಿ. ನಾನು ದನಗಳಿಗೆ ಮೇವು ಹೊಟ್ಟು ಹಾಕಿ, ಚಾವಣ್ಯಾಗs ಬಂದು ಅಡ್ಡಾದಿಸ್ರಿ. ಸಾವಕಾರ ಮನೀ ಜೀತದಾಳೂ ಅಂದಮ್ಯಾಗ, ರಾತ್ರೀ ಲಗೂನs ನನಗ ಕಣ್ಣs ಹತ್ತಿದ್ದಿಲ್ಲರಿ! ಹಂಗs ಬಿದ್ದುಕೊಂಡಾಗ, ಸಾವಕಾರ್ತೀ ಧನೀ ಕೆಳಿಸ್ತಿರಿ. ಕೋಣ್ಯಾಗ ಮಲ್ಲನ್ನ ಎಬ್ಬಿಸಿದ್ದರು. ಮುಂದೇನೇನೊ ಮಾತು ಅದೂವರಿ. ನನಗೂ ಜೆಲೊತ್ನಾಗ್ಯಂಗ ಕೇಳಿಸತಿದ್ದಿಲ್ಲರಿ! ನಡುನಡವ ಮಲ್ಲ ಅಂತಿದ್ನ್ರಿ! "ಯವ್ವಾ, ನಿಮ್ಮ ಕಾಲ ಬೀಳತೀನ್ರಿ! ಇಂಥಾ ಕೆಲ್ಸಾ ನನ್ನ ಕೈಯಿಂದ ಮಾಡಸಬ್ಯಾಡ್ರಿ!" ಅವ್ವಾವರೂ ಸಿಟ್ಟಿನಿಂದ ಹೇಳತಿದ್ರು: "ಹಾದೀಲೆ ಹೋಗೂ ಭೀಕಾರಿ, ನಿನ್ನ ಈ ಆಸ್ತಿಗೆ ಹಿರಿಯನ್ನ ಮಾಡಿದ್ರ, ನನ್ನ ಕೆಲಸ ನಿನ್ನಿಂದ ಆಗೂದಿಲ್ಲ? ಜೆಂದಕ್ಕ ನಿನ್ನ ಈ ಮನಿಯೊಳಗ ಕರಕೊಂಡಿಲ್ಲ!" ಸ್ವಲ್ಪಹೊತ್ತು ಹೀಂಗs ಮಾತು ನಡೆದಾಗs, ಅವ್ವಾವರು ಹೊಯ್ಕೊಳ್ಳಾಕ ಹತ್ತಿದರ್ರಿ. ಮೂರು ಮಿನೀಟನ್ಯಾಗ ಊರ ಮಂದಿ ಮನೀ ಮುಂದ ಕೂಡ್ತಿರಿ. ಅವ್ವಾ ಅವರು ಅಳಕೊಂತs ಎಲ್ಲಾ ಮುಂದೂ ಹೇಳಾಕ ಹತ್ತಿದರ್ರಿ: "ಮಗಾ ಅಂತ ಮನೀ ಒಳಗ ಕರಕೊಂಡ್ರ, ನನ್ನ ಮಾನಾ ಕಳೆಯಾಕ ಬಂದೈತಿ ಜೀಬರ್ಸಿ!" ಅಂತ. ಇದನ್ನು ಕೇಳಿದ ಊರ ಜನಾ ಮಲ್ಲನ ಮಾರೀ ಮ್ಯಾಗ ಉಗಳಾಕ ಹತ್ತಿದರ್ರಿ. ಮಲ್ಲ ಸುಮಾಕs ತೆಳಗ ಮಾರೀ ಮಾಡಿಕೊಂಡು ನಿಂತಿದ್ದರಿ. ನನಗ ಆದದ್ದೆಲ್ಲಾ ಗೊತ್ತಿತ್ತರಿ—ಮಲ್ಲಂದೇನೂs ದೋಸ ಇಲ್ಲಂತ. ಆದರ ನಾ, ಜೀತದಾಳು! ನಮಗ್ಯಾಕರಿ ದೊಡ್ಡವರ ಮನೀ ಮಾತು. ಅಟರ ಮ್ಯಾಗ, ಅವರವರ ಪಾಪ ಅವರವರಿಗೆ" ಎಂದು ಚಿಟಿಕೆ ಬಾರಿಸುತ್ತ ಮುದುಕ ಕಣ್ಮುಚ್ಚಿ, ಒರಗಿ ನಿದ್ರೆ ಹೋಗುವ ಹಪಣಿಕೆಯಲ್ಲಿಯೇ ಮುಂದಿನ ಮಾತು ಉಸುರಿದನು: "ಮುಂದಿಗೆ ಮಾರೀ ತೋರಸ್ದಾಂಗ ಆತರಿ. ಪಾಪ, ಮಲ್ಲ ಊರು ಬಿಟ್ಟು ಹೋದಾಂವ ಇನ್ನೂ ತನಕ ಪತ್ತೆನs ಇಲ್ರಿ!" ಮುದುಕ ತೂಕಡಿಸುತ್ತ ಕಣ್ಣು ಮುಚ್ಚಿ ಬಿಟ್ಟನು. ನಾನು ಮಾತ್ರ ವಿಚಾರಿಸುತ್ತ ಕುಳಿತುಬಿಟ್ಟೆನು.

"ತಾಯಿ-ತಂದೆಗಳನ್ನು ಕಳೆದುಕೊಂಡ ಮಲ್ಲನಿಗೆ ಮಾರಿಯೊಬ್ಬಳು ಮಾತೆಯ ರೂಪ ತೋರಿ ಏಷ ಉಣಿಸಲು ಯತ್ನಿಸಿದಾಗ, ಮಲ್ಲ ಓಡಿ ಮಿಲ್ಟ್ರಿ ಸೇರಿಕೊಂಡು, ಕಡುಬಿಸಿಲಿನ ದಿನಗಳನ್ನು ಕಳೆಯುವಾಗ, ಮೆಂಗಲೀಯಳ ಮಮತೆಯ ಕರೆಯೊಂದು ಅವನಿಗೆ ತಣ್ಣೀರ ಸಿಂಚನವಾದಲ್ಲಿ ಏನಾಶ್ಚರ್ಯ?" ಎಂದು ನನ್ನ ಸುಪ್ತ ಮನಸ್ಸು ಹೇಳುವಾಗ, ನಾನೂ ನಿದ್ರೆ ಹೋಗಿದ್ದೆ.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಚಿಪಾಕಿಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ಪ್ರತಿ ಸಾರಿ ಹೋಗುವದು ಕಷ್ಟವಿರುವುದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟನೋವು, ವಾಂತಿ, ಅಪಚನ, ಕಫ, ಮೈನೋವು, ಹಲ್ಲುನೋವು, ಮಕ್ಕಳ ಪಾಕ ವಿಕಾರ ಇತ್ಯಾದಿ ಅನೇಕ ಚಿಲ್ಲರೆ ಬೇನೆಗಳನ್ನು ಜಪೇರಿಯನ್ ಜೀವನೆ ಮಿಕ್ಶ್ಚರ್ ನಿಶ್ಚಯವಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅಮಾಂಶಗಳಿಂಥ ಭಯಾನಕ ಪೀಡೆಗಳ ಮೇಲೆ ಇದರ ಉಪಯೋಗವಾಗುತ್ತದೆ. ಕಾಳ್ಚಳ್ಳುವಾಗ ಯಾವಾಗಲೂ ಇದರ ಉಪಯೋಗವಾಗುವದರಿಂದ ಇದರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರಯಾಣದಲ್ಲಿ ಹತ್ತಿರವೂ ಇಟ್ಟುಕೊಳ್ಳುವದು (ಉತ್ಕೃಷ್ಟ ಮುಂಬಾಗ್ಯತೆಯ ಅಣಾಯಪಾಗಿದೆ) ಮೂಡಮೂಕ್ಕಡ ಲಕ್ಷಣವಾದರೆ ಕಾಮ್ಯಲ್ಲಿಯೂ (ಔಷಧ ವ್ಯಾಪಾರಿಗಳಲ್ಲಿಯೂ) ಪಕ್ಕಗಳಲ್ಲಿ ಅಂಗಡಿಕಾರರಲ್ಲಿಯೂ ದೊರೆಯುತ್ತದೆ.

ಎಮ್. ಪಟೇಲ್ ಜಪೇರಿಯನ್ ಮತ್ತ ಕಂ
ಪ್ಲಾನ್ಟನ್ ಬಿಲ್ಡಿಂಗ್, ಮುಂಬಾಯಿ

ಪುಸ್ತಕ ವಿಮರ್ಶೆ

(ಒಂದು ಚಿಕ್ಕ ಉಪನ್ಯಾಸ) *

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

★

ಜೀವನದ ಸಂಪೂರ್ಣದರ್ಶನವಿರುವವನೇ ನಿಜವಾದ ವಿಮರ್ಶಕ. ಒಳ್ಳೆಯ ವಿಮರ್ಶಕರಿಲ್ಲದ ನಾಡಿನ ಸಾಹಿತ್ಯಪ್ರಪಂಚ, ವಿಚಾರವಿಗಳಾದ ಹಿರಿಯರಿಲ್ಲದ ಮನೆತನದ ಕಾರಭಾರವಿದ್ದಂತಾಗುವುದು.

★

ನನ್ನ ಕನ್ನಡನಾಡಿನ ಸಾಹಿತ್ಯಿಕ ಸೋದರ-ಸೋದರಿಯರೆ,

ಧಾರವಾಡದ ಆಲಿಲಭಾರತ ಆಕಾಶವಾಣಿಯ ಕೇಂದ್ರದಲ್ಲಿ, ಕನ್ನಡ ಪುಸ್ತಕವಿಮರ್ಶೆಯ ಕಾರ್ಯಕ್ರಮದ ಮೊತ್ತಮೊದಲನೆಯ ಉಪನ್ಯಾಸವನ್ನು ನಾನೀಗ ಮಾಡಲಿದ್ದೇನೆ. ಆಕಾಶವಾಣಿಯ ಮೂಲಕ ಪುಸ್ತಕಗಳ ವಿಮರ್ಶೆ ನಡೆಯುವುದು, ನಾಡಿಗೆ ತುಂಬ ಪ್ರಯೋಜನಕಾರಿ. ಲೇಖನಸ್ವಾತಂತ್ರ್ಯ ಮುದ್ರಣಸ್ವಾತಂತ್ರ್ಯಗಳ ಈ ಯುಗದಲ್ಲಿ, ಬೇಕಾದವರು ಬೇಕಾದುದನ್ನೆಲ್ಲ ಬರೆದು, ಪುಸ್ತಕಗಳನ್ನು ಮಾಡಿ ಹೊರಕ್ಕೆ ಹಾಕಬಹುದು. ಆದರಂತೆಯೆ 'ಅಚ್ಚಾಗಿ ಬಂದುದೆಲ್ಲವೂ ಸತ್ಯವಾದುದು' ಎಂದು ತಿಳಿಯುವ ಬಹುಸಂಖ್ಯಾಕರು ನಮ್ಮ ಜನಸಾಮಾನ್ಯರಲ್ಲಿ ಇದ್ದಾರೆ. ಆದುದರಿಂದ, ನಾಡಿನಲ್ಲಿ ಪ್ರಕಟವಾಗುತ್ತಲಿರುವ ಪುಸ್ತಕಗಳ ಗುಣ, ದೋಷ, ಒಪ್ಪು, ತಪ್ಪು, ದೇಶೌಚಿತ್ಯ, ಕಾಲೌಚಿತ್ಯ ನೊದಲಾದುವುಗಳ ಅಧಿಕೃತವಿಮರ್ಶೆ, ಸಮರ್ಥರಾದ ವಿಮರ್ಶಕರಿಂದ ಹೆಚ್ಚಾಗಿ ನಡೆಯಬೇಕಾದುದು ಬಹಳ ಅಗತ್ಯದ ಸಂಗತಿಯಾಗಿದೆ.

ಇನ್ನೂ ಒಂದು ವಿಶೇಷವೆಂದರೆ: ಇಂದು ನಮ್ಮ ದೇಶದ ಪಳ್ಳಿ-ಪಟ್ಟಣಗಳಲ್ಲಿ ವಾಚನಾಲಯಗಳೂ ಗ್ರಂಥಭಾಂಡಾರಗಳೂ ಹೆಚ್ಚಾಗುತ್ತಲಿವೆ. ನಮ್ಮದೇ ಆದ ಜನಪ್ರಿಯ ಸರಕಾರ, ವಾಚನಾಲಯ-ಗ್ರಂಥಭಾಂಡಾರಗಳು ಹೆಚ್ಚಾಗುವಂತೆ ಚಳವಳಿ ನಡೆಯಿಸಿದೆಯಲ್ಲದೆ, ತಕ್ಕಮಟ್ಟಿಗೆ ಆರ್ಥಿಕಸಹಾಯವನ್ನೂ ಸಲ್ಲಿಸುತ್ತಲಿದೆ. ಆದರೆ ಸದ್ಯದ ಆರ್ಥಿಕಪರಿಸ್ಥಿಯ ಮೂಲಕ, ಇಂತಹ ಸಾಹಿತ್ಯಪ್ರಚಾರಕ ಸಂಸ್ಥೆಗಳಲ್ಲಿ ಹಣವು ಪರಿಮಿತವಾಗಿರುವುದರಿಂದ, ಆ ಹಣ ಒಳ್ಳೊಳ್ಳೆಯ ಗ್ರಂಥಗಳನ್ನು ಸಂಗ್ರಹಿಸಲಿಕ್ಕೇ ವೆಚ್ಚವಾಗುತ್ತಿರಬೇಕು. ಇಂದು ಪೇಟೆಗಳಲ್ಲಿ, ವ್ಯಾಪಾರೀದೃಷ್ಟಿಯಿಂದ ಹೊರಟ ಅನೇಕ ಅನಧಿಕೃತ ಲೇಖಕರ ಪುಸ್ತಕಗಳೂ ತುಂಬಿಬಿಟ್ಟಿವೆ. ಯಾವ ಮುಂಗಡ ವಿಚಾರವೀ ಹಾಗೆಯೆ ಹೋಗಿ, ಹೊರಮಿಂಚಿಗೆ ಮರುಳಾಗಿ, ಕೈಗೆ ಸಿ ಪುಸ್ತಕಗಳನ್ನು ತೆಗೆದುಕೊಳ್ಳುವುದಕ್ಕಿಂತ, ಇಂತಿಂತಹ ಪುಸ್ತಗಳನ್ನೇ ತೆಗೆದುಕೊಳ್ಳಬೇಕೆಂಬ ತಿಳಿವಳಿಕೆಯಿಂದ ಹೊ ವ್ಯಾಪಾರ ಮಾಡಿದರೆ, ಇದ್ದ ಪರಿಮಿತ ಹಣದ ಸದ್ವಿನಿಯೋವಾದಂತೆ ಆಗುವುದು; ವಾಚಕವರ್ಗಕ್ಕೆ ಒಳ್ಳೆಯ ಪುಸ್ತಕಗಳ ಒದಗಿಸಿಕೊಟ್ಟ ಶ್ರೇಯಸ್ಸು ಸಿಕ್ಕುವುದು. ಈ ಬಗೆಯ ತಿಳಿವಳ ನಮ್ಮ ಗ್ರಂಥಭಾಂಡಾರಗಳ ಸಂಚಾಲಕರಲ್ಲಿ ಮೂಡಬೇಕಾದ 'ಪುಸ್ತಕವಿಮರ್ಶೆ'ಯನ್ನು ಕುರಿತ ಸಾರ್ವಜನಿಕ ಉಪನ್ಯಾಸವೂ ತುಂಬ ಸಹಾಯಕಾರಿಯಾಗಬಲ್ಲವು. ಆದರೆ ಇಂತಹ ವಿಮರ್ಶೆಯನ್ನು ಮಾಡಬಲ್ಲ ಉಪನ್ಯಾಸಕನ ತಲೆಯ ಮೇಲಿನ ಹೊಗಾರಿಕೆ ತುಂಬ ದೊಡ್ಡದಾಗಿರುವುದು. ಈತ ಸಕಲವಿಷಯಾಜ್ಞನೂ ಬಹುಶ್ರುತನೂ ಇರಬೇಕಲ್ಲದೆ, ಯೋಗಯುಕ್ತ ಮನನವನೂ ಸಮತೂಕದ ಬುದ್ಧಿಯವನೂ ಆಗಿರಬೇಕು. ಪೂರ್ವಗ್ರಹ, ಪಕ್ಷಪಾತ, ದ್ವೇಷ-ಮತ್ಸರಸಾಧನೆ ಇವುಗಳಿಂದ ಸಂಪೂರ್ಣ ಅಲಿಪ್ತನಾಗಿರಬೇಕು. ಜೀವನದ ವಿವಿಧ ವ್ಯವಹಾರಗಳ ಪ್ರತ್ಯಕ್ಷಾನುಭವವನ್ನೂ, ನಾಡಿನ ಪೂರ್ವಪರಂಪರೆಗಳನ್ನೂ, ಕಾಲೋಚಿತವಾದ ಆಧ್ಯಾತ್ಮಿಕ ಆಧಿಭೌತಿಕ ಧ್ಯೇಯವಾದಗಳನ್ನೂ ಚೆನ್ನಾಗಿ ಅರಿತುಕೊಂಡವನಾಗಿರಬೇಕು. ಜಾತಿ, ಮತ, ಪಕ್ಷ, ಪಂಗಡ, ಧರ್ಮ, ರಾಜಕೀಯವಾದಗಳ ನೆಲೆಯನ್ನು ತಿಳಿದಿರಬೇಕಾದರೆ ಆಸ್ಪಗಳ ಸುಳಿಯಲ್ಲಿ ಸಿಕ್ಕ ಅಹಂಕಾರಿಯಾಗಿರಬಾರದು. ಮಾನವತೆಯ ನೈಸರ್ಗಿಕ ವಿಕಾಸ, ಸಾಮಾಜಿಕ ಸ್ವಾತಂತ್ರ್ಯ-ವ್ಯಸ್ವಾತಂತ್ರ್ಯಗಳ ಸಮತೂಕ—ಇವುಗಳ ಕಲ್ಪನೆ ಚೆನ್ನಾಗಿರಬೇಕು. ಇವೆಲ್ಲ ಗುಣಗಳಿಲ್ಲದವನು, ವಿಮರ್ಶಕನ ಲಕ್ಷಣಿಕೆಯನ್ನು ಕೈಯಲ್ಲಿ ಹಿಡಿಯದಿರುವುದು ಒಳ್ಳೆಯದು.

ಪುಸ್ತಕವಿಮರ್ಶಕನ ವಿಮರ್ಶೆ, ಪುಸ್ತಕಕರ್ತೃವಿಗೂ ಒಪ್ಪಿಯಾಗುವಂತಹ ವಿವೇಚನೆ, ವಿವರಣೆ, ಯುಕ್ತಿಪ್ರಯುಕ್ತಿಗಳಿಂದ ಕೂಡಿರಬೇಕು. ಅದು ಅವನಿಗೊಂದು ಹೊಸ ದೃಷ್ಟಿಯನ್ನು ಕೊಡುವ ಪಾಠವಾಗಿ ಕಾಣಬೇಕೇ ಹೊರತು, ನಿಂದೆ-ವಿಡಂಬನ ವ್ಯಂಗ್ಯಗಳ ಮಾತಿನ ಮಾಲೆಯಾಗಿ ಪರಿಣಮಿಸಲಾಗದು. ಪುಸ್ತಕಕರ್ತೃವಿನ ಅಹಂಕಾರ ಮೂಲಕವಾದ ಹಟವನ್ನೋ, ಅಪತ್ಯಪ್ರೇಮದ ಅಂಧಭಾವನೆಯೋ—ಆ ವಿಮರ್ಶೆಯನ್ನು ಒಪ್ಪದೆ ಹೋದರೂ ಹತ್ತು ಜನ ಸಹೃದಯರು ಅದನ್ನು ಒಪ್ಪಿ ತಲೆದೂಗಿದರೆ ಸಾಕು. ಅದು ಒಳ್ಳೆಯ ವಿಮರ್ಶೆಯೆನಿಸಿಕೊಳ್ಳದೆ ಹೋಗದು. ಇಂತಹ ಒಳ್ಳೆಯ ವಿಮರ್ಶೆಯನ್ನು ಮಾಡುವವರು ಹೆಚ್ಚಾಗಿ ಇದ್ದ ನಾಡಿನಲ್ಲಿ ಗುಣವಿಹೀನ ಸಾಹಿತ್ಯದ ನಿರ್ಮಿತಿಗೆ ತಡೆಯುಂಟಾಗುವದಲ್ಲದೆ, ಅಂತಹ ಸಾಹಿತ್ಯ ನಿರ್ಮಾಣ, ಪ್ರಕಾಶನಗಳಿಗಾಗಿ ವ್ಯರ್ಥ

---

* ಕಳೆದ ತಾ. ೧೧-೩-೫೯ನೆಯ ಸಾಯಂಕಾಲ ೭-೫೦ಕ್ಕೆ ಧಾರವಾಡ ಬಾನುಲಿಯಿಂದ ಪ್ರಸಾರವಾದ ಭಾಷಣವಿದು. —ಸಂ.

ಗೈಯಾಗುತ್ತಿರುವ ದೇಶದ ಶಕ್ತಿ-ಸಂಪತ್ತಿಗಳ ಉಳಿತಾಯ ಆಗುವುದು.

ಪುಸ್ತಕ-ವಿಮರ್ಶೆ ನಾಡಿನಲ್ಲಿ ಒಳ್ಳೆಯ ರೀತಿಯಿಂದ ನಡೆಯುತ್ತಿರುವುದು, ಲೇಖಕರಿಗೆ—ಪ್ರಕಾಶಕರಿಗೆ—ಕೂಡ ಉಪಕಾರಕವೇ ಆಗಿರುವುದು. ಗುಣಯುಕ್ತ ಪುಸ್ತಕಗಳ ವಿಮರ್ಶೆಯಿಂದ ನಾಡಿಗರಲ್ಲಿಲ್ಲ ಪುಸ್ತಕಗಳ ಪ್ರಸಿದ್ಧಿಯಾದಂತಾಗಿ, ಅಂತಹ ಪುಸ್ತಕಗಳ ಮಾರಾಟ ಕಿಚ್ಚಾಗಿ ನಡೆಯುವುದು. ದೋಷಯುಕ್ತ ಪುಸ್ತಕಗಳ ವಿಮರ್ಶೆಯಿಂದ, ಲೇಖಕರೂ ಪ್ರಕಾಶಕರೂ ತಮ್ಮಿಂದಾದ ತಪ್ಪುಗಳನ್ನು ತಿದ್ದಿಕೊಳ್ಳಬಹುದು; ಅವರ ಆ ತರುವಾಯದ ಕೃತಿಗಳಲ್ಲಿಯೂ ಪ್ರಕಾಶನಗಳಲ್ಲಿಯೂ ಕೊರತೆಗಳು ಕಡಮೆಯಾಗುತ್ತ ಹೋಗಿ, ನಾಡಿನ ಸಾಹಿತ್ಯದ ಮಟ್ಟ ಮೇಲಕ್ಕೇರುವ ಶುಭಭವಿಷ್ಯ ಕತ್ತಿರಕ್ಕೇ ಬಂದು ಬಿಡಬಹುದು.

ವಿಮರ್ಶೆಯ ಅಗತ್ಯ ಹೆಚ್ಚಾಗಿ ಇರುವುದು, ವಿಶೇಷವಾಗಿ ಲಲಿತ ಸಾಹಿತ್ಯದ ಪುಸ್ತಕಗಳಿಗೆ. ಲೆಕ್ಕಾಚಾರದಿಂದ ಸಿದ್ಧಮಾಡಬೇಕಾಗಿರುವ ಶಾಸ್ತ್ರ-ವಿಜ್ಞಾನವಿಷಯಕ ಪುಸ್ತಕಗಳಿಗೂ, ಹಳೆಯ ಆಧಾರಗಳ ಆಧಾರದ ಮೇಲೆಯೆ ಬೆಳೆಯಬಲ್ಲ ಇತಿಹಾಸಗ್ರಂಥಗಳಿಗೂ ವಿಮರ್ಶೆಯ ಅಗತ್ಯ ಕಡಿಮೆ. ಲೆಕ್ಕಾಚಾರ ತಪ್ಪಿದ ಶಾಸ್ತ್ರ-ವಿಜ್ಞಾನಸಿದ್ಧಾಂತಗಳು, ಶಾಸ್ತ್ರ-ವಿಜ್ಞಾನಗಳಾಗಿ ನಿಲ್ಲಲಾರವು. ಹಳೆಯ ಆಧಾರಗಳ ಆಧಾರತಪ್ಪಿದ ಇತಿಹಾಸವು ಇತಿಹಾಸವೆನಿಸದು. ಶಾಸ್ತ್ರ-ವಿಜ್ಞಾನಗಳು ಪ್ರತ್ಯಕ್ಷಪ್ರಮಾಣಗಳಿಂದಲೇ ಸಿದ್ಧವಾಗಬೇಕಾಗುವುದು. ೨+೨=೪ ಎಂದು ಹೇಳದೆ, ಐದು' ಎಂದೋ 'ಆರು' ಎಂದೋ ಲೇಖಕ ತನ್ನ ಗ್ರಂಥದಲ್ಲಿ ಹೇಳಿದ್ದರೆ, ಅದನ್ನು ಒಪ್ಪುವವರಾರು? ಆದರಂತೆಯೆ 'ಅಕಬರನು ವಿಜಯನಗರದ ಸಿಂಹಾಸನವನ್ನೇರಿ ಹತ್ತು ವರ್ಷ ರಾಜ್ಯವಾಳಿದನು' ಎಂದು ಬರೆದ ಇತಿಹಾಸಕಾರನು, ಅದಕ್ಕೆ ಬೇಕಾಗುವ ಪ್ರಮಾಣಗಳನ್ನು ಒದಗಿಸದೆ ಹೋದರೆ, ಅದು ಐತಿಹಾಸಿಕ ಸತ್ಯವೆಂದು ಹೇಗೆ ಎನಿಸೀತು? ಇಷ್ಟಾಗಿ ಶಾಸ್ತ್ರ-ವಿಜ್ಞಾನ-ಇತಿಹಾಸಗಳು, ಲಲಿತಸಾಹಿತ್ಯದಂತೆ ಬಹುಜನರ ಮೆಚ್ಚಿಗೆಯನ್ನು ಪಡೆಯುವ ವಿಷಯಗಳೂ ಅಲ್ಲ.

ಲಲಿತಸಾಹಿತ್ಯವು ಶಾಸ್ತ್ರದ ಲೆಕ್ಕಾಚಾರ, ಹಳೆಯ ಪ್ರಮಾಣಗಳ ಆಧಾರ ಇವುಗಳ ಮೇಲೆ ನಿಂತುದಲ್ಲ. ಮಾನವನ ಮೂಲಪ್ರವೃತ್ತಿ ಸಹಜಸಂವೇದನೆಗಳಲ್ಲದೆ, ವ್ಯಕ್ತಿಯ ಪರಿಸರ-ಅಭ್ಯಾಸ-ದೇಶಕಾಲಪರಿಸ್ಥಿತಿಗಳು, ಬುದ್ಧಿಯ ಮಟ್ಟ, ಇವೆಲ್ಲವುಗಳ ಮೂಲಕ ಉಂಟಾದ ಸ್ವಭಾವವೈವಿಧ್ಯ— ಮೊದಲಾದುವುಗಳನ್ನು ಹೆಚ್ಚಾಗಿ ಅವಲಂಬಿಸಿರುವುದು. ಆದುದರಿಂದಲೇ ಲಲಿತಸಾಹಿತ್ಯವೆಂಬುದು ಸಾಮಾನ್ಯರ ವಿಮರ್ಶೆಗೆ ಜಡವಾಗಿ ನಿಂತು, ವೈಚಾರಿಕಕಲಹಗಳು ತಲೆದೋರುವುವು.

ಲಲಿತಸಾಹಿತ್ಯನಿರ್ಮಾಣಕಾರರಿಗೆ ಖಂಡಿತವಾದ ಲೆಕ್ಕಾಚಾರವಿರುವುದಿಲ್ಲ. ನಿಶ್ಚಳವಾದ ಘಟನೆಯ ಪ್ರಮಾಣದ ಆಧಾರವಿರುವುದಿಲ್ಲ. ಅವರವರಿಗೆ ಅವರವರ ಜೀವನಾನುಭವವೇ ಆಧಾರ ಆನೆ ಮತ್ತು ಕುರುಡರ ಕತೆಯನ್ನು ಕೇಳಿಲ್ಲವೆ? ಕಾಲನ್ನು ಮುಟ್ಟಿ ನೋಡಿದ ಕುರುಡ ಆನೆ ಕಂಬದಂತಿದೆಯೆಂದ. ಕಿವಿಯನ್ನು ಕೈಯಿಂದ ತಡವಿ ನೋಡಿದ ಇನ್ನೊಬ್ಬ ಕುರುಡ, ಆನೆ ಮೊರದಂತಿದೆಯೆಂದ. ಮತ್ತೊಬ್ಬ ಸೊಂಡಿಲನ್ನು ಮುಟ್ಟಿ ನೋಡಿದ ಕುರುಡ, 'ಆನೆ ಬಳಿಗೆಯಂತಿದೆ' ಎಂದ. ಬಾಲವನ್ನು ಮುಟ್ಟಿ ನೋಡಿದ ಮಗುದೊಬ್ಬ 'ಆನೆ ಹಗ್ಗದಂತಿದೆ' ಎಂದ. ಅವರವರಿಗೆ ಕಂಡಷ್ಟು ಅದು ಸತ್ಯವಿಷಯವೆ; ಆದರೆ ಯಾವ ಒಬ್ಬ ಕುರುಡನ ಈ ಸತ್ಯವೂ ಆನೆಯ ಸಂಪೂರ್ಣಸ್ವರೂಪವನ್ನು ತಿಳಿಸಲಾರದು. ಹಾಗೆಯೆ ಲೇಖಕರು, ತಾವು ಕಂಡ ಕಿರಿಯ ಜೀವನಾನುಭವಗಳಿಂದ, ಸಾಹಿತ್ಯದಲ್ಲಿ ಸೌಂದರ್ಯವನ್ನು ರೂಪಿಸುತ್ತಿರುತ್ತಾರೆ. ತಾವು ರೂಪಿಸಿದುದೇ ಸೌಂದರ್ಯದ ಸಂಪೂರ್ಣಸ್ವರೂಪ—ಎಂದು ತಿಳಿಯುತ್ತಾರೆ. ಕಣ್ಣಿರುವವನು ಆನೆಯ ಸಂಪೂರ್ಣ ಸ್ವರೂಪವನ್ನು ಕಂಡಿರುವನಾದುದರಿಂದ, ಕುರುಡರು ಕಂಡ ಅಪೂರ್ಣ ಸತ್ಯಸ್ವರೂಪಗಳನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು, 'ನೀವು ಒಬ್ಬೊಬ್ಬರು ಕಂಡುದು— ಕಾಲು, ಕಿವಿ, ಸೊಂಡಿಲು, ಬಾಲಗಳನ್ನು ಮಾತ್ರ; ಸಂಪೂರ್ಣ ಆನೆಯನ್ನಲ್ಲ'—ಎಂಬುದನ್ನು ತಿಳಿಸಿ ಹೇಳುತ್ತಾನೆ. ಹೀಗೆಯೆ ಲೋಕದ ಸಂಪೂರ್ಣಸೌಂದರ್ಯವನ್ನು ಕಂಡ ವಿಮರ್ಶಕನು, ಬೇರೆ ಬೇರೆ ಸಾಹಿತ್ಯನಿರ್ಮಾಪಕರು ಕಂಡು ರೂಪಿಸಿದ ಅಪೂರ್ಣ ಸೌಂದರ್ಯಗಳನ್ನೂ, ಸೌಂದರ್ಯಾಭಾಸಗಳನ್ನೂ, ಯುಕ್ತಿಯುಕ್ತವಾದ ವಿವರಣೆಗಳಿಂದ ಹೇಳಿಕೊಡಬಲ್ಲನು. ಆದಕ್ಕಾಗಿಯೇ ವಿಮರ್ಶಕ, ಸೃಷ್ಟಿಯ ಜೇತನಾಜೇತನಗಳ ಜೀವನಸೌಂದರ್ಯವನ್ನು ಸಮಗ್ರವಾಗಿ ಕಂಡವನೂ ಉಂಡವನೂ ಆಗಿರಬೇಕು; ಅದರ ಅಂಗಾಂಗಗಳನ್ನು ವಿಶ್ಲೇಷಿಸಿನೋಡಿ ಅರಿತವನೂ ಆಗಿರಬೇಕು. ಇಂತಹವನ ವಿಮರ್ಶೆ ಯಾರನ್ನೂ ನೋಯಿಸದು; ಕೆರಳಿಸದು. ಪೂರ್ವಗ್ರಹ-ಪಕ್ಷಪಾತಗಳ ಆರೋಪಕ್ಕೂ ಗುರಿಯಾಗದು. ಲಲಿತ ಸಾಹಿತ್ಯದ ಬೇರೆಬೇರೆ ಪುಸ್ತಕಗಳಲ್ಲಿ ಮೂಡಿನಿಂತಿರುವ ಸಾಹಿತ್ಯಿಕರ—ಪರಸ್ಪರ ವಿರುದ್ಧವಾದ—ವೈಯಕ್ತಿಕ ಸತ್ಯದರ್ಶನಗಳ ಮೂಲಕ, ಜನಸಾಮಾನ್ಯರಿಗೆ ಇಂದಿನ ಲಲಿತ ಸಾಹಿತ್ಯವೂ ಜಟಿಲವಾಗಿ ತೋರುವುದಾದುದರಿಂದ, ಅವುಗಳ ವಿಶ್ಲೇಷಿತ ಸ್ವರೂಪಗಳನ್ನು ವಿವರಿಸಿ, ಸಾಮಾನ್ಯ ಸೌಂದರ್ಯದ ಸಂಪೂರ್ಣ ದರ್ಶನ ಮಾಡಿಸುವವನು ವಿಮರ್ಶಕ. ಆದುದರಿಂದಲೇ ಲಲಿತಗ್ರಂಥಗಳಿಗೆ ವಿಮರ್ಶೆಯ ಅಗತ್ಯ ತುಂಬ ಇದೆಯೆಂಬುದನ್ನು ಎಲ್ಲ ದೇಶದ-ಎಲ್ಲ ಕಾಲದ-ಸಾಹಿತ್ಯವಿಜ್ಞಾನಿಗಳು ಒಪ್ಪಿಕೊಂಡಿದ್ದಾರೆ.

ನಮ್ಮ ಹೊಸ ಕನ್ನಡನಾಡು, ಈಗ ೪೮-೫೦ ವರ್ಷಗಳ ಹಿಂದೆ, ಲಲಿತಸಾಹಿತ್ಯನಿರ್ಮಿತಿಯ ದೃಷ್ಟಿಯಿಂದ ಬಂಜರುಭೂಮಿಯಾಗಿದ್ದಿತು. ಕರ್ನಾಟಕ ಪ್ರಾಂತದ ಕಲ್ಪನೆಯೊಂದಿಗೆ, ನಾಡಿನಲ್ಲಿ ಹುದುಗಿಕೊಂಡು ಬಿದ್ದಿದ್ದ ಸಾಹಿತ್ಯದ ಬೀಜಗಳು, ಮೊಳಕೆಗೊಂಡು ಮೆಲ್ಲಗೆ ಬೆಳೆಯಲು ತೊಡಗಿದುವು. ಈಗ ಪ್ರತಿವರ್ಷವೂ ಕವಿತೆ-ಕತೆ-ಏಕಾಂಕಗಳ ಸಂಕಲನಗಳು, ಕಾದಂಬರಿ-ನಾಟಕಗಳು, ಪ್ರಬಂ-

ಪ್ರಬಂಧಗಳು, ಜೀವನಚರಿತ್ರೆಗಳು, ವಿಮರ್ಶಾಗ್ರಂಥಗಳು ಸಾಕಷ್ಟು ಸಂಖ್ಯೆಯಲ್ಲಿ ಪ್ರಕಟವಾಗುತ್ತಿರುತ್ತವೆ. ಇವೆಲ್ಲ ಗ್ರಂಥಗಳು ಲೇಖಕರಿಂದಾಗಲಿ, ಪ್ರಕಾಶಕರ ಕಡೆಯಿಂದಾಗಲಿ, ಕನ್ನಡ ಆಕಾಶವಾಣಿಯ ಕಾರ್ಯಾಲಯಕ್ಕೆ ಬಂದು ಸಕಾಲದಲ್ಲಿ ತಲ್ಪುತ್ತಲಿದ್ದರೆ, ತಿಂಗ-ತಿಂಗಳೂ–ಅದಕ್ಕೆ ಹಿಂದಿನ ತಿಂಗಳಲ್ಲಿ ಪ್ರಕಟವಾದ–ಕನ್ನಡ ಲಲಿತ ಸಾಹಿತ್ಯಗ್ರಂಥಗಳ ವಿವರವಾದ ವರದಿಯನ್ನು ಕೊಟ್ಟು, ಮುಖ್ಯ ಮುಖ್ಯವಾದ ಪುಸ್ತಕಗಳನ್ನು ವಿಮರ್ಶಿಸಲಿಕ್ಕೆ ಅನುಕೂಲವಾಗುವುದು.

ನಮ್ಮ ನಾಡಿನಲ್ಲಿ ಲಲಿತಸಾಹಿತ್ಯಗ್ರಂಥಗಳನ್ನು ಪ್ರಕಟಿಸುವ ಗ್ರಂಥಮಾಲೆಗಳೂ ಪ್ರಕಟನಮಂದಿರಗಳೂ ಸಾಕಷ್ಟು ಇವೆಯೆಂದು ಹೇಳಲಿಕ್ಕಾಗದಿದ್ದರೂ, ಬಹುಸಂಖ್ಯೆಯಲ್ಲಿವೆಯೆಂದು ಹೇಳುವಂತಿದೆ: ಉತ್ತರ ಕರ್ನಾಟಕದ ಬೆಳಗಾಂವಿ ನಗರದಲ್ಲಿ, 'ವಿಜಯ-ಗ್ರಂಥಮಾಲೆ' ಎರಡು ವರ್ಷಗಳಿಂದ ನಡೆದುಕೊಂಡು ಬಂದಿದ್ದು ಶ್ರೀಮಾನ್ ಕೃಷ್ಣಮೂರ್ತಿ ಪುರಾಣಿಕರ 'ತೆರೆದ ಕಣ್ಣು' ಎಂಬ ಸಾಮಾಜಿಕ ಕಾದಂಬರಿಯನ್ನು ಇತ್ತೀಚೆಗೆ ವಾಚಕರ ಕೈಗೆ ಕೊಟ್ಟಿದೆ. ಇನ್ನೊಂದು 'ಸುವರ್ಣಭಾರತೀ ಗ್ರಂಥಮಾಲೆ' ಎಂಬುದು 'ಸಂಜೀವಿನಿ' ಎಂಬ ತನ್ನ ಮೊದಲನೆಯ ಸಾಮಾಜಿಕ ಕಾದಂಬರಿಯ ಪ್ರಕಟನೆಯಿಂದ, ಹೊಸತಾಗಿಯೇ ಕಾರ್ಯವನ್ನಾರಂಭಿಸಿದೆ.

ಧಾರವಾಡ ನಗರವಂತೂ ಗ್ರಂಥನಿರ್ಮಿತಿಯಲ್ಲಿ ಒಂದು ಪ್ರಮುಖ ಕೇಂದ್ರ. ಇಲ್ಲಿಯ ಸರ್ವಸುಪರಿಚಿತವಾದ 'ಮನೋಹರ ಗ್ರಂಥಮಾಲೆ' ಸಾಮಾಜಿಕ ನಾಟಕ 'ಮಗು'ವನ್ನೂ, ಸಾಮಾಜಿಕ ಕಾದಂಬರಿ 'ಗಂಗಾಸಾನಿ'ಯನ್ನೂ ತನ್ನ ೯೮ನೆಯ ಕುಸುಮವನ್ನಾಗಿ— ಕಳೆದ ತಿಂಗಳಲ್ಲಿ— ಕನ್ನಡ ತಾಯಿಗೆ ಕೊಟ್ಟಿದೆ. 'ಲಲಿತ-ಗ್ರಂಥಮಾಲೆ' ಎಂಬುದು ಇನ್ನೊಂದು. ಇದು ಹೊಸತಾಗಿ 'ಸ್ವಪ್ನಜೀವಿ' ಎಂಬ ಕಾದಂಬರಿಯನ್ನು ಬೆಳಕಿಗೆ ತಂದಿದೆ. ನುತ್ತೊಂದಾದ 'ಪ್ರತಿಭಾ ಗ್ರಂಥಮಾಲೆ'ಯು 'ಪುನರ್ಮಿಲನ' ಎಂಬ ಸ್ವತಂತ್ರ ಸಾಮಾಜಿಕ ಕಾದಂಬರಿಯನ್ನೂ 'ಬಾಳ್ನೋಟಗಳು' ಎಂಬ ಜೀವನಚಿತ್ರ ಸಂಕಲನವನ್ನೂ ಪ್ರಕಟಗೊಳಿಸಿದೆ. ಹೊಸತಾಗಿಯೆ ಪ್ರಾರಂಭವಾದ 'ಪ್ರಗತಿಶೀಲ' ಗ್ರಂಥಮಾಲೆಯು, 'ಭಾವಜೀವಿ' ಎಂಬ ಒಳ್ಳೆಯ ಖಂಡಕಾವ್ಯವನ್ನು ರಸಿಕರಿಗೆ ಕೊಟ್ಟಿದೆ. ಶ್ರೀ. ಬುರ್ಲಿ ಬಿಂದುಮಾಧವರ 'ಮಿಂಚಿನಬಳ್ಳಿ' ಕೇವಲ ಲಲಿತಸಾಹಿತ್ಯ ಪ್ರಕಟನೆಗೆಂದು ಇರದಿದ್ದರೂ, ಕಳೆದ ತಿಂಗಳಲ್ಲಿ ಪ್ರಕಟಿಸಿದ 'ಸ್ವರ್ಗದೋಲೆಗಳು' ಎಂಬ ಹೆಸರಿನ ಶ್ರೀ. ಹಂಸೀ ಲಿಂಗಣ್ಣನವರ ವೈಚಾರಿಕ ಪತ್ರಸಂಕಲನವು ಲಲಿತಸಾಹಿತ್ಯ ಜಾತಿಯದೇ ಆಗಿದೆ. ಗೋಕರ್ಣದಲ್ಲಿ ಹೊರಟ 'ಪರ್ಣಕುಟಿ' ಗ್ರಂಥಮಾಲೆ, ಸದ್ಯ ಧಾರವಾಡವನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿರುವುದು.

ಗ್ರಂಥಮಾಲೆಗಳ ವಿಷಯದಲ್ಲಿ ಹುಬ್ಬಳ್ಳಿಯೂ ಧಾರವಾಡವನ್ನು ಹಿಂಗಟ್ಟುವುದರಲ್ಲಿದೆ. ಶ್ರೀ. ಕೆ. ಈಶ್ವರನ್ ಅವರ 'ಕಲ್ಪನಾಗ್ರಂಥಮಾಲೆ'ಯು ಮೊನ್ನೆ ಮೊನ್ನೆಯೆ, 'ಕನ್ನಡ ತಾಯ್ನೋಟ' ಎಂಬ ವ್ಯಕ್ತಿಪರಿಚಯಾತ್ಮಕ ಗ್ರಂಥವನ್ನು ಹೊರಕ್ಕೆ ಹಾಕಿದೆ. ಇನ್ನೊಂದು 'ಸಂಜೀವಿನಿ ಗ್ರಂಥಮಾಲೆ' ಎಂಬುದು, ಇತ್ತೀಚೆಗೆ 'ಆಶಾ' ಎಂಬ ಸಾಮಾಜಿಕ ಕಾದಂಬರಿಯನ್ನು ಕೊಟ್ಟಿದೆ. ಶ್ರೀ. ಕೆ. ವೆಂಕೋಬಾಚಾರ್ಯರ ನೇತೃತ್ವದಲ್ಲಿ ಈಗ ತಾನೇ ಹೊರಟ 'ಆನಂದಗ್ರಂಥಮಾಲೆ'ಯು 'ಅರ್ಪಣ' ಎಂಬ ಹೆಸರಿನ ಅನುವಾದಿತ ಕಥಾಸಂಕಲನವನ್ನು ಮೊದಲನೆಯ ಕುಸುಮವನ್ನಾಗಿ ಕನ್ನಡಿಗರ ಕೈಗೆ ಕೊಟ್ಟಿದೆ. ಇನ್ನೊಂದು ಕಿರಿಯ ಸಾಹಿತ್ಯಿಕ 'ಸುವಿಕಾಸ ಸಾಹಿತ್ಯಮಾಲೆ' ಅಲ್ಲಿಯೇ ತಲೆಯೆತ್ತುವುದರಲ್ಲಿದೆ. ಶ್ರೀ. ಹರಿದಾಸರವರ 'ಸರ್ವೋದಯ ಸಾಹಿತ್ಯಮಾಲೆ'ಯು ಲಲಿತ ಸಾಹಿತ್ಯ ನಿರ್ಮಿತಿಗೆಂದೇ ದುಡಿಯುತ್ತಲಿದೆ.

ಮೈಸೂರಿನ 'ಕಾವ್ಯಾಲಯ' 'ಉಷಾಸಾಹಿತ್ಯಮಾಲೆ' 'ವಿಶ್ವಸಾಹಿತ್ಯಮಾಲೆ' ಇವೆಲ್ಲ ಲಲಿತ ಸಾಹಿತ್ಯದ ನಿರ್ಮಿತಿಗಾಗಿಯೆ ಜನ್ಮತಾಳಿರುವುವು. ಕಾವ್ಯಾಲಯವು ಇತ್ತೀಚೆಗೆ ಬೆಳಕಿಗೆ ತಂದ ಮಹತ್ತ್ವದ ಪುಸ್ತಕವೆಂದರೆ, ಶ್ರೀ. ಕೆ. ವಿ. ಪುಟ್ಟಪ್ಪನವರ 'ಶ್ರೀರಾಮಾಯಣ ದರ್ಶನಂ' ಎಂಬ ಮಹಾಕಾವ್ಯ. ಉಷಾ-ಗ್ರಂಥಮಾಲೆಯು ಕಳೆದ ತಿಂಗಳಲ್ಲಿ, ಪ್ರೊ. ವಿ. ಎಂ. ಇನಾಮದಾರರ 'ಶಾಪ' ಎಂಬ ಸಾಮಾಜಿಕ ಕಾದಂಬರಿಯನ್ನು ಪ್ರಕಟಿಸಿರುವುದಲ್ಲದೆ, ಶ್ರೀಮಾನ್ ಅ. ನ. ಕೃಷ್ಣರಾಯರ 'ನಟಸಾರ್ವಭೌಮ' ಎಂಬ ಲಗಂ ಪುಟಗಳ ಮಹಾಕಾದಂಬರಿಯನ್ನು ಬಿಡುಮುತ್ತೆಂದು ಓದುಗರಿಗೆ ಒದಗಿಸಿರುವುದು.

ಬೆಂಗಳೂರಲ್ಲಿ ಹೆಸರು ಹೇಳುವಂತಹ ಗ್ರಂಥಮಾಲೆಗಳಿಲ್ಲವಾದರೂ, ಪುಸ್ತಕಪ್ರಕಾಶನಮಂದಿರಗಳು ತುಂಬ ಇವೆ. 'ಆನಂದ ಬ್ರದರ್ಸ್' ಎಂಬ ಪ್ರಕಾಶನ ಮಂದಿರವು ಕಳೆದ ತಿಂಗಳಲ್ಲಿ, ಶ್ರೀಮಾನ್ ಅ. ನ. ಕೃಷ್ಣರಾಯರ 'ಹೊಸಲು ದಾಟದ ಹೆಣ್ಣು' ಎಂಬ ಸಾಮಾಜಿಕ ಕಾದಂಬರಿಯನ್ನೂ 'ಶಿಲ್ಪಿ' ಎಂಬ ಲಘುಕಥಾಸಂಕಲನವನ್ನೂ ಪ್ರಕಟಗೊಳಿಸಿದೆ. 'ಸತ್ಯ ಶೋಧನ ಪುಸ್ತಕಾಲಯ' 'ಸುಬೋಧ ಪ್ರಕಟನಾಲಯ' 'ಭಾರತಿ ಪ್ರಕಾಶನ ಮಂದಿರ' ಮೊದಲಾದ ಹಲವು ಸಂಸ್ಥೆಗಳಿಂದ ಪ್ರತಿ ತಿಂಗಳೂ ಪುಸ್ತಕಗಳು ಹೊರಗೆ ಬರುತ್ತಿರುತ್ತವೆ.

ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ಮಂಗಳೂರು, ಉಡುಪಿ, ಪುತ್ತೂರುಗಳು ಲಲಿತಸಾಹಿತ್ಯ ನಿರ್ಮಿತಿಯ ಕೇಂದ್ರಗಳು. ಮಂಗಳೂರಲ್ಲಿ 'ಸಾಹಿತ್ಯಾಂಜಲಿ ಗ್ರಂಥಮಾಲೆ' 'ವಸಂತ ಮಾಲಿಕೆ' ಎಂಬ ಗ್ರಂಥಮಾಲೆಗಳು ಇವೆಯಲ್ಲದೆ, 'ಬಾಲ ಸಾಹಿತ್ಯ ಮಂಡಲ' 'ಶೆಣೈ ಬ್ರದರ್ಸ್' ಮೊದಲಾದ ಪ್ರಕಾಶನ ಮಂದಿರಗಳೂ ಇವೆ. ಪುತ್ತೂರಿನ ಹರ್ಷ ಮುದ್ರಣಾಲಯ ಪ್ರಕಟನಾಲಯ, ಇತ್ತೀಚೆಗೆ ಶ್ರೀಮಾನ್ ಶಿವರಾಮ ಕಾರಂತರ 'ಕರುಳಿನ ಕರೆ' ಎಂಬ ಹೊಸ ಸಾಮಾಜಿಕ ಕಾದಂಬರಿಯನ್ನು ಪ್ರಕಾಶಗೊಳಿಸಿದೆ.

ಈ ಮಾಲೆ-ಮಂದಿರಗಳಲ್ಲದೆ, ವೈಯಕ್ತಿಕವಾಗಿಯೂ ಲಲಿತ-ಸಾಹಿತ್ಯದ ಪ್ರಕಟನಾಕಾರ್ಯ ನಡೆದಿರುವುದು. ಕಳೆದ ತಿಂಗಳೆರಡು ತಿಂಗಳ ವೈಯಕ್ತಿಕ ಪ್ರಕಟನೆಗಳಲ್ಲಿ, ಶ್ರೀಮಾನ್ ಮಾಸ್ತಿ ವೆಂಕಟೇಶಯ್ಯಂಗಾರ್ಯರ 'ಚೆನ್ನಬಸವ ನಾಯಕ' ಎಂಬ ಐತಿಹಾಸಿಕ ಕಾದಂಬರಿ, ಹೆಸರೆತ್ತಿ ಹೇಳುವಂತಹದು. ಇದು ಬಿದನೂರು ಪಾಳೆಯಗಾರರ ಮನೆತನಕ್ಕೆ ಸಂಬಂಧಿಸಿದ ಕಥಾವಸ್ತುವಿನಿಂದ ಕೂಡಿದ್ದು, 'ಶ್ರೀನಿವಾಸ'ರ ಸರಸವಾಣಿಯಲ್ಲಿ ರೂಪುಗೊಂಡಿದೆ. ಸುಮಾರು ೪೫೦ ಪುಟಗಳ ವಿಸ್ತಾರವಾದ ಕಾದಂಬರಿಯಿದು.

ಇವೆಲ್ಲ ಲಲಿತಗ್ರಂಥಗಳು, ಕನ್ನಡ ಆಕಾಶವಾಣಿಯ ಮೂಲಕ ವಿಮರ್ಶೆಗೊಳ್ಳುವುದು ಅತ್ಯವಶ್ಯವಾದ ಸಂಗತಿ. ವಿಮರ್ಶಕರಿಲ್ಲದ ನಾಡಿನ ಸಾಹಿತ್ಯ, ವಿಚಾರಿಗಳಾದ ಹಿರಿಯರಿಲ್ಲದ ಮನೆತನದ ಕಾರಭಾರದಂತಾಗುವುದು. ಸಾಹಿತ್ಯಿಕನಿಗೆ ಸ್ವಾತಂತ್ರ್ಯಬೇಕೆಂಬುದು ನಿಜವಾದರೂ, ಸಮಾಜದ ಸುಖ-ಶಾಂತಿಯ ದೃಷ್ಟಿಯಿಂದ, ಸ್ವೈರವು ಆತನಿಗೆ ಸಲ್ಲದೆಂತಹದು. ಸತ್ಯದರ್ಶನವೇ ಸಾಹಿತ್ಯದ ಕಾರ್ಯವಹುದಾದರೂ ಆ ಸತ್ಯದರ್ಶನ ಸುಖದಾಯಕವಾದುದಿರಬೇಕು; ಶುಭಕಾರಿಯಾದುದಿರಬೇಕು. ಪ್ರಾಕೃತಿಕವಾದ ಕೆಲವೊಂದು ಸತ್ಯಾಂಗಗಳು ವಿಕಾರವಾಗಿ ಕಂಡುದರಿಂದಲೇ, ಸಂಸ್ಕೃತಿಯು— ಮಾನವಹಿತಬುದ್ಧಿಯಿಂದಲೇ— ಅವುಗಳನ್ನು ಮುಚ್ಚಿ ಇರಿಸಿ, ಸುಂದರ ಸತ್ಯವನ್ನೇ ಎದ್ದುಕಾಣುವಂತೆ ಅಲಂಕರಿಸಿ, ಅದನ್ನು ಲೋಕದ ಕಣ್ಣಿಗೆ ಬೀಳುವಂತೆ ಮಾಡಲು ಪ್ರಯತ್ನಿಸಿತು. ಸಂಸ್ಕೃತಿಯ ಈ ಕಾರ್ಯದ ಸಾಧನೆಯಲ್ಲಿ ಲಲಿತ-ಸಾಹಿತ್ಯವೂ ಒಂದು. ಸತ್ಯದ ನಿಜವಾದ ಉಪಾಸಕನಾದ ಮನುವು ಕೂಡ 'ಅಪ್ರಿಯವಾದ ಸತ್ಯವನ್ನು ಎಂದೂ ನುಡಿಯಲಾಗದು' ಎಂದು ಸಾರಿ ಸಾರಿ ಹೇಳಿದ್ದಾನೆ. ಹೀಗಿರುವಾಗ, ಅಪವಾದಾತ್ಮಕವಾದ ಸತ್ಯದ ವಿಚಾರಗಳನ್ನೇ ಮಹತ್ತ್ವದ ಸತ್ಯ-ಸ್ವರೂಪಗಳೆಂದು ಮುಂದಿಟ್ಟು, ಜನಸಾಮಾನ್ಯರನ್ನು ಜೀವನದ ಬಗೆಗೆ ನಿರಾಶರನ್ನಾಗಿಯೂ ಉದಾಸೀನರನ್ನಾಗಿಯೂ ಮಾಡುವುದು, ಸೌಂದರ್ಯ ವಿಧಾಯಕರಾದ ಸಾಹಿತ್ಯಿಕರಿಗೆ ಒಪ್ಪುವ ಶೀಲವೆನಿಸದು.

ಇಂದು ನಮ್ಮ ಸಮಾಜಜೀವನದಲ್ಲಿ ಸುಧಾರಣೆಯಾಗಬೇಕಾಗಿದೆ, ಸರಿ! ನಮ್ಮ ರಾಜಕಾರ್ಯದಲ್ಲಿ ಕಾಲಕ್ಕೆ ತಕ್ಕ ಬದಲಾಪಣೆಗಳಾಗಬೇಕಾಗಿವೆ— ಸರಿ! ಮತ-ಮತಗಳ ಹೆಸರಿನಿಂದ ಹೇಳಿಪ ಆಧ್ಯಾತ್ಮಿಕ ಸತ್ಯ ಅಸಂಪೂರ್ಣವಾದುದಿರಬಹುದು— ಸರಿಯೆ! ಆದರೆ ಇವೆಲ್ಲವುಗಳನ್ನೂ ಸೂಳೆಯರ ಬೀದಿಗಲಹದ ಸಿಡುಕು-ಕಟಕಿ-ನುಡಿಗಳಿಂದ ತಿದ್ದಲಿಕ್ಕೆ ಸಾಧ್ಯವಿರದು. ಕುಲೀನ ಕಾಂತಾಮಣಿಗಳ ಇತ-ಮಿತವಚನಗಳ ರೀತಿಯೇ ಇದನ್ನು ಚೆನ್ನಾಗಿ ತಿದ್ದಬಲ್ಲದು. ಹಿಂದು ಸಮಾಜಸುಧಾರಣೆ, ರಾಜಕೀಯ ಸುಧಾರಣೆ, ಹೊಸ ಮಾನವತೆ— ಇವುಗಳ ಹೆಸರಿನಿಂದ ಹೊರಡುತ್ತಿರುವ ಪ್ರಚಾರ-ಸಾಹಿತ್ಯ, ಹಿಂದಿನ ಕಾಲದ ಮತ-ಮತಾಂತರಗಳ ಪ್ರಚಾರದ ಬಡಿದಾಟಕ್ಕೆ ಯಾವ ರೀತಿಯಲ್ಲಿಯೂ ಕಡಿಮೆಯಾಗಿಲ್ಲ. ಇಂದಿನ ಅನೇಕ ಅರೆತಿಳಿವಳಿಕೆಯವರ ಪ್ರಚಾರಾತ್ಮಕ ಲಲಿತಸಾಹಿತ್ಯ, ಸಮಾಜದಲ್ಲಿ ವರ್ಗಕಲಹಗಳನ್ನು ಹೆಚ್ಚುಹೆಚ್ಚಾಗಿ ಹಬ್ಬಿಸುತ್ತಲಿದೆ. ಹಸುಳೆಗಳಂತಹ ಜನಸಾಮಾನ್ಯರು, ಯಾರ ವಾದ ಸತ್ಯವೆಂಬುದು ತಿಳಿಯದೆ ಗೊಂದಲಗೆಟ್ಟು ನಿಂತಿರುವರು. ಇಂತಹ ಕಾಲದಲ್ಲಿ ಯುಕ್ತಿಯುಕ್ತವಾದ ವಿವೇಚನೆ-ವಿವರಣೆಗಳಿಂದ ತಿಳಿವನ್ನು ಹರಡಿ, ಸಮತೆಯನ್ನು ಕಾಯಬಲ್ಲ ಸಮರ್ಥರಾದ ನ್ಯಾಯಾಧೀಶರೆಂದರೆ, ಸಾಹಿತ್ಯವಿಮರ್ಶಕರು. ಕನ್ನಡನಾಡಿನಲ್ಲಿ, ಅಂತಹ ಸಾಹಿತ್ಯ-ವಿಮರ್ಶಕರು ಹೆಚ್ಚಾಗಬೇಕು.

ಸೌಂದರ್ಯತತ್ತ್ವಗಳನ್ನು ಒರೆಗೆಹಚ್ಚಿ, ಅವುಗಳ ಬಣ್ಣಗಳನ್ನು ನಿರ್ಣಯಿಸಿ, ಆ ಆ ತತ್ತ್ವಗಳ ನಿಜವಾದ ಬೆಲೆಯನ್ನು ಗಟ್ಟಿಗಟ್ಟಿಸಬೇಕಾಗಿದೆ. ವ್ಯವಹಾರಲೋಕದ ಸ್ಥೂಲವಸ್ತುಗಳು ತಂತಮ್ಮ ಯೋಗ್ಯತೆಗೆ ಸರಿಯಾದ ಬೆಲೆಯನ್ನು ಪಡೆದುದರಿಂದ, ನಮ್ಮ ಬಹಿರಂಗದ ವ್ಯವಹಾರ ಸುಸೂತ್ರವಾಗಿ ನಡೆಯುವುದು. ಹಾಗೆಯೆ ಸೌಂದರ್ಯದ ಸೂಕ್ಷ್ಮಲೋಕದಲ್ಲಿಯೂ ಬೇರೆ ಬೇರೆ ವಸ್ತುಗಳು ಒರೆಗೆ ಹತ್ತಿ, ಯೋಗ್ಯತೆ ತಿಳಿದು, ತಕ್ಕ ಬೆಲೆ-ಪಡೆದುಬಿಟ್ಟರೆ, ಮಾನವನ ಮನೋಲೋಕದಲ್ಲಿಯ ಹಲವು ಹೊಡೆದಾಟಗಳು ಮರೆಯಾಗಿ, ಅಂತರಂಗದ ವ್ಯವಹಾರವೂ ಸುಸೂತ್ರವಾಗಿ ಸಾಗಬಹುದು. ನಮ್ಮ ಈ ಆಕಾಶವಾಣಿ, ಕನ್ನಡಿಗರಿಗೆಲ್ಲ ಅಂತಹ ಒರೆಗೆ ಹಚ್ಚಬಲ್ಲ ವಿಮರ್ಶಕ ವಿಧಾತರನ್ನು ಒದಗಿಸುವ ಕಾರ್ಯದಲ್ಲಿ ಯಶಸ್ಸನ್ನು ಪಡೆಯಲಿ!

ಜಯ ಕರ್ನಾಟಕ!

ಭಸಗ್ರಸ್ತ ಆಯುರ್ವೇದ ವಿದ್ವಾನ್ ಐ. ವಿ. ಹಂಡಿಕರ

ಮನೋಹರ {ನಿರ್ಮಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

❁ ನವಯುಗಾರಂಭ ❁

ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ. ಎ., ಬಿ. ಟಿ. ಗೋಕಾಕ,

★

೧

ಬಂದಿದೆ ಹೊಸದಿನ, ಬಂದಿದೆ ಹೊಸದಿನ,
ಬಂದಿದೆ ಹೊಸದಿನ ಭಾರತ ರಾಷ್ಟ್ರಕೆ
ಮೊಳಗುತ ಜಯಭೇರಿ—
ನವಯುಗವನು ಸಾರಿ!

ನವಚೈತನ್ಯವ ನವಶಾಂತಿಯ
ನವಕಾಂತಿಯ ಬೀಜಾ—
ಭಾರತದೀ ತೇಜಾ
ಅಧ್ಯಾತ್ಮಿಕ ಬೀಜಾ!

ಶಾಂತಿ-ಸಹಬಾಳಿಕೆಯ ಜಯಭೇರಿ
ವಿಶ್ವಶಾಂತಿಗಿದು ಹೊಸ ದಾರಿ!
ತಂದಿದೆ ಹೊಸದಿನ ನಾವಿಗೆ ಈ ದಿನ
ಮೊಳಗುತ ಜಯಭೇರಿ—
ನವಯುಗವನು ಸಾರಿ!

೨

ಹಿಂದಿನ ದಿನಗಳ ಕೊಳೆಯನು ತೊಳೆಯುತ
ತಿಳಿತಿಳಿಯಾಗಿಸಿ ಹೊಸದಿನವು—
ಮಾನವಧರ್ಮಕೆ ಪುಣ್ಯತೆಯ ಕಳೆಯನು
ಪ್ರೇಮದಿ ತಂದಿದೆ ಹೊಸದಿನವು!

ನೇಗಿಲ ಯೋಗಿಯ ಯೋಗಸಮಾಧಿಗೆ
ಜೀವನ ತಂದಿದೆ ಹೊಸದಿನವು—
ಹೆಣ್ಣು-ಗಂಡುಗಳ ಸಮಾನ ದೃಷ್ಟಿಗೆ
ಸಮತೆಯ ತಂದಿದೆ ಹೊಸದಿನವು!

ಕಾರ್ಮಿಕರೆಂಬುವ ಕರ್ಮಜೀವಿಗಳ
ಸಂಜೀವನವೀ ಹೊಸದಿನವು;
ಸತ್ಯ-ಪ್ರೀತಿಗಳ ನ್ಯಾಯ-ನೀತಿಗಳ
ನೆಲೆಯನು ಕಂಡಿದೆ ಹೊಸದಿನವು;
ಹಿಂಸಾಯಷ್ಟಿಗೆ ಶಾಂತಿಯ ತುಷ್ಟಿಯ
ತೊಡಿಸಿ ನಂತಿಸುವು ಹೊಸದಿನವು.

ಧರ್ಮವಂತನಿಗೆ ಧರ್ಮದ ಸತ್ರ
ಕರ್ಮಠ ಜನರಿಗೆ ಕರ್ಮದ ನೇತ್ರ
ಎಲ್ಲ ಧರ್ಮಗಳ ಜಾತಿ-ಪಂಥಗಳ
ವಿಶಾಲದೃಷ್ಟಿಗೆ ಹೊಸ ಮಂತ್ರ
ತಂದಿದೆ ಭಾರತ ಹೊಸತಂತ್ರ
ಯುಗಪುರುಷನದೇ ಈ ಯಂತ್ರ!
ನುಡಿಯುತ ಬಂದಿದೆ ಹೊಸದಿನವು—
ಯುಗದಾರಂಭದ ಈ ದಿನವು.

ಭಾರತ ನವಯುಗದಾದೇಶ—
ಭಾರತ ಶಾಂತಿಯ ಸಂದೇಶ!
ಜಗಕಾಣುತ ತಿಳಿಬೆಳಕೊಳು
ಪಡೆ-ಪಡೆವುದು ಶಾಂತಿ—
ಭಾರತದಿ ಕಾಂತಿ—
ಬೆಳಗುತ ಹೊಸದಿನ ಬಂದಿದೆ ಈ ದಿನ
ಮೊಳಗುತ ಜಯಭೇರಿ—
ನವಯುಗವನು ಸಾರಿ!

೩

ಭಾರತರಾಷ್ಟ್ರದ ಭಾಗ್ಯೋದಯದೀ
ತೆರೆದಿಹುದೀ ದಿನ ನೀವೇಳಿ!
ಆಲ್ಲದ ಸಲ್ಲದ ನಡತೆಯ ತೊರೆಯುತ
ಭಾರತೀಯರೇ ನೀವೇಳಿ!

ಅಂಜದೆ ಬೆಂದರೆ ಗಂಧದ ಗುಡಿಯನು
ಮೆರೆಸುತಲೀದಿನ ನೀವೇಳಿ!

'ಸ್ವತಂತ್ರ ಭಾರತ ಚಿರಾಯುವಾಗಲಿ'
ಗರ್ಜನೆಯೊಂದಿಗೆ ನೀವೇಳಿ!
ನಾಡನು ಕಾಯುವ ನಾಡಿನ ಬಂಟರು
ನಾಡನು ಕಟ್ಟುವ ಪಣತೊಡಿರೋ!
ನಾಡ ವೈರಿಗಳ ಮೂಲೋತ್ಪಾಟಕೆ
ಕಂಕಣ ಕಟ್ಟುವ ಪಣತೊಡಿರೋ!

ನಮ್ಮಯ ನಾಡಿದು ನಮ್ಮದೆ ಆಗಿದೆ
ನೆಮ್ಮದಿಗಾಗಿಯೆ ಪಣ ತೊಡಿರೋ!
ಭಾರತೀಯರೇ ಪಣ ತೊಡಿರೋ!

ನಭೋ ಮಂಡಲದಿ ಫಟ ಫಟ ಹಾರುವ
ನಾಡ ಬಾವುಟಕೆ ತಲೆವಾಗಿ—
ತ್ಯಾಗಮೂರ್ತಿಗಳು ನೀವಾಗಿ—
ಎಂಥ ತ್ಯಾಗಕೂ ಮುಂದಾಗಿ—
ಕಂಕಣ ಕಟ್ಟುತ ಬನ್ನಿರಿ ಎನ್ನುವ
ಹೊಸದಿನ ಬಂದಿದೆ ಭಾರತ ರಾಷ್ಟ್ರಕೆ
ಮೊಳಗುತ ಜಯಭೇರಿ—
ನವಯುಗವನು ಸಾರಿ!

೪

'ಜಯಭಾರತ! ಜಯಭಾರತ!
ಜಯಭಾರತ!' ಎಂದು
ಜಯಗೀತವ ಹಾಡು!

ಬಾನಂಚೊಳು ನೆಗೆ ಮಿಂಚಿದೆ
ವಿಜಯೆಧ್ವಜವೆಂದು—
ಶಿರಬಾಗುತ ನೋಡು!
ನವಭಾರತದರುಣೋದಯ-
ವೊಂದಾಗಿದೆ ಸೂರ್ಯೋದಯ.
ಜಯ ಭಾರತ! ಜಯ ಭಾರತ!
ಜಯ ಭಾರತವೆಂದು
ಭಾರತ ನಾಡೊಂದು!
ಎಂದೆನ್ನುವ ಯುಗದಾದಿಯೆ
ಬಂದಿಹುದೋ ಇಂದು—
ಹೊಸ ಯುಗವೇ ಮುಂದು—
ಎಂದೆಂದೂssss—
ಎನ್ನುವ ಹೊಸದಿನ ಬಂದಿದೆ ಈ ದಿನ
ಮೊಳಗುತ ಜಯಭೇರಿ—
ನವಯುಗವನು ಸಾರಿ!

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶೀ. ನಿರ್ಜ ಅಣ್ಣಾರಾಯರು, ಉಗಾರ.

★

(೩) ಸಮ್ಮೇದ ಗಿರಿಯಿಂದ ಶಾಂತಿ-ನಿಕೇತನದ ಕಡೆಗೆ.

ಮಧ್ಯಾಹ್ನದ ಹನ್ನೆರಡು ಗಂಟೆಗೆ 'ಪಾರಿಶ್ವನಾಥ' ನಿಲ್ದಾಣದಲ್ಲಿ ನಾವು ಬಂದಿಳಿದೆವು. ಅದು ಈಸ್ಟ್-ಇಂಡಿಯನ್ ರೇಲ್ವೆಯ ಒಂದು ಚಿಕ್ಕ ನಿಲ್ದಾಣವು. ಸಮ್ಮೇದ ಶಿಖರನ ಯಾತ್ರಿಗೆ ಬರುವ ಪ್ರಯಾಣಿಕರ ಅನುಕೂಲಕ್ಕಾಗಿ ರೇಲ್ವೆ ಕಂಪನಿಯವರು ಈ ನಿಲ್ದಾಣವನ್ನು ಇಲ್ಲಿ ನಿರ್ಮಿಸಿರುವರು. ಸಮೀಪದಲ್ಲಿ 'ಇಸರಿ' ಎಂಬ ಚಿಕ್ಕ ಹಳ್ಳಿ ಇರುವುದರಿಂದ, ಇದಕ್ಕೆ 'ಇಸರೀ ಸ್ಟೇಶನ್' ಎಂದೂ ಅಲ್ಲಿಯ ಜನರು ಹೇಳುವರು. ಸಮ್ಮೇದಗಿರಿಯಲ್ಲಿ ತಾನೆಯವರಾಗಿ ಪಾರಿಶ್ವನಾಥ ತೀರ್ಥಂಕರರು ಮುಕ್ತರಾದುದರಿಂದ, ಆ ಪರ್ವತವು 'ಪಾರಿಸನಾಥ ಹಿಲ್' ಎಂದು ಆ ಭಾಗದಲ್ಲಿ ಪ್ರಸಿದ್ಧವಾಗಿದೆ. ಆದರಿಂದ ಆ ನಿಲ್ದಾಣಕ್ಕೂ 'ಪಾರಿಸನಾಥ' ಎಂದು ಹೆಸರಿರುವುದು ಉಚಿತವಾಗಿದೆ.

ಅಲ್ಲಿಂದ ಸಮ್ಮೇದಾಚಲವು ಹನ್ನೆರಡು ಮೈಲಿನ ಮೇಲಿದೆ. ಅಲ್ಲಿಗೆ ಹೋಗುವ ಮೋಟಾರಿನಲ್ಲಿ ಹತ್ತಿ, ಮಧುಬನದ ಕೂಟಗೆ ಬಂದು ಇಳಿಯಬೇಕು. ಮುಂದೆ ಎರಡು ಮೈಲು ನಡೆದು, ಮಧುಬನವನ್ನು ಸೇರಬೇಕಾಗುವುದು. ಮಧುಬನವು ಸಮ್ಮೇದಗಿರಿಯ ತಪ್ಪಲಲ್ಲಿರುವ ಒಂದು ನಿವಾಸಸ್ಥಾನವು. ಅಲ್ಲಿ ಯಾತ್ರಿಕರು ತಂಗಿದುಕೊಳ್ಳುವುದಕ್ಕಾಗಿ ಹಲವು ಧರ್ಮಶಾಲೆಗಳಿವೆ. ಅನೇಕ ಮಂದಿರ ಜಿನಮಂದಿರಗಳೂ ಉಂಟು. ಅವು **ತೇರಾಪಂಥಿ, ಬೀಸಪಂಥಿ** * ಎಂಬೆರಡು ಜೈನ ಪಂಥಗಳವರಿಂದ ನಿರ್ಮಾಣಗೊಂಡುವು. ಶ್ವೇತಾಂಬರ-ದಿಗಂಬರರೆಲ್ಲರೂ ಈ ಪವಿತ್ರ ಸ್ಥಾನದ ದರ್ಶನಕ್ಕಾಗಿ ಬರುವರು.

ಗಿರಿಡಿಯ ಬಸ್ಸು ನಮ್ಮನ್ನು ಕಾಡಿನ ಮಧ್ಯದಲ್ಲಿರುವ ಎರಡು ಮಂದಿರಗಳ ಕೂಟೊಂದರಲ್ಲಿ ಬಿಟ್ಟು, ಧೂಳನ್ನೆಬ್ಬಿಸುತ್ತ ಮುಂದೆ ಸಾಗಿ ಬಿಟ್ಟಿತು. ನಿರ್ಜನವಾದ ಪ್ರದೇಶ. ತಲೆಯೊಡೆಯುವಂಥ

---

* ಮಹಾವೀರರ ತಿಥಿಲಾಚಾರನ ವಿರುದ್ಧ ದಿಗಂಬರ ಸಂಪ್ರದಾಯದಲ್ಲಿ ಒಂದು ಹೊಸ ಪಂಥವು ೧೭ ನೆಯ ಶತಮಾನದ ಕೊನೆಯ ಭಾಗದಲ್ಲಿ ಪ್ರಾರಂಭವಾಯಿತು. ಅದೇ ತೇರಾಪಂಥವು. ಭಟ್ಟಾರಕರ ಪ್ರಾಬಲ್ಯವನ್ನು ತಪ್ಪಿಸುವುದಕ್ಕೆ ಆ ಮೇಲೆ ಬೀಸಪಂಥವೆಂಬ ಹೆಸರಾಯಿತು.

ಬಿಸಿಲಲ್ಲಿ ಬಳಲಿ ಕಂಗೆಟ್ಟ ಭಾವುಕ ಯಾತ್ರಿಕರು ಅನಾಯಾಸವಾಗಿ ದೊರೆತ ಕಾರನ್ನು ಕಂಡು, ದೇವರೇ ಇದನ್ನು ಕಳುಹಿಸಿರಬಹುದೆಂದು ಭಾವಿಸಿರಬಹುದಲ್ಲವೆ?

★

ಜೂನ್ ತಿಂಗಳ ಬಿಸಿಲು. ಸುತ್ತಲೂ ತರು-ಲತೆಗಳಿಂದ ತುಂಬಿದ ಪರ್ವತಶ್ರೇಣಿಗಳು. ಸಮ್ಮೇದಗಿರಿಯು ಕಡೆಗೆ ಹೋದ ದಾರಿಯು ಒಂದೆರಡು ಫರ್ಲಾಂಗುಗಳ ವರೆಗೆ ಮಾತ್ರ ಕಾಣುತ್ತಿದೆ: ಮುಂದೆ ಗಿಡಗಳ ಗುಂಪಿನಲ್ಲಿ ಮಾಯವಾಗಿದೆ. ದೂರದಲ್ಲಿ ಗಿರಿಯ ತಲೆಯಿಂದ ಇಳಿದ ಕೆಂಪುದಾರಿಯೊಂದು— ಸಿಂಧೂರವನ್ನು ಧರಿಸಿದ ನಿಸರ್ಗ ರಮಣಿಯ ತಲೆಯ ಬೈತಲೆಯಂತೆ—ಕಂಗೊಳಿಸುತ್ತಿದೆ.

" ಅದೇ ಶಿಖರಜಿಯನ್ನೇರುವ ದಾರಿಯಾಗಿರಬೇಕು! " ಎಂದರು ಹಿರಿಯರು. ಗಂಟಲು ಒಣಗಿತ್ತು. ಅವರೂ ಮುಖದಲ್ಲಿ ಉತ್ಸಾಹವಿಲ್ಲ.

" ಮೊದಲು ಒಂದು ನೆಲೆಯನ್ನು ಕಾಣೋಣ. ಆ ಮೇಲೆ ಮುಂದಿನ ವಿಚಾರ! " ಎಂದಳು ತಾಯಿ. ಅವಳ ಮುಖದಲ್ಲಿ ಸ್ವಲ್ಪ ಹೆದರಿಕೆಯು ಜವರಿಸಿತ್ತು.

" ಇಂಥಾ ಪುಣ್ಯಭೂಮಿಯಲ್ಲಿ ಅಂಥದೇನೂ ಆಗುವುದಿಲ್ಲ ಬಿಡು! " ಎಂದು ತಂದೆ ಧೈರ್ಯ ಹೇಳಿದರು.

" ಯಾವ ನಾಡೋ ಯಾವ ಕಾಡೋ! ಬಂದು ಬಿದ್ದೀವಿ ನೂರು ಮಂದಿ! ಅದೇನೋ ಅಂತಾರಲ್ಲ ... "

ಹೀಗೆ ಹಿರಿಯರ ಮಾತು ನಡೆಯುವಾಗ, ನಾನು ಗಿರಡಿಯ ದಾರಿಯನ್ನು ನಿರೀಕ್ಷಿಸುತ್ತಿದ್ದೆ. ಯಾವನಾದರೂ ಒಬ್ಬ ಮನುಷ್ಯ ಸಿಕ್ಕರೆ, ನಮ್ಮ ಸಾಮಾನು ಹೊರಿಸಿಕೊಂಡು ಹೋಗಲಿಕ್ಕೆ ಒಳ್ಳೆಯದಾಗುವುದೆಂದು ಯೋಚಿಸಿದ್ದೆ. ಆದರೆ ಆ ನಿರ್ಜನ ಪ್ರದೇಶದಲ್ಲಿ ಯಾರೂ ಸುಳಿಯುವಂತೆ ತೋರಲಿಲ್ಲ. ನಿನ್ನೆಯಿಂದಲೂ ಸ್ನಾನ-ಊಟಗಳಿರಲಿಲ್ಲ. ಮಡ್ಡಿಗೊಂದು ದೊಡ್ಡ ದೊನ್ನೆಯ ತುಂಬ ಕೊಟ್ಟ ನೀರಲ ಪಣ್ಣುಗಳನ್ನು ತಿನ್ನುತ್ತ, ಮುಖ ಮುಮದುರಿಸಿಕೊಂಡು ತುಸು ಹೊತ್ತು ನಿಂತೆವು. ಬಿಸಿಲೇನೋ ಬೆಳೆಯುತ್ತಲೇ ಇತ್ತು. ಇಳಿಹೊತ್ತಿನ ವರೆಗೆ ಅಲ್ಲಿಯೇ ಇರಬೇಕೆಂದರೆ ಹೊಟ್ಟೆಯಲ್ಲಿ ಹಸಿವು. ಮೇಲೆ ಗಂಟಲು ಒಣಗಿತ್ತು. ಕರ್ಕವೃತ್ತದ ನೆರೆಯೊಳಗಿನ ಬಿಸಿಲದು! ಕೇಳುವುದೇನು? ಒಬ್ಬೊಬ್ಬರೂ ಒಂದೊಂದು ಗಂಟನ್ನು ಹೊತ್ತುಕೊಂಡು ಸಾಗಿದೆವು, ಸಮ್ಮೇದ ಗಿರಿಯೆಡೆಗೆ!

ಸಮ್ಯಕ್ತ್ವದ ದಾರಿಯಲ್ಲಿ ಸಾಗುವುದು ಎಷ್ಟು ಕಷ್ಟಕರವೆಂಬುದರ ಪ್ರತೀಕವಾಗಿದ್ದಿತು ನಮ್ಮ ಪಯಣ. ಶಂಡೆಯ ತಲೆಯ

ಸುಖಕರವಾದ ವಸತಿ ! .... ರುಚಿಕರವಾದ ಊಟ !

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ ಸಮೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ

ನೇಲೊಂದು ಟ್ರಂಕು, ನನ್ನ ಹೆಗಲ ಮೇಲೆ ಹಾಸಿಗೆಯ ಸುರುಳಿ, ತಾಯಿಯ ಬಗಲಲ್ಲೊಂದು ಪ್ರವಾಸ ಸಾಹಿತ್ಯದ ಗಂಟು. ಒಬ್ಬರ ಹಿಂದೊಬ್ಬರು ಸಾಲಾಗಿ ನಡೆದಿದ್ದೆವು. ಎರಡು ಮೈಲಿನ ದಾರಿಯು ಎರಡು ಯೋಜನದಂತಾಗಿದ್ದಿತು. ಬಿಸಿಲಿನಿಂದ ಕಂಗೆಟ್ಟು ಕಳವಳಿಸುತ್ತ ತಳಮಳಿಸುತ್ತ ಸಾಗಿದ್ದೆವು. 'ಹಿರಿಯರನ್ನು ಬಿಸಿಲಲ್ಲಿ ನಡೆಯಿಸಬೇಕಾಯಿತಲ್ಲ!' ಎಂದು ಮನದಲ್ಲಿಯೇ ಕೊರಗುತ್ತಲಿದ್ದೆ.

ಸಪ್ಪಳಿಲ್ಲದೆ ಕಾರೊಂದು ಹಿಂದಿನಿಂದ ಬಂದು, ಗಕ್ಕನೆ ನಮ್ಮ ಹತ್ತಿರ ನಿಂತು ಬಿಟ್ಟಿತು! ಒಂದು ಕ್ಷಣ ನಮ್ಮ ಕಣ್ಣುಗಳನ್ನೇ ನಾವು ನಂಬದಾದೆವು.

" ಯಾತ್ರೆಗಾಗಿ ಬಂದಿರುವಿರಾ ? " ಕಾರಿನಲ್ಲಿ ಕುಳಿತ ಶೀಖ ಸಾಹೇಬನೊಬ್ಬ ಕೇಳಿದ.

ಕೆಂಪು ಅಳು, ಕಪ್ಪು ಗಡ್ಡ, ತಲೆತುಂಬ ರಣಗೂದಲು, ಅವು ಅರ್ಧ ಮರ್ಧ ಮುಚ್ಚುವಂತೆ ಸುತ್ತಿದ ಹಸಿರು ಪಟಕೆ. ಸ್ವತಃ ಕಾರು ನಡೆಯಿಸುತ್ತಿರುವ. ಕಾರಿನಲ್ಲಿ ಹಿಮ್ಮಗ್ಗಲು ನವದಂಪತಿಗಳು! ಬಳ್ಳಿಯಂತೆ ಬಳಕುತ್ತಿರುವ ತೆಳುಕಾಯದ ಹೊಸಯುಗದ ತರುಣ-ತರುಣಿಯರು! ಗೊಂಬೆಗಳಂತೆ ಕುಳಿತಿದ್ದಾರೆ.

" ಅಹುದು " ಎಂದೆ ನಾನು.

" ದಕ್ಷಣ ದೇಶದಿಂದ ಬಂದಿರುವಿರೇನೋ ? "

" ಅಹುದು, ಕರ್ನಾಟಕದಿಂದ ಬಂದಿದ್ದೇವೆ. "

" ಶ್ರವಣ ಬೆಳಗೊಳದ ಗೊಮ್ಮಟ ಸ್ವಾಮಿಯ ನಾಡೊ ? "

" ಅಹುದು, ಅದೇ ಕರ್ನಾಟಕ...."

" ಒಳಗೆ ಬನ್ನಿ ! "

ಎಂದು ಆದರದಿಂದ ಕಾರಿನಲ್ಲಿ ಕೂಡಲಿಕ್ಕೆ ಹೇಳಿದ. ಕೂಡಲೆ ಹಿಂದೆ ಕುಳಿತ ತರುಣ ಕೆಳಗೆ ಇಳಿದು, ನಮ್ಮ ಸಾಮಾನುಗಳನ್ನು ಕಾರಿನ ಹಿಮ್ಮಗ್ಗಲಲ್ಲಿ ವ್ಯವಸ್ಥಿತ ರೀತಿಯಿಂದ ಇಟ್ಟ. ಆಗ ನಮ್ಮ ಕಾಲೊಳಗಿನ ಕೆರವುಗಳು ಅವರ ದೃಷ್ಟಿಗೆ ಬಿದ್ದುವು.

" ಕಾಲೊಳಗೆ ಜೋಡು ಮೆಟ್ಟಿರುವಿಲ್ಲ ! " ಬೆರಗಿನಿಂದ ಅವರು ಉದ್ಗಾರ ತೆಗೆದರು.

ಅವರ ಮಾತಿನ ಅರ್ಥ ನಮಗೆ ಹೊಳೆಯಲಿಲ್ಲ. ಅದರೂ ಹಿರಿಯರು ಕಾಲಮರಿಗಳನ್ನು ಬಿಟ್ಟು, ಬರಿಗಾಲಿನಿಂದ ಕಾಯ್ದ ನೆಲದ ಮೇಲೆ ನಿಂತರು.

" ಪವಿತ್ರ ಭೂಮಿಯಿಬು ! ಇಲ್ಲಿ ಪಾದರಕ್ಷೆಗಳನ್ನು ಉಪಯೋಗಿಸುವಂತಿಲ್ಲ. ತೀರ್ಥಂಕರರು ವಿಹರಿಸಿದ ಸ್ಥಾನವಲ್ಲವೆ ? ' ಎಂದು ತಿಳಿಸಿ ಹೇಳುವ ರೀತಿಯಲ್ಲಿ ಕೇಳಿದರು.

ಅವರ ಕಾಲೊಳಗಿದ್ದ ಚಪ್ಪಲುಗಳ ಕಡೆಗೆ ನನ್ನ ದೃಷ್ಟಿ ಹೋಯಿತು.

" ಯಾತ್ರಿಕರು ಮಾತ್ರ ಹಾಗೆ ಮಾಡುವರು ! " ಎಂದ ಅವರು ನಕ್ಕರು.

ತಂದೆಯವರು ಏನೋ ತಪ್ಪು ಮಾಡಿದವರಂತೆ : " ನಮಗೊತ್ತಿಲ್ಲ.... " ಎಂದು ವಿನಯದಿಂದ ಹೇಳಿದರು.

ಆ ಡಿವ್ಹಿಜನಲ್ ಆಫೀಸರರ ಕಾರಿನಲ್ಲಿ ಕುಳಿತು, ನಾವು ಮಧುಬನವನ್ನು ತಲುಪಿದೆವು. ನಾವಾಗ ಒಂದೇ ಮನೆಯವರಂತಾದೆವು. ಅಲ್ಲಿಯ ಮುನೀಮರು ನಮ್ಮನ್ನು ಆದರದಿಂದ ಸ್ವಾಗತಿಸಿದರು. ಅಕಾಲದಲ್ಲಿ ಯಾತ್ರಿಕರಾಗಿ ಹೋದ ನಮ್ಮನ್ನು ಕಂಡು ಬೆರಗಾದರು. ಚಳಿಗಾಲವೇ ಯಾತ್ರೆಗೆ ಅನುಕೂಲವೆಂದು ಸೂಚಿಸಿದರು. ಮಗಳು-ಅಳಿಯಂದಿರನ್ನು ಕರೆದುಕೊಂಡು ಬಂದ ಆ ಭಾಗದ ಡಿವ್ಹಿಜನಲ್ ಆಫೀಸರರ ಜೊತೆಗೆ ನಾವು ಅಂದು ಅಲ್ಲಿಯೆ ಮುನೀಮನ ಆತಿಥ್ಯವನ್ನು ಸ್ವೀಕರಿಸಿದೆವು. ಅವರ ಕಾರಿನಲ್ಲಿಯೇ ಬಂದಿರಲ್ಲನೆ ನಾವು ?

ಸಮ್ಮೇದಗಿರಿಯು ಬಿಹಾರ ಪ್ರಾಂತದ ಹಜಾರಿಬಾಗ ಜಿಲ್ಲೆಯಲ್ಲಿದೆ. ಇದೇ 'ಶಿಖರಜಿ' ಎಂಬ ಹೆಸರಿನಿಂದ ಜೈನ ಸಮಾಜದಲ್ಲಿ ಪ್ರಖ್ಯಾತವಾಗಿದೆ. ಪ್ರೀವಿ ಕೌನ್ಸಿಲ್ ಅಪೀಲ ನಂ. ೧೨೧— ಸನ್ ೧೯೩೩ನೆಯದರ ನಿರ್ಣಯದಲ್ಲಿ, ಈ ಪರ್ವತದ ವಿಷಯಕ್ಕೆ ಹೀಗೆ ಹೇಳಿದೆ:—" ಪಾರ್ಶ್ವನಾಥ ಪರ್ವತದ ಮೇಲಿರುವ ಜಿನ-ಮಂದಿರಗಳು ಬಹಳ ಪ್ರಾಚೀನವಾಗಿವೆ. ಈ ಪರ್ವತದ ಬಗ್ಗೆ

ಪವಿತ್ರ ಭಾವನೆಯು ಎಂದಿನಿಂದ ಉಂಟಾಯಿತೆಂಬುದರ ಬಗ್ಗೆ ಇರುವ ಇತಿಹಾಸಜ್ಞಾನವು ತೀರ ಕಡಿಮೆಯಾಗಿದೆ. ಪರ್ವತವು ೨೫ ಚೌರಸ ಮೈಲು ವಿಸ್ತಾರವಾಗಿದೆ. ಅದರ ಎತ್ತರವು ಸಮುದ್ರ ಸಪಾಟಿಯಿಂದ ೪೫೦೦ ಫೂಟು ಎತ್ತರವಾಗಿದೆ. ಲೆಫ್ಟಿನೆಂಟ್ ಬೀಡಲನು ಸನ್ ೧೮೪೬ ರಲ್ಲಿ ಈ ಪರ್ವತವನ್ನು ಸಂದರ್ಶಿಸಿದನು. ಆಗ ಇದು ಗಿಡಗಂಟೆಗಳಿಂದಲೂ ಕಾಡುಪಶುಗಳಿಂದಲೂ ವ್ಯಾಪ್ತವಾಗಿದ್ದಿತು. ಕೆಲವು ಕಡೆಗೆ ಮಾತ್ರ ಕಾಡುಜನರ ಗುಡಿಬೆಟ್ಟುಗಳಿದ್ದುವು. ಆದರೂ ಪ್ರತಿವರ್ಷ ಜನೆವರಿ ತಿಂಗಳಲ್ಲಿ ಈ ಪರ್ವತದ ಮೇಲೆ ೧೫ ದಿನಗಳ ವರೆಗೆ ದೊಡ್ಡ ಜಾತ್ರೆಯು ನೆರೆಯುತ್ತಿದ್ದಿತು. ಮಹಾಕವಿ ಬನಾರಸೀದಾಸನು ಕ್ರಿ. ಶ. ೧೬೧೫ ರಲ್ಲಿ ತನ್ನ ಅರ್ಧಕಥಾನಕ-ಎಂಬುದರಲ್ಲಿ, ಶಿಖರಜಿಯಾತ್ರೆಯ ವರ್ಣನೆಯನ್ನೂ ಮಾಡಿದ್ದಾನೆ. ಉತ್ತರ ಹಿಂದುಸ್ತಾನದ ಜೈನ ಸಾಹಿತ್ಯದಲ್ಲಿ ಈ ಸ್ಥಾನದ ಮಹತ್ತ್ವವನ್ನು ಹಲವು ಕಡೆಗೆ ಹೇಳಿದ್ದುದು ಕಂಡು ಬರುತ್ತದೆ.

ಸಮ್ಮೇದ ಶಿಖರ ಪರ್ವತದ ಮೇಲೆ, ಮುಕ್ತಾತ್ಮರ ಚರಣ ಚಿಹ್ನೆಗಳು ಮಾತ್ರ ಇವೆ. ಅವುಗಳ ಮೇಲೆ ನಿಷಿಧಿಗಳನ್ನು—ಕಲ್ಲಿನ ಮಂಟಪಗಳನ್ನು—ಇತ್ತೀಚೆಗೆ ಕಟ್ಟಲಾಗಿದೆ. ಶ್ವೇತಾಂಬರರು ಒಂದೆರಡು ಜೀನಮಂದಿರಗಳನ್ನು ಕಟ್ಟಿಕೊಂಡಿದ್ದಾರೆ. ಇಲ್ಲಿ ಇಪ್ಪತ್ತು ಜನ ತೀರ್ಥಂಕರರು ನಿರ್ವಾಣ ಹೊಂದಿದ್ದರಿಂದ, ಇದು ಅತಿ ಪವಿತ್ರ ಕ್ಷೇತ್ರವೆನಿಸುತ್ತಿದೆ. ಒಂದೊಂದು ಗಿರಿಶಿಖರದ ಮೇಲೆ ಒಬ್ಬೊಬ್ಬ ತೀರ್ಥಂಕರರು ತಪಸ್ಸು ಮಾಡಿ ಮುಕ್ತರಾಗಿದ್ದಾರೆ. ಅದರಿಂದ ಎಲ್ಲೆಲ್ಲಿ ಪಾದಚಿಹ್ನೆಗಳನ್ನೂ ನಿರ್ಮಿಸಲಾಗಿದೆ. ಇವೆಲ್ಲವುಗಳ ದರ್ಶನ ತಕ್ಕೊಂಡು ತಿರುಗಿ ಮಧುಬನಕ್ಕೆ ಬರಬೇಕಾದರೆ, ೧೫-೨೦ ಮೈಲುಗಳಷ್ಟು ನಡೆಯಬೇಕಾಗುವುದು. ಸುಮಾರು ಆರು ಮೈಲು ಮೇಲೆ ಹತ್ತುವ ದಾರಿಯಾಗುತ್ತದೆ; ಅಲ್ಲಿ ಇಪ್ಪತ್ತು ಶಿಖರಗಳನ್ನು ಸುತ್ತಲಿಕ್ಕೆ ಆರು ಮೈಲು ನಡೆಯಬೇಕಾಗುವುದು. ಉಳಿದುದು ಮರಳಿ ಬರುವ ದಾರಿಯು. ಬೆಳಗಿನ ನಾಲ್ಕು ಗಂಟೆಗೆ ಎದ್ದು ಹೋದರೆ, ಮಧ್ಯಾಹ್ನದ ಮೂರು ಗಂಟೆಗೆ ತಿರುಗಿ ನಿವಾಸಸ್ಥಾನವನ್ನು ಬಂದು ಸೇರಬಹುದು. ಎಲ್ಲ ಶಿಖರಗಳಲ್ಲಿ ಪಾರ್ಶ್ವನಾಥ ಪಾದುಕೆಗಳು ಎಲ್ಲಕ್ಕೂ ಎತ್ತರವಾಗಿದೆ. ಅಲ್ಲಿ ಹೋಗಿ ನಿಂತ ಯಾತ್ರಿಕರು ತಮ್ಮ ದೇಹವನ್ನೆಲ್ಲ ಮರೆತು ಬಿಡುವರು! ಅಷ್ಟು ಎಲ್ಲಿಯ ಸೃಷ್ಟಿ ಸೌಂದರ್ಯವು ಮೋಹಕವಾಗಿದೆ. ದೂರದ ಬಯಲುಗಳಲ್ಲಿಯ ಭತ್ತದ ಪೈರುಗಳು ಅಂಗೈಯಗಲ ಕಾಣುವುವು. ಸುತ್ತಲೂ ಪಚ್ಚೆವರ್ಣದ ಗಿರಿಶಿಖರಗಳು; ಹಸಿರು ರತ್ನದ ರಾಶಿಗಳು. ಅವುಗಳ ಮೇಲೆ ನಿಷಿಧಿಗಳು. ತಿಳಿಮೋಡಗಳು ಹಿಂಜಿದ ಅರಳಿಯ ರಾಶಿಯಂತೆ ತೆರೆತೆರೆಯಾಗಿ, ಸುಳಿಗಾಳಿಗೆ ಕೆಳಗಿನಿಂದ ಮೇಲೇರಿ ಬಂದು, ತೀರ್ಥಂಕರರ ಪದಕಮಲಗಳನ್ನು ತೊಳೆದು ಸಾಗುತ್ತವೆ. ಮುಗಿಲುಗಳಿಗೂ ಮೇಲೆ ನಾವು! ಅಲ್ಲಿ ಹೋದಾಗ ನಮ್ಮ ದಿನದ ಬಾಳು ಬೀಳಾಗಿ ತೋರುವುದರಲ್ಲಿ ಅಚ್ಚರಿಯಿಲ್ಲ. ಎಂಥ ಮನದಲ್ಲಿಯೂ ಸಮತೆ ನೆಲಸುವುದು. ಕೆಳಗಿರುವ ವಿಸ್ತಾರವಾದ ಭತ್ತದ ಗದ್ದೆಗಳು ಕೆರೆಯವಾಗಿ ತೋರುವ ದೃಶ್ಯವು, ಸಂಸಾರದ ಅಲ್ಪತೆಯನ್ನು ದೃಷ್ಟಾಂತಿಸುವಂತೆ ಎನಿಸುವುದು. ವೈರಾಗ್ಯ ಭಾವನೆಯು ಹುಟ್ಟುವುದು. ಮನಸ್ಸು ಸಮ್ಯಕ್ತ್ವದಲ್ಲಿ ನೆಲೆಸುವುದು. ಎಂತಲೇ ಅನೇಕ ಜನ ಸಾಧಕರು ಇಲ್ಲಿ ಹೋಗಿರುತ್ತಾರೆ. ೧೦೮ ಸಲ ದರ್ಶನವನ್ನು ಮಾಡಿಯೇ ಊರಿಗೆ ಮರಳುವೆನೆಂದು ಮಧುಬನದಲ್ಲಿಯೇ ತಳವೂರಿದ ಬ್ರ. ಚಂಚಲಾಬಾಯಿಯ—ಅರುವತ್ತು ವರ್ಷದ ಮುದುಕಿ—ಮನದ ಒಲವೂ, ಪಾರ್ಶ್ವನ ಪಾದಗಳ ಮುಂದೆ ಕುಳಿತಾಗ ನಮಗೆ ಅರ್ಥವಾಗುವುದು. ಅವಳ ನಿಷ್ಠೆಗೆ ಮನಸ್ಸು ಸೋಲುವುದು!

ಮೂರು ದಿನಗಳ ಅವಧಿಯಲ್ಲಿ ಎರಡು ಸಲ ಬೆಟ್ಟ ಹತ್ತಿ ಇಳಿಯಬೇಕಾದರೆ ನಮಗೆ ಸಾಕು ಬೇಕಾಗಿ ಹೋಯಿತು. ಮೂರನೆಯ ದರ್ಶನವನ್ನು ಮಧುಬನದಲ್ಲಿಂದಲೇ ಕೈಮುಗಿದು ತೀರಿಸಿದೆವು. ಮಧುಬನದಲ್ಲಿಯ ಭವ್ಯ ಜೀನಮಂದಿರಗಳ ದರ್ಶನದಿಂದ ಪುನೀತರಾದೆವು. ನಾಲ್ಕನೆಯ ದಿನ, ಮರಳಿ ಪಾರ್ಶ್ವನಾಥ ನಿಲ್ದಾಣಕ್ಕೆ ಹೋಗುವ ಬಸ್ಸನ್ನು ಹಿಡಿಯುವುದಕ್ಕಾಗಿ, ಒಬ್ಬ ಕೂಲಿಯಾಳನ್ನು ಮಾಡಿಕೊಂಡು ಅಲ್ಲಿಂದ ಹೊರಟೆವು.

ಆ ಕೂಲಿಯವನು 'ತೂರಯಾ' ಎಂಬ ಪಂಗಡಕ್ಕೆ ಸೇರಿದವನು. ಬಸದಿಯಲ್ಲಿ ವಾದ್ಯಗಳನ್ನು ಬಾರಿಸುವುದು ಅವನ ಕುಲದ

ಮಲೇರಿಯಾ
ಇನ್ ಪ್ಲಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ—ಬಡಬಗ್ಗರ—ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೩.

'ಬಗನ' ಬಾಲಾಮೃತ

ಮಕ್ಕಳ ಸಧೃಡತೆಗಾಗಿ 'ಬಗನ' ಬಾಲಾಮೃತ-ವನ್ನು ಉಪ-ಯೋಗಿಸಿರಿ.

ಮುಖವಾಗಿ ಮಕ್ಕಳ ಯಕೃತ ಮತ್ತು ಪಿಷ್ಟ ಸರಿಯಾಗಿ ಇಟ್ಟು ಬೇಕು. ಅಂದರೆ ಎವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಸ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಕಸಬು. ಅವನಲ್ಲಿರುವ ನಮ್ರತೆ-ಸೇವಾಭಾವಗಳನ್ನು ನಾವೆಂದಿಗೂ ಮರೆಯೆವು. ಮೂರಾಣೆಗಳಿಗೆ ಮೂರು ಮೈಲು ಭಾರ ಹೊತ್ತು ಕೊಂಡು ಬರಲಿಕ್ಕೆ ಸಿದ್ಧನಾದ ಅವನ ದೈನ್ಯತೆಯು ನನ್ನ ಮನ-ಸ್ಸನ್ನು ಕರಗಿಸಿತು. ದಾರಿಯುದ್ದಕ್ಕೂ ಅವನ ಸಂಸಾರದ ಸ್ಥಿತಿಗತಿ-ಗಳನ್ನು ಕೇಳಿಕೊಳ್ಳುತ್ತ ಬಂದೆ. ತೀರ ಬಡ ಸಂಸಾರವದು. ಅವರ ಜನಾಂಗವೆಲ್ಲವೂ ಅಂಥದೇ ಅಂತೆ. ದೇಶಬಿಟ್ಟು ಬೇರೆಕಡೆಗೆ ಹೋಗಿ ದುಡಿದು ಸುಖವಾಗಿರಲು ಒಪ್ಪುವುದಿಲ್ಲ. ಆ ಪ್ರದೇಶದಲ್ಲಿ ವಾಸಿಸುವ 'ಸಂಥಾಲ' ಎಂಬ ಜನರ ಸ್ಥಿತಿಯೂ ಹೀಗೆಯೇ ಇದೆ. ಇವರೆಲ್ಲರು ತಮ್ಮ ಬಡತನವನ್ನು ಮರೆಯಲಿಕ್ಕೆ ಸುಮ್ಮ ಸೇವಿಸುವರು. ಎಂಥಲೇ ಪ್ರತಿಯೊಂದು ಬಸದಿಯ ಬಾಲಗಿಲ್ಲಿ ಮದ್ಯ ಸೇವಿಸಿದವರು ಒಳಗೆ ಪ್ರವೇಶಿಸಕೂಡದೆಂದು 'ಮನಾಯಿ' ಯ ಬೋರ್ಡು ಬರೆದು ಹಚ್ಚಿದುದನ್ನು ಕಾಣುತ್ತೇವೆ.

ನಮ್ಮ ಸಾಮಾನುಗಳನ್ನು ಇಳಿಸಿದಾಗ ಆ ಕೂಲಿಯವನ ಕೈಯಲ್ಲಿ ಎಂಟಾಣೆಗಳನ್ನು ಇಡಲು, ಅವನು ಅದನ್ನು ಬೆರಗಿನಿಂದ ತಕ್ಕೊಂಡ; ಕಣ್ಣರಳಿಸಿ ನಮ್ಮನ್ನು ನೋಡಿದ. ಆಗ ಅವನ ಮುಖದಲ್ಲಿ ಮೂಡಿದ ಆನಂದವನ್ನು ಕಂಡು, ಪಾರ್ಶ್ವನ ಪಾದ ಗಳನ್ನು ಕಂಡಾಗಿನಷ್ಟು ಸಂತೋಷ ನನಗಾಯಿತು; ತಾಯಿಗೂ ಆಗಿರಬೇಕು.

"ಇನ್ನೆರಡು ಆಣಗಳನ್ನು ಕೂಡು ಬಾಪ!" ಎಂದಳು ತಾಯಿ. ನಾನು ಮತ್ತೆರಡು ಆಣೆಗಳನ್ನು ಕೊಡಲಿಕ್ಕೆ ಹೋದೆ. ಅವನ ಸ್ವೀಕರಿಸದೆ ತಂದೆಯವರನ್ನು ತೋರಿಸಿ ಹೇಳಿದ:—

"ಹಾದಿಯಲ್ಲಿ ಈ ಹಿರಿಯರೇ ಹೆಚ್ಚಾಗಿ ಸಾಮಾನು ಹೊತ್ತಿ ದ್ದಾರೆ. ನನಗೆ ಸಾಕು...."

ಅದೂ ನಿಜವಾಗಿದ್ದಿತು. ದಾರಿಯಲ್ಲಿ ಅವನ ಕಷ್ಟದ ಕತೆ ಯನ್ನು ಕೇಳಿ ಕರಗಿ, ತಂದೆಯವರೂ ಅವನ ತಲೆಯ ಮೇಲಿನ ಸಾಮಾನು ಇಳಿಸಿ ತಾವು ಹೊತ್ತುಕೊಂಡಿದ್ದರು. ಆದರೆ ಅವರೇ ಮುಂದಾಗಿ ಅವನ ಕೈಯಲ್ಲಿ ಎರಡಾಣೆಗಳನ್ನು ಹಾಕಿ ಕಳಿಸಿದರು. ಅವನು ಬಸ್ಸಿನಲ್ಲಿಯೇ ಕೂಡಿಸಿ ಹೋಗುವೆನೆಂದ. ಆದರೆ ಬಸ್ಸು ಬರುವ ಹೊತ್ತು ನಿಶ್ಚಿತವಿದ್ದುದರಿಂದ, ಅವನನ್ನು ಕಳಿಸಿಕೊಟ್ಟೆವು. ಅವನು ಆನಂದದಿಂದ ಕೇಕೆ ಹಾಕುತ್ತ ಹೋದ. ಅವನ ಕಡೆಗೆ ನೋಡುತ್ತ ಹಿರಿಯರು ತಾಯಿಗೆ ಅಂದರು:—

"ಸಮ್ಮೇದ ಶಿಖರದ ಮೂರೂ ದರ್ಶನ ಮಾಡಿದಂತಾಯಿ-ತೀಗ!"

"ಪೋಟಾರೊಂದು ಲಗೂನೆ ಸಿಕ್ಕರೆ ನೆಟ್ಟಗಾಗುವುದು..."

ಮುಂದಿನ ಪ್ರವಾಸದ ಯೋಚನೆಯಲ್ಲಿದ್ದ ನಾನು ನುಡಿದೆ. ಆ ಮೇಲೆ ತಂದೆಯವರ ಮಾತಿನ ಅರ್ಥ ಹೊಳೆದು, ಮನದಲ್ಲಿಯೇ ನಕ್ಕು ಸುಮ್ಮನಾದೆ. ಇದೇ ಸಂದರ್ಭವೆಂದು ಹಿರಿಯರಿಗೆ ನಾಲ್ಕು ಮಾತುಗಳನ್ನು ವಿವರಿಸಿ ಹೇಳಬೇಕೆಂದು ನನ್ನ 'ಕಮ್ಯುನಿಸ್ಟ್' ಮನೋವೃತ್ತಿ ಮುನ್ನೋಡ ಬಯಸಿತು. ಆದರೆ ಅವರ ಜೀವನ-ವಿವೇಕವನ್ನು ಕಂಡು, ಅಲ್ಲಿ ತನ್ನ ಬೇಳೆ ಬೇಯದೆಂದು ಸುಮ್ಮ-ನಾಯಿತು.

ತಾಸೆರಡು ತಾಸುಗಳ ವರೆಗೆ ಆ ದಾರಿಯು ಹೂಟದಲ್ಲಿ ಕಳೆದರೂ ಪಾರಸನಾಥ ನಿಲ್ದಾಣದ ಕಡೆಗೆ ಹೋಗುವ ಬಸ್ಸು ಬರಲಿಲ್ಲ. ಸಂಜೆಯಾಗತೊಡಗಿತು. ಇನ್ನೇನು ಮಾಡುವುದು? ಎಂಬ ಪ್ರಶ್ನೆಯು ನಮ್ಮ ಮುಂದೆ ಬಂದು ನಿಂತಿತು. ನಮಗೆ ಪಾರಸ-ನಾಥ ನಿಲ್ದಾಣಕ್ಕೆ ಹೋಗಿ, ಮುಂದೆ ಕಲಕತ್ತೆಗೆ ಹೋಗಬೇಕಾ-ಗಿದ್ದಿತು. ಆದರೆ ಅತ್ತ ಹೋಗುವ ಬಸ್ಸು ಒಂದೂ ಬರಲಿಲ್ಲ. ಇನ್ನೇನು ಗಿರಡಿಗೇ ಹೋಗಿ ಬಿಟ್ಟರಾಯಿತೆಂದು ನಿಶ್ಚಯಿಸಿದೆ. ಒಂದೆರಡು ನಿಲ್ದಾಣಗಳಷ್ಟು ಹಿಂದೆ ಹೋಡಂತಾಗುವುದೆಂದು ನಾನು ಮನದಲ್ಲಿ ಲೆಕ್ಕಹಾಕಿ, ಹಾಗೆ ಮಾಡಿದೆ.

ಈಸ್ಟ್-ಇಂಡಿಯನ್ ರೇಲ್ವೆಯ ಮುಖ್ಯ ದಾರಿಯ ಮೇಲೆ ಹಿರಡಿ ಎಂಬ ನಿಲ್ದಾಣ ಒಂದಿದೆ. ಹಿರಡಿ-ಗಿರಡಿಗಳು ಭಿನ್ನ ಭಿನ್ನ ಊರುಗಳೇಂಬುದನ್ನು ತಿಳಿಯದೆ, ಗಿರಡಿಗೆ ಬಂದು ಸೇರಿದೆವು. ನಾನು ನಿರೀಕ್ಷಿಸಿದ ಸ್ಥಳವು ಆದಾಗಿರಲಿಲ್ಲ. ಆದರಿಂದ ಗೊಂದಲ ದಲ್ಲಿ ಬಿದ್ದೆ. ಗಿರಡಿಯಿಂದ ಮುಂದಾರಗಿರಿ, ಚಂಪಾಪುರಗಳಿಗೆ ಹೋಗಲಿಕ್ಕೆ ನೇರವಾದ ಮಾರ್ಗವುಂಟು. ಆದರೆ ನನಗೆ ಶಾಂತಿ-ನಿಕೇತನಕ್ಕೆ ಹೋಗಬೇಕಾಗಿದ್ದಿತು. ಇದು ಕಲಕತ್ತೆಯ ನೇರೆ-

ಯಿಲ್ಲದ—ಎಂದು ನನ್ನ ಕಲ್ಪನೆಯಿದ್ದಿತು. ಆದರಿಂದ ಕಲಕತ್ತೆಗೆ ಹೋಗುವುದೆಂದು ನಿಶ್ಚಯಿಸಿದ್ದೆ. ಕೊನೆಗೆ ಗಿರಡಿಯಿಂದಲೂ ಕಲಕತ್ತೆಯ ಕಡೆಗೆ ಒಂದು ಗಾಡಿ ಹೊರಡುವುದೆಂದು ಕೇಳಿ, ಸ್ವಲ್ಪ ಸಮಾಧಾನವಾಯಿತು. ಹಿರಡಿಯೆಂದು ಭಾವಿಸಿ ಗಿರಡಿಗೆ ಬಂದುದಕ್ಕಾಗಿ, ನಡುವೆ ಮಧುಪುರದಲ್ಲಿ ಗಾಡಿ ಬದಲಿಸುವ ತೊಂದರೆಯೊಂದು ಮಾತ್ರ ಹೆಚ್ಚಾಯಿತು. ಆದರೂ ಅಡ್ಡಿಯಿಲ್ಲ; ಭಾರತದ ಒಂದು ಪ್ರಸಿದ್ಧ ಔದ್ಯೋಗಿಕ ಪಟ್ಟಣವನ್ನು ಕಂಡಂತಾಯಿತು. ಕಲ್ಲಿದ್ದಲಿ-ಕಬ್ಬಿಣ ಖನಿಗಳಿಗಾಗಿ ಗಿರಡಿಯು ಹಿಂದುಸ್ತಾನದಲ್ಲೆಲ್ಲ ಪ್ರಸಿದ್ಧವಾಗಿದೆ. ರೈಲಿಗೆ ಅವಕಾಶವಿದ್ದುದರಿಂದ—ಆ ಬಿಲ್ಲಿರುವ ಜೈನ ಧರ್ಮಶಾಲೆಯ ಕೋಣೆಯೊಂದರಲ್ಲಿ ಸಾಮಾನು ಇಟ್ಟು—ಊರು, ಕಾರಖಾನೆಗಳನ್ನು ಕಂಡುಬಂದೆವು. ಆ ಕಾರಖಾನೆಗಳ ಎದುರಿಗೆ ನಿಂತಾಗ 'ಇಂಥ ಯಾಂತ್ರಿಕ ಶಕ್ತಿಗಳನ್ನೆಲ್ಲವನ್ನೂ ಮಹಾತ್ಮರ ರಾಟೆಯ ಶಕ್ತಿಯು ಬದಿಗೊತ್ತಿ, ನಾಡಿಗೆ ಸ್ವಾತಂತ್ರ್ಯವನ್ನು ಸಂಪಾದಿಸಿ ಕೊಟ್ಟೀತಲ್ಲ!' ಎಂಬ ಉದ್ಗಾರ ನನ್ನ ಬಾಯಿಂದ ಹೊರಟಿತು.

ಗಿರಡಿಯಿಂದ ಹೊರಟವರು ಇರುಳೆಲ್ಲ ರೈಲಿನಲ್ಲಿ ಕಳೆದೆವು. ಬೆಳಗಾದಾಗ, ನಾವು ಶರಚ್ಚಂದ್ರ ಚಟರ್ಜಿಯವರ ಬಂಗಾಲ ಪ್ರಾಂತದಲ್ಲಿ ಸೇರಿದ್ದೆವೆಂದು ಗೊತ್ತಾಗುವಂತಿದ್ದಿತು. ನಾನು ಕಂಡ ಬಂಗಾಲದ ಮೊದಲನೆಯ ದೃಶ್ಯವೆಂದರೆ, ಚಿಕ್ಕ ಕೆರೆಯ ದಂಡೆಯಲ್ಲಿ ಕುಳಿತು ಇಬ್ಬರು ಎಳೆಯ ಮಕ್ಕಳು ಮೀನು ಹಿಡಿಯುತ್ತಿದ್ದುದು! ಆಗ ನನಗೆ ಶರಚ್ಚಂದ್ರರ ದೇವದಾಸ-ಪಾರ್ವತಿಯರ ನೆನಪಾಗದಿರಲಿಲ್ಲ. ಮುಂದೆ ಕಲಕತ್ತೆಗೆ ಹೋಗಿ ಸೇರುವವರೆಗೆ, ಶರಚ್ಚಂದ್ರರ ಕಾದಂಬರಿಗಳನ್ನೆಲ್ಲ ಮತ್ತೆ ತಿರುವಿ ಹಾಕಿದಂತೆ ಆಯಿತು. ಇಲ್ಲಿ ಕರ್ನಾಟಕದಲ್ಲಿ ಕುಳಿತು ಬಂಗಾಲದ ಜೀವನವನ್ನು ಓದಿ ತಿಳಿದು ಕೊಂಡಿದ್ದೆ. ಅದರಲ್ಲಿಯ ಕೊಂಕು-ಕೊರತೆಗಳನ್ನೂ ಹರಕು-ಮುರುಕುಗಳನ್ನೂ ಈಗ ಪ್ರತ್ಯಕ್ಷ ನೋಡಿ ತುಂಬಿಕೊಳ್ಳುವಂತಾಯಿತು.

ನಾವು ಕಲಕತ್ತೆಯ 'ಹೌರಾ' ನಿಲ್ದಾಣದಲ್ಲಿ ಬಂದಿಳಿದೆವು. ಹಮಾಲರು "ಹವಡಾ! ಹವಡಾ" ಎಂದು ಕೂಗುತ್ತ ನಿಲ್ದಾಣ್ಯದ ತುಂಬ ಓಡುವಾಗ, ನಮಗೆ ಒಮ್ಮೆಲೇ ಅದರರ್ಥವಾಗಿರಲಿಲ್ಲ—ಹೌರಾ ಎಂಬುವಕ್ಕೇ ಅವರು ಹಾಗೆ ಹೇಳುವರೆಂಬುದು, ಉಗಿಬಂಡಿಯ ಹಬ್ಬಿಯ ಮೇಲೆ ಬರೆದ 'ಹಬಡಾ' ಎಂಬ ಬರೆಹ ಓದಿದಾಗ ಹೊಳೆಯಿತು! ಅದು ಇಂಗ್ಲೀಷಿನಿಂದ ಕುಲಗೆಟ್ಟ ಹೌರಾದ ಅವತಾರವಾಗಿದ್ದಿತು. ಹೀಗೆ ಪರಕೀಯರಿಂದ ಭಾರತ ಎಷ್ಟು ವಿದ್ರೂಪಗೊಂಡಿಲ್ಲ?

ಹೌರಾ ನಿಲ್ದಾಣದಲ್ಲಿ ರಿಕ್ಷಾ, ಟಂ ಟಂ (ಕುದುರೆಯ ಗಾಡಿ) ಗಳಿಗೂ ಗಿರಾಕಿಗಳನ್ನು—ಪ್ರಯಾಣಿಕರನ್ನು—ಹಿಡಿದುಕೊಡುವ ಏಜಂಟರಿದ್ದಾರೆ. ಹೊಸಬರು ಅವರ ಬಲೆಗೆ ಬಿದ್ದು, ಒಂದಕ್ಕೆ ಎರಡು ಪಟ ತೆತ್ತು, ಕಲಕತ್ತೆಯಲ್ಲಿ ಪ್ರವೇಶಿಸಬೇಕಾಗುತ್ತದೆ. ನಿಲ್ದಾಣದಿಂದ ಹೊರಬಿದ್ದಾಗ ನಮ್ಮನ್ನು ಬೆರಗುಗೊಳಿಸುವುದು ಹೌರಾ ನದಿಗೆ ಕಟ್ಟಿದ ಸೇತುವೆ. ಅದರ ಮೇಲಿಂದ ಹಾಯ್ದೇ ನಾವು ಕಲಕತ್ತೆಯಲ್ಲಿ ಕಾಲಿಡಬೇಕು. ಇದನ್ನು ದಾಟಿದ ಕೂಡಲೆ ಬರುವುದೇ ಹ್ಯಾರಿಸನ್ ರೋಡು. ಇದು ಕಲಕತ್ತೆಯ ಮುಖ್ಯ ಪೇಟೆಯಾಗಿದೆ. ಇಲ್ಲಿಯೇ—ನಿಲ್ದಾಣದಿಂದ ಒಂದು ಮೈಲಿನ ಅಂತರದ ಮೇಲೆ—'ಜೈನ ಭವನ'ವುಂಟು. ಅಲ್ಲಿ ನಾವು ಇಳಿದುಕೊಂಡೆವು.

ಹಿರಿಯರಿಗೆ ಜಿನಮಂದಿರಗಳ ದರ್ಶನ ಮೊದಲು ಆಗಬೇಕು. ಅವು ಇರದಿದ್ದರೆ 'ಇಲ್ಲೇಕೆ ಕರೆದು ತಂದೆ?' ಎಂದು ಕೇಳುವರು. ಅದರಂತೆ ಜೈನಭವನದಲ್ಲಿ ಇಳಿದುಕೊಳ್ಳುವವರೂ ಯಾತ್ರಿಕರೇ ಆಗಿರಬೇಕು. ನಾವು ದಕ್ಷಿಣ ದೇಶದಿಂದ ಸಮ್ಮೇದ ಗಿರಿಯ ಯಾತ್ರೆಗೆ ಬಂದವರೆಂದೂ, ಸಂಗಡ ತಾಯಿ ಇರುವಳೆಂದೂ ಕೇಳಿ, ಆ ಧರ್ಮಶಾಲೆಯ ವ್ಯವಸ್ಥಾಪಕರು ನಮಗೆ ಕೋಣೆಯೊಂದನ್ನು ಕೊಟ್ಟಿದ್ದರು. ಅಲ್ಲಿ ಅಡಿಗೆ ಮಾಡಿಕೊಳ್ಳಲಿಕ್ಕೆ ಪಾತ್ರೆಗಳನ್ನೂ ಕೊಡುತ್ತಾರೆ. ಸ್ನಾನಕ್ಕೂ ಒಳ್ಳೆಯ ವ್ಯವಸ್ಥೆಯಿದೆ. ಬೆನ್ನಾಗಿ ಹಸೆಯಾಡುವ ಕೋಣೆಗಳವೆ. ವಿದ್ಯುದ್ದೀಪಗಳಿಂದ ಅಲಂಕೃತವಾಗಿವೆ. ಬೇಕಾದ ಹಾಗೆ ಯಾತ್ರಿಕರು ಒಂದು ವಾರದ ವರೆಗೆ ಅಲ್ಲಿ ಉಳಿದುಕೊಳ್ಳಬಹುದು. ಕಲಕತ್ತೆಯಲ್ಲದ್ದೂ ಬಾಡಿಗೆ ಮೊದಲಾದುವುಗಳನ್ನೇನು ಕೊಡಬೇಕಾಗಿಲ್ಲ ದಿನವೊಂದಕ್ಕೆ

ತ್ವರೆ ಮಾಡಿರಿ! ಪ್ರತಿಗಳು ಸ್ವಲ್ಪವೇ ಉಳಿದಿವೆ!!

"ನಕ್ಷತ್ರಗಾನ"

★

ಶ್ರೀ ಡಿ. ಎಸ್. ಕರ್ಕಿ ಎಮ್. ಎ., ಪಿ ಎಚ್. ಡಿ.
ಬೆಳಗಾಂವ-ಇವರ

ಉತ್ಕೃಷ್ಟ ಕವನ ಸಂಗ್ರಹ

ಶ್ರೀ. ದ. ರಾ. ಬೇಂದ್ರೆ, ಮೆಥುರಚೆನ್ನ, ವಿ. ಕೃ. ಗೋಕಾಕ, ಮುಗಳಿ ಮುಂತಾದ ಕವಿಶ್ರೇಷ್ಠರು ಇದನ್ನು ತುಂಬಾ ಹೊಗಳಿದ್ದಲ್ಲದೆ, **ಜಯಂತಿ, ಜಯಕರ್ನಾಟಕ, ನವಯುಗ** ಮುಂತಾದವರಿಂದ ಒಳ್ಳೇ ಅಭಿಪ್ರಾಯಕ್ಕೆ ಪಾತ್ರವಾಗಿದೆ. **ಬೆಲೆ ರೂ ೧-೪-೦.**

ದೊರೆಯುವ ಸ್ಥಳ

ರಬಕವಿ ಮಿತ್ರಸಮಾಜ ಪ್ರೆಸ್, ಒನಪಟ್ಟಿ ಕರ್ನಾಟಕ ಪುಸ್ತಕ ಮಂದಿರ } **ಡಿ ಎಸ್. ಕರ್ಕಿ.** ಕೊತವಾಲಗಲ್ಲಿ ಬೆಳಗಾವ ಸಾಹಿತ್ಯ ಮಂದಿರ ಧಾರವಾಡ.

ಸೂ. ಮಾರಾಟಗಾರರಿಗೆ ವಿಶೇಷ ಸವಲತ್ತು ಕೊಡಲಾಗುವದು.

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಹೊಸ ಪ್ರಕಟಣೆಗಳು

ಶ್ರೀ. ಚಿನ್ನವೀರ ಕಣವಿಯವರ

ಭಾವ ಜೀವಿ

ಶ್ರೀ. ಉರವಕೊಂಡ ಜಗದ್ಗುರುಗಳವರ

ಅಖಂಡ ಕರ್ನಾಟಕ

ಶ್ರೀ. ಕೋ. ಚಿನ್ನಬಸಪ್ಪನವರ

'ಗಡೀಪಾರು'

ವಾ. ಚಂದಾ ಕೇವಲ ೫ ರೂ.

ಲಾಯಿಟ್ ಫೀ ಮೂರಾಣೆ ಕೊಟ್ಟರಾಯಿತು. ಕೋಣೆಗೆ ಹಾಕುವ ಬೀಗ ಮಾತ್ರ ನಮ್ಮದಿರಬೇಕು. ಅದನ್ನೂ ಅದರ ವ್ಯವಸ್ಥಾಪಕರೇ ನಮಗೆ ಸೂಚಿಸುವರು. ಈ ಜೈನಭವನದ ಸಮೀಪದಲ್ಲಿಯೇ ನಾಲ್ಕು ಜಿನಮಂದಿರಗಳಿವೆ. ಅವೆಲ್ಲವೂ ಭವ್ಯವಾಗಿವೆ. ಚಾವಲಪಟ್ಟಿ, ಪುರಾನೀವಾಡಿ, ಲೋಅರ್ ಚಿತ. ಪುರರೋಡ್, ವೇಲಗಚ್ಚಿಯಾಗಳು ಆ ಜಿನಮಂದಿರಗಳಿರುವ ಸ್ಥಳಗಳಾಗಿವೆ. ಸ್ನಾನಮಾಡಿ ಮೊದಲು ಜಿನದರ್ಶನ ಮಾಡಿ ಕೊಂಡು ಬಂದೆವು. ಬರುವಾಗ ಅಡಿಗೆಯ ಸಾಮಾನನ್ನೂ ಕೊಂಡು ತಂದೆವು.

ಊಟವಾದ ಮೇಲೆ ಹಾಯ್‌ಕೋರ್ಟು, ಲೇಡೀಪಾರ್ಕು, ವಸ್ತುಸಂಗ್ರಹಾಲಯ, ಬಂದರು ಇತ್ಯಾದಿಗಳನ್ನು ಕಂಡೆವು. ಇಂತಹ ಜನಪದಟ್ಟಣೆಯೊಳಗಿಂದ ಹೇಗೆ ಸುಸೂತ್ರ ಪಾರಾಗಿ ಹೋಗುವೆವೆಂಬ ಚಿಂತೆಯು ಹಿರಿಯರಿಬ್ಬರನ್ನೂ ಆವರಿಸಿದ್ದಿತು. ಹೌರಾ ನಿಲ್ದಾಣದ ಯಾವ ಗಾಡಿಯಲ್ಲಿ ಹತ್ತಿ ಎಲ್ಲಿ ಹೋಗುವು ದೆಂಬ ವಿಚಾರದಲ್ಲಿಯೇ ಮುಂಜಾನೆಯಿಂದ ತಂದೆಯವರಿದ್ದರು. ನನಗೂ ಅದೊಂದು ಸಮಸ್ಯೆ ಎನಿಸಿದ್ದಿತು. ಅದರಲ್ಲಿ ಆದೇ ದಿನ ಕಲಕತ್ತೆಯಲ್ಲಿ ಗೊಂದಲವೇಳಬೇಕೆ? ಸಾಯಂಕಾಲದ ಐದು ಗಂಟೆಯಾಗಿರಬೇಕು. ಒಮ್ಮೆಲೇ ಬಸ್ಸು-ಟ್ರಾಮುಗಳ ಓಡಾಡ ನಿಂತುಹೋಯಿತು. ಕಮ್ಯುನಿಸ್ಟರ ಹಾವಳಿಯಂತೆ. ದೇಶೀ ಬಾಂಬುಗಳ ಶೂರಾಟ! ಬಸ್ಸುಗಳಿಗೆ ಬೆಂಕಿ! ಕಳೆದ ಜೂನ ತಿಂಗಳಲ್ಲಿ, ಭಾರತದ ಲಕ್ಷ್ಯವನ್ನೆಳೆದ ಕಲಕತ್ತೆಯಲ್ಲಿಯ ದಂಗೆ-ಯದು. ಪಶ್ಚಿಮ ಬಂಗಾಲದ ಪ್ರತಿನಿಧಿ ಸಭೆಗೆ, ದಕ್ಷಿಣ ಕಲಕತ್ತಾ ಪ್ರದೇಶದಿಂದ ಒಂದು ಆಯ್ಕೆ ಆ ದಿನ ನಡೆದಿದ್ದಿತು. ಕಾಂಗ್ರೆಸ್ಸಿಗೆ ವಿರುದ್ಧವಾಗಿ ಬಾಬು ಶರಚ್ಚಂದ್ರ ಬಸು ಅವರು ನಿಂತಿದ್ದರು. ಅವರು ಅರಿಸಿಯೂ ಬಂದರು. ಆ ಕಾಲದಲ್ಲಿ ನಡೆದ ಗೊಂದಲ ದಲ್ಲಿ ನಾವು ಸಿಕ್ಕಿ ಬಿದ್ದೆವು! ಹೌಹಾರಿ ಧರ್ಮಸಾಲೆಯನ್ನು ಸೇರಬೇಕಾದರೆ ಸಾಕುಬೇಕಾಗಿ ಹೋಯಿತು.

ಗೊಂದಲದ ಸುದ್ದಿಯನ್ನೇ ಹಿರಿಯರಿಗೆ ತಿಳಿಸಿರಲಿಲ್ಲ ಎಂತಲೇ ಅವರು ನನ್ನನ್ನು ಮತ್ತೆ ಹೊರಗೆ ಬಿಟ್ಟರು. ಸ್ವಲ್ಪ ಕತ್ತಲಾದ ಮೇಲೆ, ಧರ್ಮಸಾಲೆಯಿಂದ ನಾನೊಬ್ಬನೇ ಹೊರಬಿದ್ದೆ. ರಾಜಬೀದಿಗಳಲ್ಲಿ ಇದೀಗ ಜನರ ಓಡಾಟ ಕಡಿಮೆಯಾಗಿದ್ದಿತು. ಅಲ್ಲಲ್ಲಿ ಪೋಲೀಸರ ಕಾವಲಿತ್ತು. ಅತ್ತಿತ್ತ ನೋಡುತ್ತ ಎಚ್ಚರ ದಿಂದ ಮುಂದೆ ಸಾಗಿದೆ. 'ಜಿನವಾಣೀ ಪ್ರಸಾರಕ' ಎಂಬ ಸಾಹಿತ್ಯಸಂಸ್ಥೆಯಲ್ಲಿ ಹೊಕ್ಕೆ. ಅದರ ವ್ಯವಸ್ಥಾಪಕರೊಡನೆ ಬಂಗಾಲೀ ಸಾಹಿತ್ಯ, ಪ್ರಕಾಶಕರ ಬಗ್ಗೆ ಸ್ವಲ್ಪ ಮಾತನಾಡಿದೆ. ಮಾತಿನಲ್ಲಿ ಅವರು ಅಷ್ಟೊಂದು ಆಸ್ಥೆ ತೋರಿಸಲಿಲ್ಲ. ನನಗೆ ಬಂಗಾಲಿ ಬಾರದಿದ್ದುದೂ ಅದಕ್ಕೊಂದು ಕಾರಣವಾಗಿದ್ದಿತು. ಅಲ್ಲಿಂದ ಹೊರಬಿದ್ದು, ಪೇಟೆಯಲ್ಲಿ ಹೋದೆ. ಈಗಾಗಲೇ ಕಲ-ಕತ್ತಾ ನಗರವು ವಿದ್ಯುದ್ದೀಪಗಳಿಂದ ಬೆಳಗುತ್ತಿದ್ದಿತು. ಒಂದು ದೊಡ್ಡ ಪುಸ್ತಕದ ಅಂಗಡಿಯಲ್ಲಿ ಹೋಗಿ, ಅನೇಕ ಬಂಗಾಲೀ ಪುಸ್ತಕಗಳನ್ನು ಕಿತ್ತುಹಾಕಿದೆ. ಅವುಗಳ ಹೊರ ಸೌಂದರ್ಯ-ವನ್ನು ನವಿದೆ. ಶರಚ್ಚಂದ್ರರ ಮೂಲ ಕೃತಿಗಳನ್ನು ಕಂಡೆ. ಆದೇ ಹುಮ್ಮಸ್ಸಿನಲ್ಲಿ ಬಂಗಾಲೀ ಕಲಿಯಬೇಕೆಂದು 'ಬಂಗಾಲಿ ಹಿಂದಿ ಶಿಕ್ಷಕ' ಒಂದನ್ನು ಕೊಂಡು ಕೊಂಡು ಹೊರಬಿದ್ದೆ. ಆ ಅಂಗ ಡಿಯ ಒಡೆಯನಿಂದ 'ಹೌರಾದಿಂದ ಕ್ಯೂಲದ ಕಡೆಗೆ ಹೋದ ರೇಲ್ವೆಯ ದಾರಿಯಲ್ಲಿರುವ ಬೋಲಪುರ ನಿಲ್ದಾಣದಿಂದ ಎರಡು ಮೈಲಿನ ಮೇಲೆ ಶಾಂತಿನಿಕೇತನವಿದೆ' ಎಂಬುದು ತಿಳಿಯಿತು.

ಮರುದಿನ ಮುಂಜಾನೆಯೇ ನಾವು ಕಲಕತ್ತೆಯನ್ನು ಬಿಟ್ಟು ಬೋಲಪುರದ ಕಡೆಗೆ ಸಾಗಿದೆವು. ಶಾಂತಿನಿಕೇತನವು ಸಮೀಪಿಸಿ ದಂತೆ, ಅದರ ರೂಪರೇಷೆಗಳನ್ನು ನನ್ನ ಮನಸ್ಸು ಬರೆಯ ತೊಡಗಿತು. ಗುರು ರವೀಂದ್ರರ ಚಿತ್ರ ಬಗೆಗಣ್ಣಿನೆದುರಿಗೆ ಬಂದು ನಿಂತಿತು.

೫೫ ವರ್ಷಗಳಿಂದ ಅನುಭವಪಟ್ಟ

ಕರೀರ ಮುತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರೀರ ಮುತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ನಾನೇನಾಗುವೆ?

(ಆಕಾಶ ಸಂಭಾಷಣ) *

'ಆನಂದ ಕಂದ'

ಪರಿಚಯ

ಪೂರ್ವಮಿಕ ಶಾಲೆಯ ಪರೀಕ್ಷೆಗಳು ಮುಗಿದುವು. ವಿಜಯ ಹೈಸ್ಕೂಲಿನ ಎರಡನೆಯ ತರಗತಿಯ ಕೆಲವು ವಿದ್ಯಾರ್ಥಿಗಳು, ತಮ್ಮ ತರಗತಿಯ ಶಿಕ್ಷಕರಾದ ಮತ್ತಿನ ಮಾಸ್ತರರೊಂದಿಗೆ, ನುಗ್ಗೀಕೇರಿಗೆ ವಿನೋದವಿಹಾರಕ್ಕೆಂದು ಬಂದಿದ್ದಾರೆ. ವಿದ್ಯಾರ್ಥಿಗಳಲ್ಲಿ ಪಕೀಲರ ಮಗ ನಾನಾ, ಡಾಕ್ಟರರ ಮಗ ಶೀನಿ, ಮಾಸ್ತರರ ಮಗ ಗುಂಡು, ಶಿಲಾಕರ್ಣಿಯರ ಗೋಪಿ, ದೇಶಪಾಂಡೆ ದತ್ತ, ಕರಜಗಿ ಕಿಟ್ಟು, ನಾಯಕರ ರಂಗ, ನಂದನಳ್ಳಿ ರಾಜ ಇವರೆಲ್ಲ ಇದ್ದಾರೆ. ತಮ್ಮ ವಿನೋದವಿಹಾರದ ಕಾರ್ಯಕ್ರಮ ಮುಗಿಸಿಕೊಂಡು, ಎಲ್ಲರೂ ಗುಡಿಯ ಪಕಳೆಯಲ್ಲಿ ಹರಟೆ ಹೊಡೆಯುತ್ತ ಕುಳಿತಿದ್ದಾರೆ.

★

ಮತದ ಮಾಸ್ತರು :—ಇಂದಿನ ಕಾರ್ಯಕ್ರಮ ಎಲ್ಲಾ ಭಾಳ ಮಜಾದಾರೀ ಆತು—ಯಾಕ್ರೆಪಾ ? ಹೀಂಗ ಮ್ಯಾಲಕಮ್ಯಾಲ ಪ್ರವಾಸದ ಕಾರ್ಯಕ್ರಮ ನಡೀತಿರಬೇಕು ನೋಡ್ರಿ !

ರಾಜ :—ನಡೀತಿರಬೇಕೆಲ್ಲಾ ಖರೇನ್ರೀ ಮಾಸ್ತರಕ ! ಮ್ಯಾಲಿಂದ ಮ್ಯಾಲ ಹಿಂತಾ ತಿಂಡಿ–ತಿನಸೂ ಕಟಕೊಂಡು ಬರ ಸೇಕಂದರ ಸಾಗಬೇಕು ಹ್ಯಾಂಗ ? ನಮ್ಮಂತವರ ಮನ್ಯಾಗಂತೂ ಒಂದು ದಿನಾ ಹೀಂಗ ಕಟಿಗೊಂಡು ಬಂದರ, ಮೂರು ದಿನಾ ಬರೇ ಚೀಪು ಕುಡದು ಇರಬೇಕಾಗತಕಪ !

ಶೀನಿ :—ಈ ರಾಜಂದೊಂದು ಏನಾದರೂ ಅಡ್ಡಡ್ಡ ಮಾತಕ! ಶಿವ್ಯಾಕಪಾ, ಬರೇ ನೀರು ಕುಡದು ಇರಬೇಕಾಗತಕದ ?

ರಾಜ :—ನಿನಗೇನಪಾ ಮಗನ ! ನಿಮಪ್ಪ ಡಾಕ್ಟರು.... ತುಂದೀ ಮೈಗೆ..ಮುಂಡ ಸೂಜೀ ಚುಚ್ಚಿ ಚುಚ್ಚಿ, ನೋಟಿನ ಪುಡಿಕೀ ತರತಾನ.. ನಿನಗ ಏನದ ಬಿಸಿ ?

(ಹುಡುಗರೆಲ್ಲರೂ ನಗುವರು.)

ಮ. ಮಾಸ್ತರು :—ಇರಲಿ ಬಿಡ್ರೊ ! ಇಲ್ಲದ ವಾದದೊಳಗ ಯಾಕ ಹೊತ್ತು ಕಳೀತೀರಿ ? ನಮ್ಮ ಭಾರತ ಈಗ ಸಂಪೂರ್ಣ ಸ್ವತಂತ್ರ ಆಗೇದ; ಇನ್ನ ಮ್ಯಾಲ ಎಲ್ಲಾರೂ ಸುಖದಿಂದ ಇರಬಹುದು ! ನಿಮಗೊಂದು ಹಾಡು ಕಲಿಸಿದ್ದೆನಲ್ಲಾ; 'ಚಿರಸುಖದರ ಮನೆಯು ನಮ್ಮ ಭರತ ಪೂತೆಯು ?' ಅದನ್ನ ಈಗ ಎಲ್ಲಾರೂ ಕೂಡಿ ಅನ್ರಿ ನೋಡೋಣು !

(ಎಲ್ಲರೂ ಒಟ್ಟುಗೂಡಿ ಹಾಡುವರು)

ಚಿರಸುಖದರಮನೆಯು ನಮ್ಮ ಭರತ ಪೂತೆಯು !
ಸುರ-ಮುನಿ-ಜನ ಮನರಮಿಸುವ ಪರಮ ಪೂತೆಯು !
ಸಿರಿವನಿತೆಯ ಶ್ರಮು ಸನೆಯಿಪ ಶಯನ ಸದನವು,
ಸರಸತಿ ನಗೆಮೊಗದಿ ನಲಿವ ನಾಟ್ಯನಿಲಯವು,
ಗಿರಿಜೆಯು ದುರುಳರನು ತರೆಂಪಿ ಸಂತ ವಲಯವು,
ಸುರಸತಿಯರು ಸೇರಿ ಸುಖಿಪ ಸುಮನಸ ವನವು ! ॥ ೧ ॥
ಮಧುರ ತರವ ಗೋರಸ-ಘೃತ-ಫಲಗಳುಣಿಸುತ—
ಸುಧೆಯ ತೆರದ ಸುರನದಿಜಲ ಕುಡಿಸಿ ತಣಿಸುತ—
ಹೊದೆಯಲುಡಲು ವಿಮಲವಾದ ವಸನವೀಯುತ—
ಮುದವನೀವ ಮಾತೆಗೆ ಜಯಜಯವು ಸಂತತ ! ॥ ೨ ॥

ಮತದ ಮಾಸ್ತರು :—ಸರಿ ! ಸ್ವಾರಸ್ಯವಾಗಿ ಹಾಡಿದಿರಿ ! ಇಂಥಾ ಭರತಭೂಮಾತೆಯ ಮಕ್ಕಳು ನೀವೆಲ್ಲಾ ! ನಿಮಗೇನು ಕಡಿಮಿ ಇನ್ನಮ್ಯಾಲ ! ಆದರ, ನೀವೆಲ್ಲಾ ದೊಡ್ಡವರಾಗಿ, ಆ ತಾಯಿಯಾ ಸೇವಾ ಮಾಡೂದು ಮಾತ್ರ ತುಂಬಾ ಅಗತ್ಯ ಏನ್ರೆಪಾ! ನಮ್ಮ ತಾಯಿ ನಮ್ಮ ಹೊಟ್ಟಿಗೆ ಹಾಕತಾಳಂತ—ನೀವೆಲ್ಲಾ ಕೈ-ಕಾಲು ಆಗಳಾಡಿಸದಕ ಕೂತುಕೊಂಡು ಬಿಟ್ಟರ, ನಿಮ್ಮ ಭಾರತ ಮಾತೆಗೂ ಸುಖಾ ಇಲ್ಲಾ—ನಿಮಗೂ ಸುಖಾ ಇಲ್ಲಾ !

ಎಲ್ಲರೂ :—ಹೌದರಿ ಮಾಸ್ತರ್, ನೀವು ಹೇಳೂದು ಆಗದೀ ಖರೆ ಅವಕನ್ರಿ !

ಮ. ಮಾಸ್ತರು :—ಶಾಬಾಸ್ ! ನನ್ನ ಮಾತು ಖರೀ ಅನಸ್ತಕ ದೋ ಇಲ್ಲೊ ? ಹಾಂಗಾದರ, ಈಗ ಇಲ್ಲೆ ದೇವರ ಸಾನ್ನಿಧ್ಯದೊಳಗ, ಒಬ್ಬೊಬ್ಬರಕ ಹೇಳ್ರಿ: ದೊಡ್ಡವರಾದ ಮ್ಯಾಲ ನೀವು ಏನಾಗಬೇಕಂತ ವಿಚಾರಮಾಡೀರಿ ? ಈಗ ಮೊದಲ ನಾನೀ ಹೇಳಲಿ ? ಏನಾಗಬೇಕಂತ ನೀ ಸಂಕಲ್ಪ ಮಾಡೀದೀ—ಹೇಳಪಾ ನಾನೀ !

ನಾನಿ :—ನಾ ನೋಡ್ರಿ ಮಾಸ್ತರಕ ! ಹೆಸರಾದ ದೊಡ್ಡ ಪಕೀಲ ಆಗಬೇಕಂತ ಮಾಡೀನಿ !

ಮ. ಮಾಸ್ತರ :—ಅದ್ಯಾಕಪಾ ?

ರಾಜ :—ಅದ್ಯಾಕಂದ್ರ ಏನ್ರೀ ಮಾಸ್ತರ್! ಇವರ ಅಪ್ಪ, ಸಣ

---

* ಕಳೆದ ತಾ. ೧೧—೨—೫೦ನೆಯ ಸಂಜೆ, ಧಾರವಾಡದ ಬಾನುಲಿಕಟ್ಟೆಯಲ್ಲಿ 'ಗಿಳಿವಿಂಡು' ಬಿತ್ತರಿಸಿದುದು. ಸಂ. ಜ.

ಸರಕಾರಮಾನ್ಯ ಔದ್ಯೋಗಿಕ ಶಿಕ್ಷಣ ಸಂಸ್ಥೆ

ಕರ್ನಾಟಕ

ಹೊಲಿಗೆಯ ವಿದ್ಯಾಲಯ, ಧಾರವಾಡ

ತುಸು ಅವಧಿಯ ವಿವಿಧ ವರ್ಗಗಳು. ಲಂಡನ್, ನ್ಯೂಯಾರ್ಕ್‌ಗಳ ಹೊಲಿಗೆಯ ಶಿಕ್ಷಣ ಸಂಸ್ಥೆಗಳ ನೇರವಾದ ಸಂಬಂಧವನ್ನಿಟ್ಟುಕೊಂಡ ಈ ವಿದ್ಯಾಲಯದಲ್ಲಿ ಶಿಕ್ಷಣ ಪದ್ಧತಿಯುವದು ಒಂದು ಹೆಮ್ಮೆ. ಮಹಿಳೆಯರಿಗಾಗಿ ಕೈಕಸೂತಿ, ಯಂತ್ರದ ಕಸೂತಿಗಳನ್ನು ಅತ್ಯಾಧುನಿಕ ಸಾಧನಗಳ ಸಹಾಯದಿಂದ ಕಲಿಸುವ ಏರ್ಪಾಡು ಇದೆ. ಶಿಕ್ಷಕರಾಗ ಬಯಸುವವರಿಗೆ ಶಿಕ್ಷಕಕೋಸ್ರ್ ಇದೇ ವರ್ಷದಿಂದ ಪ್ರಾರಂಭಿಸಿದೆ. ವಿಶೇಷ ವಿವರಗಳಿಗಳಿಗೆ ಎರಡಾಣೆ ಅಂಚೆ ಟಿಕೀಟು ಇಟ್ಟು ಇಂದೇ ಬರೆಯಿರಿ, ಇಲ್ಲವೆ ಪ್ರತ್ಯಕ್ಷ ಭೆಟ್ಟಿಯಾಗಿರಿ.

ಹೊಲಿಗೆಯ ವಿಷಯದ ಬೇರೆ ಬೇರೆ ಭಾಷೆಗಳ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ ಇದೇ ವಿದ್ಯಾಲಯದ ಪ್ರಿನ್ಸಿಪಾಲರಿಂದ ಬರೆಯಲ್ಪಟ್ಟ 'ಸೂಚಿಶಿಲ್ಪಕಲೆ' ಎಂಬ ಪುಸ್ತಕ, ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾದದ್ದು ಇಲ್ಲಿಯೇ ದೊರೆಯುತ್ತದೆ.

ವಕೀಲೀ ಮಾಡಿ ನೂರು ಮನಿತನಾ ಮುರದಾನ! ಇಂವ ಇಷ್ಟ ದೊಡ್ಡ ವಕೀಲೀ ಮಾಡಿ ಸಾವಿರ ಮನಿತನಾ ಮುರಿಯುಂವ! ಬಾಪಸೇ ಬೇಟಾ ಅಥಾಯಿ!

(ಹುಡುಗರೆಲ್ಲರೂ ನಗುವರು.)

ಮು. ಮಾಸ್ತರ:—ಇರಲಿ, ನೀ ಸುಮ್ಮನಕ ಕೂಡೋ! ಹೂಂ ನಾನೀ, ಹೇಳು ನೀನು!

ನಾನಿ:—ವಕೀಲಿ ಅಂದರ ಸ್ವತಂತ್ರ ಉದ್ಯೋಗ; ಸಮಾಜದೊಳಗ ಮರ್ಯಾದಿ ಜೆಚ್ಚು! ಮಹಾತ್ಮಾ ಗಾಂಧೀ ಮುಂತಾದ ದೇಶಭಕ್ತರೆಲ್ಲಾ ವಕೀಲೀ ಮಾಡೇ ಹೆಸರು ಗಳಿಸಿದರು. ವಕೀಲೀ ಮಾಡಿದರ ಬೇಕಾದಷ್ಟು ದುಡ್ಡು ಸಿಗತಾವ! ಮನ್ಯಾಗ ನೋಟರು ಇತಬಹುದು.....ಸೀಡಿಯೋ ಇಡಬಹುದು.....

ರಾಜ (ನಡುವೆಯೇ ಬಾಯಿಹಾಕಿ) :— ಪಕ್ಷಕಾರರ ಪಕ್ಷಾ, ಶ್ರಾದ್ಧಾ ಮಾಡಿಸಬಹುದು! ಮ್ಯಾಲ ಯಾರು ಸೋತರ ಸೂತಕಿಲ್ಲ; ಗೆದ್ದರ ವೃದ್ಧಿ ಇಲ್ಲ! ಊರು ಸುಟ್ಟರೂ ಹೊರಗ ಇರೂ ಹಣಮಪ್ಪನ್ಹಾಂಗ, ನಿಶ್ಚಿಂತಿಂದ ಇರಲಿಕ್ಕೆ ಬರತಕ್ಕ!

(ಎಲ್ಲ ಹುಡುಗರೂ ನಗುವರು.)

ಮು. ಮಾಸ್ತರ:—ನೀ ಸುಮ್ಮನಿರೋ ರಾಜಾ! ಏ ಶೀನೀ, ನೀ ಹೇಳಪಾ! ನೀ ಏನಾಗಬೇಕಂತ ಅಪೇಕ್ಷಾ ಮಾಡತೀ?

ಶೀನಿ:—ಕರ್ನಾಟಕದೊಳಗ ಸುಪ್ರಸಿದ್ಧ ಡಾಕ್ಟರ್ ಆಗಬೇಕಂತ ಅನಿಸತದರಿ!

ರಾಜ:—ಹಂ ಹಂ! ದಿನಕ್ಕ ಎಷ್ಟ ಹೆಣಾ ಕೆಡವಿದರ ಸುಪ್ರಸಿದ್ಧ ಡಾಕ್ಟರಾಗತಾರೋ ಶೀನಿ?

(ಮತ್ತೆ ಎಲ್ಲರೂ ನಗುವರು.)

ಮು. ಮಾಸ್ತರ:—ಏ ರಾಜಾ, ನಿ ಬಾಯಿಮುಚ್ಚಿ ಕೂಡೋ! ಇರಲಿ, ಶೀನೀ, ಹೇಳು! ಡಾಕ್ಟರಾಗಬೇಕಂತ ಯಾಕ ಅನಸತದಪಾ ನಿನಗ!

ಶೀನಿ:—ಒಬ್ಬರ ಕೈಯಾಗ ಆಳಾಗಬೇಕಾಗಿಲ್ಲ. ಸ್ವತಂತ್ರ ಉದ್ಯೋಗ! ಹೆಚ್ಚು ಶ್ರಮಾ ಮಾಡಬೇಕಾಗಿಲ್ಲ. ಈಗಿನ ದಿವಸದೊಳಗೇನ್ರಿ? ಬ್ಯಾನಿಗಳಿಗೂ ಏನೂ ಕಡಿಮಿ ಇಲ್ಲ. ಡಿಗ್ರೀ ಪಡದು, ಡಾಕ್ಟರ್ ಆಗಿ, ಸ್ವತಂತ್ರ ದವಾಖಾನೀ ತಗದರ, ರೋಗಿಗಳಿಗೇನೂ ಕೊರತಿ ಇಲ್ಲ....

ರಾಜ:— (ನಡುವೆ ಬಾಯಿ ಹಾಕಿ) ರೋಗಿ ಸತ್ತರೂ ರೊಕ್ಕ ಸಿಗತಾನ; ಬದಿಕಿಸರೂ ರೊಕ್ಕ ಸಿಗತಾವ! ಮತ್ತ ಹೀಂಗೂ ಹೇಳಬಹುದು: ಈ ಡಾಕ್ಟರ ಕೈಯಿಂದ ಔಷಧ ತೊಗೊಂಡು ಸತ್ತವನಂ ಬದಿಕಿದ್ದಾಂಗ! ಅಪ್ಪಿತಪ್ಪಿ ಬದಿಕಿ ಉಳಿದರ, ಇವರ ಬಿಲ್ಲು ಪ್ರತಿನಿತ್ಯಾನೂ ಅವನ ಪ್ರಾಣಾತಗೀತಿರತಾವ!

(ಎಲ್ಲರೂ 'ಹಾ ಹಾ ಹಾ' ಎಂದು ನಗುವರು)

ಮು. ಮಾಸ್ತರ:—ನೀ ಭಾಳ ಅಧಿಕಪ್ರಸಂಗಿಪಾ ರಾಜಾ! ಸುಮ್ಮಗಿರಲಿಕ್ಕೆ ನೀ ಏನು ತೊಗೊಳ್ತೀ? ಏ ಗುಂಡಾ, ನೀ ಹೇಳಪಾ! ಏನಾಗಬೇಕಂತ ಮಾಡೀದಿ ನೀನು?

ರಾಜಾ:—ಅಂವ ಇನ್ನೇನಾಗತಾನ್ರಿ! ಹೇಳಿ ಕೇಳಿ ಕನ್ನಡಸಾಲೀ ಮಾಸ್ತರ್ರ ಮಗ! ಇವರಪ್ಪ 'ರತಈಕ' ಕಲಿಸಿ ಮುದುಕರಾದರು. ಇಂವ ಇನ್ನ ದೊಡ್ಡಾಂವಾಗಿ, ರಾಟೀ ನೂಲಲಿಕ್ಕೆ ಕಲಸಾಂವ! 'ತಿರುಗು ನನ್ನ ರಾಟೆ ಚಿಪ್ಪ, ತಿರುಗು ಗರಗರ.... ತಿರುಗು ಗರಗರ!' ಅಂತ ಹಾಡು ಕಲಿಸಿ, ಹುಡುಗರ ತಲೀನೂ ತಿರಗಸಾಂವ!

(ಹುಡುಗರೆಲ್ಲರೂ ಗಟ್ಟಿಯಾಗಿ ನಗುವರು.)

ಮು. ಮಾಸ್ತರ:—ಇರಲಿ ತಡಿಯೋ, ಹುಂ, ಹೇಳೋ ನೀ ಗುಂಡಾ!

ಗುಂಡ:—ನನಗ ಸ್ಕೂಲ್ ಇನಸ್ಪೆಕ್ಟರ್ ಆಗಬೇಕಂತ ಇಚ್ಛಾ ಅದನ್ರಿ! ಪಾಪ, ಕನ್ನಡಸಾಲೀ ಮಾಸ್ತರರನ್ನೆಲ್ಲಾ—ಈ ಇನಸ್ಪೆಕ್ಟರರು ಬಂದು ಬಂದು ಪ್ರಾಣಾತಗೀತಿರತಾರ! ನಾನು ಒಳ್ಳೇ ಇನಸ್ಪೆಕ್ಟರಾಗಿ, ಮಾಸ್ತರ್ ಜನರನೆಲ್ಲಾ ಒಳ್ಳೇ ರೀತಿಯಿಂದ ನೋಡೂ ಆದರ್ಶ ಇನಸ್ಪೆಕ್ಟರ್ ಆಗಬೇಕಂತ ಮಾಡೀನಿ!

ದತ್ತ:—ಮಗನs; ನಿನ್ನಂಥವರು ಇನಸ್ಪೆಕ್ಟರಾದರ ಮುಗದs ಹೋತ್ಯ. ಈ ಮಾಸ್ತರ ಜನಾ ಮನ್ಯಾಗs ಕೂತು ಸಂಬಳಾ ತಿಂತಾರ!

ರಾಜ :—ಅದಕ್ಕಲ್ಲಲೇ ದೆತ್ತಾ, ಇಂವ ಇನಸ್ಪೆಕ್ಟರ್ ಆಗೋದು! ನಾಕು ತಿಂಗಳ ಹಳ್ಳೀಸಾಲಿ ತಿರಿಗಿ ಬಂದರ, ವರ್ಷದ ಸಾಮಾನೆಲ್ಲಾ ಕಂಗ್ರಹ ಆಗತೈತಿದ; ಬಂದ ಸಗಾರೆಲ್ಲಾ ಪಾಕೀಟಿನೊಳಗ ಉಳಿತೈತಿ!

(ಮತ್ತೆ ಎಲ್ಲ ಹುಡುಗರೂ ನಗುವರು)

ಮ. ಮಾಸ್ತರ :—ಏ ರಾಜಾ, ನೀ ಏನು ಸುಮ್ಮನಽ ಕೂಡ-ತೀಯೋ, ಇಲ್ಲಿಂದ ಎದ್ದು ಹೋಗ್ತೀಯೋ? ಗೋಪಿ, ನೀ ಹೇಳಿನ್ನ! ಮುಂದ ಏನಾಗಬೇಕಂತ ವಿಚಾರ ಮಾಡೀದಿಯಪಾ!

ಗೋಪಿ :—ಒಂದು ತಾಲೂಕಿಗೆ ಮಾಮಲೇದಾರ ಆಗಬೇಕಂತ ನನಗ ಅನಿಸತೈತಿದರಿ!

ರಾಜ :—ಭಪ್ಪರೇ ಕುಲಕರ್ಣೀ ಮಗನ! ತಾಲೂಕಿನ ರೈತರ ಕೋಟೆ ಕಲ್ಯಾಣನ ನೋಡು ನಿನ್ನಿಂದ!

(ಹುಡುಗರೆಲ್ಲ ನಗುತ್ತಿರುವಾಗಲೆ)

ಮ. ಮಾಸ್ತರು :—ಶ್ಯಾ ಶ್ಯಾ! ಸುಮ್ಮಗಿರ್ರಿ! ಹುಂ, ಹೇಳು! ಮಾಮಲೇದಾರ ಆಗಿ ಏನು ಮಾಡಾಂವಪಾ ನೀನು?

ಗೋಪಿ :—ಇಡೀ ತಾಲೂಕಿನ ಅಧಿಕಾರ ಕೈಯೊಳಗ! ಬೇಕಾದ್ದು ಮಾಡಬಹುದು! ಎಲ್ಲಾ ಹಳ್ಳೀ ಸುಧಾರಿಸತೀನಿ! ಲಂಚಾ-ಪಂಚಾ ನಡೀದ್ಹಾಂಗ ಮಾಡತೀನಿ! ಮಂದಿಗೆಲ್ಲಾ ಸರಿ-ಯಾಗಿ ಕಾಳು-ಕಡಿ ಸಿಗೂಹಾಂಗ ವ್ಯವಸ್ಥಾ ಮಾಡತೀನಿ! ತಾಲೂ-ಕಿಗೆ ತಾಲೂಕನ್ನಽ ಮಾದರೀದು ಮಾಡಿ ತೋರಿಸಿ, ದೇಶದ ಉನ್ನ-ತಿಗೆ ಸಹಾಯ ಮಾಡತೀನಿ!

ರಾಜ :—ಭಪ್ಪರೆ, ದೇಶಭಕ್ತನ ಮೊಮ್ಮಗನಽ! ಮೊದಲ ನಿನ್ನ ಮಾರೀ ತಿಕ್ಕಿ ತೊಳಕೊಳ್ಳಲಿಕ್ಕೆ ಕಲಿ! ಆ ಮ್ಯಾಲ ದೇಶದ ಉನ್ನತೀ ಮಾಡೀಯಂತ!

(ಎಲ್ಲರೂ ದೊಡ್ಡದಾಗಿ ನಗುವರು.)

ಮ. ಮಾಸ್ತರು :—ಇರಲಿ ಬಿಡ್ರೀ! ಅಂವೊಬ್ಬ ಬಾಯಿಗೆ ಬಂದದ್ದು ಭಕಾಸತಾನ; ನೀವೆಲ್ಲಾ ನಗಲಿಕ್ಕೆ ಸುರೂಮಾಡತೀರಿ! ಏ ದತ್ತಾ, ಇನ್ನ ನಿನ್ನ ಸರತಿ! ನೀ ಏನಾಗಬೇಕಂತ ಯೋಚನಾ ಮಾಡೀದೀಯಪಾ?

ದತ್ತ :—ಈಗ ಟೆನೆಸ್ಸೀ ಕಾಯಿದೇ ಆಗಿ, ನಮ್ಮ ಜವಿನ-ದಾರರಿಗೆಲ್ಲಾ ಭಾಳ ತ್ರಾಸ ಆಗೇದ. ಮೊಸಲಿನ ಅರ್ಥಾಡಮ್ಮ ಸುದ್ಧಾ ನಮಗ ಹೊಲದ ಉತ್ಪನ್ನ ಸಿಗವೊಲ್ದು! ಅದಕ್ಕ ಅಸೆಂಬ್ಲೀ ಮೆಂಬರಾಗಿ ಹೋಗಿ, ಅಲ್ಲಿ ನಮ್ಮದೊಂದು ಪಕ್ಷಾಕಟ್ಟಿ, ಬಡಿದಾಡಿ, ಈ ಕಾಯದೇ ರದ್ದು ಮಾಡಿಸಬೇಕನಸತೈತಿ! ಅದಕ್ಕಾಗಿ, ಅಸೆಂಬ್ಲೀ ಮೆಂಬರಾಗಬೇಕಂತ ನನ್ನ ಆ್ಯಂಬಿಶನ್ ಏನ್ರಿ!

ರಾಜ :—ಭಲಾ ಮಗನಽ, ನಿಮ್ಮ ವತನದಾರೀ ರಕ್ತ ಎಲ್ಲಿ ಹೋದಿತು? ಅಲ್ಲಲೇ, ಮೂರು ವರ್ಷಾತು ನೋಡತೀನಿ— ಸಾಲ್ಯಾಗ ಕಲ್ತು, ಮನ್ಯಾಗ ಕಲ್ತು— '(Sit) ಸಿಟ್' ಅಂದರ ನಾಮಪದಾ ಅಂತ ಹೇಳೂ ಪಂಡಿತ ನೀನು! ಮಾಸ್ತರs ಬ್ಯಾಸತ್ತು ಮ್ಯಾಲ ಹಾಕಿದರಂತ, ಎತಡನೇ ಟೆಂತ್ತಾಕ ಏರಿದಾಂವ! ಅಸೆಂಬ್ಲೀ ಅಂದರ, ಅದೇನು 'ಹುಡುತುತೂ' ಆಟಾ ಅಂತ ನೂಡೀದೀ ಏನು?

(ಹುಡುಗರು ಪೊಳ್ಳನೆ ನಗುವರು.)

ಮ. ಮಾಸ್ತರ :—ಹುಂ, ಇನ್ನ ನಗೀ ನಿಲ್ಲಿಸರಿ! ಏ ಕಿಟ್ಟೂ, ನೀ ಏನಾಗಬೇಕಂತೀ, ಹೇಳಪಾ!

ಕಿಟ್ಟು :—ಏ ರಾಜಾ, ನೀ ಇಲ್ಲವ್ವs ಅಂದು ಚಾಷ್ಟೀ ಮಾಡ ಬ್ಯಾಡ! ನಾ ಸೂಪರಽ ಹೇಳಿಡತೀನಿ! ಮಾಸ್ತರ, ನನಗೆ ಸುಪ್ರಸಿದ್ಧ ಕವಿ ಆಗಬೇಕಂತ ಅನಸತೈತಿರಿ! ಕವಿ ಇದ್ದಂವಗ ಮಾನ ಪೆಜ್ಜ, ಮರ್ಯಾದಿ ಪೆಜ್ಜ! ರವೀಂದ್ರನಾಥ ಟಾಗೋರರ ಖ್ಯಾತಿ ಲೋಕ-ದೊಳಗೆಲ್ಲಾ ಹಬ್ಬೇದ! ಈಗ ನಮ್ಮ ನಾಡಿನೊಳಗs ನೋಡ್ರಿ! ಕೆ. ವಿ. ಪುಟ್ಟಪ್ಪ, ಅಂಬಿಕಾತನಯದತ್ತ, ಆನಂದಕಂದ—ಇವರೆ-ಲ್ಲಾರ ಹೆಸರೂ ಎಲ್ಲಾರ ಬಾಯೊಳಗೂ ಅದ! ಆದರ ಆಗಬೇಕು-ಸುಪ್ರಸಿದ್ಧ ಕವಿ.... ನೋಡ್ರಿ!

ರಾಜ :—ಅಬಾಬಾಬಾ! ಸುಪ್ರಸಿದ್ಧ ಕವಿರಾಜ ಕಿಟ್ಟೂಕೀ ಜಯ್! ಎಲೇ ಕಿಟ್ಟೂ, ಕವೀ ಆಗೂನರೊಳಗ ಏನು ಸುಖಾ ಅದ ಅಂತ ತಿಳಿದೀದಿ? ಅಗ್ಯರೇ ನೋಡು! ಆ ಮ್ಯಾಲ, ಕರಜಗೀ ಕಾಟೇಜಿನೊಳಗ ಕೂತು, ಪದಾನಾದೀ ನೀರು ಕುಡದs ಬದಕ ಬೇಕಾತೈತಿ! ಹುಷಾರಾಗಿರು! ಮಾಸ್ತರ, ಈನಾಯಕರ ರಂಗೊಬ್ಬ ಉಳದಾನ ನೋಡ್ರಿ ಇನ್ನೂ!

ಮ. ಮಾಸ್ತರ :—ಹೌದೋ ರಂಗಾ! ನೀ ಹೇಳಿನ್ನ: ಏನಾಗ ಬೇಕಂತ ವಿಚಾರ ಅದs ಅಪಾ ನಿಂ...?





ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ

ಗೋವಾ ಮಲಮ್

ಸ್ಟಾರ್ ಕಂಪನಿ,
ಬೆಳಗಾಂವಿ.

ರಂಗ :—ನಾ ನೋಡ್ರಿ. ಭಾಳ ದಿನಾ ಆತು ವಿಚಾರ ಮಾಡತೀನಿ! ಯಾವಾಗಲೂ ನನಗ ಅನಿಸತೀರೂವಂದರ, ಶ್ರೀರಾಮಕೃಷ್ಣ ಪರಮಹಂಸರ್ಹಾಂಗ—ಪ್ರಸಿದ್ಧ ಸತ್ಪುರುಷ ಆಗಬೇಕೂ ಅಂತ!

ರಾಜ :—ಒಳತನ್ನಲೇ ಮಳ್ಳ! ಪರಮಹಂಸರ್ಹಾಂಗ—ವಿವೇಕಾನಂದರ್ಹಾಂಗ ಆಗೂವಂದರ, ಸಂನ್ಯಾಸಿ ಆಗಬೇಕಾತಽದ. ಈಗ ನಿಮ್ಮ ಮನ್ಯಾಗ ನೋಡಿದರ, ಇದಽ ಬ್ಯಾಸಗ್ಯಾಗಽ ನಿನ್ನ ಮದಿವೀ ಮಾಡಿಬಿಡಬೇಕಂತಾಳ ನಿಮ್ಮ ಅಜ್ಜಿ! ಹೆಣ್ಣು ಸುದ್ದಾ ನೋಡಿ ಇಟ್ಟಾರಂತ! ಸಂನ್ಯಾಸಿ ಆದ ಮ್ಯಾಲ, ಮಾಡಿಕೊಂಡ ಹೆಣ್ತಿಗೇನ ಹೇಳತೀಯಲಾ! ಏನ ಆಕಿನ್ನೂ ಸುಪ್ರಸಿದ್ಧ ಸತ್‌ಪುರುಷಿನ್ನ ಮಾಡಿಕೊಂಡು ಜೋಡಿ ಕರಕೊಂಡಽ ಹೋಗ್ತೀಯೊ?

(ಎಲ್ಲರೂ ಗಟ್ಟಿಯಾಗಿ ನಗುವರು)

ಮ. ಮಾಸ್ತರ :— ಏ ರಾಜಾ, ಎಲ್ಲಾರನ್ನೂ ಚಾಪ್ಟೀ ಮಾಡತೀ....ಈಗ ನಿನ್ನ ಪಾಳೀ ಬಂತು. ನೀ ಏನ ಆಗಬೇಕಂತ ನಿರ್ಣಾಯ ಮಾಡೀದಿ? ಹೇಳಪಾ ನೋಡೋಣ!

ರಾಜ :—ನಾನಽ? ನನ್ನೇನ ಮಾಡತೀರಿ ಬಿಡ್ರಿ ಮಾಸ್ತರ! ಹೇಳಿ ಕೇಳಿ ಹಳ್ಳಿಯ ಹುಂಬ ನಾನು!

ಮ. ಮಾಸ್ತರ :—ಇರಲಿ ಹೇಳೋ! ಇಲ್ಲದ ರಗಳೀ ಹಚ್ಚಬ್ಯಾಡ! ಈಗ ಎಲ್ಲಾರೂ ಹೇಳಲಿಲ್ಲೇನು?

ರಾಜ :—ಖರೇ ಹೇಳಲ್ಯಾ ಮಾಸ್ತರ! ನನಗ ಇಂಥಾದ್ದ ಒಂದು ಆಗಬೇಕಂತ ಭಾಳ ಹೊತ್ತಿನ ವರೆಗೆ ಎಂದೂ ಅನಿಸೂ ದಿಲ್ಲ. ಹಾರಾಡೂ ಹಕ್ಕೀ ನೋಡತೀನಿ; ಆದರ್ಹಾಂಗs ನಾನು ಆಕಾಶದೊಳಗ ಪಾರುವ ಹಕ್ಕಿ ಆಗಬೇಕು ಅಂತೀನಿ! ಅರ ಅರಳಿ ನಗತಿರೂ ಹೂ ನೋಡತೀನಿ: ನಾನೂ ಒಂದು ಹೂವಾ ಅರಳಿ ನಗತಿರಬೇಕೂ—ಅಂತೀನಿ. ಒಳ್ಳೇ ಸಂಗೀತ ಕಿವಿಗೆ ಬಿದ್ದಾಗ ನಾನೊಬ್ಬ ಸಂಗೀತಗಾರ ಆಗಬೇಕಂತೀನಿ. ಸುಂದರ ಸುಂದ ಚಿತ್ರಾ ನೋಡಿದಾಗ, ನಾ ಒಬ್ಬ ಚಿತ್ರಕಾರ ಆಗಬೇಕೂ ಅಂತೀನಿ ಸಿನೇಮಾ ನೋಡಿ ಆನಂದ ಆದಾಗ, ನಾನೂ ಒಬ್ಬ ಸಿನೇಮಾ ನಟ ಆಗಬೇಕಂತೀನಿ; ಜಟ್ಟಿಗಳ ಕುಸ್ತೀ ನೋಡಿದ ಹುರುಪಿನೊಳಗ ನಾನೂ ಒಬ್ಬ ಪೈಲ್‌ವಾನ ಆಗಬೇಕಂತ ಅಂದಕೋತೀನಿ ಬ್ಯಾನೀ ಬಿದ್ದು ಬಳಲತಿರೂ ಬಡವರನ್ನ ನೋಡಿದಾಗ, ನಾ ಒಬ್ಬ ಡಾಕ್ಟರ್ ಆಗಬೇಕೂ ಅಂತ ವಿಚಾರ ಮಾಡತೀನಿ; ಬರಿ ಹೊಟ್ಟಿಂ ತಿರುಗೂ ಭಿಕ್ಷಾದವರನ್ನು ನೋಡಿದಾಗ, ನಾವೊಬ್ಬ ಕೋಟ್ಯಧೀ ಶ್ರೀಮಂತ ಆಗಬೇಕೂ ಅಂತ ಅಲೋಚನೀ ಮಾಡತೀನಿ ಪ್ರೀತಿಯಿಂದ ಇರೂ ಸಂಸಾರಾ ನೋಡಿದಾಗ, ನಾನೂ ಮದು ಆಗಿ ಸಂಸಾರಿಗ ಆಗಬೇಕಂತೀನಿ; ಬಡದಾಟದ ಬದುಕು ಕಣ್ಣ ಬಿದ್ದಾಗ, ಸಂನ್ಯಾಸಿ ಆಗಿ ನಿಶ್ಚಿಂತಿಂದ ಇರಬೇಕಂತ ಆಸೇ ಪಡತೀನಿ. ಪೋಸ್ಟ್‌ಮನ್ನರನ್ನ ಕಂಡಾಗ, ನಾನೂ ಪೋಸ್ಟ್ ಮನ್ನಾಗಿ ಪತ್ರಾ ಹಂಚತಿರಬೇಕಂತೀನಿ; ಭರ್ರಂತ ಹೋಗೂ ಮೋಟಾರು ಕಂಡಾಗ, ನಾನೂ ಒಬ್ಬ ಮೋಟಾರ್ ಡ್ರಾಯ್ವರ ಆಗಬೇಕಂತ ಆತುರಪಡತೀನಿ. — ಮಾಸ್ತರs! ಹೀಂಗ ಹೇಳತs ಹೋದರ ವ್ಯಾಳ್ಯಾನs ಸಾಲಲಿಕ್ಕಿಲ್ಲ. ಹೊತ್ತಾತಿನ್ನ ಮನೀಗೆ ಹೋಗೋಣ ಏಳ್ರಿ! ಏ, ಡಾಕ್ಟರ್ ಶೀನಿ, ಪ್ಲೇಗು ಕಾಲರಾ ನಿನ್ನ ಕರೀತಾವ ನಡಿ! ಮತ್ತ ವಕೀಲ ನಾನಾ ಸಾಹೇಬ್! ನಿಮ್ಮ ಮೊಕದ್ದಮಾ, ಕೈಫೀಯತ್ತು, ಹುಕುಮ ನಾಮಾ, ಸೆಶನ್ಸ್ ಕಮಿಟಿ, ಸಮನ್ಸ್ ಬಜಾವಣೆ.....

(ಎಲ್ಲರೂ ನಗುವರು)

ಮ. ಮಾಸ್ತರು :—ಆಯಿತು, ಇಂದಿನ ಕಾರ್ಯಕ್ರಮವನ್ನ ಇನ್ನ ಮುಗಿಸೋಣ! ಎಲ್ಲರೂ ನಿಮ್ಮ ನಿಮ್ಮ ಅಪೇಕ್ಷಾ ತಿಳಿಸಿದಿರಿ ಆದರ ರಾಜನ ಹಾಂಗ ಹುಡುಗರ ಮನಸ್ಸು ಬ್ಯಾರೇ ಬ್ಯಾರೆ ಸೊಗಸು—ಸೌಂದರ್ಯ ತಿಳದು ಅನುಭವಿಸತಿರೋದು ಹುಡುಗರ ಮುಂದಿನ ಜೀವನಕ್ಕ ಒಳ್ಳೇದು! ಈಗ ಪ್ರಾರ್ಥನಾ ಮುಗಿಸಿ ಹೊರಟು ಬಿಡೋಣ!

ಎಲ್ಲರೂ :—ಹೌದರಿ! ಇಲ್ಲೇ ಮುಗಿಸೇ ಬಿಡೋಣ್ರಿ!

ಓಂ ಸಹನಾವವತು ಸಹನೌಭುನಕ್ತು,
ಸಹವೀರ್ಯಂ ಕರವಾವಹೈ।
ತೇಜಸ್ವಿನಾವಧೀತಮಸ್ತು ಮಾವಿದ್ವಿಷಾವಹೈ॥
ಓಂ ಶಾಂತಿಃ ಶಾಂತಿಃ ಶಾಂತಿಃ!!

ಜಯಹಿಂದ!

ಸಾಕ್ಷಾತ್ಕಾರ

ಶ್ರೀ. ಚೆನ್ನವೀರ ಕಣವಿ, ಧಾರವಾಡ

★

ಮೂಡಣದ ಕೋದಿಯೊಡೆಯಿತು, ಬೆಳಕು ಪರಿಯಿತಿಗೊ
ದೈವ ತೆರೆಯಿತು ಜಗದ ಜನದ ಮನದ!
ಉಸೆಯು ತಲೆಬಾಚಿ ನಸುನಾಚಿ ಕೆಂಪೇರಿಹಳು
ಬಣ್ಣನೆಗೆ ಬಾರದಿದೆ ಮೊಗದ ಬಿನದ!
ವಿಶ್ವವೀಣಾವಾಣಿ ಹಕ್ಕಿ ನಿನದ.

ಆದುದಾಯಿತು ಹಿಂದು ಶುಭ ನವೋದಯವಿಂದು
ಕಾರಿರುಳ ಕುರುಡಿಂಗೆ ಕಣ್ಣು ಬಂತು!
ಅರುಣನುದಯಕೆ ಕರುಣೆ ಕೊನರಿ ದಾಂಗುಡಿಟ್ಟು
ಹೂವಿನಲಿ ದೈವಿಕತೆ ಕರುವಿಟ್ಟಿತು;
ಜೀವ-ದೇವರ ಮಿಲನ ಝೇಂಕರಿಸಿತು!

ಎದೆಯ ಮೆಲ್ವಾಸಿನಲಿ ಕಲ್ಪನೆಯ ತಲ್ಪದಲಿ
ನಿದ್ರೆಗೈದಿಪ ನನ್ನ ಮುದ್ದು ಹಕ್ಕಿ
ಆಗಲಿ ಕೂಡುವ ಸುಖವ ನೆಚ್ಚಿ ಹಾರಿಸಿದೆನಿದೊ
ನೀಲದಲಿ ತೇಲಾಡು ಪ್ರಾಣಪಕ್ಷಿ
ಪ್ರೇಮದೌದಾರ್ಯವಿದು, ಆತ್ಮಸಾಕ್ಷಿ!

ಇರುಳ ಮೌನ

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ., ಹೈದರಾಬಾದ್

★

೧

ಜಗದ ಜಡ-ಜಂಗಮವು ಜೀವಚೇತನ ತುಂಬಿ
ಮೂಲೆ ಮೂಲೆಗು ತನ್ನ ಸಿರಿವೆಳಕನೆರೆದು...
ದಿನದ ದುಡಿತದಿ ದಣಿದು ರವಿದೇವ ಪವಡಿಸಿರೆ
ಜಗವನಾವರಿಸುವುದು ಕತ್ತಲೆಯು ಕವಿದು.

೨

ಕಾಲಿಮೆಯ ಕತ್ತಲೆಯು ತಿರೆಯನಾದರಿಸುತ್ತೆ
ಹೈದಿಂಬಿಯಾಕೃತಿಯ ನೆನಪ್ತ ತಂದಪುದು;
ಅವನು ಬೀಸಿದ ಮಾಯೆಯೊ ಬಲೆಯೊ ಎಂಬಂತೆ
ನಿಶೆಯ ಮೌನವು ಜಗವನಾಳುತಿಹುದು.

೩

ದೆಸೆದೆಸೆಯ ಬೆಳಗಿರ್ದ ದಿವ್ಯಪ್ರಭೆಯಡಗುತಲಿ
ಎತ್ತಲೂ ಪರಡುತಿದೆ ಕತ್ತಲೆಯ ಕಾಳು.
ದಿನದ ಗದ್ದಲವಡಗಿ ವಿಶ್ವಚೇತನವುಡುಗಿ
ಮುಸುಕುತಿದೆ ಶೂನ್ಯತೆಯ ಘನಮೌನದಿರುಳು.

೪

ಕಾಡಿನಲಿ ಮೃಗಕುಲದ ಸಂಚಾರವಿನಿತಿಲ್ಲ,
ಬೀಡು-ಬಸದಿಗಳಲ್ಲಿ ಜನಗದ್ದಲಿಲ್ಲ.
ಖಗಕುಲದ ಉಲಿವಿಲ್ಲ ದನಕರುಗಳುಲುಹಿಲ್ಲ
ಸುಯ್ಮಿಲರ ಸುಳಿದಾಟ ಸಹ ಕೇಳುತಿಲ್ಲ.

೫

ಗ್ರಾಮದಲಿ ಪಂಜಜನರಾರ್ಭಟದ ದನಿಯಿಲ್ಲ
ಸಾಲೆಯಲಿ ಅಯ್ಯನವರರಚುತಿಲ್ಲ.
ಬೀದಿಯಲಿ ಭಿಕ್ಷುಕರ ಗಂಟೆ-ನಾದವು ಇಲ್ಲ,
ಊರ ಗೌರ ನಾಯಿ ಬೊಗಳುತಿಲ್ಲ.

೬

ನಗರದಲಿ ನಾಗರಿಕರಲೆವಾಟ ನಸುವಿಲ್ಲ
ಲಗುಬಗೆಯ ವಾಹನಗಳೋಡಾಟವಿಲ್ಲ.
ಬೀದಿ ವ್ಯಾಪಾರಿಗರ ನಿಡುಸರದ ಸೊಲ್ಲಿಲ್ಲ,
ಹೊಗೆ ಬಿಡುವ ಗಿರಣಿಗಳು ಕೂಗುತಿಲ್ಲ.

೭

ಹಳ್ಳಿ ಪಲಸಂಗಿಯಲಿ ದಿಲ್ಲಿ ಪಟ್ಟಣದಲ್ಲಿ
ಮಂದಿರ-ಮಸೀದೆಯಲಿ ಕ್ರೈಸ್ತ ದೇಗುಲದಿ
ಬಲ್ಲಿದರ ಮಹಲಿನಲಿ ಒಡಜನರ ಗುಡಿಸಿಲಲಿ—
ಆಳುತಿದೆ ನೀರವತೆ ಸಕಲಭೂತಲದಿ.

೮

ನಿಃಶಬ್ದದಿರುಳಿನಲಿ ನೀಗೈವುದೇನೆಂದು
ಕುಪಿಸಿ ಕೆಡಿಕಾರದಿರು ಹೇ ಇರುಳಮೌನ!
ನಿನ್ನ ಕಡು ಚಾಸನಕೆ ಇದಿರು ನಡೆವವರುಂಟೆ?
ನುಲಗುವೆನು ಇದೊ ಮುಗಿಸಿ ನಿನ್ನ ಸ್ತುತಿಗಾನ.

ವ್ಯಾಪಾರದ ರಾಷ್ಟ್ರೀಕರಣ

ಶ್ರೀಯುತ. ಎಚ್. ಬಿ. ಶಿವಮೊಗ್ಗಿ, ಸ್ಕೂಲ ಆಫ್ ಎಕನಾಮಿಕ್ಸ್, ಮುಂಬಯಿ.

ಅಡಕವಾದ ಅಂಶಗಳ ಪೃಥಕ್ಕರಣ.

ಭಾರತದ ವ್ಯಾಪಾರದ ಪರಿಸ್ಥಿತಿಯಿಂದು ಹದಗೆಟ್ಟು ಹೋಗಿದೆ. ಪೂರ್ಣವಾಗಿ ಸರಕಾರದ ಕೈಯಲ್ಲಿಯೂ ಇಲ್ಲ; ವ್ಯಾಪಾರಿಗಳ ಕೈಯಲ್ಲಿಯೂ ಇಲ್ಲ ಸರಕಾರದ ಕೈಯಲಿದ್ದ ವ್ಯಾಪಾರ ಲಂಚಗುಳಿಗಳ ಮೂಲಕ ತೊಂದರೆ ಕೊಡುತ್ತಲಿದೆ; ವ್ಯಾಪಾರಿಗಳ ಕೈಯಲ್ಲಿರುವ ವ್ಯಾಪಾರ, ಕಳ್ಳಪೇಟಿಗರ ಮೂಲಕ ತೊಂದರೆ ಕೊಡುತ್ತಲಿದೆ!

ಸರಕಾರಿ ವ್ಯಾಪಾರ ಪದ್ಧತಿಯನ್ನು ರೂಢಿಯಲ್ಲಿ ತರುವುದರ ಶಕ್ಯಾಶಕ್ಯತೆಯನ್ನು ನಿಚಾರಿಸಿ ವರದಿ ಮಾಡಲು, ಮಧ್ಯವರ್ತಿ ಸರಕಾರದ ವಾಣಿಜ್ಯ ಶಾಖೆಯು, ಸರಕಾರಿ ವ್ಯಾಪಾರ ಸಮಿತಿಯನ್ನು ಶ್ರೀ. ಪಂಜಾಬುರಾವ ದೇಶಮುಖರ ಅಧ್ಯಕ್ಷತೆಯಲ್ಲಿ ನೇಮಿಸಿರುತ್ತದೆ. ಸದ್ಯಕ್ಕೆ ಈ ಸಮಿತಿಯು ದೇಶದ ವಿವಿಧ ಸ್ಥಳಗಳನ್ನು ಸಂದರ್ಶಿಸಿ, ಈ ವಿಷಯಕ್ಕೆ ಸಂಬಂಧಪಟ್ಟ ಅನೇಕ ಮಹನೀಯರ ಮತ್ತು ಸಂಘ-ಸಂಸ್ಥೆಗಳ ಮತವನ್ನು ಕೇಳಿಕೊಳ್ಳುತ್ತಿರುವುದು. ಬಹುತರವಾಗಿ ಎಲ್ಲ ವಾಣಿಜ್ಯ ಮತ್ತು ವ್ಯಾಪಾರಿ ಮುಂದಾಳುಗಳು, ವ್ಯಾಪಾರದ ರಾಷ್ಟ್ರೀಕರಣವು ತಾತ್ತ್ವಿಕ ದೃಷ್ಟಿಯಿಂದ ವೈಯಕ್ತಿಕ ಸಾಹಸಕ್ಕೆ ವಿರೋಧಿಯಾಗಿರುವುದಲ್ಲದೆ, ವ್ಯಾವಹಾರಿಕವಾಗಿ ಅನ್ಯಾಯವೂ ಆತ್ಮಘಾತಕವೂ ಆಗುವುದೆಂದು ಏಕಕಂಠದದಿಂದ ಸಾರಿದ್ದಾರೆ. 'ಹಿಂದೀ ವಣಿಕ್ ಸಂಘ,' 'ಸಂಯುಕ್ತ ವಣಿಕ್ ಸಂಘ' ಮೊದಲಾದ ವಾಣಿಜ್ಯ ಶಾಖೆಗಳು, ಹೊಸ ಪಾಠ ಕಲಿಸುವ ಯಾವುದೇ ಕಾರ್ಯಕ್ರಮಕ್ಕೆ ಇದು ತಕ್ಕ ಸಮಯವಲ್ಲವೆಂದು ಸಾರಿ ಹೇಳಿರುತ್ತವೆ. ಅನಾವಶ್ಯಕವಾಗಿ ಇಂಥ ವಿಚಾರ ದ್ವಂದ್ವಕ್ಕೆ ಎಡೆ ಮಾಡಿ ಕೊಡುವುದರಿಂದ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಹದಗೆಡುವುದೆಂದು ಬಲ್ಲವರು ನುಡಿದಿದ್ದಾರೆ. ಸರಕಾರದ ವಕ್ತಾರನು, ಅಪಾರ್ಥವನ್ನು ಹೋಗಲಾಡಿಸುವುದಕ್ಕಾಗಿ ಒಂದು ಹೇಳಿಕೆ ಕೊಟ್ಟು, ಸರಕಾರಿ ವ್ಯಾಪಾರದ ಸಾರಾಸಾರ ವಿಚಾರ ಮಾಡುವುದೇ ಸರಕಾರದ ಮುಖ್ಯ ಇಚ್ಛೆಯಾಗಿದ್ದು, ಯಾವ ಭೀತಿಯನ್ನೂ ತಳೆಯಬಾರದೆಂದು ಕೇಳಿಕೊಂಡಿದ್ದಾನೆ. ವ್ಯಾಪಾರವನ್ನು ಸರಕಾರವು ನಿರ್ವಹಿಸುವುದರಿಂದಾಗುವ ಲಾಭಾಲಾಭಗಳ ವಿಸ್ತರಿತ ವಿವೇಚನೆ ಮಾಡುವುದೇ ಪ್ರಸ್ತುತ ಲೇಖಕರ ಉದ್ದೇಶವಾಗಿದೆ.

ಸರಕಾರದ ವಿಚಾರ

ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಅನೇಕ ಸೂಕ್ಷ್ಮ ಧಣಕಾಸಿನ ತೊಂದರೆಗಳು ಉದ್ಭವಿಸುವುದರಿಂದ, ಸರಕಾರದ ಹೊರತು ಉಳಿದ ಖಾಸಗೀ ಸಂಸ್ಥೆಗಳಿಗೆ ಹೊರದೇಶ ವ್ಯಾಪಾರವನ್ನು ಸುಗಮವಾಗಿ ಸಾಗಿಸುವುದು ಶಕ್ಯವಾಗಲಾರದೆಂದು ತೋರುತ್ತದೆ. ಈ ಸದ್ಯಕ್ಕೆ, ವಿನಿಮಯ ನಿಯಂತ್ರಣವು ಸರಕಾರದ ಕೈಯ್ಯಲ್ಲಿಯೆ ಇರುವುದರಿಂದ, ಆಂತರದೇಶ ವ್ಯಾಪಾರವೂ ಅದರ ಹಸ್ತಗತವಾಗುವುದೇ ಲೇಸು. ಯುದ್ಧಕಾಲದಿಂದ ಸಾಗಬಂದ ವಿನಿಮಯ ನಿಯಂತ್ರಣಗಳು ಇನ್ನೂ ಜಾರಿಯಲ್ಲಿರುವುದರಿಂದ, ಹೊರದೇ ವ್ಯಾಪಾರಿ ಚಟುವಟಿಕೆಗಳ ಸರಕಾರೀಕರಣ ಎಂದೋ ಆಗಿದೆಯೆಂದ ಹೇಳಿದರೆ ಅತಿಶಯೋಕ್ತಿ ಎನಿಸಲಾರದು. ಆದರೆ ಸರಕಾರವು ಪ್ರಶ್ನೆಯ ಬಗ್ಗೆ ಆನಾವಶ್ಯಕ ನಿಚಾರನೆತ್ತಿ, ಅಪ್ರಯೋಜ ದ್ವಂದ್ವ ಅನುವುಮಾಡಿಕೊಟ್ಟಿದೆ.

ಜಗತ್ತಿನ ಬೇರೆಬೇರೆ ಸರಕಾರಗಳಲ್ಲಿ, ಪರಸ್ಪರವಾಗಿ ಅನೇ ದ್ವಿಮುಖ ವ್ಯಾಪಾರೀ ಒಪ್ಪಂದಗಳಾಗುವುದುಂಟು. ಹಿಂದುಸ್ತಾನವಾದರೂ ಇಂದು ಜಗತ್ತಿನ ಹತ್ತಾರು ದೇಶಗಳೊಡನೆ ದ್ವಿಮುಖ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಂಡಿದೆ. ಈ ವ್ಯಾಪಾರೀ ಒಪ್ಪಂದದ ಕರಾರುಗಳನ್ನು ಸರಿಯಾಗಿ ಪಾಲಿಸಲು, ಎಲ್ಲ ಸೂತ್ರಗಳು ಸರಕಾರದ ಕೈಯಲ್ಲಿ ಇರುವುದು ಆವಶ್ಯವೆಂದು ತಿಳಿಯಲಾಗಿದೆ. ಅಧಿಕ ಲಾಭದ ಧೋರಣವನ್ನೇ ಪಾಲಿಸುವ ಖಾಸಗೀ ಉದ್ಯೋಗಸ್ಥರು ಹೊರದೇಶ ವ್ಯಾಪಾರ ಸಾಗಿಸಿದರೆ, ಒಪ್ಪಂದದ ಅಂಶಗಳನ್ನು ಕಾರ್ಯಕಾರಿಮಾಡುವುದು ರಾಷ್ಟ್ರಕ್ಕೆ ಕಠಿಣವಾಗಬಹುದು ಆದುದರಿಂದ 'ಮಧ್ಯವರ್ತಿ ವ್ಯಾಪಾರಿ ಸಂಸ್ಥೆ'ಯನ್ನೊಂದ ಸ್ಥಾಪಿಸಿ, ಅದರ ಮುಖಾಂತರ ವಿಶಿಷ್ಟ ವಸ್ತುಗಳ ಆಂತರ ರಾಷ್ಟ್ರೀಯ ವ್ಯಾಪಾರವನ್ನು ವಿಶಿಷ್ಟ ದೇಶಗಳೊಂದಿಗೆ ಸರಕಾರವೆ ನಿರ್ವಹಿಸುವ ವಿಚಾರವಿರುತ್ತದೆ.

ಸರಕಾರವು ವ್ಯಾಪಾರವನ್ನು ನಿರ್ವಹಿಸುವುದರಿಂದ ಗ್ರಾಮೋದ್ಯೋಗಗಳ ಪುನರುಜ್ಜೀವನಕ್ಕೆ ಸಹಾಯವಾದೀತೆಂದೂ ನಂಬಲಾಗಿದೆ. ಆದರೆ ಎಲ್ಲಕ್ಕೂ ಮುಖ್ಯಸಂಗತಿಯೆಂದರೆ, ವ್ಯಾಪಾರದ ರಾಷ್ಟ್ರೀಕರಣದಿಂದ ಕಳ್ಳಪೇಟಿ ಮತ್ತು ಕರತಪ್ಪಿಸುವುದು ಮಾಯ

ನಾಗಬಹುದು. ಇವೆಲ್ಲ ಅಂಶಗಳನ್ನು ಗಮನಿಸಿ ' ಸರಕಾರವು ಈ ಸಮಸ್ಯೆಯ ಸಾರಾಸಾರ ಪರಿಶೀಲನೆಗೆ ಸಮಿತಿಯನ್ನೊಂದು ನೇಮಿಸಿದೆ. ಆದರೆ ಸಮಿತಿಯನ್ನು ನೇಮಿಸುವುದರಿಂದ ಯಾವ ಮಹತ್ಕಾರ್ಯವಾದಂತಾಗಲಿಲ್ಲ. ಏಕೆಂದರೆ ಇಲ್ಲಿಯವರೆಗೆ ನಮ್ಮ ಸರಕಾರವು ಗುಡ್ಡದಷ್ಟು ಮಾತಾಡಿ ಕಡ್ಡಿಯಷ್ಟು ಕೆಲಸ ಮಾಡಿದ್ದು ಕಣ್ಣಿಗೆ ಕಾಣುವುದು. ತಾತ್ವಿಕ ವಿಚಾರ, ಸಮಿತಿಗಳ ಸುರಿಮಳೆ, ಉಪದೇಶದ ಧಾರೆಯೆರೆದರೆ ಹೊಟ್ಟೆಗೇನು ಕೇರುಹಾಕುವುದೇ ?

ವ್ಯಾಪಾರಸಂಬಂಧಗಳ ದೃಷ್ಟಿಕೋನ

ಸರಕಾರೀ ವ್ಯಾಪಾರದ ವಿಚಾರವನ್ನು ವ್ಯಾಪಾರದ ಧುರೀಣರು ತಾತ್ವಿಕವಾಗಿಯೂ ವ್ಯಾವಹಾರಿಕವಾಗಿಯೂ ವಿರೋಧಿಸಿದ್ದಾರೆಂದು ನೀಲೆಯೇ ಹೇಳಲಾಗಿದೆ. ನಮ್ಮ ರಾಜ್ಯಘಟನೆಯಲ್ಲಿ ಕೊಡಲಾದ ಆರ್ಥಿಕ ಸ್ವಾತಂತ್ರ್ಯದ ನೆಲೆಲೆ. ಈ ಹೆಜ್ಜೆಯಿಂದ ಪಟ್ಟುಬೀಳುವುದೆಂದು ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಹಿಂದೀ ವ್ಯಾಪಾರಿಗಳ ಸಂಘದ ಭಾಷೆಯಲ್ಲಿಯೇ ಹೇಳುವುದಾದರೆ: " ಸ್ವಾತಂತ್ರ್ಯದ ಮೂಲಭೂತವಿಚಾರವನ್ನು ಸರಕಾರೀ ವ್ಯಾಪಾರವು ಅಲ್ಲಗಳೆಯುವುದು." ವ್ಯಾವಹಾರಿಕ ದೃಷ್ಟಿಯಿಂದಂತೂ ಈ ಯೋಜನೆ ತೀರ ಹುಡುಗಾಟಿಕೆಯೆಂದೂ ಆತ್ಮಘಾತಕವೆಂದೂ ವ್ಯಾಪಾರಸ್ಥರು ಸಾರಿದ್ದಾರೆ. ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸುವ ಬದಲು ನಾನಾಬಗೆಯ ಸಂಕಟಯಾಸ್ಪದ ಸಮಸ್ಯೆಗಳಿಗೆ ಕೈಹಾಕುವುದು ಹುಂಬತನದ ಕೋಲಾಹಲವೆಂದೂ ದಡ್ಡತನದ ಡೊಂಬರಾಟವೆಂದೂ ಎಲ್ಲೆಡೆಯಲ್ಲಿಯೂ ಹೇಳಲಾಗಿದೆ. ತನ್ನ ಭಾರವೇ ತನಗೆ ಎತ್ತದಿರುವ ಈಗಿನ ಕಠಿನಕಾಲದಲ್ಲಿ, ಸರಕಾರವು ಇನ್ನಷ್ಟು ಭಾರಹೊರಲು ಹವಣಿಸುವುದು ಸರಿಯಲ್ಲ. ಸರಕಾರೀ ಆಡಳಿತಗಾರರಲ್ಲಿ ಯೋಗ್ಯತೆ ಮತ್ತು ಕುಶಲತೆಯಿದ್ದರೆ ಆ ಮಾತು ಬೇರೆ. ಎಲ್ಲಿಯವರೆಗೆ ಲಂಚದ ಹೊಂಚು ಸರಕಾರದಲ್ಲಿರುವುದೋ ಅಲ್ಲಿಯವರೆಗೆ, ಸರಕಾರೀಕರಣದ ಯಾವುದೇ ಪ್ರಶ್ನೆಯು ವಿಘಾತಕವಾದೀತು. ಸರಕಾರಿ ಅಧಿಕಾರಿಗಳ ಕುಶಲತೆ ಮತ್ತು ನೀತಿಯ ಮಟ್ಟವನ್ನು ಎತ್ತರಿಸುವುದು ನಮ್ಮ ಜನತಾಸರಕಾರದ ಪ್ರಥಮ ಕರ್ತವ್ಯವಾಗಬೇಕು.

ಇಲ್ಲಿಯವರೆಗೆ ಸರಕಾರವು ಅನೇಕ ವಸ್ತುಗಳ ವ್ಯಾಪಾರವನ್ನು ತನ್ನ ಕೈಯಲ್ಲಿಯೇ ತೆಗೆದುಕೊಂಡಿದೆ. ಆದರೆ ಒಂದರಲ್ಲಿಯೂ ಯಶಸ್ಸು ಸಿಗಬೇಕಾದಷ್ಟು ಸಿಕ್ಕಿರುವುದಿಲ್ಲ. ಆದುದರಿಂದ ಉತ್ಪಾದನೆಯಿಂದ ಹಿಡಿದು ಸಂಪೂರ್ಣ ವಿತರಣವನ್ನು ಸರಕಾರವು ಕೈವಶಮಾಡಿಕೊಳ್ಳುವುದು ಅಪ್ರಯೋಜಕವಾಗಬಹುದು. ಸರಕಾರೀ ಆಡಳಿತ ಯಂತ್ರದ ಖರ್ಚು ಖಾಸಗೀ ವ್ಯಾಪಾರಯಂತ್ರದ ಖರ್ಚಿಗಿಂತ ಹೆಚ್ಚಾಗಿ, ಲಾಭದ ಬದಲು ಹಾನಿಯಾದರೂ ಆದೀತು. ಇದರಿಂದ ಜಗಳಗಳನ್ನು ಏಸುವ ಪ್ರಸಂಗಬಂದರೂ ಬರಬಹುದು. ಇಲ್ಲಿಯತನಕ ಸರಕಾರವೇ ಸಾಗಿಸುತ್ತ ಬಂದ ಕಬ್ಬಿಣ-ಉಕ್ಕಿನ ವ್ಯವಹಾರ, ಬಟ್ಟೆ, ಆಹಾರಧಾನ್ಯ ಇನ್ನಿತರ ವ್ಯಾಪಾರದಲ್ಲಿ ಸರಕಾರದ ಆಯೋಗ್ಯತೆ ತಿಳಿಯದಿರದು. ಆದ್ದರಿಂದ ಸರಕಾರವು ವ್ಯಾಪಾರದ ರಾಷ್ಟ್ರೀಕರಣದ ಯೋಜನೆಯನ್ನು ಬಿಟ್ಟುಕೊಡುವುದು ಒಳಿತು. ಆದರೆ ವೈಯಕ್ತಿಕ ಲಾಭಬಡಕತನ ಮಾಯವಾಗಬೇಕು. ಕಳ್ಳಸಂತೆ, ಲಾಭಬಡಕತನ ಮೊದಲಾದ ವ್ಯಾಪಾರದ ಕೊಳೆಯನ್ನು ಇನ್ನಿತರ ದಾರಿಯಿಂದ ಕಿತ್ತಿಹಾಕಬಹುದು.

ಸಹಕಾರೀ ವ್ಯಾಪಾರವು ಆವಶ್ಯಕ!

ಸರಕಾರೀ ವ್ಯಾಪಾರ ಮತ್ತು ಖಾಸಗೀ ವ್ಯಾಪಾರದ ಬದಲು ಸಹಕಾರೀ ವ್ಯಾಪಾರಪದ್ಧತಿಯನ್ನು ರೂಢಿಯಲ್ಲಿ ತರುವುದು ಉತ್ತಮ. ಈಗಾಗಲೇ ಹಳ್ಳಿಯ ಒಕ್ಕಲುತನದ ವ್ಯಾಪಾರವನ್ನು ಈ ತತ್ತ್ವದ ಮೇಲೆ ಕಟ್ಟುವುದು ಸಾಗಿದೆ. ಆದ್ದರಿಂದ ಇಡೀ ದೇಶದ ವ್ಯಾಪಾರವನ್ನೇ ಸಹಕಾರೀ ತತ್ತ್ವದ ಪ್ರಕಾರ ಏಕೆ ಕಟ್ಟಬಾರದು ? ಇದರಿಂದ ಸಾಂಘಿಕ ವ್ಯವಹಾರದಲ್ಲಿ ವೈಯಕ್ತಿಕ ಸಾಹಸ ಮತ್ತು ಕುಶಲತೆಗಳಿಗೆ ಅವಕಾಶ ದೊರೆಯುವುದು ಸಮಾಜಲಾಭದಲ್ಲಿ ವ್ಯಕ್ತಿಗೂ ಲಾಭವಾಗುವುದು. ಸರಕಾರಿ ವ್ಯಾಪಾರಕ್ಕೆ ವ್ಯಯ ಮಾಡುವ ಹಣವನ್ನು ಸಹಕಾರೀ ವ್ಯಾಪಾರಕ್ಕೆ ಕೊಟ್ಟರೆ, ಅದು ಯಶಸ್ವಿಯಾಗುವುದು ಖಂಡಿತ. ಅದರಂತೆ ಹೊರದೇಶ ವ್ಯಾಪಾರದಲ್ಲಿ ಇನ್ನೂ ಉಳಿದಿರುವ ಪರದೇಶೀ ಸಂಘಗಳ ಸಿಂದೀಕರಣ ಮಾಡಿ, ಅವನ್ನು ಸಹಕಾರಿ ತತ್ತ್ವದ ಮೇಲೆ ಪುನರ್ರಚಿಸಬೇಕು. ಎಲ್ಲ ವ್ಯಾಪಾರದ ಸೂತ್ರಗಳನ್ನು ಪಡಿಸಲು ' ಕೇಂದ್ರ ಸಹಕಾರೀ ವ್ಯಾಪಾರ ಸಂಸ್ಥೆ ' ಎಂಬುದನ್ನು ಸ್ಥಾಪಿಸಬೇಕು. ಇದರಿಂದ ಸರಕಾರೀ ವ್ಯಾಪಾರಕ್ಕಿಂತ ಹೆಚ್ಚು ಲಾಭವಾಗಬಹುದೆಂದು ನಮ್ಮ ಅನುಭವದಿಂದ ಹೇಳಬಹುದು.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

● ಧ್ವನಿವರ್ಧಕ ಯಂತ್ರದ ಮೂಲಕ
★ ಉತ್ತಮ ಚಿತ್ರಗಳ ಮೂಲಕ
● ಮ್ಯೂಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಸಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಮಲೆನಾಡ ರಾಣಿ

(ಸಣ್ಣಕಥೆ)

ಶ್ರೀ. ಕೊ. ಸು. ಸೀತಾರಾಮು, ಸೆಂಟ್ರಲ್ ಕಾಲೇಜ್,
ಬೆಂಗಳೂರು

★

ಹೊರಗೆ ಸೌಂದರ್ಯದ ನಿಧಿ. ಒಳಗೆ ಹಾವಿನ ವಿಷದ ಹುತ್ತ. ಮಾನವನು ಭ್ರಮಿಸಿ ಜೀವನವನ್ನು ತೊಂದರೆಗೀಡು ಮಾಡಿಕೊಳ್ಳುವುದು ಇಂತಹ ಸಂದರ್ಭಗಳಲ್ಲಿಯೆ !

"ಅವಳು ನಿಮ್ಮನ್ನು ಖಂಡಿತ ಆದರಿಸುತ್ತಾಳೆ. ಮರೀ ಬೇಡಿ, ಅಲ್ಲೇ ಒಂದು ದಿನ ಇದ್ದುಬಿಟ್ಟು ಹೋಗಿ !" ಎಂದರು ರಾಮಣ್ಣನವರು

" ಆಗಲಿ " ನಾವೆಲ್ಲ ಒಟ್ಟಿಗೆ ಉತ್ತರಕೊಟ್ಟೆವು. ಆಗಲೇ ಹಕ್ಕಿಗಳ ಚಿಲಿಪಿಲಿ ಕೂಗು ನಿಂತಿದ್ದಿತು. ಅವೆಲ್ಲಾ ದೂರದೂರಕ್ಕೆ ಹಾರಿ ಹೋಗಿದ್ದುವು. ಮನೆಯ ಎದುರಿಗೆ ದಟ್ಟವಾಗಿ ಬೆಳೆದಿದ್ದ ಮರಗಳ ಸಂದಿನಲ್ಲಿ ಎಲೆಗಳನ್ನು ತಳ್ಳಿಕೊಂಡು, ಚಿನ್ನದ ಬಿಸಿಲೆಳೆಗಳು ಬಂದು ನೆಲದ ಮೇಲೆ ಬಿದ್ದಿದ್ದುವು.

'ಇನ್ನು ಹೊತ್ತಾಗಿ ಬಿಡುತ್ತೆ; ಬಿಸಿಲೇರ್ತಿದೆ ಹೊರಡಿ!' ರಾಮಣ್ಣನವರು ಅಪ್ಪಣೆಕೊಟ್ಟರು. ನಾವೆಲ್ಲ ಹೊರಟೆವು. ನಮ್ಮದೊಂದು ಕಾಲೇಜು ವಿದ್ಯಾರ್ಥಿಗಳ ಗುಂಪು. ಬೇಸಗೆ ರಜದಲ್ಲಿ ಊರಿಗೆ ಹೊರಟಿದ್ದೆವು. ಹಾಸನದಿಂದ ಆಲೂರಿಗೆ ಹೋಗಿ, ಒಂದುದಿನ ತಂಗಿದ್ದು, ಮಾರನೆಯ ದಿನವೇ ಬೆಳಗ್ಗೆ ನಡೆದುಕೊಂಡು ಸಕಲೇಶಪುರಕ್ಕೆ ಹೊರಟಿದ್ದೆವು. ಹೊರಡುವಾಗ, ನಾವಿಳಿದುಕೊಂಡಿದ್ದ ಮನೆಯ ರಾಮಣ್ಣನವರು ಹೇಳಿದ ಮಾತುಗಳು ಇವು. ಮಲೆನಾಡಿನಲ್ಲಿ ನಡೆಯಬೇಕೆಂದರೆ ನಮಗೆಲ್ಲಾ ಒಂದು ಹರುಷ. ಸುತ್ತಲೂ ಬೆಳೆದಿದ್ದ ಮರಗಳಿಂದ ಹೂವು-ಹಣ್ಣುಗಳ ಪರಿಮಳವು ಗಾಳಿಯೊಡನೆ ಬಂದು ನಮ್ಮೊಳಗೆ ಆನಂದವನ್ನು ತುಂಬುತ್ತಿದ್ದಿತು. ನಾವು ನಡೆಯುತ್ತಿದ್ದಂತೆಯೇ, ನೆಲದಮೇಲೆ ನಕ್ಷತ್ರಗಳು ಬಿದ್ದಂತೆ ಕಣಿಗಿಲೆ, ನಂದಿಬಟ್ಟಲು ಹೂಗಳು ಬಿದ್ದಿದ್ದುವು. ಅಲ್ಲಲ್ಲಿ ಪನ್ನೇರಳೆ ಹಣ್ಣುಗಳು ಬಿದ್ದುದನ್ನು ಕಂಡು, ನಮ್ಮ ಐದಾರು ಜೊತೆ ಕೈಗಳು ಅವನ್ನು ತೆಗೆದುಕೊಳ್ಳಲು ಸ್ಪರ್ಧೆ ನಡೆಯಿಸುತ್ತಿದ್ದುವು. ತಲೆಯೆತ್ತಿದರೆ ಪನ್ನೇರಳೆ, ನಾಯಿನೇರಳೆ ಕಾಯಿಗಳು ಎಲ್ಲೆಲ್ಲೂ ಕಾಣುತ್ತಿದ್ದುವು. ಆದರೆ ನಮ್ಮ ದಾರಿ ತಪ್ಪಿಸಿ, ನಮ್ಮನ್ನು ಕಾಡಿನ ಮಧ್ಯೆ ಕರೆದೊಯ್ದುದೆಂದರೆ, ಕಾಡು ಗುಲಾಬಿ ಹೂವಿನ ವಾಸನೆಯೊಡನೆ ಬಸಳೆ ಹೊತ್ತಿನಿಂದಲೂ ಬರುತ್ತಿದ್ದ ಅನಾನಸ್ ಹಣ್ಣಿನ ವಾಸನೆ.

ಅನಾನಸ್ ಹಣ್ಣಿನ ವಾಸನೆಯ ಜಾಡಿನಲ್ಲೇ ನಾವೆಲ್ಲ ಒಬ್ಬರಿಗಿಂತ ಮತ್ತೊಬ್ಬರು ಬೇಗಬೇಗ ನಡೆಯುತ್ತಿದ್ದೆವು. ನಡೆದಂತೆ ಹಣ್ಣಿನ ಪರಿಮಳ ಹೆಚ್ಚುತ್ತಿತ್ತು. ಇದ್ದಕಿದ್ದಂತೆ ಸುಬ್ಬರಾಮು "ಅಯ್ಯಯ್ಯಪ್ಪೊ !"ಎಂದು ಕೂಗಿಕೊಂಡು ಕುಳಿತುಬಿಟ್ಟ. ಎಲ್ಲರೂ ಓಡಿಹೋಗಿ ನೋಡುವಲ್ಲಿ, ಅವನ ತಲೆಯ ಮೇಲೊಂದು ದಪ್ಪನಾದ ಮಾವಿನ ಕಾಯಿ ಬಿದ್ದು ಬಿಟ್ಟಿತ್ತು. " ತಲೆ ಬಾಯಿ ಬಿಟ್ಟೀನೋ ನೋಡ್ರೋ! " ಎನ್ನುತ್ತಿದ್ದ ಸುಬ್ಬರಾಮು. ತಲೆಯೆತ್ತಿ ನೋಡಿದೆವು. ಮರದ ರೆಂಬೆಗಳ ಮಧ್ಯೆ ಕುಳಿತಿದ್ದ ಕರಿಮುಖದ ಮುಲ್ಲಾಡಕೋತಿಯೊಂದು, ಸುಬ್ಬರಾಮನ ಮುಖನೋಡಿ ಹಲ್ಕಿರಿಯುತ್ತ ಕುಳಿತಿತ್ತು! " ಹೋಗ್ರೋ, ಬೇಗ ಯಾರಾದ್ರೂ ಅನಾನಸ್ ತನ್ನಿ! ನಾನಿಲ್ಲೇ ಇರ್ತೀನಿ " ಎಂದ ಸುಬ್ಬರಾಮು. ನಾನು, ನಾಣಿ, ರಾಜ ಹೊರಟೆವು.

ನಾವೆಲ್ಲ ಕೂಗುತ್ತ, ಲೀಲಾಜಾಲವಾಗಿ ಹಾಡುತ್ತ ನಡೆಯುತ್ತಿದ್ದಾಗ, ದೂರದಲ್ಲಿ ನಾಯಿಗಳು ಬೊಗಳುವ ಶಬ್ದ ಅಸ್ಪಷ್ಟವಾಗಿ ಕೇಳಿಸಿತು. ನಮ್ಮೆಲ್ಲರ ಕಾಲುಗಳು ಅಲ್ಲೇ ನೆಲಕ್ಕೆ ಕುಸಿದುವು. " ಕಾಡುನಾಯಿಗಳ ಗುಂಪೇನೊ! " ಎಂದ ರಾಜ ನಡುಗುತ್ತ. ಆದರೂ ನಾಣಿ ಧೈರ್ಯಸ್ಥ " ಬನ್ರೋ ಅವೇನ್ಮಾಡುತ್ವೆ! " ಎಂದು ಹೊರಟ. ನಾವೂ ನಡೆದೆವು. ಅನಾನಸ್ ಹಣ್ಣಿನ ಸಣಿಹ ಮಾತ್ರ ನಮ್ಮೆಲ್ಲರಿಗೆ ಬೇಕೇ ಆಗಿತ್ತು. ಹತ್ತಿರದಲ್ಲೇ ಇರುವಂತೆ ಅದರ ಕಂಪು ಹರಡಿತ್ತು.

ಕಲ್ಲುಬಂಡೆಯೊಂದನ್ನೇರಿ ಇಳಿದೆವು. ನಮಗೆ ಸ್ವಲ್ಪ ದೂರದಲ್ಲೇ ಮೂರು ಜನ ನಿಂತಿದ್ದರು. ಒಬ್ಬಳು ಹೆಂಗಸು; ಇನ್ನಿಬ್ಬರು ಸೇವಕರಿರಬೇಕು. ಅವಳು ಕೈಯಲ್ಲಿ ಹಿಡಿದುಕೊಂಡಿದ್ದ ನಾಯಿಗಳ ಸರಪಳಿಗಳನ್ನು ಅವರಲ್ಲೊಬ್ಬನ ಕೈಗೆ ಕೊಟ್ಟು, ಬೊಗಳುತ್ತಿದ್ದ ಅವನ್ನು ಕಳಿಸಿಬಿಟ್ಟಳು. ನಾವು ಹತ್ತಿರ ಹೋದಂತೆ " ಬನ್ನಿ ಬನ್ನಿ, ನೀವು ಬರ್ತೀರೀಂತ ನನಗೆ ಗೊತ್ತಿತ್ತು ! "ಎಂದಾಕೆ ನಗುತ್ತ ಹೇಳಿದಳು. ಅವಳು ತಿರುಗಿದಾಗ, ಸೋಪಾನದಂತಿದ್ದ ಅವಳ ತಲೆಗೂದಲು ಮಿಂಚುತ್ತಿತ್ತು. ಕೆಂಪು ಮಿಶ್ರಿತವಾದವಳ ಹಸಿರುಗಣ್ಣು ಪಳಪಳನೆ ಹೊಳೆಯುತ್ತಿದ್ದುವು. ತೆಳುವಾಗಿ, ಹಣೆಯ ಮೇಲೆ ಮೂರೆಳೆ ವಿಭೂತಿ ಹಚ್ಚಿದ್ದಳು. ಅವಳು ತಿರುಗಿದಾಗ ನುಂಡಿಗೆ ಜಡೆ ಸುತ್ತು ಹಾಕುತ್ತಿತ್ತು. ಇವನ್ನೆಲ್ಲ ನೋಡಿದ ನಾಣಿ ನನ್ನ ಕಿವಿಯಲ್ಲುಸುರಿದ : " ಮಲ್ಲಾಡಿನಲ್ಲಿ ಮೋಹಿನಿ ಹೆಚ್ಚಂತೆ ಕಣೋ! ನಮ್ಮ ಹಣೇಬರ ! "

" ಅನಾನಸ್ ಚೆನ್ನಾಗಿ ಮಾಗಿದೆ. ತೆಗೆದ್ಕೊಳ್ಳಿ " ಎನ್ನುತ್ತಾ ಸೇವಕನು ತಂದಿದ್ದ ಹಣ್ಣುಗಳನ್ನೂ ಚಾಕುವನ್ನೂ ಅವಳು ಕೊಟ್ಟಳು. " ಇಲ್ಲಿಗೆ ಬೇಸಗೇಲಿ ಬರೋರನ್ನೆಲ್ಲ ಕರೆತರೋದು ಈ ಹಣ್ಣೇ.... ಬನ್ನಿ, ಮನೆಗೆ ಹೋಗೋಣ, " ಎಂದವಳು ನಮ್ಮನ್ನು ಆಹ್ವಾನಿಸಿದಳು.

" ಅಂದ್ಹಾಗೇ ನುರ್ತಿದ್ದೆ. ಐದಾರು ಜನ ಮಾತಾಡ್ತಿದ್ದಂತಿತ್ತು?' ಮತ್ತೊಮ್ಮೆ ಅವಳು ಮಾತನಾಡಿದಳು. " ಓಹೋ! ನುರ್ತಿದ್ದೆ. ನಮ್ಮ ಸ್ನೇಹಿತರಲ್ಲಿ ಒಬ್ಬನಿಗೆ ಸ್ವಲ್ಪ ಪೆಟ್ಟಾಗಿ ಬಿದ್ದು. ಅ

ನೂರು ಜನ ಇದಾರೆ. ಕರೆಕೊಂಡು ಬರ್ತೀನಿ " ಎಂದು ನಾನು ತಿರುಗಿದೆ.

" ಇಲ್ಲ ಇಲ್ಲ, ನೀವು ಹೋಗ್ಬೇಡಿ. ಜವಾನ್ರನ್ನ ಕಳ್ಸೋಣ " ಎಂದವಳು ನನ್ನನ್ನು ತಡೆದಳು.

ನಾವೆಲ್ಲ, ಎದುರಿಗೆ ಕಾಣುತ್ತಿದ್ದ ಮಹಲಿನೊಳಕ್ಕೆ ಹೋದೆವು. ಅದೊಂದು ವಿಶಾಲವಾದ ಮನೆ; ನೋಡುವುದಕ್ಕೆ ಹಿಂದಿನ ಕಾಲದ ಮನೆಯಂತಿದ್ದರೂ, ಆಧುನಿಕ ಸಲಕರಣೆಗಳೇ ಅಲ್ಲಿ ಕಂಡು ಬರುತ್ತಿದ್ದುವು. ನಮಗೆಲ್ಲ ಒಂದು ಕೊಠಡಿಯನ್ನು ತೆರವು ಮಾಡಿ ಕೊಟ್ಟರು. ಬಸಿಲಿನಲ್ಲಿ ಬಂದಿದ್ದ ನಮಗೆ ಆಯಾಸವಾಗಿದ್ದಿತು. ಕೊಠಡಿಗೆ ಹೋದವರೇ ಜಮಖಾನದ ಮೇಲೆ ಉರುಳಿಬಿಟ್ಟೆವು. " ಮತ್ತೆ ಬರುವೆನು" ಎಂದು ತಿಳಿಸಿ ಅವಳು ಹೊರಟು ಹೋದಳು.

ನೀಲಿಯ ಆಕಾಶದಲ್ಲಿ ಒಂದೊಂದೇ ತೆಳುವಾದ ಬೆಳ್ಮೋಡಗಳು ತೇಲುತ್ತ ತೇಲುತ್ತ ಕರಗಿ ಹೋಗುತ್ತಿದ್ದುವು. ಕಿಟಕಿಯ ಮೂಲಕ ಅವನ್ನೇ ನೋಡುತ್ತ, ನಾನು ಆ ಹೆಂಗುಸಿನ ವಿಷಯ ಯೋಚಿಸುತ್ತಿದ್ದೆ. " ಏನೋ, ಒಳ್ಳೇ ರಾಣಿಯಂತಿದಾಳಲ್ಲೋ! ಅವಳ ಸೌಂದರ್ಯ ನೋಡುವುದಕ್ಕೆ ಹೆದರಿಕೆಯಾಗುತ್ತದಲ್ಲೊ! " ಎಂದ ನಾಣಿ. ಅಷ್ಟರಲ್ಲೇ ಅವಳು ಬಂದು "ನೋಡಿ, ನಿಮ್ಮ ಸ್ನೇಹಿತರೆಲ್ಲ ಬಂದರು." ಎಂದಳು. ನವು ಎದ್ದು ಹೊರಗೆ ಹೋದೆವು. ಸುಬ್ಬರಾಮ, ಕೋತಿ ಕೊಟ್ಟ ಏಟನ್ನು ಮರೆತು, ಎಂದಿನಂತೆ ಹೊಟ್ಟೆಯನ್ನು ಮುಂದೆ ಹಾಕಿಕೊಂಡು ಬರುತ್ತಿದ್ದ. ನಮಗೆಲ್ಲ ಕಾಫಿ-ತಿಂಡಿಯಾಯ್ತು.

" ಸ್ವಲ್ಪ ವಿಶ್ರಮಿಸಿಕೊಳ್ಳಿ. ಬಸಿಲಿನಲ್ಲಿ ಬಂದು ಆಯಾಸವಾಗಿದೆ! " ಎಂದಳು. ಎಷ್ಟು ಸುಸಂಸ್ಕೃತ ಭಾಷೆ! ಎಲ್ಲರಿಗೂ ಆದೊಂದು ವಿಚಿತ್ರವ್ಯಕ್ತಿತ್ವವೆನಿಸಿತು. ಇಷ್ಟು ಹೊತ್ತಾದರೂ ಮನೆಯಲ್ಲಿ, ಸೇವಕರು-ಆಡಿಗೆಯವರನ್ನು ಬಿಟ್ಟರೆ, ಬೇರೆ ಗಂಡುಸರ ಸುಳಿವಿಲ್ಲ. ಹಾಗೆಯೇ, ಸ್ತ್ರೀಸೇವಕಿಯರಿಬ್ಬರನ್ನು ಬಿಟ್ಟರೆ, ಅವಳ ಹೊರತೂ ಬೇರೆ ಸ್ತ್ರೀಯರಿಲ್ಲ. ಎಲ್ಲರಿಗೂ ಆಶ್ಚರ್ಯ. 'ಇರಲಿ ಬೇಗ ತಿಳಿಯುತ್ತೆ' ಎಂದು ಎಲ್ಲರಿಗೂ ಒಂದು ಸಮಾಧಾನ.

* * * *

ಅವರೆಲ್ಲ ಮಲಗಿ ನಿದ್ರಿಸುತ್ತಿದ್ದರು. ನನಗೆ ಮಾತ್ರ ನಿದ್ರೆ ಬರಲಿಲ್ಲ. ಕೊಠಡಿಯಲ್ಲಿ ಒಬ್ಬನೇ ಇರುವುದಕ್ಕೆ ಬೇಸರವಾಗಿ, ಎದ್ದು ಮನೆಯ ಹಿಂದಿದ್ದ ತೋಟದ ಕಡೆಗೆ ಹೊರಟೆ. ಅದು ಬದಿಯ ತರಕಾರಿಯ ತೋಟ. ನನ್ನ ಎಡಕ್ಕೆ ಹಣ್ಣುಗಳ ತೋಟವಿತ್ತು. ಬೆಂಗಳೂರಿನಂತಹ ನಗರದಲ್ಲಿ ವಾಸಿಸುತ್ತಿದ್ದವನು, ಆ ಮಲೆನಾಡ ನಿಸರ್ಗಸೌಂದರ್ಯವನ್ನು ಕಂಡು ಮುಗ್ಧನಾಗಿ ಬಿಟ್ಟೆದ್ದೆ. ಜಿಲ್ಲೆಯ ಬಸಿಲೂ ಸಹ ತಂಪಾಗಿದ್ದಂತಿತ್ತು. ಅದನ್ನೇ ನೋಡುತ್ತ ನೋಡುತ್ತ ಕುಳಿತಿದ್ದೆ. " ನಿಮಗೆ ನಿದ್ರೆ ಬರಲಿಲ್ವಾ? " ಬಳಿಯ ಶಬ್ದ ಹಿಂದಿನಿಂದ ಕೇಳಿಸಿತು. ತಿರುಗಿ ನೋಡಿದೆ. ಚಿನ್ನದ ಬಳೆಗಳು

ಬಸಿಲಿಗೆ ಹೊಳೆಯುತ್ತಿದ್ದುವು. "ಬನ್ನಿ ಬನ್ನಿ! ನಿಮ್ಮ ಮನೆ ಬಹಳ ಚೆನ್ನಾಗಿದೆ" ಎಂದೆ. ಅವಳು ನಕ್ಕಳು. "ಸೌತೆಕಾಯಿ ತಿನ್ನುತ್ತೀರಾ?" ಎನ್ನುತ್ತಾ, ಎದುರಿನ ಚೆಸ್ಟರದಲ್ಲಿ ತೂಗುತ್ತಿದ್ದ ಚಿಕ್ಕ ಬಿಸಿಯ ಸೌತೆಕಾಯಿಗಳೆರಡನ್ನು ಕೆಳಕ್ಕೆ ಕೊಟ್ಟಳು. ಅವನ್ನು ಮುಗಿಯುತ್ತಾ ನಾನು "ಇಷ್ಟು ದೊಡ್ಡ ಮನೆಯಲ್ಲಿ ಇನ್ನಷ್ಟೇ ಇಲ್ಲವಲ್ಲ? ನಿಮ್ಗೆ ಬೇಸರವಾಗೋಲ್ವೆ?" ಎಂದೆ.

"ಅದರೆ ವಿಧಿಯಿಲ್ಲ, ನನ್ನವರಾಗಿ ಯಾರೂ ಬದುಕಿಲ್ಲ. ನನಗೆ ತಾಯಿ-ತಂದೆಗಳಿಲ್ಲ ನಾನು ವಿಧವೆಯಾಗಿ ಎರಡುವರ್ಷಗಳಾದುವು. ಇಷ್ಟು ದೊಡ್ಡ ಪ್ಲಾಂಟೇಷನ್ ನೋಡುವವರಿಲ್ಲ. ನಾನೇ ಎಲ್ಲ ನೋಡಿಕೋತೇನೆ. ಆ ತೋಟಗಳಲ್ಲಿ ಕೂಲಿಗಾರರಿದ್ದಾರೆ..... ಹೀಗೆಯೇ ನಿಮ್ಮಂಥವರು ಬಂದಾಗ, ಒಂದೆಂಟುದಿನ ಕಾಲಕಳೆಯೋದು! ಇಲ್ಲದಿದ್ದರೆ ನಾನಾಯ್ತು, ಪುಸ್ತಕಗಳಾಯ್ತು! ಎಂದಾದರೂ ಒಂದೊಂದು ದಿನ, ಹಾಸನ ಇಲ್ಲದಿದ್ದರೆ ಸಕಲೇಶಪುರಕ್ಕೆ ಹೋಗಿ ಬರ್ತೇನೆ. ನನಗೇನೋ ಈ ಜೀವನ ಒಗ್ಗಿಬಿಟ್ಟಿದೆ."

"ನಮಗೇನೂ ಇನ್ನೆಲ್ಲ ಆಶ್ಚರ್ಯ....ಆದರೆ ನಿಮ್ಮ ತಮ್ಮಂದಿರು ಅಣ್ಣಂದಿರು, ಯಾರೂ ಇಲ್ವೆ?"

"ಒಬ್ಬನೇ ತಮ್ಮ ನನ್ನವನಾಗಿರುವವನು. ಅವನು ಈಗ ಕಾಶಿಯಲ್ಲಿ ಓದುತ್ತಿದ್ದಾನೆ. ಇನ್ನೊಂದೆರಡುವರ್ಷ ಮುಗಿದರೆ, ಅವನು ಇಲ್ಲಿಗೇ ಬರ್ತಾನೆ....ಅಂದ್ಹಾಗೆ ತಾವೆಲ್ಲ ಬೆಂಗಳೂರಿನಲ್ಲೇ ಓದ್ತಿದಿರಾ?"

"ಹೌದು, ನಾವೆಲ್ಲ ಸೆಂಟ್ರಲ್ ಕಾಲೇಜಿನಲ್ಲಿ ಓದ್ತಿದ್ದೀನಿ"

"ತಮ್ಮ ಹೆಸರು?"

ನನ್ನ ಹೆಸರನ್ನು ತಿಳಿಸಿದೆ.

"ಕಾಫಿ ತೆಗೆದ್ಕೊಳ್ಳಿ," ಅವಳು ಒಂದು ಲೋಟ ಕಾಫಿ ಕೊಟ್ಟಳು. ಅಡಿಗೆಯವನು ಕಾಫಿ ತಂದಿದ್ದು ಕಂಡಿತಾಗ.

"ರಾಮಣ್ಣನವರು ನಿಮ್ಮ ವಿಷಯ ತಿಳಿಸಿದ್ದರು ಬಹಳ ಒಳ್ಳೆಯ ಜನ, ಖಂಡಿತ ಹೋಗಿ ಬನ್ನೀಂತ ಹೇಳಿದ್ದೇ ಹೇಳಿದ್ದು!" ನಾನೆಂದೆ, ಕಾಫಿ ಊದುತ್ತಾ.

"ಅವರು ಹಾಗೇನೆ! ಎಲ್ಲಾರ ಸಂಗಡಾನೂ ಹೇಳ್ತಾರೆ!"

* * * *

ನಮ್ಮೆಲ್ಲರ ಉಟವಾಯ್ತು. ಅವರೆಲ್ಲ ಇಸ್ಪೀಟಿಗೆ ಪ್ರಾರಂಭಿಸಿದರು. ನನಗೇನೋ ಬೇಸರವಾಯ್ತು. ಎದ್ದು ಸುಮ್ಮನೆ ಸುತ್ತಾಡಿಬರೋಣವೆಂದು ಹೊರಟೆ. ನನ್ನ ಕೊಠಡಿಯ ಮುಂದೆ ಒಂದು ಸಣ್ಣ ಕೈಸಾಲೆಯಿತ್ತು. ಅಲ್ಲಿಂದ ಮುಂದೆ ಹೋದರೆ ಒಂದು ದೊಡ್ಡ ಕೊಠಡಿ ಕಾಣಿಸಿತು. ಅದೊಂದು ದೊಡ್ಡ ಸರಸ್ವತೀ ಭಂಡಾರ. ಒಳಗೆ ಹೋಗೋಣವೆನ್ನಿಸಿತು. ಒಳಹೊಕ್ಕೆ; ಉದ್ದಕ್ಕೆ ಬೀರುಗಳ ಸಾಲುಗಳಿದ್ದುವು. ಅವರೊಳಗೆ ಎಲ್ಲಾ ಪುಸ್ತಕಗಳು ತುಂಬಿದ್ದುವು. ಒಂದು ಬೀರುವಿನಲ್ಲಿ, ಕಾರಂತರ "ಚೋಮನ ದುಡಿ" ತೆಗೆದುಕೊಂಡು ಓದತೊಡಗಿದೆ. ಎದುರಿಗೆ ಕಿಟಕಿಗಳಿದ್ದುವು. ಅವುಗಳ ಮೂಲಕ ಹೊರಗಿನ ಬಿಸಿಲು, ಗಿಡ-ಮರಗಳು ಕಾಣುತ್ತಿದ್ದುವು. ಒಮ್ಮೊಮ್ಮೆ ಭೃಸನೆ ಗಾಳಿಬೀಸುತ್ತಿತ್ತು....ಮತ್ತೊಮ್ಮೆ "ಚೋಮನ ದುಡಿ" ಓದತೊಡಗಿದೆ.

ಬಲಗಡೆ ಮೂಲೆಯಿಂದ ಹಾಳಿತಿರುವಿದ ಶಬ್ದ—ಬಳೆಗಳ ಶಬ್ದ ಕೇಳಿಸಿತು. ತಿರುಗಿ ನೋಡಿದೆ ಆಕೆ ಓದುತ್ತ ಕುಳಿತಿದ್ದಳು. ಒಳಬೀಸಿದ ಗಾಳಿ ಅವಳ ಮೇಲೂ ಬೀಸುತ್ತಿತ್ತು. ಅವಳ ಮೇಲೆ ಗಾಳಿಬೀಸಿದಾಗ ಅವಳನ್ನು ನೋಡಬೇಕೆನಿಸಿತು. ಅವಳನ್ನೆ ನೋಡುತ್ತ ಮೈಮರೆತಿದ್ದಾಗ, ಚೋಮನ ದುಡಿಯ ಹಾಳೆಗಳ ಪರಪರನೆ ತಿರುವಿಕೊಂಡುವು ಅವಳು ತಲೆಯೆತ್ತಿ, ನನ್ನನ್ನು ನೋಡಿದಳು.

"ಓಹೋ! ಈಗ ಬಂದ್ರಾ? ನಿಮ್ಮ ಸ್ನೇಹಿತರೇನು ಮಾಡ್ತಿದಾರೆ!" ಎನ್ನುತ್ತಾ, ಕಿಟಕಿಯ ಕಂಬಿಯಿಂದ ಒಳಕ್ಕೆ ಬೆಳೆದ ಬಂದಿದ್ದ ಬಳ್ಳಿಯೊಂದರ ಎಲೆಯನ್ನು ಬಿಡಿಸಿ, ಪುಸ್ತಕದಲ್ಲಿಟ್ಟು ಮುಚ್ಚಿದಳು. "ಅವರೆಲ್ಲ ಇಸ್ಪೀಟಾಡುತ್ತಿದಾರೆ. ನನಗೇನೂ ಬೇಸರವಾಯ್ತು, ಬಂದೆ!" ನಾನು ಮಾತನಾಡುತ್ತಿದ್ದಾಗ ಅವಳ ಆ ಮೇಜಿನ ಮೇಲಿದ್ದ ಎರಡು ಚಿತ್ರಗಳು ಕಂಡುವು ಎರಡೂ ಇಬ್ಬರು ಸುಂದರ ಪುರುಷರ ಭಾವಚಿತ್ರಗಳು.

"ಇವರಾರು?" ನಾನೆಂದೆ.

"ಇವರು....ಇವರು....ನನ್ನ ಯಜಮಾನರು. ಈ ಮತ್ತೊಬ್ಬರು....ಅವರ ಸ್ನೇಹಿತರೊಬ್ಬರು!" ಅವಳು ಈ ಉತ್ತರ ಜೇಳುವಷ್ಟರಲ್ಲಿ, ಅವಳ ಮೊಗದಲ್ಲಿ ಹಲವು ಭಾವಗಳು ಪ್ರತಿಬಿಂಬಿತವಾಗಿದ್ದುವು. ಬೆಳಗಿನಿಂದ ಅಷ್ಟು ಸರಳವಾಗಿ ಮಾತನಾಡುತ್ತಿದ್ದವಳಿಗೆ, ಈ ಮಾತನಾಡುವಾಗ ಏಕೆ ಹೀಗಾಯ್ತು? ನನಗಂತ ಆಶ್ಚರ್ಯವಾಯ್ತು. ಸತ್ತ ಗಂಡನೊಬ್ಬನ ವಿಷಯ ಮಾತನಾಡುವಾಗ, ಅದೇಕೆ ಆ ದುಗುಡ? ಅವಳೇನೊ ಆ ದುಗುಡವನ್ನು ತೋರ್ಪಡಿಸದಿರಲು ವಿಶ್ವಪ್ರಯತ್ನ ಮಾಡುತ್ತಿದ್ದಳು. ಅವಳ ವ್ಯಕ್ತಿತ್ವದ ಬಗ್ಗೆ ವಿಚಿತ್ರವಾಗಿ ಯೋಚಿಸುತ್ತಿದ್ದ ನನಗೆ, ಅವಳೇ ಈಗ ಅತಿ ವಿಚಿತ್ರವಾಗಿ ಕಂಡಳು. ಮಾತನ್ನು ಬದಲಿಸಲು, ನಾನು ಎದುರಿಗಿದ್ದ ಬೀರುವಿನಲ್ಲಿ ಕಂಡ ಒಂದು ಪುಸ್ತಕದ ಬಗ್ಗೆ ಮಾತನಾಡಿದೆ.

"ಹೆತ್ತಳಾ ತಾಯಿ—ಎಷ್ಟು ಚೆನ್ನಾಗಿದೆ ಅಲ್ವೆ? ಆ ಹೆಂಗುಸಿನ ವ್ಯಕ್ತಿಚಿತ್ರ ಬಹಳ ಚೆನ್ನಾಗಿ ಬಂದಿದೆ. ಅಬ್ಬ! ಎಂತೆಂತಹ ಸ್ತ್ರೀಯರಿರುತ್ತಾರೆ! ಕಾರಂತರು ನಿಜವಾಗಿ ಅದೊಂದು ಅಪೂರ್ವ ವ್ಯಕ್ತಿಯನ್ನು ಚಿತ್ರಿಸಿದ್ದಾರೆ!" ಆ ಪುಸ್ತಕವನ್ನು ನೋಡುತ್ತ ಮಾತನಾಡಿದೆ. ನನ್ನ ಮಾತನ್ನು ಕೇಳಿ ಅವಳು ಬೇರೆ ಕಡೆ ಮುಖ ಮಾಡಿಕೊಂಡಳು. ಮತ್ತೆ ಅವಳ ಮುಖ ನೋಡಿದಾಗ ಅದೇನೋ ಚಿಂತಿಸುತ್ತ, ಆ ಚಿಂತೆಯನ್ನು ಮರೆಮಾಡಲು ಪ್ರಯತ್ನಿಸುತ್ತಿರುವಂತೆ ಕಂಡಳು!

"ನಿನ್ನ ಅಭಿಪ್ರಾಯವೇನು ? " ಎಂದೆ ಮತ್ತೊಮ್ಮೆ.

" ಕಾರಂತರು ಬರೆದ ಮೇಲೆ ಕೇಳಬೇಕೇ ? ಚೆನ್ನಾಗಿದೆ.... ಚೆನ್ನಾಗಿದೆ....ಬನ್ನಿ, ಕಾಫಿ ಆರಿಹೋಗಿಬಿಡುತ್ತೆ" ಎನ್ನುತ್ತಾ ಮುಂದೆ ಹೊರಟಳು.

ಹಾಗೆಯೇ ಸಂಜೆಯಾಗಿತ್ತು. ನಾವೆಲ್ಲ ಸುತ್ತಾಡಿಕೊಂಡು ಬರೋಣವೆಂದು ಹೊರಟೆವು. " ಏನೋನ್ಮ, ಮಲ್ನಾಡ ರಾಣಿಯಂತೆ ! ನಾಣಿ ಹೆಸರಿಟ್ಟಿದಾನೆ. ಏನು ನಿನಗೂ ಅವಳಿಗೂ ಬಹಳ ದೋಸ್ತಿಯಂತೆ? " ಎಂದ ಸುಬ್ಬರಾಮ.

" ಹೂ! ಇಸ್ಪೇಟೂ ಸಹ ಆಡ್ಸಿ ಹೋಗಿದ್ದ ಹರಟೀಗೆ " ನಾಣಿ ನಕ್ಕ.

"ಸಾಕು ಸುಮ್ನಿರ್ರೋ! ಬಾಯಿಗ್ಬಂದ ಹಾಗೆ ಹರಟ್ಬೇಡಿ! ಒಬ್ಬರ ಮನೇಗೆ ಬಂದ್ರೋಲೆ, ಅವರ ವಿಷಯಾನೂ ತಿಳೀಬೇಕ್ರೋ ! ಅವರ ಸಂಗಡ ಸ್ವಲ್ಪ ಮಾತಾಡಬೇಕು. ಸುಮ್ಮನೆ ಊಟ ಹೊಡ್ದು ನಮ್ಮ ಪಾಡಿಗೆ ನಾವು ನಿದ್ರೆ ಬಾಡೋದಲ್ಲ! " ನಾನು ಜೋರಾಗಿ ಹೇಳುತ್ತಲೇ ಎಲ್ಲರೂ ಸುಮ್ಮನಾದರು.

"ಏನೋ, ಒಟ್ಟಿನಲ್ಲಿ ವಿಚಿತ್ರ ವ್ಯಕ್ತೀಪ್ಪ ! ತಿಕ್ಕೋನು ಕಷ್ಟ ! ಮಲ್ನಾಡ ಜೀವನಾನೇ ಹೀಗೆಂತೀನಿ "ಶರ್ಮ ಹೇಳಿದ ಯೋಚಿಸುತ್ತ.

ಚೆನ್ನಾಗಿ ಸುತ್ತಾಡಿಕೊಂಡು ಹಿಂತಿರುಗಿದೆವು ನಾವೆಲ್ಲ ನಾಳೆ ಬೆಳಗ್ಗೆ ಸಕಲೇಶಪುರಕ್ಕೆ ಹೊರಡಬೇಕೆಂದು ನಿರ್ಧರಿಸಿದ್ದೆವು. ನಾವು ಮನೆಯ ಹತ್ತಿರ ಬರುತ್ತಿದ್ದಂತೆಯೇ, ಬಾಗಿಲಿನಲ್ಲಿ ನಿಂತಿದ್ದ ಆಕೆ " ಎಷ್ಟು ಹೊತ್ತು ಮಾಡ್ಬಿಟ್ರಿ ? " ಎನ್ನುತ್ತ ನಕ್ಕಳು.

ಸೂರ್ಯ ಮಲೆನಾಡ ಮರಗಳ ಹಿಂದೆ ಮರೆಯಾಗುತ್ತಿದ್ದ. ಆ ಚಿನ್ನದ ಬೆಳಕು ಅವಳ ಮೇಲೆ ಬಿದ್ದು, ಅವಳ ಕಣ್ಣುಗಳು ಸಳಸಳನೆ ಹೊಳೆಯುತ್ತಿದ್ದುವು. " ಅಬ್ಬ ! ಏನು ಸೌಂದರ್ಯ? ನೋಡುವುದಕ್ಕೆ ಹೆದರಿಕೆಯಾಗುತ್ತೆ ! " ಎಂದು ಶರ್ಮ ಮೆಲ್ಲನೆ ಉಸುರಿದ. ನನಗೂ ಹಾಗೆನ್ನಿಸಿತು. ಸುತ್ತುಮುತ್ತಿನ ಯಾಲಕ್ಕಿ ತೋಟಗಳಲ್ಲಿ ಸುತ್ತುತ್ತಿದ್ದಂತೆಯೇ ಕತ್ತಲೆಯಾಗಿತ್ತು. ಮನೆಗೆ ಮರಳಿದೆವು. ಮನೆಯೊಳಗೆ ದೊಡ್ಡ ಕಂಚಿನ ದೀಪಗಳನ್ನು ಹೊತ್ತಿಸಿದ್ದರು. "ಬನ್ನಿ, ಬಹಳ ಹೊತ್ತಾಗಿಬಿಟ್ಟಿದೆ; ಊಟಮಾಡೋಣ! " ಎಂದಳು ಆಕೆ. ನಮ್ಮೆಲ್ಲರ ಊಟವಾಯ್ತು. ಕೊಠಡಿಗೆ ಹೋಗಿ ಎಲ್ಲರೂ ಮತ್ತೆ ಇಸ್ಪೇಟಿನ ಎಲೆಗಳಿಗೆ ಕೈಹಚ್ಚಿದೆವು. ನಾನು ಹೊರಗೆ ಹೋಗಿ, ಜಗುಲಿಯ ಮೇಲೆ ಕುಳಿತುಕೊಂಡೆ.

" ಇವನೂ ವಿಚಿತ್ರ ವ್ಯಕ್ತಿಯಾಗಿಬಿಟ್ಟ" ಎಂದು ರಾಜನೆಂದದ್ದು ನನಗೆ ಕೇಳಿಸಿತು. ನನಗೆ ನಗುಬಂದಿತು.

ಕಣ್ಣಿಟ್ಟಷ್ಟೂ ವಿಶಾಲವಾಗಿ ಬೆಳುದಿಂಗಳು ಚೆಲ್ಲಿತ್ತು. ಆ ನಿಸರ್ಗ ಸೌಂದರ್ಯ ಬಹಳ ಆನಂದದಾಯಕವಾಗಿದ್ದಿತು. ಮೆಲ್ಲನೆ ತಂಗಾಳಿಯು, ಹೂವುಗಳ ಪರಿಮಳವನ್ನು ಹೊತ್ತುತಂದು ಬೀಸುತ್ತಿತ್ತು. ಹಾಗೆಯೇ ಯೋಚಿಸುತ್ತ ಕುಳಿತೆ.... ' ಇವೇನು ವಿಚಿತ್ರ ಜೀವನ? ಚಿಕ್ಕವಯಸ್ಸಿನಲ್ಲಿ ವಿಧವೆಯಾಗಿ, ಒಂಟಿಬಾಳು ಬೇರೆ ! ಪಾಪ !.... ' ಅವಳ ಬಗ್ಗೆ ಹಲವು ಭಾವನೆಗಳು ಬಂದುವು. ಎಡಗಡೆ ಕೊಠಡಿಯ ಕಿಟಕಿಯಿಂದ ದೀಪದ ಬೆಳಕು ಹೊರಜಿಲ್ಲೆ ನೆಲದ ಮೇಲೆ ಬಿದ್ದಿದ್ದಿತು. ಓದುತ್ತ ಕುಳಿತಿದ್ದ ಅವಳ ನೆಳಲು ಬಿದ್ದಿದ್ದಿತು. ಪುಟವನ್ನು ತಿರುವುವಾಗ ಆ ಚಲಿಸುವ ನೆಳಲು ಕಂಡು, ಹಾಳೆಯ ಶಬ್ದ ಕೇಳಿಸುತ್ತಿತ್ತು. ಅವಳ ಸಂಗಾತಿಗಳೆಂದರೆ ಈ ಪುಸ್ತಕಗಳೇ


ಪಂಚಪಾಂಡವರಲ್ಲಿ ಭೀಮನಾವ ಭೀಮನು ಶಕ್ತಿ ಸಾಹಸಕಾರ್ಯಗಳಲ್ಲೂ, ಶೂರಕೃತ್ಯಗಳಲ್ಲಿ ಪ್ರಖ್ಯಾತನಾಗಿದ್ದನು. ಭೀಮನ ಹೃದಯವು ಧೈರ್ಯಮಯೇ ಸ್ಥೂಲವಾಗಿದ್ದಿತು.
ನೀವು ಸದಾ ಅದೇ ರೀತಿಯ ಅಭಿಮಾನಿಗಳಾಗಿ ದಂಡಿಸುವ ಹೃದಯವುಳ್ಳವರಾಗಲು ಮಹಾಕಾರಣವಾಗಿರುವ ದೇಶೋತ್ಪನ್ನ, ಅಮೂಲ್ಯಮೂಲಿಕೆಗಳಿಂದಲೂ, ಇತರೆ ಬಲಕಾರಿ ದಿವ್ಯಪದಾರ್ಥಗಳಿಂದಲೂ, ಅಮೃತೋಪಮವಾದ ಶುಚ್ಯವ್ಯವಸ್ಥಾನ ಪೂರ್ವಕವಾಗಿ ತಯಾರಾಗಿರುವ ಸಾಂಡೂನವರ ಪುಷ್ಟಿಕರ ಬಲಕ್ಕೆ ಮಿಕ್ಕಿದ ಪ್ರಖ್ಯಾತ ಔಷಧಿಗಳಲ್ಲೊಂದಾದ
ಸಾಂಡೂನವರ
ಶಕ್ತಿ
ಡಿ. ಕೆ. ಸಾಂಡೂ ಬ್ರದರ್ಸ್
ಬೆಂಬೂರು ಲಿಮಿಟೆಡ್, ಬೆಂಬೂರು, ಬೊಂಬಾಯಿ.
ಕಾಪಿಗಳು
ಹುಬ್ಬಳ್ಳಿ ಶಾಖೆ, ಕೊಪ್ಪೀಕರ ರೋಡ

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ
ಔಷಧಿ!
ಡಾ. ವಾಮನ ಗೋಪಾಳ
ಇವರ
ಸಾರ್ಸಾ ಪರಿಲ್ಲಾ

ಆದರೆ ಮಧ್ಯಾಹ್ನ ಆ ಭಾವಚಿತ್ರಗಳನ್ನು ನೋಡಿದಾಗ, ಅದೇಕೆ ಅಷ್ಟೊಂದು ಚಿಂತೆ ಪಟ್ಟಳವಳು? ಅದೇನನ್ನೋ ತೋರ್ಪಡಿಸಲು ಮರೆಮಾಚುತ್ತಿದ್ದಳು ಬೇರೆ. ಅವಳ ಬಗ್ಗೆ ಬಹಳ ಹೊತ್ತು ಯೋಚಿಸುತ್ತ ಕುಳಿತಿದ್ದೆ. ಸೇವಕನೊಬ್ಬನು ಬಂದು ಎಂಜಲೆಲೆಗಳನ್ನು ಬಿಸುಟು ಹೋದ. ಅವನು ಒಳಹೊಗುವಾಗ ನನ್ನ ಮುಖ ನೋಡಿದ; ನಾನೂ ನೋಡಿದೆ. ಅವನ ಮುಖದಲ್ಲಿ ಅದೆಂತಹ ಭಾವವೋ, ವಿಚಿತ್ರವಾಗಿತ್ತು. ಭಯಗೊಂಡವನಂತೆ ಕಂಡ. ಅವನ ಆ ಮುಖವನ್ನು ಕಂಡು ನನಗೆ ನಗು ಬಂದಿತು. ಎದ್ದು ಹೋಗಿ ಮಲಗೋಣವೆಂದು ಹೊರಟೆ. ಅವರೆಲ್ಲ ಮಲಗಿದ್ದರು. ಇನ್ನೂ ಯಾರಿಗೂ ನಿದ್ರೆ ಬಂದಿರಲಿಲ್ಲ. ಎಲ್ಲರೂ ಕಣ್ಣು ಬಿಟ್ಟುಕೊಂಡು ಮಾತನಾಡುತ್ತಿದ್ದರು. "ಏನ್ರೋ ಇಸ್ಪೀಟು ಸಾಕುಮಾಡ್ತ?" ಎಂದೆ ನಾನು. ಅವರೆಲ್ಲರಿಗೂ ಕೋಪ ಬಂದಿತ್ತು—ನಾನೂ ಅವರೊಡನೆ ಕುಳಿತಿರಲಿಲ್ಲವೆಂದು. ನಾಣಿಯಂತೂ ಜೆಂಡೊಪೆಪಂತೆ ಮಾತನಾಡಿದ: "ನೀನು ಭಾವನಾಲೋಕದಿಂದ ಈಚೆ ಬಂದ್ಯಲ್ಲ!" ಎಲ್ಲರಿಗೂ ಅವನ ಮಾತು ಕೇಳಿ ನಗು ಬಂದಿತು. ಅವನು ಮುಸುಕೆಳೆದುಕೊಂಡು ಮಲಗಿ ಬಿಟ್ಟ. ನಾನು ಮಲಗಿಕೊಳ್ಳುವಾಗ, ಸೇವಕನನ್ನು ಕರೆದು ದೀಪ ತೆಗೆದುಕೊಂಡು ಹೋಗುವಂತೆ ಹೇಳಿದೆ. ಅವನು ಭಯಪಟ್ಟವನಂತೆ ಹೇಳಿದ: "ದೀಪ ಇರ್ಲಿ ಬಿಡಿ ಬುದ್ದಿ! ಸಣ್ಣಿಮಾಡ್ತೀನಿ!"

"ನಿದ್ರೆ ಬರೋಲ್ಲಪ್ಪಾ ತೆಗೆದ್ಕೊಂಡ್ಹೋಗು" ಎಂದೆ. ಅವನು ಏನೂ ಮಾತನಾಡದೆ, ಅವನ್ನು ತೆಗೆದುಕೊಂಡು ಹೋದ. ಆದರೆ ಆ ಮುಖಭಾವ ಮಾತ್ರ ನನ್ನ ಮನಸ್ಸಿನಲ್ಲಿ ಇಂದಿಗೂ ನೆಲಸಿದೆ.

ಕೊಠಡಿಯಲ್ಲೆಲ್ಲಾ ಕತ್ತಲೆ ತುಂಬಿತ್ತು. ಕಿಟಕಿಯಿಂದಾಚೆ ಬೆಳುದಿಂಗಳು ಕಾಣುತ್ತಿತ್ತು. ದೂರದ ಮರದಲ್ಲಿ ಜೀರುಂಡೆಗಳು ಕೂಗುತ್ತಿದ್ದುವು. ಆ ಹೊರಸನ್ನಿವೇಶ 'ಗನ್' ಎನ್ನುವಂತಿದ್ದಿತು. ಎಲ್ಲೆಲ್ಲೂ ದಟ್ಟವಾದ ವರ್ಣನಾತೀತ ಮೌನ ತುಂಬಿತ್ತು. ಹೊರಗೆ ಅಷ್ಟು ಬೆಳುದಿಂಗಳಿದ್ದರೂ, ಮನೆಯೊಳಗೆ ಮಾತ್ರ ಮುಖದ ಮುಂದೆ ನೆರಳು ಹಿಡಿದರೂ ಕಾಣುತ್ತಿರಲಿಲ್ಲ. ಕಣ್ಮುಚ್ಚಿದರೂ ಕತ್ತಲೆ, ಕಣ್ಬಿಟ್ಟರೂ ಕತ್ತಲೆ. ಕಣ್ಣು ಬಿಟ್ಟುಕೊಂಡು ಯೋಚಿಸುತ್ತ ಮಲಗಿದ್ದೆ. ನಾನು ಮಲಗಿದ್ದುದು ಕೊನೆಯಲ್ಲಿ. ನನ್ನೆಡಕ್ಕೆ ಎಲ್ಲರೂ ಮಲಗಿದ್ದರು. ಅವರು ಉಸಿರು ಬಿಡುವ ಶಬ್ದ ಮಾತ್ರ ಜೋರಾಗಿ ಕೇಳುತ್ತಿತ್ತು. ಇದ್ದಕಿದ್ದಂತೆ ನನ್ನ ಮೊಳಕೈ ಕಾಣುವಂತಾಯ್ತು. ಕೊಠಡಿಯ ಮೇಲ್ಭಾವಣಿ ಕಂಡಿತು. ಬಲಗಡೆ ಗೋಡೆ. ಆದರಲ್ಲಿದ್ದ ಒಂದೆರಡು ಪಟಗಳೂ ಅಸ್ಪಷ್ಟವಾಗಿ ಕಂಡುವು. ಕೊಠಡಿಯ ಬಾಗಿಲಿನಲ್ಲಿ ಬೆಳಕಾಗಿದ್ದುದನ್ನು ಕಂಡೆ. ಹೊರಗೆ ಬಲಗಡೆಯಿಂದ ಯಾವುದೋ ಬೆಳಕು ಬರುತ್ತಿರುವಂತೆ ಕಂಡಿತು. ಬರುಬರುತ್ತ ಅದು ಹತ್ತಿರವಾಯ್ತು. ಕಡೆಗೆ ಕೊಠಡಿಯ ಬಾಗಿಲಿಗೆ ಕೈಲಾಂದ್ರವೊಂದು ಬಂದಿತು. ಅದನ್ನು ಒಬ್ಬ ಹಿಡಿದುಕೊಂಡಿದ್ದ. ಅವನ ಮುಖ ಭಯಗೊಂಡಂತೆ ಕಂಡಿತು. ಗುಂಗುರು ಕೂದಲು ತಲೆಯಲ್ಲಿ ಶುಂಬದಪ್ಪವಾಗಿ ತುಂಬಿತ್ತು. ನೋಡಲು ಚೆನ್ನಾಗಿದ್ದಂತೆ ಕಂಡಿತು. ದರೂ ಮಲಿನವಾಗಿತ್ತು ಮುಖ. ಅದನ್ನು ಎಲ್ಲೋ ಕಂಡಿರುವಂತಿತ್ತು; ಆದರೆ ನೆನಪಾಗಲಿಲ್ಲ. ಈ ಮನೆಯಲ್ಲಂತೂ ಬೆಳನಿಂದ ಕಂಡಿರಲಿಲ್ಲ. 'ಈ ಮಧ್ಯರಾತ್ರಿಯಲ್ಲೇಕೆ ಇವನು ಬಂದ ಇಲ್ಲೀನು ಇವನಿಗೆ ಕೆಲಸ?' ಎನಿಸಿತು. ಅಲ್ಲದೆ ಮಲೆನಾಡಿನ ಹಾವುಗಳು ಹೆಚ್ಚು. ಯಾರನ್ನಾದರೂ ಕಚ್ಚಿಬಿಟ್ಟಿದೆಯೇನೊ ಅವಳನ್ನು ಕಡಿದು ಬಿಟ್ಟಿತೆ? ನನಗೆ ಯೋಚನೆಯಾಯ್ತು. ಆವನ ದೀಪ ಹಿಡಿದುಕೊಂಡು ಒಳಗೆ ಬಂದ. ನನ್ನ ಬಳಿಗೇ ಬಂದ. ನಾನು ಎದ್ದು ಕುಳಿತುಕೊಂಡೆ. ನೆಲದ ಮೇಲೆ ದೀಪ ಇಟ್ಟು ಏನೋ ಹೇಳಬೇಕೆನ್ನುವಂತೆ ಮುಖ ಮಾಡಿದ. "ಏನಪ್ಪಾ ವಿಷಯ? ಈಗೇಕೆ ಬಂದೆ?" ಎಂದೆ ನಾನು.

"ನಿಮಗೆ ಇಲ್ಲಿಯ ವಿಷಯ ಗೊತ್ತಿಲ್ಲ ಸ್ವಾಮಿ!" ಏನೊ ಬಹಳ ಗುಟ್ಟಿನ ವಿಷಯ ಹೇಳುವವನಂತಿದ್ದ ಅವನು.

"ಹೇಳಪ್ಪಾ ಏನದು?"

"ಸ್ವಾಮಿ, ಈ ಮನೆಯ ಯಜಮಾನಿ ನೋಡಿ....ಎಷ್ಟು ಒಳ್ಳೆಯವಳಂತೆ ಕಾಣುತ್ತಾಳೆ. ಹೌದು, ಬೆಂಕಿ ನೋಡೋಕೆ ಚೆನ್ನಾಗಿ ಬಣ್ಣವೇ: ಆದರೆ ಅವಳು ಮಹಾ ಸಾಸಿನಿ!" ಈ ವಿಷಯವನ್ನು ಹೇಳಲು ಅವನು ಈ ಮಧ್ಯರಾತ್ರಿಯ ತನಕ ಕಾದಿದ್ದನೆಂದುಕೊಂಡೆ. ಅವನ ಆ ಹೆದರಿಕೆ ನೋಡಿದರೆ, ಅವಳು ಮನೆಯ ಜನರ ಮೇಲೆ ಎಷ್ಟು ದರ್ಪದಿಂದಿದ್ದಳು ಮತ್ತು ಎಷ್ಟು ಎಚ್ಚರಿಕೆ ವಹಿಸುತ್ತಿದ್ದಳೆಂಬುದು ತೋರುತ್ತಿತ್ತು. ಅವಳ ವಿಷಯ ಹೇಳಲು ಅವನು ಮಧ್ಯರಾತ್ರಿಯ ವರೆಗೆ ಎಚ್ಚರವಿದ್ದು, ಎಲ್ಲರೂ ಮಲಗಿ ನಿದ್ರಿಸುತ್ತಿದ್ದಾಗ ಹೇಳಬೇಕಾಯ್ತು:

"ನೋಡಿ, ಇವಳಿಗೊಬ್ಬ ಗಂಡನಿದ್ದ. ಚೆನ್ನಾದಂಥಾ ಗಂಡ ಆದರೆ ಇವಳಿಗೆ ಅವನೊಡನೆ ಬಾಳುವೆ ಬೇಡವಾಗಿತ್ತು. ಅವನನ್ನು ಈ ಸುತ್ತಮುತ್ತಲಿನ ಜನವೆಲ್ಲಾ ಸೌಂದರ್ಯಪುರುಷನೆನ್ನುತ್ತಿದ್ದರು. ಆದರೆ ಇವಳು ಬೇರೊಬ್ಬನನ್ನು ಕೂಡಿದಳು. ಎಂತಹ ಗಂಡುಸಿಗಾಗಲಿ ಅವನ ಸಹನೆಗೆ ಇಂತಹ ಘಟನೆಯೆ ಮೇರೆ! ಇವ

ಂಡನಿಗೂ ರೇಗಿತು. ಆ ಪಾಪಿ, ಇವಳೊಳನೆ ಮಾತನಾಡಲು ಿರುತ್ತಿದ್ದವನ ಮೇಲೆ ವಿಷ ಕಾರಿದ. ಇವಳಿಗೆ ತನ್ನ ನಡತೆಯ ಬಗ್ಗೆ ಚ್ಚರು ಕೊಟ್ಟರೂ ಸಹ ತಿದ್ದಿಕೊಳ್ಳಲಿಲ್ಲ. "ನನ್ನಿಷ್ಟ" ಎಂದು ಟ್ಟಳು. ಆದರೆ ಇವಳ ಗಂಡ ಅವನು ಬರುವ ದಿನ ಕಾದಿದ್ದು, ವನು ರಾತ್ರಿ ಕಾಲದಲ್ಲಿ ಬಂದು ಕಿಟಕಿಯ ಹತ್ತಿರ ಶಬ್ದ ಮಾಡು ದ್ದಾಗ, ಅವನನ್ನು ಹಿಡಿದು ಬಹುವಾಗಿ ನಿಂದಿಸಿ, ನಾಯಿಗಳನ್ನು ಛೂ' ಬಿಟ್ಟು ಕಳಿಸಿಬಿಟ್ಟ. ಅವನು ಬಹಳ ಅಪಮಾನಿತನಾಗಿ ಾಯಿಗಳ ಮುಂದೆ ಓಡಿಬಿಟ್ಟ! ಆದರೆ ಈ ಪಾಪಿನಿ....ಅಬ್ಬ, ನಿಜ- ಾಗಿ ನರರೂಪದ ರಾಕ್ಷಸಿ....ಗಂಡನನ್ನು ಖೂನಿ ಮಾಡಿಸಿಬಿಟ್ಟಳು.

"ಆದಕ್ಕೇ ಅವಳಿಗೆ ನೆಂಟರಿಷ್ಟರಲ್ಲಿ ಸ್ಥಾನವಿಲ್ಲ; ಒಬ್ಬ ಗೂ ಬೇಡವಾಗಿದ್ದಾಳೆ. ಈ ಕೊಂಪೆಯಲ್ಲಿಯೇ ವರ್ಷವೆಲ್ಲಾ ರುತ್ತಾಳೆ..... ಯಾರಾದರೂ ಒಮ್ಮೊಮ್ಮೆ ತರುಣರು ಂದರೆ, ಇವಳು ಅವರ ಮೇಲೆ ಕಣ್ಣಿಡುವ ಮೊದಲೇ ನಾನು ಅವ ಗೆ ಇವಳ ವಿಷಯ ತಿಳಿಸಿಬಿಡ್ತೇನೆ." ಇವನ್ನು ಹೇಳುತ್ತಿದ್ದಾಗ ನನ ಕಣ್ಣುಗಳು ವಿಚಿತ್ರವಾಗಿ ಆಗಲವಾಗುತ್ತಿದ್ದುವು. ಸುಮ್ಮನೆ, ಲಗೈಯಲ್ಲಿ ದೀಪದ ತಿರುಪನ್ನು ತಿರುಗಿಸಿ ತಿರುಗಿಸಿ, ಬತ್ತಿಯನ್ನು ೂಡ್ಡದು ಮಾಡುತ್ತಿದ್ದ. ಕೊಠಡಿಯಲ್ಲಿ ಒಲೆ ಹೊತ್ತಿಸಿದಂತೆ ಿಳಕಾಗಿತ್ತು.

"ನೀನ್ಯಾರಪ್ಪ, ಬೆಳಗಿನಿಂದ ನಿನ್ನ ನೋಡೇ ಇಲ್ಲ!" ನಾನು ಸಂತೂಹಲದಿಂದ ಕೇಳಿದೆ.

"ನಾನೇ ಅವಳ ಗಂಡ! ನೀವು ಮಧ್ಯಾಹ್ನ ನನ್ನ ಫೋಟೋ ೋಡಿರಬೇಕು!....." ಎಂದು ಅವನು ಹೇಳುತ್ತಿದ್ದಂತೆಯೇ ೀಪವು ಭಗ್ಗನೆ ಆರಿಹೋಯ್ತು. ಆದರೊಡನೇ ಅವನೂ ಮಾಯ ಾಗಿದ್ದ! ನನ್ನ ಮೈಯೆಲ್ಲಾ ಬೆವತುಹೋಯ್ತು. ಕೊಠಡಿ ಯಲ್ಲೆಲ್ಲಾ ಕತ್ತಲೆ ತುಂಬಿ ಶೂನ್ಯವಾಗಿತ್ತು. ನನಗೆ ಕಿರುಚಲೂ ಾಗಲಿಲ್ಲ. ಮಾತು ಹಿಡಿದಂತಿತ್ತು. ನಡುಗುವ ಕೈಗಳಿಂದ ದೀಪವಿದ್ದ- ಾಗದಲ್ಲಿ ನೆಲವನ್ನು ಸವರಿದೆ. ಅಲ್ಲಿ ದೀಪವಿರಲಿಲ್ಲ. ನೆಲವೂ ಸಹ ಣ್ಣಗಿತ್ತು! ಇಂದು ಜ್ಞಾಪಿಸಿಕೊಂಡರೂ ಮೈ ನಡುಗುವುದು.

ಮುಸುಕುಹಾಕಿಕೊಂಡು ಮೈ ಆಲುಗಿಸದಂತೆ ಮಲಗಿಕೊಂಡು ಬಿಟ್ಟೆ. ಕಣ್ಮುಚ್ಚಿದರೂ ಸಹ ಆ ಮನುಷ್ಯ ರೆಪ್ಪೆಯೊಳಗೇ ಕಾಣು- ತ್ತಿದ್ದ. "ಅವಳು ಮಹಾ ಪಾಪಿನಿ....ನಾನೇ ಅವಳ ಗಂಡ!" ೌದು ಮಧ್ಯಾಹ್ನ ನೋಡಿದ್ದ, ಆವಳ ಮೇಜಿನ ಮೇಲಿದ್ದ, ಚಿತ್ರ ಇವನದೇ. ಹಾಗಾದರೆ ಇನ್ನೊಬ್ಬ ಬಹುಶಃ ಅವಳ ಗೆಳೆಯನಿರ- ಬಹುದು. ಆದಕ್ಕೇ ಮಧ್ಯಾಹ್ನ ಅವಳಲ್ಲಿ ಆ ದುಗುಡ!.....ಎಚ್ಚರ ವಾದಾಗ ರಾತ್ರಿ ದೀಪ ತೆಗೆದುಕೊಂಡು ಹೋಗಿದ್ದ ಸೇವಕ ಎದುರು ನಿಂತು, ನನ್ನನ್ನೇ ನೋಡುತ್ತಿದ್ದ. ಭಯಗ್ರಸ್ತನಾಗಿದ್ದವನ ಮುಖ ನೋಡಿ, ಅವನ ಹೇಳಿದ ಮಾತು 'ದೀಪನಿರಲಿ ಬಿಡಿ' ನೆನಪಾಯ್ತು.

ನಾವೆಲ್ಲ ಕಾಫಿ ಕುಡಿದ ನಂತರ, ಎರಡು ದಿನವಿದ್ದು ಹೋಗಿ- ರೆಂದು ಅವಳೆಂದರೂ ಕೇಳದೆ ಹೊರಟೆವು. ಸಪ್ಪೊಡನೆ ಅವಳೂ ಸ್ವಲ್ಪ ದೂರ ಬಂದಳು. ಗಿಡಗಳ ಮಧ್ಯೆ ನಡೆಯುತ್ತಿದ್ದಾಗ ಅವಳು, ಬಿಗಿಯಾಗಿ ನನ್ನ ರಟ್ಟೆ ಹಿಡಿದೆಳೆದಳು. ಅವರೆಲ್ಲ ಮುಂದೆ ಹೋಗು- ತ್ತಿದ್ದರು. ಆವಳು ಗಿಡಗಳ ಕಡೆಗೆ ನೋಡುತ್ತಿದ್ದಳು. ಗಿಡಗಳ ಮಧ್ಯೆಯೊಂದು ಹಾವು ಸರಸರನೆ ಹೋಗುತ್ತಿತ್ತು. ನಾನು ಒಂದು ಕ್ಷಣ ನಿಂತು ಹೊರಟೆ. ಅದರ ಹಸುರುಕಣ್ಣುಗಳು ಗಾಜಿನಂತೆ ಪಳಪಳನೆ ಹೊಳೆಯುತ್ತಿದ್ದುವು. ನಾನೆಂದೆ ಅವಳ ಕಣ್ಣನ್ನು ನೋಡುತ್ತ; "ನೋಡಿ, ಅದು ನೋಡಲು ಎಷ್ಟುಚೆನ್ನಾಗಿದೆ; ಆದರೆ ಅದು ವಿಷದ ಗೂಡು. ಪಾಪಿ! ಹಾಗೇ ಎಷ್ಟೋ ಜನ ನೋಡಲು ಎಷ್ಟೋ ಚೆನ್ನಾಗಿದ್ದರೂ, ಅವರೂ ಈ ಹಾವಿನಂತೆ ಎಷ್ಟೋ ಜನರ ಪ್ರಾಣ ತೆಗೆದಿರುತ್ತಾರೆ!" ಅವಳ ಮುಖದಲ್ಲಿ ಭಯ ಮೂಡಿತ್ತು. ಮುಖದಿಂದ ಅಪರಾಧಿಯ ಕಳೆಯನ್ನು ಕದಿಯಲು ಪ್ರಯತ್ನ ಪಡುತ್ತಿದ್ದಳು.

ನವಹಿಂದ ಕಾಲಿಂಗ್

ಸಭೆ-ಸಮ್ಮೇಲನಗಳು ಯಶಸ್ವಿಯಾಗಲು

ಈ ಕಾಲದಲ್ಲಿ ಧ್ವನಿವಾಹಕಗಳು ಅತ್ಯವಶ್ಯ!

ಈಗ ೧೨ ವರ್ಷಗಳಿಂದ ನಾವು
ಕಾಂಗ್ರೆಸ್ ಸಭೆಗಳಿಗೆ, ಚುನಾವಣೆಗಳಿಗೆ,
ಸಮ್ಮೇಲನಗಳಿಗೆ ಧ್ವನಿವಾಹಕಗಳನ್ನು
ಪೂರೈಸುತ್ತಿದ್ದೇವೆ.

ನವಹಿಂದ ಕಾಲಿಂಗದವರು ಲೌಡಸ್ಪೀಕರ್, ರೇಡಿಯೋ,
ಇಲೆಕ್ಟ್ರಿಕ್ ಸಾಮಾನುಗಳನ್ನು ಯೋಗ್ಯ ಬೆಲೆಗೆ
ಪೂರೈಸುವರು.

ನವಹಿಂದ ಕಾಲಿಂಗ್,

ಗಣಪತಗಲ್ಲಿ—ಬೆಳಗಾಂವಿ

ಒಡೆಯರು: **ದೇಶಪಾಂಡೆ ಯಾಳಗಿ ಮತ್ತು ಕಂಪನಿ.**

ಕ್ಷಮಾಗುಣ

(ಒಂದು ವಿಚಾರ ಲಹರಿ)

ಶ್ರೀ ಎನ್. ಕೆ. ಕುಲಕರ್ಣಿ ಎಂ.ಎ., ಬಿ.ಟಿ. **ಧಾರವಾಡ**

ಶೇಷಣ್ಣನಾಯಕರಂತಹ ಹೇಡಿಯ ಕ್ಷಮೆ ಕ್ಷಮೆಯೆನಿಸಿಕೊಂಡೀತೆ? ಹೇಡಿಯ ಕ್ಷಮೆಗೆ ಬೆಲೆಯಿಲ್ಲ. ಶೂರನ ಕ್ಷಮೆಯೇ ನಿಜವಾದ ಕ್ಷಮೆ! ದುಷ್ಟನ ಗಟ್ಟಿತನವೆಂದೂ ಶೌರ್ಯವೆನಿಸದು!

ಕ್ಷಮಾಗುಣವೆಂದರೆ ಕ್ಷಮಿಸುವ ಗುಣವೊಂಬೇ ಅಲ್ಲ, ಕ್ಷಮೆ ಕೇಳುವ ಗುಣವೂ ಹೌದು--ಎಂದು ಹಗಲೆಲ್ಲ ಸಾರುತ್ತಿದ್ದರು ನಮ್ಮ ಶೇಷಣ್ಣನಾಯಕರು. 'ಕ್ಷಮಿಸುವ ಗುಣದಷ್ಟೇ ಕ್ಷಮಾಯಾಚನಾಗುಣವೂ ಗಂಭೀರವಾದದ್ದು' ಎಂದು ಅವರ ಸ್ವಂತದ ನಂಬಿಕೆ. 'ರಾಜಕೋಟ ಸತ್ಯಾಗ್ರಹವು ವಿಫಲಶಸ್ವಿಯಾದಾಗ ತಮ್ಮ ತಪ್ಪನ್ನೊಪ್ಪಿಕೊಳ್ಳಲಿಲ್ಲವೆ ಮಹಾತ್ಮರು?' ಎಂದು ನಾಯಕರು ಯಾವಾಗಲೂ ಒಡ್ಡುವ ಸಮರ್ಥನಾ ಥಾಲು ಇದು. ಎಷ್ಟು ಸಲ ಮಹಾತ್ಮರು ತಮ್ಮ ಶಿಷ್ಯರಿಗಾಗಿ ಕ್ಷಮೆ ಕೇಳಿಲ್ಲ? ಹೀಗೆಂದು ನಮ್ಮ ನಾಯಕರು ಬರಿ ಕ್ಷಮೆಕೇಳುವುದೊಂದನ್ನೇ ಪರಮಗುಣವೆಂದು ಬಗೆದು ಬೆಳೆಯಿಸಿಕೊಂಡು ಬಂದು, ಇನ್ನು ಸ್ವಲ್ಪ ದಿನಗಳಲ್ಲೇ ಮಹಾತ್ಮರ ಎಡ ಬಲವಾಗುತ್ತಿದ್ದಾರೊ ಎನೋ ಎನ್ನುವಹಾಗಿದ್ದರು.

ನಾಯಕರ ಕ್ಷಮೆಕೇಳುವ ಔದಾರ್ಯದಿಂದ, ಬೇಕಾದ ಹಾಗೆ ಬೇಕಾದಷ್ಟು ತಪ್ಪುಮಾಡಬಹುದು– ಎಂಬ ದೇವನತ್ತ ಸವಲತ್ತೂ ಬೆಳೆಯಹತ್ತಿತು. ಅದೇನೋ ಹೇಳುವರಲ್ಲ 'ಸಬ್‌ಸೇಲವಾಫಿ' ಯೆಂದು– ಹಾಗೆ ನಾಯಕರ ನಾಲಗೆಯ ಮೇಲೆ ಕ್ಷಮಾದೇವಿ ನಿರಂತರವೂ ಕುಣಿದಾಡುತ್ತಿದ್ದಳು. ನಾಯಕರು ಕ್ಷಮೆಗಾಗಿಮುಗಿದ ಕೈಯನ್ನು ಊಟ-ಉಡಿಗೆಯ ಹೊತ್ತಿಗಷ್ಟೇ ಬಿಚ್ಚುತ್ತಿದ್ದರೆಂದು ಕಾಣುತ್ತದೆ. ಹೀಗಾಗಿ ನಾಯಕರು ಕಚೇರಿಯ ಎಲ್ಲ ಸೆಲೆಕ್ಟಿಕಾರಿಗಳನ್ನೂ ಕಿಸೆಯೊಳಗೆ ಹಾಕಿ ಬಿಟ್ಟಿದ್ದರು. ಮೇಲಿನ ಅಪ್ಪಣೆಗಳೇನೇ ಇರಲಿ, ನಾಯಕರು ತಮಗೆ ತಿಳಿದಂತೆ ಮಾಡಿಬಿಡುವರು. ಜವಾಬು ಕೊಡುವ ಪ್ರಸಂಗಬಂದರೆಇದೆ ಅಲ್ಲಃ 'ದೇಹಾಕಾ ಯಾಶರಣಾಗತಾ'. ಮೇಲಧಿಕಾರಿ ಕೋಪಿಸಿ ಕಿಡಿಕಿಡಿಯಾಗಿದ್ದರೂ, ಇವರು ಜೋಡಿಸಿದ ಕೈನೋಡಿ ನಿಶ್ಶಸ್ತ್ರರಾಗಿ ಬಿಡಬೇಕು. ಇಷ್ಟೇಅಲ್ಲ; ಕ್ರೋಧಾಗ್ನಿ ಶಾಂತವಾಗುತ್ತಲೆ, ಎಂತಹ ನಿಷ್ಠುರ ಅಧಿಕಾರಿಯೂ, 'ಪಾಪ ಬಹಳ ಸೌಮ್ಯ ಪ್ರಾಣಿ' ಎಂದು ನಾಯಕರ ಗುಣಗಾನ ಮಾಡಬೇಕು, ಅವರ ಕ್ಷಮಾಗುಣಗಾನ. ಆದರೆ ಶೇಷಣ್ಣನಾಯಕರಾಗಿಯೂ ಒಂದು ದಿನವೂ ಹೆಡೆಯೆತ್ತುವಷ್ಟು ಧಾಷ್ಟ್ರ್ಯ ಇವರಿಗಿಲ್ಲವೆಂಬ ಅರ್ಥವೂ ಇದರಿಂದ ಧ್ವನಿತವಾಗುತ್ತಿರಬೇಕು.

ಮಹಾತ್ಮರ ಮಡಿಯಾದ ನಾಯಕರು, ಮಹ್ಮಾರಂತೆಯೇ ಬರುಬರುತ್ತ 'ಹಿಮಾಲಯ ಅಪರಾಧ' ಗಳನ್ನು ಮಾಡಹತ್ತಿದರು. ಆದರೂ ಮಹಾತ್ಮರಂತೆ ಕ್ಷಮಾಗುಣವನ್ನು ಮಾತ್ರ ಬಿಡಲಿಲ್ಲ ಆದರೆ ನಾಯಕರು ಮಾಡುವ ಅಪರಾಧಗಳಿಗೂ ಎಲ್ಲೆ ಬೇಕಲ್ಲವೆ? ಬರುಬರುತ್ತ ಇವರ ಅಪರಾಧಗಳು ಹಿಮಾಲಯವನ್ನೂ ಮೀರಿಸಿದುವಾಗಿ ಅಕ್ಷಮ್ಯ ಅಪರಾಧಗಳೆಂದು ಕರೆಯಲ್ಪಡಹತ್ತಿದುವು. ಕ್ಷಮಾಗುಣವು ಕ್ಷಮೆಕೇಳುವ ಗುಣವೂ ಹೌದು; ಆದರೆ ನಾಯಕರಂತಹರು ತೆರಪಿಲ್ಲದೆ ಕ್ಷಮೆ ಕೇಳಬಹುದು! ತೆರಪಿಲ್ಲದೆ ಕ್ಷಮೆ ಮಾಡುವವರು ಬೇಕಲ್ಲ? ಅಕ್ಷಮ್ಯ ಅಪರಾಧಗಳನ್ನು ಕ್ಷಮಿಸುವುದು ಹೇಗೆ?

ಕ್ಷಮೆಮಾಡಲಿ, ಬಿಡಲಿ, ಕೇಳುವುದಿಷ್ಟೇತಮ್ಮ ಕರ್ತವ್ಯವೆಂದು ಬಗೆದ ನಾಯಕರು, ಸಣ್ಣ ಮಗುವಿನೊಡನೆಯೂ ಕ್ಷಮಾಗುಣವನ್ನು ತೋರದೆ ಬಿಡಲಿಲ್ಲ. ನಾಯಕರ ನಾಲ್ಕು ವರುಷದ ಹಟಮಾರಿ ರಂಗ, ನವರಾತ್ರಿಯ ದಿನ ತನಗೆ ಹಲಿಗೆಬೇಕು–ಎಂದು ಹಟ ಹಿಡಿದನಂತೆ. ನಾಯಕರು ಕಚೇರಿಯಿಂದ ಬರುವಾಗ ತರುವುದಾಗಿ ಅಭಿವಚನವಿತ್ತರು. ಬರುವಾಗ ಪೇಟೆಯ ತುಂಬೆಲ್ಲಾ ಹುಡುಕಿದರು ಹೋಳಹುಣ್ಣಿಮೆಯ ಮುಂದೆ ಸಿಗುವ ಹಲಿಗೆಗಳು ನವರಾತ್ರಿಯಲ್ಲಿ ಹೇಗೆ ದೊರಕಬೇಕು? ದೊರಕಿದರೂ ದೊಡ್ಡ ದೇವರ ಪೂಜಾಕಾಲದಲ್ಲಿ ಹಲಿಗೆ ಹೊಡೆದರೆ, ಆಚಾರ್ಯರೂ ಅರ್ಧಾಂಗಿನಿಯೂ ಏನೆಂದಾರು? ಯಾವುದೇ ವಿಚಾರವಿಲ್ಲದೆ ಅಭಿವಚನವಿತ್ತು ಬಿಟ್ಟರು ನಾಯಕರು. ಹಲಿಗೆಯಿಲ್ಲದೆ ಮನೆಗೆ ಮರಳಿದಾಗ ನಾಯಕರನ್ನೇ ಹಲಿಗೆಮಾಡಿ ಹೊಡೆಯಹತ್ತಿದ ಹಟಮಾರಿರಂಗ. 'ಕ್ಷಮಿಸು ರಂಗನಾಥಾ' ಎಂದು ನಾಯಕರು ಅನುಮಾನವಿಲ್ಲದೆ ದಂಡವತ್ ಕೈ ಜೋಡಿಸಿದರು. ಅವರ ಹೆಂಡತಿ ಛೀ ಹಾಕುವವರೆಗೂ ರಂಗನ ಸಾದ ಬಿಟ್ಟು ಕದಲಿರಲಿಲ್ಲ ಶೇಷಣ್ಣನಾಯಕರು.

ಕ್ಷಮಾಯಾಚನೆಯು ನಾಯಕರ ಪ್ರಕೃತಿಗುಣವಾಗಿ ಬಿಟ್ಟಿತ್ತು. ಕಂಡವರಿಗೆ ಕೈ ಜೋಡಿಸುವುದು, ಕಂಡದಕ್ಕೆ ಕ್ಷಮೆ ಯಾಚಿಸುವುದು ಅವರ ಹುಟ್ಟುಗುಣವೆಂಬಂತಾಗಿತ್ತು. ಕ್ಷಮಾನಾಯಕರಿಂದೇ ಅವರ ಪ್ರಸಿದ್ಧಿಯಾಗಿದ್ದರೆ ಏನೂ ಅತಿಶಯೋಕ್ತಿ ಅಲ್ಲ.

ಕ್ಷಮೆ ಕೇಳುವುದಕ್ಕೂ ಒಂದು ಸೀಮೆ ಇದೆ. ಕ್ಷಮಾಯಾಚನವು ಬೇಕಾದಂಥ ಅಪರಾಧಗಳಿಗೆ 'ಲೈಸನ್ಸ್' ಎಂದಾದರೆ, ಕ್ಷಮೆ ಕೇಳುವಲ್ಲಿ ಘನತೆಯೇನು ಬಂತು? ನಿಜವಾಗಿಯೂ ಅಪರಾಧವಾಗಿರಬೇಕು, ಸಜ್ಜನಿಕೆ-ದೊಡ್ಡಸ್ತಿಕೆಗಳ ಸೋಗಿನಲ್ಲಿ ಅದನ್ನು ಮುಚ್ಚಿಕೊಳ್ಳುವ ಬದಲು ಹೆಸರುಗೂಸಿನಂತೆ ಅದನ್ನು ಒಪ್ಪಿಕೊಂಡು ತಿದ್ದಿಕೊಂಡು, ಆದ ಅಪರಾಧಕ್ಕಾಗಿ ಕ್ಷಮೆ ಕೇಳಿದರೆ—ಆಗ ಆ ಕ್ಷಮೆಗೆ ಬೆಲೆ ಬರುತ್ತದೆ. ಕೈಲಾಗದ ಹೇಡಿ, ಹೋರಾಡುವ ಎದೆಯಿಲ್ಲದೆ ತನ್ನದು ಅಹಿಂಸಾಮಾರ್ಗವೆಂದು ಹೇಳಿದರೆ, ಆದಕ್ಕೆ ಬೆಲೆಯಿಲ್ಲ. ಇದನ್ನೇ ಮಹಾತ್ಮರು ಸ್ಪಷ್ಟವಾಗಿ ಸಾರಿ ಸಾರಿ ಹೇಳುತ್ತಿದ್ದರು:— 'ನಮಗೆ ಹೇಡಿಯ ಅಹಿಂಸೆ ಬೇಡ' ಎಂದು. ಹಾಗೆ ಹೆಜ್ಜೆಗೊಮ್ಮೆ ತಪ್ಪು ಮಾಡುವ ತಿಳಿಗೇಡಿ ಕ್ಷಮಾಯಾಚನೆ ಮಾಡಿದರೆ ಅದಕ್ಕೇನು ಬೆಲೆ?

ಹಾಗಾದರೆ ಯಾವುದು ದೊಡ್ಡದು? ಕ್ಷಮೆ ಕೇಳುವಗುಣವೊ? ಕ್ಷಮೆ ಮಾಡುವ ಗುಣವೊ? ಯೇಸುಕ್ರೈಸ್ತನನ್ನು ಶಿಲುಬೆಗೇ-

ವಿರಿಸುವಾಗ ಅವನು ಉದ್ಗಾರ ತೆಗೆದನಂತೆ:– 'ದೇವರೆ, ತಾವೇನು ಮಾಡುತ್ತೀವೆಂಬುದನ್ನು ತಾವು ತಿಳಿಯದ ಪ್ರಾಣಿಗಳಿವು. ಇವರನ್ನು ಕ್ಷಮಿಸು!' ಎಂದು. ಮಹಾತ್ಮಾಜಿಯವರ ಕೆನ್ನೆಯ ಮೆಲೆ ಕುಂಬ ಪಠಾಣನೊಬ್ಬನು ಎಟು ಕೊಟ್ಟನಂತೆ: 'ಪಾಪ, ಅವನಿಗೇನೂ ತಿಳಿದಿಲ್ಲ. ಎಂತಲೇ ಕೋಪಿಸಿಕೊಂಡಿದ್ದಾನೆ!' ಎಂದು ದೊಡ್ಡ ಮನಸ್ಸು ಮಾಡಿದರಂತೆ ಮಹಾತ್ಮಾಜಿ. ಈ ದೊಡ್ಡ ಮನಸ್ಸು ಕ್ಷಮೆಕೇಳುವಲ್ಲಿಯೂ ಇದೆ, ಕ್ಷಮೆ ಮಾಡುವಲ್ಲಿಯೂ ಇದೆ. ಆದರೆ ಅದಕ್ಕೆ ತಕ್ಕಂತೆ ವ್ಯಕ್ತಿಯ ಆಚರಣೆಯೂ ದೊಡ್ಡದಾಗಿರಬೇಕು. ಕ್ಷಮಾಗುಣಕ್ಕೆ ಕಿಮ್ಮತ್ತು ಬಾರದೆ ಹೋಗುವುದು ನಮ್ಮ ಶೇಷಣ್ಣನಾಯಕರಂತಹವರಲ್ಲಿ.

ಶೇಷಣ್ಣನಾಯಕರು ಕ್ಷಮಾನಾಯಕರಾಗಿ ಇನ್ನೊಂದು ರೀತಿಯಿಂದ ತಾಳ್ಮೆಯನ್ನು ಸಾಧಿಸಿದರು: 'ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ' ಎಂದು ಬಸವಣ್ಣನವರು ನುಡಿದುದನ್ನು, ಶೇಷನಾಯಕರು ಶಬ್ದಶಃ ಪಾಲಿಸುತ್ತಿದ್ದರು. ಇಷ್ಟೆ, ಕಂಡ ಭಕ್ತರಿಗೆ ಎಂಬುದನ್ನು ಬಿಟ್ಟು 'ಕಂಡ ಕಂಡವರಿಗೆ ಕೈ ಮುಗಿವಾತನೇ ಶೇಷ' ಎಂದು ಸ್ವಲ್ಪ ತಿದ್ದುಪಡಿ ಮಾಡಬೇಕಾಗುತ್ತಿತ್ತು. ಕೈ ಜೋಡಿಸಿದಷ್ಟು ಶೇಷಣ್ಣನವರು ತಾಳ್ಮೆಯನ್ನು ಗಳಿಸುತ್ತಿದ್ದರು.

ಶೇಷಣ್ಣನಾಯಕರು ಒಮ್ಮೆ ರೈಲ್ ಟಿಕೀಟಿಗೆ ಕ್ಯೂ ಹಚ್ಚಿದರು. ಕ್ಯೂ ಇನ್ನೊಂದು ಸ್ವಲ್ಪ ಬೆಳೆದಿದ್ದರೆ, ಶೇಷಣ್ಣನಾಯಕರು ಕ್ಯೂದ ಬಾಲ ಹಿಡಿದುಕೊಂಡೇ ತಮ್ಮೂರು ಮುಟ್ಟಬಹುದಾಗಿತ್ತು. ದುರ್ದೈವದ ಸಂಗತಿಯೆಂದರೆ, ನಾಯಕರು ಕ್ಯೂ ವ್ಯೂಹದ ಮಧ್ಯದಲ್ಲಿ ಕುಮಾರ ಅಭಿಮನ್ಯುವಿನಂತೆ ಸಿಕ್ಕುಬಿಟ್ಟಿದ್ದರು. ಹೊರಗೆ ಹೋಗುವುದಕ್ಕೂ ಕಷ್ಟ; ಟಿಕೀಟಿನ ಕಿಡಕಿ ಮುಟ್ಟುವುದಕ್ಕೂ ಕಷ್ಟ,– ಹೀಗಾಗಿ, ತ್ರಿಶಂಕುವಿನಂತೆ ಒದ್ದಾಡುತ್ತ ಮಧ್ಯಸ್ಥರಾಗೇ ನಿಂತು ಬಿಟ್ಟರು. ಮತ್ತೊಂದು ಸಂಗತಿಯೆಂದರೆ ಶೇಷಣ್ಣನವರ ಶರುವಾಯದವರೆಪ್ಪೋಜನ, ಕ್ಯೂ ಮುರಿದು ಕಿಟಕಿಯನ್ನು ಮುಟ್ಟಿ ಟಿಕೀಟು ದೊರಕಿಸಿಕೊಂಡರು. 'Learn to labour and to wait' ಎಂದರೆ 'ಪರಿಶ್ರಮ ಮಾಡು ಮತ್ತು ಮಾರ್ಗ ನಿರೀಕ್ಷಿಸು' ಎಂಬ ತತ್ತ್ವದಲ್ಲಿ ಶ್ರದ್ಧೆಯುಳ್ಳ, ಅನಿವಾರ್ಯ ಶ್ರದ್ಧೆಯುಳ್ಳ ನಾಯಕರು ಸುಮ್ಮಗೆ ನಿಂತುಬಿಟ್ಟರು. ಕಣ್ಣ ಮುಂದೇ ಅನ್ಯಾಯ ನಡೆಯುತ್ತಿದ್ದರೂ ಅವರಿಗೆ ಗತ್ಯಂತರವಿರಲಿಲ್ಲ. ಏಕೆಂದರೆ ಪೋಲೀಸನಿನಲ್ಲಿ ಅವರಾದರೂ ಏನು ಮಾಡಬೇಕು ಪಾಪ? ಉಳಿದ ಜನರೆಲ್ಲ ನಾಯಕರ ತಾಳ್ಮೆಯನ್ನು ಕಂಡು ಕೌತುಕಪಟ್ಟರು; ಕೆಲವರು ಮರುಕಪಟ್ಟರು. ಅಂತೂ ಒಮ್ಮೆ ನಾಯಕರ ಪಾಳಿ ಬಂತು, ಏಕೆಂದರೆ ಅವರೇ ಕೊನೆಯವರಾಗಿದ್ದರು. ಬೆಮರೊರಸಿಕೊಂಡು ಕಿಟಕಿಯೊಳಗೆ ಕೈ ಹಾಕಿ:—

'ಒಂದು ತಿಕೀಟು' ಎಂದರು.

'ಯಾವೂರಿಗೆ?' ಎಂದು (ಕಣ್ಣಿಲ್ಲ) ಚಾಳೀಸು ನೆತ್ತಿಗೇರಿದ ಮಾಸ್ತರರು ಕೇಳಿದರು. ಹುಬ್ಬಳ್ಳಿಯ ನಿಲ್ದಾಣದಲ್ಲೇ ನಿಂತಿದ್ದ ನಾಯಕರು,

'ಹುಬ್ಬಳ್ಳಿ' ಎಂದೇ ಕೂಗಿದರು.

'ಅಂ?' ಎಂದು ಗೊಗ್ಗರಿಸಿದರು ಮಾಸ್ತರರು.

'ಅಲ್ಲಲ್ಲ, ಹತ್ತಿಮತ್ತೂರು' ಎಂದರು ನಾಯಕರು.

'ಹತ್ತಿಮತ್ತೂರಗಾಡಿ ಈಗ ಹತ್ತೀಮತ್ತೂರಹತ್ತಿಲೆ ಹೋಗಿದೆ ಮುಂದಿನ ಗಾಡಿಗೆ, ಇನ್ನೂ ಹತ್ತು ತಾಸು ಅವಕಾಶವಿದೆ' ಎಂದರು. ನಾಯಕರು ಕೈಚೆಲ್ಲಿ. ಸಾಮಾನು ಹೇರಿಸಲು ಹಮಾಲನನ್ನು ಹುಡುಕ ಹತ್ತಿದರು.

ತಾಳ್ಮೆಯೂ ಒಂದು ಗುಣ. ಆದರೆ ಅನ್ಯಾಯವನ್ನು ಸಹನೆಮಾಡುವ ತಾಳ್ಮೆಯಿಂದರೆ ಅದೂ ಹೇಡಿಯ ಲಕ್ಷಣವೆ. ಪೋಲೀಸ ಬಲವಿಲ್ಲದೆ ನಾಯಕರ ಎಟು ನಡೆಯದು— ಎಂದರೆ ನಗ್ಗೇದಲ್ಲವೆ? ನೈತಿಕಬಲದ ಮುಂದೆ ಯಾವ ಬಲವು ಎದುರಾಗಿ ನಿಲ್ಲಬಲ್ಲದು?

ಹೈದರಾಬಾದಿನಲ್ಲಿ ದಬ್ಬಾಳಿಕೆ ನಡೆದಾಗ, ಹಿಂದುಸ್ಥಾನ ಸರಕಾರವು ತಾಳ್ಮೆ ತೋರಿಸಿತು. ಅಸಹಾಯ ಹೇಡಿಯ ತಾಳ್ಮೆ ಅಲ್ಲ ಅದು, ಶೂರನ ಧೀರಗುಣದ ತಾಳ್ಮೆ. ಮುಂದೆ ಕೆಲವು ತಾಸುಗಳಲ್ಲಿ ಅನ್ಯಾಯವಿಲ್ಲದಂತೆ ಮಾಡಿತು. ಇಷ್ಟಾದರೂ ವೈರಿಯ ಮೇಲೆ ರೇಗಿ ಹೋಗಿ ಎರಗಲಿಲ್ಲ. ಶಾಂತತೆಯಿಂದ ಶಸ್ತ್ರಗಳನ್ನು ಕೆಳಗೆ ಇಡಿಸಹಚ್ಚಿತು.

ತಾಳ್ಮೆಯೊಡನೆ ಧೈರ್ಯವೂ ಬೇಕು. ಎಂದಾಗಲೆ ಅದು ಪುರುಷನಿಗೆ ಶೋಭಿಸುತ್ತದೆ. ಹೆದರುವ ಹೇಡಿಗೆ ತಾಳ್ಮೆಯಿದ್ದರೂ ಅದು ಯಾತಕ್ಕೆ ಪ್ರಯೋಜನ? ಶೇಷಣ್ಣನಾಯಕರ ಕ್ಷಮಾಗುಣ, ಶೇಷಣ್ಣನಾಯಕರ ಸಹನಗುಣಗಳು ಗುಣಗಳೆನಿಸುವುದಿಲ್ಲ, ದೌರ್ಬಲ್ಯಗಳೆನಿಸುವುವು.

ಮನುಷ್ಯನು ಸಿಟ್ಟಿಂಬ ಉರಿಯನ್ನು ನುಂಗಿ ಶಾಂತನಾದಾಗ ತಾಳ್ಮೆ-ಕ್ಷಮಾಗುಣಗಳು ಬರುವುದು ನಿರ್ವಿಕಾರಿಯಾಗಬೇಕಾದರೆ ಯೋಗಿಯಾಗಿರಬೇಕಲ್ಲವೆ? ನಮ್ಮ ಜೀವನಮಾರ್ಗದಲ್ಲಿ ಎಷ್ಟೆಷ್ಟೋ ವಿಷಮಪ್ರಸಂಗಗಳು ಬರುತ್ತವೆ. ಕ್ಷಣಿಕ ತಾಳ್ಮೆಯುಳ್ಳ ನಾನ್ನ ಸುಮ್ಮನೆ ರೇಗುತ್ತೇನೆ, ತಲೆ ಕೆಡಿಸಿಕೊಳ್ಳುತ್ತೇನೆ. ಗಾಳಿ ಗುದ್ದುವ ಹಾಗೆ, ಗೋಡೆ ಗುದ್ದುವ ಹಾಗೆ ಮಾಡುತ್ತೇನೆ. ನಮಗೆ ಬೇಡವಾದ ಒಂದು ಸಂಗತಿಯಿದ್ದರೆ, ಕೂಡಲೆ ನಿರ್ಧಾರವೆಬೇಕೆ? ಹೀಗೆ ಮಾಡುವುದಕ್ಕಿಂತ 'ಅದೇಕೆ ಹಾಗಾಯಿತು? ಪಾಪ, ಅದಕ್ಕೂ ಏನಾದರೊಂದು ಕಾರಣವಿದ್ದಿರಬೇಕಲ್ಲವೆ?' ಎಂದು ಸಹಾನುಭೂತಿಯಿಂದ, ತಾಳ್ಮೆಯಿಂದ ಒಳಹೊಕ್ಕು ಮೂಲಕಾರಣ ತಿಳಿಯಲು ಯತ್ನಿಸಬೇಕು. ಇದಕ್ಕೆಲ್ಲಕ್ಕೂ ಸಹನೆ ಬಹಳ ಬೇಕಾಗುತ್ತದೆ. ಸಹನೆಯುಳ್ಳವನೇ ಸಮರ್ಥನು. ಶೂರನಿದ್ದರೂ ಸಹನೆಯುಳ್ಳವನಿರದಿದ್ದರೆ ನಿರುಪಯೋಗ. ಶೂರನ ಶೌರ್ಯವು ಸಿಕ್ಕ ಸಿಕ್ಕ ಹಾಗೆ ಸೂರೆಯಾಗಬಾರದು. ಅದೂ ಸಕಾರಣ ವಿನಿಯೋಗವಾಗುತ್ತಿರಬೇಕು.

ನಿರ್ವಿಕಾರತ್ವವನ್ನು ಗೀತೆ ಬೋಧಿಸುತ್ತದೆ. ಕೂರ್ಮವು ತನ್ನ ಅಂಗಗಳನ್ನು ಒಳಗೆ ಮಡಿಸಿಕೊಳ್ಳುವಂತೆ, ನಮ್ಮ ವಿಕಾರಗಳನ್ನೂ ಒಳಗೆ ಸೇದಿಕೊಳ್ಳಬೇಕು ನಾವು. ಹೀಗೆಂದಾಗಲೆ ಸ್ಥಿತಪ್ರಜ್ಞರಾಗಲು ನಾವು ಯೋಗ್ಯರಾಗಬಹುದು. ಕ್ಷಮೆ ಕೇಳುವವನಾಗಲಿ, ಕ್ಷಮೆ ಮಾಡುವವನಾಗಲಿ, ಸ್ಥಿತಪ್ರಜ್ಞನಾದಾಗಲೇ ಕ್ಷಮಾಗುಣಕ್ಕೆ ಪೃಥ್ವಿಯ ಬೆಲೆ ಬರುತ್ತದೆ.

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಫೆಬ್ರುವರಿ ಸಂಚಿಕೆಯಲ್ಲಿ ಕೇಳಿಕೊಂಡಂತೆ 'ಅಂಬಿಕಾತನಯದತ್ತ' ಮತ್ತು 'ಆನಂದಕಂದ'ರ 'ನವಯುಗಾರಂಭ' ಎಂಬ ಕವನಗಳನ್ನು ಕುರಿತು, ಬೇರೆ ಬೇರೆ ೧೬ ಜನರಿಂದ ವಿಮರ್ಶೆಗಳು ಬಂದಿವೆ. ವಿಮರ್ಶೆಗಳನ್ನು ಕಳುಹಿದವರ ಅನುಕ್ರಮ ಹೀಗಿದೆ :

೧ ಶ್ರೀ. ಫತ್ತೇಪುರ ಶಾಮಣ್ಣ, ಗದಗು. ೨ ಶ್ರೀ. ಯ. ರಾ. ಭಟ್ಟ, ಕಬಕ–ಪುತ್ತೂರು. ೩ ಶ್ರೀ. ಜಯತೀರ್ಥ ರಾಜಪುರೋಹಿತ ಬಿ. ಎ. ಹೈದರಾಬಾದ್. ೪ ಶ್ರೀ. ಎಚ್. ಎಫ್. ಆಡಕಾರ, ಸವದತ್ತಿ (ಇವರು 'ಆನಂದಕಂದ'ರ ಕವಿತೆಯೊಂದನ್ನೇ ವಿಮರ್ಶಿಸಿದ್ದಾರೆ). ೫ ಶ್ರೀ. ಚ. ಭೀ. ಮಾಸ್ತರ್, ಗಾಂಧೀವಾಚನಾಲಯ, ಯಲಬುರ್ಗಿ. ೬ ಶ್ರೀ. ಎಂ. ಕೆ. ವಾಸುದೇವನ್, ಬೆಂಗಳೂರು ಸಿಟಿ. ೭ ಶ್ರೀ. ವ. ನಾ. ಸರದೇಸಾಯಿ, ಬಾದಾಮಿ (ಇವರು 'ಅಂಬಿಕಾತನಯದತ್ತ'ರ ಕವಿತೆಯೊಂದನ್ನೆ ವಿಮರ್ಶಿಸಿದ್ದಾರೆ). ೮ ಶ್ರೀ. ಕೆ. ವೆಂಕಟರಾಮಾಚಾರ್ಯ, ಸುರತಕಲ್ಲು, ದ. ಕ. ೯ ಶ್ರೀ. ಶಂಕರ, ಜಿ. ಟಿ. ಮದ್ರಾಸ. ೧೦ ಶ್ರೀ. ಎಂ. ಎಫ್. ಬಸರಕೋಡ, ಗುಳೇದಗುಡ್ಡ. ೧೧ ಶ್ರೀ. 'ಉದಯಚಂದ್ರ' ಸರಸ್ವತೀ ಪುರಂ, ಮೈಸೂರು. ೧೨ 'ಹೊನ್ನಾಡಿಗ' ಪುಣೆ (ಇವರು ಪದ್ಯಪಲ್ಲಿಯೆ ಕವನಗಳ 'ರಸಾಸ್ವಾದ' ಬರೆದು ಕಳುಹಿರುವರು). ೧೩ ಶ್ರೀ. ಬಾಳು ಬಿ. ಉಪಾಧ್ಯೆ, ಶಮನೇವಾಡಿ. ೧೪ ಶ್ರೀ. ಜಿ. ಎಸ್. ಮಠಕರ ಎಂ. ಎ., ಬಿ. ಟಿ. ಪುಣೆ. ೧೫ ಶ್ರೀ. ವಿರೂಪಾಕ್ಷ ಎಸ್. ಸೆಟ್ಟಿ, ಭೋಜ. ೧೬ ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ.

ಬಂದ ವಿಮರ್ಶೆಗಳನ್ನೆಲ್ಲ ನಮ್ಮ ಸಂಪಾದಕಸಮಿತಿಯೇ ನೋಡಿ ನಿರ್ಣಯಕೊಟ್ಟಿತು **ಶ್ರೀ. ಯ. ರಾ. ಭಟ್ಟ** ಮತ್ತು **ಶ್ರೀ. ಎಸ್. ಶ್ರೀಕೃಷ್ಣ, ಪೆರಡಾಲ** ಇವರಿಬ್ಬರ ವಿಮರ್ಶೆಗಳು ಹೆಚ್ಚು ಒಳ್ಳೆಯವುಗಳಾಗಿವೆ. (ಎರಡನ್ನೂ ಇಲ್ಲಿ ಪ್ರಕಟಿಸಲಿಕ್ಕೆ ಸಾಧ್ಯವಾಗಲಿಲ್ಲ). ಶ್ರೀ. ಚ. ಭೀ. ಮಾಸ್ತರ್, ಶ್ರೀ. ಜಿ. ಎಸ್. ಮಠಕರ, ಶ್ರೀ. ಉದಯಚಂದ್ರ ಅವರ ವಿಮರ್ಶೆಗಳೂ ಚೆನ್ನಾಗಿವೆ.

ಕಥೆ-ಕಾದಂಬರಿಗಳನ್ನು ವಿಮರ್ಶಿಸುವುದಕ್ಕಿಂತ ಕವಿತೆಗಳನ್ನು ವಿಮರ್ಶಿಸುವುದು ಹೆಚ್ಚು ಕಠಿನವಾದ ಕೆಲಸ. ಕವಿತಾವಿಮರ್ಶಕರಿಗೆ ಸಾಹಿತ್ಯಾಭ್ಯಾಸದ ಬೆಂಬಲ ತುಂಬ ಅವಶ್ಯವಿರುವುದು. ಸ್ವಲ್ಪ ಮಾತುಗಳಲ್ಲಿಯೆ ಬಹಳ ಅರ್ಥವನ್ನು ಹುದುಗಿಸಿ ಹೇಳಬೇಕಾಗುವುದರಿಂದ ಕವಿತೆಗಳಲ್ಲಿ ಸಮಯ-ಸಂಕೇತಗಳನ್ನು ಬಳಸಲಾಗುವುದು. ಈ ಸಮಯ-ಸಂಕೇತಗಳ ಪರಿಚಯವಿಲ್ಲದೆ ಹೋದರೆ, ಸಮಗ್ರ ಕವಿತೆಯ ಸೌಂದರ್ಯವೇ ತಿಳಿಯದು. ಕವಿಗಳು ವರ್ತಮಾನ ವಿಷಯವನ್ನು ನೇರವಾಗಿ ವಿವರಿಸದೆ, ರೂಪಕದಲ್ಲಿಯೋ ಧ್ವನಿಯುಕ್ತ ಮಾತುಗಳಲ್ಲಿಯೋ ಹೇಳುವರು. ರೂಪಕದಲ್ಲಿ ವಿವರಿಸಿದ್ದರೆ, ಆ ರೂಪಕದ ಸಂದರ್ಭಸಂಗತಿಯೆಲ್ಲ ಗೊತ್ತಿರಬೇಕು. ಧ್ವನಿಯುಕ್ತ ಮಾತುಗಳಲ್ಲಿ ಹೇಳಿದ್ದರೆ, ಆ ಮಾತುಗಳಲ್ಲಿ ಹುದುಗಿದ ಅರ್ಥವನ್ನು ತೂಗುವ ನೈಪುಣ್ಯ ಪಡೆದಿರಬೇಕು. ಇಂದಿನ ಭಾವಗೀತಗಳು ಹೆಚ್ಚಾಗಿ ರೂಪಕಗಳೋ ಧ್ವನಿಜಾತಿಯೋ ಆಗಿರುವುವು. ಇನ್ನೊಂದು ವಿಷಯ: ಒಬ್ಬನೆ ಕವಿ ಬರೆದ ಬೇರೆ ಬೇರೆ ಕವನಗಳ ರೀತಿ-ಸೌಂದರ್ಯಗಳೂ ಬೇರೆ ಬೇರೆಯಾಗಿರುವುವು. ವಿಮರ್ಶಕ ಆ ಆ ರೀತಿ-ಸೌಂದರ್ಯಗಳನ್ನು ಗುರುತಿಸಿ, ಅವುಗಳ ಜಾತಿಯನ್ನು ವಿಂಗಡಿಸಿ ಹೇಳಬೇಕಲ್ಲದೆ, ತಾನು ಮೆಚ್ಚಿದ ರೀತಿ-ಸೌಂದರ್ಯಗಳುಳ್ಳುದಷ್ಟೇ ಕವಿತೆಯೆಂದು ಹೇಳಲಾಗದು. ಮಲ್ಲಿಗೆಯನ್ನು ಮೆಚ್ಚಿ ಮೂಸುವವನು ಗುಲಾಬಿಯನ್ನು ಹೂವೇ ಅಲ್ಲವೆಂದು ಹೇಳುವುದು ಸರಿಯೆನಿಸುವುದೇ? ಮಲ್ಲಿಗೆ, ಗುಲಾಬಿ—ಎರಡೂ ಹೂಗಳು. ಜಾತಿ ಬೇರೆ, ಇಷ್ಟೇ. ಮಲ್ಲಿಗೆಯನ್ನೇ ಮೆಚ್ಚುವ ರಸಿಕರಿರುವಂತೆ ಗುಲಾಬಿಯನ್ನೇ ಮೆಚ್ಚುವ ಸವಿಗಾರರೂ ಇರುವರು. ನಿಜವಾದ ಸೌಂದರ್ಯೋಪಾಸಕ ಎರಡರ ಸೌಂದರ್ಯವನ್ನೂ ಗುರುತಿಸುವನು. ಔಚಿತ್ಯವರಿತು ಅವುಗಳನ್ನು ಅನುಭವಿಸುವನು. ನಮ್ಮ ತರುಣ ವಿಮರ್ಶಕರು ಈ ಮಾತನ್ನು ಲಕ್ಷ್ಯದಲ್ಲಿರಿಸಿಕೊಂಡರೆ, ಅವರ ವಿಮರ್ಶೆಗಳು ಹೆಚ್ಚು ಒಳ್ಳೆಯವಾಗಬಹುದು.

ಮುಂದಿನ ತಿಂಗಳಿಗಾಗಿ **'ಕನ್ನಡದಲ್ಲಿ ಸಣ್ಣಕತೆಗಳು'** ಎಂಬ ಶೀರ್ಷಿಕೆಯನ್ನಿರಿಸಿ, ಜಯಂತಿಯ ೨–೩ ಪುಟಗಳಾಗುವಷ್ಟು ವಿಮರ್ಶಾತ್ಮಕ ಪ್ರಬಂಧ ಬರೆದು ಕಳುಹಬೇಕು. ಇದು ವಿಮರ್ಶೆಯ ಶಿಕ್ಷಣರಂಗದ ಇನ್ನೊಂದು ಮೆಟ್ಟಿಲು.

—ಸಂಪಾದಕರು

ನವಯುಗಾರಂಭ

(ಕವನಗಳ ವಿಮರ್ಶೆ)

ಶ್ರೀ " ಯ. ರಾ. " ಪುತ್ತೂರ.

ಈ ವರ್ಷ ಜನವರಿ ಇಪ್ಪತ್ತಾರರ ದಿನವು ಭಾರತೀಯರೆಲ್ಲರಿಗೂ ಒಂದು ಮಹತ್ತ್ವದ ದಿನ. ಅಂದಿನ ತನಕ ಅನ್ಯರ ದಾಸ್ಯದಲ್ಲಿ ಕೊಳೆಯುತ್ತಿದ್ದ ನಾಡು, ಕಣ್ಣು ಬಿಟ್ಟು ತನ್ನ ಸೌಂದರ್ಯ, ಪ್ರಖ್ಯಾತಿಗಳನ್ನು ಕಂಡುಕೊಂಡ ದಿನವದು. ಇನ್ನು ಮುಂದಿನ ನಮ್ಮ ಜೀವನವೂ ಒಂದು ವಿಶಿಷ್ಟರೀತಿಯದು. ನಮ್ಮ ಭವಿಷ್ಯವೇ ಒಂದು ನವೀನ ರೀತಿಯಿಂದ ಸಾಗಲಿರುವ ಮುಂದಿನ ದಿನಗಳು ನವಯುಗವೆಂದು ಕರೆಯಿಸಿಕೊಳ್ಳುವುದಕ್ಕೆ ಅರ್ಹವಾದುವುಗಳೇ. ಅಂದ ಮೇಲೆ ಈ ನವಯುಗದ ಆರಂಭದಿನವು ಎಷ್ಟೊಂದು ವಿಶಿಷ್ಟರೀತಿಯದಾಗಿರಬೇಡ ! ಹಿಂದಿನ ನಮ್ಮ ದುರ್ದಶೆಯನ್ನು ನೆನಪಿಗೆ ತಂದು, ಮುಂದಿನ ಭವ್ಯಜೀವನವನ್ನು ಕಲ್ಪಿಸಿಕೊಡುವ ಆ ದಿನದಲ್ಲಿ, ಪ್ರತಿಯೊಬ್ಬನ ಹೃದಯದಲ್ಲೇಳುವ ಭಾವನೆಗಳೂ ಉನ್ನತವಾದುವುಗಳು, ಭವ್ಯವಾದುವುಗಳು, ಪವಿತ್ರವಾದುವುಗಳು. ಹಾಗೆ ರೂಪುಗೊಂಡು ಕೃತಿಯಲ್ಲಿಳಿದ ಎರಡು ಭಾವನೆಗಳು " ನವಯುಗಾರಂಭ " ವೆಂಬ ಹೆಸರಿನಿಂದ " ಜಯಂತಿ "ಯಲ್ಲಿ ಪ್ರಕಟವಾಗಿವೆ. ಒಂದು " ಅಂಬಿಕಾತನಯದತ್ತ " ರದು; ಇನ್ನೊಂದು " ಆನಂದಕಂದ " ರದು. ಒಂದೇ ದಿನದ ಕುರಿತು ಬರೆದುದಾದರೂ ಪ್ರತಿಯೊಂದೂ ಒಂದೊಂದು ವಿಶಿಷ್ಟರೀತಿಯಿಂದ ಕೂಡಿದೆ. ಅಂಬಿಕಾತನಯದತ್ತರ ಕವನದಲ್ಲಿ, " ಮುಂದಿನ ದಿನಗಳಲ್ಲಿ ನಮ್ಮ ಹೃದಯ, ಮನಸ್ಸು, ನಾಡಿನ ಭವಿತವ್ಯ ಹೀಗೆ ರೂಪುಗೊಳ್ಳಲಿ ! " ಎಂಬ ಹಾರೈಕೆ ಇದ್ದರೆ, ಆನಂದಕಂದರ ಕವನವು ಈ ಯುಗಾರಂಭ ದಿನದ ಭವ್ಯತೆ, ಪಾವಿತ್ರ್ಯಗಳನ್ನು ನೆನೆದುಕೊಂಡು ಆನಂದದಿಂದ ಕೂಗುವ ಉನ್ಮತ್ತ ಹೃದಯದಿಂದೆದ್ದ ಭಾವನೆಗಳನ್ನು ಪ್ರತಿಬಿಂಬಿಸುತ್ತದೆ. ಇನ್ನು ಈ ಎರಡು ಕವನಗಳ ಬಗೆಗೆ ಬೇರೆಬೇರೆಯಾಗಿ ಎರಡು ಮಾತುಗಳನ್ನು ಬರೆಯುತ್ತೇನೆ :

* * *

ಅಂಬಿಕಾತನಯದತ್ತರ ಕವನದಲ್ಲಿ ನಾಡಿನ ಭವಿತವ್ಯವನ್ನು ರೂಪಿಸಿಕೊಟ್ಟು " ಮಾತು ಕೃತಿಯ ರೂಪತಾಳಿ, ಘೋಷ ಸಿದ್ಧಿಯಾಗಿ ಬಾಳಿ, ತಮ್ಮ ತಾವು ಮೊದಲು ಆಳಿ, ಏಳಲಿ ಜನವು " ಎನ್ನುವಂಥ ಹಾರೈಕೆಗಳೇ ಮುಖ್ಯವಾಗಿದ್ದರೂ, ಅಂದು ತಾನೆ ಸ್ವಾತಂತ್ರ್ಯ ರಥವನ್ನೇರಿದ ರವಿಯನ್ನು ನೆನೆಯಲು ಮರೆಯಲಿಲ್ಲ. ಭಾರತದ ಹುಣ್ಣಿಮೆಯನ್ನು ಕಂಡು ಕುಣಿಯುತ್ತಿರುವ ಹೃದಯದ ಗೆಜ್ಜೆಗೆ ದನಿ ಕೂಡಿಸಿ ಉತ್ಸಾಹದಿಂದ ಮೊರೆವ ಕಡಲುಗಳನ್ನು ಮರೆಯಲಿಲ್ಲ. ಮುಂದೆ ಕವಿಯ ಭಾವನೆಯು ಭವಿಷ್ಯದ ಕಡೆಗೆ ಹೊರಳುತ್ತದೆ. ಅಂದು ತಾನೆ ಸಂತಸದುಸಿರನ್ನು ಬಿಡುವ ಅವಕಾಶ ದೊರೆತ ಮುಗ್ಧ ಜನತೆಯ ಉತ್ಸಾಹಘೋಷವನ್ನು ಕೇಳಿ- ದಾಗ ' ಈ " ಘೋಷ ಸಿದ್ಧಿಯಾಗಿ ಬಾಳಿ " ಬದುಕಲಿ, ಎಂದು ಕವಿಯ ಮಮತಾಪೂರ್ಣ ಹೃದಯವು ಹರಸುತ್ತದೆ. ಹೀಗೆ " ಮಾತು ಕೃತಿಯ ರೂಪತಾಳಿ " ಬಾಳಬೇಕಾದರೆ " ದೈವ—ಪೌರುಷಗಳ ಜೋಡಿ "— ತಳಹದಿಯಾಗಬೇಕು. ಹಾಗಾಗಿ ಮತ-ಮತವು ಕೂಡಿ, ' ಭಾರತವಿದು ಅವಿಭಾಜ್ಯ, ಜಗತ್ತೆಲ್ಲ ಏಕರಾಜ್ಯ " ಎಂಬುದನ್ನು ಸಾರಲಿ—ಎಂದು ನಾಡಿನ ಜನತೆಯ ಕರ್ತವ್ಯವನ್ನು ಕವಿಗಳು ರೂಪಿಸಿಕೊಟ್ಟಿದ್ದಾರೆ. ಪ್ರತಿಯೊಬ್ಬನಿಗೂ ಒಂದೊಂದು ವಿಶಿಷ್ಟ ವ್ಯಕ್ತಿತ್ವವಿದೆ ; ಅಲ್ಲಿ ಅವರು ಬೆಳಗಿ ಜಗತ್ತನ್ನು ಬೆಳಗಿಸಬೇಕು, ಆದರೆ ಈ ಸಂದರ್ಭದಲ್ಲಿ " ತಮ್ಮ ಬಾಳಿನ ತಾಯ್ನೀರಾದ ನಾಡನ್ನು, ಅಲ್ಲಿಯ ಜನರ ಹಿತವನ್ನು ಮರೆಯಬಾರದು " ಎಂಬ ಒಂದು ಭಾವನೆಯನ್ನು ಮೂರೇ ಗೆರೆಯಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.

"ಅವರವರಿಗೆ ಅವರ ಹಾದಿ
ಪ್ರತಿ ಕಿರಣಕು ರವಿಯೆ ಆದಿ
ಸಪ್ತಸ್ವರಕು ಶ್ರುತಿ ಸನಾದಿ--ಸಂಗತಿಗೀತ. "

ಭಾರತೀಯರ ಉನ್ನತಿಗೆ " ಹೃದಯ ಸಮತೆ ಮೊದಲ ಪಾಠ" ವಾಗಬೇಕು; ಬಾಂಧವ್ಯವೇ ನಮ್ಮ ಉನ್ನತಿಯ ಪ್ರಥಮ ಮೆಟ್ಟಿಲು ಎಂಬುದನ್ನು ರಾಷ್ಟ್ರಚಿಹ್ನೆಯಾದ ಸಿಂಹಮುಖದ ಉದಾಹರಣೆ ಕೊಟ್ಟು ವಿವರಿಸಿದ್ದಾರೆ. ಅಂತಹ " ಮೂರು ಮುಖಕು ಒಂದೆ ಪೀಠ " ವಾದ " ಸಿಂಹದ ದಾರಿ " ಯಲ್ಲಿ ನಡೆದು, ಅಮಾನುಷತೆಯ ಆನೆಯ ಅಹಂಕಾರವನ್ನು ತುಳಿದು, ಜಯಮಾಲೆಯನ್ನು ತರಲೆಂದು ಹಾರಯಿಸಿದ್ದಾರೆ. ಅಂತಹ ನಮ್ಮ ಹೊಸಯುಗದಲ್ಲಿ " ಕಣ್ಮುಚ್ಚಿಯು ನ್ಯಾಯರಾಣಿ ಭಾಗ್ಯವ ಕೊಡಲಿ ' ಎಂದು ಸ್ವಾರ್ಥಿಸಿದ್ದಾರೆ. ಕೊನೆಗೆ, ಸಾವಿರದೀ ಏಕಬಂಧ ಸ್ವಚ್ಛಂದದಿಂದ ಕುಣಿಯುವಂತೆ ಹೃದಯವಾರವಿಂದವನ್ನು ಅರಳಿಸಲು ಸಿಂಹವಾಹಿನಿಯಾದ ನಾಡ ತಾಯಿಯನ್ನು ಬೇಡಿಕೊಂಡು, ಅಂದು ತಾನೆ ಹೊಸಯುಗದ ರಥವೇರಿದ ರವಿಯ ನೆನಪು ಮಾಡಿಕೊಟ್ಟಿದ್ದಾರೆ.

ಕವನದ ಪ್ರತಿಯೊಂದು ನುಡಿಯೂ ಹೊಸಯುಗದಲ್ಲಿ ಕಾಲಿಟ್ಟ ಭಾರತೀಯನ ಹೃದಯವನ್ನು ಪ್ರತಿಬಿಂಬಿಸಿದೆ. ಇಲ್ಲಿರುವಂತಹ

ನಮ್ಮಲ್ಲಿ ದೊರೆಯುವ ಪುಸ್ತಕಗಳು!

ಲೇಖನ ಕಲೆ	೨-೪-೦	ರಾಮಣ್ಣ ಮಾಸ್ತರು	೨-೦-೦
ಅಂಡಯ್ಯ	೧-೮-೦	ದಶಭಕ್ತಿ	೩-೦-೦

ಚಿನ್ಮಯ ಚಿಂತಾಮಣಿ ೧-೦-೦

ವ್ಯಾಪಾರಿಗಳಿಗೆ ತುಂಬ ಕಮೀಶನ್ ಉಂಟು.

ಮಿರ್ಜಿ ಅಣ್ಣಾರಾಯರು, ಉಗಾರ (ಜಿಲ್ಲಾ ಬೆಳಗಾಂವಿ)

ಇದೀಗ ಪ್ರಕಟವಾಗಿದೆ!

ಹಾವಾಡಿಗನ ಮಗಳು

(ಶಿಗ್ಗಾಂವಿ ವೀರೇಶ್ವರರ ಕಥಾಸಂಗ್ರಹ)

೧೨೦ ಪುಟಗಳು ಬೆಲೆ: ೧—೦—೦

○ ಇದು ವಿಕಾಸ ಸಾಹಿತ್ಯಮಾಲೆಯ ಎರಡನೆಯ ಪುಸ್ತಕವಾದುದರಿಂದ ಚಂದಾವಾರಾಗುವವರಿಗೆ ವಿಶೇಷ ಸಲಕ್ತು, ಕಾಣಿಕೆಗಳಿವೆ.

○ ಪತ್ರಿಕಾ ಏಜಂಟರಿಗೆ ವಹಾಟಗಾರರಿಗೆ ಕೈತುಂಬ ಕಮೀಶನ್, ವಿವರಗಳಿಗಾಗಿ ಇಂದೇ ಬರೆಯಿರಿ.

ವಿಕಾಸ ಸಾಹಿತ್ಯಮಾಲಾ, ಶಿಗ್ಗಾಂವಿ. (ಜಿ. ಧಾರವಾಡ.)

ವಿಚಾರಗಳನ್ನು ಪ್ರತಿಬೊಬ್ಬ ಸಹೃದಯನೂ ಅಂದಿನ ದಿನ ಹಾರಯಿಸಿರಬಹುದು. ಅವನ್ನು ಕವಿಕೃತಿಯಲ್ಲಿಳಿಸಿದ್ದಾರೆ.

* * *

ಆನಂದಕಂದರ ಕವನಕ್ಕೆ ಆ ದಿನದ ಪರಿಪೂರ್ಣತೆಯೇ ಮುಖ್ಯವಸ್ತು. ಅಂದಿನ ಸೂರ್ಯಬರುವಾಗ ಹೊಸಯುಗವನ್ನೇ ಕರೆದು ತಂದಿದ್ದಾನೆ. ಯಾರ ಹೃದಯ ತಾನೆ ಉಬ್ಬಲಾರದು? ಈ ಆನಂದಕ್ಕೆ ಗಿಡ, ಬಳ್ಳಿ, ಗಾಳಿ, ನೀರುಗಳೆಲ್ಲಾ ಕಾರಣರೇ. ಅಲ್ಲದೆ ಈ ಆನಂದದಲ್ಲಿಯೂ ಅವರು ಭಾಗಿಗಳೇ. ಈ ಉತ್ಸಾಹದಲ್ಲೇ ಕವಿಯ ಹೃದಯ ಉನ್ಮತ್ತವಾಗಿ ಹಾಡುತ್ತದೆ:

"ಇಂದಿನುದಯವಂದು ತಂದಿಹನೈ ತನ್ನೊಂದಿಗೆ ನವಯುಗವ
ಇಂದಿನ ಮಧುರ ಸವಿಗಾರ ಹರಡುತಿಪ ಸ್ವಾತಂತ್ರ್ಯದ ಸೊಗವ
ಇಂದಿನ ಉಸಿರಾಟಕೆ ತಡೆಯಿಲ್ಲವ್ವ....." ಎಂದಾಗ
ಈ ತನಕವ ಬಾಳ್ವೆಯು ಕಣ್ಣಿದುರು ನಿಲ್ಲುವುದು. ಹಾಗೆಯೇ ಇಂದಿನಿಂದ ಮೊದಲಾಗುವ ಹೊಸಜೀವನದ ಬಗ್ಗೆ ಸ್ಫೂರ್ತಿ ಉಂಟಾಗುವುದು. ಅದೇ ಉತ್ಸಾಹದಲ್ಲಿ—

"ಪ್ರಳಯದಿಳೆಯ ತನು ಮರೆಯಾಯ್ತೋ—ಕಡ-
ಲೊಳಗಿನ ನೌಕೆಯು ಕರೆಗಾಯ್ತೋ—ಮನು-
ಕುಲದ ಬಾಳಗೋಳದು ಹೋಯ್ತೋ!

ಎಂದು ಹಾಡಿ, ಈ ವರೆಗಿನ ಅಪಮಾನ—ನೋವುಗಳು ಕೇವಲ ಭಾರತೀಯರದ್ದಲ್ಲ; ಇಡೀ ಲೋಕದ್ದು, ಮಾನವ ಕುಲದ್ದು ಎಂದು ತೋರಿಕೊಟ್ಟಿದ್ದಾರೆ. ಆದರೆ ಅನೆಲ್ಲ ಅಳಿದು ಇಂದು ಮುಂದಿ ಕಾಣುತ್ತಿರುವ ಭಾರತಮಾತೆಯ ಚೆಂದದ ನಗುಮೊಗವನ್ನು ತೋರಿ, ಈ ದಿನದ ಮಹತ್ತ್ವವನ್ನು ತಿಳಿಸಿದ್ದಾರೆ. ಎಂತಹ ಭವ್ಯ ದಿನವಿದು!

"ಇಂದು ಹುಟ್ಟಿದಣಾಗನಿಗೆ ಇಲ್ಲನೈ ಪರದಾಸ್ಯದ ಹೊಲೆಯು....."
"ಇಂದು ಉಂಡಊಟವಿದು ತುಂಬುತಿದೆ ಮನದಿ ಮನುಜಗುಣವ!"
ಎಂದು ಈ ದಿನದ ಬಗೆಗೆ ಜನರು ಹೆಮ್ಮೆಯನ್ನು ತಾಳುವಂತೆ ಸುಂದರವಾಗಿ ನಿರೂಪಿಸಿದ್ದಾರೆ. ಜಗತ್ತನ್ನು ಮುತ್ತಿದ ವೈಷಮ್ಯದ ಪ್ರಳಯವನ್ನು ಪರಿಹರಿಸಿ, "ದೇವ"ರ ಸ್ಥಾನಕ್ಕೇರಿದ ಮಾನವರು ಕವಿಯ ಕಣ್ಣಿಗೆ ವಿಮಾನಿನ ಮಾನಕ್ಕಿಳಿದು ಆ "ಪ್ರಳಯ"ವನ್ನು ಕಳೆವ ದೇವನಿಗಿಂತ ಹೆಚ್ಚಿನವರಾಗಿ ಕಾಣಿಸುತ್ತಾರೆ ಈ ತನಕದ ಗೋಳಿನ ಬಾಳನ್ನು ನೆನೆದು "ದೇವನೊಬ್ಬನೇ ತಂ॥ ಯುಗಗಳವು ವೈಷಮ್ಯದ ಒಡಲು" ಎಂದು ಕವಿಯು ಮನಸ್ಸು ಅಪನ ಬಗೆಗೆ ರೊಚ್ಚಿದ್ದು, "ಮಾನವನೇ ಮೂಡಿಸಿದೀ ನವಯು॥ ಸಮತೆಯ ಸನಿಗಡಲು!" ಎಂದು ತನ್ನವರ ಬಗೆಗೆ ಅಭಿಮಾನ ತಾಳುವುದು. ಆ ಅಭಿಮಾನದಲ್ಲೇ "ಭಾರತಶಕ್ತಿಯು ದುಡಿದುಡಿದು—ಕರೆತಂದಿದೆ ಕಾಲದ ಕೈಹಿಡಿದು—ಇದೆ-ಲೋಕದ ಕಂಗ ತೆರೆಸುವುದು!" ಎಂದು ಭರವಸೆಯಿಟ್ಟಿಯುತ್ತದೆ. ಇಂತಹ ಭವ್ಯ ದಿನದ ಉತ್ಸಾಹ, ಹೆಮ್ಮೆ, ಆನಂದಗಳನ್ನು ಯಾರು ತಾನೆ ತಳೆಯಲಾರರು? ಮುಷಿವ್ಯಂದ ಹರಸುತ್ತದೆ! ಭಾರತ ಕುಲದ ಪಿತೃಗಣ॥ ತನ್ನ ಅಣುಗರ ಕೋಲಾಹಲದಲ್ಲಿ ಭಾಗಿಯಾಗಿ ಹೂಮಳೆ ಸುರಿಸುತ್ತದೆ! ಈ ಕೋಲಾಹಲದಲ್ಲಿ ತ್ರಿಶೂಲಿಯು ತಾಂಡವಕ್ಕೆ ತೊಡಗಿದ್ದಾನೆ! ಕಡಲುಗಳು ಉಬ್ಬೇರಿ ಕುಣಿಯುತ್ತವೆ! ಕೃತಾದಿಯುಗಗಳು ಕಾಣಿಕೆ ತಂದು ನವಯುಗಪುರುಷನ ಭವ್ಯ ಭವಿಷ್ಯವನ್ನು ಹಾರಯಿಸುತ್ತವೆ! ಏನು ಉತ್ಸಾಹ, ಎಂತಹ ಆನಂದ!

ಈ ಆನಂದ-ಕೋಲಾಹಲಗಳ ಮಧ್ಯೆ ಭವಿತವ್ಯದ ಬಗೆಗೆ ಕವಿಯ ಮನಸ್ಸು ಓಡುವುದು ತೀರ ಕಡಿಮೆ. ಇಂದಿನ ದಿನದ ಉನ್ನತಿಕೆಯನ್ನೇ ಎಳೆದೆಳೆದು ಹಾಡುತ್ತದೆ. ಭಾರತದ ತುಂಬಾ ಇಂಥ ಉತ್ಸಾಹದಿಂದ ಅಲೆಯುತ್ತಿರುವ ಗಾಳಿಯಂತೆ ಹಾರಾಡುತ್ತದೆ ಈ ಉತ್ಸಾಹದಲ್ಲಿ ಭೂಮಿ, ಆಕಾಶ ಎಲ್ಲವೂ ಸನಾತನವಾದುವುಗಳೇ ಎಲ್ಲವು ನಮ್ಮದು, ನಮ್ಮದು, ನಮ್ಮದು! ಒಟ್ಟಿನ ಮೇಲೆ ಈ ಕವನದಲ್ಲಿ ಪ್ರಜಾಪ್ರಭುತ್ವದ ದಿನದ ಮಹತ್ತ್ವವನ್ನು ವೈಭವ ಪೂರ್ಣವಾಗಿ ರೂಪಿಸಲ್ಪಟ್ಟಿದೆ. ಅಲ್ಲದೆ ಇದರ ಇನ್ನೊಂದು ಲಕ್ಷಣವೆಂದರೆ: ಇದು ಲಾವಣಿಯ ಧಾಟಿಯಲ್ಲಿ ರಚಿಸಲ್ಪಟ್ಟಿದೆ. ಆದರೂ ಪ್ರಾಸಮೋಹದಿಂದ ಎಲ್ಲಿಯೂ (ದ್ವಾಪಾರ*ಎಂಬ ಶಬ್ದವೊಂದನ್ನು ಬಿಟ್ಟು) ಅಪಶಬ್ದಗಳಾಗಲೀ, ಅಸಂಗತವೆಂದು ತೋರುವ ಪದಜೋಡಣೆಗಳಾಗಲೀ ನನ್ನ ಕಣ್ಣಿಗಂಕೂ ತೋರುವುದಿಲ್ಲ. ಅಲ್ಲದೆ ಕವನವು "ಉತ್ಸಾಹದ ಧಾಟಿ" ಯಲ್ಲಿ ಬರೆಯಲ್ಪಟ್ಟಿದೆ. ಸ್ವಾತಂತ್ರ್ಯದಿನದಂತಹ ಮಹತ್ತ್ವದ ದಿನಗಳಲ್ಲಿ ಪ್ರತಿಯೊಬ್ಬರೂ ಹಾಡಿಕೊಳ್ಳಲು ಯೋಗ್ಯವಾಗಿದೆ.

ಒಟ್ಟಿನ ಮೇಲೆ "ನವಯುಗಾರಂಭ"ದ ಕುರಿತು ಕವಿಗಳು ಹಾಡಿದ ಗೀತಗಳಲ್ಲಿ ಇವೂ ಒಂದು ವಿಶಿಷ್ಟಸ್ಥಾನವನ್ನು ಪಡೆಯುವುವು ಎಂದು ನಿಸ್ಸಂದೇಹವಾಗಿ ಹೇಳಬಹುದು. ಮೊದಲಿನದು ಅರ್ಥಗಾಂಭೀರ್ಯದಿಂದ, ಭವ್ಯವಾದ ಭಾವನೆಗಳಿಂದ ಓದುಗರ ಮನಸೆಳೆಯಬಲ್ಲುದಾದರೆ, ಎರಡನೆಯದು ತನ್ನ ಸುಲಲಿತವಾದ ಶೈಲಿಯಿಂದ, ಆ ದಿನದ ಮಹತ್ತ್ವವನ್ನು ಚಿತ್ರಿಸಿದ ಹೊಸ ರೀತಿಯ ಭಾವನೆಗಳಿಂದ ಓದುಗರ ಮೆಚ್ಚುಗೆಯನ್ನು ಪಡೆಯಬಹುದು ಎರಡೂ ಆಗತ್ಯ ಸಂಗ್ರಹಿಸಬೇಕಾದ ಕವನಗಳು. ಈ ಕವನಗಳಿಗಾಗಿ ಕವಿಗಳಿಬ್ಬರೂ ವಂದನಾರ್ಹರು!

---

*ನಮ್ಮ ಸಟ್ಟದಿ ಕಾವ್ಯಗಳಲ್ಲಿಯೂ ದಾಸಸಾಹಿತ್ಯದಲ್ಲಿಯೂ 'ದ್ವಾಪಾರ' ಶಬ್ದದ ಬಳಕೆ ತುಂಬ ಇದೆ. ಸಂ. —ಸಂ.



ಗಂಗಾಸಾನಿ

(ಸಾಮಾಜಿಕ ಕಾದಂಬರಿ)

ಬರೆದವರು—'ವರಗಿರಿ'. ಮನೋಹರ ಗ್ರಂಥಮಾಲೆಯ ೧೪ ನೆಯಗ್ರಂಥ.

'ವರಗಿರಿ'ಯವರು ಬರೆದ ಈ ಸರಸವಾದ ಕಾದಂಬರಿಯನ್ನು ನಾನು ಮೆಚ್ಚಿದೆನೆಂದು ಮೊದಲೇ ತಿಳಿಸಿ ಬಿಡುವೆ. ಸ್ವಲ್ಪದರಲ್ಲಿಯೇ ಇದರ ಕಥಾನಕವನ್ನು, ಹೀಗೆ ಸಂಗ್ರಹಿಸಬಹುದು :

ಇನ್ನೂ ನಾಲ್ಕು ವರುಷದವಳಿದ್ದಾಗ ತಾಯಿ ಸತ್ತು ಪರಿತಿಯಾದ ಸುಭಗೆಯನ್ನು, ತಂದೆ ಶಂಕರ ಭಟ್ಟರು ತುಂಬ ವಾತ್ಸಲ್ಯದಿಂದ ಹೂವಿನಂತೆ ಸಾಕಿ, ಅನಳು ೧೬ ವರುಷವಳಾದಾಗ ಮದುವೆ ಮಾಡಿಕೊಟ್ಟರು. ಆದರೆ ವಿಧಿಯ ಆಟವೇ ಬೇರೆಯಿದ್ದಿತು. ತಾಯಿಯನ್ನೇ ಕಳೆದುಕೊಂಡು ಮೊದಲೇ ಪರಿತಿಯಾದ ಸುಭಗಾ, ಕಲ್ಲು-ಮುಳ್ಳಿಗೆ ಹತ್ತಿ ಬೆಳಿಬೆಳೆಯುವುದರಯೇ, ಕರುಳಬೇನೆಯಿಂದ ಗಂಡ ತೀರಿಕೊಂಡದ್ದರಿಂದ, ಧನೆಯಾಗಿ, ಸಮಾಜದ ಔದಾಸೀನ್ಯ-ತಿರಸ್ಕಾರಗಳಿಗೆ ಈಡಾಗಿ ಳೆಯನ್ನು ಸಾಗಿಸಬೇಕಾಯಿತು. ಆಗಲೇ ಅವಳಿಗೆ ಗಂಗಾಸಾನಿಂಥ ಅಪ್ತಮಿತ್ರಳು ದೊರೆತುದು. ಗಂಗಾಸಾನಿ ಹೆಸರಿಗೆ ವಾತ್ರ ಬ್ರೆ. ತನ್ನ ಮನಸ್ಸಿನ ವಿರುದ್ಧವಾಗಿ—ತಾಯಿ, ಅಜ್ಜಿ, ಎಲ್ಲಕ್ಕೂ ಚ್ಚಾಗಿ ಶಂಭುಲಿಂಗ ದೇವತೆಯ 'ಉತ್ತರ'ವಿವುಗಳಿಂದಾಗಿ—ವಂಶಪಾರಂಪರ್ಯವಾದ ವೇಶ್ಯಾವೃತ್ತಿಯನ್ನು ಕೈಕೊಂಡಿದ್ದರೂ, ತನ್ನ ೃದಯದಲ್ಲಿ ಇನ್ನಾವ ಗರತಿಯರಿಗೂ ಕಡಿಮೆಯಿಲ್ಲದಷ್ಟು ಾನವತೆ, ಪ್ರೇಮ, ಔದಾರ್ಯ, ಕರುಣೆ, ಸಹಾನುಭೂತಿಗಳನ್ನು ಇರಿಸಿಕೊಂಡಿದ್ದಳು. ಕಿಕ್ಕೆ ಮುರಿದ ಸುಭಗೆಗೆ ಅವಳು ರಿಯಕ್ಕ—ತಾಯಿಯಾದಳು. ದಿನಗಳೆದಂತೆ, ಕಾಮುಪ್ರತೀಕನಾದ ಶ್ರೀಕಂಠಶಾಸ್ತ್ರಿ, ಯೌವನದ ಚೆಲುವಿನಿಂದ ಶೋಭಿಸುವ ಭಗೆಗೆ ಮರುಳಾಗಿ, ಅವಳನ್ನು ಎತ್ತಿಹಾಕಬೇಕೆಂದು ಎಷ್ಟೊಂದು ಪಕಗಳನ್ನು ಯೋಚಿಸಿದರೂ, ಗಂಗಾಸಾನಿ ಅತನಿಂದ ಸುಭಗೆಯನ್ನು ಕಾಯ್ದುಕೊಂಡಳು ಅವಳ ವ್ಯಕ್ತಿತ್ವದೆದುರು ಶ್ರೀಕಂಠಶಾಸ್ತ್ರಿ ತನ್ನ ನಡತೆಯನ್ನು ಬದಲಿಸಿಕೊಂಡ. ಹಳ್ಳಿಗರಿಗೆ ನಾಟಕ ಾಡಬೇಕೆಂಬಾಶೆ ಮೊಳೆತಾಗ, ಈ ಮೊದಲೇ ನಾಟಕವಾಡಿ ನಾಟಕದ ಅನುಭವವಿದ್ದ ರಾಮು ಅವರಿಗೆ ಜೊತೆತು, ಅವರ ಹಳ್ಳಿಗೆ ಬಂದ. ಸುಭಗೆಯನ್ನು ನೋಡಿದಂದಿನಿಂದ ಅವಳನ್ನು ನೋಡಿಸಿದೆ. ಅವಳಾದರೂ ಅವನನ್ನು ಮೆಚ್ಚಿದಳು. ಇವನ್ನೆಲ್ಲ ಗಂಗಾಸಾನಿ, ಮೊದಲು ಆದನ್ನು ವಿರೋಧಿಸಿದರೂ, ಕೊನೆಗೆ ಅವಳ್ಕೆ ತನ್ನ ಸಮ್ಮತಿಯನ್ನಿತ್ತು, ತನ್ನ ಆಸ್ತಿಯಲ್ಲಿ ಕೊಂಚಭಾಗವನ್ನು ಅವರಿಗೆ ಕೊಟ್ಟು, ಕೊನೆಗೆ ಸ್ಲೇಗಿಗೆ ಆಹುತಿಯಾಗುತ್ತಾಳೆ.

ಮೇಲ್ನೋಟಕ್ಕೆ ಸಿದ ಸಂಗತಿಗಳಿಂದ, ಇಲ್ಲಿಯ ಕತೆ ತುಂಬ ಸ್ವಾರಸ್ಯಮಯವಾಗಿದ್ದು ಕೊನೆಯ ವರೆಗೂ ಅದು ಓದುಗರ ಕುತೂಹಲವನ್ನು ಕೆರಳಿಸುತ್ತಿದೆಯೆಂಬುದು ಸ್ಪಷ್ಟವಿದೆ ಕಥೆಯಲ್ಲಿ ಅದ್ಭುತ ರಮ್ಯ, ರೋಮಾಂಚಕಾರಕ ಘಟನೆಗಳನ್ನು ಹುಡುಕಲುಪೇಕ್ಷಿಸುವವರು ಇಲ್ಲಿ ನಿರಾಶೆಗೊಳಗಾಗಬೇಕಾಗುವುದು. ಏಕೆಂದರೆ ಇಲ್ಲಿ ಕಥೆಗಿಂತ ವ್ಯಕ್ತಿತ್ವಕ್ಕೆ, ಅದಕ್ಕೂ ಹೆಚ್ಚಾಗಿ ಹಿನ್ನೆಲೆಯ ಚಿತ್ರಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಲಾಗಿದೆಯೆಂದು ಲೇಖಕರೇ ಹೇಳಿದ್ದಾರೆ. ಮುನ್ನುಡಿಯಲ್ಲಿ ಹೇಳಿದಂತೆ 'ಮಾನವಕುಲ ಪ್ರೇಮಪ್ರಧಾನವಾದಲ್ಲದೆ, ಹೆಣ್ಣು-ಗಂಡಿನ ಸಮಸ್ಯೆ ಎಂದೂ ಬಿಡಲಾರದು. ಹಾಗೆ ಅದು ಪ್ರೇಮಪ್ರಧಾನವಾದಾಗ ವಿಧವೆಯರನ್ನೂ, ವೇಶ್ಯೆಯರನ್ನೂ ಸಹಾನುಭೂತಿಯಿಂದ ನೋಡಲು ಹಚ್ಚುವುದು.' ಇಲ್ಲಿಯ ಗಂಗಾಸಾನಿ ಲೇಖಕರ ಮೆಚ್ಚಿನ ಪಾತ್ರ. ಅವಳ ಬಗ್ಗೆ ಅವರಿಗೆ ತುಂಬ ಸಹಾನುಭೂತಿ. ಎಂತಲೇ ಅವಳ ಪಾತ್ರ ಕಳೆಪೆತ್ತು ನಿಂತಿದೆ. ಇನ್ನುಳಿದ ಪಾತ್ರಗಳು ಅವಳ ವ್ಯಕ್ತಿತ್ವ ಚಿತ್ರಣಕ್ಕೆ ಸಹಾಯಕವಾಗಿ ಬಂದಿವೆ. ಗಂಗಾಸಾನಿ ಕಸದಲ್ಲಿಯ ಮಾಣಿಕ್ಯ. ಪರಿಸರದಿಂದ ವ್ಯಕ್ತಿಯಾಗುತ್ತಿದ್ದರೂ, ಪರಿಸರವನ್ನು ಮೆಟ್ಟಿ ವ್ಯಕ್ತಿ ತನ್ನ ವಿಕಾಸವನ್ನು ಮಾಡಿಕೊಳ್ಳುವುದರಲ್ಲಿಯೇ ನಿಜವಾದ ಮಾನವತೆಯಿದೆಯಷ್ಟೆ? ಗಂಗಾಸಾನಿ ಈ ಮಾತಿಗೆ ನಿದರ್ಶನ.

ಆದರೆ ಗಂಗಾಸಾನಿಯ ಪಾತ್ರವನ್ನು ಇಷ್ಟು ಚೆನ್ನಾಗಿ ಚಿತ್ರಿಸಿದ ಲೇಖಕರು, ಇನ್ನುಳಿದ ಪಾತ್ರಗಳ ಬಗ್ಗೆ ತಮ್ಮ ಉತ್ಸಾಹ ತೋರಿದಂತೆ ಕಾಣುವುದಿಲ್ಲ ಆ ಪಾತ್ರಗಳಲ್ಲಿ ಜೀವವಣಿಗೆಯೇ ಇಲ್ಲ. ರಾಮು, ಶ್ರೀಕಂಠಶಾಸ್ತ್ರಿ, ಶಂಕರಭಟ್ಟ ಇವೆಲ್ಲ ಮೊದಲಿನಿಂದ ಕೊನೆಯವರೆಗೂ ಹಾಗೇ ಉಳಿದಿವೆ. ಅವರಲ್ಲಿಯೂ ಮೊದಲಿನಿಂದಲೂ ಕಾಮು-ಪ್ರತೀಕನಾಗಿದ್ದು, ಈ ಮೊದಲೇ ಕೈ ಹಿಡಿದ ಹೆಂಡತಿ ರಾಧಾಬಾಯಿಯ ಬಾಳಿಗೆ ಬಿಸಿನೀರೆರೆದು, ಗಂಗಾಸಾನಿಯನ್ನೇ ವರಿಸಿ, ಅಲ್ಲಿಗೂ ನಿಲ್ಲದೆ. ಏನೊಂದೂ ಅರಿಯದ ಮುಗ್ಧೆ ಸುಭಗೆಯನ್ನು ಮೋಹಿಸಿ, ಅವಳನ್ನೇ ವರಿಸಿಕೊಳ್ಳುವುದಕ್ಕಾಗಿ ಯಾವ ತರವ ಕುಹಕಗಳಿಗೂ ಹೇಸದ ಶ್ರೀಕಂಠಶಾಸ್ತ್ರಿ, ಗಂಗಾಸಾನಿಯ ಹಿರಿತನವಾದ ಮಾತುಗಳಿಂದಾಗಿ ಒಮ್ಮೆಲೇ ತನ್ನ ಸ್ವಭಾವವನ್ನೇ ತಿದ್ದಿಕೊಳ್ಳುವುದು ತುಸು ಕೃತ್ರಿಮವೆನಿಸದಿರದು. ಅದರಂತೆಯೇ ಗಂಗಾಸಾನಿಯನ್ನು ಕೊಲ್ಲಬೇಕೆಂಬ (?) ಹುಟ

ದಿಂದಲೋ ಎಂಬಂತೆ, ಅವಳನ್ನು ಫ್ಲೇಗಿಗೆ ಆಹುತಿಕೊಟ್ಟುದೂ, ಓದುಗರಿಗೆ ಅಷ್ಟು ಉಚಿತವೆನಿಸಲಾರದು.

ಶ್ರೀಮಾನ್ ವರಗಿರಿಯವರ ಕಥನಶೈಲಿ ಚೆನ್ನಾಗಿದೆ. ಮಧ್ಯೆ ಮಧ್ಯೆ ಬರುವ ವರ್ಣನೆಗಳು ಹಿತವಾಗಿಯೂ, ಮಿತವಾಗಿಯೂ ಇವೆಯಲ್ಲದೆ, ಸುಂದರವಾದ ಪ್ರಾಯೋಚಿತ ಚಿತ್ರಗಳನ್ನು ಕೊಡುತ್ತವೆ. ಶಂಭುಲಿಂಗನ ಬೆಟ್ಟ, ಶಂಭುಲಿಂಗನ ಗುಡಿ, ಅಷ್ಟಾವಧಾನ-ಪೂಜೆ, ಹಳ್ಳಿಯ ಶಾಲೆಗಳು, ಇವೆಲ್ಲವೂ ನುನೋಹರವಾಗಿ ವರ್ಣಿಸಲ್ಪಟ್ಟಿವೆ. ಸಂಭಾಷಣೆಗಳು ಚೆನ್ನಾಗಿದ್ದರೂ ಮಾರ್ಮಿಕವೆನಿಸುವುದಿಲ್ಲ. ಸಾಮಾನ್ಯವಾಗಿ ಸಂಭಾಷಣೆಗಳನ್ನು ಬಳಸಿಕೊಳ್ಳುವುದು ಕಥೆಯನ್ನು ಬೆಳಸಿಕೊಂಡು ಹೋಗುವುದಕ್ಕಾಗಿ ಇಲ್ಲವೆ ಪಾತ್ರಗಳ ಸ್ವಭಾವ ನಿದರ್ಶನಕ್ಕಾಗಿ ಮೊದಲಿನ ಉದ್ದೇಶ ಇಲ್ಲಿ ಸಾಧಿಸಿದ್ದರೂ ಎರಡನೆಯದು ಅಷ್ಟೊಂದು ಸಾಧಿಸಿಲ್ಲ ಆಡುವ ಮಾತುಗಳಿಂದ ವ್ಯಕ್ತಿಗಳನ್ನು ಗುರುತಿಸುವಂತಾದಾಗಲೇ ಸಂಭಾಷಣೆಯು ಸತ್ತ್ವಶಾಲಿ, ಸಮರ್ಪಕವೆನಿಸಿಕೊಳ್ಳುತ್ತದೆ. ಇಲ್ಲಿಯದು ಅಷ್ಟು ಚುರುಕಾಗಿಲ್ಲ.

ಸೂಕ್ಷ್ಮವಾಗಿ ವಿಚಾರಮಾಡಿದಲ್ಲಿ ಮೇಲ್ನಾಣಿಸಿದಂತೆ ನಾಲ್ಕಾರು ದೋಷಗಳು ಕಂಡರೂ, ಒಟ್ಟಿನಲ್ಲಿ ಮೊದಲ ಪ್ರಯತ್ನವೆಂಬುದನ್ನೇ ನೆನಪಿನಲ್ಲಿಟ್ಟುಕೊಂಡು ನೋಡಿದಾಗ, ವರಗಿರಿಯವರು ಒಳ್ಳೆಯ ಕಾದಂಬರಿಕಾರರಾಗುವರೆಂಬುದನ್ನು ಸಾರಿ ಹೇಳುವಂತಿದೆ ಈ ಕೃತಿ. ಸೂಕ್ಷ್ಮನಿರೀಕ್ಷಣೆ, ಸರಳ ಶೈ, ಕುತೂಹಲ ಕೆರಳಿಸುವ ಕಥನ ಕೌಶಲ, ಘಟನೆಗಳ ಅಯ್ಕೆ ಜೋಡಣೆ, ಸಮಯೋಚಿತವಾದ ವರ್ಣನೆಗಳು, ರಸವತ್ತಾದ ಸಂಭಾಷಣೆಗಳು, ಮಾನವಸ್ವಭಾವದ ಪರಿಚಯ, ಕಥೆಯನ್ನು ಹೆಣೆಯುವ ರೀತಿ, ಮುದ್ದಾದಶೈಲಿ ಇವೆಲ್ಲವೂ ಶ್ರೀ. ವರಗಿರಿಯವರಿಗೆ ಒಳ್ಳೆಯ ಭವಿಷ್ಯವನ್ನು ತೋರುತ್ತವೆ. ಬೆಲೆಯುಳ್ಳ ಮುನ್ನುಡಿಯನ್ನು ಬರೆದು ಹರಸಿದ ಅನಂದಕಂದರು ಹೇಳುವಂತೆ, ಒಳ್ಳೆಯ ಸಾಹಿತ್ಯವನ್ನು ನಿರ್ಮಿಸಬಲ್ಲ ಶಕ್ತಿ ಈ ಲೇಖಕರಲ್ಲಿ ವಿಕಾಸಗೊಳ್ಳುತ್ತಲಿದೆಯೆಂದು ನಾನಾದರೂ ಹೇಳದಿರಲಾರೆ.

ಮುದ್ರಣ, ಮೇಲುಹೊದಿಕೆ ಆಕರ್ಷಕವಾಗಿದ್ದರೂ ಮುದ್ರಣ ದೋಷ ಈ ಸಂಖ್ಯೆಯಲ್ಲಿರುವುದು ಅಕ್ಷಮ್ಯ. ತಮ್ಮ ಮಾಲೆಯಲ್ಲಿ ಇದನ್ನು ಪೋಣಿಸಿ ತರುಣ ಲೇಖಕರಿಗೆ ಪ್ರೋತ್ಸಾಹಕೊಟ್ಟ ಮನೋಹರ ಗ್ರಂಥಮಾಲೆಯ ಸಂಚಾಲಕರಿಗೆ ನಮ್ಮ ಧನ್ಯವಾದಗಳನ್ನರ್ಪಿಸಿ, ಶ್ರೀ. ವರಗಿರಿಯವರ ಸಾಹಿತ್ಯಕೃಷಿ ಬೆಳೆದು ಅವರಿಂದ ನಮಗಿನ್ನೂ ಹಲವಾರು ಉತ್ತಮ ಗ್ರಂಥಗಳು ದೊರೆಯಲೆಂದು ಕೋರುತ್ತೇನೆ.

ಎಸ್. ಪಿ. ಕುಲಕರ್ಣಿ

ಹುಡುಗಾಟ

(ನಗೆಬರಹಗಳ ಸಂಗ್ರಹ)

ಬರೆದವರು—ಜಿಬಿಜ್. ಪ್ರಕಾಶಕರು—ಶಾರದಾ ಪ್ರಕಟನಾಲಯ, ಬೆಂಗಳೂರು. ಬೆಲೆ ೧ ರೂ. ೪ ಆಣೆ.

ಇದೊಂದು 'ಜಿಬಿಜ್'ರ ೯ ನಗೆಬರಹಗಳ ಸಂಗ್ರಹ. ಇತ್ತೀಚೆಗೆ ಪ್ರಕಟವಾದ ನಾಲ್ಕಾರು ನಗೆಬರಹದ ಸಂಗ್ರಹಗಳಲ್ಲಿ ಈ ಹುಡುಗಾಟಕ್ಕೆ ಮೇಲಿನ ಸ್ಥಾನವನ್ನು ಕೊಡಲೇ ಬೇಕು. ಈಗಿನ ಗಲೆ ಜಿಬಿಜ್‌ರು ತಮ್ಮ 'ಮುಗುಳುನಗೆ' ಯನ್ನು ಬೀ 'ಸಭ್ಯತೆ ತಪ್ಪದ ರೀತಿಯಲ್ಲಿ ನಕ್ಕು ನಗಿಸುವವರು' ಎಂದ ಹೆಸರು ಗಳಿಸಿದ್ದಾರೆ. ಆ ಹೆಸರಿಗೆ ಈ ಸಂಕಲನ ಇನ್ನಷ್ಟು ಕೀರ್ತಿ ತಂದಿದೆ.

ಪ್ರಸಂಗ, ಸ್ವಭಾವ, ಪರಿಸ್ಥಿತಿ, ಶಬ್ದ ಹಾಗು ಕಲ್ಪನೆ ಇವು ನಗೆಯ ಪಂಚಪ್ರಾಣಗಳಾಗಿದ್ದು, ಇವುಗಳಲ್ಲಿ ಒಂದು ಪ್ರಾಣವಿದ್ದರೂ ನಗೆಯ ಅಸ್ತಿತ್ವವು ಓದುಗರ ಮನಸ್ಸು ಹಿಡಿಯುತ್ತದೆ. ಪ್ರಾಸಂಗಿಕ, ಸ್ವಭಾವಜನ್ಯ ಇಲ್ಲವೆ ಪರಿಸ್ಥಿತಿ ಮೂಲಕ ನಗೆ ನಾಟಕ-ಕಥೆಗಳಲ್ಲಿ ಅವಕಾಶವಿರುವಷ್ಟು, ಹರಟೆ-ನಗೆಬರಹಗಳಲ್ಲಿ ಇರುವುದಿಲ್ಲ. ಯಾವುದೇ ಪ್ರಸಂಗ ಅಥವಾ ಸ್ವಭಾವದಲ್ಲಿಯ ವಿಸಂಗತತೆಯನ್ನು ಮಾರ್ಮಿಕ ದೃಷ್ಟಿಯಿಂದ ಕಂಡು, ಅದನ್ನು ಉಚಿತವಾದ ಶೈಲಿಯಲ್ಲಿ ನಗೆಗೀಡುಮಾಡುವುದೇ ನಗೆಬರಹಗಾರನ ವೈಶಿಷ್ಟ್ಯ.

ಕವಿಯುಂತೆ ನಗೆಗಾರನೂ ಸ್ವಯಂಭು ಎಂದೇ ಹೇಳುವುದುಂಟು. ನಗೆ ಎಂದರೆ ಒಂದು ಟೀಕೆಯ ರೀತಿಯೇ. ಅದು ಮಾರ್ಮಿಕ ಸಾತ್ತ್ವಿಕ ಹಾಗು ಸಹಾನುಭೂತಿಪರವಾಗಿದ್ದಷ್ಟೂ ಅದಕ್ಕೊಂದು ಪಾವಿತ್ರ್ಯ ಬರುತ್ತದೆ.

ಈ 'ಹುಡುಗಾಟ'ದಲ್ಲಿ ಜಿಬಿಜ್‌ರು ಅನೇಕ ಪ್ರಸಂಗಗಳನ್ನು ಕಲ್ಪಿಸಿ, ಕೆಲವು ಸ್ವಭಾವಗಳನ್ನು ಅದರಲ್ಲಿ ಸೇರಿಸಿ, ಅವರೊಡನೆ ತಾವೂ ವಿನೋದವನ್ನಾಡಿದ್ದಾರೆ. ಶಾಬ್ದಿಕ ಕೋಟಿ ಅಥವಾ ಕಲ್ಪನೆಯ ಹುಚ್ಚುವಿಲಾಸ ಈ ಬರೆಹಗಳಲ್ಲಿ ಕಡಿಮೆಯೆನಿಸಿದರೂ ನಗೆ ಬರವಣಿಗೆಗೆ ಬೇಕಾಗುವ ಶಬ್ದಯೋಜನೆ, ಯಾವುದೇ ಪ್ರಸಂಗವನ್ನೂ ಮನ ಸೆಳೆಯುವಂತೆ ಹೇಳುವ ಶಕ್ತಿ—ಈ ಎರಡು ಗುಣಗಳು ಅವರಲ್ಲಿ ಹೆಚ್ಚು ಪ್ರಭಾವಿಯಾಗಿ ಕಾಣುತ್ತವೆ. ಇದರಲ್ಲಿಯ ಯಾವ ಬರೆಹಕ್ಕೂ ಮೂಗುಮುರಿಯುವಹಾಗಿಲ್ಲ. ಅದರಲ್ಲಿ 'ಎದ್ದಗಳಿಗೆ, ನಮ್ಮೂರಿನ ಕಾರ್ಯದರ್ಶಿ, ಬಿನ್ನವತ್ತಳೆ ಹೊಚ್ಚಲು ಪ್ರವಾಸ' ಇವನ್ನು ಯಾರೂ ಮೆಚ್ಚಬಹುದು. ಜಿಬಿಜ್‌ರ ಹುಡುಗಾಟ ಇಷ್ಟಕ್ಕೇ ನಿಲ್ಲದೆ ಮುಂದೆ ಸಾಗಲಿ ಎಂದೆ ನಮ್ಮ ಹೃತ್ಪೂರ್ವಕ ಬೇಡಿಕೆ.

ಲ. ಜಿ.

ಸಾದರ ಸ್ವೀಕಾರ

★

೧೫೯. **ಸುಧಾಕರ** (ಹೊಸ ಮಾಸಪತ್ರಿಕೆ). ಸಂಪಾದಕರು ಶ್ರೀಮಾನ್ ಎಸುದಾನಿ ಗುರುರಾಯರು. ಪ್ರಕಾಶಕರು ಶಂ. ಬಾ. ಮನಗೋಳಿ, ಆದರ್ಶ ಮುದ್ರಣಾಲಯ, ಸ್ನೇಹಕುಂಜ, ಹುಬ್ಬಳ್ಳಿ. ಪುಟ ೪೦ ಪುಟಗಳು. ವಾರ್ಷಿಕ ಚಂದಾ ೩-೦-೦. ಬಿಡಿಸಂಚಿಕೆಗೆ ೦-೪-೦.

ಕನ್ನಡಕ್ಕೆ ಒಳ್ಳೆಯ ಸಾಹಿತ್ಯ ಎಷ್ಟಾದರೂ ಬೇಕು. ಅಂತಹ ಸಾಹಿತ್ಯವನ್ನೊದಗಿಸಿಕೊಡಬಲ್ಲ ಒಳ್ಳೆಯ ಮಾಸಪತ್ರಿಕೆಗಳೂ ಎಷ್ಟಾದರೂ ಬೇಕು. ಸುಧಾಕರನ್ನ ಅಂತರಂಗ-ಬಹಿರಂಗ ಸೌಂದರ್ಯವನ್ನು ಬೆಳಸಿಕೊಂಡು ಬಹುಕಾಲ ಬಾಳಿ ಆರ್ಯಮಾಡುತ್ತಿರಲಿ.

೧೬೦. **ಹೊಣೆ ಯಾರು?** (ಕಥಾಸಂಕಲನ) ಬರೆದವರು ಶ್ರೀಮಾನ್ ಬಿ. ಆರ್. ವಾಡಪ್ಪ ಎಂ. ಎ., ಬಿ. ಟಿ. ಧಾರವಾಡ. ಪ್ರಕಾಶಕರು ಮನೋಹರ ಗ್ರಂಥಭಾಂಡಾರ, ಧಾರವಾಡ. ಕ್ರೌ. ೮. ೧೦೦ ಪುಟಗಳು. ಬೆಲೆ ೧-೦-೦.

೧೬೧. **ಶ್ರೀದಾಸಗೀತೆ** (ಭಗವದ್ಗೀತೆಯ ಕನ್ನಡಾನುವಾದ). ಅನುವಾದಕರು ಶ್ರೀಮಾನ್ ಶಂಭುಭಟ್ಟ ಎಂ. ಎಜ. 'ಹವ್ಯಕ' ವಡೀವಾಡಿ, ಬಡೋದಾ. ಅನುವಾದಕರೇ ಪ್ರಕಟ ಮಾಡಿದ್ದಾರೆ. ಡೆಮ್ಮಿ ೮ ಅಕಾರದ ೧೫೨ ಪುಟಗಳು. ಬೆಲೆ ೦-೮-೦.

೧೬೨. **ಸಮ್ಯಜ್ಞಾನಿ ಚೆನ್ನಬಸವಣ್ಣ** ವ್ಯಕ್ತಿತ್ವ ಮತ್ತು ಸಾಹಿತ್ಯದ ಪರಿಚಯ ಗ್ರಂಥ). ಬರೆದವರು: ಶ್ರೀ. ಜ. ಪ. ಚೆನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು, ಜಗದ್ಗುರು ನಿಡುಮಾಮಿಡಿ ಶ್ರೀಶೈಲ ಸಂಸ್ಥಾನ, ಗೂಳೂರು. ಪ್ರಕಾಶಕರು: ಶ್ರೀ. ಶಿವಶಂಕರಪ್ಪ ಶಿವಲಿಂಗಪ್ಪ ನಾಲತವಾಡ (ಚಿತ್ರದುರ್ಗ), ಬಾಗಲಕೋಟೆ. ಡೆ. ಆ. ೬೦ ಪುಟಗಳು. ಬೆಲೆ ೦-೧೨-೦.

೧೬೩. **ಸಾರಥಿ** (ಮಾಸಪತ್ರಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಕೆ. ಕೃಷ್ಣಮಾಚಾರ್ಯ, 'ಜಯಭೇರಿ' ಕಾರ್ಯಾಲಯ, ರಥಬೀದಿ, ಮಂಗಳೂರು. ಕ್ರೌ. ೧೬ ಪುಟಗಳು. ಬಿಡಿಸಂಚಿಕೆಯ ಬೆಲೆ ೦-೬-೦.



೧೬೪. **ನಟಸಾರ್ವಭೌಮ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಆ. ನ. ಕೃಷ್ಣರಾಯರು ಪ್ರಕಾಶಕರು ಶ್ರೀ. ಆರ್. ಎನ್. ಹಬ್ಬು, ಉಷಾಪ್ರೆಸ್, ಓಲ್ಡ್ ಪೋಸ್ಟ್ ಆಫೀಸ್ ರೋಡ್, ಮೈಸೂರು. ಡೆ. ಆ. ೪೧೦ ಪುಟಗಳು. ಬೆಲೆ ೧೦-೦-೦.

೧೬೫. **ಮಣ್ಣು** (ಕೃಷಿವಿಜ್ಞಾನ ವಿಷಯಕ ಗ್ರಂಥ). ಲೇಖಕರು ಶ್ರೀ. ಎಲ್. ಬಿ. ದೇಸಾಯಿ ಬಿ. ಎಸ್ಸಿ. (ಆಗ್ರಿ) ಧಾರವಾಡ. ಪ್ರಕಾಶಕರು ಶ್ರೀ. ದತ್ತಾತ್ರಯ ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ. ಕ್ರೌ. ೮. ೬೦ ಪುಟಗಳು. ಬೆಲೆ ೦-೧೦-೦.

೧೬೬. ಹೊಸವರ್ಷದ ಕ್ಯಾಲೆಂಡರುಗಳು. ೧ ಕಿರ್ಲೋಸ್ಕರ ಬಂಧು, ಲಿ. ಕಿರ್ಲೋಸ್ಕರವಾಡಿ; ೨ ಅಲೈಡ್ ಇಂಡಸ್ಟ್ರೀಜ್, ಧಾರವಾಡ; ೩ ಕೆ. ಟಿ. ಡೋಂಗರೆ, ಮುಂಬಯಿ; ೪ ಇಂಡಸ್ಟ್ರಿಯಲ್ ಅಂಡ್ ಕೆಮಿಕಲ್ ವರ್ಕ್ಸ್, ಲೋಣಾವಳಾ.

ಎಲ್ಲ ಕ್ಯಾಲೆಂಡರೂ ಸುಂದರವಾಗಿವೆ. ಆದರಲ್ಲಿಯೂ ಕೆ. ಟಿ. ಡೋಂಗರೆಯವರ ಬೇರೆ ಬೇರೆ ೧೨ ಸುಂದರ ದೃಶ್ಯಚಿತ್ರಗಳನ್ನೊಳಗೊಂಡುದು ತುಂಬ ಮನೋಹಾರಿಯಾಗಿದೆ. ಎಲ್ಲರಿಗೂ ಅಭಿನಂದನೆಗಳು.

೧೬೭. What Bombay Government Did and Said (ಕಾರ್ಯನಿವರದ ವರದಿ). ಮುಂಬಯಿ ಸರಕಾರದ ಪ್ರಕಾಶನಖಾತೆಯ ಮುಖ್ಯಾಧಿಕಾರಿಗಳು ಪ್ರಕಟಿಸಿದುದು. ರಾಯಲ್ ಅಷ್ಟಪತ್ರದ ೬೯೦ ಪುಟಗಳು. ಬೆಲೆ ೧-೦-೦.

೧೬೮. **ಅರ್ಪಣ** (ಅನುವಾದಿತ ಕಥಾಸಂಕಲನ) ಮೂಲ ಫ್ರೆಂಚ ಕತೆಗಾರ ಮೊಪಾಸಾನ ಕಥೆಗಳನ್ನು ಶ್ರೀಮಾನ್ ಸಿ. ವೆಂಕೋಬಾಚಾರ್ಯ ಬಿ.ಎ., ಬಿ.ಟಿ. ಅವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಹುಬ್ಬಳ್ಳಿಯಲ್ಲಿ ಹೊಸತಾಗಿ

ಪ್ರಾರಂಭವಾಗಿರುವ ಆನಂದ ಗ್ರಂಥಮಾಲೆಯ ಪೊತ್ತನೊದಲನೆಯ ಕುಸುಮ, ಕ್ರೌ ಅ. ೧೧೬ ಪುಟಗಳು. ಬೆಲೆ ೧-೪-೦.

೧೫೯. **ನವೀನ ಪದ್ಯಾವಳಿ** (ಕವನ ಸಂಗ್ರಹ), ಶ್ರೀ. ಲಿಂ. ಯ. ಹೊಂಬಳ, ಮುಖ್ಯಾಧ್ಯಾಪಕ ಮ್ಯುನಸಿಪಲ್ ಸ್ಕೂಲ್ ಬೋರ್ಡ್, ಗದಗ. ಕ್ರೌ. ಅ. ೨೪ ಪುಟಗಳು. ಬೆಲೆ ೦-೪-೦.

೧೪೦. **ಜಯಹಿಂದ** (ವಾರಪತ್ರಿಕೆಯ ೧೨ನೆಯ ಜನ್ಮದಿನಾಂಕ). ಸಂಸ್ಥಾಪಕರು ಮತ್ತು ಸಂಚಾಲಕರು ಡಾಕ್ಟರ್ ನಾ. ಸು. ಹರ್ಡಿಕರರು. ಸಂಪಾದಕರು ಶ್ರೀ. ರಾ. ವೆ. ಕರಿಗುದರಿ, ಪ್ರಕಾಶಕರು ಶ್ರೀ. ಶಂ. ಬಾ. ಮನಗೋಳಿ, ಆದರ್ಶ ಮುದ್ರಣ, ಹುಬ್ಬಳ್ಳಿ. ಕ್ರೌ. ಫೋ. ೯೪ ಪುಟಗಳು ಬೆಲೆ ೦-೪-೦.

ಅಧಿಕೃತ ಲೇಖಕರಿಂದ ಇದಕ್ಕಾಗಿಯೆ ಹೇಳಿ ಬರೆಯಿಸಿದ ಉಪಯುಕ್ತವಾದ ರಾಜಕೀಯ ಲೇಖನಗಳೂ, ಕಥೆ-ಕವನಗಳೂ ಇದರಲ್ಲಿ ಅಡಕವಾಗಿವೆ. ಮುಖಪೃಷ್ಠದ ಮೇಲಿನ ಪ್ರಧಾನಮಂತ್ರಿ ಜವಾಹರಲಾಲರ ಛಾಯಾಚಿತ್ರ ಸುಂದರವಾಗಿದೆ. ಎಲ್ಲರೂ ಓದಬೇಕಾದ ವಿಶೇಷ ಸಂಚಿಕೆ.

೧೪೧. **ಸುಧಿ** (ವಾರಪತ್ರಿಕೆಯ ಪ್ರಜಾರಾಜ್ಯದಿನ ಸಂಚಿಕೆ). ಸಂಪಾದಕರು ಮತ್ತು ಪ್ರಕಾಶಕರು: ಶ್ರೀ. ಸಿ. ವಿ. ರಾಮುಚಂದ್ರರಾವ್ ಎಂ. ಎ, ಬಿ. ಎಲ್. ೪೩೦೦ ಅನಂತಭುವನ ಮಾತುಂಗಾ, ಮುಂಬಯಿ ೧೯. ಕ್ರೌ. ಫೋ. ೨೪ ಪುಟಗಳು. ಬೆಲೆ ೦—೨—೦

೧೪೨. **ಕತೆಗಾರ** (ಮಾಸಪತ್ರಿಕೆಯ ಪ್ರಜಾರಾಜ್ಯ ಸಮಾರಂಭ ಸಂಚಿಕೆ). ಸಂಪಾದಕರು ಶ್ರೀ ಜಿ. ಎ. ನರಸಿಂಹ ಮೂರ್ತಿ ಬಿ ಎಸ್‌ಸಿ. ಅವರು. ಪ್ರಕಾಶಕರು ಶ್ರೀ. ಜೆ. ಬಿ. ಶ್ರೀಕಂಠಯ್ಯ ಆರ್. ಎನ್. ಸ್ಯೂಜ್ ಏಜನ್ಸಿ, ಬೆಂಗಳೂರು ೨. ಕ್ರೌ. ಡಿಮಿ ೪೪ ಪುಟಗಳು ಬೆಲೆ: ೦—೧೫—೦.

೧೪೩. **ಗಂಗಾಸಾನಿ** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. 'ವರಗಿರಿ'. ಧಾರವಾಡದ ಮನೋಹರ ಗ್ರಂಥಮಾಲೆಯ ೯೪ನೆಯ ಗ್ರಂಥ. ಕ್ರೌ. ಅ. ೧೬೨ ಪುಟಗಳು ಬೆಲೆ ೧—೧೪—೦

೧೪೪. **ಅಖಂಡ ಕರ್ನಾಟಕ**(ಭಾಷಣ ಸಂಕಲನ) ಶ್ರೀಜಗದ್ಗುರು ಉರವಕೊಂಡದ ಮಹಾಸ್ವಾಮಿಗಳವರು ಮಾಡಿದ ಭಾಷಣಗಳನ್ನು ಶ್ರಿ. ಬಸವರಾಜ ಕಟ್ಟೀಮನಿಯವರು ಸಂಪಾದನೆ ಮಾಡಿದ್ದಾರೆ. ಧಾರವಾಡದ ಪ್ರಗತಿಶೀಲ ಸಾಹಿತ್ಯ ಮಾಲೆಯ ೩ನೆಯ ಪುಸ್ತಕ. ಕ್ರೌ. ಅ. ೪೦ ಪುಟಗಳು. ಬೆಲೆ ೧—೦—೦.

೧೪೫. **ಯುಗವಾಣಿ** (ಒಂದು ಕವನ) ಬರೆದು ಬೆಳಕಿಗೆ ತಂದವರು ಶ್ರೀ. ಸಿಗ್ಗಾವಿ ವೀರೇಶ್ವರರು ಪ್ರಕಾಶಕರು ವಿಕಾಸ ಸಾಹಿತ್ಯಮಾಲಾ, ಶಿಗ್ಗಾಂವಿ, ಸಣ್ಣ ಪುಟಗಳು ೪.

೧೪೬. **ಸರ್ವೋದಯ**(ವಾರಪತ್ರಿಕೆಯ ಪ್ರಜಾಪ್ರಭುತ್ವ ಸಂಚಿಕೆ) ಸಂಪಾದಕರು: ಶ್ರೀಯುತರುಗಳಾದ ಕೆ. ಕೆ. ಕಟ್ಟಿ ಮತ್ತು ನಾರಾಯಣ ಕಿಲ್ಲೆ, 'ಸರ್ವೋದಯ, ಕಾರ್ಯಾಲಯ, ಮಂಗಳೂರು. ಕ್ರೌ. ಡಿಮಿ ೬೪ ಪುಟಗಳು. ಬೆಲೆ ೦—೪—೦

೧೪೭. **ಭಾರತಿ** (ಸಣ್ಣಕತೆಗಳ ಸಂಕಲನಾತ್ಮಕ ಮಾಸಪತ್ರಿಕೆ) ಸಂಪಾದಿಕೆಯರು ಶ್ರೀಮತಿ ಕೆ. ಸಾವಿತ್ರಿ, ಪ್ರಕಾಶಕರು ಶ್ರೀಮಾನ್ ಎಸ್. ಜಿ. ಕುಲಕರ್ಣಿ, ಸಾಧನ ಮುದ್ರಣಾಲಯ, ಧಾರವಾಡ. ಕ್ರೌ. ಅ. ೬೪ ಪುಟಗಳು. ವಾರ್ಷಿಕ ಚಂದಾ ಒಳ್ಳೆಯ ಪ್ರತಿಗೆ ೪—೪—೦; ಸಾಮಾನ್ಯ ಪ್ರತಿಗೆ ೩—೦—೦; ಬಿಡಿ ಸಂಚಿಕೆಗೆ ೦—೪—೦.

೧೪೮. **ಸ್ವರ್ಗದೋಲೆಗಳು** (ವಿಚಾರ ಪ್ರಚೋದಕ ಪತ್ರ ಸಂಕಲನ). ಬರೆದವರು ಶ್ರೀ. ಸಿಂಪಿ ಲಿಂಗಣ್ಣನವರು. ಧಾರವಾಡದ ಮಿಂಚಿನಬಳ್ಳಿಯ ೧೩ನೆಯ ವರ್ಷದ ೨ನೆಯ ಕುಡಿ. ಕ್ರೌ. ಅ. ೧೩೮ ಪುಟಗಳು. ಬೆಲೆ ೧-೪-೦

೧೪೪. **ಶ್ರೀ ಕೀರ್ತನ ಗೀತಾವಳಿ** (ಹಾಡುಗಳು) ಬರೆದವರು ಶ್ರೀ. ಬಸವರಾಜ ಅಂಗಡಿ, ಬಂಕಾಪುರ. ಪ್ರಕಾಶಕರು ಶ್ರೀ. ಚೆನ್ನಪ್ಪನವರು ಸೊಪ್ಪಣ್ಣನವರು ಬಂಕಾಪುರ. ಪೂ. ಕ್ಯಾ. ಅ. ೩೨ ಪುಟಗಳು. ಬೆಲೆ ೦-೩-೦

೧೪೦ **ಪ್ರಜಾತಂತ್ರದ ಹೆದ್ದಾರಿ ಅಥವಾ ಟೆನಸಿ ಕಂದರವ ಯೋಜನೆ** (ಪರಿಜಯಾತ್ಮಕ ಪುಸ್ತಕ) ಬರೆದವರು ಶ್ರೀಮಾನ್ ಕು. ಶಿ. ಹರಿದಾಸ ಭಟ್ಟ, ಬಿ.ಎ. (ಆನರ್ಸ್), ಎಫ್.ಆರ್. ಇ.ಎಸ್ (ಲಂಡನ್) ಪ್ರಕಾಶಕರು ಕಲ್ಯಾಣಪುರ ಕರ ಪ್ರೆಸ್ ಲಿಮಿಟೆಡ್, ಉಡುಪಿ. ಕ್ರೌ ಅ. ೧೨೮ ಪುಟಗಳು. ಬೆಲೆ ೨-೦-೦

೧೫೧ **ಮಗು** (ಸಾಮಾಜಿಕ ನಾಟಕ) ಬರೆದವರು ಶ್ರೀ. ಕೆ. ಎ. ಎನ್. ರಾವ್ ಧಾರವಾಡ ಮನೋಹರ ಗ್ರಂಥಮಾಲೆಯ ೯೪ನೆಯ ಕುಸುಮ. ಕ್ರೌ. ಅ. ೧೦೬ ಪುಟಗಳು. ಬೆಲೆ ೩-೪-೦

೧೫೨ **ಸಂಜೀವಿನಿ** (ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ಶ್ರೀಕೃಷ್ಣ ಪಾಟೀಲ. ಬೆಳಗಾಂವಿಯ ಸುವರ್ಣ ಭಾರತಿ ಗ್ರಂಥಮಾಲೆಯ ೧೧ನೆಯ ಪುಸ್ತಕ. ಕ್ರೌ. ಅ. ೨೨೪ ಪುಟಗಳು. ಬೆಲೆ ೩-೪-೦

೧೫೩ **ಪ್ರಣಯ ದರ್ಶನ** (ನಾಟಕ ಸಂಕಲನ). ಲೇಖಕರು ಶ್ರೀ. ಅಮ್ಮೆಂಬಳ ಶಂಕರ ನಾರಾಯಣ. ವಿದ್ವಾನ್, ಮಂಗಳೂರು. ಪ್ರಕಾಶಕರು 'ಸಾಹಿತ್ಯಾಂಜಲಿ ಗ್ರಂಥಮಾಲಾ ಬೋಳಾರ, ಮಂಗಳೂರು ಕ್ರೌ. ಅ. ೪೪ ಪುಟಗಳು, ಬೆಲೆ ೧-೪-೦

೧೫೪ **ಪದ್ಮಪರಾಗ** (ಕಥಾಸಂಕಲನ). ಬರೆದವರು ಶ್ರೀ. ಬಿ. ಪದ್ಮನಾಭ ಸೋಮಯಾಜಿ, ಮಂಗಳೂರಿನ ಸಾಹಿತ್ಯಾಂಜಲಿ ಗ್ರಂಥಮಾಲೆಯ ಕುಸುಮ ೪. ಕ್ರೌ. ಅ. ೧೦೪ ಪುಟಗಳು. ಬೆಲೆ ೧-೪-೦

೧೫೫ **ಕರ್ನಾಟಕ ಕವಿತಾ ಕುಸುಮ ಮಂಜರಿ** (ಕವನ ಸಂಕಲನ). ಬರೆದವರು ಶ್ರೀ. ನಾ. ವೆಂ. ಕುರುಡಿ, ಶ್ರೀ ಸರಸ್ವತಿ ಮಂದಿರವು, ಧಾರವಾಡ. ಕ್ರೌ. ಅ. ೧೨೪ ಪುಟಗಳು. ಬೆಲೆ ೧-೦-೦.

ನಿಮಗೆ ರೇಡಿಯೋದಲ್ಲಿ ಹಾಡಬೇಕಾಗಿದೆಯೆ?

ಹಾಡಲಿಕ್ಕೆ ಯೋಗ್ಯವಾದ ಸುಂದರ ಭಾವಗೀತಗಳು ಬೇಕಿದ್ದರೆ 'ಆನಂದಕಂದ'ರ ಕವನ ಸಂಗ್ರಹ

ವಿರಹಿಣಿ ತರಿಸಿಕೊಳ್ಳಿರಿ! **ಒಡನಾಡಿ**

ಮಧುರವಾದ ಭಾವಗಳ ಮಂಜುಲನಾದ ಭಾಷೆಯ ಸಂಗೀತಯೋಗ್ಯವಾದ ಕವನ ಸಂಗ್ರಹಗಳವು.

ಬೆಲೆ: ಒಂದೊಂದಕ್ಕೆ ಒಂದೊಂದು ರೂಪಾಯಿ.

ಬೇಕಾದವರು 'ಜಯಂತಿ' ಕಾರ್ಯಾಲಯ, ಧಾರವಾಡ ಈ ವಿಳಾಸಕ್ಕೆ ಬರೆಯಿರಿ.

ಹೊಸ ಕನ್ನಡ ರೆಕಾರ್ಡ್ಸ್

ಕರ್ನಾಟಕದ ಕವಿದ್ವಯರ ಕಾವ್ಯಪ್ರತಿಭೆ

ಪ್ರೊ. ದ. ರಾ. ಬೇಂದ್ರೆ ಹಾಗು **ಶ್ರೀ. ನಾರಾಯಣರಾವ ಹುಯಿಲಗೋಳ**

ಈ ಪ್ರತಿಭಾಶಾಲಿಗಳಾದ ಕವಿಗಳಿರ್ವರ ಕಾವ್ಯಸ್ಫೂರ್ತಿಯಿಂದ ಹೊರಹೊಮ್ಮಿದ ಎರಡು ಕವನಗಳ ಕೆಳಗಿನ ಧ್ವನಿಮುದ್ರಿಕೆಯು ನಿಮಗೆ ಖಂಡಿತವಾಗಿ ಮೆಚ್ಚಿಕೆಯಾಗುವುದು.

ಭೀಮಸೇನ ಜೋಶಿ, ಕೃಷ್ಣಾ ಹಾನಗಲ್ ಮತ್ತು ಪಾರ್ಟಿ

N. 25942.

'ಒಂದೇ ಬಂದೇ ಬಂದೇ ಕರ್ನಾಟಕ ಬಂದೆ'

'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು'

ಹಿಜ್ ಮಾಸ್ಟರ್ಸ್ ವಾಯಿಸ್

ಕಲಕತ್ತಾ. ಮುಂಬಯಿ. ಮದ್ರಾಸ. ದಿಲ್ಲಿ.



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar— 2250-50.



ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರ
ನೃತ್ಯದ ಒಂದು ಭಂಗಿ

ಜಯಂತಿ

JAYANTI

ಏಪ್ರಿಲ್ ೧೯೫೦

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಡಿ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು— ಡಿ. ಎಲ್. ಜಿ. ಬೇಂದ್ರೆ

ಪ್ರಕಾಶಕರು— ಡಿ ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ. ೪೦	ಒಂದು ಸಲ
½	,,	,, ೨೫	,,
¼	,,	,, ೧೫	,,
⅛	,,	,, ೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—— o ——

Rates for Advertising in Jayanti

Full	Page	Rs. 40	Single	Ins.
Half	,,	,, 25	,,	
Quarter	,,	,, 15	,,	
1/8	,,	,, 8	,,	

Concession rates for long term Contracts.
For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ೧೫ನೆಯ ಏಪ್ರಿಲ್ ೧೯೫೦ | ಸಂಚಿಕೆ ೧೦

ಈ ಸಂಚಿಕೆಯಲ್ಲಿ:

ಕನ್ನಡ ಹಾಡು (ಕವನ)
'ಅಂಬಿಕಾತನಯ ದತ್ತ' ೪೯೭

ಕ್ಷಾಶ್ರವೃತ್ತಿಯ ಅವಶ್ಯಕತೆ (ಸಂಪಾದಕೀಯ)
ಸಂಪಾದಕರು ೪೯೮

ಸಂಗೀತ ಸೇವೀದ್ಯ
'ನಕಲೀ ನಾರಾಯಣಾಚಾರ್ರು' ೫೦೦

ಮಿಲನ-ವಿರಹ (ಸಣ್ಣಕತೆ)
ಶ್ರೀ. ಗಜಾನನ ಶರ್ಮ ಕಲ್ಲಾಳ, ಕಾಶಿ ೫೦೧

ಕಲಾವಿದ ಹಾಗೂ ವಿಮರ್ಶಕ
ಶ್ರೀ. ಎಸ್. ಎಸ್. ಬಸವಪಟ್ಟದ ಎಂ. ಎ. ಗುಳೇದಗುಡ್ಡ ೫೦೬

ದೇವರ ಪ್ರೀತಿ ಯಾರ ಮೇಲೆ? (ಕವನ)
ಶ್ರೀ. ಭುಜೇಂದ್ರ ಮಹಿಷವಾಡಿಗಿ ೫೦೮

ಕವೀಶ್ವರ (ಕವನ)
ಶ್ರೀ. ಶಂಕರಭಟ್ಟ ಅಗ್ನಿಹೋತ್ರಿ, ಹೊಂಬಳ ೫೦೮

ಗಾಂಧೀಜಿ ಮರಳಿ ಬಂದಾಗ (ಒಂದು ಒಳನೋಟ)
ಶ್ರೀ. ಸುರೇಶ ಹೊಸಬೆಟ್ಟು ಬಿ ಎ, ಬೆಳಗಾಂವಿ ೫೦೯

ಅಧುನಿಕ ಕನ್ನಡ ಕವಿತೆಯಲ್ಲಿ ವಾಸ್ತವಿಕತೆ (ಒಂದುಭಾಷಣ)
ಪ್ರೊ. ದ. ರಾ. ಬೇಂದ್ರೆ ಎಂ. ಎ. ಸೂಲ್ಲಾಪುರ ೫೧೩

ಮರೆವು (ಹರಟೆ)
'ನವಗಿರಿನಂದ' ಮದ್ರಾಸ ೫೧೪

ಇಂದಿನ ಶಿಕ್ಷಣದ ಗೊತ್ತು-ಗುರಿಗಳು (ಪ್ರಬಂಧ)
ಶ್ರೀ. ವಿ. ಆರ್. ನಾಯಕ ಬಿ. ಎಸ್ಸಿ., ಬಿ. ಟಿ.
ರಾಯಚೂರು ೫೨೦

ಕಟ್ಟಿಯ್ಯನ ಯಾತ್ರೆ (ಒಂದು ಕತೆ)
ಶ್ರೀ. ಯರ್ಮುಂಜ ರಾಮಚಂದ್ರ, ಪುತ್ತೂರ ೫೨೩

ಧಾರವಾಡದಿಂದ ಉತ್ತರಕ್ಕೆ (ಪ್ರವಾಸಕಾಲದ ದಿನಚರಿ)
ಶ್ರೀ. ಬಿ. ಎಸ್. ದೊಡ್ಡಜ್ಜಪ್ಪನವರ ಬಿ. ಎಸ್ಸಿ (ಎಗ್)
ಧಾರವಾಡ ೫೨೫

ಆರಾಧನೆ (ಕವನ)
ಶ್ರೀ. ಜಿ. ವರದರಾಜರಾವ್ ಎಂ. ಎ. ಚಿತ್ರದುರ್ಗ ೫೩೧

ನೋಬೆಲ್ ಸಾರಿತೋಷಕ (ಪರಿಚಯ)
ಶ್ರೀ. ಬಾ. ಕೃ. ಗಲಗಲಿ, ಕಿಲ್ಲೋಸ್ಕರ ವಾಡಿ ೫೩೨

ವಿಮರ್ಶೆಯ ಶಿಕ್ಷಣರಂಗ
ಶ್ರೀಮತಿ ಪದ್ಮಾ, ಬೆಂಗಳೂರು ೫೩೬

ನವಯುಗದ ಮಹಿಳೆಯರು (ಮಹಿಳೆಯರಿಗಾಗಿ)
ಶ್ರೀಮತಿ ಇಂದಿರಾದೇವಿ ಗಲಗಲಿ, ಕಿಲ್ಲೋಸ್ಕರ ವಾಡಿ ೫೩೭

ಪುಸ್ತಕವಿಮರ್ಶೆ (ಭಾವಜೀವಿ)
ಶ್ರೀ. ಬಿ. ಪಿ. ಎಸ್. ರಾವ್ ೫೩೯

ಸಾದರಸ್ವೀಕಾರ ೫೪೦

ವರ್ಷ ೧೨

ಸಂಚಿಕೆ ೧೧

ಎಪ್ರಿಲ್

೧೯೫೮



ಕನ್ನಡ ಹಾಡು

(ಅಂಬಿಕಾತನಯದತ್ತ)

ಒಂದೆಂಬುದು ಜಗದ ತಂದೆ
ಎರಡೆಂಬುದು ತಾಯಿಗರುಳು
ಮೂರೋ ಅದು ಮಗುಮುಗುಳು—
ಮುಗಿಯದ ಆಟ ;
ಜೀವ ಜೀವ ನಾನು ನೀನು
ಅವನಾ ಕೈ ಅವಳಾತನು
ಅದು ಇದೆ ಅವರಿದೆಜೀನು
ಒಲವಿನ ನೋಟ !
ಶಿವನಪ್ಪನೆ ಸರ್ವಾತ್ಮಾ
ಶಕ್ತಿದಾಯಿ ನಮ್ಮಮ್ಮಾ
ನಾವೂ ನೀವೂ ಅಣ್ಣಾ ತಮ್ಮಾ
ಅಕ್ಕಾ ತಂಗೀ
ಈ ಬಳಗಕೆ ಎಲ್ಲರೊಳಗು
ಇದು ಮೇಲಿದೆ ಜಗದ ತೆಳಗು
ಯಾರಿರುವರು ಇದರ ಹೊರಗು
ಒಂದೇ ಆಂಗೀ
ಜಗವೆಲ್ಲವೂ ? ಇಹುದಿಹುದೂ,
ಅಷ್ಟನಲ್ಲೋ ? ಅಹುದಹುದೂ !
ಉಂಟೋ ಉಂಟು ಒಳತೋ ಒಳಿತು
ಪರಮೇಶ್ವರ
ಶಾಶ್ವತತೆಯು ನವೋನವವು
ಯಮನವರಿಗು ಭವ್ಯಭವವು
ಸನಾತನವು ಚಿರಂತನವು
ಇದು ನಶ್ವರವೇ !

ಕಾಲನ ನಡೆ ಗಾಳಿಯ ನುಡಿ
ಒಳಗೆ ಕಂಡು ಹೊರಗೆ ನೋಡಿ
ನಾಂದು ಕರಗಿ ನೆಟ್ಟು ಕೂಡಿ
ತಾಂಡವಲಾಸ್ಯ
ಕರ್ನಾಟದ ಕರುಳು ನರವು
ಮಿಡಿಯುವುದಿದೊ ಶ್ರುತಿಯ ಸ್ವರವು
ಇದೇ ಶ್ರೇಯ ಇದೇ ವರವು
ಎಳನಗೆ ಹಾಸ್ಯ
ಎರಡು ಬಿಂದು ಒಂದೇ ಗೆರೆ
ಸೂರ್ಯಚ್ಚಂದ್ರ ಬೆಳಕಿನ ತೆರೆ
ಹಗಲಿರುಳೂ ಒಂದೇ ಧರೆ
ಯೋಗದ ಭೋಗ
ಈ ಮಾತೇ ದೇನಯಾನ
ಇದೇ ಘೋಷ ಜಾಯಮಾನ
ಕನ್ನಡನಲಿ ನವತಾನ
ನಾಟಯರಾಗ
ಭೂತದ ಭೂತವನು ಬಿಡಿಸು,
ವರ್ತಮಾನ ಮುನ್ನಡಿಸು.
ಭವಿತವ್ಯದ ಕಹಳೆ ಹಿಡಿಸು
ತುಂಬಲಿ ಬಾಳು ;
ಈ ಕುಂತಳ ತಳದಲ್ಲಿ
ಬನವಸೆ-ಕೊಂಕಣದಲ್ಲಿ
ಮೈಸೂರಲಿ ಕೊಡಗಿನಲ್ಲಿ
ಬಿತ್ತಲಿ ಕಾಳು

ಶೃಂಗೇರಿಯ ಕೂಗಿಗದೋ
ಶ್ರೀಶೈಲವೊ ತಿರುಪತಿಯೋ
ನೀಲಗಿರಿಯು ಕೊಡುತಿದೆ ಓ
ಕಡಲಿನ ಜತೆಗೋ
ಚಿಗುರಿತು ಗೊಮ್ಮಟವಿರಕ್ತಿ
ಹೂತಿತು ಕಲ್ಯಾಣಶಕ್ತಿ
ಕಾತಿತು ವಿಠ್ಠಲನ ಭಕ್ತಿ
ಕನ್ನಡ ಕತೆಗೋ !
ಆನಂದದ ಹೊಸಸುಗ್ಗಿ
ಒಳಗಿನೊಲುಮೆ ಹೊರಗು ನುಗ್ಗಿ
ಸರ್ವಜನವು ಬದುಕಿಗೊಗ್ಗಿ
ಬರುತಿದೆ ನೋಡೋ !
ಆಗ ಈಗ ಅಪಸ್ವರ
ಬಾನ್ಗುರಿಯಲಿ ಬರುವತರ
ಬಂದರು ಈ ಚರಾಚರ
ಒಂದೇ ಹಾಡೋ
ಒಂದೆಂಬುದು ಜಗದ ತಂದೆ
ಎರಡೆಂಬುದು ತಾಯಿಗರುಳು
ಮೂರೋ ಅದು ಮಗುಮುಗುಳು—
ಮುಗಿಯದ ಆಟ;
ಜೀವ ಜೀವ ನಾನು ನೀನು
ಅವನಾ ಕೈ ಅವಳಾತನು
ಅದು ಇದೆ ಅವರಿದೆ ಜೇನು
ಒಲವಿನ ನೋಟ !



ಕ್ಷಾತ್ರಧರ್ಮದ ಅವಶ್ಯಕತೆ

ಭಾರತವು ಯುದ್ಧವಿಲ್ಲದೆ ಸ್ವಾತಂತ್ರ್ಯವನ್ನು ಸಂಪಾದಿಸಿತೆಂದು ಜಂಭದಿಂದ ಹೇಳಿಕೊಳ್ಳುವ ಮುಂದಾಳುಗಳು ನಮ್ಮಲ್ಲಿ ಕಡಿಮೆಯಿಲ್ಲ. ವ್ಯಾಸಪೀಠದ ಮೇಲೆ ನಿಂತು ಮಾತನಾಡುವ ಯಾವ ಹಿರಿಯ-ಕಿರಿಯ-ಚಿಕ್ಕ-ಪುಟ್ಟ ಧುರೀಣರೂ ಈ ಮಾತನ್ನು ಗಾಳಿಯಲ್ಲಿ ತೂಗುತ್ತಿರುತ್ತಾರೆ. ಯಾವ ಬಿಸಿಯನ್ನೂ ಕಾಣದ ಭಾರತದ ಜನಸಾಮಾನ್ಯರು, ಈ ಹುಚ್ಚು ಪನಾಡದ ಮಾತುಗಳನ್ನು ಕೇಳಿ ಹೆಮ್ಮೆ ಪಟ್ಟುಕೊಳ್ಳುತ್ತಿರಬಹುದಾದರೂ, ಪೂರ್ವ-ಪಶ್ಚಿಮ ಪಾಕಿಸ್ತಾನದಿಂದ ಭಾರತಕ್ಕೆ ನಿರ್ವಾಸಿತರಾಗಿ ಬಂದಿರುವ, ಬರುತ್ತಿರುವ ಹಿಂದುಗಳು, ಈ ಮಾತುಗಳನ್ನು ಕೇಳಿ ಸಹಿಸದ ಸಂಕಟವನ್ನು ಪಡುತ್ತಿರಬಹುದು. ಭಾರತದ ಸ್ವಾತಂತ್ರ್ಯಸಾಧನೆಗಾಗಿ ಅವರು ಪಡಬೇಕಾಗಿ ಬಂದ ಕಷ್ಟ-ನಷ್ಟಗಳು, ಮಾಡಿರುವ ತ್ಯಾಗಗಳು ಯುದ್ಧದ ಪರಿಣಾಮವನ್ನೂ ನಿರಾಸುವಂತಹವಾಗಿವೆಯೆಂಬ ಮಾತನ್ನು ನೆನೆದುಕೊಂಡರೆ, ಯಾವ ಮುಂದಾಳು-ಹಿಂದಾಳುಗಳೂ, ಯುದ್ಧಮಾಡದೆ ದೊರೆಕಿಸಿದ ಭಾರತದ ಸ್ವಾತಂತ್ರ್ಯಕಾಗಿ ಹೆಮ್ಮೆ ಕೊಚ್ಚಿಕೊಳ್ಳುವ ಕಾರಣವಿಲ್ಲ.

ಮುನ್ನೋಟವುಳ್ಳ ಬ್ರಿಟಿಷರು, ಜಾಗತಿಕ ರಾಜಕೀಯ ಪರಿಸ್ಥಿತಿಯನ್ನರಿತು, ಭಾರತವನ್ನು ನುಂಗಲಾರದ ತುತ್ತು—ಎಂಬುದನ್ನು ಮನವರಿಕೆ ಮಾಡಿಕೊಂಡು, ಸಂಭಾವಿತರಾಗಿ—ಯುದ್ಧದ ಮಾತುಗಳನ್ನಾಡದೆ—ಸ್ವದೇಶಕ್ಕೆ ಮರಳಿದರೇ ಹೊರತು, ಯುದ್ಧಹೂಡಿ ಇನ್ನೂ ಕೆಲವು ದಿನ ಭಾರತವನ್ನು ತಮ್ಮ ಕೈಯಲ್ಲಿ ಇರಿಸಿಕೊಳ್ಳಬೇಕೆಂದು ಅವರು ಇಚ್ಛಿಸಿದ್ದರೆ, ಅದನ್ನೂ ಅವರು ಮಾಡಬಹುದಾಗಿದ್ದಿತು. ಆದರೆ ತಾವು ಹಿತಮಿತ್ರರಾಗಿಯೇ ಪಾರಾಗಿ, ತಾವು ಮಾಡಬೇಕಾಗಿದ್ದ ಯುದ್ಧದ ಹೊಣೆಯನ್ನು ಬೇರೆಯವರ ಕಡೆಗೆ ಒಪ್ಪಿಸಿಹೋದಂತೆ ಮಾಡಿರುವರು. ನಿಜವಾದ ಯುದ್ಧ ನಡೆದರೆ, ಒಂದು ಕ್ರಮವನ್ನು ಹಿಡಿದು ದೇಶ ಕಷ್ಟ-ನಷ್ಟಗಳನ್ನು ನಿರ್ವಹಿಸಬೇಕಾಗುವುದು. ಆದರೆ ಇಂದು ಭಾರತದಲ್ಲಿ ನಡೆದಿರುವ ಯುದ್ಧವಲ್ಲದ ಯುದ್ಧವು, ದೇಶದ ಜನತೆಯ ಮೇಲೆ ನಿರ್ವಹಿಸಲಿಕ್ಕೆ ಅಶಕ್ಯವಾಗುವಂತಹ ಕಷ್ಟ-ನಷ್ಟಗಳನ್ನು ತಂದು ತಂದು ಒಡ್ಡುತ್ತಿರುವುದು. ಸ್ವಾತಂತ್ರ್ಯದೊರೆಕಿಸಿದೆವೆಂಬ ಹೆಮ್ಮೆಕೊಚ್ಚುತ್ತ ಯಾರು ಯಾರೋ ಅತಳಿತದ ಗದ್ದುಗೆಗಳನ್ನೇರಿ ಆಳುತ್ತಿರುವರು; ಅವರಿಗಾಗಿ ಮೂಕ ಕುರಿಗಳಂತಿರುವ ಜನಸಾಮಾನ್ಯರ ಮಾರಣಯಜ್ಞ ನಿತ್ಯವೂ ನಡೆದಿರುವುದು.

ಭಾರತ ಸ್ವಾತಂತ್ರ್ಯದ ಪ್ರಾರಂಭೋತ್ಸವದೊಂದಿಗೆ ಪಶ್ಚಿಮ ಪಾಕಿಸ್ತಾನದಲ್ಲಿಯ ಭಾರತೀಯರ ಬಲಿದಾನವಾಯಿತು. ಇದೀಗ ಪೂರ್ವಪಾಕಿಸ್ತಾನದಲ್ಲಿಯ ಭಾರತೀಯರ ಜೀವನಹೋಮ ನಡೆದಿದೆ. ಅವರ ಬಲಿದಾನದ ಫಲವನ್ನು ಭಾರತೀಯರಾದ ನಾವೆಲ್ಲ ಸುಖ-ಸಮಾಧಾನಗಳಿಂದ ಅನುಭವಿಸುತ್ತಲಿದ್ದೇವೆ. ಒಳಹೊಕ್ಕು ನೋಡಿದರೆ ನಮ್ಮ ಈ ಸ್ವಾತಂತ್ರ್ಯಸುಖ, ಎಷ್ಟೊಂದು ನಿಷ್ಪಾಪಿ ಜನರ ನಿಟ್ಟುಸುರುಗಳಿಂದ ತುಂಬಿದೆಯೆಂಬುದು ಗೊತ್ತಾಗುವುದು. ಆ ನಿಷ್ಪಾಪಿ ಜನರಿಗೆ ಭಾರತದ ಸ್ವಾತಂತ್ರ್ಯಕ್ಕಾಗಿ ಯುದ್ಧಮಾಡಿ ಕ್ಷಾತ್ರಧರ್ಮವನ್ನು ಪಾಲಿಸಿದೆವೆಂಬ ಶೂರರ ಸಮಾಧಾನವೂ ಇಲ್ಲ; ಯುದ್ಧವಿಲ್ಲದೆ ಸ್ವಾತಂತ್ರ್ಯಗಳಿಸಿದ ಶಾಂತಿ-ಸುಖಗಳೂ ಇಲ್ಲ.

ಸ್ವಾತಂತ್ರ್ಯಪೂರ್ವದಲ್ಲಿ ಸುಖಕುಟುಂಬಿಗಳಾಗಿ ಶಾಂತಜೀವನವನ್ನು ನಡೆಯಿಸುತ್ತಿದ್ದ ಕೋಟ್ಯವಧಿ ಭಾರತೀಯ ಮನೆತನಗಳಿಂದು ಗತಿಗೇಡಿಗಳಾಗಿ, ತಿನ್ನಲು ಹಿಡಿ ಅನ್ನವನ್ನು ಕಾಣದೆ, ಸ್ವದೇಶದಲ್ಲಿಯೇ ನಿರ್ವಾಸಿತರೆಂಬ ಹೆಸರಿಗೆ ಗುರಿಯಾಗಿ, ಬಾಯಿ ಬಾಯಿ ಬಿಡುತ್ತಲಿದ್ದಾರೆ. ಪ್ರಿಯ-ಪ್ರಿಯೆಯರನ್ನು ಕಳೆದುಕೊಂಡ ವಿರಹಿಗಳ ಸಂಖ್ಯೆಯೆಷ್ಟೊ! ತಾಯಿ-ತಂದೆಗಳನ್ನು ಕಳೆದುಕೊಂಡಿದ್ದ ಪರದೇಶಿ ಮಕ್ಕಳ ಸಂಖ್ಯೆಯೆಷ್ಟೊ! ಕರುಳಿನ ಕರುಳಾಗಿರುವ ಮಕ್ಕಳನ್ನು ಕಳೆದುಕೊಂಡು ಮರುಗುವ ತಾಯಿ-ತಂದೆಗಳ ಸಂಖ್ಯೆಯೆಷ್ಟೋ! ಭಾರತೀಯ ಮಹಿಳೆಯರ ಉಸಿರಿನ ಉಸಿರಾಗಿರುವ ಸತೀತ್ವವನ್ನು ಕಳೆದುಕೊಂಡು ನಿರ್ಜೀವ-ನಿರ್ಬಲರಾಗಿರುವ ಪತಿವ್ರತೆಯರ ಸಂಖ್ಯೆಯೆಷ್ಟೊ! ವಂಶಪರಂಪರೆಯಿಂದ ನಡೆದುಕೊಂಡು ಬಂದ ಪ್ರೀತಿ-ವಿಶ್ವಾಸಗಳ ನೆಲೆಯಾದ ಮನೆ-ಮಾರುಗಳನ್ನು ಕಳೆದುಕೊಂಡು ಮರುಗುವವರ ಸಂಖ್ಯೆಯೆಷ್ಟೋ! ಬೆವರು ಹರಿಸಿ ದುಡಿದು ಗಳಿಸಿದ ಬಂಡವಾಳ ಕಳೆದುಕ್ಕೊಂಡು ಕುದಿಯುವವರ ಸಂಖ್ಯೆಯೆಷ್ಟೋ! ಭಾರತದ ಸ್ವಾತಂತ್ರ್ಯವನ್ನು ನಂಬಿದ ಜನತೆಗೂ ಸುಖವಿಲ್ಲ. ಸ್ವತಂತ್ರಭಾರತದ ಅತಳಿತವನ್ನು ಶಾಂತರೀತಿಯಿಂದ ನಡೆಯಿಸಬೇಕೆನ್ನುತ್ತಿರುವ ಸರಕಾರಕ್ಕೂ ಸುಖವಿಲ್ಲ.

ಇದೆಲ್ಲ ಹೀಗೇಕಾಯಿತೆಂಬುದರ ಎಚ್ಚರು ನಮ್ಮಲ್ಲಿ ಬಹುಜನರಿಗೆ ಇದುವರೆಗೂ ಉಂಟಾಗಿಲ್ಲ. ರಾಜಕಾರಣವು ಕ್ಷಾತ್ರಬಲದಿಂದಲೇ ಜಯಶಾಲಿಯಾಗುವುದೆಂಬುದನ್ನು ನಮ್ಮ ಸಂಸ್ಕೃತಿ—ಪೂರ್ವೇತಿಹಾಸಗಳು ಸಾರಿ ಸಾರಿ ಹೇಳುತ್ತಲಿದ್ದರೂ, ನಮ್ಮ ಮುಂದಾಳುಗಳು ತಾವೂ ಪ್ರಾಮಾಣಿಕವಾಗಿ ನಂಬಿರದ ಯಾವುದೋ ಅಭಾಸಾತ್ಮಕ ಧರ್ಮಕಾರಣವನ್ನು ರಾಜಕಾರಣವೆಂದು ಹೇಳಿ, ಜನಸಾಮಾನ್ಯ

ನವೀನ ಕವನಸಂಗ್ರಹ

ಗಂಗಾವತರಣ

(ಅಂಬಿಕಾತನಯ ದತ್ತ)

ಪ್ರೊ. ದ. ರಾ. ಬೇಂದ್ರೆಯವರ ಹೊಸ ಕವನಗಳ ಸಂಗ್ರಹ ಬರುವ ಆಗಸ್ಟದೊಳಗಾಗಿ ಪ್ರಕಟವಾಗುವದು.

ಪುಟ–೧೨೮; ಬೆಲೆ ೨–೦–೦.

೧ ರೂ. ಮುಂಗಡ ಕಳಿಸಿ ಹೆಸರು ಹಚ್ಚಿದವರಿಗೆ ಈ ಪುಸ್ತಕವು ರೂ. ೧–೧೨–೦ ಬೆಲೆಗೆ ದೊರೆಯುವದಲ್ಲದೆ, ಮುಂದೆ ಇವರಿಂದಲೇ ಪ್ರಕಟವಾಗುವ ಎಲ್ಲ ಪುಸ್ತಕಗಳು ರಿಯಾಯಿತಿ ದರದಿಂದ ದೊರೆಯುವವು.

ಬೇಗನೆ ಪ್ರಕಟವಾಗಲಿರುವ ಪುಸ್ತಕಗಳು :
ಹೃದಯ ಸಮುದ್ರ, (ಕವನ ಸಂಗ್ರಹ,) **ಅಷ್ಟಾಂಗ ಸಂಸ್ಕೃತಿ** (ಪ್ರಬಂಧ) **ವಿಶ್ವರೂಪಕ** (ನಾಟ್ಯ ಪ್ರಬಂಧ) ಪ್ರಕಟನೆಯ ತಾರೀಖನ್ನು ಜಯಂತಿಯಲ್ಲಿ ಆಗಾಗ್ಗೆ ತಿಳಿಸಲಾಗುವದು.

ದೊರೆಯುವ ಸ್ಥಳ—: **ಪಾಂಡುರಂಗ ಬೇಂದ್ರೆ.**
C/o. ಪ್ರೊ. ದ. ರಾ. ಬೇಂದ್ರೆ.
ಬ್ಲಾಕ್ ೧೩, ನೀಲಾನಗರ, **ಸೊಲ್ಲಾಪುರ.**

ರನ್ನು ಹಳ್ಳಕ್ಕೆ ತಳ್ಳುತ್ತಲಿದ್ದಾರೆ. ನಮ್ಮ ವೈರಿಗಳಲ್ಲದಿದ್ದರೂ ವೈರಿಗಳಾಗಿಯೇ ವರ್ತಿಸುತ್ತಿರುವ ಪಾಕಿಸ್ತಾನ್ ರಾಜಕಾರಣಿಗಳು, ಕ್ಷಾತ್ರಧರ್ಮದ ತಿರುಳನ್ನು ಅರಿತುಕೊಂಡು ಜಿಗಿಸುವೃತ್ತಿಯಿಂದ ತಮ್ಮ ಆಡಳಿತವನ್ನು ನಡೆಯಿಸಿದ್ದಾರೆ. ಶಾಂತಿಪ್ರಿಯರಾದ ಭಾರತದ ರಾಜಕಾರಣಿಗಳು, ಆಡಳಿತಕ್ಕೆ ಅತ್ಯವಶ್ಯವಾಗಿರುವ ಕ್ಷಾತ್ರಧರ್ಮವನ್ನು ಮರೆತು, ಗುರುವರ್ಗದವರಾಗಿ ನಿಂತು, ಮಾನವ ಧರ್ಮ ಬೋಧಿಸುತ್ತಲಿದ್ದಾರೆ. ಮರವನ್ನು ಕಡಿದು ಹಲಗೆ ಮಾಡಿ ಮನೆ–ಮಂದಿರಗಳನ್ನು ಕಟ್ಟಿಸಬೇಕಾದರೆ, ಅದಕ್ಕೆ ಮಂತ್ರಗಳನ್ನು ಹೇಳುವ ಪುರೋಹಿತರ ಅಗತ್ಯವಿಲ್ಲ, ಕೊಡಲಿ-ಬಾಚಿ–ಉಳಿಗಳನ್ನು ಹಿಡಿದು ಕಾರ್ಯಮಾಡುವ ಬಡಿಗ–ಬಂಟರ ಅಗತ್ಯವಿರುತ್ತದೆ.

ದೇಶ-ಕಾಲಗಳನ್ನು ಅರಿತುಕೊಳ್ಳದೆ ಹೇಳುವ ಮಾನವ ಧರ್ಮವೂ ರಾಜನೀತಿಗಳೂ, ಆ ದೇಶ-ಕಾಲದ ಜನತೆಯನ್ನು ಕಷ್ಟ-ನಷ್ಟಕ್ಕೆ ಗುರಿಮಾಡದೆ ಬಿಡವು. ನಮ್ಮ ಸರಕಾರ, ನಮ್ಮ ಜನತೆ ಧರ್ಮದಿಂದಲೇ ವರ್ತಿಸಲಿ; ಯಾರೂ ಬೇಡವೆನ್ನುವುದಿಲ್ಲ. ಧರ್ಮ-ನ್ಯಾಯಗಳ ಜಗಳವನ್ನು ಧರ್ಮ–ನ್ಯಾಯಗಳಿಂದಲೆ ಬಗೆಹರಿಸಬೇಕು. ಬಲದ ರಾಜಕಾರಣದ ಜಗಳಗಳನ್ನು ಬಲದಿಂದಲೇ ಬಗೆಹರಿಸಬೇಕು. ಕುಟಿಲರಾಜಕಾರಣವನ್ನು ಕುಟಿಲರಾಜಕಾರಣದಿಂದಲೆ ಎದುರಿಸಬೇಕು. ಅಧರ್ಮವನ್ನು ಧರ್ಮದಿಂದಲೂ, ಬಲವನ್ನು ಶಾಂತಿ-ಸಮಾಧಾನಗಳಿಂದಲೂ, ಕುಟಿಲತನವನ್ನು ಸರಳತನದಿಂದಲೂ ಎದುರಿಸುವುದು ಅಧರ್ಮವು. ತತ್ತ್ವದ ಲೋಕದಲ್ಲಿ ಈ ಮಾತು ಮಧುರವಾಗಿ ಕಂಡೀತು ಇಷ್ಟೇ; ವ್ಯವಹಾರದಲ್ಲಿ ಅಧರ್ಮವಾಗಿರುವ ಈ ಆಚರಣೆ, ದೇಶದ ಕಷ್ಟ-ನಷ್ಟಗಳಿಗೆ ಕಾರಣವಾಗುವುದೆಂಬುದು ನಮ್ಮ ಅನುದಿನದ ಅನುಭವದ ಸಂಗತಿಯಾಗಿದೆ. 'ಅಂತೂ ಇಂತೂ ಕುಂತೀ ಮಕ್ಕಳಿಗೆ ವನವಾಸ ತಪ್ಪಲಿಲ್ಲ!' ಎಂಬ ಗಾದೆಯ ಮಾತನ್ನು ಭಾರತದ ಇಂದಿನ ರಾಜಕಾರಣಿಗಳೂ ಸತ್ಯವಾಡಿ ತೋರಿಸುವ ಕಾರ್ಯಮಾಡಬಾರದೆಂದು ನಮ್ಮ ಅಪೇಕ್ಷೆ!

ಭಾರತಕೆ ಬೇಕಿಂದು ಬಲವು ಚಲವು!
ಎಂದರೆಯೆ ಬದುಕೀತು ನಮ್ಮ ಕುಲವು!

—ಸಂಪಾದಕರು

ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ

ಗೋವಾ ಮಲಮ್

ಸ್ಪ್ಯಾರ್ ಕಂಪನಿ,
ಬೆಳಗಾಂವಿ.

ನಗೀಗೆ ನೇವಿದ್ಯ

(೧)

"ಯಾಕೆ ಶೇಡಜಿ, ಸ್ಟೇಶನ್ನಿಗೆ ಬಂದು ೨ ತಾಸು ಆಯಿತು. ಇನ್ನೂ ಟಕೀಟು ತೆಗೀಲಿಲ್ಲ?"

"ಲಗೂ ಟಕೀಟು ತೆಗೆದು, ಕೈಯಾಗಿನ ಬಂಡವಾಳ ಸುಮ್ಮನೆ ಯಾಕೆ ಅದರಲ್ಲಿ ತೊಡಕಿಸಲಿ!"

(೨)

ಒಬ್ಬ ಲೇಖಕರು ಸಂಪಾದಕರ ಕಡೆಗೆ ಒಂದು ಕಥೆಯನ್ನು ತಂದುಕೊಡುತ್ತ ಹೇಳಿದರು: 'ಹೋದವರ್ಷ ಇದೇ ಕಥೆಯನ್ನೇ ನೀವು ಪ್ರಕಟಿಸದೆ ತಿರುಗಿ ಕಳಿಸಿದ್ದಿರಿ!'

"ಹಾಗಿದ್ದರೆ ಈಗೇಕೆ ತಂದಿರಿ?"

"ನಿಮ್ಮ ತಿಳಿವಳಿಕೆಯಲ್ಲಿ ಏನಾದರೂ ಹೆಚ್ಚುಕಡಿಮೆ ಆಗಿದೆಯೇನೋ ನೋಡಬೇಕೂ ಅಂತ!"

(೩)

ತನ್ನ ಕಥೆಯನ್ನು ತಿರುಗಿ ಕಳುಹಿಸಿದ್ದಕ್ಕಾಗಿ ಸಂತಾಪಗೊಂಡ ಒಬ್ಬ ಬರೆಹಗಾರ್ತಿ, ಸಂಪಾದಕರಿಗೆ ಸಿಟ್ಟಿನ ಪತ್ರ ಬರೆದಳು:

'ಸಂಪಾದಕರೇ, ನೀವು ನನ್ನ ಕಥೆಯನ್ನು ಓದದೆ ಹಾಗೇ ಕಳಿಸಿದ್ದೀರಿ— ಎಂಬುದನ್ನು ನಿಶ್ಚಯವಾಗಿ ಹೇಳಬಲ್ಲೆ. ಯಾಕೆಂದರೆ, ನಾನು ನಿಮ್ಮನ್ನು ಪರೀಕ್ಷಿಸಬೇಕೆಂದೇ ಬೇಕಾಗಿ ೧೧, ೧೨ ಈ ಎರಡು ಪುಟಗಳನ್ನು ಒಂದಕ್ಕೊಂದು ಅಂಟಿಸಿ ಕಳಿಸಿದ್ದೆ. ಅವು ಹಾಗೇ ಇವೆ. ಇದರ ಮೇಲಿಂದ ಬಂದ ಕಥೆಗಳನ್ನು ಓದದೆ ತಿರುಗಿಬಿಡುವ ನಿಮ್ಮ ಹೊಟ್ಟೆತನವು ಹೀನಾಗಿ ವ್ಯಕ್ತವಾಗುತ್ತದೆ.'

ಸಂಪಾದಕರು ಉತ್ತರವೆಂದು ಒಂದೇ ವಾಕ್ಯವನ್ನು ಬರೆದರು.— 'ಮಾವಿನ ಹಣ್ಣು ಕೊಳೆತಿದೆ ಎಂಬುದು ತಿಳಿಯಲು, ಇಡಿಯದನ್ನೇ ತಿನ್ನುವ ಕಾರಣವಿಲ್ಲ!'

(೪)

"ಎಲಾ ಇವನ! ಎಷ್ಟು ವರ್ಷಗಳ ಮೇಲೆ ಭೆಟ್ಟಿ ಆಯ್ತು ನಿನ್ನದು! ಎಷ್ಟು ಬದಲಾವಣೆ ಆಗಿದೆಯೋ ನಿನ್ನಲ್ಲಿ! ಮುಖಚರ್ಯೆಯಲ್ಲಿ ಬದಲು, ವೇಷಾಭಿನಲ್ಲಿ ಬದಲು, ಕಾಲಿನಿಂದ ತಲೆಯವರೆಗೆ ಎಲ್ಲಾ ಬದಲು! ಇಷ್ಟೊಂದು ಬದಲಾವಣೆ ಹ್ಯಾಂಗಾಯಿತೋ, ದೇಶಪಾಂಡೆ?"

ಶರೀರದಲ್ಲಿಯ
ಅಸಹ್ಯ ಉಷ್ಣತೆಯನ್ನು
ಇದರಿಂದಲೇ ತೆಗೆದು
ಹಾಕಿರಿ
PEARL
Kadha
PURE HERBAL TONIC
ಕಾಲಾನುಸಾರ ಶರೀರದ ಒಳಗಿನ ಮತ್ತು ಹೊರಗಿನ ಉರುಪನ್ನು ತೆಗೆದು ಹಾಕಿ ಪ್ರಕೃತಿಯನ್ನು ತಹಮಗೆದುವದು, ಅಪಚನ ಅಜೀರ್ಣವನ್ನು ಸರಿಪಡಿಸುವದು, ಶರೀರದಿಗೆ ಮನಸ್ಸಿಗೆ ಶಕ್ತಿಯನ್ನು ಬೆಳಸುವದು ಧಾತು ಸ್ಥಾನ ಬಲ್ಲಯ ಶಾಶ್ವತೆಯನ್ನು ಕೊಡಲಾದಿಸಿ ಪುಷ್ಟಿಕರ ಮಾದುವದು
ನಿಮ್ಮ ಹತ್ತಿರದ ಕಮಿಸ್ಟನ ಕಡೆಯಿಂದ ಇಂದೇ ಒಂದು ಬಾಟಲಿಯನ್ನು ತಂದು ಸೇವಿಸಲು ಪ್ರಾರಂಭಿಸಿರಿ.
ಪರ್ಲ ಎಂಡ್ ಕಂಪನಿ
ಮುಂಬಯಿ ೩೭

"ನನ್ನ ಅಡ್ಡ ಹೆಸರು ದೇಶಪಾಂಡೆ ಅಲ್ಲ!"

"ಭಲೆ ಮಗನ, ಅಡ್ಡ ಹೆಸರು ಕೂಡ ಬದಲಃ?"

(೫)

ಲೋಕಮಾನ್ಯ ಟಿಳಕರು ಬೆಳಗಿನ ಚಹಾದ ಹೊತ್ತಿನಲ್ಲಿ ಬೇರೆ ಏನನ್ನೂ ತಿನ್ನುತ್ತಿರಲಿಲ್ಲ. ಚಹ ಕುಡಿಯುವಾಗ ತಪ್ಪದೆ ಪತ್ರಿಕೆ ಮಾತ್ರ ಓದುತ್ತಿದ್ದರು. ಅವರ ಮಗಳು ಒಂದು ದಿನ ಕೇಳಿದಳು: 'ಅಪ್ಪಾ, ಚಹಾದ ಜತೆಗೆ ತಿಂಡಿ ಏನಾದರೂ ಯಾಕೆ ತಿನ್ನುವದಿಲ್ಲ?'

"ಆದ್ಯಾಕೆ? ಬೇಕಾದಷ್ಟು ತಿನ್ನುತ್ತೇನೆ!"

"ಏನನ್ನು?"

(ವರ್ತಮಾನ ಪತ್ರವನ್ನು ತೋರಿಸಿ) "ಇದರಲ್ಲಿಯ ಬೈಗುಳನ್ನು!"

(೬)

ವಕೀಲನ ಹುಚ್ಚುಚ್ಚಾರದ ಪ್ರಶ್ನೆಗಳ ಸುರಿಮಳೆಗೆ ಸಾಕ್ಷೀದಾರ ಹೈರಾಣಗೊಂಡಿದ್ದ.

"ಆರೋಪಿಯ ವಯಸ್ಸು ಇಷ್ಟೇ ಎಂದು ನೀವು ಹೇಗೆ ಹೇಳಿದಿರಿ?" ವಕೀಲ ಕೇಳಿದ.

"ಮನುಷ್ಯನ ಇರುವಿಕೆ, ಮುಖಚರ್ಯೆ, ಮಾತು ಇದನ್ನು ನೋಡಿ ಅಂದಾಜು ಕಟ್ಟಬಹುದು." ಸಾಕ್ಷೀದಾರ ಉತ್ತರಿಸಿದ.

"ಒಳ್ಳೇದು, ನನ್ನ ವಯಸ್ಸು ಎಷ್ಟಿರಬಹುದು—ಅಂದೋದನ್ನ ಹೇಳಬಲ್ಲಿರಾ?"

ತಟ್ಟನೆ ಸಾಕ್ಷೀದಾರ ನುಡಿದ:— "ಮುಖದ ಮೇಲಿಂದ ನೋಡಿದರ ನಿಮಗ ಸುಮಾರು ೫೦ ರ ಮ್ಯಾಲ ವಯಸ್ಸಾಗಿರಬೇಕು ಅನಸ್ತದ. ನೀವು ಕೇಳುತ ಪ್ರಶ್ನೀ ಮ್ಯಾಲಿಂದ ನೋಡಿದರ, ೧೦-೧೫ ವರ್ಷ ವಯಸ್ಸು ಅಂತ ಅನಸೋಹಾಂಗದ!"

'ಮಿಲನ-ವಿರಹ'

ಶ್ರೀ. ಗಜಾನನ ಶರ್ಮ, ಕಲ್ಲಾಳ

ಕಾಶೀ ವಿದ್ಯಾಪೀಠ

★

ಪರತಂತ್ರ ರಾಷ್ಟ್ರವು ಸ್ವತಂತ್ರವಾಗಬೇಕಾದರೆ, ಜನತೆ
ಒಂದಿಲ್ಲೊಂದು ರೀತಿಯ ಆಪತ್ತಿಗೆ ಗುರಿಯಾಗಲೇ
ಬೇಕಾಗುವುದೋ ಏನೋ! ಭಾರತ ಯುದ್ಧವಿಲ್ಲದೆ
ಶಾಂತಿ ಗಳಿಸಿದರೂ, ವಿಭಜನೆಯನ್ನು ಒಪ್ಪಿ,
ಉಷೆಯಂತಹ ಅನೇಕ ಮಹಿಳೆಯರ
ಬಾಳನ್ನು ವಿಷಮವಾಗಿಸಿದೆ.

★

ರೈಲು ನಿಲ್ದಾಣ ನಿಲ್ದಾಣವು ಶರಣಾರ್ಥಿಗಳಿಂದ ಕಿಕ್ಕಿರಿದು ತುಂಬಿದೆ. ತಮ್ಮ ಸಲುವಾಗಿಯೇ ಬರಲಿರುವ ರೈಲಿನ ದಾರಿಯನ್ನು ಎಷ್ಟೋ ಘಂಟೆಗಳಿಂದ ಕಾಯುತ್ತ ಕುಳಿತಿದ್ದ ಜನರು ಬೇಸತ್ತು ನಿಶ್ಚೇಷ್ಟರಾಗಿದ್ದಾರೆ. ಅವರ ಈ ನಿಶ್ಚೇಷ್ಟತೆಯು ಬಂಧುವಿನ ಮರಣಾನಂತರ ಗೃಹಜನರಲ್ಲಿ ವ್ಯಾಪಿಸುವ ಉದಾಸೀನತೆಯಂತಿತ್ತು—ತಮ್ಮ ಕಷ್ಟ-ನಿಷ್ಠುರವೆಲ್ಲವನ್ನೂ ಮರೆತು ಶಾಂತರಾಗಿರುವರೋ ಎನ್ನುವಂತಿತ್ತು. ಇಂಥ ಸಮಯದಲ್ಲಿಯೂ ನವತರುಣಿಯೊಬ್ಬಳು ಯಾರನ್ನೋ ಅರಸುವಂತೆ ಅತ್ತಿಂದ ಇತ್ತ ಸಂಚರಿಸುತ್ತಿದ್ದಾಳೆ! ಇಪ್ಪತ್ತೆರಡಕ್ಕೆ ಮಿಕ್ಕಿರಲಾರದ ವಯಸ್ಸು ಧೃಷ್ಟಪುಷ್ಟವಾದ ಮೈಕಟ್ಟು, ಅಳತನಕ್ಕೆ ತಕ್ಕುದಾದ ನಿಲುವು, ಆಕರ್ಷಕವಾದ ಗೌರವರ್ಣ—ಅದಕ್ಕೆ ಪುಟಕೊಟ್ಟಂತಿರುವ ಶ್ಯಾಮವರ್ಣದ ಸಲ್ವಾರ್ ಹಾಗೂ ತೊಡಿಗೆ. ಇಷ್ಟರಿಂದ ಅವಳು ಪಂಜಾಬದವಳಿರಬಹುದೆಂದು ಊಹಿಸಬಹುದು. ಭಯದಿಂದ ಚಲಿತವಾಗುತ್ತಿರುವ ಕಣ್ಣುಗಳು ಅವಳ ಸ್ವಾಭಾವಿಕ ಚಂಚಲತನಕ್ಕೆ ಮೆರಗು ಕೊಟ್ಟಿದ್ದುವು.

ಅತ್ತಿತ್ತ ಅಡ್ಡಾಡಿ ಎಲ್ಲಿಯೂ ತನ್ನಪತಿಯನ್ನು ಕಾಣದೆ, ನಿಸ್ಸಹಾಯಂತೆ ಒಂದೆಡೆಗೆ ಕೂಡ್ರುವಳು. ಎಲ್ಲರೂ ದುಃಖಿಗಳೇ ಸೇರಿತರೇ ಆಗಿರುವಾಗ, ಇವಳ ದುಃಖವೇ ಹೆಚ್ಚಿನದೆಂದು ಅವಳನ್ನು ಸಂತೈಸುವವರಾದರೂ ಯಾರು? ಹತ್ತಿರದಲ್ಲಿ ಇಷ್ಟೆಲ್ಲ ಜನರಿದ್ದರೂ ಅವಳ ಪಾಡಿಗೆ ಅವಳೊಬ್ಬಳೇ; ಹೆಚ್ಚಾದರೆ ಪರಿಚಿತರೊಬ್ಬಿಬ್ಬರು "ಉಷಾ! ನಿನ್ನ 'ಕುಂವರ'ನು ಬರುವನು, ಚಿಂತಿಸಬೇಡ!" ಎಂದು ನಿಸ್ಸಾರವಾಗಿ ಸಮಾಧಾನ ಹೇಳುವರು.

ಉಷಾಳು ಎಲ್ಲಿಯಾದರೂ ಕುಂವರನು ಬರುತ್ತಿರಬಹುದೇ ಎಂದು ನಿರೀಕ್ಷಿಸುವಳು ಬಹು ದೂರದವರೆಗೆ ದೃಷ್ಟಿಯೋಡಿಸಿ. ಅದು ಕ್ಷಿತಿಜದ ವರೆಗೂ ಮುಟ್ಟಿದಾಗ, ಕ್ಷಿತಿಜವು ಇನ್ನೂ ದೂರವಾಗಿದ್ದರೆ.....ಎನ್ನುವಂತಿತ್ತು ಅವಳ ಕುತೂಹಲಪೂರಿತ ದೃಷ್ಟಿ ಇಷ್ಟೆಲ್ಲ ಜನರು ಸಂಕಟದಿಂದ ಪಾರಾಗಿ ಇಲ್ಲಿಯವರೆಗೆ ಬಂದಿರುವಾಗ ಕುಂವರನೇ ಗಂಡಾಂತರಕ್ಕೊಳಗಾದನೇ ?.....ಪ್ರೇಮಪೂರಿತ ಹೃದಯವು ಇಂಥ ಭಾವನೆಗೆ ಎಡೆಯನ್ನೇ ಕೊಡುತ್ತಿರಲಿಲ್ಲ! ಕುಂವರನಂತೆಯೇ ಎಷ್ಟೋ ಕುಪರ-ಕುವರಿಯರು ನಿಸ್ಸಹಾಯರಾಗಿ ಅಲ್ಲಲ್ಲಿ ದುಷ್ಟರಿಂದ ಪಾರಾಗುತ್ತ ಅಂಡಲೆಯುತ್ತಿರಬಹುದೆಂಬ ಒ ಾರನೇ ಅವಳಲ್ಲಿರಲಿಲ್ಲ. 'ಅಷ್ಟು ದೂರದಿಂದ ಪಾರಾಗಿ ಬರಬೇಓ ೇ? ತನ್ನಂತೆ ಅವನಿಗೆ ರಕ್ಷಣೆ ಸಿಕ್ಕಿರಲಿಕ್ಕಿಲ್ಲ. ಕುಂವರನೊಬ್ಬನೇ ನಾಲ್ಕಾರು ಜನರನ್ನು ಎದುರಿಸಬಲ್ಲ ಶಕ್ತಿಯುಳ್ಳವನಾದರೂ, ನಿಃಶಸ್ತ್ರನಾಗಿದ್ದಾಗ ಶಸ್ತ್ರಸಜ್ಜಿತರಾದ ಪುಂಡರ ಗುಂಪಿನ ಕಣ್ಣು ತಪ್ಪಿಸಿಕೊಂಡು ಬರುವುದಕ್ಕಾದರೂ ಸಮಯ ಬೇಡವೇ? ಬರುತ್ತಿರಬಹುದು. ರೈಲು ಬರುವುದರೊಳಗೆ ಬಂದೇ ಬರುವನು' ಎಂದು ಮನಸ್ಸನ್ನು ದೃಢಪಡಿಸುವಳು.

ಇಷ್ಟರೊಳಗಾಗಿಯೇ ಯಾವ ಕಡೆಯಿಂದಾದರೂ ಬಂದು ಕುಂವರನು ತನ್ನನ್ನು ಜನದಟ್ಟಣೆಯಲ್ಲಿ ಹುಡುಕುತ್ತಿರಬಹುದೆಂದು ಯೋಚಿಸುವಳು ಉಷಾ. ನಿಲ್ದಾಣವನ್ನೆಲ್ಲ ಹುಡುಕಾಡಿ ನೋಡುವಳು. ದೂರದಲ್ಲಿ ಕುಂವರನಂತೆಯೇ ಮುಖಚರ್ಯೆಯುಳ್ಳವರನ್ನು ಕಂಡಾಗ, ಕುಂವರನೆಂದೇ ತಿಳಿದು ಉದ್ದ ಉದ್ದ ಹೆಜ್ಜೆಗಳನ್ನಿಡುತ್ತ ಮುನ್ನುಗ್ಗುವಳು. ಹತ್ತಿರ ಬಂದಾಗ ಅವನ್ನು ಕುಂವರನಲ್ಲವೆಂಬದನ್ನು ಕಂಡು ನಿರಾಶಳಾಗುವಳು—ನಡಿಗೆಯು ಮಂದವಾಗುವುದು. ಹೀಗೆ ಆಶೆ-ನಿರಾಶೆಗಳ ಮಧ್ಯೆ ಹೊಯ್ದಾಡುತ್ತಿತ್ತು ಉಷಾಳ ಮನಸ್ಸು.

'ರೈಲು ಬಂದಿತು! ರೈಲು ಬಂದಿತು!' ಎಂಬ ಧ್ವನಿಯನ್ನು ಕೇಳಿದಾಗ ಬೆಚ್ಚಿ ಬಿದ್ದಳು ಉಷಾ. 'ಗಾಡಿ ಬಂದಿತು. ಕುಂವರನು ಇನ್ನೂ ಬರಲಿಲ್ಲವಲ್ಲ! ಈಗೇನು ಮಾಡುವುದು? ಕುಂವರನಿಗಾಗಿ ನಾನು ಇಲ್ಲಿಯೇ ಉಳಿದು ಬಿಡಲೇ! ಕುಂವರನು ನನ್ನನು ಹುಡುಕುತ್ತ ಬೇಗನೇ ಇಲ್ಲಿ ಬರಬಹುದೇ? ನಾನು ಇಲ್ಲಿರುವೆನೆಂದು ಅವನಿಗೆ ಗೊತ್ತಿರಬಹುದೇ? ಗೊತ್ತಿದ್ದುದಾದರೆ ಇಷ್ಟರ ತನಕವೂ ಏಕೆ ಬಂದು ತಲುಪಲಿಲ್ಲ? ಪುಂಡರ ಕೈಗೆ ಸಿಕ್ಕಿರಬಹುದೇ?....' ವಿಚಾರವು ಭರದಿಂದ ಸಾಗಿತ್ತು. ಗಾಡಿ ನಿಲ್ದಾಣದಲ್ಲಿ ನಿಂತಿತು. ಸ್ತ್ರೀ ಪುರುಷರೆಲ್ಲರೂ ತಮ್ಮ ತಮ್ಮ ಅಳಿದುಳಿದ ಮಕ್ಕಳನ್ನೂ, ಗಂಟು ಗದಡಿಗಳನ್ನೂ ಎತ್ತಿಕೊಂಡು 'ತಾನು ಮುಂದೆ—ತಾನು ಮುಂದೆ' ಎಂದು ಒಬ್ಬರ ಮೇಲೊಬ್ಬರು ಬಿದ್ದು ಗಾಡಿ ಹತ್ತುವ ರಭಸದಲ್ಲಿ ಇದ್ದಾಗ, ಪ್ಲಾಟ್‌ಫಾರ್ಮಿನ ಮೇಲೆ ನಿಶ್ಚಲವಾಗಿ ನಿಂತ ಉಷಾಳ ಮನಸ್ಸು, ವಿವಿಧ ವಿಚಾರಗಳಿಂದ ಅಲ್ಲೋಲ ಕಲ್ಲೋಲವಾಗಿತ್ತು. 'ಕುಂವರನಿಗಾಗಿ ತಾನೊಬ್ಬಳೇ ಅಂಡಲೆದು ಹುಡುಕಾಡುವ ಸಾಹ-

ಬಾಲ ಭರತ
ನಂತೆಯೇ ನಿಮ್ಮ ಮಗುವೂ

ಜೀವಕಳೆಯಿಂದ
ತುಂಬ ಚೈತನ್ಯ
ಕಾಲಿಯಾಗುವರೆ ಸಹಾಯ ಮಾಡಿರಿ

ಭರತನು ಚಿಕ್ಕಂದಿನಲ್ಲಿ ಒಮ್ಮೆ ಕೇಸರಿಯ ಮರಿಯೊಂದನ್ನು ಆದರ ಗಾಬರಿಯಿಂದ ಎತ್ತಿಕೊಂಡಾಗ ಉಗ್ರತೆಯಿಂದ ಮೇಲೆ ಬೀಳಲು ಬಂದ ತಾಯಿ ಕೇಸರಿಯನ್ನು ವಿಕಾಶಿಯಾಗಿ ಈ ಔಷಧಿಯ ಸಹಾಯದಿಂದ ಹಿಡಿಸಿದನು.
ನಿಮ್ಮ ಮಗುವೂ ಬಲಶಾಲಿಯಾಗಿ, ಧೈರ್ಯಶಾಲಿಯಾಗಿರಬೇಕೇ ಸಾಂಡೂನವರ ಕುಮಾರಿ ಆಸವ ನಂ. 3 ಅತ್ಯಗತ್ಯವಾಗಿದೆ. ಈ ಔಷಧವು ಅಮೂಲ್ಯ ಔಷಧಗಳಿಂದ ತಯಾರಿಸಲ್ಪಟ್ಟದ್ದಾಗಿ, ಸಾಂಡೂನವರ ಒಂಬತ್ತಕ್ಕೆ ಬಿಟ್ಟಿದ ಪ್ರಖ್ಯಾತ ಔಷಧಗಳಲ್ಲಿ ಒಂದಾಗಿದೆ.

ಸಾಂಡೂನವರ
ಕುಮಾರಿ ಆಸವನಂಬ್ರ ೩.

ಡಿ. ಕೆ. ಸಾಂಡೂ ಬ್ರದರ್ಸ್
ಚೆಂಬೂರು ಲಿಮಿಟೆಡ್, ಚೆಂಬೂರು, ಬೊಂಬಾಯಿ.
ಶಾಖೆಗಳು
ಕಾರ್ವಾರ್ಸ್ಥಾರ, ಕಾಲ್ಪಾಪೂರ, ಪುಣೆ, ಮತ್ತು ದಾದರ್‌ಕಲ್ಲು
ಇಲ್ಲದೆ ಮದ್ರಾಸ್ಥಾನ, ತಿರುಚಿನಾ, ಅಮರಾವತಿ, ಮತ್ತು ಹುಬ್ಬಳ್ಳಿ.

ಹುಬ್ಬಳ್ಳಿ ಶಾಖೆ, ಕೊಪ್ಪೀಕರ ರೋಡ

ಸವು ತನ್ನಲ್ಲಿದೆಯೇ ? ' ತನ್ನನ್ನು ತಾನೇ ಮೌನವಾಗಿ ಪ್ರಶ್ನಿಸಿದಳು ಉಷಾ. ' ಅಸಾಧ್ಯ ' ವೆಂದು ಸಂಕ್ಷಿಪ್ತ ಉತ್ತರ ಬಂದಾಗ ತನ್ನನ್ನೇ ತಾನು ಹಳಿದುಕೊಂಡಳು–ನೊಂದಳು. ಇಷ್ಟು ಹೊತ್ತಿಗಾಗಲೇ ಜನರು ರೈಲನ್ನೇರಿದ್ದರು. ಗಾಡಿ ಹೊರಡುವುದರಲ್ಲಿತ್ತು. ಉಷಾಳಿಗೆ ಏನಾದರೊಂದು ನಿರ್ಧಾರವನ್ನು ಮಾಡಲೇ ಬೇಕಾಯಿತು. ಕುಂವರನು ಎಲ್ಲಾದರೂ ಸಂದಿ-ಗೊಂದಿಗಳಿಂದ ಬಂದು ಅವಸರದಿಂದ ರೈಲನ್ನೇರಬಹುದೆಂದು ಯೋಚಿಸಿ ಮನಸ್ಸನ್ನು ಸಮಾಧಾನ ಪಡಿಸಿಕೊಂಡಳು. ತನ್ನ ಚಿಕ್ಕ ಗಂಟೊಂದನ್ನು ಎತ್ತಿಕೊಂಡು ರೈಲುಡಬ್ಬಿಯೊಂದನ್ನು ಸೇರಿದಳು.

ರೈಲುಬಂಡಿಯು ತನ್ನ ಮಾರ್ಗವಾಗಿ ಪೂರ್ಣಗತಿಯಿಂದ ಸಾಗಿತ್ತು. ಅದಕ್ಕಿಂತಲೂ ಎಷ್ಟೋ ಪಟ್ಟು ತೀವ್ರಗತಿಯಿಂದ ಉಷಾಳ ವಿಚಾರಪ್ರವಾಹವು ಹರಿಯುತ್ತಿತ್ತು. ಕುಂವರನನ್ನು ಮುಂದಿನ ಸ್ಟೇಶನ್ನಿನಲ್ಲಿ ಕಂಡರೆ ಹೇಗೆ ಮಾತಿಗೆ ಮೊದಲು ಮಾಡಬೇಕೆಂಬುದನ್ನು ಮನದಲ್ಲಿ ಲೆಕ್ಕ ಹಾಕತೊಡಗಿದಳು:— ಪುಂಡರ-ಕೈಯಿಂದ ಪಾರಾಗಿ ಓಡಿದುದು, ಅನಾಯಾಸವಾಗಿ ರಕ್ಷಣೆ ಸಿಕ್ಕಿದ್ದು, ಸಶಸ್ತ್ರ ಪೋಲಿಸರ ರಕ್ಷಣೆಗೆ ಒಳಗಾಗಿ ಸ್ಟೇಶನಿನ ಬಳಿಗೆ ಬಂದದ್ದು, ಕುಂದರನಿಗಾಗಿ ಹುಡುಕಾಡಿದ್ದು. ಯಾವ ವಿಷಯವನ್ನು ಎಷ್ಟು ಬಗೆಯಾಗಿ ಬಣ್ಣಿಸಬೇಕೆಂದೇ ಅವಳು ಯೋಚನಾಮಗ್ನಳಾಗಿದ್ದಳು. ' ನನ್ನ ದುರ್ಭಾಗ್ಯದಿಂದ ಒಂದು ವೇಳೆ ಕುಂವರನು ಈ ಗಾಡಿಯಲ್ಲಿರದಿದ್ದರೆ '— ಅವಳ ಮುಂಚಿನ ವಿಚಾರಗಳೆಲ್ಲವೂ ಕಣ್ಮರೆಯಾದುವು. ಅವಳ ಪ್ರಣಯಜೀವನದ ಐದು ವರ್ಷಗಳ ಘಟನೆಗಳ ಅಕ್ಷಯ ಭಂಡಾರವನ್ನೇ ಅವಳ ಮುಂದಿಟ್ಟಂತಾಗಿತ್ತು. ಒಂದೇ, ಎರಡೇ, ಪ್ರತಿಯೊಂದು ಘಟನೆಯೂ ಅವಳ ಹೃದಯ-ರಂಗದಲ್ಲಿ ಬಂದು ಆಕರ್ಷಕವಾಗಿ ನಾಟ್ಯವಾಡಿ ಮರೆಯಾಗುತ್ತಿತ್ತು. ಆಪಳು ಕುಂವರನಿಂದ ಎಷ್ಟೆಷ್ಟು ದೂರವಾಗಿ ಹೋಗುತ್ತಿದ್ದಳೋ ಅಷ್ಟೇ ಕುಂವರನ ವಿಚಾರವು ಹೃದಯದಲ್ಲಿ ಅಳವಾಗಿ ಬೇರೂರ ತೊಡಗಿತ್ತು — ಕನ್ನಡಿಯಲ್ಲಿಯ ಪ್ರತಿಬಿಂಬದಂತೆ. ತಾನು ಎಲ್ಲಿಗೆ ಹೋಗುತ್ತಿರುವೆನು—ಯಾತಕ್ಕಾಗಿ ? ಎನ್ನುವ ಎಷ್ಟೋ ಪ್ರಶ್ನೆಗಳು ಉಂಟಾಗುವುವು. ಒಂದಕ್ಕೂ ಅವಳಿಗೆ ಸಮಂಜಸವಾಗಿ ಉತ್ತರವೇ ದೊರೆಯುತ್ತಿರಲಿಲ್ಲ. ಒಬ್ಬೊಂಟಿಗಳಾಗಿ ಕುಂವರನನ್ನು ಬಿಟ್ಟು ಎಲ್ಲಿಗೋ ದೂರ—ಅನಿಶ್ಚಿತ ಸ್ಥಳಕ್ಕೆ—ಹೋಗುತ್ತಿರುವೆನೆಂದು ಯೋಚಿಸಿ ಬಹುಪರಿಯಾಗಿ ಮಿಡುಕುವಳು. ಒಮ್ಮೊಮ್ಮೆ ಅನಿಶ್ಚಿತ, ಅವ್ಯವಸ್ಥಿತ ವಿಚಾರಪರಂಪರೆಗಳಿಂದ ಮನನೊಂದು, ಉದಾಸೀನಳಾಗಿ ಕಿಟಕಿಯ ಹೊರಗೆ ಬಹುದೂರ ಶೂನ್ಯವಾಗಿ ನೋಡುವಳು. ಅಲ್ಲಿಯ ದೃಶ್ಯಗಳನ್ನು ನೋಡಿದಾಗ—ತಾನು ಕುಂವರನೊಡನೆ ಸಂಚರಿಸುತ್ತಿದ್ದಾಗ ಕಂಡ ಪ್ರಾಕೃತಿಕ ದೃಶ್ಯಗಳ ನೆನಪಾಗುವುದು—ಮನ ಮಿಡುಕುವುದು.

ಬಹುದೂರದ ದಾರಿ ಸಾಗಿ ಬಂದು, ನಿಲ್ದಾಣವೊಂದರಲ್ಲಿ ಗಾಡಿ ನಿಂತಾಗಲೂ ಜನರು ರೈಲಿನಿಂದ ಇಳಿಯ ಬಯಸುತ್ತಿರಲಿಲ್ಲ. ಸ್ಟೇಶನ್ನಿನಲ್ಲಿ ಹತ್ತುವ ಜನರು ಇಲ್ಲದ್ದರಿಂದ, ತಮ್ಮ ಸ್ಥಳವನ್ನು ಜನರು ಆಕ್ರಮಿಸಿಯಾರು ಎನ್ನುವ ಭಯಕ್ಕೂ ಎಡೆಯಿರಲಿಲ್ಲ. ಬಹುಪರಿಯಾಗಿ ಪೀಡೆಗೊಳಗಾದ್ದರಿಂದ ಮನಸ್ಸು ಅಕಾರಣವಾಗಿ ಶಂಕೆಗೊಳ್ಳುತ್ತಿತ್ತೋ ಏನೋ? ಅಂತೂ ಪ್ಲ್ಯಾಟ್‌ಫಾರ್ಮಿನ ಮೇಲೆ ಕೈಯಲ್ಲಿ ಎಣಿಸುವಷ್ಟೇ ಜನರು ಅಡ್ಡಾಡುತ್ತಿದ್ದರು. ಆದರಲ್ಲಿಯೂ ಉಷಾಳ ವರ್ತನೆಯೇ ಒಂದು ಬಗೆಯಾದುದರಿಂದ, ಅವಳನ್ನು

ಗುರುತಿಸುವುದು ಬಹು ಸುಲಭವಾಗಿತ್ತು. ಆಯಾಸಗೊಂಡಿದ್ದರಾದರೂ ಚಟುವಟಿಕೆಯು ತುಂಬಿ ತುಳುಕುತ್ತಿತ್ತು. ಪ್ಲ್ಯಾಟ್‌ಫಾರ್ಮಿನ ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಅಡ್ಡಾಡಿ ನೋಡಿ, ಕುಂವರನನ್ನು ಕಾಣದೆ ಪ್ರತಿ ಬಂಡಿಯನ್ನೂ ಕಿಟಕಿಯಲ್ಲಿ ಇಣಿಕಿ ನೋಡಿದಳು. ಆದರೇನು? ಎಷ್ಟೋ ಮೈಲುಗಳ ಅಂತರದಲ್ಲಿ ವಿಪತ್ತಿನೊಡನೆ ಹೋರಾಡುತ್ತಿದ್ದ ಕುಂವರನು ಗಾಡಿಯಲ್ಲಿ ಎಲ್ಲಿಂದ ಬಂದಾನು! ಉಷಾಳ ಆಶಾತಂತುವು ಕತ್ತರಿಸಿತು. 'ಅಯ್ಯೋ' ಎಂದಿತು ಉಷಾಳ ಮನ. ಅವಳ ಅಂಗಾಂಗಗಳು ಮನವನ್ನು ಅನುಸರಿಸಿದ್ದುವು. ಮೈಯಲ್ಲಿ ರೊಮಾಂಚವೆದ್ದಿತು—ಕಾಲುಗಳು ಕಂಪಿಸತೊಡಗಿದುವು. ಕಣ್ಣಮುಂದೆ ಕತ್ತಲು ಕವಿದಂತಾಯ್ತು. ನಿಂತಲ್ಲೆ ಕುಸಿದು ಕುಳಿತಳು. ಒಬ್ಬಿಬ್ಬರು ಅವಳ ಸ್ಥಿತಿಯನ್ನು ನೋಡಿಯೂ ನೋಡದವರಂತಿದ್ದರು. ನಿಮೋಹಿ ರೈಲು—ಅದಕ್ಕೆ ಯಾರ ಚಿಂತೆಯೇನು? ಸೀಟಿಕೊಟ್ಟಿತು. ಉಷಾಳು ಎದುರಿನ ಬಂಡಿಯನ್ನೇರಿದಳು—ಅದು ಅವಳ ಮೊದಲಿನ ಬಂಡಿಯೇ ಆಗಿತ್ತು. ಕರ್ಕಶ ಶಬ್ದ—'ಧಕ್, ಧಕ್, ಧಕ್!' ಉಷಾಳ ಹೃದಯದ ಬಡಿತವು ಇನ್ನೂ ಜೋರಾಗಿ ನಡೆಯಿತು—ಧಕ್, ಧಕ್, ಧಕ್.

"ಉಷಾ! ನೀನು ಅಸಹಾಯಳು! ನಾರಿ!! ನೀನೊಬ್ಬಳೇ...."

"ಹೂಂ—ಽಽ" ಬೆಂದ ಹೃದಯದ ನಿಶ್ವಾಸವಾಗಿತ್ತು ಅದು.

* * *

ಉಷಾಳು ಶರಣಾರ್ಥಿ ಮಹಿಳಾಶಿಬಿರದಲ್ಲಿದ್ದುಕೊಂಡು, ಕುಂವರನ ಶೋಧಕ್ಕಾಗಿ ಮಾಡಬಹುದಾದ ಪ್ರಯತ್ನವೆಲ್ಲವನ್ನೂ ಮಾಡಿದಳು. ಪತ್ರಿಕೆಗಳಲ್ಲಿ About Refugee ಕಾಲಮಿನಲ್ಲಿ ಪರಿಚಯ ಪ್ರಕಟಿಸಿದ್ದಾಯಿತು. ಆ ಸ್ಥಾನದಲ್ಲಿಯೇ ಇರಬಹುದೆಂಬ ನಿಶ್ಚಯ ವಿಲ್ಲದಿದ್ದರೂ ಪರಿಚಿತರಿಗೆ ಪತ್ರಬರೆದದ್ದಾಯಿತು—ಬರೆಯಿಸಿಯೂ ಆಯಿತು. ಶಿಬಿರದ ಅಧಿಕಾರಿಗಳೂ ಸಾಕಷ್ಟು ಪ್ರಯತ್ನ ಪಟ್ಟರು. ಆದರೆ ಒಂದಕ್ಕೂ ಉತ್ತರವಾಗಲಿ, ಪತ್ರಿಕೆಗಳಲ್ಲಿ ಕುಂವರನ ಒಗ್ಗೆ ಸಮಾಚಾರವಾಗಲಿ, ಬರಲಿಲ್ಲ. ಶಿಬಿರದ ಅಧಿಕಾರಿಗಳು ಕುಂವರನು ಇಹಲೋಕದಲ್ಲಿಲ್ಲವೆಂಬ ನಿರ್ಧಾರವನ್ನು ಮಾಡಿಕೊಂಡರು. ಆದರೆ ಉಷಾಳ ಪ್ರೇಮೀ ಹೃದಯದ ಆಳವನ್ನು ಮಾತ್ರ ಯಾರೂ ಅರಿಯಲಿಲ್ಲ. ಅವಳು ಕುಂವರನನ್ನು ಬಿಟ್ಟು ಮತ್ತೊಂದನ್ನರಿಯಳು. ನಿತ್ಯವೂ ತನ್ನ ಕೆಲಸ-ಬೊಗಸೆಗಳಿಂದ ಹೊರತಾದ ಸಮಯವನ್ನು ಅವನ ಚಿಂತನೆಯಲ್ಲಿಯೇ ಕಳೆಯುವಳು. ನಿದ್ದೆ, ಊಟಗಳ ಅಸ್ತವ್ಯಸ್ತತೆಯ ಕಾರಣವಾಗಿ ಅವಳ ಹೃಷ್ಟ ಪುಷ್ಟವಾದ ಮೈ ಕುಗ್ಗತೊಡಗಿತ್ತು.

ಶಿಬಿರದ ಅಧಿಕಾರಿಗಳಿಂದ ದಿನವೂ ಕಿಶೋರಿ ಹಾಗೂ ನವ-ಕರುಣಿಯರ ವಿವಾಹಗಳಿಗೆ ಪ್ರಕಟನೆಗಳು ಮೇಲಿಂದ ಮೇಲೆ ಹೊರಡುತ್ತಿದ್ದುವು. ಸಾಹಸಿಗಳು ಹಾಗೂ ಸಾಮಾಜಿಕ ಕ್ರಾಂತಿಕಾರರೆಂದೆನ್ನಿಸಿಕೊಳ್ಳುವ ಇಲ್ಲವೇ ಕೊಳ್ಳಲಿರುವ—ಯುವಕರು, ಆವೇದನ ಪತ್ರ ಕಳುಹುತ್ತಿದ್ದರು—ಸ್ವತಃ ಭೆಟ್ಟಿಯಾಗುತ್ತಿದ್ದರು.

ಮಲೇರಿಯಾ
ಇನ್ ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು
ಒಡನೆ ವಾಸಿ ಹೊಂದುತ್ತವೆ.
ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.
ಮಾದನ್ ಸನ್ಸ್ ಮತ್ತು ಕಂ. ಕೆಮಿಸ್ಟ್ಸ್,
ಮುಂಬಯಿ—೨.

ಈಗಾಗಲೇ ಎಷ್ಟೋ ವಿವಾಹಗಳು ಜರುಗಿದ್ದವು. ಉಷಾಳ ಆಕರ್ಷಕ ಸೌಂದರ್ಯವು ಯುವಕರ ಮನವನ್ನು ಸೂರೆಗೊಳ್ಳದಿರುತ್ತಿರಲಿಲ್ಲ. ಶಿಬಿರವನ್ನು ಸಂದರ್ಶಿಸಿದ ಯುವಕರ ಮಧ್ಯದಲ್ಲಿ ಇವಳು ಚರ್ಚೆಯ ವಿಷಯವಾಗಿದ್ದಳು. ಆದರೆ ಉಷಾ?—ಅವಳು ನಿರ್ದೋಷಳು. ಈ ವಿಷಯವನ್ನರಿಯಳು. ಶಿಬಿರದ ಯುವತಿಯರ ವಿವಾಹೋತ್ಸವಗಳಲ್ಲಿ ಭಾಗವಹಿಸುತ್ತಿದ್ದಳಾದರೂ ತಾನೂ ಒಂದು ದಿನ ಇಂತಹ ವಿವಾಹದಿಂದ ಕುಂವರನನ್ನು ಮರೆಯುವ ನಿರ್ಬಂಧನೆಗೆ ಒಳಗಾಗುವ ಪ್ರಸಂಗ ಬರಬಹುದೆಂದು ಅವಳು ಎಣಿಸಿರಲಿಲ್ಲ. ಒಮ್ಮೊಮ್ಮೆ ಶಿಬಿರದ ಅಧಿಕಾರಿಗಳು ಈ ಪ್ರಸಂಗವನ್ನು ಎತ್ತಿದಾಗ, ಉಷಾಳಿಗೆ ಕುಂವರನಲ್ಲಿರುವ ವಿಶ್ವಾಸ, ಸ್ತ್ರೀಸ್ವಭಾವಕ್ಕೆ ಅಪವಾದವೆನ್ನುವಂತಿರುವ ಅವಳ ದೃಢತೆ (ಕೇವಲ ಕುಂವರನ ವಿಷಯದಲ್ಲಿ) ಮುಂತಾದ ಗುಣಗಳು ಅಧಿಕಾರಿಗಳನ್ನು ಅವಳ ವಿಚಾರಕ್ಕೆ ವಿರುದ್ಧವಾಗಿ ಹೋಗಗೊಡುತ್ತಿರಲಿಲ್ಲ. ಆದರೆ ಇದು ಅವರ ಶಾಶ್ವತ ಸಮ್ಮತಿಯಲ್ಲವೆಂದು ಉಷಾಳು ತಿಳಿದಿರಲಿಲ್ಲ.

"ಉಷಾ! ನೀನು ವಿವಾಹಿತಳಾಗಲೇಬೇಕು" ಶಿಬಿರದ ಮಾತೆಯು ಒಂದು ದಿನ ಮಾತನ್ನು ಪ್ರಾರಂಭಿಸಿದಳು.

"ನಾನು ಈ ಮೊದಲೇ ವಿವಾಹಿತಳಾಗಿದ್ದೇನಮ್ಮಾ!" ಸಮಾಧಾನವಾಗಿ ಉಷಾಳು ಉತ್ತರವಿತ್ತಳು.

"ದುರ್ದೈವವು ಅದನ್ನು ಶಾಶ್ವತವಾಗಗೊಡಲಿಲ್ಲ. ಅದಕ್ಕಾಗಿ...."

"ಕುಂವರನು ನನ್ನನ್ನಗಲಿ ಹೋಗಲಾರ!" ನಡುವೇ ಬಾಯಿ ಹಾಕಿದಳು ಉಷಾ.

"ಅವನು ಇನ್ನೂ ಜೀವಿತನಾಗಿರುವನೆಂಬುದಕ್ಕೆ ಪ್ರಮಾಣವೇನು?"

"ನನ್ನ ಮನಸ್ಸು...."

"ವಿಕ್ಷಿಪ್ತಳಂತೆ ವರ್ತಿಸಬೇಡ ಉಷಾ! ನಿನ್ನ ಹಿತವನ್ನು ನೀನು ಯೋಚಿಸಲಾರೆ." ಸ್ವರ ಕಠೋರವಾಗಿತ್ತು.

"ಮತಿಭ್ರಮಣೆಯುಂಟಾಗಿಲ್ಲ ತಾಯಿ!" ವಿನಮ್ರವಾಗಿ ಉತ್ತರವಿತ್ತಳು.

"ಉಷಾ! ಕೇವಲ ಕಲ್ಪನೆಯಿಂದ ಕಾರ್ಯವಾಗುವಂತಿಲ್ಲ. ನೀನು ಪುನಃ ವಿವಾಹಿತಳಾಗಲೇ ಬೇಕು—ಇದು ಈ ಶಿಬಿರದ ಕಟ್ಟಳೆ. ತಿಳಿಯಿತೇ?" ಉತ್ತರದ ಅಪೇಕ್ಷೆ ಅವಳಿಗಿರಲಿಲ್ಲ.

ಉಷಾಳಿಗೆ ಮಾತ್ರ ಸಿಡಿಲು ಬಡಿದಂತಾಯ್ತು. 'ಇದೆಂಥ ಕಟ್ಟಳೆ! ಎಂಥ ಪ್ರಗತಿಶೀಲತೆ? ದುರ್ದೈವೀ ಸ್ತ್ರೀ ಜಾತಿ—ನೀನು ಯಾವಾಗಲೂ ಪರತಂತ್ರಳೇ! ಸಮಯ ಸಮಯಕ್ಕೆ ಅದರ ರೂಪ ಪರಿವರ್ತನೆಯಾಗುತ್ತಿರುತ್ತದೆ ಅಷ್ಟೇ? "ನನ್ನ ಕುಂವರ! ನೀನು ಈಗಲೂ ಬರಬಾರದೇ? ನಿಜವಾಗಿಯೂ ಇನ್ನು ಕುಂವರನೊಡನೆ ಜೀವನ ಕಳೆಯಲಾರೆನೋ? ಒಬ್ಬನನ್ನು ಒಮ್ಮೆ ಮನಸಾ ವರಿಸಿ, ಅವನಿಗಾಗಿ ಅರ್ಪಣೆಮಾಡಿದ ಸರ್ವಸ್ವವನ್ನು ಇನ್ನೊಬ್ಬನಿಗೆ ಕೊಡಲೇ? ಕೊಡಲು ಬಂದೀತೇ?....ಕಟ್ಟಳೆ!! ಕಟ್ಟಳೆಯಲ್ಲಿ ಬದಲಾವಣೆಯಾಗುವಂತಿಲ್ಲವೇ?—ಬದಲಿಸಲಾರದ ವೇದವಾಕ್ಯವೇ?....ನಾರೀ ಉದ್ಧಾರದ ಮರೆಯಲ್ಲಿ ಅಧಿಕಾರಲಾಲಸೆ!— ಹೊಣೆಗಾರಿಕೆಯ ನೆವದಲ್ಲಿ ಸ್ವಾರ್ಥಸಾಧನೆ... ಹೂಂಽಽ ನಾನು ಶಿಬಿರದಲ್ಲಿರಬೇಕಾದುದೇನು? ನನಗಾದ ಶಿಕ್ಷಣವು ನನ್ನ ಜೀವನವನ್ನು ಸುಲಭವಾಗಿ ಪಾರುಗಾಣಿಸಲು ಸಮರ್ಥವಾಗಲಾರದೇ? ಹಾಗಾದರೆ...ಶಿಬಿರದಿಂದ ನನ್ನೊಬ್ಬಳನ್ನೇ ಹೋಗಗೊಟ್ಟಾರೋ? ಮರಿಮಾಚಿಕೊಂಡು ಹೋಗುವುದಾದರೂ ಎಲ್ಲಿಗೆ?" ಅರ್ಧ ಚೇತನಾವಸ್ಥೆಯಲ್ಲಿ ಉಷಾಳು ಯೋಚಿಸುತ್ತ ಹೋಗುತ್ತಿದ್ದಳು. ಒಂದರಮೇಲೊಂದು ಭಾವನೆಗಳು ಮೂಡಿ ಮಾಯವಾಗುತ್ತಿದ್ದುವು. "ಉಷಾ! ಸಮಾಜದಲ್ಲಿ ನಿನ್ನಂಥ ಯುವತಿಗೆ ನಿರ್ಭೀತಳಾಗಿ ಒಂಟಿಗ ಜೀವನ ಸಾಗಿಸುವುದು ಸುಲಭವಲ್ಲ. ಸಮಾಜವು ಇಷ್ಟು ಸರಳವಾಗಿಲ್ಲ. ದೂರದಿಂದ ಕಂಡು ಬರುವಂತೆಯೇ ಅದರ ವಸ್ತುಸ್ಥಿತಿಯಿಲ್ಲ. ದೂರದ ಗುಡ್ಡದಂತಿದ್ದ ಸಮಾಜ—ಕುಂದು ಕೊರತೆ ಗಂಹರ ಕಂದರಗಳಿಗೆ ಕೊರತೆಯಿಲ್ಲ." ಮನವು ಎಚ್ಚರಿಕೆಕೊಡುತ್ತಿತ್ತು. "ಹಾಗಾದರೆ! ಹಾಗಾದರೆ?!.... ನಿರ್ಮಲಾ, ಲತಾ, ಪ್ರಮೀಳಾ ಮುಂತಾದ ಸಖಿಯರ ಹಾದಿಯನ್ನೇ ಹಿಡಿಯಬೇಕೇ? ಇಲ್ಲ! ಇಲ್ಲ! ಅವರು ತಮ್ಮಿಚ್ಛೆಯಿಂದ ವಿವಾಹಿತರಾಗಿದ್ದಾರೆ. ಕುಂವರ!

ಕುಂವರ!! " ಹೀಗೆಯೇ ಯೋಚಿಸುತ್ತ ಅವಳಿಗೆ ಯಾವಾಗ ನಿದ್ದೆ ಬಂದಿತೋ ತಿಳಿಯಳು. ಬೆಳಗ್ಗೆ ಭಾರವಾದ ಕಣ್ಣುಗಳನ್ನು ತೆರೆದಾಗ, ಸೂರ್ಯಕಿರಣವು ಎಲ್ಲೆಡೆಯಲ್ಲಿಯೂ ಪಸರಿಸಿತ್ತು. ಶಿಬಿರದ ಮಹಿಳೆಯರೆಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿದ್ದರು.

* * *

ಮಹಿಳಾ ಶಿಬಿರದಲ್ಲಿ ವಿವಾಹದ ಸಿದ್ಧತೆ ನಡೆದಿದೆ. ತನ್ನ ಕುಂವರನಿಗಾಗಿ ಮಿಡುಕುತ್ತಿರುವ—ಅವನ ಹೊರತು ಪರಪುರುಷರನ್ನು ಮನಸಾ ಒಪ್ಪದ—ಉಷಾಳನ್ನು ಪುನಃ ವಿವಾಹಕ್ಕೆ ಒಪ್ಪಿಸಿದೆವೆಂದು ಅಧಿಕಾರಿಗಳಿಗೆ ಹಿಡಿಸಲಾರದ ಆನಂದ. ಉಷಾಳ ಮೌನವನ್ನು ಸಮ್ಮತಿಯ ಲಕ್ಷಣವಾಗಿ ತಿಳಿದು, ಅವಳ ವಿವಾಹಮಾಡಲು ನಿಶ್ಚಯಿಸಿದ್ದಾರೆ—ಶಿಬಿರದ ಅಧಿಕಾರಿಗಳು. ಏನು ಮಾಡಲೂ ತೋಚದೆ ಕಣ್ಣೀರಿಡುತ್ತ ಮಿಡುಕುತ್ತಿದ್ದಾಳೆ. ಅವಳಿಗೆ ಕುಂವರ ನೆನಪಾಗಿರಬಹುದೆಂದು ತಿಳಿದು ಉಚಿತ ಸಮಾಧಾನೋಕ್ತಿ ಹೇಳಿದುದೂ ಆಯಿತು. ಉಷಾಳನ್ನು ವರಿಸಬಂದ ಯುವಕನು, ಅವಳಿಗೆ ತಕ್ಕವನೆಂದು ತಿಳಿಸಿಯೂ ಆಯಿತು. ಆದರೇನು? ಉಷಾಳಿಗೆ ಮಾತ್ರ ಕಿವುಡನ ಮುಂದೆ ಗಾನ ಹಾಡಿದಂತಾಗಿತ್ತು. ತಾನು ಏನುಮಾಡುತ್ತಿರುವೆನು—ಏನುಮಾಡಬೇಕೆಂಬುದರ ಅರಿವು ಸಹ ಉಳಿಯಲಿಲ್ಲ ಉಷಾಳಿಗೆ. ವಿವಾಹವಾಯಿತು. ವಾಡಿಕೆಯಂತೆ ಅಮಂತ್ರಿತರೂ ಅತಿಥಿಗಳೂ ಅತಿಥಿಶಾಲೆಯಲ್ಲಿ ಕುಳಿತಿದ್ದಾರೆ. ಅವರ ಶುಭಾಶೀರ್ವಾದ ಪಡೆಯಲು ಉಷಾದಂಪತಿಗಳು ಫಲ-ತಾಂಬೂಲದ ತಬಕದೊಂದಿಗೆ ಸಿದ್ಧರಾಗಿ ನಿಂತಿದ್ದಾರೆ.

ಅತಿಥಿಶಾಲೆ ಸಾಕಷ್ಟು ವಿಸ್ತಾರವಾಗಿದೆ. ಪಟ್ಟಣದ ಎಷ್ಟೋ ಮಹನೀಯರೂ ಅತಿಥಿಗಳೂ ಸೇರಿದ್ದಾರೆ. ಮಾತುಕಥೆ, ಚರ್ಚೆಗಳು ನಡೆದಿವೆ. ಅದರಲ್ಲಿಯೂ ಈ ದಿನವೇ ಶಿಬಿರಕ್ಕೆ ಇಬ್ಬರು ಅನಾಥ ಕನ್ನಿಕೆಯರನ್ನು ಒಪ್ಪಿಸಿದ ಯುವಕನೊಡನೆ ಹೆಚ್ಚು ಜನರು ಮಾತಾಡುತ್ತಿದ್ದಾರೆ—ಪರಿಚಯ ಕೇಳುತ್ತಿದ್ದಾರೆ. ಆ ಅತಿಥಿಯು ತನ್ನ ಪರಿಚಯ ಕೊಡುತ್ತಿದ್ದಾನೆ: ತಾನು ಪಂಜಾಬದ ನಿವಾಸಿ, ಹೆಸರು ಕುಂವರನೆಂದು. ಜಾತೀಯ ವಿದ್ವೇಷದ ಬೇಗೆಗೆ ಸಿಕ್ಕಿದ ರೀತಿ, ಪತ್ನಿಯನ್ನು ಅಗಲಿದ ಬಗೆ—ಅವಳ ಶೋಧಕ್ಕಾಗಿ ಮಾಡಿದ ಪ್ರಯತ್ನ. ಅದರಲ್ಲಾದ ಆಶಾನಿರಾಶೆಗಳು, ಮಹಿಳೆಯರ ಸೇವೆಯಲ್ಲಿಯೇ ಜೀವನ ಕಳೆಯಲು ನಿಶ್ಚಯಿಸಿದುದು, ಪುಂಡರಕ್ಕೆಯಿಂದ ಬಾಲಿಕೆ, ಯುವತಿಯರನ್ನೂ ಯುವತಿಯರನ್ನೂ ರಕ್ಷಿಸಿದುದು, ಇಂದು ಈ ಶಿಬಿರಕ್ಕೆ ತಂದೊಪ್ಪಿಸಿದ ಕಿಶೋರಿಯರ ರಕ್ಷಣೆಗಾಗಿ ಮಾಡಿದ ಸಾಹಸ—ಎಲ್ಲವನ್ನೂ ಅಲ್ಪ-ಸ್ವಲ್ಪದರಲ್ಲಿ ಹೇಳಿದ್ದಲ್ಲದೆ, ತಾನು ಈ ಪಟ್ಟಣಕ್ಕೆ ಹೊಸಬನೆಂದೂ ತಿಳಿಸಿದನು. ಪತ್ನಿಯ ಶೋಧಕ್ಕಾಗಿ ಕೈಕೊಂಡ ಕಾರ್ಯವು ಶ್ಲಾಘನೀಯವೆಂದು ಜನರು ಆಡಿಕೊಳ್ಳುತ್ತಿರುವ ವೇಳೆಗೆ, ಉಷಾದಂಪತಿಗಳು ಅತಿಥಿಗೃಹವನ್ನು ಸೇರಿದರು. ಎಲ್ಲರ ದೃಷ್ಟಿಯೂ ಅವರೆಡೆಗೆ ಹೊರಳಿತು.

ಕುಂವರ ನೋಡಿದ— ಉಷಾ!!! ಅವನಿಗೆ ತನ್ನ ಕಣ್ಣುಗಳ ಮೇಲೆ ಭರವಸೆಯುಂಟಾಗಲಿಲ್ಲ. ಕಣ್ಣುಜ್ಜಿಕೊಂಡು ಪುನಃ ನೋಡಿದ—ನೊದಲಿನ ಆ ಕಾಂತಿ, ಶರೀರ ದಾರ್ಢ್ಯ, ಮುಂತಾದುವು ಈಗಿಲ್ಲದಿದ್ದರೂ ಅವಳು 'ತನ್ನ ಉಷಾ' ಎಂಬುದನ್ನು ಗುರುತಿಸದಿರಲಿಲ್ಲ. "ಉಷಾ! ನೀನು ಎರಡು ವರ್ಷಗಳೊಳಗಾಗಿಯೇ ನಿನ್ನ ಹಿಂದಿನ ನೆನಪೆಲ್ಲವನ್ನೂ ಮರೆತುಬಿಟ್ಟಿಯಾ?" ಎಂದು ಮನದಲ್ಲಿ ಮಿಡುಕಿ, ಗೋಡೆಗೆ ಆತು ಕುಳಿತು ಕಣ್ಣು ತೆರೆದಿದ್ದರೂ ಎದುರಿಗಿದ್ದುದನ್ನು ನೋಡಲಾರದೆ ಹುಚ್ಚನಂತಾಗಿದ್ದನು.

ಈ ವರೆಗೂ ಉಷಾಳು ಕುಂವರನ ಕಡೆಗೆ ಲಕ್ಷ್ಯಕೊಟ್ಟಿದ್ದಿಲ್ಲ. ಅವಳು ಉಳಿದ ಅತಿಥಿಗಳಿಗೆ ಫಲತಾಂಬೂಲ ಕೊಟ್ಟು ಆಶೀರ್ವಾದ ಪಡೆಯುತ್ತಿದ್ದಳು— ಅಘ್ರ್ಯಕ್ಕಾಗಿಯೋ ಎಂಬಂತೆ ಕಣ್ಣೀರು ಆಗಾಗ್ಗೆ ತೊಟ್ಟಿಡುತ್ತಿತ್ತು. ಈಗ ಅವಳು ಕುಂವರನ ಕಡೆಗೂ ಒಂದು ವೀಳ್ಯವನ್ನು ಹಿಡಿದು ಕೈನೀಡಿದಳು. ಕೈಯೊಡ್ಡದಿದ್ದ ಕಾರಣ ಅವಳು ದೃಷ್ಟಿ ಎತ್ತಿ ನೋಡಿದಳು—ಕುಂವರ! ಕುಂವರ!! ಹೌದು— ಕುಂವರನೇ ಹೌದು! ಹೃದಯಾಕಾಶದಲ್ಲಿ ಎಷ್ಟೋಬಾರಿ 'ಕುಂವರ, ಕುಂವರ' ಎಂದು ಪ್ರತಿಧ್ವನಿಯೆದ್ದಿತು. ಹುಚ್ಚಿಯಂತಾದಳು. ಕೈಯಲ್ಲಿ ಹಿಡಿದಿದ್ದ ವೀಳ್ಯವು ನೆಲದ ಮೇಲೆ ಹೊರಳಾಡಹತ್ತಿತು. ಕಣ್ಣಿನಿಂದ ಅಶ್ರುವು ಕಟ್ಟೊಡೆದ ಕಾಲುವೆಯಂತೆ ಒತ್ತರಿಸಿ ಹರಿಯತೊಡಗಿತು. ಕುಂವರನು ಎಲ್ಲವನ್ನೂ ತಿಳಿದೂ ತಿಳಿಯದಂತಾದ.

ಉಷಾಳ ನವಪತಿಯೂ ಅತಿಥಿಗಳೂ ಅವಾಕ್ಕಾಗಿ ನೋಡುತ್ತಿರುವಾಗಲೆ, ಅವಳು ಓಡಿದಳು ತನ್ನ ರೂಮಿನ ಕಡೆಗೆ. ಎಲ್ಲರೂ ನೋಡುತ್ತಿರುವಂತೆಯೇ ದೀರ್ಘವಾದ ನಿಟ್ಟುಸುರಿನೊಂದಿಗೆ ಕುಂವರನು ಎದ್ದು ಸೆರೆಗುಡುಕನಂತೆ ಬಾಗಿಲ ಬಳಿಗೆ ಹೋದ-ಓಡಿದ.

ಪರಿಸ್ಥಿತಿಯನ್ನು ತಿಳಿಯ ಬಯಸಿದ ಹೊತ್ತಿಗೆ ಕುಂವರ ಕಾಣೆಯಾಗಿದ್ದ. ಉಷಾಳು ಮೈಮರೆತು ಬಿದ್ದಿದ್ದಳು.

ಉಷಾಳಿಗೆ ಒದಗಿದ 'ಮಿಲನ-ವಿರಹ'ದ ಇಂಗಿತವನ್ನು ಅವಳ ನಚ್ಚಿನ ಕುಂವರನಿಗೆ ಹೇಳುವವರಾರು??

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ

ಔಷಧಿ!

ಡಾ. ವಾಮನ ಗೋಪಾಳ

ಇವರ

ಸಸಾ ಪರಿಲ್ಲಾ

ಕಲಾವಿದ ಹಾಗು ವಿಮರ್ಶಕ

ಶ್ರೀ. ಎಸ್. ಎಸ್. ಬಸುಪಟ್ಟದ. ಎಮ್. ಎ. ಗುಳೇದಗುಡ್ಡ.

★

ಕಲಾವಿದನ ಕೃತಿಯ ಬಗ್ಗೆ ಜನತೆಯಲ್ಲಿ ಸಹೃದಯ ಭಾವನೆಯನ್ನು ಹುಟ್ಟಿಸಿ, ಜ್ಞಾನಲಾಲಸೆ
ಅಂತರ್ ವಿಕಾಸಗಳಿಂದ ವಿಮರ್ಶಕನು ಜನತೆಯ ಜೀವನವನ್ನು
ಮೇಲುಮಟ್ಟಕ್ಕೊಯ್ಯಲು ನೆರವಾಗುತ್ತಾನೆ.

★

ಪ್ರಕೃತಿ ಬ್ರಹ್ಮನ ಕಲಾಕೃತಿ, ವಿಶ್ವರೂಪಿಯೂ, ವಿಶ್ವವ್ಯಾಪಿಯೂ ಆದ ಬ್ರಹ್ಮನು ಹಿರಿಯ ಕಲಾವಿದನು. ಪ್ರಕೃತಿನಿರ್ಮಾಣಕಾರ್ಯವು ಸೃಷ್ಟಿಕರ್ತನ ಕಲೆಯಾದರೆ, ಪ್ರಕೃತಿಯಂತೆ ಪ್ರತಿಕೃತಿಗೆಯ್ಯುವ ಕಾರ್ಯವು ಬ್ರಹ್ಮನ ಕೈಚಳಕದಿಂದ ಪೈವೆತ್ತು ನಿಂತ ಮಾನವನ ಕಲೆಯಾಗಿದೆ. "ಸತ್ಯಂ, ಶಿವಂ, ಸುಂದರಂ ಜಗತ್" ಎಂಬ ಹಿರಿಯರವಾತಿನಂತೆ, ಬ್ರಹ್ಮನಿರ್ಮಿತವಾದ ಸೃಷ್ಟಿಯು ಸತ್ಯಮಯವಾಗಿದೆ, ಶಿವಮಯವಾಗಿದೆ ಹಾಗೂ ಸೌಂದರ್ಯಮಯವಾಗಿದೆ ಎಂದಮೇಲೆ—ಪ್ರಕೃತಿಯ ಪ್ರತಿಕೃತಿಯಾದ ಕಲಾಸೃಷ್ಟಿಯಲ್ಲಿಯೂ ಸತ್ಯ-ಶಿವ ಸೌಂದರ್ಯಗಳ ತ್ರಿವೇಣೀಸಂಗಮವಿರಬೇಕಲ್ಲವೇ?

ಸೌಂದರ್ಯವೆಂದರೆ ಬಾಹ್ಯದೃಷ್ಟಿಗೆ ತೋರಿಬರುವ ಸೌಂದರ್ಯವೂ ಹೌದು; ಅಲ್ಲದೆ ಅಂತರ್ದೃಷ್ಟಿಗೆ ತೋರಿಬರುವ ಅದೃಶ್ಯ ಸೌಂದರ್ಯವೂ ಹೌದು, ಅಸದೃಶ ಸೌಂದರ್ಯವೂ ಹೌದು. ಅದು ಗೋಚರವಾಗುವುದು ಬಗೆಗಣ್ಣಿಗೆ ಮಾತ್ರವೇ. ಶ್ರೀ. ಬೇಂದ್ರೆಯವರ "ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ; ಕಣ್ಣಿಗೂ ಕಣ್ಣಾಗಿ ಒಳಗಿಹುದು" ಎಂಬ ಮಾತನ್ನಿಲ್ಲಿ ನೆನಪಿಗೆ ತಂದುಕೊಂಡರೆ, ಸೌಂದರ್ಯದ ಸ್ಪುಟವಾದ ಚಿತ್ರ ಸಿಕ್ಕಂತಾಗುತ್ತದೆ. ಹಾಗೂ ಆಂಗ್ಲಕವಿ ಕೀಟ್ಸನು:

"Beauty is Truth, Truth Beauty, that is all
Ye know on earth and all ye need to know".

(ವಿಶ್ವದಲ್ಲಿ ನೀನು ತಿಳಿದುಕೊಳ್ಳಲೇ ಬೇಕಾದುದೆಂದರೆ ಸತ್ಯವೇ ಸೌಂದರ್ಯ; ಸೌಂದರ್ಯವೇ ಸತ್ಯವೆಂಬುದೊಂದನ್ನೇ.) ಎಂದು ಸತ್ಯ-ಸೌಂದರ್ಯಗಳು ಭಿನ್ನ ಭಿನ್ನವಾಗಿರದೆ ಒಂದೇ ಎಂಬುದಾಗಿ ಹೇಳಿದುದನ್ನು ಮನದಂದರೆ, ಸೌಂದರ್ಯದ ಸುಸ್ಪಷ್ಟ ಕಲ್ಪನೆ ಹೊಳೆಯುತ್ತದೆ. ಸತ್ಯ-ಸೌಂದರ್ಯಗಳ ಸುಂದರ ಸಮ್ಮಿಳನದಿಂದ ಶಿವತ್ವ ಪರಿಣಮಿಸುತ್ತದೆ. "ಕಲಾವಿದನು ಸುಂದರವಸ್ತುಗಳ ನಿರ್ಮಾಪಕನು" (Artist is the creator of beautiful things.) ಎಂದು ಹೇಳುವಲ್ಲಿ, ಸತ್ಯ-ಶಿವ-ಸೌಂದರ್ಯಗಳ ತ್ರಿವೇಣೀ ಸಂಗಮವುಳ್ಳ ಸುಂದರ ವಸ್ತುಗಳ ನಿರ್ಮಾಪಕನೆಂದು ತಿಳಿದುಕೊಳ್ಳುವುದರಲ್ಲಿಯೇ ಹೆಚ್ಚಿನ ಔಚಿತ್ಯ ತೋರಿಬರುತ್ತದೆ.

ಈ ಬಗೆಯ ಸತ್ಯ-ಶಿವ-ಸೌಂದರ್ಯಗಳ ಸಮನ್ವಯವನ್ನ ಯಃಲು ಅಂತರ್ದೃಷ್ಟಿ ಬೇಕು. ಆ ದೃಷ್ಟಿಯಿದ್ದಾತನೇ ಕಲಾವಿದನ ಕಲಾವಿದನು, ತಾನು ಕಂಡ ಸೊಬಗನ್ನು ತನಗುಂಟಾದ ಅನುಭ ದೊಂದಿಗೆ ಜನತೆಯ ಕಣ್ಣಿದುರಿಗಿಟ್ಟು, ತನ್ನಂತೆ ಇತರರೂ ರಸ ನಂದವನ್ನು ಪಡೆದು ಬಾಳನ್ನು ಹಸನುಮಾಡಿಕೊಳ್ಳಲು ಪ್ರಚೋ ದಕ ಶಕ್ತಿಯಾಗಿ ನಿಲ್ಲುತ್ತಾನೆ. ಈ ಪ್ರಚೋದಕಶಕ್ತಿ-ಕಲಾವಿದ ಪ್ರಚಾರಸಾಧನವಾಗಿ ನಿಲ್ಲುವ ಬಂಧುವೇ ವಿಮರ್ಶಕನು. ವಿಮ ರ್ಶಕನೆಂದರೆ ಕಲಾವಿದನಿಗೆ ಕಂಠಶ್ರೀಯಿದ್ದಂತೆ ಕಲಾವಿದ ತಾನು ಕಂಡ ಚೆಲುವನ್ನು, ಸತ್ಯವನ್ನು ನಾಲ್ಕು ಜನಕ್ಕೆ ಮನ ಹೇಳುತ್ತಾನೆ. ವಿಮರ್ಶಕನಾದರೋ ಅದನ್ನೇ ನಾಲ್ಕೂ ನಿಟ್ಟಿ ಪ್ರಚಾರಮಾಡುತ್ತಾನೆ. ಇವರಿಬ್ಬರೂ ಪ್ರಕೃತಿಸುಂದರಿ ಎಂಬ ಅರತಿ ತಟ್ಟೆಯಲ್ಲಿಯ ಹೊನ್ದೀವಿಗೆಯ ಬತ್ತಿಯ ಎರಪೆಳೆಗಳು.

ಕೃತಿಯ ಸೊಬಗನ್ನು ತಾನು ಕಂಡುಂಡು, ಜನತೆ ತಲೆದೂಗುವಂತೆ ಹೇಳಿ, ಅವರೂ ತನ್ನಂತೆ ಆನಂದಪಡೆಯುವಂತೆ ಮಾಡುವವನೇ ವಿಮರ್ಶಕನು. ಇಂಥ ವಿಮರ್ಶಕನಿಗೆ ಸತ್ಯವನ್ನರಸಬುದ್ಧಿತೀಕ್ಷ್ಣತೆ ಬೇಕು. ಕಲಾವಿದನು ಎಲ್ಲವನ್ನೂ ಪದ್ಯ ಪದರಾಗಿ ಬಿಡಿಸಿ ಹೇಳಲಾರನು. ಉತ್ತಮ ಕಲಾವಿದನು ಎಲ್ಲವನ್ನೂ ಧ್ವನ್ಯರ್ಥದಲ್ಲಿಯೇ ಹೇಳುತ್ತಾನೆ. "Art lies concealing art" ಎಂಬ ಮಾತು ಅವನ ಕೃತಿಯಲ್ಲಿ ಕಂಡು ಬರುತ್ತದೆ. ಕಿರಿಯದರಲ್ಲಿ ಹಿರಿದನ್ನು ಹೇಳುವುದೇ ಕಲಾವಿದನ ಅಗ್ಗಳಿಕೆ. ಸಣ್ಣ ಅಕ್ಕಿಯ ಕಾಳೊಂದರಲ್ಲಿ ಗೊಲ್ಲನ ಸುಂದರ ಮೂರ್ತಿಯನ್ನು ನಿರ್ಮಿಸುವುದೇ ಅವನ ಹಿರಿಮೆಯ ದ್ಯೋತಕ. ಇಂಥಲ್ಲಿ ಗೊಲ್ಲನ ಮುಖಭಾವದ ಸ್ಪಷ್ಟಭಾವ ನಿರೂಪಣೆ, ಅವನ ಉಡಿಗೆ-ತೊಡಿಗೆಗಳ ವಿನ್ಯಾಸ, ಮುರಲಿಯ ಮನೋಹರತೆ ಇವೆಲ್ಲ ಎದ್ದು ಕಾಣಲಿಕ್ಕಿಲ್ಲ; ಆದರೆ ರೇಖಾವಿನ್ಯಾಸದ ಮೂಲ ಇವೆಲ್ಲವನ್ನೂ ಅವನು ಮನಶ್ಚಕ್ಷುವಿನೆದುರು ತಂದು ನಿಲ್ಲಿಸಬ ಕಲಾವಿದನ ಈ ಹಿರಿಮೆಯನ್ನು ಜನತೆಗೆ ತಿಳಿಸಿಕೊಡಲು ವಿಮರ್ಶಕನ ಅವಶ್ಯಕತೆ ಇದೆ. ವಿಮರ್ಶಕನು ಜ್ಞಾನಿಯೂ ಹೌದು

ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

ಮೊದಲನೆಯ ಪ್ರಕಟನೆ

ಶ್ರೀ. ಪಿ. ವೆಂಕೋಬಾಚಾರ್ಯರಿಂದ ಅನುವಾದಿತ

ಅರ್ಪಣ

[ಶೋಪಾಸಾನ ಕಥಾ ಸಂಕಲನ]

ಎರಡನೆಯ ಪ್ರಕಟನೆ ಎಪ್ರಿಲ್‌ದಲ್ಲಿ ಬರಲಿದೆ.

ಶ್ರೀ. "ಸೀತಾಪತಿ" ಇವರ

ಹೂ ಅರಳಿತು

[ಪ್ರಸಿದ್ಧ ತೆಲಗು ಲೇಖಕರ ಕಥಾಸಂಗ್ರಹ]

ವಾರ್ಷಿಕ ಚಂದಾ : ೬೦೦ ಪುಟಗಳಲ್ಲಿ ನಾಲ್ಕು ಪುಸ್ತಕಗಳಿಗೆ ರೂ. ೫—೪—೦.

ಗಾರಾಟಗಾರರಿಗೆ ವಿಶೇಷ ಸವಲತ್ತು : ವಿವರಗಳಿಗೆ: ಬೇಗ ಬರೆಯಿರಿ.

ಜ್ಞಾನಿಯೂ ಹೌದು. ಕಲಾವಿದನ ಮನೋಭಾವದ ಹಿನ್ನೆಲೆಯ ತ್ತು ಕಲೆಯ ನೆಲೆ-ಬೆಲೆಯ ಸಂಪೂರ್ಣ ತಿಳಿವು ವಿಮರ್ಶಕನಿಗೆ ವಶ್ಯವಾಗಿ ಗೊತ್ತಿರಬೇಕು. ವಿಮರ್ಶಕನ ವಿಮರ್ಶನೆಯಲ್ಲಿಯ ಚ್ಚುಕಡಿಮೆ ಆವನ ತಾಂತ್ರಿಕದೃಷ್ಟಿಯ ಮೂರು ಅವಸ್ಥೆಗಳಲ್ಲಿ ಡಗಿದೆ—ಎಂದು ಎಬರ್‌ಕ್ರಾಂಬಿ ಹೇಳುತ್ತಾನೆ: (೧) ಕೃತಿ ರ್ಮಾಣದಲ್ಲಿ ಕಲಾವಿದನ ಉದ್ದೇಶವೇನು?— ಶೋಧನೆ ೨) ಉದ್ದೇಶ ಯುಕ್ತವಾಗಿದೆಯೇ?— ನಿರ್ಣಯ (೩) ಕಲಾ- ನನ ಉದ್ದೇಶ ಈಡೇರಿದೆಯೇ?— ವಿಮರ್ಶೆ. ಈ ಮೂರೂ ವಸ್ಥೆಗಳ ಪರಿಜ್ಞಾನವಿದ್ದರೇನೇ—ಉತ್ತಮ ಕಲಾಕೃತಿಯೊಂದು ಾವಿದನ ಕೈಯಲ್ಲಿ ರೂಪುಗೊಂಡು ನಿಂತಾಗ, ಅದರ ತಪ್ಪು-ಪ್ಪುಗಳನ್ನು ಕುರಿತು—ವಿಮರ್ಶಕನು ವಿವೇಚಿಸಬಲ್ಲನು. ಕಲಾ- ದನು ತನ್ನ ಅನುಭವದ ಹಿನ್ನೆಲೆಯಲ್ಲಿ ಹಿಂದು-ಮುಂದುಗಳನ್ನು ಳವಡಿಸಿಕೊಂಡು ತನ್ನ ಕೃತಿ ನಿರ್ಮಿಸುತ್ತಾನೆ ಈ ಅರ್ಥದಲ್ಲಿ ವನು ಗತಕಾಲದ ಇತಿಹಾಸಕಾರನಾಗಿ ಭವಿಷ್ಯತ್ಕಾಲದ ಭವಿಷ್ಯ- ವಾದಿಯಾಗಿ ನಿಲ್ಲುತ್ತಾನೆ. "The sanest critic is he who esumes the past and prophesies the future", ಂಬ ಮಾತಿನಂತೆ ನಿಜವಾದ ವಿಮರ್ಶಕನು ಕೂಡ ಗತಕಾಲದ ತಿಹಾಸಕಾರನಾಗಿ, ಭವಿಷ್ಯತ್ಕಾಲದ ಭವಿಷ್ಯವಾದಿಯಾಗುತ್ತಾನೆ. ಮರ್ಶಕನಿಗೆ ಪ್ರಕೃತಿಯ ಪರಿಪೂರ್ಣ-ಪರಿಪಕ್ವವಾದ ಪರಿಜ್ಞಾನ ರಬೇಕು. ಆಗ ಮಾತ್ರ ಪ್ರಕೃತಿಯ ಪ್ರತಿಕೃತಿಯಲ್ಲಿ ವಿಮರ್ಶಕನು ೂಕ್ಷ್ಮ-ನಿರೀಕ್ಷಣೆಯನ್ನು ಮಾಡಬಲ್ಲನು.

ಕಲಾವಿದನ ಕಾರ್ಯಗಳಲ್ಲಿ ಜನತೆಯ ಸಂಸ್ಕಾರ-ವಿಕಾಸವು ದ್ಧಾರ ಪರಿಗಣಿಸಲ್ಪಡುತ್ತವೆ. ಕಲಾವಿದನ ಕೃತಿಯ ಬಗ್ಗೆ ನತೆಯಲ್ಲಿ ಸಹೃದಯ ಭಾವನೆಯನ್ನು ಹುಟ್ಟಿಸಿ ಜ್ಞಾನಲಾಲಸೆ, ಂತರ್ವಿಕಾಸಗಳಿಂದ ವಿಮರ್ಶಕನೂ ಜನತೆಯ ಜೀವನವನ್ನು ೀಲುಮಟ್ಟಕ್ಕೊಯ್ಯಲು ನೆರವಾಗುತ್ತಾನೆ. ಆದರೆ ಕಲಾವಿದನ ೃತಿಯಲ್ಲಿ ಮಾನವೀಯತೆ, ಸೃಷ್ಟಿಯ ಕ್ರಮ, ಜೀವನ ಪೈಶಾಲ್ಯ- ಇವುಗಳ ವಿರುದ್ಧಾಂಶಗಳಿದ್ದಲ್ಲಿ ವಿಮರ್ಶಕನು ಕಲಾವಿದನಿಗೆ ಪೂರಕನಾಗಿದ್ದರೆ ಇಂಥಲ್ಲಿ ಮಾರಕನಾಗಿ ನಿಲ್ಲುತ್ತಾನೆ. ಆದರೆ ಮಾರಕನಾಗಿ ನಿಲ್ಲುವುದು ಭವಿಷ್ಯತ್ತಿನ ಶ್ರೇಯಸ್ಕತೆಗಾಗಿಯೇ ಎಂಬುದನ್ನು ಮಾತ್ರ ಮರೆಯಕೂಡದು. ಕಲಾವಿದನ ಅಂತರಂಗವನ್ನೇ ಬಿಚ್ಚಿಡಬಲ್ಲ—ತನ್ನಲ್ಲಿದ್ದ ಅದ್ಭುತಶಕ್ತಿಯಿಂದ ವಿಮರ್ಶಕನು ಕಲಾವಿದನ ವ್ಯಾಖ್ಯಾನಕಾರನೂ, ಪರಿಪೋಷಕನೂ ಆಗುತ್ತಾನೆ. ಕಲಾವಿದನ ಸೃಷ್ಟಿಯನ್ನೇ ಬೇರೊಂದು ವಿಧದಿಂದ ತನ್ನದೇ ಆದ ರೀತಿಯಲ್ಲಿ ಓದುಗರ ಕಣ್ಣಿದುರು ರೂಪಿಸುತ್ತಾನೆ. ಅಂತೆಯೇ ಆಸ್ಕರ್‌ವಾಯಿಲ್ಡನು "The critic is he who can translate into another manner or a new material his impression of beautiful things." ಎಂದಿದ್ದಾರೆ,

ಕಲಾವಿದ, ವಿಮರ್ಶಕರಿಬ್ಬರೂ ಕಲಾದೇವಿಯ ಅಣುಗರೇ, ಅವರಿಬ್ಬರೂ ಪ್ರಕೃತಿವನಿತೆಯ ಅರ್ಚಕಾಗ್ರಗಣ್ಯರು, ನಿಸರ್ಗದ ಜ್ಞಾನದೂತರು; ನಿಸರ್ಗದ ಅನಂತ ಸಂದೇಶವನ್ನು ಗ್ರಹಿಸಿ, ಅದರ ಅನಂತ ಸೌಂದರ್ಯಕ್ಕೆ ಕೈಗನ್ನಡಿಯಾಗಿ ನಿಂತು, ಅಸದೃಶವಾದ ಅಶರೀರವಾಣಿಯ ದಿವ್ಯ ಸಂದೇಶವನ್ನು ಅನಂತಮುಖವಾಗಿ ಒಕ್ಕೊರಲಿನಿಂದ ಹಾಡಿ ನಲಿಯುವ ಭಾಗ್ಯವಂತರು.

ಕುಟುಂಬದೊಳಗಿನ ಚಿಲ್ಲರೆ ಬೇನೆ

ಬೇಸನಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಕಡೆಗೆ ವ್ರತಿ ಸಾರೆ ಹೋಗುವುದು ಕ್ಯವಿರುವುದಿಲ್ಲ —ಮತ್ತು ಅನ್ನೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ವಾಂತಿ, ಅಜೀರ್ಣ, ಕಂತಿ, ಮೈನೋವು, ತಲೆನೋವು ಸುಸ್ತು ಕಾಣ ಎಕಾರ ಇತ್ಯಾದಿ ಅನೇಕ ಚ್ಚಾರಿ ರೋಗಗಳನ್ನು ಜವೇರಿಯನ್ ಜೀವನ ಮಿಕ್ಶ್ಚರ್ ಚ್ಚಿಸಬಹುದಾಗಿ ಗುಣಪಡಿಸುತ್ತದೆ. ಕಾಲರಾ ಮತ್ತು ಅದಂಥಹುಗಳ ಭಾಸವಾದ ಮೊದಲು ದೀಪಗಳ ಮೇಲೆ ಕಾದಾಡುವಂತೆ ಇವರ ಉಪಯೋಗಿಸಬಹುದಾಗಿದೆ. ಪ್ರತಿ ಮನೆಯಲ್ಲಿದಾಗ ಯಾವಾಗಲೂ ಇದರ ಉಪಯೋಗವಾಗುವಂತಿರಲಿ. ಇದರ ಒಂದು ಬಾಟ್ಲಿಯನ್ನು ಮನೆಯಲ್ಲಿಯೂ ಮತ್ತು ಪ್ರಯಾಣದಲ್ಲಿ ತಪ್ಪದೆ ಇಟ್ಟುಕೊಳ್ಳುವದು (ಉಪಯೋಗ ಮುಂಜಾಗ್ರತೆಯ ಸಾಮಾನುಗಳಲ್ಲಿ ದೊಡ್ಡ ಸ್ಥಾನವಾಗಿದೆ) ಮೂಡುಮೊಕ್ಕದ ಲಕ್ಷಣವಾಗಿದೆ ಕಾಯಿಲೆಗಳೂ (ನಿಮಿಷ ಸ್ಥಾನಗಳಲ್ಲಿಯೂ) ಪಥ್ಯಗಳಲ್ಲಿ ಅಂಗಡಿಯಾರ್ತಿಯೂ ಕೊಡಬಹುದಾಗಿ

ಎಮ ಎಚ್. ಜವೇರಿಯನ್ ಮಷ್ಕಾರ
ಪುನೆಸ್ಟ್ರೀಟ, ಮುಂಬಾಯಿ ೨

ದೇವರ ಪ್ರೀತಿ ಯಾರಮೇಲೆ?

ಶ್ರೀ. ಭುಜೇಂದ್ರ, ಮಹಿಷವಾಡಿಗಿ.

ದೇವರೆ! ದೇವರೆ! ಎನ್ನುತ ಸುಣಮುಣ
ಮುತ್ರುವ ಸಲಿಸುವ ಜೋಗಿಗಳೆ!
ಅಯ್ಯೋ ದೇವರೆ, ಕಾಯೋ ದೇವರೆ,
ಎಂದಳುವಂತಹ ನೋಗಿಗಳೆ!

ದೇವರೆ! ದೇವರೆ! ಎನ್ನುತ ಆರಚುವ
ಅಳುಮೊಗ ಮಾಡಿದ ಹೆಣಿಗಳೆ!
ಹಗಲಿರುಳೆನ್ನದೆ ಉಸಿರನು ಬಿಡದೆಯೆ
ಕಿರಚುವಿರೇತಕೆ ಖೋಡಿಗಳೇ!! ೧

ದೇವನ ಪ್ರೀತಿಯ ಪಡೆಯಲಿಕೋಸುಗ
ದೇವಗೆ ತೊಂದರೆ ಕೊಡಬೇಕೆ?
ಕಿರುಚುವ ಮಕ್ಕಳ ಗೋಳನು ಕಂಡಾ
ದೇವನು ಸಂತಸ ಪಡಬೇಕೆ?

ದೇವರ ಪ್ರೀತಿಯ ಪಡೆಯುವ ದಾರಿಯು
ತಿಳಿದರೆ ತಾನತಿ ದೂರಿಲ್ಲ!
ಆತನ ಹೆಸರನು ಹೇಳುತ ಕೂಗುವ
ಗಾನವೆ ಆತಗೆ ಬೇಕಿಲ್ಲ!! ೩

ಆಡುವ ಮಗುವನು ಕಂಡರೆ ತಾಯಿಗೆ
ಅಕ್ಕರೆ ಉಕ್ಕದೆ ಇದ್ದೀತೆ?
ಕಿರಿಚುವ ಕೂಸಿನ ಕೇಸರವಾಕೆಗೆ
ಬೇಸರು ಬರಿಸದೆ ಹೋದೀತೆ?

ಕುಣಿಕುಣಿದಾಡುವ ಮುಕ್ಕಳ ಮೊಗದಲಿ
ನಗೆನವಿಲಾಡದೆ ಇದ್ದೀತೆ?
ನೋಡಿದ ತಾಯಿಯ ಎದೆಯಲಿ ಹಿಗ್ಗಿನ
ಹೊಳೆ ಹರಿದಾಡದೆ ಹೋದೀತೆ?? ೪

ಮಕ್ಕಳ ಆಟಕೆ ವಿಶ್ವದ ಸುಂದರ
ಮಾಯಾಮಂದಿರ ಮಾಡಿಹನು;
ರವಿ-ಶಶಿ ನೆಲ-ಜಲ ತರು-ಲತೆ ಚಳಿಮಳೆ-
ಗಾಳಿಯ ನೆರವಿಗೆ ನೀಡಿಹನು!

ಅಳುವುದ ನಿಲ್ಲಿಸಿ ಆಡಲು ಬಂದರೆ
ದೇವರು ನಿಮ್ಮನು ಒಲಿದಾನು!
ಕೂಗುತ ಕರೆಯುತ ಅಳುವುದೆಯಾದರೆ
ಆತನು ಸಿಟ್ಟಿಗೆ ಬಂದಾನು!! ೪

ಆಡದ ಮುಕ್ಕಳ ಮುಲಗಿಸಿ ಸಾವಿನ-
ಸೆರಗನ್ನೊಹೊಚ್ಚುವನವ ನಿತ್ಯ!
ಆಡುವ ಮುಕ್ಕಳ ಆಟವ ನೋಡುತ
ನಲಿನಲಿದಾಡುವನಿದು ಸತ್ಯ!

ದೇವರ ಮುಕ್ಕಳೆ, ಕೂಡಿರಿ ಆಡಿರಿ
ಆಟವೆ ನಿಮ್ಮಯ ಹಿರಿಗೆಲಸ!
ಅಳುವಾ ಮಕ್ಕಳೆ, ಆಡಲು ಬನ್ನಿರಿ
ಅದುವೇ ದೇವಗೆ ಬಲು ಹರುಷ!! ೫

ಕವೀಶ್ವರ

ಶ್ರೀ. ಶಂಕರಭಟ್ಟ ಅಗ್ನಿಹೋತ್ರಿ, ಹೊಂಬಳ.

೧

ಕಲ್ಪನಾ ಶಕ್ತಿಯಿಂ ವಿವಿಧ ಜಗವನು ಸೃಜಿಸಿ
ಅದರಲ್ಲಿಯೊಂದಾಗಿಯಾಡುತಿಹನು-
ತಾನಡಗಿಬೆಲ್ಲವನು ನೋಡುತಿಹನು ॥

೨

ಬಲವು ರೂಪಗಳಾಗಿ ಹೊಳೆಯುತ್ತ ವಿಶ್ವದಲಿ
ಹಲವು ಭಾವಗಳಾಗಿ ತೊಳಗುತಿಹನು-
ರಸವಾರ್ಧಿಯೊಳು ಮುಳುಗಿ ತೇಲುತಿಹನು ॥

೩

ತೋರಿಸುತಲಡಗಿಸುತ ಚಿತ್ರವಸ್ತುಗಳನ್ನು
ಚಿತ್ರಗಳ ಪುರಿಯಲ್ಲಿ ಕೂಡುತಿಹನು-
ಬಗೆಬಗೆಯ ಬಣ್ಣಗಳ ಮಾಡುತಿಹನು ॥

೪

ಭೂತವನು ವರ್ತಮಾನದೊಳಡಗಿಸುತ ಭವಿ-
ಷ್ಯತ್ತನ್ನು ಹಿಡಿಯೆ ಬಲೆಬೀಸುತಿಹನು-
ಕಾಲಪುರುಷನ ಕೆಣಕಿ ಕೂಗುತಿಹನು ॥

೫

ಭೇದಭಾವಗಳೆಂಬ ಉದ್ದಾದಾಯ ಹಿಡಿದ
ಹಾದಿಕಾರರ ಕಂಡು ಸಾರುತಿಹನು-
ರಾಜಮಾರ್ಗವನವರ್ಗೆ ತೋರುತಿಹನು ॥

೬

ಆನಂದಮಯನಾಗಿ ಆನಂದರಸವನ್ನು
ಪಾನಮಾಡುತ್ತ ಮೈಮರೆಯುತಿಹನು-
ಜಗದ ಗುಟ್ಟನ್ನೆಲ್ಲ ಒಪ್ಪೆಯುತಿಹನು.

೭

ಕವಿಯು ಈಶ್ವರನಾಗಿ ಈಶ್ವರನು ಕವಿಯಾಗಿ
ಜಗವೆಂಬ ರಂಗದೊಳಗಾಡುತಿಹರು-
ಬಗೆಬಗೆಯ ಭಂಗಿಯಂ ಪಾಡುತಿಹರು ॥

ಗಾಂಧೀಜಿ ಮರಳಿ ಬಂದಾಗ....

[ಒಂದು ಒಳನೋಟ]

ಶ್ರೀ. ಸುರೇಶ ಹೊಸಬೆಟ್ಟು, ಬಿ. ಎ. ಬೆಳಗಾಂವಿ

ಗಾಂಧೀಜಿ ಇಂದು ಭಾರತಕ್ಕೆ ಬಂದರೆ, ತಾನು ಕಟ್ಟಿದ ಆದರ್ಶರಾಷ್ಟ್ರವಿದೆಂದು ಗುರುತಿಸಬಹುದೆ? ಅದರಂತೆಯೇ ಬಂದಿರುವ ಮಹಾತ್ಮನನ್ನು ಗುರುತಿಸಿ ಮನ್ನಣೆ ಸಲ್ಲಿಸುವ ಜನ ಭಾರತದಲ್ಲಿಂದು ಸಿಕ್ಕಬಹುದೆ?

‡‡

೨೬ನೆಯ ಜನೆವರಿ, ೧೯೫೦ !

ನವಯುಗ ಮೂಡಿತ್ತು ! ನಾಡಿಗೆ ನಾಡೇ ಹಾಡಲಿ ಮುಳುಗಿತ್ತು ! ಭಾರತ ಸರ್ವತಂತ್ರ ಸ್ವತಂತ್ರವಾಗಿತ್ತು !

" ಭಾರತಮಾತಾ ಕಿ ಜೈ " " ಭಾರತಮಾತಾ ಕಿ ಜೈ ! "

" ಮಹಾತ್ಮಾ ಗಾಂಧೀಜಿ ಕಿ ಜೈ " " ಪೂಜ್ಯ ಬಾಪೂಜಿ ಕಿ ಜೈ! "

ಜಯಘೋಷಗಳಿಗೇನು ಕೊರತೆಯೇ ? ಊರಿನಲ್ಲಿ ಸಂಭ್ರಮಗಳೇನು ಸ್ವಲ್ಪವೇ ? ಸಂತಸದ ಕಡಲು ಒಡೆದಿತ್ತು ; ಒಡಲು ಮೀರಿ ಮೇರೆವರಿದು ಹರಿದಿತ್ತು.

ಊರು ಶಲಿರು-ತೋರಣಗಳಿಂದಲಂಕರಿಸಿತ್ತು ; ಬಣ್ಣಬಣ್ಣದ ದೀಪಗಳಿಂದ ಸಿಂಗರಿಸಿತ್ತು. ಮೇಲೆ ಧರ್ಮಚಕ್ರದ ತ್ರಿವರ್ಣಧ್ವಜ ಹಾರುತ್ತಿತ್ತು.

ಆ ದಿನ ಮೊಳಗಿದ ಭೇರಿಗಳೆಷ್ಟು ? ಸಂದ ಮೆರೆವಣಿಗೆಗಳೆಷ್ಟು! ಗೈದ ಭಾಷಣಗಳೆಷ್ಟು !

ಭಾರತವು ಸರ್ವತಂತ್ರ ಸ್ವತಂತ್ರ ಪ್ರಜಾರಾಜ್ಯವಾಗುವ ದಿನವಲ್ಲವೇ ? ಬಂಧನದ ಕೊನೆಯ ಕಡ್ಡಿಯೂ ಸಿಡಿದು ಬೀಳುವ ದಿನವಲ್ಲವೇ ? ಭಾರತದ ಇತಿಹಾಸದಲ್ಲೇ ಸುವರ್ಣಮಯ ದಿನ !

* * * *

ರಾಗರಂಜಿತವಾಗಿತ್ತು ! ಸಂತಸದ ಸಾಗರದ ಮೇಲೆ ನಲಿದು ಬರುವುದಕ್ಕೆ ನಿಶೆ ಕೆಂಪುವರ್ಣದ ಸೀರೆಯನ್ನುಟ್ಟು ಸಿದ್ಧವಾಗಿದ್ದಳು. ನಿಶೆಯ ಸ್ಪರ್ಶಕ್ಕೆ ಸಾಗರವೂ ಕೆಂಪೇರಿತ್ತು ! ಸಂಜೆ ಸರಿದಿತ್ತು ! ಬೈಗು ಹಬ್ಬಿತ್ತು !

ಅದೇ, ಸಂಭ್ರಮದ ಸದ್ದು ಅಡಗುತಿದ್ದಿತು ! ಕತ್ತಲಲ್ಲದ ಕತ್ತಲು ! ಮಸುಕು-ಮಸುಕಾಗಿ ಮಬ್ಬಾಗಿತ್ತು !

ಊರ ಬೀದಿಯ ನಡುವೆ ಒಂದು ವ್ಯಕ್ತಿ ಮೂಡಿತು, ಮೂಡಿತು....! ಹೌದು. ಮೂಡಿರಲೇ ಬೇಕು !

ಕಾಲಲ್ಲಿ ಹಳೆಯ ಪೆಟ್ಟು ; ಮೇಲೆ ಧರಿಸಿದ ಶುದ್ಧ ಬಿಳಿಯ ಖಾದಿಯ ತುಂಡರಿನೆ ; ಎದೆ ಬಿಚ್ಚಿ, ಮೈ ಮುಚ್ಚಿದ ದೇಹ ; ಕೈಯಲ್ಲಿ ದೊಣ್ಣೆಯೊಂದು. ಪ್ರಾಯ ಎಂಭತ್ತಕ್ಕೂ ಮಿಗಿದರೂ, ನಲವತ್ತರ ಕಾಂತಿ ಮುಖದಲ್ಲಿ.

ಕಾಂತಿ !.....ಕಾಂತಿ ಎಲ್ಲಿಂದ ಈ ವ್ಯಕ್ತಿಯಲ್ಲಿ ?

ಯಾರಿರಬಹುದು ಈ ವ್ಯಕ್ತಿ ?

ಆ ವ್ಯಕ್ತಿಗೆ ಊರು ಹೊಸತಾಗಿ ಇದ್ದಂತೆ ತೋರಲಿಲ್ಲ ; ಊರ ಬೀದಿಯೆಲ್ಲ ತೀರ ಪರಿಚಿತವಾಗಿರಬೇಕು ; ಆದರೆ ಊರ ಜನರೊಬ್ಬರೂ ಆ ವ್ಯಕ್ತಿಯನ್ನರಿತಂತೆ ಕಂಡು ಬರುವುದಿಲ್ಲ. ಯಾರಿರಬಹುದು, ಊರು ಮರೆತಾಗಲೂ ಊರ ಮರೆಯದೆ ನಡೆಯುವ ವ್ಯಕ್ತಿ ?

ವ್ಯಕ್ತಿಯನ್ನು ಎಲ್ಲೋ ನೋಡಿದಂತಿದೆ ; ಹೌದೋ ಅಲ್ಲವೋ ಎನ್ನಿಸುತಿದೆ ; ಏಕೆ ಸ್ಮೃತಿ ಇಂದು ಇಷ್ಟು ಸ್ವೈರ ವೃತ್ತಿಯನ್ನು ತಾಳಿದೆ ? ತನ್ನ ಕರ್ತವ್ಯವನ್ನು ಇಂತು ಮರೆತಿದೆ ?

ಯಾರು ?.....ಯಾರು, ಪೂಜ್ಯ ಬಾಪೂಜಿಯೇ !!! ?

ಹೌದು ! ಹೌದು ! ! ಪೂಜ್ಯ ಬಾಪೂಜಿ ! ಮಹಾತ್ಮಾ ಗಾಂಧೀಜಿ !

ಮಹಾತ್ಮಾ ಗಾಂಧೀಜಿ !.....ಮತ್ತೆ ಈ ದಿನ !

ಹೌದು ! ಗಾಂಧೀಜಿಯೇ ! ಎಲ್ಲವೂ ಮೊದಲಿನಂತೆಯೇ ! ಆದರೆ ಮೊಗದಲ್ಲಿ ಮೊದಲಿನ ನಗು---ಮಂದಸ್ಮಿತ ಮಾತ್ರವಿರಲಿಲ್ಲ ! ಅದರ ಬದಲು ಮೌನದ ಮುದ್ರೆ ಮೂಡಿತ್ತು !

ಮುಖದಲ್ಲಿ ಮೊದಲಿನಂತೆ ಕಾಂತಿಯಿತ್ತು ! ವ್ಯತ್ಯಾಸವಿಷ್ಟೆ : ಅಂದಿನಾ ಕಾಂತಿಗೆ ಎಲ್ಲರೂ ತಲೆಯೆತ್ತಿ ನೋಡುತ್ತಿದ್ದರು ; ಆದರೆ ಇಂದಿನ ಈ ಕಾಂತಿಗೆ ಎಲ್ಲರೂ ತಲೆತಗ್ಗಿಸಿ ಸರಿದು ನಡೆಯುತ್ತಿದ್ದರು.

ಅದರೂ ಗಾಂಧೀಜಿಯವರ ಗುರುತು ಏಕೆ ಹತ್ತಲಿಲ್ಲ ? ಮುಖದಲ್ಲಿ ಮೌನದ ಗೂಢವಿದ್ದಷ್ಟಕ್ಕೆ ಇಷ್ಟೊಂದು ಅಪರಿಚಿತವಾಗಬೇಕೇ ?

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಗಾಂಧೀಜಿ ಊರ ಬೀದಿಗಳನ್ನು ಹಾದು ಕೊನೆಗೆ ಭವ್ಯವಾದ ಮನೆಯೆದುರು ಬಂದು ನಿಂತರು.

ಊರ ಶ್ರೀಮಂತನ ಮನೆಯದು. ಲಕ್ಷ್ಮೀದೇವಿಯನ್ನೇ ಸೆರೆಯಲ್ಲಿಟ್ಟು, ಈ ಸೆರೆಮನೆಯನ್ನೇ ತನ್ನ ಅರಮನೆಯನ್ನಾಗಿ ಮಾಡಿಕೊಂಡಿದ್ದಾನೆ—ಆ ಶ್ರೀಮಂತ. ಶ್ರೀಮಂತನಾದುದರಿಂದಲೇನೋ, ಊರಿನ ಮುಖಂಡನೂ ಅತನೇ.

ಹಿಂಸೊನ್ಮೆ ಗಾಂಧೀಜಿಯವರು ಆ ಊರಿಗೆ ಬಂದಿದ್ದಾಗ, ಅತನಲ್ಲಿಗೆ ಸಂದರ್ಶನವಿತ್ತಿದ್ದರು. ಬಾಪೂಜಿಯವರ ಆಗಮನಕ್ಕಾಗಿ ದಾರಿಯುದ್ದಕ್ಕೂ ಸಿಂಗರಿಸಿ, ಶ್ರೀಮಂತನಾಗಿದ್ದರೂ, ಒಡವನ ಮನೆಗೆ ಗಂಗೆ ಬರುವ ಸಂಭ್ರಮ ತೋರಿಸಿದ್ದ. ಆ ಮೇಲೆ ಗಾಂಧೀಜಿಯವರ ಹರಿಜನಫಂಡಿಗೆ ತನ್ನ ಸ್ವಂತ ಕೈಯಿಂದಲೇ ಹತ್ತು ಸಾವಿರವಷ್ಟು ಹಣ ತೆತ್ತಿದ್ದ. ಗಾಂಧೀಜಿಯವರೂ ಅತನನ್ನು ಹರಸಿದ್ದರು. ಇಷ್ಟಾದ ಮೇಲೆ, ಊರಿನ ಮುಖಂಡನಾಗುವುದು ಎಷ್ಟರ ಕೆಲಸ?

ಗಾಂಧೀಜಿ, ಪೂರ್ವ ಪರಿಚಯವೆಂದೋ, ತನ್ನ ಹರಕೆ ಎಷ್ಟರ ಮಟ್ಟಿಗೆ ಫಲಿಸಿದೆಯೆಂದು ನೋಡೋಣವೆಂದೋ, ಅದೇ ಶ್ರೀಮಂತನ ಮನೆಯೆದುರು ಬಂದು ನಿಂತಿದ್ದಾರೆ.

ಭಾರತ ಸಂಪೂರ್ಣ ಸ್ವಾತಂತ್ರ್ಯ ಪಡೆದ ದಿನವಷ್ಟೆ? ಶ್ರೀಮಂತ ತನ್ನ ಮನೆಯಿಡೀ ಹೂವು ಹಾರಗಳಿಂದಲಂಕರಿಸಿದ್ದ; ಮೇಲೆ ನಾಡಿನ ಧ್ವಜ ಏರಿಸಿದ್ದ. ನೋಡುವವರ ಕಣ್ಣಿಗೆ ಸ್ವಾತಂತ್ರ್ಯದೇವಿ ಅಲ್ಲೇ ಉದ್ಭವಿಸಿರುವಳೋ—ಎಂದು ತೋರಬೇಕು.

ಗಾಂಧೀಜಿಗೆ ಈ ವೈಭವ ಕಂಡಿದೆಯೊ ಇಲ್ಲವೋ? ಕಂಡರು ಅಚ್ಚರಿ ಮೂಡಿದೆಯೋ ಇಲ್ಲವೋ?

ಆದರೆ ಈ ವೈಭವದ ಮುಂದಿನ ದೃಶ್ಯ ಮಾತ್ರ, ಗಾಂಧೀಜಿಯ ಕರುಳು ಹಿಂಡಿದಂತಾಯಿತು. ಹಸಿದ ಭಿಕ್ಷುಕನೊರ್ವ ಎಂಜಲೆಲೆಯ ಮೇಲಿನ ಮಿಠಾಯಿರಾಶಿಗಾಗಿ, ಶ್ವಾನದೊಡನೆ ಶೂನ್ಯವಾಗಿ ಹೋರಾಡುತಿದ್ದಾನೆ; ದೂರದಲ್ಲಿ ಅತನ ತಾಯಿ, ಶಕ್ತಿಮಾನ ಮುಚ್ಚುವುದಕ್ಕೂ ಸಾಕಷ್ಟು ಬಟ್ಟೆಯಿಲ್ಲದೆ, ಚಿಂದಿಚೂರನ್ನೆ ಮೈಮೇಲೆ ಹರಿವಿ, ಹೊಟ್ಟೆಬಿನ್ನಿಳು ಹೂತು, ಇಂದೋ ನಾಳೆಯೊ ಎಂಬಂತೆ ಶ್ವಾಸೋಚ್ಛ್ವಾಸ ಮಾಡುತಿದ್ದಾಳೆ. ಗಾಂಧೀಜಿಯವರು ಬೆರಗುಬಯಲಾದರು?

ಸ್ವರ್ಗದ ದ್ವಾರದಲ್ಲಿ ನರಕದ ದೀಗುಲವೇ?

ಗಾಂಧೀಜಿ ಮೌನವಾಗಿ ಒಳಸರಿದರು; ಒಬ್ಬರೂ ಗುರುತಿಸಲಿಲ್ಲ ಗುರುತಿಸುವ ಹಾಗಿರಲಿಲ್ಲ—ಸಂತಸವನ್ನೇ ಕುಡಿದು ಮತ್ತರಾಗಿರುವಾಗ, ಗಾಂಧೀಜಿ ಕೋಣೆಯಿಂದ ಕೋಣೆಗೆ, ಕೊನೆಗೆ ಕೋಣೆಯೊಂದನ್ನು ಪ್ರವೇಶಿಸಿದರು:

ಶ್ರೀಮಂತ ತಾನೊಬ್ಬನೇ ಕುಳಿತಿದ್ದಾನೆ. ಎದುರಿಗೆ ಕಬ್ಬಣ ತಿಜೋರಿಯೊಂದಿದೆ. ತಿಜೋರಿಯ ಮೇಲೆ ಗಾಂಧೀಜಿಯವರದೆ ಭವ್ಯವಾದ ಭಾವಚಿತ್ರವೊಂದಿದೆ. ಕೋಣೆಯ ಗೋಡೆಗಳ ಎಲ್ಲ ಮುಖಂಡರ ಚಿತ್ರಗಳಿವೆ.

ಶ್ರೀಮಂತ ಸಣ್ಣ ಹಣತೆಯೊಂದನ್ನು ಹಚ್ಚಿ, ತನ್ನ ಖಜಾನೆಯ ಹಣವನ್ನೆಣಿಸುತಿದ್ದಾನೆ—ಆ ದಿನದಲ್ಲೂ ದೊಡ್ಡ ದೀಪವನ್ನ ಹಚ್ಚುವುದಕ್ಕೂ ಆತನಿಗೆ ಭಯ – ಎಲ್ಲಿ ಸೆರೆಯ ಲಕ್ಷ್ಮಿ ಬೆಳಕಿನ ದಾರಿಯನ್ನು ಕಂಡುಕೊಂಡು ಬಿಟ್ಟಳೆ?

ಗಾಂಧೀಜಿಗೆ—ಇವನನ್ನು ಕಂಡು ಕೆರಳಬೇಕೇ? ಕರುಣೆಯಿಂದ ಕಳವಳಿಸಬೇಕೇ?—ಎಂಬುದು ತಿಳಿಯದಾಯಿತು.

ಶ್ರೀಮಂತನಿಗೆ ಇತ್ತ ಜ್ಞಾನವೇ ಇರಲಿಲ್ಲ. ನಾಣ್ಯದ ಒಂದೊಂದು 'ಠಣ್ ಠಣ್' ಧ್ವನಿಗೆ ಒಂದೊಂದೇ ಸ್ವರ್ಗದ ಸೋಪಾನವನ್ನು ಏರುತ್ತಿದ್ದ.

ಗಾಂಧೀಜಿ ಒಂದು ಕ್ಷಣ ಮೌನದಲ್ಲಿ ಎಲ್ಲ ನೋಡಿದರು. ಸ್ವರ್ಗ—ನರಕಕ್ಕೆಷ್ಟು ಅಂತರ? ಅದರಿ ಸ್ವರ್ಗವಾವುದು? ನರಕವಾವುದು? ಒಳಗೆಯೇ? ಹೊರಗೆಯೇ?

ಗಾಂಧೀಜಿ ಮೆಲ್ಲನೆ ತನ್ನ ಕೈಯ ಡೊಣ್ಣೆಯಿತ್ತಿ ನೆಲದ ಮೇಲೆ ಒಮ್ಮೆ ಸದ್ದು ಮಾಡಿದರು. ಶ್ರೀಮಂತನ ಕಿವಿಗೆ ಗುಡುಗಿನಂತೆ ಕೇಳಿರಬೇಕು ಆ ಧ್ವನಿ!

ಶ್ರೀಮಂತನ ಕೈಯ ನಾಣ್ಯವೆಲ್ಲ 'ಝಣಾಲ್' ಎಂದು ಚೆಲ್ಲಿ ಹೋಯಿತು! ಒಮ್ಮೆ ಗಾಂಧೀಜಿಯವರನ್ನು ಕಣ್ಣು ಬಿಟ್ಟು ನೋಡಿದ!

ನೋಡಿ ಕಳ್ಳನೆಂದು ಭಾವಿಸಿದನೋ! ಒಮ್ಮೆಲೇ ಹಣತೆಯ ದೀಪವಾರಿಸಿ, "ಅಯ್ಯೋ" ಎಂದು ಕಂಠ ಬಿರಿಯುವಷ್ಟು ಕೂಗುವುದಕ್ಕೂ, ಹೊರಗೆ ಎಂಜಲೆಲೆಯ ನಿಮಿತ್ತವಾಗಿ ಹಸಿದ ನಾಯಿ ಭಿಕ್ಷುಕನ ಎದೆಯ ಮೇಲೆ ಹಾರಿ ಆತನ ಪ್ರಾಣ ಹೀರುವಾಗ ಆತ ಕರ್ಕಶವಾಗಿ ಚಿರುವುದಕ್ಕೂ ಗಂಟೇ ಬಿದ್ದಿತ್ತು.

ಗಾಂಧೀಜಿ ಅಲ್ಲಿಂದ ಹೊರಟರು. ಶ್ರೀಮಂತನ ಸೇವಕರು ಕೋಣೆಯಲ್ಲಿ ಪ್ರವೇಶಿಸುವಾಗ ಶ್ರೀಮಂತ ಮೂರ್ಛೆ ಬಂದು ಬಿದ್ದಿದ್ದ.

ಗಾಂಧೀಜಿ ಅಲ್ಲಿಂದ ಹೊರಟರು. ಕಳ್ಳನಂತೆ ಹೊರಟರೋ, ಜಗದ ಕಳ್ಳತನವ ಕಳೆಯುವೆನೆಂದು ಹೊರಟರೋ?

ಗಾಂಧೀಜಿ ಮತ್ತೆ ಬೀದಿ ಹಾಯ್ದು ಊರ ಕಾಂಗ್ರೆಸ್ ಕಚೇರಿಯತ್ತ ಬಂದರು. ಅಲ್ಲೂ ಸಿಂಗರಕ್ಕೇನೂ ಕಡಿಮೆಯಿರಲಿಲ್ಲ. ಕಚೇರಿಯ ಹೊರಗೆ ಗಾಂಧೀಜಿಯವರದೆ ದೊಡ್ಡ ವಿಗ್ರಹವಿದ್ದಿತು ಎಲ್ಲೆಲ್ಲೂ ತ್ರಿವರ್ಣಪತಾಕೆಗಳಿಂದ ಅಲಂಕರಿಸಿದ್ದರು.

ಮೊದಲು ಕಾಂಗ್ರೆಸ್ ಕಚೇರಿಯಿಂದ ಚರಕಾ ತಿರುಗಿಸುವ ಧ್ವನಿ ಕೇಳಿ ಬರುತಿತ್ತು. ಸ್ವದೇಶಿಯ ಹೊರತು ಯಾವುದೂ ಕಂಡು ಬರುತ್ತಿರಲಿಲ್ಲ. ಆದರೆ ಇಂದು ಕಛೇರಿಯ ಮೇಲೆ ಹಾರುತಿದ್ದ ಧ್ವಜವೇ ಸ್ವದೇಶಿಯ ಬಟ್ಟೆಯಂತೆ ಕಂಡುಬರಲಿಲ್ಲ.

ಗಾಂಧೀಜಿ ಇದನ್ನೆಲ್ಲ ಕಂಡರೋ ಇಲ್ಲವೋ? ಆದರೆ ಗಾಂಧೀಜಿಯವರನ್ನು ಕಂಡವರು ಮಾತ್ರ ಒಬ್ಬರೂ ಇಲ್ಲ. ಕಂಡರೂ ಕಾಣದಂತಿದ್ದರು ಹಲವರು.

ಗಾಂಧೀಜಿ ಮೌನವಾಗಿ ಒಳಗೆ ಪ್ರವೇಶಿಸಿದರು. ಜನಸಂದಣಿ ಹೆಚ್ಚಿತ್ತು. ಆದರೆ ಗಾಂಧೀಜಿಗೆ ಜನಸಂದಣಿ ವಿಶೇಷವಾಗಿದ್ದಿರಲಿಲ್ಲ! ಹೊಸತಾಗಿರಲಿಲ್ಲ! ಆದರೆ ಗಾಂಧೀಜಿಯವರಿಗೆ ಆಶ್ಚರ್ಯವನ್ನುಂಟುಮಾಡಿದುದು ಇಷ್ಟೇ: ಮೊದಲು ಕಾಂಗ್ರೆಸ್ಸಿನ ವಿರುದ್ಧ ಒಳಸಂಚು ನಡೆಸಿದವರೆಲ್ಲ ಇಂದು ಬಾಂಧವರಾಗಿದ್ದಾರೆ; ಒಂದೆ ತೋಳ ತಕ್ಕೈಯಲ್ಲಿ ನಲಿಯುತಿದ್ದಾರೆ! ತನ್ನ ಎದೆಗೆ ಗುಂಡಿಟ್ಟ ಮಂದಿಯೇ ಇಂದು ಒಂದೆ ಗೂಡಿನಲ್ಲಿ ಸೇರಿದ್ದಾರೆ!

ಏನಿದು! ಐಕ್ಯಗಾನವೇ? ಅವನತಿಯ ಸೋಪಾನವೇ?

ಗಾಂಧೀಜಿ ಕಛೇರಿಯ ಒಂದು ಮೂಲೆಯಲ್ಲಿ ಸರಿದು ನಿಂತರು; ದೃಷ್ಟಿ ಹಾಯಿಸಿದರು. ಎದುರಿಗೆ ಹಳೆಯ ಚರಖಾಗಳ ರಾಶಿಯೊಂದು ಬಿದ್ದಿತ್ತು. ಗಾಂಧೀಜಿ ಹಳೆಯ ನೆನಹಿನ ಮಮತೆಯಿಂದ ಅವುಗಳನ್ನು ಮೆಲ್ಲನೆ ಮುಟ್ಟಿದರು. ಚರಖಾಗಳಿಗೆ ಗೆದ್ದಲು ಹಿಡಿದಿತ್ತು; ಮಣ್ಣು ಹೆಂಟೆಯಾಗಿತ್ತು...

ಗಾಂಧೀಜಿ ದುಃಖಭಾರದಿಂದ ತಲೆಯತ್ತಿ ನೋಡಿದರು; ದೂರದಲ್ಲಿ ಕಾಂಗ್ರೆಸ್ ನಾಯಕರು ಕೆಲವರು ಚರಖಾ ತಿರುಗಿಸುತ್ತಿದ್ದರು.

ಚರಖಾ! .....ಹೌದು ಚರಖಾ! ಗಾಂಧೀಜಿಯವರ ಕಾಮಧೇನು ಚರಖಾ! ಗಾಂಧೀಜಿಯವರು ಕೊಂಚ ಮುಂದೆ ಸರಿದರು: ಹೌದು ಚರಖಾ! ಆದರೆ ಆವರಿಕೆಯುವ ನೂಲು ಮಾತ್ರ ಖಾದಿಯಾಗಿರಲಿಲ್ಲ; ಅಧಿಕಾರದ ನೂಲಾಗಿದ್ದಿತು, ನೋಪದ ಎಳೆಯಾಗಿತ್ತು.

ಗಾಂಧೀಜಿ ಮತ್ತೂ ಮುಂದುವರಿದರು: ಕಾಂಗ್ರೆಸ್ ನಾಯಕರೆಲ್ಲ ಮಾತಿನಲ್ಲಿ ಮಗ್ನವಾಗಿದ್ದರು. ಆದರೆ ದನಿ ಮಾತ್ರ ಪಿಸುದನಿಯಾಗಿತ್ತು

ಏಕೆ, ಸತ್ಯದ ಮಾತು ಆಡುವುದಕ್ಕೆ ಆಂಜಿಕೆಯೇ? ಇಲ್ಲದಿದ್ದರೆ ಈ ಇಳಿದನಿಯೇಕೆ?

ಗಾಂಧೀಜಿ ಕಿವಿಗೊಟ್ಟು ಲಾಲಿಸಿದರು; ಲಾಲಿಸಿ ಬೆರಳು ಕಚ್ಚಿದರು—ಬೆರಗುವಡೆದು!

ಮಾತು ಮುಂದಿನ ಚುನಾವಣೆಯ ಕುರಿತು ನಡೆದಿತ್ತು; ಜನರನ್ನು ಹೇಗೆ ವಂಚಿಸಿ ತನ್ನ ಬಗಲೊಳಗೆ ಅಧಿಕಾರವನ್ನು ತುಂಬಬೇಕೆಂಬುದರ ಕುರಿತು ಒಳಸಂಚು ನಡೆದಿತ್ತು! ಸ್ವಾತಂತ್ರ್ಯದಿನವೂ, ಮುಂದಿನ ಚುನಾವಣೆಯ ಸಿದ್ಧತೆಯ ಒಂದಂಕವೇ?

ಗಾಂಧೀಜಿ ತೀರ ಸಮೀಪಕ್ಕೆ ಬಂದರು; ಬಂದುದನ್ನು ಕಂಡರು. ಆದರೆ ಗಾಂಧೀಜಿಯೇ ಎಂದರಿತರೋ, ಇನ್ನಾರೆಂದು ತಿಳಿದರೋ! ಅಂತೂ ಇತ್ಯರ್ಥಕ್ಕೆ ಬರುವ ಮೊದಲೇ ಗಾಂಧೀಜಿಯನ್ನು ಕಛೇರಿಯಿಂದ ಹೊರತಳ್ಳಿಯಾಗಿತ್ತು.

ಗಾಂಧೀಜಿ ತಾಳ್ಮೆಯ ಆಗರನೆಂದಾದುದರಿಂದಲೇನೋ, ಅಥವಾ ತನ್ನ ಸೇವೆಗೆ ಇದುವೆ ಪುರಸ್ಕಾರವೆಂದೋ ಏನೋ, ಎಲ್ಲವನ್ನು ಸಹಿಸಿ ನಡೆದರು.

ಹಾದಿಯಲ್ಲಿ ಕಂಡರೊಂದು ಗುಡಿಯ. ಊರ ಜನರೆಲ್ಲ ಸಾಲು ಹಿಡಿದು ನಡೆಯುತಿದ್ದರು. ಪ್ರತಿಯೊಬ್ಬನ ಕೈಯ್ಯಲ್ಲಿಯೂ ಹೂವು, ಹಣ್ಣು-ಹಂಪಲುಗಳಿದ್ದುವು. ಊರ ಜನರಿಗೆಷ್ಟೊಂದು ಭಕ್ತಿ!

ಗಾಂಧೀಜಿ ಗುಡಿಯ ಸಮೀಪಕ್ಕೆಬಂದಾಗ, ಒಳಗಿನಿಂದ ಹಾಡಿನ ಧ್ವನಿ ಕೇಳಿಬರುತ್ತಿತ್ತು:

'ರಘುಪತಿ ರಾಘವ ರಾಜಾರಾಮ! ಪತಿತ ಪಾವನ ಸೀತಾರಾಮ,
ಈಶ್ವರ ಅಲ್ಲಾ ತೇರೇನಾಮ! ಸಬಕೋ ಸನ್ಮತಿ ದೇ ಭಗವಾನ್!'

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಆರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಗಾಂಧೀಜಿಗೆ ನೊವಲಿನ ಈ ಗಾನ ಕೇಳಿ ಮೈ ರೋಮಾಂಚನವಾದಂತಾಯಿತು ತನ್ನ ಪಾಠ ಜನರ ಕಂಠದಲ್ಲಿಳಿಯಿತು; ಜನರ ಭೇದಭಾವನವಳಿಯಿತು — ಎಂದು ನೆನೆದಿರಬೇಕು ಗಾಂಧೀಜಿ.

ಗುಡಿಯ ಬಾಗಿಲಿಗೆ ಬಂದರು ಗಾಂಧೀಜಿ. ಬಾಗಿಲಲ್ಲೇ ನಿಂತು ಹೊರದ ವಿನ್ಯಹವಾವುವೆಂದು ನೋಡಿದರು. ನೋಡಿ ತನ್ನನ್ನು ತಾನೆ ನಂಬದಾದರು.

ಊರ ಜನರು ಗಾಂಧೀಜಿಯು ವಿನ್ಯಹವನ್ನಿಟ್ಟು ಪೂಜೆ, ಭಜನೆ, ಸತೆಯಿಸುತ್ತಿದ್ದರು ; ಹೂವು-ಹಣ್ಣುಗಳನ್ನರ್ಪಿಸುತ್ತಿದ್ದರು.

ಗಾಂಧೀಜಿಯು ತಾಳ್ಮೆಯ ಕಟ್ಟೆ ಒಡೆದು ಹೋಯ್ತು ; ಸೈರಣೆ ಸವೆದು ಹೋಯ್ತು ; ಒಟ್ಟಿನಿಂದ ಕೆಂಡ-ಕೆಂಡವಾದರು. ಏನನ್ನೋ ನೆನೆದು ಗಾಂಧೀಜಿ ಒಳನುಗ್ಗುವುದಕ್ಕೆ ಯತ್ನಿಸಿದರು.

ಆದರೆ ಬತವನ ಒಟ್ಟು ದವಡಗೆ ಮೂಲ !

ಗಾಂಧೀಜಿ ಬತವನೇ ? ಬಡವರೆಂದಲ್ಲ....ಆದರೆ ಇದ್ದ ಒಂದು ಅಧಿಜುಬಿದ್ದ ಮೇಲೆ, ಸಂಪತ್ತೂ ಬಡತನವಲ್ಲವೇ ?

ಗಾಂಧೀಜಿಯನ್ನು ಊರ ಹೊಲೆಯನೆಂದು ನೆನೆದರೋ ? ಇಲ್ಲವೆ ಕೆಂಪುಧ್ವಜ ಹಾರಿಸುವ ಮಜದೂರನೆಂದು ತಿಳಿದರೋ ? ಅಥವಾ ಮತ್ತೇನು ತಿಳಿದರೋ ? ಅಂತೂ ಗಾಂಧೀಜಿಯನ್ನು ಹೊಡೆದಟ್ಟಿದರು.

ಈಗ ಮಾತ್ರ ಗಾಂಧೀಜಿಯ ಒಟ್ಟು ಅಡಗಿ, ತನ್ನೊಳಗೇ ತಾನು ನಕ್ಕಿರಬೇಕು.

ಗಾಂಧೀಜಿ ಊರ ಹಾದಿಯೆಲ್ಲ ಬಿಟ್ಟು ಹೊಲಗೇರಿಗೆ ಬಂದರು. ಹಿಂದೊಮ್ಮೆ ಗಾಂಧೀಜಿ ಆ ಊರಿಗೆ ಬಂದಾಗ, ಅದೇ ಹೊಲಗೇರಿಯಲ್ಲಿ ಬಿಡಾರ ಹೂಡಿದ್ದರು. ಹೊಲಗೇರಿಯೂ ಆಗ ಸ್ವರ್ಗದ ಬೀದಾಗಿತ್ತು. ಹೊಲಗೇರಿ ನಗರಕ್ಕಿಂತಲೂ ಒಂದು ಮಟ್ಟ ವಿಾರಿತ್ತು ಆಗ.

ಆದರೆ ಈಗ ಅದೇ ಹೊಲಗೇರಿ ಮಸಣವಂತಾಗಿತ್ತು ; ಶೂನ್ಯವಾಗಿತ್ತು. ಗಾಂಧೀಜಿ ಹೊಲೆಯರನ್ನು ಹರಿಜನವಾಗಿ ಮಾಡಿದರೂ, ಉಳಿದ ಜನಕ್ಕೆ ಅರಿಜನವಾಗಿಯೇ ಇದ್ದರೇನೋ ! ಅಥವಾ ಹರಿಜನರನ್ನು ಆರಿತವನು ಗಾಂಧೀಜಿಯೊಬ್ಬನೆಯೋ ?

ಊರ ಹೊಲೆಯರಲ್ಲಿ ಹಲವರು ಕೂಳಿಲ್ಲದೆಯೆ ಬಾಳನ್ನು ಕಳೆದುಕೊಂಡರು. ಅನ್ನದೇನಿಯನರಸುತ, ಎಷ್ಟೋಮಂದಿ ಊರು ಬಿಟ್ಟರು. ಉಳಿದವರು ಅನ್ನದೇಗುಲದಲ್ಲೇ ಮಡಿದರು.

ರಕ್ತಕಾರಿ ಸತ್ತವರೆಷ್ಟೋ ! ಅವರ ರಕ್ತ ಹೀರಿ ಕೊಂದ ಮುಂದಿಗಳೆಷ್ಟೋ !

ಗಾಂಧೀಜಿ ಹೊಲಗೇರಿಯ ಅಧ್ಯಂತ ಸುಳಿದರು. ಜೀವದ ಸುಳಿವಿರಲಿಲ್ಲ. ಎಲ್ಲವೂ ಹಾಳು ಬಿದ್ದಿತ್ತು ; ಸ್ಮಶಾನವಾಗಿತ್ತು.

ಅಷ್ಟರಲ್ಲಿ ಎವೆಯನ್ನು ಸೀಳಿ ಕಹಳೆಯೂಮವಂತೆ ಸಣ್ಣ ರವವದೊಂದು ಕೇಳಿಸಿತು. ಪ್ರಾಣಾಂತಿಕ ಸಂಕಟದಲ್ಲಿ ಹೊಲೆಯನೊಬ್ಬ ಕೂಗುತ್ತಿದ್ದ. ಎಲ್ಲ ಬೀಜವಳಿದುದಕೆ ಸಾಕ್ಷಿಯೋ ಎಂಬಂತೆ, ಉಳಿದ ಕೊನೆಯ ಜೀವ; ನಿತ್ಯ ಬೆಂದು ಬೆಂದು ಉಳಿದ ಬಿತ್ತು ಇದೊಂದು.

ಗಾಂಧೀಜಿ ಕೂಗು ಬಂದ ಕಡೆಗೆ ಧಾವಿಸಿದರು.

ಮುರುಕು ಮಾಡಿನಡಿಯಲ್ಲಿ ಮುದುಕ ಹೊಲೆಯನೊಬ್ಬ, ನಿಶ್ಚೇಷ್ಟಿತನಾಗಿ ಬಿದ್ದಿದ್ದ ; ದೇಹ ಅಸ್ಥಿಪಂಜರವಾಗಿತ್ತು; ಎಲುವು-ಚರ್ಮದ ಚೀಲವಾಗಿತ್ತು.

ಗಾಂಧೀಜಿ ಅವನ ಬಳಿ ಸರಿದು, ಮೆಲ್ಲಗೆ ಅವನ ತಲೆಯೆತ್ತಿ ತನ್ನ ತೊಡೆಯ ಮೇಲಿಟ್ಟರು. ಹೊರಗಿನ ನಕ್ಷತ್ರದ ಬೆಳಕಿಗೆ ಇಬ್ಬರ ಮುಖವೂ ಮಸುಕು-ಮಸುಕಾಗಿ ತೋರುತ್ತಿತ್ತು.

ಗಾಂಧೀಜಿಯ ಸ್ಪರ್ಶದಿಂದಲೋ ಏನೋ, ಹೊಲೆಯ ಮುಚ್ಚಿದ ಕಣ್ಣನ್ನು ಮೆಲ್ಲಗೆ ಅರೆದೆರೆದ. ದೇಹದಲ್ಲಿ ಜೀವನ ತುಂಬಿತ್ತು.

ಅರೆದೆರೆದ ಕಣ್ಣು ಬೆಳಗಿನಿಂದ ಸಂಪೂರ್ಣ ತೆರೆಯಿತು ಯಾರು.....? ತನ್ನ ಬಾಪೂಜಿಯೇ ?.....ಭಕ್ತಿಯುಕ್ಕಿ ಬಂದ ತೆರೆದ ಕಣ್ಣು ತೆರೆದೇ ಇತ್ತು ; ದೇಹದಲ್ಲಿ ಕಳೆ ತುಂಬಿದಂತಾಯಿತು

ಯಾರು....? ಬಾಪೂಜಿಯೇ ?

ಗಾಂಧೀಜಿ ಹೌದೆಂಬಂತೆ ಅರ್ಧನಗುತ್ತಾ ತಲೆಯಲ್ಲಾಡಿಸಿದರು.

ಹೊಲೆಯ ಮತ್ತೆ ಮತ್ತೆ ನೋಡಿದ. ನೋಡಿ ನಂಬದಾದ. ಪುನಃ ಗಾಂಧೀಜಿ ! ಪುನಃ ಬಾಪೂಜಿ ! ಹೇಗೆ ? ಏಕೆ ? ಎಲ್ಲಿಂದ ? ಹಸಿವೆಯೆಲ್ಲ ಇಂಗಿ ಗಾಂಧೀಜಿಯನ್ನೇ ಆಸರಿಂಗೆ ಕುಡಿಯುವನೋ ಎಂಬಂತೆ, ಗಾಂಧೀಜಿಯನ್ನು ನೋಡಿದ. ಕೊನೆಗೆ ಕ್ಷೀಣದನಿಯಲ್ಲಿ ಕೇಳಿದ : " ಬಾಪೂಜಿ, ನೀವು ಅಂದು ಸಾಯಲಿಲ್ಲವೇ ? "

" ಇಲ್ಲ, ನಾನಂದು ಸಾಯಲಿಲ್ಲ. ಆದರೆ ನಾನಿಂದು ಸಾಯುತ್ತಿದ್ದೇನೆ ! " ಎಂದರು ಗಾಂಧೀಜಿ.

ಮಾತು ಮುಗಿಯುವಷ್ಟರಲ್ಲಿ ದೂರದಲ್ಲಿ ಏನೋ ಸದ್ದು ಕೇಳಹತ್ತಿತು. ಊರ ಜನರು ಬರುವ ಸದ್ದು !

ಏನು, ಗಾಂಧೀಜಿಯನ್ನರಸುತ್ತಾ ಬರುತಿದ್ದಾರೆಯೇ ? ಹೌದು ಊರ ಜನರೇ ಬರುತ್ತಿದ್ದಾರೆ—ಗಾಂಧೀಜಿಯನ್ನರಸುತ್ತ.

ಹೊಲೆಯ, ಜನರ ಸದ್ದಿಗೆ ಕಿವಿಗೊಟ್ಟು ಮೆಲ್ಲನೆ ಹೇಳಿದ : " ನೋಡು, ಬಾಪೂಜಿ, ನೀನಿಲ್ಲೇಕೆ ? ಊರ ಜನರೆಲ್ಲ ನಿನ್ನನರಸುತ್ತಾ ಬರುತಿದ್ದಾರೆ "

" ಇಲ್ಲ, ನನ್ನನರಸುತ್ತಾ ಬರುತ್ತಿಲ್ಲ ; ನಿನ್ನನ್ನರಸುತ್ತಾ ಬರುತ್ತಿರಬೇಕು. ನಿನ್ನನ್ನರಸುತ್ತಾ ಬರುವ ತನಕ ನಾನವರಿಗೆ ಕಾಣಸಿಗಲಾರೆ. "

ಮಾತು ಮುಗಿಸುವಷ್ಟರಲ್ಲಿ : " ಮಹಾತ್ಮಾ ಗಾಂಧೀಕಿ ಜೈ ' ಜಯಘೋಷ ಕೇಳಿ ಬಂತು.

ಘೋಷದ ಸದ್ದು ಅಡಗುವಷ್ಟರಲ್ಲಿ, ಊರ ಜನ ಹೊಲೆಯನ ಅಂಗಳದ ಮುಂದೆ ಸೇರಿದ್ದರು.

ಆದರೆ ಗಾಂಧೀಜಿಯೆಲ್ಲಿ....?

ಹೊಲೆಯನ ಪ್ರಾಣ ಹಾರಿಹೋಗಿತ್ತು !

ಮೂಡಲಲ್ಲಿ ಉಷೆ ಮೂಡಿತ್ತು !

ಆಧುನಿಕ ಕನ್ನಡ ಕವಿತೆಯಲ್ಲಿ ವಾಸ್ತವಿಕತೆ

(ಒಂದು ಭಾಷಣ)*

ಪ್ರೊ. ದ. ರಾ. ಬೇಂದ್ರೆ ಎಂ. ಎ. ಸೋಲ್ಲಾಪುರ

★

'ವಾಸ್ತವಿಕತೆ' ಅಂದರೆ ಏನು ? ಕಾಲ್ಪನಿಕವಲ್ಲದ್ದು ವಾಸ್ತವಿಕ. ಇದ್ದದ್ದು ಇದ್ದಹಾಗೆ, ಅದರ ನಿಸರ್ಗಸಹಜ ರೂಪದಲ್ಲಿ ಪ್ರಕಟಿಸುವುದೇ ವಾಸ್ತವಿಕತೆ. ನಮ್ಮ ಹಳೆಯಕವಿತೆ ಅನೇಕ ಶತಕಗಳ ಸಂಪ್ರದಾಯದಿಂದ ಎಷ್ಟೋ ಕವಿಸಮಯಗಳಿಗೂ, ನಿಯಮ ನಿಷ್ಠುರಗಳಿಗೂ ಈಡಾಗಿ ನಿರ್ದೋಷವಾದಷ್ಟೂ ನಿರ್ಗುಣವಾಗಿ ತೋರುತ್ತಿತ್ತು. ನವೀನ ದೃಷ್ಟಿಗೆ. ವಿಲಾಯತಿ ಸೀಮೆಯ ಹೆಣ್ಣನ್ನು ನೋಡಿ 'ನಮ್ಮ ಜವಾರೀ ಹೆಣ್ಣುಗಳಿಗೆ ರೂಪವೂ ಇಲ್ಲ, ಜೀವನವೂ ಇಲ್ಲ' ಎಂದು ಭ್ರಾಂತಿಗೆ ಈಡಾದ 'ಅಪ್-ಟು ಡೇಟ್' ಸನ್ಮೃಹಸ್ಥರಂತೆ ಈ ನವೀನ ದೃಷ್ಟಿಯ ಗತಿಯೂ ಕೆಲಮಟ್ಟಿಗಾಗಿತ್ತು. ಇದರಲ್ಲಿ ಸತ್ಯಾಂಶ ಇರದೇ ಇರಲಿಲ್ಲ. Old order changeth yeilding place to new; lest one good Custom should cur rupt the world' ಗಿಡಗಿಡವೂ ಪ್ರತಿ ವಸಂತಋತುವಿಗೆ ಹೊಸ ಚಿಗುರನ್ನು ಮೂಡಿಸುವ ಮೊದಲು ಹಣ್ಣೆಲೆಗಳನ್ನು ಉದುರಿಸುವುದು—ಅವೇನು ಎಲೆಗಳಲ್ಲ ಎಂದಲ್ಲ. ಹಳೆಯವೂ ಎಲೆಗಳೇ, ಹೊಸವೂ ಎಲೆಗಳೇ. ಇದ್ದ ಎಲೆಗಳೇ ಇರಲಿ....ಎಂದರೆ, ಗಿಡದ ಜೀವಂತತನದ ಕಳೆ ತೋರುವುದಿಲ್ಲ. ಋತುಮಾನದ ಬದಲಾವಣೆ ಜಗದ ಸೌಂದರ್ಯದಲ್ಲಿ ಜೀವಂತಿಕೆಯನ್ನು ಇಡುವಾಗ ಮೂಡುವ ಕುಸುರು ಇದು. ಹಾಗೆಯೆ ಯುಗಮಾನ ಬದಲಾದಾಗ ಹಳೆಯದುದುರಿ ಹೊಸದು ಚಿಗುರುತ್ತದೆ. ಆದರೆ ಎಲೆ ಎಲೆಯಂತಿದ್ದರೂ ಬಣ್ಣ ಬೇರೆ, ಜೀವಕಳೆ ಬೇರೆ. ಹಿಂದಿನ ವಾಸ್ತವಿಕತೆ ಇಂದಿನವರಿಗೆ ಕಾಲ್ಪನಿಕವಾಗಿ ತೋರುವುದು ಸಹಜ. ಇಂದಿನ ವಾಸ್ತವಿಕತೆಯೂ ನಾಳೆಯವರಿಗೂ ಹಾಗೆ ತೋರೀತು. ಈ ವರ್ಷದಲ್ಲಿಯು ವಾಸ್ತವಿಕತೆ ವರ್ತಮಾನ ಕಾಲದ ಭಾವಚಿತ್ರ. ಅದಕ್ಕೆ ಭೂತಕಾಲದ ಸಂಪ್ರದಾಯ ಕಾಲ್ಪನಿಕವೆನಿಸಿದರೆ, ಭವಿಷ್ಯದ ಮಾತು ಆದರ್ಶಪ್ರಾಯವಾಗಿ ತೋರಿ, ಕನಸಿನ ಗಂಟೆನಿಸುವುದು.

ಯಾವ ವಾಸ್ತವಿಕತೆಯಲ್ಲಿಯೂ ಪ್ರತ್ಯಕ್ಷನೇ ಪರಮಸತ್ಯ. ಅದಕ್ಕೆ ಪರೋಕ್ಷದಿಂದ ತತ್ತ್ವಜ್ಞಾನ, ಅಪರೋಕ್ಷದ ಅನುಭವ ಎರಡೂ ಬಾಯಬ್ರಹ್ಮದ ಬಡಬಡಿಕೆ ಎಂದು ತೋರುವುದು. ಹೀಗಾಗಿ ರಾಜಕೀಯ, ಸಾಮಾಜಿಕ ಚಳವಳಿಗಳ ಚಲಚ್ಚಿತ್ರವೇ ವಾಸ್ತವಿಕತೆಗೆ ಪರಮಾರಾಧ್ಯವಾಗಿ ಬಿಡುವುದು. ಸಾಹಿತ್ಯದ, ಅದರಲ್ಲಿಯೂ ರಸವತ್ಕವಿತೆಯ ಪ್ರಕೃತಿ ಇದರಿಂದ ಬಹುದೂರ. ಕವಿತೆಯಾವ ಬಣ್ಣಗಳನ್ನು ಬಣ್ಣಿಸಿದರೂ, ಅದರ ಭಾವ ಎಲ್ಲ ಜೀವದಂತೆ ಬೆಳಕಿನತ್ತ ಹಾತೊರೆಯುತ್ತದೆ. ಹೀಗಾಗಿ ವಾಸ್ತವಿಕತೆಯು ಸಾಹಿತ್ಯದ ಕಣ್ಣನ್ನೇ ಬೇರೊಂದು ಮುಖವಾಗಿಹೊರಳಿಸಿದರೂ, ಸಾಹಿತ್ಯವು ವಾಸ್ತವಿಕತೆಯ ಬಣ್ಣವನ್ನೇ ಬದಲು ಮಾಡಿಬಿಡುತ್ತದೆ. ವಾಸ್ತವಿಕತೆಗೆ ಬೇಕಾದದ್ದು ಕಂಡ ಪದಾರ್ಥದ ವಾಸ್ತವಿಕತೆಯೋ ? ಕಾಣುವ ಪುರುಷನ ವಾಸ್ತವಿಕತೆಯೋ?—ಏನು ಇವೆರಡರ ಪರಸ್ಪರ ಆಕರ್ಷಣ—ವಿಕರ್ಷಣಗಳಲ್ಲಿ ಕಂಡುಬರುವ ದ್ವಂದ್ವದ ಹೊಟ್ಟೆಯೊಳಗೆ ಹುಟ್ಟಿಬರುವ ದಾಂಪತ್ಯದ ಸಾಮರಸ್ಯದ ವಾಸ್ತವಿಕತೆಯೋ ? ಹಾಗೂ ಉಂಟು, ಹೀಗೂ ಉಂಟು. ವಾಸ್ತವಿಕತೆ ಮೂರು ಮುಖವಾಗಿ, ಏಕಹೃದಯವಾಗಿ ಸಾಹಿತ್ಯಕಲೆಯ ಪರಿಪಾಕದಿಂದ ಪರಿಣತಿಗೊಳ್ಳುವುದು. ಇಂದಿನ ಕನ್ನಡ ಕವಿತೆಯಲ್ಲಿ ಈ ತ್ರಿಭಂಗಿಯ ಸೊಬಗೇ ಕಂಡು ಬರುವುದು.

ವಾಸ್ತವಿಕತೆಯ ಚಾಪಲ್ಯದಿಂದ ಕವಿತೆಯ ಭಾಷೆ, ಛಂದಸ್ಸು ವಿಷಯ ಎಲ್ಲವೂ ತಮಗೆ ತೋಚಿದ ಮಾರ್ಗವನ್ನು ಇಂದು ಹಿಡಿದಿವೆ. ಹೊಸತು ಹಳೆಯದರ ದಾಯಾದಿತನ ಹುಟ್ಟಿದೆ. ವಾಸ್ತವಿಕತೆ ಪ್ರಗತಿವಾದವನ್ನು ಹೊಡಿದೆ. ರಾಜಕೀಯ—ಸಾಮಾಜಿಕದಂತೆ ಸಾಹಿತಿಗಳಲ್ಲಿಯೂ ಪಂಗಡಗಳಾಗಿವೆ. ಅಂತೂಇಂತೂ ಪಂಪ, ರನ್ನರು ತಮ್ಮ ಕಾಲದ ಜೋಳ-ಚಾಳುಕ್ಯರ ಕದನದಲ್ಲಿ ಭೀಮಾರ್ಜುನರನ್ನು ಎಳೆದಾಡಿದಂತೆ, ಇಂದಿನ ರಾಜಕೀಯದ ವೀರರಸವನ್ನು ಇಂದಿನ ಸಾಹಿತಿಗಳು ತಮ್ಮ ವಿರಸಕ್ಕೆ ಬಳಸಿಕೊಂಡು, ಅದರೊಳಗಿಂದಲೇ ಸರಸ ಸಲ್ಲಾಪ ಪ್ರಾರಂಭಿಸಿದ್ದಾರೆ. ಇದು ವಾಸ್ತವಿಕ ತಾನೇ ? ಇದರ ಭಾವ ಸಾಹಿತ್ಯದಲ್ಲಿ ಮೂಡಿದೆ:

> '' ಹಳತು ಹೊಸತೆನ್ನುವೀ ಮಾತು ಬಲು ಹಳೆಯದು—
> ಕವಿಗಳೆಲ್ಲರು ಹೊಡೆದ ಹುಯಿಲು ತಮಟೆ.
> ಒಳಗೆ ಹೂರಣವಿರಲು ಹೊಸತೇನು ಹಳತೇನು ?
> ಕಾಲಪುರುಷನಿಗಿಲ್ಲ ಅವರ ತಂಟೆ ! "

ಕಾಲಪುರುಷ ತಂಟೆಯಿಲ್ಲದೆ ಬಿಟ್ಟಾನೇ ?

> '' ಹಳೆಯದೆಲ್ಲವು ಹೊಲ್ಲ ಹಾಕು ಬೆಂಕಿಗೆ ಎಲ್ಲ;
> ಹೊಸದೊಂದೆ ನಲ್ಲದೆನುವೀ ಕೂಗು ಏಕೆ ?
> ಹಳಬರೆನಿಸಿದ ನಿನ್ನ ಹಡೆದ ತಾಯ್ತಂದೆಗಳ
> ಕೊರಲ ಕೊಯ್ಯದೆ ಸುಮ್ಮನಿರುವೆ ಏಕೆ ? "

---

* ಧಾರವಾಡದ ಬಾನುಲಿಕಟ್ಟೆಯಿಂದ ತಾ. ೬-೩-೫೦ ನೆಯ ಸಾಯಂಕಾಲ ಪ್ರಸಾರಗೊಂಡುದು. ಸಂ. ಜ.

ಚ್ಯವನ ಪ್ರಾಶ

(ಅಷ್ಟವರ್ಗಯುಕ್ತ)

ಇದರ ಸೇವನೆಯಿಂದ :—

೧. ಬೇನೆಗಳಿಂದ ಬಂದ ದುರ್ಬಲತೆ ದೂರಾಗುವದು.

೨. ಪೋಷಕ ಆಹಾರದ ಅಭಾವದಿಂದ ಕ್ಷೀಣವಾದ ರಸ-ರಕ್ತಾದಿ ಧಾತುಗಳು ಬಲಗೊಳ್ಳುವವು.

೩. ಅತ್ಯಂತ ಮಾನಸಿಕ ಶಾರೀರಿಕ ಶ್ರಮದಿಂದುಂಟಾದ ವಿಸ್ಮರಣೆ ಮನೋದೌರ್ಬಲ್ಯ, ನಿರುತ್ಸಾಹಗಳು ಇದರ ಸೇವನೆಯಿಂದ ಕಡಿಮೆಯಾಗಿ, ಮೇಧಾ-ಶಕ್ತಿ ಉತ್ಸಾಹಗಳು ಹೆಚ್ಚಾಗುತ್ತವೆ.

೪. ದುರ್ಬಲವಾದ ರತಿಶಕ್ತಿಯನ್ನು ಸಬಲಗೊಳಿಸುತ್ತದೆ.

ದಿ ನೂತನ
ಆಯುರ್ವೇದ ಕಾರ್ಯಾಲಯ,
ಲಿ. ವಿಜಾಪೂರ.

ಜಗಳದ ವಾಸ್ತವಿಕತೆ ಜೆನ್ನಾಗಿ ಮೂಡಿದೆಯಲ್ಲವೆ ? ಈ ಕವಿ ವಾಸ್ತವವಾದಿ ಕವಿಗಳಿಗೆ ಸವಾಲು ಹಾಕಿದ್ದಾರೆ :

ಸತ್ತ ಸಾಹಿತ್ಯವೆನ್ನುವಿಯಲಾ....ಇವುಗಳನು
(ರಾಮಾಯಣ, ಭಾರತ. ಕಾಲಿದಾಸ, ಪಂಪ ಎಲ್ಲರೂ ಬಂದರು.)
ಅವುಗಳೊಳಗಣ ಜೀವ ಕಾಣದಾದೆ;
ಎತ್ತ ಬಲ್ಲಿಯೊ ಮರುಳಿ ಅವುಗಳ ಮಹತ್ತ್ವವನು
ಬಲ್ಲವರಿಗುಂಟಲ್ಲಿ ತತ್ತ್ವಬೋಧೆ ! "

ಆದರೆ ವಾಸ್ತವಿಕತೆ, ತತ್ತ್ವಬೋಧೆ ಸಲ್ಲದ ಅಧಿಕ ಪ್ರಸಂಗದ ಮಾತು. ವಾಸ್ತವಿಕ ಸಾಹಿತಿ ಪ್ರಚಂಡ ಕರ್ಮಯೋಗಿ. ಚಳಿಗಾಲ ಕೂಡ ನಮ್ಮೊಬ್ಬ ಕವಿಗೆ ಕರ್ಮಯೋಗಿಯಾಗಿ ಕಂಡಿತು:

" ಬಂತು ಬಂತು ಮಾಗಿ—ಭಾಮೆ.
ಸಹಜ ಕರ್ಮಯೋಗಿ !

* * *

ಎಲ್ಲೆಲ್ಲಿಯು ಅನ್ನ—ತೀವಿ ಕಳೆಯೆ ಬನ್ನ.....
ಜೀವಕುಲದ ಬಯಕೆಗಣ್ಣಿ ನಾಳೆಯೂಟ ಒದವಿಸಿ—
ಕೊಡಲು ಬಂತು ಧಾವಿಸಿ ॥ "

ದಂಡನಾಯಕರಾದ ಬಸವಣ್ಣನವರೂ ಕೂಡ ಈಗಿನ ಅನ್ನ-ವಸ್ತ್ರದ ವಿಷಮತೆಗಳನ್ನು ಕಳೆಯಲು ಅವತರಿಸಿ ಬರಬೇಕು ಎಂದು ಒಬ್ಬ ಕವಿ ಕೇಳಿಕೊಂಡಿದ್ದಾರೆ. ವಾಸ್ತವಿಕತೆಯ ಮೊದಲನೆಯ ದರ್ಶನವೆಂದರೆ ಕೂಲಿಯವನ ಕುದಿತ :

" ಹೆಂಡಿರು ಮಕ್ಕಳು ಓ, ಸಂಸಾರ
ತಿಂಡಿ ತಿಂಡಿ ಅಯ್ಯೋ ನಿಸ್ಸಾರ!
ಕತ್ತೆಯ ತೆರದಲಿ ದುಡಿಯುವೆನು
ಪ್ರತಿಫಲವಿಲ್ಲದೆ ಕುದಿಯುವೆನು.
ಯಾರಿಗೆ ಹೇಳಲಿ ಕೂಲಿಯ ಕುತ್ತು
ಯಾರಿಗೆ ಯಾರೈ ಸ್ವಾರ್ಥಿ ಜಗತ್ತು ! "

ವಾಸ್ತವಿಕವಾದ ಮಾತು ! ಜಗತ್ತಿಗೆ ತನ್ನ ದುಃಖದಲ್ಲಿ ಇನ್ನೊಬ್ಬರ ದುಃಖ ಕಾಣುವುದಿಲ್ಲ. ತಮ್ಮ ಜನ್ಮ ಬಾಡಿಗೆ ಎತ್ತಿನ ಜನ್ಮ ಬಾರಕೋಲು ಹಿಡಿದುಕೊಂಡು ಬೆನ್ನಿಗೆ ಬಾರೆಕೆಯುತ್ತ ದುಷ್ಟ ಯಜಮಾನನೊಬ್ಬ ನೊಗದ ಹಿಂದೆ ಕುಳಿತಿದ್ದಾನೆ—ಎಂಬ ಭಯ.

" ಬಾಡಿಗೆಯ ಎತ್ತು, ನಮಗಿಲ್ಲ ಗೊತ್ತು !
ಗಾಳಿ ಕಿವಿ ಕುಂಬಿರುವ, ಗೂಳಿ ಜನುಮ;
ಹೊಲಗಳನೆ ಮೆಯ್ದು ! ನದಿಗಳನೆ ಹಾಯ್ದು
ಮೆರೆವ ಪುಣ್ಯವದಿಲ್ಲ ನಮ್ಮ ಕೆರುಮ "

ಎಂದು ಕವಿ ವಿನಾಯಕರು ಹಾಡಿದ್ದಾರೆ. ಜಗತ್ತಿನಲ್ಲಿ ಎರಡು ಜಾತಿಯ ಜನ. ಬಹಳ ಪಶುಗಳು, ಉಳಿದವರು ಪಶುಪತಿಗಳು ! ಕೂಲಿಯವರಿಂದ ಕಾರಕೂನರ ವರೆಗೆ ಎಲ್ಲರಿಗೂ ತಾವು ' ಬಾಡಿಗೆಯ ಎತ್ತು ' ಎಂಬ ಭಯ. ಅಂತೆಯೆ ದುರ್ಬಲರನ್ನು ಕೇಳುವವರಾರೂ ಇಲ್ಲ. ಬಲ ಇದ್ದವರಿಗೆ ಎಲ್ಲಾ ದಕ್ಕುತ್ತದೆ—ಎಂಬುದೊಂದು ವಾಸ್ತವಿಕ ವಿಚಾರ ಲಹರಿ :

" ಸುಳ್ಳು ಸತ್ಯ ಇಲ್ಲ ತಥ್ಯ
ಗೆಲವ್ಯೊಂದೆ ನಮ್ಮ ಗುರಿ
ಒಳ್ಳೆತನವು ಮಳ್ಳತನವು
ಬಲವು ಇದ್ದರಿಲ್ಲ ಸರಿ ! "

ಎಂಬುದು ಒಂದು ಗೀತದ ಪಲ್ಲವಿ. ಆದಕಾರಣ ಇನ್ನೊಬ್ಬ ಕವಿ ಕರೆಯುತ್ತಿದ್ದಾರೆ :

" ಬನ್ನಿರಿ ಮಣ್ಣಿನ ಮಕ್ಕಳೆ ಬನ್ನಿ,
ಸಾಗಲಿ ಈ ಕದನ !
ನಿಮ್ಮ ನೆತ್ತರಿನ ಧ್ವಜವನು ಎತ್ತಿ
ಲೋಕಶಾಂತಿ ಬಿರಿಸಿ ! "

ಇಂದಿನ ಕಾಲದ ಶಾಂತಿ, ರಕ್ತ ಸರೋವರಗಳಲ್ಲಿ ಜಲಕ್ರೀಡೆಯಾಡಿ ಬಯಸುವ ನಾಗಕನ್ನಿಕೆಯಂತೆ ತೋರುತ್ತಾಳೆ ಅಲ್ಲವೇ ? ಎಲ್ಲರಿಗೂ ಶಾಂತಿ ಬೇಕಾಗಿದೆ, ಕದನವೂ ಬೇಕಾಗಿದೆ. ಇಷ್ಟೇ : ಒಂದಾದ ಮೇಲೆ ಒಂದು ಬೇಕು ಎಂದು ತೋರುತ್ತದೆ. ಇಂದಿನ ಶಾಂತಿ ಹಿಂದಿನಂತೆ ಕಾಲ್ಪನಿಕವಾಗಿಲ್ಲ. ಎರಡು ಯುದ್ಧಗಳ ನಡುವಿನ ವಿಶ್ರಾಂತಿಯೇ ಇಂದಿನ ಶಾಂತಿ. ಇದು ಹೀಗಾಗಬೇಕೆ ? ಆಗಬಾರದು, ಆದರೆ ಆಗುತ್ತಿದೆ.

" ನಾಡಿನಲಿ ಜಾತಿ-ಮತ-ಪಂಥಗಳ ಹಗೆ ಬಿತ್ತಿ
ನಮ್ಮ ನಮ್ಮವರೆ ಹೋರಾಡಿ ವಿಷಕಾರುವರು—
ಎಲ್ಲ ಸಮವೆಂದು-ಎಲ್ಲ ಬಾಳುವದೆಂದು ? "

ಅದೇ ಮಹಾಪ್ರಶ್ನೆ ! ಎಲ್ಲರೂ ಪ್ರಶ್ನೆಯನ್ನು ಒತ್ತಿ ಕೇಳುತ್ತಿದ್ದಾರೆ. ಉತ್ತರ ಕೊಡುವವರು ಒಬ್ಬರೂ ಇಲ್ಲ. ಇದು ನಮ್ಮ ವಾಸ್ತವಿಕ ಸ್ಥಿತಿ.

प्रत्यक्षं फलमिच्छन्ति प्रत्यक्षं नेच्छन्ति मानवाः ।
न पापं फलमिच्छन्ति पापं कुर्वन्ति यत्नतः ॥

ಈ ವಾಸ್ತವಿಕ ಸತ್ಯವನ್ನು ಹಿಂದಿನವರೇ ಹೇಳಿದರು, ಇಂದಿನವರೆಗೆ ಅದು ವಾಸ್ತವಿಕವಾಗಿ ಉಳಿದಿದೆ. ಆದರೆ ಪಾಪ-ಪುಣ್ಯ ವಿಚಾರ, ಸುಖ-ದುಃಖ ವಿಚಾರದಷ್ಟು ಒಪ್ಪಿಗೆಯಾಗಿಲ್ಲ ಇನ್ನೂ. ಅನೇಕ ವಿಧದಿಂದ ತನ್ನ ಪೌರುಷವನ್ನೇ ಮೆಚ್ಚಿಕೊಂಡ ಇಂದಿನ ಜಗತ್ತು, ಕಷ್ಟದ ಹೊಣೆಯನ್ನು ಕಾಲ್ಪನಿಕ ದೇವನ ಮೇಲೆ ಹಾಕಲು ಹಿಂದೆಗೆಯುವುದಿಲ್ಲ.

" ಹುಟ್ಟಿಸಿದ ದೇವನವ ಹುಲ್ಲ ಮೇಯಿಸುವನೇ ?—
ಇಂತೆಂಬುದೆಲ್ಲ ಲೋಕ;
ಗಟ್ಟಯೇ ಈ ಮಾತು ? ಆ ಕಟುಕ ದೇವತಾ
ಬರಲೊಲ್ಲನೇಕೆ ಬೇಗ ? "

ಕಂಗಾಲ ಬಂಗಾಲಕ್ಕಾಗಿ ಕಳವಳಗೊಂಡ ಒಬ್ಬ ಕವಿ ಹೀಗೆ ಕೇಳಿದ್ದಾರೆ. ದೇವರು ಇದಕ್ಕೆ ಜವಾಬು ಕೊಟ್ಟ ವಿಷಯ ಇನ್ನೂ ತಿಳಿದಿಲ್ಲ. ಮುಂದಾಳುಗಳು ಇದಕ್ಕೆ ಜವಾಬ್ದಾರರಾಗಬೇಕು. ಅದರೆ—

" ಮುಂದಾಳುಗಳಾ ಇರುವಾ ಚೆಂದವು
ಹಿಂದಾಳುಗಳಾ ಬಲದಿಂದ ! "

ಹಿಂದಾಳುಗಳೇ ಬೇಜವಾಬ್ದಾರರಿದ್ದರೆ—ಅದರೆ ಹಾಗೆ ಅನ್ನುವದಾದರೂ ಹೇಗೆ ?—ಮತ್ತು ಮುಂದಾಳುಗಳಲ್ಲಿಯೂ ಚೇಳು, ಕೋಳಿ, ನರಿ-ಕುರಿ, ಎತ್ತು-ಕತ್ತೆ, ಸಿಂಗ-ಮಂಗ ಇವುಗಳ ಸದ್ಗುಣಗಳು ಇರಬೇಕೆಂದು ಅದೇ ಕವಿ ಹೇಳಿದ್ದಾರೆ. ಆದರೆ ಇದು ಕಷ್ಟದ ಕೆಲಸ. ಮಾನವರ ಸದ್ಗುಣಗಳೇ ಕಡಿಮೆ ಬೀಳುತ್ತಿರುವಾಗ, ಪಶುಗಳೊಳಗಿನ ಸದ್ಗುಣಗಳನ್ನು ಎಲ್ಲಿಂದ ತಂದಾರು ? ಹೀಗೆ ಹಿಂದಾಳು ಮುಂದಾಳು ಕಕ್ಕಾವಿಕ್ಕಿಯಾದಾಗ :

" ಜಗಂ ಝಳ್ಳು ಜಗಂ ಝಳ್ಳು,
ಹೊಡೆಯೊ ಡೊಳ್ಳು ಜಗಂ ಝಳ್ಳು.
ನೆಲದೆದೆಯನು ಬಿರಿಸುತ
ಒಡಲು ಪೊಳ್ಳು ನೆಲವು ಜಳ್ಳು
ಜಲವು ಸುಳ್ಳು ಹೊಡೆಯೊ ಡೊಳ್ಳು
ದುರಗವ್ವನ ನೆನೆಯುತ ! ॥

ಎಂದರೆ ಕವಿವಾಣಿ ಪ್ರಳಯಕ್ಕೆ ಆವ್ಹಾನಕೊಡುತ್ತಿದೆ. ' ರೋಗಿ ಬಯಸಿದ್ದು—ವೈದ್ಯ ಹೇಳಿದ್ದು ಕೂಡಿತು ' ಎಂಬ ಮಾತು ಇಲ್ಲಿ ಬೇರೆ ಅರ್ಥದಿಂದ ಕೂಡುತ್ತಿದೆ. ನುಗ್ಗಿ ಬರುವ ಪ್ರಳಯಕ್ಕೆ ಔತಣ ಬೇರೆ ಬೇಕೆ ? ಇದೇ ಕವಿ ' ಚೆನ್ನಿ ' ಎಂಬ ಒಂದು ಪದ್ಯದಲ್ಲಿ, ರಣಚಂಡಿಯ ಚಿತ್ರವನ್ನು ಕಂಡಿದ್ದಾರೆ:

" ತುಬಾಕಿ ಹಾರಿತು ಹುರಿದಾಡಿ
ಚೆನ್ನಿಯು ಬಿದ್ದಳು ಉರಿದಾಡಿ
ಕನ್ನಡ ನಾಡಿನ ಕೈವಾರಿ
ರಣದಲಿ ಮಡಿದಳು ಮೈತೂರಿ
ಮಡಿದಳೆನ್ನಬೇಕೋ ? ಚೆನ್ನೆಯು ಉಳಿದಳೆನ್ನಬೇಕೋ ?"

ಭೂತಕಾಲದ ಕಿತ್ತೂರ ಚೆನ್ನಮ್ಮನ ಚಿತ್ರ, ವರ್ತಮಾನ ಕಾಲದ ವಾಸ್ತವಿಕ ಆಶೆಯನ್ನು ಚಿತ್ರಿಸಲೋ ಎಂಬಂತೆ ಬಂದಿದೆ. ಸೌಮ್ಯಸುಂದರ ಚಿತ್ರ ಇಂದಿನ ವಾಸ್ತವಿಕತೆಗೆ ಬೇಕಾಗಿಲ್ಲ ಎಂದಲ್ಲ.

" ರಾಯರು ಬಂದರು ಮಾವನ ಮನೆಗೆ ರಾತ್ರಿಯಾಗಿತ್ತು.
ಬೆಳ್ಳಿಯ ಬಟ್ಟಲ ಗಸಗಸೆ ಪಾಯಸ ರಾಯರ ಕರೆದಿತ್ತು
ಭೂಮಿಗೆ ಸ್ವರ್ಗವೆ ಇಳಿದಿತ್ತು. "

ಕಂಟ್ರೋಲ ದಿವಸಗಳಲ್ಲಿ ' ಗಸಗಸೆ ' ಪಾಯಸ ಎಂದರೆ ಸಾಮಾನ್ಯವಾಯಿತೋ ? ' ಆದರೆ ಪಾಯಸಕ್ಕೆ ಸಕ್ಕರೆ ಎಲ್ಲೀದು?'

ಸುಖಕರವಾದ ವಸತಿ ! .... ರುಚಿಕರವಾದ ಊಟ !

ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ
ಸಮೀಪ, ' ಶಕ್ತಿ ಟಾಕೀಜ್ ' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ

ಸರಕಾರಮಾನ್ಯ ಪೂರ್ಣೋಗಿಕ ಶಿಕ್ಷಣ ಸಂಸ್ಥೆ

ಕರ್ನಾಟಕ

ಹೊಲಿಗೆಯ ವಿದ್ಯಾಲಯ, ಧಾರವಾಡ

ತುಸು ಅವಧಿಯ ವಿವಿಧ ವರ್ಗಗಳು. ಲಂಡನ್, ನ್ಯೂಯಾರ್ಕ್‌ಗಳ ಹೊಲಿಗೆಯ ಶಿಕ್ಷಣ ಸಂಸ್ಥೆಗಳ ನೇರವಾದ ಸಂಬಂಧವನ್ನಿಟ್ಟುಕೊಂಡ ಈ ವಿದ್ಯಾಲಯದಲ್ಲಿ ಶಿಕ್ಷಣ ಪಡೆಯುವದು ಒಂದು ಹೆಮ್ಮೆ. ಮಹಿಳೆಯರಿಗಾಗಿ ಕೈ-ಕಸೂತಿ, ಯಂತ್ರದ ಕಸೂತಿಗಳನ್ನು ಅತ್ಯಾಧುನಿಕ ಸಾಧನಗಳ ಸಹಾಯದಿಂದ ಕಲಿಸುವ ಏರ್ಪಾಡು ಇದೆ. ಶಿಕ್ಷಕರಾಗ ಬಯಸುವವರಿಗೆ ಶಿಕ್ಷಕಕೋರ್ಸು ಇದೇ ವರ್ಷದಿಂದ ಪ್ರಾರಂಭಿಸಿದೆ. ವಿಶೇಷ ವಿವರಗಳಗಳಿಗೆ ಎರಡಾಣೆ ಅಂಚೆ ಟಿಕೀಟು ಇಟ್ಟು ಇಂದೇ ಬರೆಯಿರಿ, ಇಲ್ಲವೆ ಪ್ರತ್ಯಕ್ಷ ಭೆಟ್ಟಿಯಾಗಿರಿ.

ಹೊಲಿಗೆಯ ವಿಷಯದ ಬೇರೆ ಬೇರೆ ಭಾಷೆಗಳ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ. ಇದೇ ವಿದ್ಯಾಲಯದ ಪ್ರಿನ್ಸಿಪಾಲರಿಂದ ಬರೆಯಲ್ಪಟ್ಟ 'ಸೂಚಿಶಿಲ್ಪಕಲೆ' ಎಂಬ ಪುಸ್ತಕ, ಸರಕಾರದಿಂದ ಪಠ್ಯಪುಸ್ತಕವೆಂದು ಮಂಜೂರಾದದು ಇಲ್ಲಿಯೇ ದೊರೆಯುತ್ತದೆ.

ಎಂಬುದು ವಿಚಾರಣೆಗೆ ಈಡಾದರೆ 'ಭೂಮಿಯೆ ಸ್ವರ್ಗಕ್ಕೇರಿತ್ತು' ಎಂಬ ಸಾಲನ್ನು ಸೇರಿಸಬೇಕಾದೀತು. ನರಸಿಂಹ ಸ್ವಾಮಿಯವರ ಕೌಟುಂಬಿಕ ವಾಸ್ತವಿಕ ಆಶೆಗಳ 'ಮೈಸೂರ ಮಲ್ಲಿಗೆ'ಯ ಪದಗಳು ಸ್ವಾಭಾವಿಕವಾಗಿಯೇ ಜನಪ್ರಿಯವಾಗಿವೆ.

" ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು
ಚೆಂದ ನಿನಗಾವುದೆಂದು ?
ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ
ಎಂದೆನ್ನ ಕೇಳಲೇಕೆ ?
ಎನ್ನರಸ ಸುಮ್ಮನಿರಿ ಎಂದಳಾಕೆ ! "

ಕನಸಿನೊಳಗಿನ ಹಾಡಿಗೆ ಮನಸಿನೊಳಗಿನ ಉತ್ತರ ಸರಿಯಾಗಿದೆ. ಆದರೆ ಇಂದಿನ ವಾಸ್ತವಿಕತೆ ಇಂತಹ ಸೌಮ್ಯತನವನ್ನು ಬಹಳ ಸಹಿಸುವುದಿಲ್ಲ. ಚಿಕ್ಕನುಕ್ಕಳ ನಗೆಯ ಕಲ್ಪನೆಯೇ ಒಬ್ಬ ಕವಿಯನ್ನು ಸಿಟ್ಟಗೆಬ್ಬಿಸಿದೆ :

" ಹುಟ್ಟದೊಡನೆ ಮಕ್ಕಳೆಲ್ಲ ನಕ್ಕುನಲಿಯೆ ಶಕ್ಯವಿಲ್ಲ.
ಎಂತಹದು ? ಯಾರದಿದು ? ಯಾತಕ್ಕಿದು ನಿತ್ಯಶಾಪ |
ಅಳುವೆ ಬಾಳ ನೊವಲ ಗಾನ ! ಸ್ತ್ರೀ-ಪುರುಷರ ಅಧರಪಾನ
ಆ ಮನುವಿನ ಮೊದಲ ಶಾಪ ! "

ಇಷ್ಟೇಅಲ್ಲ :

" ನೋವೆ ಬಾಳನಲ್ಲಿ ಸ್ಥಿರ ! ನೋವನೊಡ್ಡಿ ಕರೆವ ಹರೆ
ನೋವೆ ಜ್ಞಾನದುದಯವು ! ನೋವೆ ದೇವರದಯವು ! "

ಈ ವಾಸ್ತವಿಕ ಸೃಷ್ಟಿಯಲ್ಲಿ ದೇವರ ದಯೆಯನ್ನು ಕೋರುವುದ ಸುಖದ ಕೆಲಸವೇನೂ ಅಲ್ಲ. ಇದೇ ಕವಿ ವಿಧವೆಯರ ಗೋಳನ್ನು ಕಂಡು

" ಗಂಡನಳಿದಿಹ ಕನ್ಯೆಯಾಗೆನ್ನ ಮನದನ್ನೆ ! "
ಈ ಮರಣ ಮೌನ ಸಾಕೆ, ಇಂಥವಳು ವಿಧವೆಯೇಕೆ ? "

ಎನ್ನುತ್ತಾರೆ.

ವಾಸ್ತವಿಕ ಕರುಣೆಯು ಹೀಗೆ ಉದಾರವಾದರೆ, ಮಾಂಗಲ್ಯಕ್ಕೆ ಅಳಿಗಾಲವೇ ಇಲ್ಲವೆಂದು ಹೇಳಬೇಕು. ಹೆಂಗುಸರ ಬಗ್ಗೆ ಇಂದಿನ ವಾಸ್ತವಿಕದೃಷ್ಟಿ ಅತಿ ಸೌಮ್ಯವಾದಿಯದಾಗಿದೆ. ಒಬ್ಬ ಕವಿ :

" ಹೆಂಡತಿಯಾಗುವ ಹೆಂಗಸೇ ಕೇಳ " ಎಂದು ಒಂದು ಕವನ ಬರೆದು, ಅನ್ಯಾಯವಾದೀತು ಎಂದು ತಟ್ಟನೆ 'ಗಂಡನಾಗುವ ಜಾಣನಿಗೆ ಸರಿಮಿಗಿಲು ತೂಕದ ಉಪದೇಶವನ್ನೂ ತಾತ್ಕಾಲ ಮಾಡಿದ್ದಾರೆ

ಭಾರತದ ಬಿಡುಗಡೆಯ ಹೋರಾಟವೂ, ವಿಶ್ವಬಾಂಧವ್ಯವನ್ನು ಸಾರುವ ಮತಗಳ ಕಾದಾಟವೂ, ಕವಿತೆಗೆ ವಿಷಯಗಳಾಗದೆ ಹೋಗಿಬಿಟ್ಟಾವು ? ಶ್ರೀಧರ ಮತ್ತು ಅಡಿಗರ ಧೀರೋದ್ಧತ ದರ್ಪದ ಕವನಗಳು ಉತ್ಸಾಹವನ್ನು ಉಕ್ಕಿಸಿದರೆ, 'ಕಲಕತ್ತೆಯಲ್ಲಿ ಕಾಳಿ' ಎಂಬ ಒಂದು ಪದ್ಯದಲ್ಲಿ ಕವಿ ಎನ್ನುತ್ತಾರೆ :—

" ಕ್ರಿಸ್ತ ಬುದ್ಧರು ತನ್ನ ಅವತಾರವಿಂದು ಕೃತ-
ಕೃತ್ಯವಾಯ್ತೆಂದು ಹಿಗ್ಗಿದರು, ನಮ್ಮೀ ಗಾಂಧಿ
ವರುಷ ವರುಷದ ತನ್ನ ತಪಕೆ ಬರೆದಿದೆ ಸಿದ್ಧಿ
ಎಂದು ತಣಿದನು, ನೆತ್ತರಲ್ಲಿ ಬರೆದಿದೆ ನೋಡಿ-
ದೇವ ಮೌನವ ಕುಲದ ಅವತಾರ ಸೂಚನೆಯು
ಮನುಕುಲದ ಅಂತಿಮ ವಿಮೋಚನೆಯ ಯೋಚನೆಯು ! "

ವೇತಾಳ ಮೂಲಪದಕ್ಕೆ ಬಂದಂತಾಯಿತು. ಇಂದಿನ ವಾಸ್ತವಿಕತೆ–ತನ್ನೊಂದು ನೋಟದಲ್ಲಿದ್ದ–ಸೃಷ್ಟಿಗಿಂತ ಪ್ರಳಯವನ್ನೆ ಕಾಣುತ್ತಿದೆ. ಕೊಲೆ, ಬರಗಾಲ, ಭೂಕಂಪ, ಯುದ್ಧ, ಸ್ತ್ರೀಯರ ಅಪಹರಣ, ದೇಶತ್ಯಾಗ, ದೇಶವಿಭಜನೆ, ವಿಶ್ವದ ಅಶ್ವಮೇಧ ಇವೆಲ್ಲ ದಿನಪತ್ರಿಕೆ ಸೂರುವ ಸುದ್ದಿಗಳಾದರೆ, ಹಾಡಿನ ರಾಗ ನೀಲಾಂಬರಿಯಾದರೆ ಏನು ಆಶ್ಚರ್ಯ ?

ಇಂದಿನ ವಾಸ್ತವಿಕತೆಯು ಇನ್ನೊಂದು ವಿಕಾರವೆಂದರೆ ವಿಡಂಬಕ ಶೈಲಿ. 'ಕೊರವಂಜಿ'ಯೊಳಗಿನ ಅಣಕು-ಕೆಣಕುನಾಡುಗಳು ಏನೇ ಇರಲಿ, ಕವಿಗಳೇ ಒಬ್ಬೊಬ್ಬರಿಗೆ ಕೆಣಕಾಡುವಂತೆ ಆತ್ಮನಿರ್ಭರ್ತ್ಸನೆಯನ್ನು ಮಾಡಿಕೊಂಡಂತೆ, ಕಟಕಿ-ಮೂದಲಿಕೆಗಳಿಂದ ಕಾವ್ಯಗಳನ್ನು ತುಂಬುತ್ತ ಹೋದರೆ ಹೇಗೆ? ರೂಪರತಿಯ ಶೃಂಗಾರಕ್ಕಿಂತ ವಿರೂಪಶೆಯ ಬೀಭತ್ಸವೇ ಸರಸಕ್ಕೆ ಸಮೀಪವೆನಿಸುತ್ತದೆ ಕೆಲವು ಕವಿಗಳಿಗೆ. ಅದನ್ನು ಉದಾಹರಣೆಗೆಂದು ಕೊಡುವುದು

ಒಳ್ಳೇ ಉದಾಹರಣೆಯಾಗಲಾರದು. ಇಂದಿನ ಜೀವನದ ವಿಷಮ-ಸ್ಥಿತಿಯು ಶ್ರೀ ಡಿ. ವ್ಹಿ. ಗುಂಡಪ್ಪನವರಿಂದ '**ಮಂಕುತಿಮ್ಮನ ಕಗ್ಗ**'ವನ್ನು ಬರೆಯಿಸಿದೆ. ಕಾವ್ಯ ಮುಗಿಸುವ ಹೊತ್ತಿಗೆ—ಭಾವೀ ತೋಡಿದಲ್ಲಿ ಬೇತಾಳ ಹೊರಟಂತೆ—ಚೊಕ್ಕವಿಚಾರಗಳ ಚಿಕ್ಕ ಮಾತುಗಳೊಳಗಿಂದ ಸಂದೇಹ ತಲೆಯೆತ್ತಿದೆ:

" ಸಂದೇಹವೀಕೃತಿಯೊಳಿಂದಿಲ್ಲನೆಂದಲ್ಲ,
ಇಂದು ನಂಬಿಹುದೆ ಮುಂದೆಂದು ಅಲ್ಲ!
ಕುಂದು ತೋರ್ದಂದದನು ತಿದ್ದಿ ಕೊಳೆ ಮನಮುಂಟು
ಇಂದಿಗೀ ಮತ ಉಚಿತ! ಮಂಕುತಿಮ್ಮ,"

ನಿಜವಾದ ಮಂಕುತಿಮ್ಮರಿಗೆ ಈ ಸಂದೇಹದ ಔಚಿತ್ಯ ತಿಳಿಯುವುದು ಕಷ್ಟ; ತಿಳಿದರೂ ತಮ್ಮ ಆಚರಣೆಯಲ್ಲಿ ಒಪ್ಪಿಗೆಯಾಗುವುದು ಕಷ್ಟ. ಸಂದೇಹಗಳ ಸಮತೂಕಕ್ಕಿಂತ ಅಸಿಮೀಸಿ ನೋಡದ ಸಾಹಸವೇ ಲೇಸೆಂಬುದೀ ಕಾಲ. '**ನುಗ್ಗು ಮುಂದಕೆ**' ಎಂಬುದೇ ಇದರ ಪಲ್ಲವಿ. '**ಕೋಗಿಲೆ**' ಮತ್ತು '**ಸೋವಿಯೆಟ್ ರಸಿಯಾ**' ಎಂಬ ಶ್ರೀ. ಕುವೆಂಪುರವರ ಕಾವ್ಯಸಂಗ್ರಹದಲ್ಲಿ ಇಂದಿನ ವಾಸ್ತವಿಕತೆಯ ಮುಖ-ಪ್ರತಿಮುಖಗಳು ಚೆನ್ನಾಗಿ ಒಡಮೂಡಿವೆ.

" ಕನ್ನಡ ನಾಡಿನ ಸಂಪತ್ತಿನ ನೆಲ
ಕ್ಕಿಶನ ಬಡತನ ಮಾತ್ರ ಸುನಿಶ್ಚಲ "
ಎಂದು ಅವರು ಹೇಳದೇ ಏನೂ ಇಲ್ಲ, ಆದರೆ
" ನೋವು ಸಾವು, ಏನೆ ಇರಲಿ
ಸೃಷ್ಟಿ ಮುಖ ಪರಮ ಸುಖ! "

ಏಂಟ ಕವಿವಾಣಿಯನ್ನನ್ನು ಮಿಡಿದಿದ್ದಾರೆ. '**ತನ್ನೆದು ಕಲೆಗಾಗಿ ಕಲೆ ಅಲ್ಲ!**' '**ಕಲೆಯೆಂದು ಹೊಗಳುವಡೆ ಕೋಟಿ ಧಿಕ್ಕಾರ!**' ಎಂದು ಸಾರಿದ್ದಾರೆ.

ವಾಸ್ತವಿಕತೆಯ ಎರಡು ಪ್ರಕಾರಗಳನ್ನು ಹೋಲಿಸಿ ನೋಡುವುದಾದರೆ, ಶ್ರೀ. ಕುವೆಂಪುರವರ '**ಗಣೇಶಗಾಥೆ**'ಯೊಡನೆ ಶ್ರೀ. ಪು. ತಿ. ನರಸಿಂಹಾಚಾರರ '**ಗಣೇಶದರ್ಶನ**'ವನ್ನು ಓದಿ ನೋಡಬೇಕು. ಕಾವ್ಯ ಮತ್ತು ವಾಸ್ತವಿಕತೆಗಳು ಒಂದನ್ನೊಂದು ಹಿಮ್ಮೆಟ್ಟಿಸಿ, ತನ್ನ ವಾಚ್ಯ ದೊಳಗಿಂದ ಇನ್ನೊಂದರ ಧ್ವನಿಯನ್ನು ಮೂಡಿಸುತ್ತವೆ ಎಂದು ಹೊಳೆಯುವುದು. ಶ್ರೀ. ಪು ತಿ ನರಸಿಂಹಾಚಾರ್ಯರ '**ವಿಕಟ ವಿಜಯ**'ದಲ್ಲಿ ವಿಜಯ ಪಡೆದದ್ದು ವಾಸ್ತವಿಕತೆಯೋ? ಸಾಹಿತ್ಯವೋ? ಹೇಳುವುದು ಕಷ್ಟ. ಶ್ರೀ ಮಾಸ್ತಿಯವರ '**ಮಲಾರ**'ದ ಸುನೀತಗಳಲ್ಲಿ ಶ್ರೀ ಗೋಕಾಕರವರ ಸಮುದ್ರಗೀತಗಳ ಮುಕ್ತಛಂದದಲ್ಲಿ ಶ್ರೀ. ವಿ. ಸಿ ಯವರ 'ಅಭಿ' 'ಕಸ್ಮೈ ದೇವಾಯ' ಮೊದಲಾದ ಕವನಗಳಲ್ಲಿ ವಾಸ್ತವಿಕದ ದರ್ಶನೋದ್ದೀಪಿತವಾದ ಉತ್ತಮ ಕಾವ್ಯ ಕಲೆಯೆತ್ತಿದೆ. ವಾಸ್ತವಿಕತೆ ಇಂದಿನ ಕನ್ನಡಕಾವ್ಯವನ್ನು ತನ್ನ ಉದ್ದೀಪನದಿಂದ ಪ್ರಜ್ವಲಿಸುವಂತೆ ಮಾಡಿದೆ— ಎಂದರೆ ತಪ್ಪಾಗಲಾರದು. ನಮ್ಮ ಧರ್ಮಚಕ್ರಧ್ವಜ ಬಾಳನ್ನು ವಕ್ರವಾಗಿಸಲಾರದು— ಎಂದು ಪು. ತಿ. ನ. ಆಶಿಸಿದ್ದರೆ, ಶ್ರೀ. ಕುವೆಂಪುರವರ ಕವಿವಾಣಿ—

"ಮೃತ್ಯುರೂಪಿ ನೀನಮೃತ ರೂಪಿ
ನೀನಖಿಲ ಜನ್ಮದಾತೆ—
ನಿನ್ನ ಕೃಪೆಯಿಲ್ಲದಿದ್ದರಿಮಗೆಲ್ಲಿ
ಮುಕ್ತಿ ಜಗನ್ಮಾತೆ."

ಎಂದು ಪ್ರಾರ್ಥಿಸಿದೆ. ಇಂದಿನ ಕನ್ನಡ ಕವಿತೆಯಲ್ಲಿ ವಾಸ್ತವಿಕತೆಯ ಭಯ ಜುಗುಪ್ಸೆಯ ಆ ತುದಿಯಿಂದ, ಭಯ-ಭಕ್ತಿಯ ಈ ತುದಿಯ ವರೆಗೆ ಎಲ್ಲ ಸಪ್ತಕಗಳಲ್ಲಿಯೂ ಕನ್ನಡದ ಕೈ ಆಡಿದೆ, ಧ್ವನಿ ಮಾಡಿದೆ— ಎಂದು ಹೇಳಬಹುದು.

ZANDU

PROTOCASEN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons

Chemists, Druggists
Station Road. HUBLI

(H. O. Bangalore City

ಮರೆವು

[ಹರಟೆ]

" ನವಗಿರಿನಂದ " ಮದ್ರಾಸು

★

ದೇವರು ಈ ಸೃಷ್ಟಿಯಲ್ಲಿ ಅನೇಕ ವಸ್ತುಗಳನ್ನೂ ಭಾವಗಳನ್ನೂ ನಿರ್ಮಾಣ ಮಾಡಿದ್ದಾನೆ. ಮಾನವ ಜೀವನದಲ್ಲಿ ಅವು ಸಂದರ್ಭಾನುಸಾರ ಉಪಕಾರಕವೂ ಆಗ ಬಲ್ಲವು; ಅಪಕಾರಕವೂ ಆಗ ಬಲ್ಲವು. ಮರೆವಿನ ರೀತಿಯೂ ಹೀಗೆಯೆ ಸರಿ!

★

ಇದನ್ನು ಬರೆಯಬೇಕೆಂದು ನಾನು ಯೋಚಿಸಿದ್ದೇ ಅಲ್ಲ; ಬೇರೆ ಏನೋ ಒಂದು ಒಳ್ಳೆಯ ವಿಷಯ ಬರೆಯಬೇಕೆಂದು, ನಿನ್ನೆ ಮಧ್ಯರಾತ್ರಿ ನನ್ನ ತಲೆಯೊಳಗೆ ಮಿಂಚಿತ್ತು. ಈಗ ತಲೆಕೆರೆದು ಎಷ್ಟು ಯೋಚನೆ ಮಾಡಿದರೂ ನೆನಪಾಗುವುದಿಲ್ಲವದು. ಈ ಮರೆವಿನ ಆಪತ್ತಿಗಾಗಿಯೇ ನಾನು ರಾತ್ರಿ ಮಲಗುವಾಗ, ಒಂದು ತುಂಡು ಕಾಗದ-ಪೆನ್ಸಿಲು ನನ್ನ ತಲೆಯಡಿಯಲ್ಲಿಯೇ ಇಟ್ಟುಕೊಂಡು ಮಲಗುವುದು. ರಾತ್ರಿ ನೆಮ್ಮದಿಯಾಗಿ ಮಲಗಿರುವಾಗಲೇ, ಬರೆಯುವ ವಿಷಯವೇನಾದರೂ ನನ್ನ ತಲೆಯೊಳಗೆ ಹೊಳೆಯುವುದು ವಾಡಿಕೆ. ಹೊಳೆದೊಡನೆ ಕತ್ತಲೆಯಲ್ಲೇ ಆ ವಿಷಯವನ್ನು ಕಾಗದದಲ್ಲಿ ಗೀಚಿಕೊಂಡು ನಿಶ್ಚಿಂತೆಯಿಂದ ಮಲಗಿಬಿಡುತ್ತೇನೆ. ನಿನ್ನೆ ಕಾಗದ-ಪೆನ್ಸಿಲು ಮರೆತು ಮಲಗಿದ್ದೇ ಈ ಮರೆವಿಗೆ ಕಾರಣವಾಯಿತು.

ಈ ಮರೆವು ಮನುಷ್ಯರಿಗೆ ಮಾತ್ರ ಯಾಕೆ ಅಂಟಿಕೊಳ್ಳುತ್ತೊ? ಎಷ್ಟು ಉಪದ್ರವವಿದು! ಯೋಚನೆ ಮಾಡಿದರೆ, ಎಷ್ಟೋ ಅಳಿದು ಹೋದ ಅಮೂಲ್ಯ ವಸ್ತುಗಳಲ್ಲಿ, ಎಷ್ಟೋ ಮೇಧಾವಿಗಳಿಗೆ ಹೊಳೆದ ಎಷ್ಟೋ ಅಮೂಲ್ಯ ಭಾವಮುತ್ತುಗಳೂ ಈ ಮರೆವಿನಿಂದ ಹಾರಿ ಹೋಗಿರಬಹುದೇನೋ ಎಂದು ನೆನೆಯುವಾಗ, ನನ್ನ ಮೈ ಜುಮ್ಮೆನ್ನುತ್ತಿದೆ!

ಈ ಮರೆವಿನಿಂದ ಉಪಕಾರವೇನಾದರೂ ಇದೆಯೋ? ..... ಇದೆ, ಅದೂ ಇದೆ; ತುಂಬಾ ಇದೆ! ನಾನು ರಾಮೂನ ಕೈಯಿಂದ ೫ ರೂಪಾಯಿ ಸಾಲ ಕಕ್ಕೊಂಡು, ಸಂಬಳ ಬಂದ ಕೂಡಲೆ ತಿನೆಯ ಕಾರೀಮಿಗೆ ಖಂಡಿತ ಕೊಡುವೆನೆಂದು ಹೇಳಿದ್ದೆ; ನೆನಪೂ ಇತ್ತು. ಅವನಿಗೆ ಕೊಡಲಿಕ್ಕೆ ಮಾತ್ರ ಸಾಧ್ಯವಾಗದೆ ಹೋಗಿ, ೧೫ ದಿನ ತಾಳಿದ ಮೇಲೆ ಕೊಟ್ಟೆ. ಆಗ, ಹೇಳಿದ ಮಾತಿಗೆ ತಪ್ಪಿದ ಅಪರಾಧವನ್ನು ಮುಚ್ಚಿಕೊಳ್ಳಲಿಕ್ಕಾಗಿ " ಮರೆತೇ ಹೋ ಯಿ ತು ಮಾರಾಯಾ! " ಎಂದಿದ್ದೆ. ಮರೆವು ನನ್ನ ಮರ್ಯಾದೆಯನ್ನು ಕಾಪಾಡಿತ್ತು.

ನಾನು ಮನೆಯಿಂದ ಪೇಟೆಗೆ ಹೊರಡುವಾಗ ನನ್ನ ಹೆಂಡತಿಯೂ ಮಗಳೂ ' ಇದುಬೇಕು, ಅದುಬೇಕು ' ಎಂದು ಎಂಟಾರು ವಸ್ತುಗಳನ್ನು ತರಹೇಳುವರು. ಅಷ್ಟೆಲ್ಲಾ ತರಲು ದುಡ್ಡಿಗೆಲ್ಲಿ ಹೋಗಲಿ? ಸಾಧ್ಯವಿದ್ದಷ್ಟು ತರುವುದು, ಅಥವಾ ತಾರದೆಯೇ ಇರುವುದು; ಮನೆಗೆ ಬಂದು ' ಅಯ್ಯೋ! ಮರೆತೇ ಹೋಯಿತು! ' ಎಂದು ತಪ್ಪಿಸಿಕೊಂಡು ಬಿಡುವುದು.

ಕೆಲಸದಾಳುಗಳು ಕೂಡ ಉದಾಸೀನದಿಂದ ಕೆಲಸಗಳ್ಳರಾಗಿದ್ದು, ಯಜಮಾನನು ಗದರಿಸಿದಾಗ ' ಮರಿತುಹೊಯ್ತು ಸ್ವಾಮೀ, ಕ್ಷಮಿಸಿ! ' ಎಂದು ಕೆಂಜುವಾಗ, ಒಡೆಯನ ಸಿಟ್ಟು ಅರ್ಧಕರ್ಧ ಶಾಂತವಾಗುತ್ತದೆ. ' ಮರೆವು ' ಎಂದಲ್ಲಿ ಕ್ಷಣಮಾತ್ರ ಮುಂದ ಮಾರುತ ಸ್ವಲ್ಪವೋ ತುಂಬವೋ ಉಂಟೇ ಉಂಟು. ಆದರೆ ಮಾತುಮಾತಿಗೆ ' ಮರೆತೆ-ಮರೆತೆ ' ಎಂದರೆ, ಅವನಿಗೆ ' ದಡ್ಡ, ' ಸೋಮಾರಿ ' ' ಬೆಪ್ಪು ತಕ್ಕಡಿ ' ಮೊದಲಾದ ಬಿರುದುಗಳು ಕೂಡಿಕೊಳ್ಳುತ್ತವೆ.

ನಾನು ಕೆಲವರಿಗೆ ' ಕೈಸಾಲ ' ಕೊಟ್ಟದ್ದುಂಟು; ಕೆಲವರಿಂದ ಪಡೆದದ್ದೂ ಉಂಟು. ' ಕೈಸಾಲ ' ಎಂದರೆ, ನೆನಪಿನಲ್ಲಷ್ಟೇ ಇರುವ ಚಿಲ್ಲರೆ ಸಾಲ—ಎಂದು ತಾನೇ ಅರ್ಥ? ನನ್ನಿಂದ ಸಾಲಪಡೆದ ಒಬ್ಬಿಬ್ಬರ ಮರೆವು ಬಹಳ ವಿಚಿತ್ರ. ಆ ಚಿಲ್ಲರೆ ಸಾಲ ಅವರಿಗೆ ನೆನಪೇ ಇರುವುದಿಲ್ಲ. ಕೇಳಿದರೆ " ಅಯ್ಯೋ! ಮರೆತೇ ಹೋಯಿತು. ಈಗ ಚಿಲ್ಲರೆ ಇಲ್ಲವಲ್ಲಾ! ನಾಳೆ ಖಂಡಿತ ಕೊಡುತ್ತೇನೆ!" ಎನ್ನುತ್ತಾರೆ. ' ನಾಳೆ ' ಮರೆತೇ ಬಿಡುತ್ತಾರೆ. ನಾನೂ ' ಅಲ್ಪ ಕ್ಕೆ ಮತ್ತೂ ಕೈಹಾಕಲು ದಾಕ್ಷಿಣ್ಯಪಟ್ಟು ಕೇಳುವುದೂ ಇಲ್ಲ. ಹೀಗೆ ಎಷ್ಟೋ ಹೋಗಿದೆ. ಆದರೆ, ಅವರಿಗೆ ಯಾರಾದರೂ ಚಿಲ್ಲರೆ ಸಾಲ ಕೊಡುವುದಿದ್ದರೆ, ಆಣೆ-ಪೈ ಮೊದಲಾಗಿ ಒಳ್ಳೇ ನೆನಪಿರುತ್ತದೆ. ಇಂತಹರ ಮರೆವಿಗೆ ಏನು ಹೇಳಬೇಕು? ' ಸ್ವಾರ್ಥದ ಮರೆವು ' ಎನ್ನದೆ ಮತ್ತೇನು ಹೇಳಲಿ? ಪಾಪ! ತಮ್ಮ ತಪ್ಪನ್ನು ಆದರ ಮೇಲೆ ಸರಿಸಿ ಮನುಷ್ಯರು ತಪ್ಪಿಸಿಕೊಳ್ಳುವುದನ್ನು ನೋಡುವಾಗ, ಮರೆವಿನ ಬಗೆಗೆ ' ಅಯ್ಯೋ ಪಾಪ ' ಎನಿಸುತ್ತದೆ. ಇನ್ನು ಅದು ಮಾಡುವ ಚೇಷ್ಟೆಗಳನ್ನು ನೋಡಿದರೋ ' ಅಬ್ಬಾ! ಇದರ ತಂಟೆ ತನವೆ! ' ಎಂದು ನಗುವಿನೊಂದಿಗೆ ಸಿಟ್ಟೂ ಬರುತ್ತದೆ.

' ದಾನ ಮಾಡಿದವನು ಮಾಡಿದ ದಾನವನ್ನು ಮರೆಯಬೇಕು; ಪಡೆದವನು ಮರೆಯಬಾರದು! ' ಎಂದು ಈ ಮರೆವಿಗೆ ನೀತಿಯ ಕಟ್ಟು ಬೇರೆ ಉಂಟು. ಅನುಭವದಲ್ಲಿ ಇದು ತೀರ ತಿರುಗುಮುರುಗು!

ತಾನು ಕೊಟ್ಟದ್ದನ್ನು ಪಡೆದವನಿಗೆ ನೆನಪು ಬರಿಸಿಯೇ ಅವನಿಂದ ಪ್ರತ್ಯುಪಕಾರವನ್ನು ಪಡೆಯಬೇಕಾಗುತ್ತದೆ.

ಒಟ್ಟಾರೆ ಮರೆವಿನಿಂದ ತುಂಬಾ ಉಪಯೋಗ ಉಂಟು. ಅದರಲ್ಲಿಯೂ ನೆನಪಿದ್ದೂ ಹುಟ್ಟಿಸುವ ಸುಳ್ಳುಮರೆವು ತುಂಬಾ ಉಪಕಾರಿ.

ನಿಜವಾದ ಮರೆವು ಬಹಳ ಚೇಷ್ಟೆಯ ಗುಣವುಳ್ಳದ್ದು. ಬಹಳ ವಸರದವರೂ, ಯಾವುದಾದರೂ ಒಂದೇ ಕಾರ್ಯಾಲೋಚನೆ ಯಲ್ಲಿ ತುಂಬಾ ಮಗ್ನರಾಗುವವರೂ ನಿಜವಾದ ಮರೆವಿನ ಅಚ್ಚು ಮೆಚ್ಚಿನ ಗೆಳೆಯರು. 'ಮರೆವು ಅವರೊಳಗೊ, ಅವರು ಮರೆವಿ ನೊಳಗೊ?' ಎಂಬುದೇ ತಿಳಿಯದಷ್ಟು ಗೆಳೆತನ ಅವರದು. ಇವರ ವಿಷಯ ಎಷ್ಟೋ ತುಂಡುಹಾಸ್ಯಗಳನ್ನು ನೀವು ಓದಿರಬಹುದು; ಕೇಳಿರಬಹುದು. ನಾನು ಬಲ್ಲೆ. ಆದರೆ ಪುನಃ ಹೇಳಿ ನಿಮ್ಮನ್ನು ಬೇಸರಿಸೋಣದೆಂದರೆ, ಎಲ್ಲಾ ಈಗ ಮರೆತು ಹೋಗಿವೆ.

ಪತ್ರಿಕೆಗಳಲ್ಲಿ 'ಟಾನಿಕ್ಕು' ಮೊದಲಾದ ಔಷಧಿಗಳ ಜಾಹೀರಾತಿ ನಲ್ಲಿ '.....ಮರೆವು; ನಿದ್ದೆಗೇಡು ಮೊದಲಾದ ನರಗಳ ದುರ್ಬಲ-ತೆಗೆ.....' ಎಂದು ಓದಿದಂತೆಯೂ, ಯಾರೋ ಡಾಕ್ಟರೋ ವೈದ್ಯಾನಿಕರೋ, 'ಮರೆವೆಂಬುದೊಂದು ಮನೋರೋಗ' ವೆಂದಂತೆಯೂ ನೆನಪಿಗೆ ಬರುತ್ತದೆ. ಮರೆವಿಗೆ ವಿರುದ್ಧವಾದ 'ಜ್ಞಾಪಕ'ಕ್ಕೆ 'ಜ್ಞಾಪಕಶಕ್ತಿ' ಎಂದೂ ಹೇಳುತ್ತಾರೆ. ಶಕ್ತಿ-ವರ್ಧನೆಯಿಂದ ಮರೆವು ಹೆಚ್ಚುವುದು ಎಂದು ತತ್ತ್ವಜ್ಞ. ರೋಗಿಗಳಿಗೆ ಮರೆವು ಜಾಸ್ತಿ; ನಿದ್ದೆಗೂ ಮರೆವಿಗೂ ನಿಕಟ ಸಂಬಂಧ; ಅರೆನಿದ್ದೆ ಅರೆಮರೆವು. ಪೂರ್ಣನಿದ್ರೆಯಲ್ಲಿ ಕಾಣುವ ಕೆಲವು ಕನಸುಗಳು ಎಚ್ಚರದಲ್ಲಿ ಮರೆತು ಹೋಗುತ್ತವೆ. ಕೆಲವು ವಿಷಯ ನಾವು ಮರೆಯಬೇಕೆಂದು 'ಭಗೀರಥ' ಪ್ರಯತ್ನ ಪಟ್ಟರೂ ಮರೆಯಲಾಗುವುದೇ ಇಲ್ಲ. ಮರೆಯಬೇಕೆಂಬುದನ್ನು ಮರೆಯಲಾಗುವುದಿಲ್ಲ; ಮರೆಯಬಾರದೆಂಬುದು ಮರೆತೇ ಹೋಗುತ್ತದೆ. ಅದೇನು ವಿಚಿತ್ರವೊ! ಪ್ರೇಮಭಂಗದ ವೇದನೆ, ಅವಮಾನದ ನೋವು, ಮುಳುಗಿ ಹೋದ ಹಣ ಇತ್ಯಾದಿಗಳೆಲ್ಲ ನಮಗೆ ಸದಾ ನೆನಪಿರುತ್ತವೆ. ಈ ಹಾಳು ನೆನಪಿನಿಂದ ಪ್ರಕೃತ ಬೇಕಾದ ಕೆಲಸಗಳೇ ಮರೆತು ಹೋಗುತ್ತವೆ.

ಈ ಮರೆವಿನ ವಿಚಿತ್ರವಾದ ಬಲೆಯಲ್ಲಿ ಕಾಲ್ತೊಡಕಿಕೊಳ್ಳದ ಮನುಷ್ಯನೇ ಇಲ್ಲ. ಇದರಿಂದ ತಪ್ಪಿಸಿಕೊಳ್ಳಲು ಎಷ್ಟೆಷ್ಟೋ ಉಪಾಯಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಇದರ ಹಾಳು ಚೇಷ್ಟೆಯನ್ನು ನೋಡಿದರೆ, ಇದು ಮನುಷ್ಯಜನ್ಮಕ್ಕೊಂದು ಶಾಪದಂತಿದೆ....ಛೇ, ಹೀಗೆನ್ನಬಾರದು. ಸ್ವಾರ್ಥವನ್ನು ಸಾಧಿಸಿಕೊಳ್ಳಬಹುದಾದ ಅದರ ಅನೇಕ ಉಪಕಾರಗಳನ್ನು ಮರೆತು ಹಾಗೆಂದೆ. ಅದು ಮನ್ನಿಸಲಿ!

'ಮರೆವು' ಶಾಪವಲ್ಲ, ದೇವರ ವರಪ್ರಸಾದ. ದೇವರು ಮನುಷ್ಯರ ಪೂರ್ವಜನ್ಮಗಳ ಸುಕೃತ-ದುಷ್ಕೃತಗಳ ಪಟ್ಟಿಯನ್ನು ತಾನೇ ಇಟ್ಟುಕೊಂಡು, ಅವುಗಳ ನೆನಪು ಬಾರದಂತೆ ಮರೆವು-ತರದೆಯನ್ನು ಹಿನ್ನೆಲೆಯಲ್ಲಿಟ್ಟು ಮನುಷ್ಯರನ್ನು ಹುಟ್ಟಿಸಿರುತ್ತಾನೆ. ಈ ಪೂರ್ವಜನ್ಮಗಳ ನೆನಪಿರುತ್ತಿದ್ದರೆ, ಮನುಷ್ಯರ ಬಾಳುವೆ ಹೇಗಿರಿಯಾಗಿ ಸಾಗೀತೆ? ನಮ್ಮ ಈ ಜನ್ಮದಲ್ಲೇ ನಾವು ಮಾಡಿದ್ದೆಲ್ಲಾ ಯೋಚನೆ ಮಾಡಿ ನೋಡಿದರೆ, ಒಳ್ಳೆಯದಕ್ಕಿಂತಲೂ ಕೆಟ್ಟುದೇ ಹೆಚ್ಚಲ್ಲವೆ? ಆ ಕೆಟ್ಟುದನ್ನೆಲ್ಲಾ ಮರೆತುಬಿಡಬೇಕೆಂದು ನಾವು ಎಣಿಸುವೆವಲ್ಲವೆ? ಹಾಗಿರುವಾಗ ಕಳೆದ ಜನ್ಮಗಳ ಕೆಡಕುಗಳೆಲ್ಲ ನಮ್ಮ ನೆನಪಿಗೆ ಬಂದರೆ, ನಮ್ಮ ಬಾಳುವೆ ಸುಗಮವಾಗಿ ಸಾಗೀತೆ? ಅದಕ್ಕೇ ನಾನೆಂದೆ: ಮರೆವು ಮನುಷ್ಯರಿಗಾಗಿ ದೇವರೇ ಕೊಟ್ಟ ವರಪ್ರಸಾದವೆಂದು!.....

ಇದರ ವಿಷಯ ಇನ್ನೂ ಸ್ವಲ್ಪ ಬರೆಯಲಿಕ್ಕಿತ್ತು.....ಯೋಚಿಸಿಟ್ಟಿದ್ದೆ....ಛೇ, ಮರೆತು ಹೋಯಿತಲ್ಲ!.....ಏನು ಮಾಡಲಿ?.... ಸಾಕಿನ್ನು.

ಇನ್ನು ಇದನ್ನು ಮರೆಯದೆ ಸಂಪಾದಕರಿಗೆ ಕಳುಹಬೇಕು ಕಳುಹುವಾಗ ಮರೆಯದೆ ವಿಳಾಸ ಬರೆಯಬೇಕು. ಸ್ಟ್ಯಾಂಪು ಹಚ್ಚಬೇಕು. ಒಂದು ಸಣ್ಣ ಕೆಲಸಕ್ಕೆ ಎಷ್ಟೆಲ್ಲ ನೆನಪು ಬೇಕು! ಅಷ್ಟೂ ಮಾಡಿ ಆವರಿಗೆ ಕಳುಹಿದರೂ, ಅವರೂ ನನ್ನ ಹಾಗೆಯೇ ಮನುಷ್ಯರು. ಮರೆತು ಗಿರತು ಎಲ್ಲಯಾದರೂ ಇಟ್ಟರೆ, ಮುಗಿದೇ ಹೋಯಿತು; ನೆನಪಿನಿಂದ ಮುದ್ರಿಸಿ ನೀವು ಓದುವಂತೆ ಮಾಡಿದರೆ, ನೀವು ಓದಲು ಮರೆಯಬಾರದೆಂದೇ ಈ ಲೇಖನದ ತಲೆಯ ಮೇಲೆ "ಮರೆವು" ಎಂದು ದಪ್ಪ ಅಕ್ಷರದಲ್ಲಿ ಒತ್ತಿ ಬರೆದಿದ್ದೇನೆ. ಮರೆತು ಗಿರತು ಬಿಟ್ಟೀರಿ!

ಭಸ್ಮಸ್ಥ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ನಮ್ಮ ಇಂದಿನ ಶಿಕ್ಷಣದ ಗೊತ್ತು-ಗುರಿಗಳು

ಡಿ. ವಿ. ಆರ್. ನಾಯಕ ಬಿ. ಎಸ್‌ಸಿ., ಬಿ. ಟಿ. ಟ್ರೈನಿಂಗ್ ಕಾಲೇಜ್, ರಾಯಚೂರು

★

ಶಿಕ್ಷಣದ ನಿಜವಾದ ಗುರಿ ವ್ಯಕ್ತಿಯ ಮತ್ತು ಸಮಾಜದ ಸುಖ-ಶಾಂತಿಗಳು. ದುಃಖ ಅಶಾಂತಿಗಳೇ ಎಲ್ಲೆಲ್ಲಿಯೂ ಹಬ್ಬಿ ಹರಡುತ್ತಿರುವ ರಾಷ್ಟ್ರದಲ್ಲಿ, ಶಿಕ್ಷಣದ ಕಾರ್ಯ ಸುವ್ಯವಸ್ಥಿತವಾಗಿ ನಡೆದಿದೆಯೆನ್ನಬಹುದೆ ?

★

ನಾವು ನಮ್ಮ ನಿತ್ಯಜೀವನದಲ್ಲಿ ಅನೇಕ ಕೆಲಸಗಳನ್ನು ಮಾಡುತ್ತೇವೆ. ಅವುಗಳನ್ನು ಮಾಡುವುದರಲ್ಲಿ ನಿರ್ದಿಷ್ಟವಾದ ಉದ್ದೇಶವಿರುತ್ತದೆ. ಉದ್ದೇಶವಿಲ್ಲದ ಯಾವ ಕಾರ್ಯವೂ ಸಿದ್ಧಿಯನ್ನು ಹೊಂದಲಾರದು. ಅಷ್ಟೇಕೆ! ಮಾನವನ ಜನ್ಮ ಜೀವನಗಳಾದರೂ ಉದ್ದೇಶ ಪೂರ್ವಕವಿಲ್ಲವೆ? ಎಂದ ಮೇಲೆ ಮಾನವನನ್ನು ಮಾನವನನ್ನಾಗಿ ಮಾಡುವ, ಮಾನವ ಜೀವನದ ಒಂದು ಮುಖ್ಯ ಅಂಶ—ಅದೇಕೆ ಜೀವಾಳವೇ—ಆಗಿರುವ ಶಿಕ್ಷಣಕ್ಕೆ ಗೊತ್ತುಗುರಿಗಳಿರಬೇಡವೆ ? ಮೊದಲಿನಿಂದಲೂ ಶಿಕ್ಷಣವು ಒಂದು ನಿಶ್ಚಿತವಾದ ಉದ್ದೇಶದಿಂದಲೇ ನಮ್ಮಲ್ಲಿ ನಡೆಯುತ್ತ ಬಂದಿದೆ. ಹಾಗಾದರೆ ಶಿಕ್ಷಣದ ಗೊತ್ತುಗುರಿಗಳ ಸಮಸ್ಯೆ ಮತ್ತೆ ಈಗೇಕೆ ಉದ್ಭವಿಸಿತು? ಎಂದು ಕೇಳುವುದು ಸಹಜ.

ಶಿಕ್ಷಣದ ಗೊತ್ತುಗುರಿಗಳು ಯಾವಕಾಲಕ್ಕೂ ಯಾವ ದೇಶದಲ್ಲಿಯೂ ಒಂದೇ ರೀತಿಯಲ್ಲಿ ಎಂದೂ ಉಳಿದಿಲ್ಲ, ಉಳಿಯಲಾರವು, ಉಳಿಯಬಾರದು. ಏಕೆಂದರೆ ಮಾನವಜೀವನದ ಆರ್ಥಾತ್ ರಾಷ್ಟ್ರ ಜೀವನದ ಉದ್ದೇಶಗಳು ಕಾಲಕಾಲಕ್ಕೆ ಬದಲಾವಣೆ ಹೊಂದುತ್ತಿರುತ್ತವೆ. ಮಾನವನ ಉದ್ಧಾರಕ್ಕಾಗಿ.....ರಾಷ್ಟ್ರದ ಉನ್ನತಿಗಾಗಿ ಶಿಕ್ಷಣವು ಒಳ್ಳೇ ಸಾಧನವಾಗಿರುವುದೆಂದು ಬೇರೆ ಹೇಳಬೇಕಾಗಿಲ್ಲ ಸಾಧನವು ಉದ್ದೇಶವನ್ನು ಅನುಸರಿಸುವುದು ಪ್ರಕೃತಿಸಿದ್ಧವು. ಅಂತೆಯೇ ಅಟಕ್ಕೆ ತಕ್ಕ ಬಹುರೂಪವೆಂಬಂತೆ, ಕಾಲಕ್ಕೆ ತಕ್ಕ ಶಿಕ್ಷಣವು ಬೇಕು, ಅದಕ್ಕೊಂದು ಗುರಿಯೂ ಇರಬೇಕು.

'ರಾಜಾ ಕಾಲಸ್ಯ ಕಾರಣಂ !' ಸುಮಾರು ಎರಡು ಶತಮಾನಗಳ ಕಾಲ ನಾವು ಪರಕೀಯರ ದಾಸ್ಯದಲ್ಲಿ ಕಾಲ ಕಳೆದೆವು, ದಾಸ್ಯದಲ್ಲಿದ್ದವರಿಗೆ 'ನಮ್ಮತನ'ವು ಎಂದಾದರೂ ಇರುವುದೆ ! ಆ ದಾಸ್ಯದಲ್ಲಿಯೂ ಕೂಡ ನಮಗೆ ಶಿಕ್ಷಣ ದೊರೆಯಿತು; ಆದರೆ ನಮಗೆ ದೊರೆತ ಶಿಕ್ಷಣವೆಂಥದು ? ಆದರೆ ಉದ್ದೇಶವೇನಿತ್ತು ? ಮುಂತಾದುವುಗಳು ವಿಚಾರಾರ್ಹವಾಗಿವೆ. ಶಿಕ್ಷಣವೆಂದರೆ ಆತ್ಮೋದ್ಧಾರದ ಸಾಧನವೆಂದು ಮೇಲೆ ಹೇಳಿದೆಯಷ್ಟೆ? ಆಂಗ್ಲರು ತಮ್ಮ ಉದ್ಧಾರಕ್ಕಾಗಿ ತಮ್ಮ ಸಾಮ್ರಾಜ್ಯ ವಿಕಾಸದ ಮಹತ್ತ್ವಾಕಾಂಕ್ಷೆಯನ್ನು ಈಡೇರಿಸುವುದಕ್ಕಾಗಿ ಈ ಸಾಧನವನ್ನು ಉಪಯೋಗಿಸಿಕೊಂಡರು. ಅದಕ್ಕೆ ತಕ್ಕಂತೆ ಉದ್ದೇಶವನ್ನಿಟ್ಟುಕೊಂಡರು. ತಮ್ಮ ಆಡಳಿತಕ್ಕೆ ಅನುಕೂಲವಾಗಿರುವಂತೆ ಮತ್ತು ತಮ್ಮ ಕೈವಾಡಾಗಿರುವಂತೆ, ಕೆಲವು ಜನರಿಗೆ ಮಾತ್ರ ಶಿಕ್ಷಣಕೊಟ್ಟರು. ಅವರ ಮುಖ್ಯ ಉದ್ದೇಶವೆಂದರೆ ನಮ್ಮನ್ನು 'ಕಾರಕೂನ'ರನ್ನಾಗಿ ಮಾಡುವುದೇ ಆಗಿತ್ತು. ಅದಕ್ಕಾಗಿ ತಮ್ಮದೇ ಆದ ಆಂಗ್ಲಭಾಷೆಯ ದ್ವಾರ, ತಮ್ಮದೇ ಆದ ಸಂಸ್ಕೃತಿಯನ್ನು ಹೆಚ್ಚಿಸುವ ಮತ್ತು ತಮಗೇ ಹೆಚ್ಚಾಗಿ ಉಪಯೋಗ ಬೀಳುವ ಮತ್ತು ನಮಗೆ ನಿರುಪಯೋಗವಾದ ಶಿಕ್ಷಣವನ್ನು ನಮಗಾಗಿ ಯೋಜಿಸಿದ್ದರು. ಅಂತೆಯೇ ಅವರ ಉದ್ದೇಶವು ಫಲಿಸಿತು. ಅವರ ಯೋಜನೆಯಂತೆ ಅನೇಕರಿಗೆ —೧೦೦ ಕ್ಕೆ ೯೦ ಜನರಿಗೆ—ಶಿಕ್ಷಣ ದೊರೆಯಲಿಲ್ಲ. ಶಿಕ್ಷಣ ಪಡೆದವರೂ ಬುದ್ಧಿವಂತರಾಗಲಿಲ್ಲ ಟಾಲಸ್ಟಾಯರು ಕೇಳಿದಂತೆ. 'The strength of a despotic government lies in the people s ignorance' ಎಂಬುವ ಶಕ್ತಿಯನ್ನು ತಿಳಿಯಿಸಿ 'Divide and rule' ಎಂಬುವ ತಂತ್ರದಿಂದ ನಮ್ಮನ್ನಾಳಿದರು. ಅವರ ಆಡಳಿತದ ಪರಿಣಾಮ ಭಾರತದ ವಿಭಜನೆಯಲ್ಲಿ ಕೊನೆಗೊಂಡದ್ದು, ಆಂಗ್ಲರ ರಾಜ್ಯತಂತ್ರಕ್ಕನುಸರಿಸಿ ಅವರು ನಮಗೆ ಕಲ್ಪಿಸಿದ ಶಿಕ್ಷಣದ ಗೊತ್ತುಗುರಿಗಳ ವಿಜಯವೆಂದೇ ಹೇಳಬೇಕು. ಆದರೆ ಭಾರತೀಯರಿಗೆ ಮಾತ್ರ ಅದು ಎಂದೂ ಮಾಯದ ಹೃದಯದ ಗಾಯ.

ಆದರೆ 'ವಿಶ್ವಶಿಕ್ಷಕ' ರಾದ ನಮ್ಮ ಪೂಜ್ಯ ಮಹಾತ್ಮಾಜಿಯವರ ಪುಣ್ಯಪ್ರಭಾವದಿಂದ, ಆಂಗ್ಲರು ಹರಡಿದ ತಮೋಜಾಲವು ಕತ್ತರಿಸಿತು. ಅವರ ಸಾಮ್ರಾಜ್ಯದಲ್ಲಿ ಎಂದೂ ಮುಳುಗದ ಸೂರ್ಯನು ಅಸ್ತಂಗತನಾದನು. ನಮ್ಮ ದೇಶದಲ್ಲಿ ಎಂದೂ ಮೂಡಲೇ ಬಾರದೆಂದುಕೊಂಡಿದ್ದ (ಆಳರಸರ ಇಚ್ಛೆಗೆ ಪ್ರತಿಯಾಗಿ) ಸ್ವಾತಂತ್ರ್ಯ ರವಿಯು ಉದಯನಾದನು. ಆದರೆ ಇದೆಲ್ಲ ಯಾತರ ಪ್ರಭಾವದಿಂದ?

ನಮ್ಮ ಪರಮ ಪೂಜ್ಯ ಗುರುಗಳಾದ ಮಹಾತ್ಮರ ಶಿಕ್ಷಣ-ಪ್ರಭಾವದಿಂದ—ಎಂದು ಹೇಳದೆ ಗತ್ಯಂತರವಿಲ್ಲ. ಅವರು ರಾಜಕಾರಣಿಗಳಿರಬಹುದು, ಸಮಾಜ ಸುಧಾರಕರಿರಬಹುದು, ಮತ್ತೇನಾದರಿರಬಹುದು, ಆದರೆ ನಮಗೆ ಬುದ್ಧಿಗಲಿಸಿದ—ಇಷ್ಟೇ ಏಕೆ ಜಗತ್ತಿಗೂ ಬುದ್ಧಿಗಲಿಸಿದ ಗುರುವಿನ ಸ್ಥಾನವು ಅವರಿಗೆ ಸದಾ ನೀಡಲಾಗಿದೆಯೆಂದು ನನ್ನ ಭಾವನೆ. ಭಾರತ ಸ್ವಾತಂತ್ರ್ಯದ ಹೋರಾಟದಲ್ಲಿ ಅವರಿಗೆ (ಮಹಾತ್ಮಾಜಿಯವರಿಗೆ) ಮೊದಲು ಕಂಡುಬಂದ ದೋಷವೆಂದರೆ, ಆಳರಸರು ನಮಗೆ ಕೊಡುತ್ತಿದ್ದ ಶಿಕ್ಷಣದ ದುರುದ್ದೇಶ. ಶಿಕ್ಷಣ ಪಡೆದವರಲ್ಲೂ ಮುಸುಕಿದ ಅಜ್ಞಾನ. ನಮ್ಮ ದೇಶ, ನಮ್ಮ ಭಾಷೆ, ನಮ್ಮ ಜನಾಂಗ, ನಮ್ಮ ಸಂಸ್ಕೃತಿ, ನಮ್ಮ ಉದ್ಯೋಗ ಮೊದಲಾದ "ನಮ್ಮ" ತನದ ಅಭಾವ, ಸ್ವಾರ್ಥಕ್ಕೆ ಬಲಿಬಿದ್ದು ತಮ್ಮ ಬಂಧುಗಳ ಕುತ್ತಿಗೆ ಕೊಯ್ಯುವ ಸಾಹಸದಲ್ಲಿ ಅಡಕವಾದ 'ನನ್ನ' 'ತನ, ಮುಂತಾದುವುಗಳು. ಆದುದರಿಂದ ಅವರು 'ಮೂಲೇಕುತಾರಃ' ಎಂಬಂತೆ, ಮೂಲದೋಷವನ್ನು ತಳ್ಳುವ ಸಾಹಸವನ್ನಾಡಿದರು. ತಮ್ಮ ಸುಭಾಷಿತಗಳಿಂದ, ತಮ್ಮ ಅಹಿಂಸಾಚರಣೆಯಿಂದ, ಜನಸಾಮಾನ್ಯರಲ್ಲಿ ನಿಜವಾದ ಶಿಕ್ಷಣದ ಬೀಜವನ್ನು ಬಿತ್ತಿದರು ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸಿದರು. ತಮ್ಮದೇ ಆದ 'ವರ್ಧಾಶಿಕ್ಷಣ' ಯೋಜನೆಯಿಂದ ಮೂಲಶಿಕ್ಷಣದ ಮಂತ್ರವನ್ನು ಊದಿದರು. ಹೀಗೆ ಎಷ್ಟೋ ಕಾಲದ ವರೆಗೆ ಕನಸಾಗಿಯೇ ಉಳಿದಿದ್ದ ಸ್ವಾತಂತ್ರ್ಯವು ಇಂದು ನಮಗೆ ನನಸಾಗಿದ್ದರ ಪರಿಣಾಮವಾಗಿ, ನಮಗೆ ಇಂದು ನಮ್ಮ ರಾಷ್ಟ್ರವಾಯಿತು; ನಮ್ಮ ಸ್ವಾತಂತ್ರ್ಯವಾಯಿತು. ನಮ್ಮ ಪ್ರಜಾರಾಜ್ಯವಾಯಿತು. ಎಲ್ಲವೂ ನಮ್ಮದಾಯಿತು. ಒಟ್ಟಿನಲ್ಲಿ ನಮಗೆ "ನಮ್ಮತನ" ವು ಲಭಿಸಿತು. ಇದಕ್ಕಾಗಿ ಮೊದಲು, ನಿಜವಾಗಿಯೂ ಜಗದ್ಗುರುಗಳಾದ ಬಾಪೂಜಿಯವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸದಿರಲಾರೆವು.

ಹೀಗೆ ಎಲ್ಲವೂ ನಮ್ಮದಾದ ನಮ್ಮ ರಾಷ್ಟ್ರದಲ್ಲಿ, ನಮ್ಮದೇ ಆದ ಶಿಕ್ಷಣವು ಬೇಡವೆ? ಆ ಶಿಕ್ಷಣವು ಎಂತಪದಿರಬೇಕು ಮತ್ತು ಅದರ ಗೊತ್ತುಗುರಿಗಳೇನಿರಬೇಕೆಂದು ನಾವು ವಿಚಾರಿಸಬಾರದೇ?

ಇದನ್ನು ಕಂಡುಹಿಡಿಯುವ ಮೊದಲು, ನಮ್ಮ ದೇಶದ ಈಗಿನ ಸ್ಥಿತಿಯನ್ನು ಕುರಿತು ವಿಚಾರಿಸುವ: ಸ್ವಾತಂತ್ರ್ಯವು ದೊರೆತ ಮೇಲೆ ಸ್ವಾತಂತ್ರ್ಯದ ಸುಖವು ಇನ್ನೂ ಕನಸಾಗಿಯೇ ಉಳಿದಿದೆ. ಜನಸಾಮಾನ್ಯರಲ್ಲಿ ಶಾಂತಿಯು ನೆಲಸದಾಗಿದೆ ಮತ್ತು 'ಇಂತಹ ಕಷ್ಟ-ಸ್ವಾತಂತ್ರ್ಯಕ್ಕಿಂತಲೂ ಮೊದಲಿನ ದಾಸ್ಯವೇ ಮೇಲು' ಎಂಬ ಉದ್ಗಾರಗಳೂ ಅಲ್ಲಲ್ಲಿ ಕೇಳಬರುತ್ತಿವೆ. ಇವುಗಳಿಗೆನಾದರೂ ಕಾರಣ ವಿರಬಹುದಲ್ಲವೆ? ಸ್ವಲ್ಪ ಕೂಲಂಕಷವಾಗಿ ವಿಚಾರಮಾಡಿದರೆ, ಈಗಿನ ಕೆಲವು ಅಧಿಕಾರಿಗಳಲ್ಲಿಮತ್ತು ಜನಸಾಮಾನ್ಯರಲ್ಲಿ ರಾಷ್ಟ್ರೀಯ ಭಾವನೆಯ ಅಭಾವವೆಂಬುದು ಕಂಡುಬಾರದಿರದು. ಇಂತಹ ಪರಿಸ್ಥಿತಿಯಲ್ಲಿ ನಮಗೆ ಲಭಿಸಿದ ಸ್ವಾತಂತ್ರ್ಯವನ್ನು ನಾವು ಕಾಪಾಡಿಕೊಳ್ಳಬಲ್ಲೆವೆ?—ಎಂಬ ಪ್ರಶ್ನೆಯು ಮನವನ್ನು ತಲ್ಲಣಿಸದೆ ಬಿಡದು. ಹೆದೆಮೀರುವ ಮೊದಲೇ ಸುಧಾರಿಸಿಕೊಳ್ಳುವುದು ಜಾಣತನದ ಲಕ್ಷಣ. ಆಂತೆಯೇ ನಾನೆಲ್ಲರೂ ಇಂದು ಒಂದಾಗಿ ನಮ್ಮ ಸ್ವಾತಂತ್ರ್ಯವನ್ನು ಕಾಪಾಡುವುದಿಷ್ಟೇ ಅಲ್ಲ, ಅದನ್ನು ಭದ್ರವಾಗಿಡಲು ಬೊಂಕಕಟ್ಟಬೇಕಾಗಿದೆ. ಇದರ ಹೊಣೆಯು ಈಗಿನ ಹಿರಿಯರ ಮೇಲಂತೂ ಇದ್ದೇ ಇದೆ. ಆದರೆ ಮುಖ್ಯವಾಗಿ ಇಂದಿನ ಮಕ್ಕಳ ಅಥವಾ ಮುಂದಿನ ಹಿರಿಯರ ಮೇಲೆ ಹೆಚ್ಚಾಗಿ—ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಆದ್ದರಿಂದ ತಮ್ಮ ಹೊಣೆಯನ್ನರಿತುಕೊಳ್ಳಲು ಮತ್ತು ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸಲು ಯೋಗ್ಯರಾಗುವಂತೆ ಮಾಡುವುದೇ ಇಂದಿನ ನಮ್ಮ ಶಿಕ್ಷಣದ ಗುರಿಯಾಗಿರಬಾರದೇ? ಹಿಂದಿನ ಪರತಂತ್ರ ಭಾರತದ ಶಿಕ್ಷಣದ ಧ್ಯೇಯಗಳು ಒಂದು ರೀತಿಯಲ್ಲಿದ್ದರೆ, ಇಂದಿನ ಸರ್ವತಂತ್ರ ಸ್ವತಂತ್ರ ಭಾರತದ ಶಿಕ್ಷಣದ ಗೊತ್ತು-ಗುರಿಗಳು ಈಗಿನ ಪರಿಸ್ಥಿತಿಯಲ್ಲಿ ಹೊಸ ರೀತಿಯಲ್ಲಿರಬೇಕಾದುದು ಅನಿವಾರ್ಯ. ಅಂತಹ ಗೊತ್ತು-ಗುರಿಗಳನ್ನು ನಾವೆಲ್ಲರೂ ಕಂಡುಹಿಡಿಯಬಲ್ಲೆವು ಇಂದು ನಾವು ನಮ್ಮ ಕೊರತೆಗಳನ್ನು ನಿವಾರಿಸಿಕೊಳ್ಳಬಲ್ಲೆವು ನಮಗೆ ಬೇಕಾದ ಶಿಕ್ಷಣವನ್ನು ನಿರ್ಧರಿಸಿಕೊಳ್ಳಬಲ್ಲೆವು. ಅದಕ್ಕನುಸರಿಸಿಯೇ ನಮ್ಮ ಶಿಕ್ಷಣದ ಧ್ಯೇಯಗಳನ್ನೂ ನಾವು ನಿರ್ಧರಿಸಬಲ್ಲೆವು. ಇನ್ನುಮೇಲೆ ನಾವು ಪರರನ್ನು ದೂಷಿಸುತ್ತ ಕೂಡುವುದು ಹೇಡಿತನದ ದ್ಯೋತಕ.

'ಬಗನ' ಬಾಲಾಮೃತ

ಮಕ್ಕಳ ಸಶಕ್ತತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖವಾಗಿ ಮಕ್ಕಳ ಯಕೃತ್ತು ಮತ್ತು ಹೊಟ್ಟೆ ಸರಿಯಾಗಿ ಇರಬೇಕು. ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಸ್ವಸ್ತಿಕ ಕೆಮಿಕಲ್ ವರ್ಕ್ಸ್ ಲಿ.

ಹುಬ್ಬಳ್ಳಿ

ಕರ್ನಾಟಕದ ಮೂಲೆ ಮೂಲೆಗಳಿಂದಲೂ ವಿಶೇಷ ಬೇಡಿಕೆಯಿರುವ

ಸ್ಪ್ಲೀನೊಜೆನ್— ಕರ್ನಾಟಕದ ಪ್ರಮುಖ ಡಾಕ್ಟರರಿಂದ ಪ್ರಶಂಸಿಸಲ್ಪಟ್ಟಿದೆ. ಇದರಲ್ಲಿ ಕ್ವಿನಾಯ್ನ ಮತ್ತು ಲೋಹ ಇರುವುದರಿಂದ ಮಲೇರಿಯಾ ಜ್ವರದ ನೋಲೆ ಅತ್ಯಂತ ಆಶ್ಚರ್ಯಕಾರಕ ಗುಣ ಕೊಡುವುದಲ್ಲದೆ ಪಾಂಡುರೋಗ ಪ್ರತಿಬಂಧಕವೂ ರಕ್ತವರ್ಧಕವೂ ಇರುತ್ತದೆ. ಇದು ಅಲ್ಪಾವಧಿಯಲ್ಲಿಯೇ ಪ್ಲೀಹವನ್ನು ಸರಿಪಡಿಸಿ ಪೂರ್ವ ಸ್ಥಿತಿಗೆ ತರುವದು.

ವರ್ಮಿನೋಲ್ (ಜಂತುನಾಶಿನಿ)—ಈ ಔಷಧಸೇವನೆಯಿಂದ ಹೊಟ್ಟೆಯೊಳಗಿನ ಸಣ್ಣ ದೊಡ್ಡ ಜಂತುಗಳು ನಾಶವಾಗಿ ಹೊರಗೆ ಹಾಕಲ್ಪಡುವವು. ಇದರಲ್ಲಿ ಔಡಲ ಎಣ್ಣೆ ಕೂಡಿರುವುದರಿಂದ ಬೇರೆ ಎಣ್ಣೆ ತೆಗೆದುಕೊಳ್ಳುವಲವಶ್ಯಕತೆ ಇಲ್ಲ

ಮ್ಯಾನೇಜಿಂಗ್ ಏಜೆಂಟರು :

ಮೆಸರ್ಸ್ : ಮಿರ್ಜಾನಕರ ಮತ್ತು ಕಂಪನಿ

ನಾಗಬಹುದು. ಆದುದರಿಂದ ಸಮಯ ದೊರೆತಾಗ ನಮ್ಮ ಉದ್ಧಾರವನ್ನು ನಾವು ಮಾಡಿಕೊಳ್ಳಬಾರದೇಕೆ?

ಶಿಕ್ಷಣದ ಉದ್ದೇಶವನ್ನು ನಿರ್ಧರಿಸುವ ಮೊದಲು, ದೇಶದ ಬೇಡಿಕೆಗಳನ್ನು ಕುರಿತು ವಿಚಾರಿಸುವುದು ಆವಶ್ಯ. ಭಾರತವು ಈಗ ಸಂಧಿಕಾಲದಲ್ಲಿ ಸಾಗುತ್ತಿರುವುದು. ಅನೇಕ ಸೂಕ್ಷ್ಮ ಮತ್ತು ಕಠಿಣ ಭಯಾನಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅದರ ಜೊತೆಗೆ ತನ್ನ ಸ್ವಾತಂತ್ರ್ಯವನ್ನೂ ಕಾಯ್ದುಕೊಳ್ಳಬೇಕಾಗಿದೆ. ಇದಲ್ಲದೆ ಅನೇಕ ಜನರು ಮನುಷ್ಯತ್ವದ ಎಲ್ಲೆಯನ್ನು ಕೂಡ ಮೀರಿ ಹೋಗಹತ್ತಿದ್ದಾರೆ. ರಾಷ್ಟ್ರೀಯಭಾವನೆ, ಸ್ವಜನಪ್ರೇಮ ಮೊದಲಾದುವುಗಳು ಎಂದೋ ಮಾಯವಾಗಿವೆ. ರಾಷ್ಟ್ರವಿಘಾತಕ ಕಾರ್ಯಗಳೆಷ್ಟೋ ನಡೆಯಹತ್ತಿವೆ. ಇದರಿಂದಲಾಗಿ ನಮ್ಮ ಸ್ವಾತಂತ್ರ್ಯವೆಲ್ಲಿ ಕೈಯಿಂದ ಜಾರುವುದೋ ಎಂಬ ಭಯವು ಆಗಾಗ ತಜ್ಞರಿಗೆ ಬರುತ್ತಲಿದೆ. ಇಂತಹ ಪ್ರಸಂಗದಲ್ಲಿ ಶಿಕ್ಷಣವೇನಾದರೂ ನಮಗೆ ಸಹಾಯಮಾಡಬಹುದೆ?—ಎಂದು ಮೊರೆಹೋಗದೆ ಗತ್ಯಂತರವಿಲ್ಲ.

ಇಂದು ನಮ್ಮ ಸ್ವಾತಂತ್ರ್ಯವನ್ನು ಬಲಪಡಿಸುವುದೇ ನಮ್ಮ ರಾಷ್ಟ್ರದ ಮುಖ್ಯ ಧ್ಯೇಯ. ಅದಕ್ಕಾಗಿ ನಮ್ಮ ಸೈನ್ಯಪಡೆಯನ್ನು ಬಲಪಡಿಸಬೇಕು. ಉದ್ಯೋಗಗಳನ್ನು ಹೆಚ್ಚಿಸಬೇಕು. ಯಂತ್ರಗಳನ್ನು ಸಿದ್ಧಮಾಡಬೇಕು. ವ್ಯಾಪಾರವನ್ನು ಹೆಚ್ಚಿಸಿ ಪರರಾಷ್ಟ್ರಗಳೊಂದಿಗೆ ಸಂಪರ್ಕವನ್ನು ಬೆಳೆಯಿಸಿಕೊಳ್ಳಬೇಕು. ನಮ್ಮ ಖನಿಜ ಸಂಪತ್ತುಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು; ನವ ಆಹಾರವನ್ನು ಹೆಚ್ಚಾಗಿ ಉತ್ಪಾದನೆ ಮಾಡಿಕೊಳ್ಳಬೇಕು ಸಂಶೋಧನಗಳಿಂದ ನಮ್ಮ ಜೀವನವನ್ನು ಸುಸಂಸ್ಕೃತವನ್ನಾಗಿ ಮಾಡಿಕೊಳ್ಳಬೇಕು. ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳಬೇಕು. ನಮ್ಮ ಸಾಹಿತ್ಯವನ್ನು ಬೆಳೆಸಬೇಕು. ಭಾಷೆಯನ್ನು ವಿಕಾಸಗೊಳಿಸಬೇಕು. ಒಳ್ಳೇ ಕಲೆಗಳು ವೃದ್ಧಿಯಾಗುವಂತೆ ಮಾಡಬೇಕು. ಒಟ್ಟಿನ ಮೇಲೆ ನಮ್ಮ ರಾಷ್ಟ್ರವು ಎಂದರೆ ನಾವೆಲ್ಲ ರಾಜಕೀಯ, ಆರ್ಥಿಕ, ನೈತಿಕ, ಬೌದ್ಧಿಕ, ಸಾಂಸ್ಕೃತಿಕ ರೀತಿಯಿಂದಲೂ ಸರಾಗವಾಗಿ ಬೆಳೆಯಬೇಕು. ಸ್ವಾವಲಂಬಿಯಾಗಬೇಕು.

ರಾಷ್ಟ್ರದ ಈ ಆಕಾಂಕ್ಷೆಗಳು ಶಿಕ್ಷಣದ ಹೊರತು ಮತ್ತಾವುದರಿಂದಲೂ ಕೈಗೂಡಲಾರವೆಂಬುದು ಸಿದ್ಧಾಂತ. ಎಂದ ಮೇಲೆ ನಾವು ಕಲ್ಪಿಸುವ ಶಿಕ್ಷಣದ ಯೋಜನೆಯ ಗೊತ್ತು ಗುರಿಗಳಾದರೂ ಮೇಲೆ ತೋರಿಸಿದ ಬೇಡಿಕೆಗಳನ್ನು ಪೂರಯಿಸುವಂತಿರಬೇಕಲ್ಲವೇ ಇದೆಲ್ಲವು ನಮಗೆ ಹಸ್ತಗತವಾಗಬೇಕಾದರೆ, ಮಣಿಗಳನ್ನು ಪೋಣಿಸಿ ಒಂದು ಸುಂದರವಾದ ಹಾರವನ್ನಾಗಿ ಮಾಡಲು ಬೇಕಾಗುವ ದಾರದಂತೆ, ಜನಸಾಮಾನ್ಯರಲ್ಲಿ 'ನನ್ನ' ತನವನ್ನು ಬಿಟ್ಟು, 'ನಮ್ಮ' ತನವನ್ನು ಕಾಣುವ ರಾಷ್ಟ್ರೀಯ ಭಾವನೆಯು ಬೇರೂರಬೇಕು.

ಈ ಕೇಂದ್ರೀಕೃತವಾದ ಉದಾತ್ತ ಭಾವನೆಗೆ ಪೋಷಕವಾವಂತೆ ಶಿಕ್ಷಣದ ಇತರ ಚಟುವಟಿಕೆಗಳಿರಬೇಕು. ಇದೆಲ್ಲವನ್ನು ಪಡೆಯಲು ಬಹಳ ದಿವಸ ಕಾಯುತ್ತ ಕೂಡ್ರುವ ಕಾಲವಿದಲ್ಲ. ಆದುದರಿಂದ ಈಗ ಪದ್ಯಕ್ಕೆ ನನ್ಮಲ್ಲಿ ಜನಜಾಗೃತಿಯಾಗಿ ರಾಷ್ಟ್ರೀಯ ಭಾವನೆಯು ಮೂಡುವಂತೆ ಮಾಡುವುದು, ಜನಸಾಮಾನ್ಯರ ಆಡಳಿತದ ವಿಷಯಕ್ಕೆ ವಿಶ್ವಾಸವನ್ನು ಹುಟ್ಟಿಸುವಂತೆ ನಡೆಯುವುದು ನಮ್ಮ ಈಗಿನ ಆಡಳಿತದ ಮುಖ್ಯ ಕರ್ತವ್ಯವಾಗಿದೆ. ಮತ್ತ ಈ ಆಡಳಿತವು ಪ್ರಜಾಡಳಿತವಾದ್ದರಿಂದ, ಪ್ರತಿಯೊಬ್ಬ ಪ್ರಜೆಯನು ಸ್ವಾತಂತ್ರ್ಯದ ಜೊತೆಗೆ ತನಗೆ ಪ್ರಾಪ್ತವಾದ ಹಕ್ಕಿನೊಂದಿಗೆ ತಾನು ನಿರ್ವಹಿಸಬೇಕಾದ ಹೊಣೆಯನ್ನರಿತುಕೊಂಡ ಆಡಳಿತದೊಂದಿಗೆ ಸಹಕಾರ ನೀಡಿ, ಹೊಸಯುಗಕ್ಕೆ ತಕ್ಕಂತೆ ಮೇಲ್ಯಾಣಿಸಿದ ಗೊತ್ತುಗುರಿಗಳುಳ್ಳ ಒಂದು ಶಿಕ್ಷಣಯೋಜನೆಯನ್ನು ಕೈಕೊಂಡರೆ, ಭಾರತವನ್ನು ಇಂತಹ ಸೂಕ್ಷ್ಮ ಮತ್ತ ಕಠಿಣ ಪರಿಸ್ಥಿತಿಯಿಂದ ಉಳಿಸಬಹುದೆಂದು ನನ್ನ ನನ್ನ ಮತ.

ಕಿಟ್ಟಯ್ಯನ ಯಾತ್ರೆ

(ಒಂದು ಕತೆ)

ಶ್ರೀ. ಯರ್ಮುಂಜ ರಾಮಚಂದ್ರ ಪುತ್ತೂರು

★

ಹುಟ್ಟಿದ ಜೀವಕ್ಕೆ ಹಡೆದ ಪ್ರಕೃತಿಮಾತೆ ಎಷ್ಟೆಷ್ಟೋ ಹಿತದ ಮಾತುಗಳನ್ನು ಹೇಳುತ್ತಿರುತ್ತಾಳೆ. ಅದರ ಕಲ್ಯಾಣಕ್ಕಾಗಿ ಕಷ್ಟ ಪಡುತ್ತಿರುತ್ತಾಳೆ. ಆದರೆ ಆ ಜೀವ, ವಿಕಾರಗಳ ಸೆಳವಿಗೆ ಸಿಕ್ಕು ತಾಯ ಮಾತನ್ನು ಕೇಳದೆ, ಬಾಳನ್ನು ಹಾಳು ಮಾಡಿಕೊಳ್ಳುವುದು.

ಎಂಕಜ್ಜಿಗೆ ಈಗ ಮಗನಿಗಾಗಿ ಕಾಯುತ್ತಿರುವುದೂ ದಿನದ ಕೆಲಸಗಳ ಒಂದು ಅಂಗವಾಗಿ ಹೋಯಿತು. ಮೊದಲ ದಿನಗಳಲ್ಲಿ 'ಏನೋ, ಹೊತ್ತಾಗಿರಬಹುದು!' ಎಂದುಕೊಳ್ಳುತ್ತಿದ್ದಳು. ಆದರೆ ಈಗ ನಿತ್ಯವೂ ಒಂದೇ ರೀತಿ. ಮುಚ್ಚಂಜೆಯಾಗುವುದಕ್ಕೆ ಮೊದಲೇ ಮನೆಯ ಹೊರಗೆ ಬಂದು ಕುಳಿತುಕೊಂಡು, ಮಗ ಕಿಟ್ಟಯ್ಯನ ದಾರಿ ನೋಡುವಳು. "ಛೀ, ಏನು ಮಾಡುತ್ತಿದ್ದಾನಪ್ಪ....." ಎಂದುಕೊಂಡು, ದೂರದಲ್ಲಿ ಕಾಣುವ ಗದ್ದೆಗಳನ್ನು ದಿಟ್ಟಿಸುವಳು. ಆದರೆ ಆಕೆಯ ಮುದಿ ಕಣ್ಣುಗಳಿಗೆ ಅಲ್ಲೇನೂ ಕಾಣಿಸುತ್ತಿರಲಿಲ್ಲ. ಕತ್ತಲು ದಟ್ಟವಾಗತೊಡಗಿತೆಂದರೆ, ಒಮ್ಮೆ ನೀಳವಾಗಿ ಉಸಿರುಬಿಟ್ಟು ಒಳಗೆ ಹೋಗುವಳು. ಮತ್ತೆ ತಿರುಗಿ ಹೊರಗೆ ಬಂದು ಕತ್ತಲನ್ನು ನೋಡುವಳು. "ಈಗ ಬಂದಾನು.... ಈಗ ಬಂದಾನು...." ಎಂದುಕೊಳ್ಳುವಳು. ನಿರಾಸೆ ಹೆಚ್ಚುತ್ತ ಹೋದಂತೆ ಹಿಂದಿನ ದಿನಗಳು ಒಂದೊಂದಾಗಿ ಕಣ್ಣೆದುರು ಸುಳಿದಾಡುತ್ತಿದ್ದುವು.

ತನ್ನ ದೇಹದ ಶ್ರಮವನ್ನೂ ಲೆಕ್ಕಿಸದೆ, ಮಗನ ಚಿಕ್ಕಂದಿನಲ್ಲಿ ಆಕೆ ದುಡಿದಿದ್ದಳು. ಉಂಡುಡಲು ಅವನಿಗೇನೂ ಕಡಮೆ ಮಾಡಲಿಲ್ಲ. ಹೊಲ, ಮನೆಗಳಲ್ಲಿ ಒಬ್ಬಂಟಿಗಳಾಗಿ ದುಡಿಯುತ್ತಿದ್ದಳು. ಇದು ಕಿಟ್ಟಯ್ಯನ ಮನಸ್ಸಿಗೂ ಬಾರದೆ ಇರಲಿಲ್ಲ. "ಅಮ್ಮ.... ಅಮ್ಮ....." ಎಂದು ದಿನವಿಡೀ ಅವಳೊಡನೆ ಅಲೆದಾಡುತ್ತಿದ್ದ. ತನ್ನಿಂದಾದಷ್ಟು ದುಡಿಯುತ್ತಿದ್ದ. ದಿನಕಳೆದಂತೆ ಮುದಿ ತಾಯಿಯನ್ನು ಮನೆಯಲ್ಲೇ ನಿಲ್ಲಿಸಿ, ತಾನೇ ಹೊಲದಲ್ಲಿ ದುಡಿಯತೊಡಗಿದ. ಎಂಕಜ್ಜಿ ಹೊಲಕ್ಕೆ ಬಂದರೂ ಆಕೆಯನ್ನು ದುಡಿಯಲು ಬಿಡುತ್ತಿರಲಿಲ್ಲ. ಒಂದು ಕಡೆ ತಾಯಿಯನ್ನು ನಿಲ್ಲಿಸಿ, ತಾನು ದುಡಿಯುತ್ತ ಅವಳೊಡನೆ ಹರಟೆಯಾಡುತ್ತಿದ್ದ. ಎಂಕಜ್ಜಿಗೂ ಮಗನೆಂದರೆ ಪ್ರೀತಿ. ಸಂಜೆ ಅವನು ದುಡಿದು ಮನೆಗೆ ಬರುವಾಗ ಬಿಸಿನೀರು ಕಾಯಿಸಿ ಇಡುತ್ತಿದ್ದಳು. ಒಮ್ಮೊಮ್ಮೆ ಎಣ್ಣೆ ಹಚ್ಚಿ ಮಿಂಡಿಸುತ್ತಿದ್ದಳು. ರುಚಿರುಚಿಯಾದ ಅಡಿಗೆ ಮಾಡಿ ಬಡಿಸುತ್ತಿದ್ದಳು. ಅವನೊಡನೆ ಏನೇನೋ ಮಾತುಕತೆಯಾಡುತ್ತಿದ್ದಳು. ಅವನನ್ನು ಬಿಟ್ಟಿರುವುದೆಂದರೆ ಎಂಕಜ್ಜಿಗೆ ಎಲ್ಲಿಲ್ಲದ ಬೇಸರವಾಗುತ್ತಿತ್ತು. ಅವನು ದುಡಿಯುತ್ತಿರುವಾಗ ತಾನೂ ಅವನೊಡನೆ ಮಾತನಾಡುತ್ತ ದುಡಿಯುತ್ತಿದ್ದಳು. ಕಿಟ್ಟಯ್ಯನೂ ಹೊಲದ ಕೆಲಸವಿಲ್ಲದಿರುವಾಗ ಒಂದು ಕ್ಷಣವನ್ನೂ ಇತರರೊಡನೆ ಕಳೆದುದಿಲ್ಲ. ಸಂಜೆಯಾದೊಡನೆ, ಅಮ್ಮ....ಅಮ್ಮ....ಎಂದು ಕರೆಯುತ್ತ ಮನೆಗೆ ಓಡಿ ಬರುತ್ತಿದ್ದ.

ಹೀಗಿದ್ದ ಮಗ ಮನೆಗೆ ಬರುವಾಗ ಏಕೆ ತಡಮಾಡುತ್ತಾನೆ ಎಂಬುದು ಎಂಕಜ್ಜಿಗೆ ಮೊದಲು ಹೊಳೆಯಲಿಲ್ಲ. ಒಂದೆರಡು ಸಲ ಮಗನೊಡನೆ ಕೇಳಿದಳು. ಆದರೆ ಅವನು ಹೇಳಿದುದು ಅವನಿಗೇ ಅರ್ಥವಾಗುತ್ತಿರಲಿಲ್ಲ. ಮುಂಜಾನೆ ಹೊರಡುವಾಗ ಬುತ್ತಿ ಕಟ್ಟಿಕೊಟ್ಟು, "ಬೇಗ ಬಾ....." ಎಂದು ಅವನನ್ನೆ ನೋಡುತ್ತ ಎಂಕಜ್ಜಿ ನುಡಿಯುವಳು. ಆದರೆ ಕತ್ತಲಾಗುತ್ತಿದ್ದರೂ ಅವನು ಮನೆಗೆ ಬರಲಾರ. ಅನ್ನ ತಣಿದ ನಂತರ ಬರುತ್ತಾನೆ. ಎಂಕಜ್ಜಿ "ಏಕೆ ತಡಮಾಡಿದೀ?" ಎಂದರೆ, ಏನೇನೋ ಉತ್ತರ ಹೇಳಿ ಆಕೆಯ ಬಾಯಿ ಮುಚ್ಚಿಸುವ. ದಿನ ಕಳೆದಂತೆ— ಕಿಟ್ಟಯ್ಯನಿಗೊಬ್ಬ ಗೆಳೆಯ ದೊರಕಿದ್ದಾನೆ---ಎಂಬ ಸುದ್ದಿ ಎಂಕಜ್ಜಿಯ ಕಿವಿಯನ್ನು ಮುಟ್ಟಿತು. ಅವಳೊಮ್ಮೆ ನಿಟ್ಟುಸಿರು ಬಿಟ್ಟಳು ಮಾತ್ರ. 'ಯಾರು? ಏನು?" ಎಂದು ಕೂಡ ಮಗನೊಡನೆ ಕೇಳಲಿಲ್ಲ. ಕಿಟ್ಟಯ್ಯ ನಿತ್ಯದಂತೆ ತಡಮಾಡಿ ಬರುವ. ಆಗತ್ಯವಿದ್ದುದನ್ನು ತಾಯೊಡನೆ ಮಾತನಾಡುತ್ತ ಉಣ್ಣುವ. ಎಂಕಜ್ಜಿ ಅವನನ್ನೇ

೫೫ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೪-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ದಿಟ್ಟಿಸಿ ನೋಡುವಳು. "ಎಷ್ಟು ಸೊರಗಿದ್ದಾನೆ ಈಗ....." ಎಂದು ಮನಸ್ಸಿನಲ್ಲೇ ಹೇಳಿಕೊಳ್ಳುವಳು. ಅವನ ಊಟ ಆಯಿತೆಂದರೆ ತಾನೂ ತುಸು ಉಣ್ಣುವಳು. ಗೋಡೆಗೊರಗಿ ಕುಳಿತು ಏನೇನೋ ಯೋಚಿಸುವಳು. ಕಿಟ್ಟಯ್ಯನನ್ನು ನೋಡುತ್ತ ನೋಡುತ್ತ ಅವಳ ಕಣ್ಣುಗಳು ಮಂಜಾಗುತ್ತಿದ್ದುವು.

ಈಗೀಗ ಎಂಕಜ್ಜಿ ಮಗನೊಡನೆ ಸ್ವಮಾತನಾಡುವುದೇ ಕಡಮೆ ಯಾಗತೊಡಗಿತು. ಅವನಿಗಾಗಿ ಕಾದು ಕುಳ್ಳಿರುವುದಿಲ್ಲ ಅವಳು. ಸಂಜೆಯಾದೊಡನೆ, ಮನೆಯಿಂದ ಹೊರಗೆ ಬಂದು ಗದ್ದೆಯ ಕಡೆಗೆ ನೋಡುತ್ತಿರುವುದಿಲ್ಲ. ದೀಪ ಹಚ್ಚಿ, ತಾನು ತುಸು ಉಂಡು, ಕಾಲು ಚಾಚಿಕೊಂಡು ಮನೆಯ ಮಾಡಿನ ಕಡೆಗೆ ನೋಡುವಳು. ಎಷ್ಟು ಹೊತ್ತಿಗಾದರೂ ಮಗ ಮನೆಗೆ ಬರುವ, ಉಣ್ಣುವ. ಎಂಕಜ್ಜಿ ಅವನೊಡನೆ ಯಾವ ಮಾತುಗಳನ್ನೂ ಆಡುವುದಿಲ್ಲ. ಬೆಳಗಾಗುವ ತನಕ ಆಗಾಗ ಕೆಮ್ಮುವಳು. ಅವಳ ಕೆಮ್ಮಿಗೆ ಕಿಟ್ಟಯ್ಯ ಏಳುವ; ತಾನೂ ಕೆಮ್ಮುವ.—ತಾಯಿಯಿಂದ ಕಲಿತು ಕೊಂಡುದೋ ಏನೋ—ಈಗೀಗ ಕೆಮ್ಮು ಅವನಿಗೂ ಅಂಟಿಕೊಂಡಿತ್ತು.

'ಇದೇಕೆ ಈ ಮೌನ?' ಕಿಟ್ಟಯ್ಯನಿಗೆ ಬೇಸರವೆನಿಸಿತು. ದಿನವೆಲ್ಲ ಹರಟೆ ಹೊಡೆಯುತ್ತಿದ್ದ ಅವನಿಗೆ, ಈ ಮೌನವನ್ನು ಸಹಿಸುವುದು ಕಷ್ಟವೆನಿಸಿತು. ಮೊದಲು ಉಂಡೊಡನೆ ಹರಟೆಗೆ ನೊದಲಾಗುತ್ತಿದ್ದಿತು. ಈಗ ಅದೇನೂ ಇಲ್ಲ. ಎಷ್ಟು ಹೊತ್ತಿಗೆ ನೋಡಿದರೂ ಮೌನ. ಅವರಿಬ್ಬರೂ ಕೆಮ್ಮುವಾಗ ಮಾತ್ರ ಆ ಮೌನ ತುಸು ಸರಿಯುತ್ತಿತ್ತು.—ಸ್ವೀಕೃತಿಯ ನೂತುಗಳು, ಏನಾದರೂ ತುಸು ತಪ್ಪಿದಾಗಿನ ಗದರಿಕೆಗಳು—ಇವು ಒಂದೂ ಈಗ ಇಲ್ಲ. ಕಿಟ್ಟಯ್ಯ ಈಗ ಏನು ಮಾಡಿದರೂ ಎಂಕಜ್ಜಿ ಮಾತನಾಡುತ್ತಿರಲಿಲ್ಲ. ಮಾತನಾಡುವುದಿರಲಿ, ಅವನೆಡೆಗೆ ನೋಡುತ್ತಲೇ ಇರಲಿಲ್ಲ ಆಕೆ. ಎಂಕಜ್ಜಿ ಕೆಮ್ಮುತ್ತಿರುವಾಗ—ಏನಾದರೂ ಮಾತನಾಡುತ್ತಾಳೆಯೇ—ಎಂದು ಕಿಟ್ಟಯ್ಯ ಕಿವಿನಿಮಿರಿಸುವ.—ನನಗೂ ಎಚ್ಚರವಿದೆ ಎಂದು ತಿಳಿದುಕೊಳ್ಳಲಿ—ಎಂದು ಕೆಮ್ಮುವ. ಆದರೆ ಎಲ್ಲವೂ ವ್ಯರ್ಥ. ಎಂಕಜ್ಜಿ ಅವನೆಡೆಗೆ ಕಣ್ಣೆತ್ತಿ ಕೂಡ ನೋಡುವುದಿಲ್ಲ. ಒಂದು ದಿನ ಕಿಟ್ಟಯ್ಯ ಹೆದರುತ್ತ "ಅಮ್ಮ..." ಎಂದ. ಆದರೆ ಮಾತು ಗಂಟಲಲ್ಲೆ ಉಳಿಯಿತು. ರಾತ್ರಿ ಮುಖದ ತುಂಬ ಮುಸುಕು ಹಾಕಿಕೊಂಡು ತಿರುಗಿ ತಾಯನ್ನು ಕರೆದ.

ಎಂಕಜ್ಜಿ, "ಹುಂ...." ಎಂದಳು.

ಕಿಟ್ಟಯ್ಯ ಮಾತನಾಡಲಿಲ್ಲ. ಏನನ್ನು ಮಾತನಾಡುವುದು? ಮಗ ಸುಮ್ಮನಾದುದನ್ನು ಕಂಡು ಎಂಕಜ್ಜಿ ಕೇಳಿದಳು:

"ಏನು....?"

"ಏನು....? ಹುಂ, ಏನಿಲ್ಲ....ಏನಿಲ್ಲ...."

ಕಿಟ್ಟಯ್ಯ ಅಲ್ಲಿಗೇ ಮಾತು ನಿಲ್ಲಿಸಿದ. ಅವನಿಗೆ ಮಾತನಾಡುವು ದೇನೂ ಇರಲೂ ಇಲ್ಲ.

ಎಂಕಜ್ಜಿ ಈಗ ಆ ಮೌನವನ್ನು ಬಿಟ್ಟಿದ್ದಾಳೆ. "ಮಾತ ನಾಡದಿದ್ದರೆ ಏನು ಮಾಡಿದಂತಾಯಿತು?" ಎಂದುಕೊಳ್ಳುತ್ತಾಳೆ. ಆದರೆ ಆಕೆ ನೆರಿಗೆಯಿಂದ ಕಣ್ಣೊರಸಿಕೊಳ್ಳುವಳು. ಮಗ ಮುಸುಕು ಹಾಕಿ ಮಲಗಿದನೆಂದರೆ ಸರಿ—ಅವನನ್ನೆ ನೆಟ್ಟ ದೃಷ್ಟಿಯಿಂದ ನೋಡುವಳು. ಏನೇನೊ ಯೋಚಿಸುತ್ತ ಕಣ್ಣೀರು ಸುರಿಸುವಳು. ಮಗನಿಗಾಗಿ ಮುಚ್ಚಂಜೆಯಿಂದಲೇ ಕಾಯುತ್ತಿರುವಳು. ಅವನು ಬರುವುದು ತುಸು ತಡವಾಯಿತೆಂದರೆ, "ಹೀಗೂ ಮಾಡಬಹುದೇ.... ಅಯ್ಯೋ...." ಎಂದು ಕಣ್ಣಲ್ಲಿ ನೀರು ತುಂಬಿ ಕೊಂಡು, ಅಂಗಳದ ತುದಿಗೆ ಬಂದು ಮಗನ ದಾರಿ ಕಾಯುವಳು.

ಒಂದು ರಾತ್ರಿ ಕಿಟ್ಟಯ್ಯ ಮಲಗಿ ಎಷ್ಟೋ ಹೊತ್ತಾಗಿತ್ತು. ತಾಯಿ ಇನ್ನೂ ಹಾಗೆಯೇ ಕೆಮ್ಮುತ್ತ ಕುಳಿತುದನ್ನು ಕಂಡು ಅವನಿಗೆ ಸೋಜಿಗವಾಯಿತು. ಅವಳ ಮುಖವನ್ನೇ ನೋಡತೊಡಗಿದ. ಎಂಕಜ್ಜಿ ಮಗನನ್ನೇ ನೋಡುತ್ತಿದ್ದಳು. ಕಿಟ್ಟಯ್ಯ ಮುಖಕ್ಕೆ ಮುಸುಕೆಳೆದುಕೊಂಡ. ತಾಯಿ ಏಕ ಅಳುತ್ತಿದ್ದಾಳೆ ಎಂಬುದು ಅವನಿಗರಿಯಲಿಲ್ಲ. ಆದರೂ—ಅದೇಕೋ— ಅವನ ಕಣ್ಣಲ್ಲೂ ನೀರು ತುಂಬಿಕೊಂಡಿತು. ಮುಸುಕಿನೊಳಗೆಯೇ ಅಳತೊಡಗಿದ. ಎಂಕಜ್ಜಿಗೆ ಅದು ತಿಳಿಯಿತೋ ಏನೋ!

"ಮಗು..." ಎಂದಳು. ಆವಳ ಸ್ವರ ನಡುಗುತ್ತಿತ್ತು.

ಕಿಟ್ಟಯ್ಯ ಮುಸುಕಿನೊಳಗಿಂದಲೇ "ಹುಂ...." ಎಂದ.

ತಾಯಿ ಏನೋ ಕೇಳುತ್ತಿದ್ದಾಳೆ ಎಂಬುದು ಅವನಿಗರಿವಾಯಿತು. ನೀರು ತುಂಬಿದ ಕಣ್ಣನ್ನೊರಸಿಕೊಂಡು ಕಿವಿ ನಿಮಿರಿಸಿ ತಾಯಿಯ ಕಡೆಗೆ ಹೊರಳಿದ.

"ಇಂದೇಕೆ ಹೊತ್ತಾಯಿತು....!"

ಎಷ್ಟೋ ಸಲ ಎಂಕಜ್ಜಿ ಹೀಗೆ ಮಗನೊಡನೆ ಕೇಳಿದ್ದಳು. ಆಗ ಕಿಟ್ಟಯ್ಯ ಏನೇನೋ ಉತ್ತರಕೊಟ್ಟಿದ್ದ. ಆದರೆ ಇಂದು ತಾಯಿ ಕೇಳಿದುದು ಅವನಿಗೆ ಹೊಸರೀತಿಯಾಗಿ ಕಂಡಿತು. ಮುಸುಕಿನ ಮರೆಯಿಂದ ತಾಯಿಯ ಮುಖವನ್ನು ಇಣಿಕಿ ನೋಡಿದ. ಎಂಕಜ್ಜಿಯ ಕಣ್ಣುಗಳಿಂದ ಕಂಬನಿ ಮೆಲ್ಲಮೆಲ್ಲಗೆ ಕೆಳಗಿಳಿಯುತ್ತಿತ್ತು. ಕಿಟ್ಟಯ್ಯ ಮುಖ ಮುಚ್ಚಿಕೊಂಡು ಅಳತೊಡಗಿದ.

"ಹುಂ....ಹೇಳು" ಎಂಕಜ್ಜಿ ದೀಪದ ನಾಲಗೆಯನ್ನೆ ದಿಟ್ಟಿಸುತ್ತ ನುಡಿದಳು.

"ಹೇ....ಟೆ....ಗೆ" ಕಿಟ್ಟಯ್ಯ ಅಳುತ್ತ ಒಂದೊಂದೇ ಅಕ್ಷರವನ್ನು ನುಡಿದ.

ಅದನ್ನು ಹೇಳಿ ಮುಗಿಸಿದಾಗ ಅವನ ಮನಸ್ಸು ಹೇಗೆ ಹೇಗೋ ಆಗಿತ್ತು. ಆದರೆ ಇದಕ್ಕಿಂತಲೂ ಹೆಚ್ಚು ಅವನು— ತಾಯಿಯು ಇನ್ನೇನಾದರೂ ಕೇಳಿದರೆ.... ಎಂದುಕೊಂಡು— ನಡುಗುತ್ತಿದ್ದ. ಗೋಡೆಯ ಕಡೆಗೆ ಹೊರಳಿ ಮುಖದ ತುಂಬ ಮುಸುಕೆಳೆದುಕೊಂಡ.

ಎಂಕಜ್ಜಿ, "ಏಕೆ....?" ಎಂದಳು.

ಆದಕ್ಕೆ ಕಿಟ್ಟಯ್ಯ ಇದನ್ನು ಕೇಳಿಯೂ ಕೇಳಿಸದಂತೆ ಇದ್ದ. ಅವನ ಮೈ ಬೆವರಿನಿಂದ ಒದ್ದೆಯಾಗಿತ್ತು. "ಅಯ್ಯೋ.... ಈ

ನವೊಂದು ಹೇಗಾದರೂ ಕಳೆದರೆ....!" ಎನ್ನುತ್ತ ಎದೆ ತಾಳ ಾಕುತ್ತಿತ್ತು. ಮಗ ಉತ್ತರ ಹೇಳಲಾರ—ಎಂಬುದು ಎಂಕಜ್ಜಿಗೆ ಳಿದಿತ್ತು. ಆದರೂ ಗೋಡೆಗೊರಗಿ ಅವನನ್ನೆ ನೋಡುತ್ತ ೀಳಿದಳು :

" ದಿನ ನಿತ್ಯ ಏನು ಕೆಲಸ ಪೇಟೆಯಲ್ಲಿ....? "

ತಾಯಿಗೆ ಕೇಳಿಸುವಂತೆ ಕಿಟ್ಟಯ್ಯ ಸಣ್ಣ ಸ್ವರ ತೆಗೆದು ಅಳ- ೊಡಗಿದ. ಎಂಕಜ್ಜಿ ಹೇಳತೊಡಗಿದಳು :

" ಅಳತೊಡಗಿದೊಡನೆ ಉತ್ತರ ಕೊಟ್ಟಂತಾಗುತ್ತದೆಯೇ.... ುಗೂ ? ಎಷ್ಟುಸಲ ನಿನಗೆ ಹೇಳಿದೆ ನಾನು....!—ಬೇಡ, ಹೋಗ ಬೇಡ, ಸಿಕ್ಕಿದವರ ಸಹವಾಸ ಮಾಡಬಾರದು—ಎಂದು ? ಆದರೆ ಎಲ್ಲವನ್ನೂ ಮರೆತಿದ್ದೀ ನೀನು ! ನಾನಿಲ್ಲಿ ಎಷ್ಟು ಕಾಯುತ್ತಿದ್ದೆ ಎಂಬುದೂ ನಿನಗೆ ತಿಳಿಯಲಿಲ್ಲ ; ನಾನೇನು ಮಾಡಲಿ ? ಸ್ನೇಹಿತ- ರಿಂದರೆ ನನ್ನಿಂದಲೂ ಹೆಚ್ಚಿನವರಾದರು ನಿನಗೆ....ನನ್ನೊಡನೆ ಒಂದು ಮಾತನಾಡುವುದೂ ನಿನಗೆ ಬೇಡವಾಯಿತು...."

ಎಂಕಜ್ಜಿ ಮೌನವಾಗಿ ಕಣ್ಣೀರು ಸುರಿಸತೊಡಗಿದಳು. "ಇನ್ನು ಹೋಗೋದಿಲ್ಲ...." ಕಿಟ್ಟಯ್ಯ ಅಳತೊಡಗಿದ.

" ಹೌದು, ಈಗ ಹೋಗೋದಿಲ್ಲ ಎನ್ನುತ್ತಿ. ಈ ವರೆಗೆ ಯಾಕೆ ಹೋದಿ ? ದಿನ ನಿತ್ಯ ಹೇಳುತ್ತಿದ್ದೇನಲ್ಲ—ಬಾ ಬೇಗ—ಎಂದು ? ಮಗೂ.... ಈಗ ಹೇಳುತ್ತಿದ್ದೇನೆ ನೋಡು....ನೀನು ಕೆಟ್ಟದಾರಿ- ಯಲ್ಲಿ ಹೋಗುತ್ತಿದ್ದಿ ; ಇದು ಎಂದಿಗೂ ಒಳ್ಳೆಯದಾಗಲಿಕ್ಕಿಲ್ಲ. ಇನ್ನಾದರೂ ನನ್ನ ಮಾತು ಕೇಳು.... ಮಗು ?" ಎಂಕಜ್ಜಿ ಕಣ್ಣೀರಸಿಕೊಳ್ಳುತ್ತ ನುಡಿದಳು.

" ಹುಂ...." ಕಿಟ್ಟಯ್ಯ ಮುಖ ಮುಚ್ಚಿಕೊಂಡೇ ಹೂಂಗುಟ್ಟಿದ.

" ಅವರು ಹೋಗುವಾಗ ನಿನ್ನ ಭಾರವನ್ನು ನನಗೊಪ್ಪಿಸಿ ಹೋದರು... ನೀನು ಹೀಗಾಗುವಿಯೆಂದು ನನಗೇನು ಗೊತ್ತು ? ನಾನು ಹೇಳುವುದು ನಿನ್ನ ಒಳ್ಳೆಯದಕ್ಕೆಂದು ತಿಳಿ.... ಇನ್ನಾದರೂ ಆ ಪೋಲಿಗಳನ್ನು ಬಿಟ್ಟುಬಿಡು. ನಿನ್ನ ಗೆಳೆಯರೆಂದರೆ ನನಗೂ ಸಂತೋಷವೇ ; ಆದರೆ ಅವರು ನಿನ್ನನ್ನು ಹಾಳು ಮಾಡುತ್ತಾರೆ. ಯಾರು ಆ ಗೆಳೆಯರು ?.... ನನಗೇಕವರು ಒಮ್ಮೆಯೂ ಮುಖ ತೋರಿಸುವುದಿಲ್ಲ ? ನೋಡು, ಸತ್ಯ ಹೇಳು : ಈ ತನಕ ಅವರಿಗಾಗಿ ಎಷ್ಟು ಹಣ ಹಾಳು ಮಾಡಿದೀ....? "

ಕಿಟ್ಟಯ್ಯ ನೀರವವಾಗಿ ಅಳುತ್ತಿದ್ದ. ಅವನನ್ನು ಸಮಾಧಾನ ಪಡಿಸಲು ಎಂಕಜ್ಜಿಗೂ ಇಷ್ಟವಿರಲಿಲ್ಲ. "ಹೂಂ...." ಎಂದು ನೀಳ- ವಾಗಿ ನಿಟ್ಟುಸಿರಿಟ್ಟು, ಚಾಪೆ ಬಿಡಿಸಿಕೊಂಡು ದೀಪವಾರಿಸಿದಳು. ಎಂಕಜ್ಜಿ ಆಗಾಗ ಕೆಮ್ಮುತ್ತಿದ್ದಳು. ಕಿಟ್ಟಯ್ಯ, ಕಣ್ಣುಗಳಲ್ಲಿ ನೀರು ತುಂಬಿಕೊಂಡಾಗೊಮ್ಮೆ ಬಿಕ್ಕಳಿಸುತ್ತಿದ್ದ. ಹೊದೆದ ಬಟ್ಟೆಯಿಂದ ಕಣ್ಣೀರೊರಸಿಕೊಂಡು ತಿರುಗಿ ಯೋಚಿಸತೊಡಗುತ್ತಿದ್ದ. ಮತ್ತೆ ತಿರುಗಿ ಕಣ್ಣುಗಳಲ್ಲಿ ನೀರು ತುಂಬಿಕೊಳ್ಳುತ್ತಿತ್ತು.

ಕಿಟ್ಟಯ್ಯನಿಗೆ ಏನು ಮಾಡಿದರೂ ನಿದ್ರೆ ಬರಲಿಲ್ಲ ಆತ್ತ ಒಮ್ಮೆ ಇತ್ತ ಒಮ್ಮೆ ಹೊರಳುತ್ತಿದ್ದ. ಮೈ ಬೆವರಿನಿಂದ ತೊಯ್ದಿತ್ತು. " ಇಷ್ಟೆಲ್ಲ ಏಕೆ ಆಯಿತು ? " ಅವನ ಮನಸ್ಸು ಒಂದೇ ಸವನೆ ಪ್ರಶ್ನಿಸುತ್ತಿತ್ತು. "ಇದಕ್ಕೆಲ್ಲ ನಾನೇ ಕಾರಣ ! " ಎಂದುಕೊಂಡಾಗ ಅವನ ದೇಹವೊಮ್ಮೆ ನಡುಗುತ್ತಿತ್ತು. ತನ್ನ ಇತ್ತೀಚೆಗಿನ ಜೀವನ ಕಣ್ಣ ಮುಂದೆ ಸುಳಿದಾಡುತ್ತಿತ್ತು. ಇದನ್ನು ಯೋಚಿಸಿದಂತೆ, ಗೆಳೆಯ ಶಿವಣ್ಣನ ಮೇಲೆ ಅವನ ಮನಸ್ಸು ಹಂಪಾಯುತ್ತಿತ್ತು. " ಇವ್ವ- ಕ್ಕೆಲ್ಲ ಅವನೇ ಕಾರಣನಲ್ಲವೇ ? " ಎನ್ನುತ್ತಿತ್ತು ಮನಸ್ಸು. ಆದರೆ ತಾನೇಕೆ ಅವನೊಡನೆ ಸೇರಿಕೊಂಡೆ ? ಎಂದಾಗ ಮಾತ್ರ ಅವನಿಗೆ ತನ್ನ ಮೇಲೆಯೇ ಅಸಮಾಧಾನ ಹೆಚ್ಚುತ್ತಿತ್ತು.

"ಉಹುಂ....ಇಲ್ಲ, ಇಲ್ಲ! ಇನ್ನು ಮುಂದೆ ಅವನನ್ನು ನೋಡಲೇ ಬಾರದು. ಅಮ್ಮ ಇಂದು ಹೇಳಿದುದು ಒಳ್ಳೆಯದೇ ಆಯಿತು. ಇನ್ನು ಹೊದಲಿನಂತೆ ಸರಿಯಾಗಿರಬೇಕು....ಕೆಲಸವಿಲ್ಲದಾಗ ಒಂದು ಕ್ಷಣ- ವನ್ನೂ ಮನೆಯಿಂದ ಹೊರಗೆ ಕಳೆಯಬಾರದು....ಹೌದು ! ಅಮ್ಮ ಒಬ್ಬಳೇ ದುಡಿಯುತ್ತಿದ್ದಾಳೆ. ತಾನೂ ಆಕೆಗೆ ಸಹಾಯಮಾಡ- ಬೇಕು—ಅದನ್ನು ಬಿಟ್ಟು ಎಲ್ಲೆಲ್ಲಿ ಅಲೆಯಬಾರದು....ಅವಳಿಗೆ ಎಷ್ಟು ಅನ್ಯಾಯ ಮಾಡಿದೆ ನಾನು.... ! "

ತ್ವರೆ ಮಾಡಿರಿ ! ಪ್ರತಿಗಳು ಸ್ವಲ್ಪವೇ ಉಳಿದಿವೆ !!

" ನಕ್ಷತ್ರಗಾನ "

★

ಶ್ರೀ. ಡಿ. ಎಸ್. ಕರ್ಕಿ ಎಮ್. ಎ., ಪಿ ಎಚ್. ಡಿ.
ಬೆಳಗಾಂವ—ಇವರ
ಉತ್ಕೃಷ್ಟ ಕವನ ಸಂಗ್ರಹ

ಶ್ರೀ. ವ. ರಾ. ಜೇಂದ್ರೆ, ಮಧುರಚೆನ್ನ. ವಿ. ಕೃ. ಗೋಕಾಕ, ಮುಗಳಿ ಮುಂತಾದ ಕವಿಶ್ರೇಷ್ಠರು ಇದನ್ನು ತುಂಬಾ ಹೊಗಳಿದ್ದಲ್ಲದೆ, ಜಯಂತಿ, ಜಯಕರ್ನಾಟಕ, ನವಯುಗ ಮುಂತಾದವರಿಂದ ಒಳ್ಳೇ ಅಭಿಪ್ರಾಯಕ್ಕೆ ಪಾತ್ರವಾಗಿದೆ. ಬೆಲೆ ರೂ ೧-೪-೦.

ದೊರೆಯುವ ಸ್ಥಳ

ರಬಕವಿ ಮಿತ್ರಸಮೂಹ ಪ್ರೆಸ್, ಜನಪಟ್ಟ ಕರ್ನಾಟಕ ಪುಸ್ತಕ ಮಂದಿರ } ಡಿ ಎಸ್. ಕರ್ಕಿ. ಕೊತವಾಲಗಲ್ಲಿ ಬೆಳಗಾವ ಸಾಹಿತ್ಯ ಮಂದಿರ ಧಾರವಾಡ.

ಸೂ. ಪೂರಾಟಗಾರರಿಗೆ ವಿಶೇಷ ಸವಲತ್ತು ಕೊಡಲಾಗುವದು.

ನಮ್ಮಲ್ಲಿ ದೊರೆಯುವ ಪುಸ್ತಕಗಳು!

ಲೇಖನ ಕಲೆ	೨-೪-೦	ರಾಮಣ್ಣ ಮಾಸ್ತರು	೨-೦-೦
ಅಂಡಯ್ಯ	೧-೮-೦	ದಶಭಕ್ತಿ	೩-೦-೦

ಚಿನ್ಮಯ ಚಿಂತಾಮಣಿ ೧-೦-೦

ವ್ಯಾಪಾರಿಗಳಿಗೆ ತುಂಬ ಕಮೀಶನ್ ಉಂಟು.

ವಿಜಿ ಅಣ್ಣಾರಾಯರು, ಉಗಾರ (ಜಿಲ್ಲಾ ಬೆಳಗಾಂವಿ.)

ತುಂಬಿಕೊಂಡ ಕಣ್ಣೀರನ್ನು ಒರಸಿಕೊಂಡು ಕಿಟ್ಟಯ್ಯ ಇನ್ನೊಂದೆಡೆಗೆ ಹೊರಳಿದ.

" ಅಮ್ಮ ಮೊದಲೇ ಹೇಳಿ ಬಿಡುತ್ತಿದ್ದರಿ....ಓಹ್, ಈ ಕಷ್ಟವೇ ಇರುತ್ತಿರಲಿಲ್ಲವಲ್ಲ.... ! ಪಾಪ, ಎಷ್ಟು ಸೊರಗಿದ್ದಾಳೆ ಈಗ.... ! ಊಹುಂ, ಇನ್ನು ಅಮ್ಮನೆ ಎಲ್ಲೆಲ್ಲಿ ಅಲೆಯಬಾರದು; ಯಾವಾಗಲೂ ಅಮ್ಮನೊಡನೆ-ಹಟಿ ಹೂಡೆಯುತ್ತ-ಇರಬೇಕು....ಪಾಪ, ಇಂದೆಷ್ಟು ಅತ್ತಳು....ಅಮ್ಮ ಇಲ್ಲನಾದರೆ ನನಗೆಷ್ಟು ಕಷ್ಟವಾಗುತ್ತಿತ್ತು.... ! "

ಎಂಕಜ್ಜಿಯೊಮ್ಮೆ ಗಂಟಲು ಸಿಡಿದು ಹೋಗುವಂತೆ ಕೆಮ್ಮಿದಳು. ಇರುಳಿನ ಮೌನ ಮೊದಲಿಗಿಂತ ಹತ್ತುಪಾಲು ಭೀಕರವಾಗಿ ಕಂಡಿತು. ಕಿಟ್ಟಯ್ಯ ಒಮ್ಮೆ ನಡುಗಿದ. ಬೆವರೊರಸಿಕೊಳ್ಳಲು ಕೈಯನ್ನು ಮುಂದೆ ಮಾಡಿದ. ಆದರೆ ಕೈ ಮುಂದಕ್ಕೆ ಹೋಗಲಿಲ್ಲ. ಎದೆಯಿನ್ನೂ ಒಂದೇಸವನೆ ಹಾರುತ್ತಿತ್ತು. ಸದ್ದಾಗದಂತೆ ನಿಟ್ಟುಸಿರು ಬಿಡುತ್ತಿದ್ದ. ಬಾರಿಬಾರಿಗೂ " ಈ ಇರುಳೊಂದು ಕಳೆದುಬಿಟ್ಟಿದ್ದರೆ....! " ಎನ್ನುವಂತೆ ತೋರುತ್ತಿತ್ತು ಅದು.

ಎರಡು ದಿನಗಳು ಕಳೆದುವು. ಈಗ ಕಿಟ್ಟಯ್ಯ ಹೊತ್ತು ಮುಳುಗುವ ಹೊದಲೇ ಮನೆಯನ್ನು ಸೇರುವ. ಭತ್ತದ ತೆನೆಗಳು ಅಂಗಳದಲ್ಲಿ ರಾಶಿ ಬಿದ್ದಿದ್ದುವು. ಎಂಕಜ್ಜಿಗೆ ನಿತ್ಯವೂ ಜ್ವರ ಬರುತ್ತಿತ್ತು. ಆದುದರಿಂದ ಕಿಟ್ಟಯ್ಯ, ನೆರೆಹೊರೆಯವರ ಸಹಾಯದಿಂದ ಭತ್ತವನ್ನು ರಾಶಿ ಮಾಡಿ ಹಾಕಿದ. ಎಲ್ಲರೂ ಹೋದನಂತರ— ತನಗೆ ಕೂಡದಿದ್ದರೂ— ಗೋಡೆಯನ್ನು ಹಿಡಿದುಕೊಂಡು ಎಂಕಜ್ಜಿ ಹೊರಗೆ ಬಂದು ಕುಳಿತಳು. ಕಿಟ್ಟಯ್ಯ ಅಸಹಾಧಿಯಂತೆ ತಲೆ ತಗ್ಗಿಸಿಕೊಂಡು— ಭತ್ತ ರಾಶಿ ಮಾಡಿ ಆಗಿದ್ದರೂ — ಅದರ ಮೇಲೆ ಅತ್ತಿತ್ತ ಕಾಲಿನಿಂದ ಕೆರೆಯುತ್ತಿದ್ದ. ಎಂಕಜ್ಜಿಗೆ ಮೊದಲೇ ತಿಳಿದಿತ್ತು — ಈ ಸಲ ಸರಿಯಾಗಿ ಕೆಲಸ ಮಾಡದೆ ಇದ್ದುದರಿಂದ ಹೋದ ವರುಷದ ಅರ್ಧದಷ್ಟೇ ಈ ಸಲ ಬೆಳೆಯಾದೀತೆಷ್ಟೆ — ಎಂದು. ಆದುದರಿಂದ ಅಳೆ ಮಾತನಾಡಲೇ ಇಲ್ಲ. ಮೊಮ್ಮಗನನ್ನು ಏಕೆ? ಏನು? ಎಂದು ಕೂಡ ಕೇಳಲಿಲ್ಲ. ಆದರೆ ಅವಳ ಮುಖ — ಇನ್ನು ಮುಂದೆ ಹೀಗಾಗದಂತೆ ನೋಡಿಕೊ — ಎಂದು ಹೇಳುತ್ತಿತ್ತು.

ಕಿಟ್ಟಯ್ಯ ಎರಡು ದಿನಗಳನ್ನು ಧುಃಖದಿಂದ ಕಳೆದ. — ಇನ್ನೇನು ಮಾಡಲಿ? ಯಾರಿದ್ದಾರೆ ನನಗೆ! — ಎಂದುಕೊಂಡು ಕಂಬನಿ ಸುರಿಸಿದ. ಒಂದೇಸವನೆ ನರಳುತ್ತಿದ್ದ. ಎಂಕಜ್ಜಿ, ಎರಡನೆಯ ದಿನ ರಾತ್ರಿ ಮಗನಕಣ್ಣೀರು, ಅಸಹಾಯತೆ ಒಂದನ್ನೂ ಲೆಕ್ಕಿಸದೆ ಅವನನ್ನು ಅಗಲಿದಳು. ಕಿಟ್ಟಯ್ಯ, ಎಲ್ಲವನ್ನೂ ಕಳೆದುಕೊಂಡವನಂತೆ ತೋರುತ್ತಿದ್ದ. ಮನೆ, ಹೊಲ, ಎಲ್ಲವೂ ಶೂನ್ಯವಾಗಿ ಕಾಣಿಸುತ್ತಿತ್ತು ಅವನಿಗೆ. ಕುಳಿತಲ್ಲಿ, ನಿಂತಲ್ಲಿ ಎಲ್ಲಿ ಹೋದರೂ ಬೇಸರದಿಂದ ಇರುತ್ತಿದ್ದ. ಕೊನೆ-ಮೊದಲಿಲ್ಲದ ಯೋಚನೆಗಳು ಕಾಡುತ್ತಿದ್ದುವು. ಒಮ್ಮೊಮ್ಮೆ, ಎಲ್ಲಾದರೂ ತಿರುಗಾಡಲು ಹೋದಾಗ, ಹಳೆಯ ಗೆಳೆಯ ಶಿವಣ್ಣನ ಭೇಟಿಯಾಗುತ್ತಿತ್ತು. — ಕಿಟ್ಟಯ್ಯ ತನಗೆ ಮೋಸ ಕೊಟ್ಟನೆಂದೋ ಏನೋ — ಅವನನ್ನು ಕಂಡರೆ ಮೊದಮೊದಲು ಶಿವಣ್ಣ ಮುಖ ಮುದುಡಿಸಿಕೊಂಡು ಬೇರೆ ಕಡೆಗೆ ತಿರುಗುತ್ತಿದ್ದ. ಕಿಟ್ಟಯ್ಯನೂ ಇದರಿಂದಾಗಿ ಏನೂ ಬೇಸರವಾಗದವನಂತೆ, ತನಗೆ ತಾನೆ ಒಬ್ಬೊಂಟಿಗನಾಗಿರುತ್ತಿದ್ದ. ಆದರೆ ಇದೂ ಹೆಚ್ಚು ಸಮಯ ಉಳಿಯಲಿಲ್ಲ. ದಿನ ಕಳೆದಂತೆ, ಏನಾದರೂ ನೆವದಿಂದ, ಕಿಟ್ಟಯ್ಯನ ಮನೆಗೆ ಬಂದು ಶಿವಣ್ಣ ಅವನೊಡನೆ ಮಾತನಾಡತೊಡಗಿದ. ಆದರೆ ತಾಯಿಯ ನೆನಪು ಬಂದಾಗ ಮಾತ್ರ ಮುಖವನ್ನು ಬೇರೆ ಕಡೆಗೆ ತಿರುಗಿಸಿ — ತಿರುಗಿ ಮೊದಲಿನಂತೆ ಆಗುತ್ತಿದ್ದೇನಲ್ಲ — ಎಂದುಕೊಳ್ಳುತ್ತಿದ್ದ. ಆದರೆ ಬೇಸರು ಬಂದಾಗ — ' ಯಾರಾದರೂ ಸರಿ, ಮಾತನಾಡಿದರೆ ಆಗುವ ನಷ್ಟವೇನು? ' ಎಂದುಕೊಂಡು ಹರಟೆಗೆ ಕುಳಿತುಬಿಡುತ್ತಿದ್ದ.

ಒಂದು ದಿನ ಸಂಜೆ ಕಿಟ್ಟಯ್ಯ ಯೋಚಿಸುತ್ತಲೇ ಮನೆಯ ಮೆಟ್ಟಿಲುಗಳನ್ನೇರ ತೊಡಗಿದ, ಆ ದಿನ ಊಟ, ನಿದ್ದೆ, ಯಾವುದಕ್ಕೂ ಅವನ ಮನಸ್ಸು ಹೋಗಲಿಲ್ಲ. ಮನೆಗೆ ಬಂದವನೇ ಎಲ್ಲಿಯೋ ಒಂದೆಡೆ ಗೋಡೆಗೊರಗಿ ಕುಳಿತುಕೊಂಡು ಯೋಚಿಸತೊಡಗಿದ.—'ಹೌದು, ಹೋದರೇನು? ಮತ್ತೆ ನೀನು ಇಲ್ಲಿದ್ದಾದರೂ ಮಾಡುವುದೇನು? ಎಲ್ಲಿಯಾದರೂ ದಿನ ಕಳೆಯುವುದು. ಈ ಮೂಲೆಯಲ್ಲಿ ನರಳಿಕೊಂಡು ಯಾಕಿರಬೇಕು? ನೀನು ದುಡಿಯುವುದಾದರೂ ಯಾರಿಗಾಗಿ ದುಡಿಯಬೇಕು? ನಾಲ್ಕು ದಿನವಾದರೂ ಸುಖದಲ್ಲಿ ಕಳೆಯಬಹುದಲ್ಲ! ನೀನು ಉಣ್ಣುವುದು ಇಲ್ಲಿಯಾದರೂ ಒಂದೆ; ಪೇಟೆಯಲ್ಲಾದರೂ ಒಂದೆ! ಅಲ್ಲೇ ಇದ್ದು ಬಿಟ್ಟರೇನು?'— ಶಿವಣ್ಣನ ಮಾತುಗಳು ಮತ್ತೆ ಮತ್ತೆ ಕಿವಿಯಲ್ಲಿ ಗುಂಯ್‌ಗುಡುತ್ತಿದ್ದುವು. ಶಿವಣ್ಣ —ಈ ಮನೆ, ಹೊಲ, ಎಲ್ಲ ಶಾಶ್ವತವಲ್ಲ; ಪೇಟೆಯಲ್ಲೇ ಏನಾದ್ರೂ ಚಾಕ್ರೀ ಮಾಡಿಕೊಂಡು ಇದ್ದು ಬಿಡುವ; ಹೇಗಾದರೂ ಉಣ್ಣ ಬೇಕಾದುದು ಮುಖ್ಯಃ ಅಲ್ಲಿಯಾದರೆ ಸುಖದಿಂದಲೇ ಇದ್ದು ಬಿಡಬಹುದಲ್ಲ —ಎಂದುದು ಅವನ ಕಿವಿಯಲ್ಲಿ ಒಂದೇ ಸವನೆ ಮೊರೆಯುತ್ತಿತ್ತು

ಒಂದೇ ಸವನೆ ಮೂಡಲಿನಿಂದ ಚಳಿಗಾಳಿ ರುಮುರುಮನೆ ಬೀಸುತ್ತಿತ್ತು. ಮುಳುಗುತ್ತಿರುವ ಚಂದ್ರನ ಕ್ಷೀಣ ಬೆಳಕು ಮನೆಯ ಹೊರಗೆ ಬಿದ್ದಿತ್ತು. ಹಳ್ಳಿಯೆಲ್ಲ ಉಂಡು ನಿದ್ರಿಸುತಿತ್ತು. ಆದರೆ ಇದೊಂದರ ಪರಿವೆಯೂ ಕಿಟ್ಟಯ್ಯನಿಗೆ ಇರಲಿಲ್ಲ. ಭಾರವಾದ, ಅರಿಮುಚ್ಚಿದ ಕಣ್ಣುಗಳಿಂದ ಕತ್ತಲನ್ನು ನೋಡುತ್ತ, ಆಲ್ಲಿಯೇ ಗೋಡೆಗೊರಗಿ ಕುಳಿತಿದ್ದ. ಕತ್ತಲಾಗಿದೆ, ದೀಪ ಹಚ್ಚಬೇಕು, ಉಣ್ಣಬೇಕು, ನಿದ್ರಿಸಬೇಕು—ಎಂಬ ಯೋಚನೆಗಳಾವುವೂ ಅವನ ಹತ್ತಿರ ಕೂಡ ಸುಳಿಯುತ್ತಿರಲಿಲ್ಲ. ಮನೆಯ ಮೂಲೆಯ ಭತ್ತದ ರಾಶಿಯಲ್ಲಿ ಹೆಗ್ಗಣಗಳು ಕಚ್ಚಾಡಿಕೊಳ್ಳುತ್ತಿದ್ದುವು. ಆ ಇರುಳಿನಲ್ಲಿ ತಾಯಿಯ ಮುಖದ ಹೊರತು ಮತ್ತಾವುದೂ ಅವನ ಮನಸ್ಸಿಗೆ ಕಾಣಿಸುತ್ತಿರಲಿಲ್ಲ. ಅವಳ ಮಾತುಗಳು ಒಂದೇ ಸವನೆ ಅವನ ಮನಸ್ಸಿನೊಡನೆ ಹೋರಾಡುತ್ತಿದ್ದುವು :

"ಕೆಟ್ಟ ದಾರಿಯಲ್ಲಿ ನಡೆಯುತ್ತಿದ್ದೀ....ನುಗೂ....ನೀನು ಹಾಗಾಗ ಬಾರದು.....ನಿನ್ನಪ್ಪ, ಅಜ್ಜ ಯಾರೂ ಹಾಗೆ ಮಾಡಲಿಲ್ಲ, ನೀನು ಪಾಳಾಗುತ್ತಿದ್ದೀ....ನಾನು ಹೇಳುವುದು ನಿನ್ನ ಒಳ್ಳೆಯದಕ್ಕೆಂದು ತಿಳಿ....ಈಗಲೇ ಹೇಳುತ್ತಿದ್ದೇನೆ....ಹಾಗೆ ಮಾಡಬೇಡ...."

ಕಿಟ್ಟಯ್ಯ ಗೋಡೆಗೊರಗಿಕೊಂಡು ಯಾವುದೋ ದೀರ್ಘ ಯೋಚನೆಯಲ್ಲಿ ತಲ್ಲೀನನಾಗಿದ್ದ. ಕಂಬನಿ ಮೆಲ್ಲಮೆಲ್ಲನೆ ಗಲ್ಲದ ಕಡೆಗೆ ಹರಿಯುತ್ತಿತ್ತು. ತಾಯಿಯ ನರಳುವ ಮುಖ ಅವನಿಗೆ ಮೊರೆಯಿಡುತ್ತಿತ್ತು. ಮಾತನಾಡಲಾರದೆ ಕಂಬನಿ ತುಂಬಿದ ಮುಖವನ್ನು ತನ್ನೆಡೆಗೆ ಹೊರಳಿಸಿದಂತೆ ಅವನಿಗೆ ತೋರಿತು. ಅವಳ ಕಂಬನಿ ತುಂಬಿದ ಕಣ್ಣುಗಳು ಅವನ ಮನಸ್ಸಿನೊಡನೆ ಏನೇನೊ ಹೇಳುತ್ತಿದ್ದುವು. ಅವನ್ನೆಲ್ಲ ಅವನ ಮನಸ್ಸು ಅರ್ಥ ಮಾಡಿಕೊಂಡಿತ್ತು.

"ಅಮ್ಮ....! ಇಲ್ಲ, ...ಹಾಳಾಗುವುದಿಲ್ಲ.... ಹಾಗೆ ಮಾಡುವುದಿಲ್ಲ....."

ಕಿಟ್ಟಯ್ಯ ಬಡಬಡಿಸಿದ. ಒಳಗೆ, ಹೊರಗೆ, ಎಲ್ಲೆಲ್ಲೂ ಇನ್ನೂ ಕತ್ತಲಾಗಿಯೇ ಇತ್ತು. ತಿಂಗಳು ಆಗಲೇ ಮುಳುಗಿತ್ತು. ಭತ್ತದ ರಾಶಿಯಲ್ಲಿಯ ಹೆಗ್ಗಣಗಳ ಗಲಾಟೆ ಮಾತ್ರ ಆಗಾಗ ಕೇಳಿಸುತ್ತಿತ್ತು.

ತಾಯಿಯ ಅಳುವ ಮುಖ ತಿರುಗಿ ಕಾಣಿಸತೊಡಗಿತು:

"ನುಗೂ.... ಇಗೊ, ಈಗಲೇ ನಾನು ಹೇಳಿಬಿಟ್ಟದ್ದೇನೆ, ನೋಡು....ಒಳ್ಳೆಯವನ ಹಾಗೆ ಬದುಕು ಮಾಡು....ಕೆಟ್ಟ ಹೆಸರು ಹೇಳಿಸಬೇಡ....ಇದೇ ಕೊನೆಯದಾಗಿ ಹೇಳುತ್ತಿದ್ದೇನೆ ನೋಡು.... ಕೆಟ್ಟವರ ಸಹವಾಸ ಮಾಡುತ್ತಿದ್ದೀ ನೀನು...."

ಅವಳ ಮುಖ ಮೆಲ್ಲಮೆಲ್ಲನೆ ಹಿಂಸೆ ಸರಿದು ಕೊನೆಗೆ ಮಾಯವಾಯಿತು.

"ಅಮ್ಮ...."

ಕಿಟ್ಟಯ್ಯ ಎದ್ದು ಕುಳಿತ. ಆದರೆ ಅಲ್ಲಿ ಕತ್ತಲಿನ ಹೊರಳು ಬೇರೆಯೇನೂ ಇರಲಿಲ್ಲ. ಮೆಲ್ಲ ಮೆಲ್ಲನೆ ಕತ್ತಲಲ್ಲಿ ಕೈಚಾಚಿಕೊಂಡು ಮನೆಯ ಹೊರಗೆ ಬಂದು ಕುಳಿತ. ಮೂರಡಲ್ಲಿ ಬೆಳ್ಳಿಮೂಡಿತ್ತು. ಕ್ರಿಮಿಕೀಟಗಳ ಮಂಗಲಗೀತ ಒಂದೇಸವನೆ ಹೊಗರುತ್ತಿತ್ತು. ಆದರೆ ಕಿಟ್ಟಯ್ಯನ ಮನಸ್ಸಿನಲ್ಲಿ ಯೋಚನೆಗಳ ತಾಂಡವವೊಂದೇಸವನೆ ನಡೆಯುತ್ತಿತ್ತು. ಭೂತಾಕಾರವಾಗಿ ಶಿವಣ್ಣನ ರೂಪ ತನ್ನನ್ನು ಹೆದರಿಸುವಂತೆ ಅವನಿಗೆ ತೋರುತ್ತಿತ್ತು. ಒಮ್ಮೆ ಬದಿಯಲ್ಲಿ ತಾಯಿಯ—ಕಂಬನಿ ತುಂಬಿದ—ದೀನ ಮುಖ ಅಚಲವಾಗಿ, ದೃಢವಾಗಿ ನಿಂತು ಅವನನ್ನೆ ದಿಟ್ಟಿಸುತ್ತಿತ್ತು.

ಹಕ್ಕಿಗಳ ಚಿಲಿಪಿಲಿ ನಾದದೊಡನೆ, ದಿಗಂತದಲ್ಲಿ ಮೆಲ್ಲಮೆಲ್ಲನೆ ಎಳಬೆಳಕು ಹರಡುತ್ತಿತ್ತು. ಕಂಬನಿ ತುಂಬಿದ ಕಣ್ಣುಗಳಿಂದ—ಬಗಲಲ್ಲಿ ಗಂಟೊಂದನ್ನು ಸಿಕ್ಕಿಸಿ, ಕಂಬಳಿ ಹೊದೆದುಕೊಂಡು—ಕಿಟ್ಟಯ್ಯ, ಮತ್ತೆ ಮತ್ತೆ ಮನೆಯ ಕಡೆಗೆ ಹೊರಳಿ ನೋಡುತ್ತ, ಮನೆಯಿಂದ ದೂರ ದೂರಕ್ಕೆ ನಡೆಯುತ್ತಿದ್ದ. ಗೆಳೆಯ ಶಿವಣ್ಣನ ಮನೆ ಎಲ್ಲೋ ಹಿಂದುಳಿದಿತ್ತು. ಶಿವಣ್ಣನ ಮನೆಯಿಂದ ದೂರ ದೂರಕ್ಕೆ ಹೋದಂತೆ, ಅವನ ಮುಖದಲ್ಲಿ ವಿಜಯದ ಗಂಭೀರ ಕಳೆ ಏರುತ್ತಿತ್ತು. ಕಿಟ್ಟಯ್ಯ ತನ್ನ ಗದ್ದೆಯನ್ನು ದಾಟಲೊಡಗಿದ. ಬೆಳೆಯೆಲ್ಲ ಕೊಯಿದು ಉಳಿದ ಗದ್ದೆ ಬೋಳಾಗಿತ್ತು. ಆದರೆ ಅವನಿದೊಂದನ್ನೂ ನೋಡುತ್ತಿರಲಿಲ್ಲ. ತನ್ನ ಮುಂದಕ್ಕೆ ನೆಟ್ಟ ದೃಷ್ಟಿಯಿಂದ ನೋಡುತ್ತ, ಮುಂದುಮುಂದಕ್ಕೆ ನಡೆಯುತ್ತಿದ್ದ.



ಧಾರವಾಡದಿಂದ ಉತ್ತರಕ್ಕೆ

[ಪ್ರವಾಸಕಾಲದ ದಿಚನು]

(ಡಿಸೆಂಬರ್ (೧೯೪೯) ತಿಂಗಳ ಜಯಂತಿಯಿಂದ ಮುಂದುವರೆದುದು)

ಶ್ರೀ. ದೊಡ್ಡಜ್ಜಪ್ಪನವರ ಬಿ. ಎಸ್‌ಸಿ. (Ag) ವಿದ್ಯಾರ್ಥಿ ಒಕ್ಕಲತನದ ಕಾಲೇಜು, ಧಾರವಾಡ.

★

ನಮ್ಮ ಜನರು ಇದ್ದೂರಲ್ಲಿಯೆ ಇದ್ದೂ ಎಲ್ಲೆಲ್ಲಿ ಏನೇನಿದೆಯೆಂಬುದನ್ನು ತಿಳಿದುಕೊಳ್ಳಲು ಬರುವುದು.
ಅದಕ್ಕಾಗಿ ಸಾಹಿತ್ಯಿಕರು ಪ್ರವಾಸ ಮಾಡುತ್ತಿರಬೇಕು;
ಇಲ್ಲವೆ ಪ್ರವಾಸಿಕರು ಸಾಹಿತ್ಯಿಕರಾಗಬೇಕು!

★

ಜಳಗಾಂವ
ಅಕ್ಟೋಬರ್ ೪೯
ಇರುಳು ೧೨ ಘಂ.

ನಿಘಾದದಿಂದ ಇದೀಗ ಬಂದು ನಮ್ಮ ಬೀಡಾರವನ್ನು ಹೊಕ್ಕೆವು. ನಿಘಾದದಲ್ಲಿ ನಾವು ಸುಮಾರು ಹಗಲು ೭ ತಾಸುಗಳವರೆಗೆ ಇದ್ದೆವು. 'ನಿಘಾದದಲ್ಲಿ' ಎನ್ನುವುದಕ್ಕಿಂತ 'ನಿಘಾದ ಫಾರ್ಮು' ಮತ್ತು 'ಕುಂಡೇವಾಡಿ' ಹಳ್ಳಿಗಳಲ್ಲಿ ಎಂದರೆ ಹೆಚ್ಚು ಲೇಸೆನಿಸೀತು. ನಿಘಾದಗ್ರಾಮವು ನಿಲ್ದಾಣದ ವಿರುದ್ಧ ಬದಿಗೆ—ಅಲ್ಲಿಂದ ಎರಡು ಮೈಲುಗಳ ಮೇಲೆ—ಇದೆ. ಅಲ್ಲಿಗೆ ನಾವು ಹೋಗಲೇ ಇಲ್ಲ. ಸರಕಾರಿ ಪ್ರಾಯೋಗಿಕ ಕ್ಷೇತ್ರವು, ಕುಂಡೇವಾಡಿಯ ಸಮೀಪದಲ್ಲಿದೆ. ಈ ಗ್ರಾಮವು ನಿಲ್ದಾಣಕ್ಕೆ ಹೊಂದಿಕೊಂಡೇ ಇದೆ. ನಿಘಾದವು ನಿಲ್ದಾಣಕ್ಕಾಗಲಿ, ಸರಕಾರಿ ಪ್ರಾಯೋಗಿಕ ಕ್ಷೇತ್ರಕ್ಕಾಗಲಿ, ತನ್ನ ಹೆಸರನ್ನು ಇರಿಸಿಕೊಳ್ಳುವುದು ನ್ಯಾಯವಾದುದಲ್ಲ. ತಾಲ್ಲೂಕಿನ ಸ್ಥಳವೆಂಬ ಗೌರವದ ಸ್ಥಾನವು ನಿಘಾದಕ್ಕಿರುವುದರಿಂದ, ನಿಲ್ದಾಣ ಮತ್ತು ಸರಕಾರಿ ಪ್ರಾಯೋಗಿಕ ಕ್ಷೇತ್ರಗಳಿಗೆ ಅದರ ಹೆಸರನ್ನು ಕೊಡಲಾಗಿದೆ. ಕುಂಡೇವಾಡಿಯ ದಕ್ಷಿಣಕ್ಕೆ 'ಕಡಾವ' ಎಂಬ ಚಿಕ್ಕ ನದಿಯು ಹರಿದಿದೆ. ಅಲ್ಲಿ ಚಿಕ್ಕ ಒಡ್ಡು-ಕಟ್ಟೆ, ರೇಲ್ವೆ ಯವರು ನೀರನ್ನು ತಜೆಗಟ್ಟಿ, ಅಲ್ಲಿಂದ ಪಂಪುಗಳ ಮೂಲಕ ನಿಲ್ದಾಣಕ್ಕೆ (ನಿಘಾದ ನಿಲ್ದಾಣ) ಒಯ್ದು ಸಂಗ್ರಹಿಸುತ್ತಾರೆ.

ನಿಘಾದದ ಸರಕಾರಿ ಪ್ರಾಯೋಗಿಕ ಕ್ಷೇತ್ರದಲ್ಲಿ, ತೃಣಧಾನ್ಯಗಳಲ್ಲಿ ಮುಖ್ಯವಾಗಿ ಗೋದಿ ಮತ್ತು ಸೆಜ್ಜೆ-ನವಣೆಗಳನ್ನು; ಎಣ್ಣೆಕಾಳು ಗಳಲ್ಲಿ ಅಗಸೆ, ಕುಸುಬಿ, ಎಳ್ಳು, ಗುರೆಳ್ಳುಗಳನ್ನು; ಅಡಗಾಳು ಗಳಲ್ಲಿ ಕಡಲೆ, ತೊಗರಿಗಳನ್ನು ಬೆಳೆಯುತ್ತಾರೆ. ಈ ಎಲ್ಲ ಬೆಳೆಗಳಲ್ಲಿ ಸುಧಾರಣೆ ಗೂಡಿ, ಶುದ್ಧ ಜಾತಿಯ ಬೀಜಗಳನ್ನು ತೆಗೆಯುವ ಕೆಲಸವನ್ನು ಕೈಕೊಂಡಿದ್ದಾರೆ. ಈಗಾಗಲೇ ಕೆಲವು ಶುದ್ಧ ಜಾತಿಯ ಗೋದಿಯ ಮತ್ತು ಕಡಲೆಯ ಬೀಜಗಳನ್ನು ನೆರೆ-ನಾಡಿನ ಒಕ್ಕಲಿಗರಿಗೆ ಬಿತ್ತಿಗೆಗಾಗಿ ಕೊಟ್ಟಿದ್ದಾರೆ. ಭಂಡಾರ ಕೋಗಕ್ಕೆ ಅಳುಕದ ಗೋದಿಯ ಜಾತಿಯನ್ನು ತೆಗೆಯುವುದು ಇಲ್ಲಿಯವರೆದುರಿಗಿರುವ ಸವ್ಯದ ದೊಡ್ಡ ಸಮಸ್ಯೆಯು. ಈ ಭೂಮಿ-ಯಲ್ಲಿ ಉಳ್ಳೇಗಡ್ಡಿಯ ಬೆಳೆಯು ಬಲು ಹುಲುಸಾಗಿ ಬೆಳೆಯತ್ತದೆ. ಗಡ್ಡೆಯನ್ನು ಹೊಲದಿಂದ ಕಿತ್ತಿದ ನಂತರ, ನಮ್ಮಲ್ಲಿಯಂತೆ ಆಗಿಂದಾಗಲೇ ಪೇಟೆಗೆ ಒಯ್ದು ಮಾರದೆ, ಇಲ್ಲಿಯ ಒಕ್ಕಲಿಗರು ಅವುಗಳನ್ನು (ಗಡ್ಡೆಗಳನ್ನು) ಚೆಪ್ಪರದ ಹಾಗಿದ್ದ ತಂಪು ವಾತಾ-ವರಣದಲ್ಲಿ ಎಷ್ಟೋ ತಿಂಗಳ ವರೆಗೆ ಸಂಗ್ರಹಿಸಿ ಇಡುತ್ತಾರೆ ಪೇಟೆಯಲ್ಲಿ ಧಾರಣೆ ಎತ್ತರವಿದ್ದಾಗ, ತಮಗೆ ಬೇಕಾದಷ್ಟು ಗಡ್ಡೆಗಳನ್ನೇ ರಾಶಿಯಿಂದ ಕಿತ್ತೊಯ್ದು ಮಾರಾಟಮಾಡುತ್ತಾರೆ ಇಲ್ಲಿ ಬೆಳೆಯುವುದು ಬರೀ ಕೆಂಪು ಗಡ್ಡೆ.... ನೀರಾವರಿಯ ಮೇಲೆ.

ಮಧ್ಯಾಹ್ನ ಒಂದೂವರೆ ಗಂಟೆಗೆ ನಿಘಾದ ಬಿಟ್ಟು, ಜಳಗಾಂವಕ್ಕೆ ಹೊರಟಿವು ದಾರಿಯುದ್ದಕ್ಕೂ ಸೆಜ್ಜೆಯೇ ಮುಖ್ಯ ಬೆಳೆ 'ನಾಸಿಕ' ಜಿಲ್ಲೆಯ ಮೇರೆಯನ್ನು ದಾಟಿ 'ಪೂರ್ವಖಾನದೇಶ' ಜಿಲ್ಲೆಯ 'ಚಾಳಿಸಗಾಂವ' ಮೊದಲಾದ ಭಾಗಗಳನ್ನು ಸಮೀಪಿಸಿದಂತೆ, ಜೋಳ-ನೆಲಗಡಲೆಗಳನ್ನು ಬೆಳೆಯುತ್ತಾರೆ. ಅಲ್ಲಿಂ ಇನ್ನಷ್ಟು ಮುಂದೆ ಬಂದರೆ ಹತ್ತಿ, ಜೋಳ, ನೆಲೆಗಡಲೆಗಳು ಮುಖ್ಯ ಬೆಳೆಗಳು. ಚಾಳಿಸಗಾಂವಕ್ಕಿಂತ ಸ್ವಲ್ಪ ಹಿಂದೆ ಮಸಾರಿ ನೆಲಗಳಲ್ಲಿ 'ಹೊನ್ನಿಕುಳ್ಳು' ವಿಶೇಷವಾಗಿ ಬೆಳೆದಿದ್ದಿತು. ನೆಲ-ಗಡಲೆಯಲ್ಲಿ ಜೋಳದ ಅಕ್ಕಡಿ ಹಾಕುವ ರೂಢಿ ಇಲ್ಲಿ ಇದೆ. ಪ್ರದೇಶದಲ್ಲಿ, 'ಜಳಗಾಂವ' ಸರಕಾರೀ ಪ್ರಯೋಗ ಕ್ಷೇತ್ರವು ಊರಿಂದ ಎರಡೂವರೆ ಮೈಲುಗಳ ಮೇಲೆ ಇದೆ. ಇರುಳು ೧೦ ಗಂಟೆ ಊರನ್ನು ಬಿಟ್ಟು 'ಫಾರ್ಮಿನಲ್ಲಿ' ನಮಗಾಗಿ ಇದ್ದ ತಂಗು

ತಾಣಕ್ಕೆ ಬಂದು ಬೀಡು ಬಿಟ್ಟಿದ್ದೇವೆ. ನಾಳೆ ಮುಂಜಾನೆಯ ಕಾರ್ಯಕ್ರಮವು ಇದುವರೆಗೂ ನಮಗಾರಿಗೂ ಗೊತ್ತಿಲ್ಲ.

ಜಳಗಾಂವ
೧೦ನೆಯ ಆಕ್ಟೋಬರ್ ೧೯೪೯
ರಾತ್ರಿ ೧೦ ಘಂಟೆ

ಇಂದು ಮುಂಜಾವು '೫-೩೦ ರ ಗಾಡಿಗೆ 'ಪರಧಡೆ'ಗೆ ಹೋಗಿ ಅಲ್ಲಿಂದ ಮುಂದೆ 'ಉತ್ರಾಣಿ'ಯ ಮಾರ್ಗದಿಂದ ೭ ಮೈಲಿಜಿಯವರೆಲಿಂಬೆ ಮತ್ತು ಮೋಸಂಬೀ ತೋಟಗಳಿಗೆ ಹೋಗುವ ಕಾರ್ಯಕ್ರಮವಿತ್ತು. ಜಳಗಾಂವ ಫಾರ್ಮನ್ನು ನಸುಕಿನಲ್ಲಿಯೇ ಬಿಟ್ಟು ಬಸ್ಸಿನ ಮೂಲಕವಾಗಿ ನಿಲ್ದಾಣಕ್ಕೆ ಬಂದೆವು. ಇಲ್ಲಿ ಒಂದು ಸೋಜಿಗದ ಸಂಗತಿ ನಡೆಯಿತು: ಒಟ್ಟಿಗೆ ನಿಲ್ದಾಣಕ್ಕೆ ಹೋದ ಬಸ್ಸುಗಳು ಮೂರು. ಅವುಗಳಲ್ಲಿ ನಾವು ಹತ್ತಿದ್ದು ಮೂರನೆಯ ಬಸ್ಸು. ನಿಲ್ದಾಣದ ಬಳಿ ನಾವು, ಬಸ್ಸಿನಿಂದಿಳಿದ ಕೂಡಲೆ ನಮ್ಮ ಶಿಕ್ಷಕರು 'ನಿಮ್ಮ ಗಾಡಿ ಬಂದಿದೆ; ನೀವೀಗ ತ್ವರೆಮಾಡಿರಿ' ಎಂದು ಹೇಳಿದರು. ನಮ್ಮ ಬಸ್ಸಿನಲ್ಲಿಯ ಉಳಿದವರು ಪಾರಾದರು; ಆದರೆ ನಾವೆಲ್ಲ ಹತ್ತುಜನಗಳು ಮಾತ್ರ ಪೇಚಾಟದಲ್ಲಿ ಸಿಲುಕಿದೆವು. ಹೀಗಾಯಿತು: ಬಸ್ಸಿನಿಂದಿಳಿದವರೇ ಶಿಕ್ಷಕರ ಮಾತನ್ನು ಕೇಳಿ ಆತುರದಿಂದ 'ಪ್ಲಾಟ್‌ಫಾರ್ಮ್' ಬಳಿಗೆ ಬಂದೆವು. ಅದೇ ವೇಳೆಗೆ ಮುಂಬಯಿಯ ಕಡೆಗೆ ಹೋಗುವ ಗಾಡಿಯೊಂದು ಸೀಟು ಹೊಡೆದು ಹೊರಡುವ ಸಿದ್ಧತೆಯಲ್ಲಿತ್ತು. ನಾವೆಲ್ಲರೂ ೧೦ ಜನಗಳು, ಮೂಕ ಕುರಿಗಳ ಹಾಗೆ ಒಬ್ಬರಹಿಂದೊಬ್ಬರು ಒಂದೇ ಡಬ್ಬಿಯೊಳಗೆ ಕೂಡ್ರುವಷ್ಟರಲ್ಲಿ, ಗಾಡಿ ಹೊರಟಿತು. ಮುಂದೆ ನನಗೆ ಸಂಶಯ ಬಂದಿತು—ಪ್ರವಾಸಿಕರನ್ನು ವಿಚಾರಿಸಲಾಗಿ 'ಗಾಡಿಯು ಅತಿ ಸಮೀಪದ ನಿಲ್ದಾಣವೆಂದರೆ ಪಾಚೋರೆಯಲ್ಲಿ ನಿಲ್ಲುತ್ತದೆ' ಎಂದು ತಿಳಿಯಿತು. ನಾವಿಳಿಯಬೇಕಾದದ್ದು 'ಪರಧಡೆ' ನಿಲ್ದಾಣದಲ್ಲಿ. ಆದರೆ ಇಳಿದದ್ದು ಮಾತ್ರ 'ಪರಧಡೆ'ಯಿಂದ ೬ ಮೈಲುಗಳಾಚೆಗೆ 'ಪಾಚೋರ'ದಲ್ಲಿ. ನಮ್ಮ ಸ್ಥಿತಿ ಹೀಗಾದುದರಿಂದ, ಡಬ್ಬಿಯೊಳಗೆ ಕುಳಿತುಕೊಂಡೇ ಕೂಗಾಡಿ ಬೊಬ್ಬೆ ಹೊಡೆದೆವು. ಎಲ್ಲರೂ ನಿಸ್ಸಹಾಯಕರು. ಗಾಡಿ 'ಪಾಚೋರ'ಕ್ಕೆ ಬಂತು; ನಾವಿಳಿದೆವು. ಕಾಲ್ನಡಿಗೆಯಿಂದ ಹೋಗುವುದೆಂದು ನಿರ್ಧರಿಸಿ ಸ್ವಲ್ಪದೂರ ಹೋಗುವಷ್ಟರಲ್ಲಿ, ಒಂದು ಗೂಡ್ಸ್ ಗಾಡಿಯು 'ಪರಧಡೆ'ಯ ಕಡೆಗೆ ಹೊರಡುವಂತಹದು ಆಣಿಯಾಗಿ ನಿಂತಿತ್ತು. ಗಾರ್ಡನು ನಮ್ಮ ಕರುಣಾಜನಕ ಕಥೆಯನ್ನು ಕೇಳಿ, ಅವನ ಡಬ್ಬಿಯ ಮುಂದಿರುವ 'ಪ್ಲಾಟ್‌ಫಾರ್ಮಿನ' ಮೇಲೆ ನಿಂತುಕೊಳ್ಳಲು ಅನುಮತಿಕೊಟ್ಟು, ತಾನು ಪದ್ಧತಿಯಂತೆ ಒರಗಿಕೊಂಡ. ಡ್ರಾಯ್ವರ ಮತ್ತೆ ಸೀಟು ಹೊಡೆದ; ಆಲಸಿಗ ಗಾರ್ಡನು ನಮ್ಮಲ್ಲಿಯೇ ಒಬ್ಬನಿಗೆ ಗ್ರೀನ್ ಲೈಟ್ ತೋರಿಸಲು ಹೇಳಿದ. 'ನಾನೇ ಆ ಕೆಲಸ ಮಾಡಿದೆ. ಜೀವನದಲ್ಲಿ ಎಂದೂ ಮರೆಯಲಾಗದ ಈ ಘಟನೆಯ ಅನುಭವವನ್ನು ನೆನೆಸಿಕೊಂಡು ಮತ್ತೆ ಮತ್ತೆ ನನ್ನೊಳಗೆ ನಾನೇ ನಗುತ್ತೇನೆ.

ಗೂಡ್ಸ್ ಗಾಡಿಯನ್ನು ಗಾರ್ಡನೇ ಬ್ರೆಕ್ಕು ಹಚ್ಚಿ 'ಪರಧಡೆ'ಯ ಬಳಿ ನಿಲ್ಲಿಸಿದನು. ಅವನ ಉಪಕಾರ ಸ್ಮರಿಸಿ ಒಬ್ಬೊಬ್ಬರೆ ಇಳಿದು

ಜಳಗಾಂವ
೧೧ನೆಯ ಆಕ್ಟೋಬರ್ ೧೯೪೯
ರಾತ್ರಿ ೧೦ ಘಂಟೆ

ಈ ದಿನ ಮುಂಜಾವು ೫-೩೦ ರ ಗಾಡಿಗೆ 'ಪರಧಡೆ'ಗೆ ಹೋಗಿ ಅಲ್ಲಿಂದ ಮುಂದೆ 'ಉತ್ರಾಣಿ'ಯ ಮಾರ್ಗದಿಂದ ೭ ಮೈಲಿಜಿಯವರೆಲಿಂಬೆ ಮತ್ತು ಮೋಸಂಬೀ ತೋಟಗಳಿಗೆ ಹೋಗುವ ಕಾರ್ಯಕ್ರಮವಿತ್ತು. ಜಳಗಾಂವ ಫಾರ್ಮನ್ನು ನಸುಕಿನಲ್ಲಿಯೇ ಬಿಟ್ಟು ಬಸ್ಸಿನ ಮೂಲಕವಾಗಿ ನಿಲ್ದಾಣಕ್ಕೆ ಬಂದೆವು. ಇಲ್ಲಿ ಒಂದು ಸೋಜಿಗದ ಸಂಗತಿ ನಡೆಯಿತು: ಒಟ್ಟಿಗೆ ನಿಲ್ದಾಣಕ್ಕೆ ಹೋದ ಬಸ್ಸುಗಳು ಮೂರು. ಅವುಗಳಲ್ಲಿ ನಾವು ಹತ್ತಿದ್ದು ಮೂರನೆಯ ಬಸ್ಸು. ನಿಲ್ದಾಣದ ಬಳಿ ನಾವು, ಬಸ್ಸಿನಿಂದಿಳಿದ ಕೂಡಲೆ ನಮ್ಮ ಶಿಕ್ಷಕರು 'ನಿಮ್ಮ ಗಾಡಿ ಬಂದಿದೆ; ನೀವೀಗ ತ್ವರೆಮಾಡಿರಿ' ಎಂದು ಹೇಳಿದರು. ನಮ್ಮ ಬಸ್ಸಿನಲ್ಲಿಯ ಉಳಿದವರು ಪಾರಾದರು; ಆದರೆ ನಾವೆಲ್ಲ ಹತ್ತುಜನಗಳು ಮಾತ್ರ ಪೇಚಾಟದಲ್ಲಿ ಸಿಲುಕಿದೆವು. ಹೀಗಾಯಿತು: ಬಸ್ಸಿನಿಂದಿಳಿದವರೇ ಶಿಕ್ಷಕರ ಮಾತನ್ನು ಕೇಳಿ ಆತುರದಿಂದ 'ಪ್ಲಾಟ್‌ಫಾರ್ಮ್' ಬಳಿಗೆ ಬಂದೆವು. ಅದೇ ವೇಳೆಗೆ ಮುಂಬಯಿಯ ಕಡೆಗೆ ಹೋಗುವ ಗಾಡಿಯೊಂದು ಸೀಟು ಹೊಡೆದು ಹೊರಡುವ ಸಿದ್ಧತೆಯಲ್ಲಿತ್ತು. ನಾವೆಲ್ಲರೂ ೧೦ ಜನಗಳು, ಮೂಕ ಕುರಿಗಳ ಹಾಗೆ ಒಬ್ಬರಹಿಂದೊಬ್ಬರು ಒಂದೇ ಡಬ್ಬಿಯೊಳಗೆ ಕೂಡ್ರುವಷ್ಟರಲ್ಲಿ, ಗಾಡಿ ಹೊರಟಿತು. ಮುಂದೆ ನನಗೆ ಸಂಶಯ ಬಂದಿತು—ಪ್ರವಾಸಿಕರನ್ನು ವಿಚಾರಿಸಲಾಗಿ 'ಗಾಡಿಯು ಅತಿ ಸಮೀಪದ ನಿಲ್ದಾಣವೆಂದರೆ ಪಾಚೋರೆಯಲ್ಲಿ ನಿಲ್ಲುತ್ತದೆ' ಎಂದು ತಿಳಿಯಿತು. ನಾವಿಳಿಯಬೇಕಾದದ್ದು 'ಪರಧಡೆ' ನಿಲ್ದಾಣದಲ್ಲಿ. ಆದರೆ ಇಳಿದದ್ದು ಮಾತ್ರ 'ಪರಧಡೆ'ಯಿಂದ ೬ ಮೈಲುಗಳಾಚೆಗೆ 'ಪಾಚೋರ'ದಲ್ಲಿ. ನಮ್ಮ ಸ್ಥಿತಿ ಹೀಗಾದುದರಿಂದ, ಡಬ್ಬಿಯೊಳಗೆ ಕುಳಿತುಕೊಂಡೇ ಕೂಗಾಡಿ ಬೊಬ್ಬೆ ಹೊಡೆದೆವು. ಎಲ್ಲರೂ ನಿಸ್ಸಹಾಯಕರು. ಗಾಡಿ 'ಪಾಚೋರ'ಕ್ಕೆ ಬಂತು; ನಾವಿಳಿದೆವು. ಕಾಲ್ನಡಿಗೆಯಿಂದ ಹೋಗುವುದೆಂದು ನಿರ್ಧರಿಸಿ ಸ್ವಲ್ಪದೂರ ಹೋಗುವಷ್ಟರಲ್ಲಿ, ಒಂದು ಗೂಡ್ಸ್ ಗಾಡಿಯು 'ಪರಧಡೆ'ಯ ಕಡೆಗೆ ಹೊರಡುವಂತಹದು ಆಣಿಯಾಗಿ ನಿಂತಿತ್ತು. ಗಾರ್ಡನು ನಮ್ಮ ಕರುಣಾಜನಕ ಕಥೆಯನ್ನು ಕೇಳಿ, ಅವನ ಡಬ್ಬಿಯ ಮುಂದಿರುವ 'ಪ್ಲಾಟ್‌ಫಾರ್ಮಿನ' ಮೇಲೆ ನಿಂತುಕೊಳ್ಳಲು ಅನುಮತಿಕೊಟ್ಟು, ತಾನು ಪದ್ಧತಿಯಂತೆ ಒರಗಿಕೊಂಡ. ಡ್ರಾಯ್ವರ ಮತ್ತೆ ಸೀಟು ಹೊಡೆದ; ಆಲಸಿಗ ಗಾರ್ಡನು ನಮ್ಮಲ್ಲಿಯೇ ಒಬ್ಬನಿಗೆ ಗ್ರೀನ್ ಲೈಟ್ ತೋರಿಸಲು ಹೇಳಿದ. 'ನಾನೇ ಆ ಕೆಲಸ ಮಾಡಿದೆ. ಜೀವನದಲ್ಲಿ ಎಂದೂ ಮರೆಯಲಾಗದ ಈ ಘಟನೆಯ ಅನುಭವವನ್ನು ನೆನೆಸಿಕೊಂಡು ಮತ್ತೆ ಮತ್ತೆ ನನ್ನೊಳಗೆ ನಾನೇ ನಗುತ್ತೇನೆ.

ಗೂಡ್ಸ್ ಗಾಡಿಯನ್ನು ಗಾರ್ಡನೇ ಬ್ರೆಕ್ಕು ಹಚ್ಚಿ 'ಪರಧಡೆ'ಯ ಬಳಿ ನಿಲ್ಲಿಸಿದನು. ಅವನ ಉಪಕಾರ ಸ್ಮರಿಸಿ ಒಬ್ಬೊಬ್ಬರೆ ಇಳಿದು

ಮುಂಬೈ ಸರಕಾರದಿಂದ ಮನ್ನಣೆ ಪಡೆದ ಸಂಸ್ಥೆಯಿಂದ

ಹೊಲಿಗೆಯ ವಿಶೇಷ ವರ್ಗಗಳು

(ಬೇಸಗೆ ಸೂಟಯಲ್ಲಿ)

ಎಂದಿನಂತೆ ಈ ಸಲವೂ ಕರ್ನಾಟಕ ಹೊಲಿಗೆಯ ವಿದ್ಯಾಲಯದಿಂದ ಹೊಲಿಗೆಯ ವಿಶೇಷ ತರಬೇತಿಯ ವರ್ಗಗಳು ಮೇದಲ್ಲಿ ಪ್ರಾರಂಭವಾಗುತ್ತವೆ. ಮೊದಲೇ ಹೊಲಿಗೆಯ ಕಲೆಯ ಪರಿಚಯವಿದ್ದವರೂ, ಹೆಚ್ಚಿನ ವಿದ್ಯೆ ಬಯಸುವವರೂ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣದಲ್ಲಿ ಹೊಸದಾಗಿ ಸೇರಿಸಲಾದ ಪಾಠಕ್ರಮದಂತೆ ಅಭ್ಯಾಸ ಮಾಡ ಬಯಸುವವರೂ, ಶಿಕ್ಷಕ-ಶಿಕ್ಷಿಕೆಯರೂ ಇದರ ಲಾಭ ಪಡೆಯಬೇಕು. ವರ್ಗಗಳು ಮುಗಿದನಂತರ ಪರೀಕ್ಷೆ ತೆಗೆದುಕೊಂಡು ಪ್ರಶಸ್ತಿ ಪತ್ರ ಕೊಡಲಾಗುವುದು.

ವಿಶೇಷ ವಿವರಗಳಿಗಾಗಿ ಇದೇ ಎಪ್ರಿಲ್ ಕೊನೆಯೊಳಗಾಗಿ ವಿಚಾರಿಸಿ ಹೆಸರುಕೊಡಿರಿ.

ವಿವರಗಳಿಗೆ:

ಕರ್ನಾಟಕ ಹೊಲಿಗೆಯ ವಿದ್ಯಾಲಯ,

ಗಾಂಧೀಚೌಕ, ಧಾರವಾಡ.

ನಿಲ್ಲುವಷ್ಟರಲ್ಲಿ, ನಮ್ಮಲ್ಲಿಯ ಜನರೂ ಅಲ್ಲಿಗೇ ಬಂದರು. ಎಲ್ಲರೂ ಸೇರಿ 'ಉತ್ಕಾಣಿ'ಗೆ ನಡೆದೆವು ಉತ್ಕಾಣಿಗೆ ಹೋಗುವಲ್ಲಿ ನಡುವೆ 'ಗಿರಿನಾ' ನದಿಯನ್ನು ದಾಟಬೇಕಾಗುತ್ತದೆ. ನದಿಯಲ್ಲಿ ನೀರು ಬಹಳ ಆಳವಾಗಿದ್ದುದರಿಂದ ನಾವೆಲ್ಲರೂ ದೋಣಿಗಳಲ್ಲಿ ಕುಳಿತು ನದಿ ದಾಟಿದೆವು.

'ಮಾಣಿಕ್‌ಚಂದ ಶೇಟಜಿ' ಯವರು, ಅನೇಕ ವರ್ಷಗಳಿಂದ ಒಳ್ಳೆಯ ಹೇಸರುಾಂತ ತೋಟಗರಿದ್ದಾರೆ. ಲಿಂಬೆ ಮತ್ತು ನೋಸಂಬೀ ಗಿಡಗಳ ವ್ಯವಸಾಯದ ವಿಷಯವಾಗಿ ಅವರಲ್ಲಿ ಹೆಚ್ಚಿನ ನೈಪುಣ್ಯವು ಇದೆ. ಇಡೀ ಮುಂಬಯಿ ಪ್ರಾಂತದಲ್ಲಿಯೇ ಇಷ್ಟು ದೊಡ್ಡ ಪ್ರಮಾಣದ ಮೇಲೆ ಈ ಗಿಡಗಳ ವ್ಯವಸಾಯವನ್ನು ಯಾರೂ ಕೈಕೊಂಡಿಲ್ಲ. ಒಂದು ನೂರಾ ಎಂಬತ್ತು ಎಕರೆ ಗಳಷ್ಟು ಕ್ಷೇತ್ರಗಳಲ್ಲಿ ನೋಸಂಬಿ ಮತ್ತು ಲಿಂಬೆಯ ಗಿಡಗಳನ್ನು ಹಚ್ಚಿದ್ದಾರೆ. ಇಪ್ಪತ್ತು ಎಕರೆ ತೋಟದಲ್ಲಿ ಬಾಳೆಯ ಗಿಡಗಳನ್ನು ನೆಟ್ಟಿದ್ದಾರೆ. ಲಿಂಬೇ ಹಣ್ಣುಗಳನ್ನು ಹಿಂಡಿ ರಸ ತೆಗೆಯುವ ಮತ್ತು ಸಿಪ್ಪೆಗಳಿಂದ ಎಣ್ಣೆ ತೆಗೆಯುವ ಒಂದು ಯಂತ್ರವೂ ಅವರಲ್ಲಿದೆ. ದೊಡ್ಡ ಪ್ರಮಾಣದಲ್ಲಿ ಇದ್ದರೂ ತೋಟದ ವ್ಯವಸ್ಥೆ ತುಂಬ ಸಮಾಧಾನಕರವಿದೆ. ಸಾಯಂಕಾಲ ತಿರುಗಿ ಜಳಗಾಂವಕ್ಕೆ ಬಂದೆವು. ಈ ಊರಲ್ಲಿ ಅಂತಹ ನೋಡತಕ್ಕ ಸ್ಥಳಗಳೇನೂ ಇಲ್ಲ. ಒಳ್ಳೇ ದೊಡ್ಡ ವ್ಯಾಪಾರೀ ಊರು. ಇಲ್ಲಿ ಬಾಳೆಯ ಹಣ್ಣುಗಳು ಅಗ್ಗವಾಗಿ ದೊರೆಯುತ್ತವೆ.

ಇಂದು ಮುಂಜಾವು 'ಜಳಗಾಂವ ತಾಲೂಕಾ ಆಗ್ರಿಕಲ್ಚರಲ ಅಸೋಸಿಯೇಶನ್' ನವರು ನಡೆಯಿಸುತ್ತಿರುವ "ಚಿಂಚೋಡೇರಿ ಫಾರ್ಮ"ಗೆ ಹೋಗಿದ್ದೆವು. ಅಲ್ಲಿ "ಸುರತಿ," "ದಿಲ್ಲಿ," "ಜಾಫರಾಬಾದಿ," ಜಾತಿಯ ಮತ್ತು ಅಲ್ಲಿಯೇ ಪೋಷಿಸಲ್ಪಟ್ಟ ಪ್ರಾದೇಶಿಕ ಎಮ್ಮೆಗಳನ್ನೂ ಕಟ್ಟಿರುತ್ತಾರೆ.

ಅಲ್ಲಿಂದ ಮುಂದೆ 'ಪಿಂಪಲೆ' ಎಂಬಲ್ಲಿರುವ "ಕ್ಯಾಟಲ ಬ್ರೀಡಿಂಗ್" ಸ್ಟೇಶನ್ನಿಗೆ ಹೋಗಿದ್ದೆವು. ಅಲ್ಲಿ "ನಿಮಾರ ಜಾತಿಯ ದನಗಳ ಸುಧಾರಣೆಯ ಕ್ರಮವನ್ನು ಕೈಕೊಂಡಿದ್ದಾರೆ ಮೊದಲಿಗಿಂತಲೂ ಈಗ ಈ ಜಾತಿಯ ದನಗಳಲ್ಲಿ ಶುದ್ಧತೆ ಹೆಚ್ಚುಮಟ್ಟಿಗೆ ಅಳವಟ್ಟಿದೆ—ಎಂಬುದು ಫಾರ್ಮಿನ ಕಾರ್ಯಕಲಾಪಗಳಿಂದ ತಿಳಿಯಿತು. ಈ ಎರಡು ಪುಟ್ಟ ಸಂಸ್ಥೆಗಳನ್ನು ನಡೆಯಿಸಿಕೊಂಡು ಹೋಗುತ್ತಿರುವ ಜಳಗಾಂವ ತಾಲೂಕಾ ಆಗ್ರಿಕಲ್ಚರಲ್ ಅಸೋಸಿಯೇಶನ್ನಿನ ಸದಸ್ಯರ ಆಧಾರ ಮನ್ನಿಸಿ, ನಾವು ಮುಂದೆ ಅಜಂತಕ್ಕೆ ತೆರಳಿದೆವು. ಹೋಗುವಾಗ 'ನೀರೆ' ಹಳ್ಳಿಯ ಹೊರಗೆ ಸಂತೆ ನೆರೆದಿತ್ತು. ಇಲ್ಲಿ ಸಂತೆ ನೆರೆಯುವುದು ಊರಹೊರಗೆಯೆ. ಅಜಂತವನ್ನು ನಾವು ಮುಟ್ಟಿದ್ದು ಮಧ್ಯಾಹ್ನ ಸುಮಾರು ೧॥ ಗಂಟೆಗೆ. ಅಲ್ಲಿಯ ವರೆಗೂ ಒಬ್ಬರೂ ಊಟ ಮಾಡಿರಲಿಲ್ಲ. ಅಲ್ಲಿಗೆ ಹೋದ ಮೇಲಂತೂ ಕಣ್ಣಿಗೆ ಆನಂದಕೊಡುವ ದೃಷ್ಟಿಯಿಂದ, ಹೊಟ್ಟೆಯು ಆತ್ಮ ಸಂತೋಷದಿಂದ ಸ್ವಾರ್ಥತ್ಯಾಗವಾಡಿ ಬಿಟ್ಟಿತು. ಒಬ್ಬರಿಗೂ ಊಟದ ಪರಿವೆಯೇ ಇರಲಿಲ್ಲ. ಎಲ್ಲರೂ ಭಾವನಾಪರವಶರಾದರು. ಒಂದೊಂದೇ ಗವಿಯನ್ನೇ ಪೂರ್ತಿಯಾಗಿ ಶೋಧಿಸಿ ಮನದಣಿ ನೋಡಿದೆವು. ಕಲ್ಲನ್ನು ಬೆಣ್ಣೆಯೆಂದು ತಿಳಿದು, ಅದರಲ್ಲಿ ಕಲಾಕೃತಿಯನ್ನೂ ಸಜೀವ ಕಲೆಯು ಕಳೆಯನ್ನೂ ತುಂಬಿದ ರಸಿಕ ಕಲಾವಂತರನ್ನು ಮನದಂದು, ಕೊಂಡಾಡದ ನಾಲಗೆಯೇ ಇರಲಿಕ್ಕಿಲ್ಲ. ಅಜಂತದ ಗವಿಗಳಲ್ಲಿ ಒಂದು, ಎರಡು, ಹದಿನಾರು ಹದಿನೇಳನೆಯ ಗವಿಗಳು ತುಂಬ ಕಲಾಕೌಶಲ್ಯದಿಂದ ತುಂಬಿವೆ. ಅಲ್ಲಿ ಗೋಡೆಗಳ ಮೇಲೆ ಬರೆದ ಚಿತ್ರಗಳೇನು? ಕಲ್ಲಿನಲ್ಲಿ ಕಡೆದ ಚಿತ್ರಗಳೇನು? ಒಳಗೆ ಒಂದೊಂದು ಆಕಾರದಿಂದ—ಒಂದೊಂದು ಭಾವನೆಯಲ್ಲಿ—ರೂಪುಗೊಂಡು ನೆಲಸಿದ ಬುದ್ಧ ಮಹಿಮೆಯ ಪ್ರತಿಮೆ ಏನು? ಗವಿಗಳ ನಡುವೆ ಸಿಕ್ಕು ಬಿದ್ದು ಹರಿಯುವ ಚಿಕ್ಕ ತೊರೆಯ ಮಂಜುಳನಿನಾದದ ಸವಿಯೇನು? ಸೊಂಪಾಗಿ ಬೆಳೆದ ಗಿಡಮರಗಳ ಕೊಬ್ಬೇನು?

ಅಂತೂ ಗುಡ್ಡಗಳಲ್ಲಿಯ ಬಂಡೆಗಳನ್ನು ಕೊರೆಯುತ್ತ ಹೋಗಿ ಅಲ್ಲಿಯ ಗವಿಗಳನ್ನೂ, ಅದರಲ್ಲಿಯೇ ತಮ್ಮ ಕಲಾಕೌಶಲ್ಯವನ್ನೂ ತೋರಿಸಿದ ಹಿರಿಯಶಿಲ್ಪಿಗಳ ಸಾಹಸ ಕಾರ್ಯಕ್ಕೆ ಮೆಚ್ಚಿ, ಅವರನ್ನು ಕೊಂಡಾಡುತ್ತ ಮರಳಿದೆವು. ಅಜಂತದ ಗುಡ್ಡಗಳಲ್ಲಿಯ ಚಿತ್ರಗಳು, ವಾಸಕ್ಕು ಹಾಕಿಕೊಂಡಿರುವ ಹಳೆಯ ಸಂಸ್ಕೃತಿ, ರೀ

ನೀತಿಗಳಿಗೆ 'ಸರ್ಚ್ ಲಾಯಿಟ್' ಆಗಿವೆ. ಅವುಗಳನ್ನೆದುರಿಗೆ ಇಟ್ಟುಕೊಂಡು ಪೌರ್ವಾತ್ಯ ರಾಷ್ಟ್ರಗಳಲ್ಲಿ ಇಂದು ನೆಲಸಿರುವ ಜನಾಂಗಗಳ ಸಂಸ್ಕೃತಿ, ಜೀವನ ಇವುಗಳ ಸ್ಥಾನ-ಮಾನವನ್ನು ಅವಲೋಕಿಸಿದರೆ, ಈ ಮೂಡಲ ರಾಷ್ಟ್ರಗಳನ್ನು ಯಾವ ಪಡುವಣಿಗನೂ ಹೀಯಾಳಿಸಲಾರ. ಅಜಂಕದಲ್ಲಿ ಬರೆದ ಚಿತ್ರಗಳು ಪ್ರತಿಯೊಂದೂ ಒಂದೊಂದು ತೆರನಾಗಿ ನೋಟಕರಿಗೆ ಪಾಠ ಕಲಿಸುತ್ತಿವೆ. ಆದರೆ ದುರ್ದೈವದಿಂದ ಆ ಚಿತ್ರಗಳಲ್ಲಿ ಅನೇಕ ಚಿತ್ರಗಳು ಮಸುಳಿವೆ. ಅವುಗಳಿಂದ 'ಕಾಗೆ-ಗುಬ್ಬಿಗಳ ಕಥೆ' ಕಟ್ಟಿಕೊಂಡು ಏನಾದರೊಂದು ಸಮಾಧಾನ ತಂದುಕೊಳ್ಳಬೇಕಾಗಿದೆ. ಇಪ್ಪತ್ತಾರು ಗವಿಗಳೆಂದು ಹೆಸರಿಗಿದ್ದರೂ, ಅವುಗಳಲ್ಲಿ ಎಷ್ಟೋ ಗವಿಗಳು ಪೂರ್ತಿಯಾಗಿ ಕೊರೆಯಲ್ಪಟ್ಟಿಲ್ಲ. ಕೊರೆಯಲ್ಪಟ್ಟ ಗವಿಗಳಲ್ಲಿಮಾತ್ರ ಸಂಸ್ಕೃತಿಯ ಅತ್ಯುನ್ನತ ಮಟ್ಟಕ್ಕೇರಿದ ಜನಾಂಗದ ರೀತಿ, ನೀತಿ, ನಡಾವಳಿಗಳ ಕಲ್ಪನೆ ಕೊಡಬಹುದಾದ ಹಸ್ತಕಲಾಕೌಶಲ್ಯವಿದೆ. ನರ್ತಕಿಯರ ನಾಟ್ಯವೇನು? ಪ್ರಿಯ-ಪ್ರೇಯಸಿಯರ ರಸಜೀವನವೇನು? ಇವರ ಉಡುಪು-ತೊಡುಪುಗಳ ನಾವೀನ್ಯ ಚೆತಗುಗಳೇನು? ಈ ಗವಿಗಳ ವಿಷಯವಾಗಿರುವ ಯಾವತ್ತು ಹಕ್ಕುಗಳು ಹೈದರಾಬಾದ್ ಸರಕಾರದ ವಶದಲ್ಲಿವೆ. ಸಾಧ್ಯವಿದ್ದ ಗವಿಗಳ ಒಳಗೆ ವಿದ್ಯುದ್ದೀಪದ ವ್ಯವಸ್ಥೆ ಇಡಲಾಗಿದೆ. ಹಗಲು ಕೂಡ ದೀಪವಿಲ್ಲದೆ ಏನೂ ಕಾಣಲಾರದು. ಗವಿಗಳ ಮುಂದೆ ಹರಿಯುವ ನದಿಯ ಕೊಳ್ಳದಡ್ಡಗಲ ಒಂದು ಸಣ್ಣ ಸೇತುವೆಯನ್ನು ಕಟ್ಟಿದ್ದಾರೆ. ಪ್ರೇಕ್ಷಕರು ಸೃಷ್ಟಿಸೌಂದರ್ಯದ ಸೊಬಗಿನ ಸವಿಯನ್ನುಣ್ಣಲು ಆ ಸೇತುವೆಯ ಇನ್ನೊಂದು ತುದಿಗೆ ಹೋಗಿ ನಿಂತು, ಸಾತಪುಡಾ ಪರ್ವತದಲ್ಲಿ ಹುಟ್ಟಿ ಹರಿಯುವ 'ವಾಘೂರ್' ನದಿಯ ಉಗಮಸ್ಥಾನವನ್ನು ನಿರುಕಿಸುತ್ತಾರೆ. ಅಜಂತದ ಗುಡ್ಡಗಳಲ್ಲಿಯ ಬಂಡೆಗಳನ್ನು ಕೊರೆದು ನಿರ್ಮಿಸಿದ ಕಲಾಕೌಶಲ್ಯದ ಪ್ರತಿಭೆ-ಹಿರಿಮೆಗಳು ಅಚಂದಾರ್ಕವಾಗಿ ಬೆಳಗಲಿ!

ಆರಾಧನೆ

ಶ್ರೀ. ಜಿ. ವರದರಾಜ ಎಂ ಎ. ಚಿತ್ರದುರ್ಗ

●

ತಡವಾದರೇನಂತೆ
ಬಿಡುವಾಗಿ ಬಾ!
ಮೆಚ್ಚಿ ನೈಮರೆವಂತೆ
ಮಿರುಮಿರುಗಿ ಬಾ!
ಕಾಲ ದೇಶನ ಮೀರಿ
ನಿತ್ಯ ಸತ್ಯವ ಸಾರಿ
ದಿವ್ಯಶಕ್ತಿಯ ತೋರಿ
ಬಾ, ಕವಿತೆ, ಬಾ! ೧

ಒಂದೊಂದು ನುಡಿಯೊಳಗು
ಚೆಂದವಿರಲಿ
ಒಂದೊಂದು ಸಾಲೊಳಗು
ಅಂದವಿರಲಿ!
ನಿಯಮ, ಸಂಯಮವಿರಲಿ
ಲಾಲಿತ್ಯ ಬೆರೆತಿರಲಿ
ಕಲಿಯ ಕೈಚಳಕದಲಿ
ಪುಳಕವಿರಲಿ! ೨

ಭಾವದಲಿ ಮಚ್ಚುಮರೆ
ಸುಳಿಯದಿರಲಿ,
ಅನುಭವದ ಹಾಲುತೊರೆ
ಹರಿಯುತಿರಲಿ;
ತಿಳನುಡಿಯ ಹೊಂಬೆಳಕು
ಹೊಳೆಯುತಿರೆ ಜಣಜಣಕು,
ಯುಗಯುಗಕು ಆ ಬೆಳಕು
ಆರದಿರಲಿ! ೩

ನರಸಿಂಹ ಬಂದಂತೆ
ಕಂಬದಿಂದ,
ಸಿಡಿಲು-ಮಿಂಚುಗಳಂತೆ
ಘೋರದಿಂದ,
ಮುಷ್ಟಶಕ್ತಿಯ ತುಳಿದು
ಅಲ್ಪತನವನು ಹಳಿದು
ಮೊಳನೊಳಗಿ ಬಾ, ಇಳಿದು
ವೇಗದಿಂದ! ೪

ಕಲ್ಲರಳಿ ಹೆಣ್ಣಿದ್ದು
ಕೈಮುಗಿದೊಲು,
ಕಲ್ಲೆದೆಯ ಕರಗಿಸುತ
ದಯೆ ಹರಿವೊಲು,
ಮಾತು ಮಾತಿಗೆ ಹೆಣೆದು
ಗಂಗೆಯಂದದಿ ನೆಗೆದು
ಬಾ, ತಾಯಿ ಮನತೊಳೆದು
ನಿರ್ಝರಿಯೊಲು! ೫

ಎದೆಯ ಆಳದಲಿಳಿದು
ಮುಳುಮುಳುಗಿ ಬಾ!
ಬ್ರಹ್ಮಾಂಡದಲಿ ಅಲೆದು
ಮೊಳನೊಳಗಿ ಬಾ!
ಹಸುಳೆ ಕವಿಯನು ನುಡಿಸಿ
ಅಮರವಾಣಿಯ ಮೆರೆಸಿ
ಜಗದ ಕಂಗಳ ತೆರೆಸಿ
ಶುಭವೆರೆಸಿ ಬಾ! ೬

ಇತರ ದಾರಿಗಳೊಲ್ಲೆ
ನನ್ನದೆಲ್ಲಿ?
ಮುಗಿಯೆ ಸಾಧನೆಯಲ್ಲೆ
ಸಿದ್ಧಿಯೆಲ್ಲಿ?
ನನ್ನ ನುಡಿ ನನಗಿರಲಿ
ನನ್ನ ನಡೆ ನನಗಿರಲಿ
ನಿನ್ನ ಕೈ ಬಿಡದಿರಲಿ
ದಾರಿಯಲ್ಲಿ! ೭

* * *

ತಡವಾದರೇನಂತೆ
ಬಿಡುವಾಗಿ ಬಾ!
ಮೆಚ್ಚಿ ನೈಮರೆವಂತೆ
ಮಿರುಮಿರುಗಿ ಬಾ!

'ನೋಬೆಲ್' ಪಾರಿತೋಷಕ

ಆ. ಬಾ. ಕೃ. ಗಲಗಲಿ, ಕಲ್ಲೂಸ್ಕರವಾಡಿ

★

ನೋಬೆಲ್ ಪಾರಿತೋಷಕದ ಹೆಸರನ್ನು ಕೇಳಿದವರು ಇಂದು ಬಹುಜನರು. ಆದರೆ ಈ ಪಾರಿತೋಷಕದ ಪೂರ್ವಕಥೆಯನ್ನು ತಿಳಿದವರು ಎಷ್ಟು ಜನರೋ! ಗೊತ್ತಿಲ್ಲದವರು ಇದನ್ನೋದಿ ಗೊತ್ತುಮಾಡಿಕೊಳ್ಳಲಿ!

★

೬೩ ವರ್ಷಗಳ ಹಿಂದಿನ ಮಾತು. ಅನಾರೋಗ್ಯದ ಮೂಲಕ ಬಿಳುಪುಗೊಂಡ ಮುಖದ ಒಬ್ಬ ಸ್ವೀಡಿಶ್ ತರುಣ, ನ್ಯೂಯಾರ್ಕ್ ಪಟ್ಟಣದ ವಿಶಾಲವಾದ ಒಂದು ವಸತಿಗೃಹದಲ್ಲಿ ಬಂದು ಇಳಿದುಕೊಂಡ. ಆ ವ್ಯಕ್ತಿ ಕಾಣುವುದಕ್ಕೆ ವಿಚಿತ್ರವಾಗಿತ್ತು! ಅವನ ಬಳಿ ಇದ್ದುದು ಒಂದೇ ಒಂದು ಸೂಟ್‌ಕೇಸು!

ಅವನನ್ನು ಒಂದು ಗಂಟೆಯೊಳಗಾಗಿ ಅಲ್ಲಿಂದ ಹೊರಗೆ ಕಳಿಸಲಾಯಿತು! ಅವನ ಸೂಟ್‌ಕೇಸಿನಲ್ಲಿ ದ್ರವಪದಾರ್ಥವಿರುವ ಡಬ್ಬಿಗಳು ಹೊರಟುವು! ಅತ್ಯಂತ ಅಪಾಯಕಾರಕವಾದ ಈ ದ್ರವಪದಾರ್ಥವು ಅನೇಕಾನೇಕ ಅನರ್ಥಗಳಿಗೆ ಕಾರಣವಾಗಿತ್ತು! ಪನಾಮಾ ಕಾಲುವೆಯಲ್ಲಿ ಒಂದು ದೊಡ್ಡ ಹಡಗ ಮುಳುಗಿದ್ದು, ಸ್ಯಾನ್-ಫ್ರಾನ್ಸಿಸ್ಕೊ ಶಹರದಲ್ಲಿಯ ಒಂದು ಭವ್ಯವಾದ ಕಟ್ಟಡ ನೆಲಸಮವಾದುದು, ನಾರ್ವೆಯೊಳಗಿನ ಒಂದು ಕಾರಖಾನೆ ಉಧ್ವಸ್ತವಾದುದು ಈ ದ್ರವಪದಾರ್ಥದ ಪ್ರತಾಪವೇ! ವಸತಿಗೃಹದ ಚಾಲಕರಿಗೆ ಮೊದಲಿಗೇ ಈ ಸುದ್ದಿ ಮುಟ್ಟಿದ್ದಿತು. ಇಂಥ ವಿನಾಶಕಾರಿಯಾದ ವಸ್ತುವನ್ನು ಶೋಧಿಸಿ ತೆಗೆದವನು ಆಲ್ಫ್ರೆಡ್ ನೋಬೆಲ್‌ನು!

೩೦ ವರ್ಷಗಳ ತರುವಾಯ ನೋಬೆಲ್‌ನು ಮರಣ ಹೊಂದಿದನು. ಅದಕ್ಕೆ ಮೊದಲು, ತನ್ನ ಗಳಿಕೆಯಲ್ಲಿಯ ೯೦ ಲಕ್ಷ ಡಾಲರುಗಳ ನಿಧಿಯನ್ನು ಬೇರೆ ಇರಿಸಿ, ಅದರ ಬಡ್ಡಿಯೊಳಗಿಂದ ೫ ಪಾರಿತೋಷಕಗಳನ್ನು ಹಂಚುವ ಏರ್ಪಾಡುಮಾಡಿದನು. ಮಾನವನ ಹಿತಕ್ಕಾಗಿ ದುಡಿಯುವ ಅತ್ಯಂತ ಬುದ್ಧಿವಂತರಾದ ಜನರಿಗೆ ಪ್ರತಿವರ್ಷ ಈ ಬಹುಮಾನಗಳನ್ನು ಕೊಡಲಾಗುತ್ತದೆ. ಈ ಬಹುಮಾನವು ನಿಧಿಯ ರೂಪದಲ್ಲಯೇ ದೊರೆಯುತ್ತದೆ. ಒಂದೊಂದು ಬಹುಮಾನಕ್ಕೆ ದೊರೆಯುವ ಹಣ ಸುಮಾರು ಒಂದು ಲಕ್ಷ ೨೦ ಸಾವಿರ ರೂ ಗಳಷ್ಟಾಗಬಹುದು!

ವಾಙ್ಮಯ, ಪದಾರ್ಥವಿಜ್ಞಾನ, ರಸಾಯನ ಶಾಸ್ತ್ರ, ವೈದ್ಯಕ ಹಾಗು ವಿಶ್ವಶಾಂತಿ ಈ ಐದು ವಿಷಯಗಳಿಗಾಗಿಯೇ ಪಾರಿತೋಷಕದ ವಿತರಣೆಯನ್ನು ನಿರ್ಧರಿಸಲಾಗಿದ್ದು ಇದಕ್ಕಾಗಿ ವರ್ಷಕ್ಕೆ ಒಂದೊಂದರಿಂದ ಲಕ್ಷ ಡಾಲರುಗಳು ವೆಚ್ಚವಾಗುತ್ತವೆ.

ಸ್ವೀಡನಿನವರೇ ನೋಬೆಲ್ ನಿಧಿಯ ವಿಶ್ವಸ್ತರಾಗಿದ್ದಾರೆ. 'ಪೀಸ್ ಪ್ರಾಯಿಜ್' (ಶಾಂತಿ ಪಾರಿತೋಷಕ) ನ ಹಂಚುವಿಕೆ ಮಾತ್ರ ನಾರ್ವೆಯರ ಕೈಯಲ್ಲಿದೆ. ೧೯೦೧ ರಲ್ಲಿ ಪ್ರಾರಂಭವಾದ ಈ ಪಾರಿತೋಷಕ ವಿತರಣೆಯು, ಈಗ ೫೦ ವರ್ಷ ಅವ್ಯಾಹತವಾಗಿ ನಡೆದು ಬಂದಿದೆ.

ಆಲ್ಫ್ರೆಡ್ ನೋಬೆಲ್‌ನು ಪ್ರಪಂಚದಲ್ಲಿ ಕುಬೇರನಿಗೆ ಸಮನಾದವನು. ೧೫ ದೊಡ್ಡ ಕಾರಖಾನೆಗಳ, ೯೬ ಪಡೆಗಳ ಒಡೆಯನವನು. ಯುದ್ಧ ಸಾಹಿತ್ಯವನ್ನು ಒದಗಿಸುವುದರಲ್ಲಿ ಖ್ಯಾತಿಗೊಂಡ ಕ್ರಪ್ ಮತ್ತು ರಥ್ಸಾರಾಫ್‌ರಂತೆ ಇವನೂ ಅಧಿಕಾರವಂತನಾಗಿದ್ದನು. ಹೊಸ ಹೊಸ ಯಂತ್ರೋಪಕರಣಗಳನ್ನು ನಿರ್ಮಿಸಿ, ಅಮೇರಿಕದ ಸ್ಪರ್ಧೆಗೆ ಪ್ರತಿಸ್ಪರ್ಧಿಯಾಗಿ ನಿಂತು, ತನ್ನ ಸಂಶೋಧನೆಗಳು ಕಾಯದೆಯಿಂದ ಅಬಾಧಿತವಾಗಿ ತನ್ನಕಡೆಗೇ ಉಳಿಯುವ ಹಾಗೆ ಪೇಟಂಟ್ ಹಕ್ಕುಗಳನ್ನು ದೊರಕಿಸಿ, ಅವನು ಅಪಾರವಾದ ಹಣವನ್ನು ಗಳಿಸಿದನು. ಡೈನಾಮೈಟ್, ಹೊಗೆಯಿಲ್ಲದ ಮದ್ದು, ಕೃತ್ರಿಮ ರಬ್ಬರ್ ಇವೇ ಮೊದಲಾದ ೩೫೫ ಶೋಧಗಳ ಪೇಟಂಟ್ ಹಕ್ಕುಗಳನ್ನು ನೋಬೆಲ್‌ನು ದೊರಕಿಸಿದ್ದನು!

ನೋಬೆಲ್‌ನು ಪ್ಯಾರಿಸ್ ಪಟ್ಟಣದಲ್ಲಿ ಮದುವೆಯಿಲ್ಲದೆ ಏಕಾಂಗಿಯಾಗಿ ಬಾಳಿದನು. ನಾಚುಗುಳಿ ಸ್ವಭಾವ. ಪಾಪ! ಅವನ ಜೀವಕ್ಕೆ ಸುಖವಿರಲಿಲ್ಲ! ೧೮೯೬ನೆಯ ಡಿಸೆಂಬರ್ ೧೦ನೆಯ ದಿನಾಂಕದಲ್ಲಿ, ಅವನು ತನ್ನ ಇಹಲೋಕದ ಜೀವನವನ್ನು ಮುಗಿಸಿದನು. ತನ್ನನ್ನು ಜೀವಂತವಾಗಿ ಎಲ್ಲಿ ಹೂಳಿಬಿಡುವರೋ ಎಂದು ಅವನಿಗೆ ಯಾವಾಗಲೂ ಅಂಜಿಕೆಯಾಗುತ್ತಿತ್ತು! ಆದುದರಿಂದಲೇ ಅವನು ತನ್ನ ದೇಹಕ್ಕೆ ಅಗ್ನಿಸಂಸ್ಕಾರವಾಗಬೇಕೆಂದು ಆಶೆಯನ್ನು ತೋರ್ಪಡಿಸಿದನು. ನೋಬೆಲ್‌ನ ಮರಣಾನಂತರ ಉಳಿದುದು ಅವನ ಮೃತ್ಯುಪತ್ರವೊಂದೇ!

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಕನ್ನಡದ ಸಣ್ಣಕತೆಗಳು ಎಂಬ ವಿಷಯ[illegible] ಪ್ರಬಂಧಗಳು ಐದು ಜನರಿಂದ ಮಾತ್ರ ಬಂದಿವೆ. ಅವುಗಳ ಅನುಕ್ರಮ ಹೀಗಿದೆ:

೧ ಶ್ರೀ. ಶ್ರೀಕಾಂತ ಪೋತ, ಶಮನೇವಾಡಿ. ೨ ಶ್ರೀ ಫತ್ತೇಪುರ ಶ್ಯಾಮಣ್ಣ, ಗದಗು ೩ ಶ್ರೀಮತಿ ಪದ್ಮಾ, ಬೆಂಗಳೂರು. ೪ ಶ್ರೀ. ಬಾಳೂ ಬಿ. ಉಪಾಧ್ಯೆ ಶಮನೇವಾಡಿ. ೫ ಶ್ರೀ. ಜಿ. ಎಸ್. ಮಕಳಕರ್ ಎಂ. ಎ., ಬಿ ಟಿ ಪುಣೆ.

ಮಾರ್ಚ್ ೫೦ ದಿನಾಂಕ ಕಳೆದರೂ ಒಂದೂ ವಿಮರ್ಶೆ ಬಾರದುದರಿಂದ, ನಿರಾಶೆಯ ಸಂದರ್ಭವೇ ಒದಗಿದ್ದಿತು. ಆದರೆ ೩೧-೩೨ ದಿನಾಂಕಗಳಲ್ಲಿ ನಾಲ್ಕು ಜನರಿಂದ ವಿಮರ್ಶೆಗಳು ಬಂದು ಆ ಸಂದರ್ಭ ತಪ್ಪಿತು. ಈ ಬಗೆಯ ಪ್ರಬಂಧಗಳು ತರುಣರ ಬಹುಶ್ರುತತ್ವವನ್ನು ಒರೆಗೆ ಹಚ್ಚುವಂತಿರುತ್ತವೆ. ಕನ್ನಡ ಸಣ್ಣಕತೆಗಳ ಸಾಹಿತ್ಯವನ್ನು ಹೆಚ್ಚು ಹೆಚ್ಚಾಗಿ ಓದಿದವರಿಂದ ಇಂತಹ ವಿಮರ್ಶೆಗಳು ಹೆಚ್ಚು ಹೆಚ್ಚು ಒಕ್ಕೆಯವಾಗಿ ಬರಬಹುದು. ನಮ್ಮ ತರುಣವಾಚಕ ವರ್ಗದಲ್ಲಿ ಕತೆಗಳನ್ನು ಓದುವವರ ಸಂಖ್ಯೆ ಬಹುವಾಗಿದೆಯೆಂಬುದು ನಮಗೆ ಗೊತ್ತು; ಆದರೆ ಅವುಗಳನ್ನು ಅಭ್ಯಾಸಪೂರ್ವಕವಾಗಿ ಓದಿ ನೆನಪಿನಲ್ಲಿಟ್ಟುಕೊಂಡು ವಿಮರ್ಶಿಸುವವರು ಇನ್ನೂ ಹೆಚ್ಚಾಗಿಲ್ಲವೆಂಬುದು, ಈ ಸಲ ಬಂದ ವಿಮರ್ಶೆಗಳಿಂದ ಸ್ಪಷ್ಟವಾಯಿತು. ನಮ್ಮ ಲಲಿತ ಸಾಹಿತ್ಯವಾಚನ ಮನೋರಂಜನೆಗಾಗಿಯೂ ಇರಬೇಕು; ಅದರಂತೆಯೆ ವಿಮರ್ಶಕ ಬುದ್ಧಿಯನ್ನು ಹೆಚ್ಚಿಸುವಂತಹದೂ ಆಗಿರಬೇಕು.

ಈ ಸಲ ಬಂದ ಐದು ವಿಮರ್ಶೆಗಳಲ್ಲಿ **ಶ್ರೀಮತಿ ಪದ್ಮಾ, ಬೆಂಗಳೂರು** ಅವರದು ಉತ್ತಮವಾಗಿದೆ. ಶ್ರೀ. ಶ್ರೀಕಾಂತ ಶಮನೇವಾಡಿ ಅವರದೂ ಚೆನ್ನಾಗಿದೆ. ಶ್ರೀ. ಜಿ. ಎಸ್. ಮಕಳಕರ ಅವರ ವಿಮರ್ಶೆ ಹೆಚ್ಚು ಅಭ್ಯಾಸಪೂರ್ಣವೂ ವಿಸ್ತಾರವೂ ಆಗಿ ಇದ್ದುದರಿಂದ, ಅದೊಂದು ವಿಶೇಷ ಲೇಖನವೆಂದು ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗುವುದು.

ಮುಂದಿನ ಸಲದ ವಿಮರ್ಶೆಯ ಶಿಕ್ಷಣರಂಗಕ್ಕಾಗಿ 'ದಿವಂಗತ ಗಳಗನಾಥರ ಕಾದಂಬರಿಗಳು' ಎಂಬ ವಿಷಯ ಕುರಿತು ವಿಮರ್ಶಾತ್ಮಕ ಪ್ರಬಂಧ ಬರೆಯಬೇಕು. ಅತ್ಯುತ್ತಮವೆಂದು ತೀರ್ಮಾನಗೊಂಡ ಪ್ರಬಂಧಕ್ಕೆ ೫ ರೂ. ಬೆಲೆಯ ಪುಸ್ತಕಗಳನ್ನು ಬಹುಮಾನವಾಗಿ ಕೊಡಲಾಗುವುದು.

—ಸಂಪಾದಕರು

ಕನ್ನಡದಲ್ಲಿ ಸಣ್ಣಕತೆಗಳು

ಶ್ರೀಮತಿ ಪದ್ಮಾ, ಬೆಂಗಳೂರು

★

ಕನ್ನಡ ಕಥಾಸಾಹಿತ್ಯದಲ್ಲಿ, ಸಣ್ಣಕತೆಗಳು ತಮ್ಮದೇ ಆದ ಅನೇಕ ವೈಶಿಷ್ಟ್ಯಗಳಿಂದ ಕೂಡಿ, ಒಂದು ಪ್ರಾಮುಖ್ಯ ಸ್ಥಾನವನ್ನು ಪಡೆದಿವೆ. ದಿನವೆಲ್ಲವೂ ಹೊಟ್ಟೆಪಾಡಿಗಾಗಿ ದುಡಿಯುವ ಮನುಷ್ಯ, ಅನೇಕ ಬಗೆಯ ಸಾಂಸಾರಿಕ, ಕಷ್ಟ-ಕೋಟಲೆಗಳಿಗೆ ತಲೆಕೊಟ್ಟು, ಅಡೆ-ತಡೆಗಳನ್ನೆದುರಿಸಿ, ಕಾದಂಬರಿ ಬರೆಯುವಷ್ಟು ಬಿಡುವು ದೊರಕಿಸಿಕೊಳ್ಳುವುದು ಕಷ್ಟಸಾಧ್ಯ. ಕಾದಂಬರಿ ಬರೆದು ಮುಗಿಸುವಷ್ಟು ಚಿತ್ತಸ್ವಾಸ್ಥ್ಯ ಸಹನೆಗಳಿರುವುದೂ ಅಸಾಧ್ಯ. ಆದ್ದರಿಂದ ಜೀವನ ನಿರ್ವಹಣಕ್ಕಾಗಿಯೇ ದುಡಿಯಬೇಕಾಗಿರುವ ಶ್ರಮಜೀವಿಗೆ, ತನ್ನ ಜೀವನವನ್ನು ಸಾಹಿತ್ಯ ಸೇವೆಗಾಗಿ ಮುಡಿಪಾಗಿಡುವುದು ಸಾಧ್ಯವಿಲ್ಲ. ಸಾಹಿತ್ಯಸೇವೆಯ ಮಹತ್ತ್ವಾಕಾಂಕ್ಷೆಯನ್ನೀಡೇರಿಸಿಕೊಳ್ಳಲಿಕ್ಕೆ, ಅಲ್ಪಕಾಲಾವಧಿಯಲ್ಲಿ ಬರೆಯಬಹುದಾದ ಸಣ್ಣಕತೆಗಳು ಒಂದು ಸಹಿಷ್ಣುವಾಗಿವೆ. ಒಂದೇ ಸಮನಾಗಿ ಕಾದಂಬರಿಯನ್ನೋದಿ ಮುಗಿಸಲು ವೇಳೆ ಇಲ್ಲದವರು, ಸಣ್ಣಕತೆಯನ್ನು ಅಲ್ಪಕಾಲಾವಧಿ ಓದಬಹುದಾದ್ದರಿಂದಲೂ, ಮನೋರಂಜನೆಯನ್ನೊದಗಿಸುವುದರಿಂದಲೂ ಅದು ಜನತೆಯ ಆದರಕ್ಕೆ ಪಾತ್ರವಾಗಿದೆ. ಆದ್ದರಿಂದಲೇ ಸಣ್ಣಕತೆಗಳ ಸಂಖ್ಯೆಯು ದಿನದಿನಕ್ಕೆ ಬೆಳೆಯುತ್ತಿದೆ.

ಸಣ್ಣಕತೆಗಳು ಅಧಿಕಸಂಖ್ಯೆಯಲ್ಲಿ ಬರುತ್ತಿದ್ದರೂ, ಅವೆಲ್ಲ ಸತ್ತ್ವಪೂರ್ಣವಾಗಿಲ್ಲ; ನೀರಸವಾಗಿರುವುವೇ ಹೆಚ್ಚು. ಗಾತ್ರದಲ್ಲಿ ಸಣ್ಣವಾಗಿರುವುವಲ್ಲದೆ, ಗುಣ-ಯೋಗ್ಯತೆಗಳಲ್ಲೂ 'ಸಣ್ಣತನ'ವನ್ನೇ ತೋರುತ್ತಿವೆ. ಸಣ್ಣಕತೆಯ ವೈಶಿಷ್ಟ್ಯಗಳೊಂದೂ ಇಲ್ಲದೆ, ವಾಚಕರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನೂ ಮಾಡದೆ, ಕೇವಲ ಆಡಂಬರದ ಶಬ್ದಗಳ ಮೇಲಾಟವೆನಿಸುವಂತಿರುತ್ತವೆ. ಕಾರಣ ಜನರಲ್ಲಿ, ಮನಸ್ಸಿಗೆ ಬಂದುದನ್ನೆಲ್ಲಾ—ಕಣ್ಣಿಗೆ ಕಂಡುದನ್ನೆಲ್ಲಾ ಸಾಹಿತ್ಯಜ್ಞಾನವಿಲ್ಲದೆ ಬರೆಯುವ, ಬರೆದುದನ್ನೆಲ್ಲಾ ಅಚ್ಚಿಗೆ ತರುವ, ಪ್ರಕಟವಾದುದನ್ನೆಲ್ಲಾ ಗ್ರಂಥರೂಪಕ್ಕೆ ತರುವ ಪ್ರವೃತ್ತಿ ಬೆಳೆಯುತ್ತಿದೆ. ಹಳೆಯ ಕಥೆಗಳಿಗೆ ಹೊಸ ಬಣ್ಣಗಳನ್ನು ಕೊಟ್ಟು,

ಹೊಸ ಸನ್ನಿವೇಶದಲ್ಲಿ ತರುತ್ತಿದ್ದಾರೆ. ಅನುವಾದಗಳನ್ನು ಸ್ವತಂತ್ರ ಕೃತಿಗಳೆಂದು ತೋರಿಸಿ, ಕೃತಿಚೌರ್ಯದಂತಹ ಹೀನಕೆಲಸ ಮಾಡುತ್ತಿದ್ದಾರೆ. ಓದುಗನ ಮೇಲೆ ಕೆಲವು ಗಂಟೆಗಳವರೆಗೆ ಕೂಡ ಯಾವ ಪರಿಣಾಮವನ್ನೂ ಉಂಟುಮಾಡದಿರುವ ಬರೆಹವು ಸಾಹಿತ್ಯವಲ್ಲ. ಜನತೆಯ ಹೃದಯವೀಣೆಯ ತಂತಿಗಳನ್ನದು ಮಿಡಿಯುವಂತಿರಬೇಕು. ಅದರಿಂದ ಬರತಕ್ಕ ನಾದವೇ ನಾಡಿನ ಸರ್ವತೋಮುಖ ಪ್ರಗತಿಗೆ ಕಾರಣವಾಗುತ್ತದೆ. ಇಂದಿನ ಸಣ್ಣಕಥಾಲೇಖಕರ ಈ ಪ್ರವೃತ್ತಿಗೆ ಪತ್ರಿಕೆಗಳೂ ಪ್ರಕಟನಾಲಯಗಳೂ ಕೆಲಮಟ್ಟಿಗೆ ಕಾರಣವಾಗಿವೆ. ರಾಜಕೀಯ-ಸಾಮಾಜಿಕ ವಿಷಯಗಳಲ್ಲಿ ಜನಜಾಗೃತಿಯನ್ನುಂಟುಮಾಡುವುದು ಪತ್ರಿಕೆಗಳ ಕರ್ತವ್ಯವಿದ್ದಂತೆಯೆ ಉತ್ತಮ ಸಾಹಿತ್ಯಿಕರನ್ನೊದಗಿಸುವುದೂ ಪ್ರಮುಖಕರ್ತವ್ಯವಾಗಿದೆ. ಸಾಹಿತಿಯು ಜನತೆಯಲ್ಲಿ ಅದ್ಭುತ ಪರಿಣಾಮವನ್ನುಂಟುಮಾಡಿ ದೇಶವನ್ನು ಪ್ರಗತಿಪಥದಲ್ಲಿ ನಡೆಯಿಸಬಲ್ಲ ವಿಭೂತಿ. ಖಡ್ಗಕ್ಕಿಂತಲೂ ಹರಿತವಾದ ಅವನ ಲೇಖನಿಯು, ಜನತೆಯಲ್ಲಿ ಸುಪ್ತವಾದ ವಿಚಾರಶಕ್ತಿಯನ್ನು ಕೆರಳಿಸಿ, ಕ್ರಾಂತಿಕಾರಕವಾಗಿ, ನವ ಜಗತ್ತನ್ನು ಸೃಷ್ಟಿಸಬಲ್ಲದು. ಇಂತಹ ಸಾಹಿತ್ಯಿಕರನ್ನು ಒದಗಿಸುವುದು ನಾಡಿನ ಹಿರಿದೃಷ್ಟಿಯಿಂದ ಪತ್ರಿಕೆಗಳ ಮೊದಲ ಕೆಲಸವಾಗಿದೆ. ಆದರೆ ಇಂದು ಅನೇಕ ಪತ್ರಿಕೆಗಳು ಪ್ರಕಟಿಸುವ ಕತೆಗಳು ನೀರಸವಾಗಿದ್ದು, ಪತ್ರಿಕೆಯನ್ನು ತುಂಬುವುದಕ್ಕಾಗಿ ಮಾತ್ರವಿವೆ. ಕೇವಲ ವ್ಯಾಪಾರೀ ದೃಷ್ಟಿಯಿಂದ ಪತ್ರಿಕಾ ಪ್ರಕಟನಾಲಯಗಳನ್ನಿಡುವೆ, ಅನಂಗೀಕೃತ ಕಥೆಗಾರರ ಅಸಮಾಧಾನವನ್ನು ಕಡೆದುಕೊಂಡು. ಉತ್ತಮ ಸಾಹಿತ್ಯರಚನೆಯ ಧ್ಯೇಯದೊಂದಿಗೆ ಮುಂದುವರಿಯಬೇಕು.

ಸಾಹಿತ್ಯವು ಬುದ್ಧಿ-ಭಾವನೆಗಳ ಸಮನ್ವಯವಾಗಿದೆ. ಕೇವಲ ಬುದ್ಧಿಬಲದಿಂದಾಗಲಿ, ಭಾವಾವೇಗದಿಂದಾಗಲಿ ಬರೆದುದು ಸಾಹಿತ್ಯವಾಗುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಮನಸ್ಸು ಭಾವನೆಯ ಆವೇಗದಲ್ಲಿ ಸಿಲುಕಿ, ಲೇಖನಿಯು ಯಾವ ಅಡೆತಡೆಗಳಿಲ್ಲದೆ ಒಂದೇ ಸಮನಾಗಿ ಮುಂದುವರಿಯುತ್ತದೆ. ಲೇಖಕನನ್ನು ಅನಾಯಾಸವಾಗಿ ಸಾಹಿತ್ಯಲೋಕಕ್ಕೆ ಒಯ್ಯುವ ಒಳಶಕ್ತಿ ಅಥವಾ ಪ್ರಚೋದನೆಯೇ "ಸ್ಫೂರ್ತಿ" ಎನಿಸುತ್ತದೆ. ಇದು ಅನೇಕರಿಗೆ ದೈವದತ್ತವಾದ ಶಕ್ತಿಯಾಗಿರುತ್ತದೆ. ಇದರಿಂದಲೇ ಅವಿಶ್ರಾಂತವಾಗಿ ದಿನವೆಲ್ಲಾ ಬರೆದು, ಜನತೆಗೆ ಸಾಹಿತ್ಯರತ್ನಗಳನ್ನೊದಗಿಸಿದ ಸಾಹಿತಿಗಳಿದ್ದಾರೆ. "ಸಾಹಿತ್ಯವು ಯಾವೊಬ್ಬ ವ್ಯಕ್ತಿಯ ಸೊತ್ತಲ್ಲ. ಪ್ರತಿಯೊಬ್ಬನಿಗೂ ತನಗೆ ಸರಿತೋರಿದ ದಾರಿಯಲ್ಲಿ ಮುಂದುವರಿಯುವ ಸ್ವಾತಂತ್ರ್ಯವಿದೆ" ಎಂದರೂ, ಇದು ಎಲ್ಲರಿಗೂ ಸಲ್ಲುವ ಮಾತಲ್ಲ. ಹೊಸದಾಗಿ ಬರೆಯಲಾರಂಭಿಸಿರುವ ಲೇಖಕರು, ಹಿರಿಯ ಸಾಹಿತಿಗಳು ನಡೆದ ಜಾಡಿನಲ್ಲಿಯೇ ಲಾಕ್ಷಣಿಕರು ಹೇಳುವ ಸಾಹಿತ್ಯದ ನಿಬಂಧನೆಗಳಿಗನುಸಾರವಾಗಿಯೇ—ನಡೆಯುವುದು ಒಳ್ಳೆಯದು. ಸಾಹಿತ್ಯಾಭ್ಯಾಸವು ಮೂಲಸ್ಫೂರ್ತಿಯನ್ನು ಉತ್ತಮ ಬರೆಹಗಳನ್ನು ಬರೆಯಿಸುವ ಕೃತುಶಕ್ತಿಯಾಗಿದೆ. ಇದು ಸ್ಫೂರ್ತಿಯ ಬೆಳವಣಿಗೆಗೆ—ರಣೋತ್ಸಾಹೀ ಸೈನ್ಯಕ್ಕೆ ಉತ್ತಮ ಸೇನಾಪತಿ ಇದ್ದಂತೆ. ಕಥಾವಸ್ತುನಿನ, ಆಯ್ಕೆ, ಸನ್ನಿವೇಶ ನಿಯೋಜನೆ, ಪಾತ್ರಪೋಷಣೆ, ಸಂಭಾಷಣೆ, ಶೈಲಿ ಮೊದಲಾದುವು ಅಭ್ಯಾಸಬಲದಿಂದಲೇ ಬರುತ್ತವೆ. ಹೊಸ ಲೇಖಕನು ಲಕ್ಷಣಗ್ರಂಥಗಳನ್ನು ಅಭ್ಯಾಸಿಸುವುದಲ್ಲದೆ ಹಿರಿಯ ಸಾಹಿತಿಗಳ ಉತ್ತಮ ಕತೆಗಳನ್ನು ವಿಮರ್ಶಿಸಿ, ಕಥಾರಚನೆ, ಪಾತ್ರನಿಯೋಜನೆ, ಭಾಷೆಗಳ ವಿಚಾರದಲ್ಲಿ ಪರಿಶ್ರಮ ಪಡೆಯಬೇಕು.

ಲೇಖಕನು ಹೇಳಬೇಕೆಂದಿರುವ ವಿಚಾರವು ಕಥಾವಸ್ತುವೆನಿಸುತ್ತದೆ. ಕಥಾವಸ್ತುವಿನಲ್ಲಿ ಸಾಕಷ್ಟು ಘರ್ಷಣೆ ಇರಬೇಕು. ಅದೇ ಕುತೂಹಲಕ್ಕೀಡುಮಾಡುತ್ತದೆ. ಘರ್ಷಣೆ ಎಂದರೆ ಹೋರಾಟ. ಎರಡು ವ್ಯಕ್ತಿಗಳಿಗೋ ಅಥವಾ ಎರಡು ಬಣಗಳಿಗೋ ಆಗಬಹುದು. ಇಂತಹ ಹೋರಾಟವು ವೀರರಸದಿಂದ ಕೂಡಿ ಓದುಗನಲ್ಲಿ ಉತ್ಸಾಹವನ್ನುದ್ಭಿಸುತ್ತದೆ. ಮತ್ತೊಂದು, ಒಂದೇ ವ್ಯಕ್ತಿಯ ಮನಸ್ಸಿನಲ್ಲಿ ಉದ್ಭವಿಸಬಹುದಾದ ವಿರುದ್ಧ ಭಾವನೆಗಳ ತಾಕಲಾಟ, ವ್ಯಕ್ತಿಯ ಮನಸ್ಸಿನಲ್ಲಿದ್ದ ಭಾವನೆಯ ಆಲೆಗಳ ಬಡಿತವನ್ನು ಚಿತ್ರಿಸುವುದು-ಪಳಗಿದ ಕೈಯ ಕತೆಗಾರರಿಗೆ ಸಾಧ್ಯ. ಪರರಿಗೆ ಹೇಳಲಾಗದ-ಕೆಲವು ವೇಳೆ ತನಗೇ ಅರಿಯದಂತೆ-ಮನಸ್ಸಿನ ಬೆಳೆವಣಿಗೆ, ಬದಲಾವಣೆಗಳನ್ನು ಚಿತ್ರಿಸಿರುವ ಕಥೆಗಳಿಗೆ ಮನೋವಿಶ್ಲೇಷಣಾತ್ಮಕ ಕತೆಗಳೆನ್ನುತ್ತಾರೆ. ಮಾನವತೆ ಮತ್ತು ಸಂಪ್ರದಾಯಶರಣ ಮನಸ್ಸಿಗಾಗುವ ಹೋರಾಟ ಉತ್ತಮ ಕಥೆಯಾಗುತ್ತದೆ. ಶ್ರೀ. ಕೆ. ಅಶ್ವತ್ಥನಾರಾಯಣರಾಯರ 'ಧರ್ಮಕೊಂಡದ ಕತೆ' ಇಂಥವುಗಳಲ್ಲೊಂದು. ಅದೇ ಲೇಖಕರ 'ರಾಮಿ' ಮತ್ತು ಯಮ್ಮುಂಜ ರಾಮಚಂದ್ರರ "ಒಂದು ದಿವಸದ ತಾಯ್ತನ' ಉತ್ತಮ ಮನೋವಿಶ್ಲೇಷಣಾತ್ಮಕ ಕಥೆಗಳು.

ಅನುಭವವು ಸಾಹಿತ್ಯಕ್ಕೆ ಮುಖ್ಯಾಂಗ. ಅನುಭವಹೀನನಾದ ಲೇಖಕನ ಕಥೆಗಳು ಪರಿಣಾಮಕಾರಿಯಾಗಲಾರವು. ಕೇವಲ ಪದಗಳ ಸರ್ಕಸ್ ಆಗುತ್ತವೆ. ಕಾದಂಬರಿಗಳು ಸಾಧಾರಣವಾಗಿ ಮಧ್ಯಮ ವರ್ಗದ ಜನರ ಜೀವನಚಿತ್ರವನ್ನೊದಗಿಸುತ್ತವೆ. ಆದರೆ ಸಣ್ಣ ಕತೆಗಾರನಿಗೆ ಎಲ್ಲ ತರಗತಿಯ ಜನರ ಜೀವನ ಪರಿಚಯವೂ ಇರಬೇಕು. ಸುಶಿಕ್ಷಿತ-ಅಶಿಕ್ಷಿತ ಜನರ, ಸಂಪ್ರದಾಯಶರಣ ಮತ್ತು ಪ್ರಗತಿಪರ ಕ್ರಾಂತಿಕಾರಕ ವಿಚಾರಗಳನ್ನು ಕಂಡಿರಬೇಕು. ಆಟ್ಟಹಾಸ, ವೈಭವ, ಅಹಂಕಾರದಿಂದ ಕೂಡಿದ ಶ್ರೀಮಂತರ ಜೀವನ ಪರಿಚಯವೂ ಇರಬೇಕು ಮನೆ-ಮಠಗಳಿಲ್ಲದೆ ದಾರಿದ್ರ್ಯದೇವತೆಯೊಂದಿಗೆ ಸತತ ಹೋರಾಟ ನಡೆಯಿಸಿರುವ ದಲಿತ ಜೀವನ ಪರಿಚಯವೂ ಇರಬೇಕು. ಅವಲೋಕನ ಶಕ್ತಿಯು ಲೇಖಕನಲ್ಲಿರಬೇಕಾದ ಮತ್ತೊಂದು ಗುಣ. ಒಂದು ಘಟನೆಯು ನಡೆದಾಗ ವ್ಯಕ್ತಿಯ ನಡೆವಳಿಕೆಯಿಂದ ಅದರ ಕಾರ್ಯಕಾರಣ ಸಂಬಂಧವನ್ನು ಊಹಿಸುವ ಊಹಾಶಕ್ತಿ ಇರಬೇಕು. ಆಯಾ ಸ್ವಭಾವದ ವ್ಯಕ್ತಿಗಳ ಮನಸ್ಸಿನಲ್ಲುಂಟಾಗುವ ಭಾವನೆಗಳೇನು? ಅವರ ಮುಖಭಾವವು ಹೇಗಿರುತ್ತದೆ? ಆಂತಹ ಸಮಯದಲ್ಲಿ ಅವರು ಹೇಗೆ ವರ್ತಿ-

ಸುತ್ತಾರೆ? ಅವರ ಅಭಿನಯವು ಹೇಗಿರುತ್ತದೆ? —ಇವುಗಳನ್ನು ಗಮನಿಸಬೇಕು. ವಿರೋಧಿಸ್ವಭಾವದ ಕೆಲವು ವ್ಯಕ್ತಿಗಳನ್ನಿಟ್ಟುಕೊಂಡು, ಅವರ ನಡುವೆ ಅನೇಕ ಸನ್ನಿವೇಶಗಳನ್ನು ಕಲ್ಪಿಸುತ್ತ ಹೋಗಬಹುದು. ಲೇಖಕನು ಎಲ್ಲಾ ಕಾಲ-ದೇಶಗಳೊಂದಿಗೆ, ಎಲ್ಲಾ ತರಗತಿಯ ಜನರೊಂದಿಗೆ, ಬೆರೆಯುವ ತೀಕ್ಷ್ಣವಾದ ಅವಲೋಕನಶಕ್ತಿ, ವಿಚಾರಶಕ್ತಿ, ಸಹಾನುಭೂತಿ, ಕರುಣೆಗಳಿಂದ ಕೂಡಿರಬೇಕು. ಎಂದರೆ ಪಾತ್ರಪೋಷಣೆಯು ಉತ್ತಮವಾಗುತ್ತದೆ.

ಒಂದು ಘಟನೆಯ ಪರಿಣಾಮವನ್ನು ಚಿತ್ರಿಸಿ, ಅನಂತರ ಆದರ ಕಾರಣವನ್ನು ವಿವರಿಸುವುದು ಒಂದು ಮಾದರಿ. 'ಶ್ರೀನಿವಾಸ' ರ ಕೆಲವು ಕತೆಗಳು ಈ ಮಾದರಿಯಾಗಿವೆ. ಕೆಲವು ಬೇಳೆ ಪತ್ರಗಳು, ಡೈರಿ ಬರೆಹಗಳು ಇವುಗಳಿಂದ ಕತೆಯನ್ನು ಮುಗಿಸಿರುತ್ತಾರೆ. ಎಲ್ಲ ಕಾರ್ಯಗಳೂ ನಾವು ನಿರೀಕ್ಷಿಸಿದ್ದಂತೆ ನಡೆಯುವುದಿಲ್ಲ. ಅಕಸ್ಮಿಕವಾಗಿ ಬದಲಾವಣೆಗಳಾಗುತ್ತವೆ. ಈ ಅಕಸ್ಮಿಕತೆಯನ್ನು ತರುವುದಕ್ಕೆ ಪಳಗಿರಬೇಕು. ಅಕಸ್ಮಿಕತೆಯು ವಾಸ್ತವವಾಗಿರಬೇಕು. ಭದ್ರವಾದ ತಳಹದಿಯ ಮೇಲೆ ನಿಂತಿರಬೇಕು. ಇಲ್ಲದಿದ್ದರೆ ವಿಸ್ಮಯವನ್ನುಂಟುಮಾಡುವುದಿಲ್ಲ ಇದಕ್ಕೆ ಅನಂತಕಂದರ "ಮಂಜಿನ ನೀರು" ಉತ್ತಮ ಉದಾಹರಣೆ. ಇವರಲ್ಲಿ ಕತೆಗಾರನಿಗೆ ಗ್ರಂಥಮಾಲೆಯವರಿಂದ ಹಣಬರುವ ವಿಚಾರದಲ್ಲಿ ನೆಳಲು-ಬೆಳಕಿನ ಆಟವನ್ನು ತೋರಿಸುತ್ತಾರೆ. ಲಲಿತೆ ಕಾದಂಬರಿಯ ಹಸ್ತಪ್ರತಿಯನ್ನು ಸುಟ್ಟು ಬಿಟ್ಟಮೇಲೆ, ಗ್ರಂಥ ಶಾಲೆಯವರಿಂದ ಪತಿಯ ಗ್ರಂಥವನ್ನು ಸ್ವೀಕರಿಸಿರುವ ಪತ್ರ ಬಂದಾಗ, ವಾಚಕರೂ ಅವಳಂತೆಯೇ ನಿರಾಳಗೊಳ್ಳುತ್ತಾರೆ. ಹೀಗಿದ್ದಾಗ ರಂಗರಾಯರು ಮತ್ತೊಂದು ಹಸ್ತಪ್ರತಿಯನ್ನು ಮಾಡಿದ್ದುದು ವಿಸ್ಮಯಜನಕವಾಗಿದೆ. ಆವರೆ ಅವರು ಯಾವಾಗಲೂ ಹಸ್ತಪ್ರತಿಯನ್ನು ಬರೆದುಕೊಡುತ್ತಿದ್ದರೆಂಬ ಆಧಾರದ ಮೇಲೆ ನಿಂತಿರುವುದರಿಂದ, ಅಕಸ್ಮಿಕತೆಯು ಸಾಧಿಸಿದೆ. ಹೀಗೆ ಅಕಸ್ಮಿಕತೆಯು ಓದುಗನಲ್ಲಿ ಕುತೂಹಲವನ್ನು ಕೆರಳಿಸುತ್ತದೆ. ಇದು ಸಾಧಾರಣವಾಗಿಯೂ ವಾಸ್ತವಿಕತೆಗೆ ಒಪ್ಪುವಂತೆಯೂ ಇರಬೇಕು.

ಜೀವನದಲ್ಲಿ ನಡೆಯುವ ಕೆಲವು ಘಟನೆಗಳನ್ನು ಸ್ವಾರಸ್ಯವಾಗಿ ರಸಪೂರ್ಣವಾಗಿ ಹೇಳುವುದೇ ಸಣ್ಣಕತೆಯ ಗುರಿ. ಆದ್ದರಿಂದ ಇದರಲ್ಲಿ ಅಪ್ರಾಸಂಗಿಕ ಪಾತ್ರಗಳಿಗಾಗಲೀ ಸನ್ನಿವೇಶಗಳಿಗಾಗಲೀ, ಅನಾವಶ್ಯಕ ಸಂಭಾಷಣೆಗಾಗಲೀ ಎಡೆ ಇಲ್ಲ. ಹೇಳಬೇಕಾದುದನ್ನು ಮಿತವಾದ ಮಾತುಗಳಿಂದ ಸ್ವಾರಸ್ಯವಾಗಿ ನಿರೂಪಿಸಬೇಕು. ಆದ್ದರಿಂದ ಕತೆಯ ಗುರಿಯನ್ನು ಸಾಧಿಸತಕ್ಕ, ಆದಕ್ಕೆ ಪೋಷಕವಾದ ಒಂದೆರಡು ಸನ್ನಿವೇಶಗಳಿಂದಲೂ ಅದಕ್ಕೆ ಅನುಗುಣವಾದ ಒಂದೆರಡು ಪಾತ್ರಗಳಿಂದಲೂ ಕೂಡಿರಬೇಕು. ಸನ್ನಿವೇಶಗಳೂ, ಪಾತ್ರಗಳೂ, ವರ್ಣನೆಗಳೂ ಹೆಚ್ಚಿದಷ್ಟು ಯಾವ ಪಾತ್ರವೂ ಸ್ಫುಟವಾಗಿರದೆ, ಜೀವಕಳೆಯಿಲ್ಲದೆ, ಪಾತ್ರರಚನೆಯು ಕೆಡುವುದಲ್ಲದೆ, ಕಥೆಯ ಬಿಗಿಯು ತಪ್ಪುತ್ತದೆ. "ಚಿನ್ನಿ" ಎಂಬುದು ಕೇವಲ ಎರಡೇ ಪಾತ್ರಗಳಿಂದ ಒಂದೇ ಸನ್ನಿವೇಶದಿಂದ ಮನಮುಟ್ಟುವಂತೆ ನಿರೂಪಿಸಲ್ಪಟ್ಟ ಉತ್ತಮ ಕಲಾಕೃತಿ. ಕೆಲವು ಕತೆಗಳಲ್ಲಿ ಸಂಭಾಷಣೆಗಳಿಂದಲೇ ಅನೇಕ ಘಟನೆಗಳನ್ನು ವಿವರಿಸಿರುತ್ತಾರೆ. ಇಂಥವುಗಳಲ್ಲಿ ಮಿಜಿ ಜಣ್ಣರಾಯರ "ಮಾತುಕತೆ" ಉತ್ತಮ ಕಥೆ. ಇದರಲ್ಲಿ ಗ್ರಾಮಸಂರಕ್ಷಕ ದಳದವನೊಬ್ಬನು ನಾಲ್ಕಾರು ದಿನ, ಊರನ್ನು ಸುತ್ತುವಾಗ ಕೇಳಿದ ಮಾತುಗಳಿಂದಲೆ ಒಂದು ಕುಟುಂಬದ ಕಥೆಯನ್ನೂ ಆದರ ಮೂಲಕ ಪರ್ಯಾಯವಾಗಿ ಸಮಷ್ಟಿಕುಟುಂಬದ ಬಗ್ಗೆ ತಮಗಿರುವ ಸದ್ಭಾವನೆಗಳನ್ನೂ ತೋರಿಸಿದ್ದಾರೆ.

ಸಂಭಾಷಣೆಗಳು ವ್ಯಕ್ತಿಯ ಅಂತಸ್ತು-ಸ್ಥಿತಿಗಳಿಗನುಗುಣವಾಗಿರಬೇಕು. ಕನ್ನಡ ನಾಡಿನ ನಾನಾಭಾಗದ ಜನರ ಕನ್ನಡವೂ ವೈವಿಧ್ಯದಿಂದ ಕೂಡಿದೆ. ಸಂಭಾಷಣೆಗಳು ಆಯಾ ದೇಶ ಭಾಷೆಗೆ ಒಪ್ಪುವಂತಿರಬೇಕು ಅಶಿಕ್ಷಿತ ಮತ್ತು ಸುಶಿಕ್ಷಿತ ಜನರ ನಡುವೆ ಆಗುವ ಸಂಭಾಷಣೆಗಳು ಅವಶ್ಯಕ್ತನುಗುಣವಾಗಿರಬೇಕು ಅನೇಕ ಕಥೆಗಳಲ್ಲಿ ಗ್ರಾಮ್ಯವ್ಯಕ್ತಿಗಳಿಂದ ಒಂದು ಬಾರಿ ಗ್ರಾಮ್ಯಭಾಷೆಯನ್ನೂ ಮತ್ತೊಂದು ಬಾರಿ ಸುಶಿಕ್ಷಿತ ಭಾಷೆಯನ್ನೂ ಆಡಿಸಿರುವುದನ್ನೂ ಕಾಣಬಹುದು ಇದು ಬಹಳ ತಪ್ಪು.

ಕಥೆಯ ಆರಂಭ ಮತ್ತ [illegible] ಸ್ವಾರಸ್ಯಕ್ಕೆ ಇಂಬುಗೊಡುತ್ತವೆ [illegible] ಕಥೆ [illegible] ಸ್ವಗತ-ಭಾಷಣ [illegible], ಪತ್ರ [illegible] ಸಾಧನೆ [illegible] ಕಥೆಯನ್ನು [illegible] ಸ್ವಭಾವಕ್ಕನುಗುಣವಾಗಿರುತ್ತವೆ. ಸಾಧ [illegible] ಪ್ರಾರಂಭವು ಕಥೆಯ ಸೂಚನೆಯನ್ನು [illegible] ಅನೇಕ ಹಿರಿಯ ಸಾಹಿತಿಗಳ ಕೃತಿ [illegible] ಶ್ರೀಮಾನ್ ಆ. ನ. ಕೃ. ಅವರ '[illegible] ನೊದಲ ಕತೆಯು, ಸುಂದರ-ಜಾನಕಿಯ [illegible] ತೋರಿಸುವುದಲ್ಲದೆ, ಜಾನಕಿಯ ಕಣ್ಣೀರು-ಯೋಚನೆಗಳು ಅವಳ ಮುಂದಿನ ಪಾಳುಬಾಳಿನ ವ್ಯಂಗ್ಯಕಥಂತಿವೆ. ಹೀಗೆಯೇ ಯನ್ಮುಂಜ ರಾಮಚಂದ್ರರ "ಒಂದು ದಿವಸದ ತಾಯ್ತನ" ಎಂಬ ಕತೆಯ ಪ್ರಾರಂಭವು ಕಥಾನಾಯಕಿಯ ಮುಂಬರುವ

ಇದೀಗ ಪ್ರಕಟವಾಗಿದೆ!

= ಹಾವಾಡಿಗನ ಮಗಳು =

(ಶಿಗ್ಗಾಂವಿ ವಿಶೇಷತರ ಕಥಾಸಂಗ್ರಹ)

೧೮೦ ಪುಟಗಳು ಬೆಲೆ: ೧—೦—೦

○ ಇದು ವಿಕಾಸ ಸಾಹಿತ್ಯಮಾಲೆಯ ಎರಡನೆಯ ಪುಸ್ತಕವಾದುದರಿಂದ ಚಂದಾದಾರರಾಗುವವರಿಗೆ ವಿಶೇಷ ಸವಲತ್ತು, ರಿಯಾಯಿತಿಗಳಿವೆ.

ಪತ್ರಿಕಾ ಏಜಂಟುಗೆ ಮಾರಾಟಗಾರರಿಗೆ ಕೈತುಂಬ ಕಮೀಶನ್ ಅವಕಾಶಗಳಿಗಾಗಿ ಇಂದೇ ಬರೆಯಿರಿ.

ವಿಕಾಸ ಸಾಹಿತ್ಯಮಾಲಾ, ಶಿಗ್ಗಾಂವಿ. (ಜಿ. ಧಾರವಾಡ.)

ಶೂನ್ಯಮನಸ್ಸಿನ ಸೂಚನೆಯಾಗಿದೆ. ಆರಂಭದಂತೆ ಅಂತ್ಯವೂ ಮುಖ್ಯವಾದುದು. ಮುಗಿಸುವಿಕೆಯಲ್ಲಿ-ಯೂ ಸ್ವಾರಸ್ಯ ಭಾಗವು ಅಂತ್ಯಭಾಗವಾಗಿದೆ. ಆದ್ದರಿಂದ ಕಥೆಯ ಸ್ವಾರಸ್ಯವು ಕೆಡದಿರಲು ಅಂತ್ಯವು ಮುಖ್ಯವಾಗಿದೆ. (ಜಯಂತಿಯಲ್ಲಿ ಪ್ರಕಟವಾಗಿದ್ದ) ಕೆ. ಎ. ಎನ್. ರಾವ್ ರವರ ಒಂದು ಕಥೆಯಲ್ಲಿ, ಹೆಂಡತಿ-ಮಕ್ಕಳನ್ನು ಸುಖದಲ್ಲಿಡುವುದಕ್ಕಾಗಿ ಸೈನ್ಯ ಸೇರಿ, ಅಲ್ಲಿರಲಾರದೆ ತಪ್ಪಿಸಿಕೊಂಡು ಬಂದ ರಹಮಾನ್ ಊರಿಗೆ ಬರುವ ಮೊದಲೇ ತನ್ನ ಪತ್ನಿಯು ತನ್ನ ತಮ್ಮನನ್ನು ವಿವಾಹವಾಗಿದ್ದುದನ್ನು ಕೇಳಿ, ನೋಡಿ, ಅವರ ಬಾಳಿನಲ್ಲಿ ವಿಷ ಬೆರೆಸದೆ ತಾನೇ ಪಹುತಿಯಾದುದು—ಕರುಳು ಕತ್ತರಿಸುವಂತಿದೆ. ಕಣ್ಣಲ್ಲಿ ಪನಿಯೂರಿಸುವಂತಿದೆ.

ಭಾಷೆ ಹೇಗಿರಬೇಕು? ಶೈಲಿಯಲ್ಲಿ ಬಿಗಿಯಿರಬೇಕು. ಅಲ್ಪ-ಪ್ರಾಣ, ಮಹಾಪ್ರಾಣಗಳ ತಪ್ಪು ಆಭಾಸಕರ. ಪದಗಳ ಅರ್ಥ-ವನ್ನು ಸರಿಯಾಗಿ ತಿಳಿದು ಪ್ರಯೋಗಿಸಬೇಕು. ಇದಕ್ಕಾಗಿ ಉತ್ತಮ ಲೇಖಕರ ಗ್ರಂಥಗಳನ್ನು ಓದಬೇಕು. ಶಬ್ದಸಂಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಕಥೆಯನ್ನು ಯಾವ ಪುರುಷ-ವಚನದಲ್ಲಿ ಪ್ರಾರಂಭಿಸಿದೆಯೋ, ಅದೇ ಪುರುಷ-ವಚನದಲ್ಲಿಯೇ ಮುಗಿಸ-ಬೇಕು.

ಶ್ರೀನಿವಾಸರ ಕತೆಗಳು ಸರಳವಾಗಿ ಜನಮನವನ್ನು ಸೂರೆ-ಗೊಂಡಿವೆ. ಎಲ್ಲಾ ಬಗೆಯ ಅನುಭವಗಳೂ ಹಾಸು-ಹೊಕ್ಕಾ-ಗಿವೆ. ಅತಿ ಸಾಮಾನ್ಯ ವಿಚಾರವನ್ನು ಓದುಗರ ಕುತೂಹಲವನ್ನು ಕಾಯ್ದುಕೊಂಡು, ಅಸಾಮಾನ್ಯ ರೀತಿಯಲ್ಲಿ ಕೊಂಡೊಯ್ಯಬಲ್ಲರು. ಇದಕ್ಕೆ ಅವರ 'ವೆಂಕಟರಾಯನ ಪಿಶಾಚ' ಉತ್ತಮ ಉದಾ-ಹರಣೆ ಒಂದು ಕರಿಯ ಬೆಕ್ಕಿನಿಂದ ಅಂಜುಗುಳಿ ಮನುಷ್ಯನೊಬ್ಬನು ಹೇಗೆ ಹೆದರಬಹುದೆಂದು ಚಿತ್ರಿಸಿದ್ದಾರೆ.

ಮನುಷ್ಯನ ತರಗತಿಯ ಜೀವನವು ಕಾದಂಬರಿಗಳಿಗೆ ಜೀವಾಳ-ವಾಗಿದೆ; ಆದರೆ ಸಣ್ಣಕತೆಗಳು ಎಲ್ಲಾ ತರಗತಿಯ, ಮತ-ದೇಶ-ಭಾಷೆಗಳಿಗೂ ತನ್ನ ಶಾಖೆಗಳನ್ನು ಹರಡಿವೆ. ತನ್ನ ಶಾಖೆ-ಗಳನ್ನು ನಾನಾ ದಿಕ್ಕುಗಳಿಗೂ ಪಸರಿಸಿ ಗಗನಚುಂಬಿಯಾಗಿ, ನಾವಿರಾಮ ವಶು-ಪಕ್ಷಿಗಳಿಗೆ ಆಶ್ರಯವಾದ ಹೆಮ್ಮರದಂತಿದೆ.

ಸಣ್ಣಕತೆಗಳಲ್ಲಿ ದೀನ-ದಲಿತರ ಜೀವನಚಿತ್ರವು ಒಂದು ಮುಖ್ಯಾಂಗವೆನ್ನುವುದಾದರೆ, ಅದರ ಅತ್ಯುತ್ತಮ ಫಲಗಳನ್ನು ಬಸವರಾಜ ಕಟ್ಟೀಮನಿಯವರ ಕತೆಗಳಲ್ಲಿ ಕಾಣಬಹುದು. ಅವರ ಕತೆಗಳಲ್ಲಿ ಕೂಲಿಕಾರರಿಂದ ಭಿಕ್ಷುಕರವರೆಗೆ, ದಾರಿದ್ರ್ಯ ದೇವತೆಯ ಸಮಸ್ತ ಪುತ್ರರೂ ಹಾಜರು ಹೋಗಿದ್ದಾರೆ. ಇದೇ ಲೇಖಕರ "ಶಾರವಾನ್" ದಾರಿದ್ರ್ಯದ ಭೀಕರತೆ, ಹಸಿವಿನ ರೌದ್ರತೆಯನ್ನು ಯಥಾರ್ಥ ರೀತಿಯಲ್ಲಿ ವಿವರಿಸಿದೆ.

ಸಾಮಾಜಿಕ ಜೀವನದಲ್ಲಿ ಜನತೆ ಕಣ್ಣುಮುಚ್ಚಿ ಮಾಡುವ ಕೀಳುಕೆಲಸಗಳನ್ನು—ಅವರಿಗೆ ಕನ್ನಡಿ ಹಿಡಿದಂತೆ—ಅನೇಕರು ಸಾಹಿತ್ಯ ಮೂಲಕ ತೋರಿಸುವ ಕೆಲಸ ಮಾಡಿದ್ದಾರೆ. ಜನತೆಯ ತಪ್ಪನ್ನು ತೋರಿಸಿ ಅವರ ದ್ವೇಷದೊಂದಿಗೆ ಸಾಹಿತ್ಯಮೂಲಕ ಸಮಾಜವನ್ನು ಶುದ್ಧಿಗೊಳಿಸುವುದು ಸುಲಭವಲ್ಲ. ಶ್ರೀ. ಶಿವರಾಮ ಕಾರಂತರು "ತೆರೆಯ ಮರೆಯಲ್ಲಿ" ಎಂಬ ಕಥಾ ಸಂಗ್ರಹದಿಂದ, ಬಹಿರಂಗವಾಗಿ ಜನತೆಯ ಆದರಕ್ಕೆ ಪಾತ್ರವಾಗಿರುವ ವ್ಯಕ್ತಿಗಳು ಕತ್ತಲಲ್ಲಿ ಮಾಡುವ ಹೀನಕಾರ್ಯಗಳನ್ನು ಬಯಲಿಗೆಳೆದಿದ್ದಾರೆ. ಹೀಗೆಯೇ ಗೌರವಸ್ಥರು ಹೇಳಲೂ ಹಿಂದೆಗೆಯುವ ವೇಶ್ಯಾಜೀವನ-ವನ್ನು ಅನೇಕರು ಧೈರ್ಯವಾಗಿ ಚಿತ್ರಿಸಿದ್ದಾರೆ. ಸಮಾಜದ ದೃಷ್ಟಿ-ಯಲ್ಲಿ ಕೀಳಾಗಿರುವ ವೇಶ್ಯೆಯರ ಸುಸಂಸ್ಕೃತ ಹೃದಯ ವೈಶಾಲ್ಯ-ಗಳನ್ನು ಶ್ರೀ. ಕೆ. ಎ. ಎನ್. ರಾವ್, ಅವರ 'ರಾಮಿ' ಕತೆಯಲ್ಲಿ ಕಾಣಬಹುದು.

ಕನ್ನಡ ನಾಡಿನ ಇತಿಹಾಸದಲ್ಲಿ ಪ್ರಸಿದ್ಧನಾಗಿರುವ ಅನೇಕ ಸ್ತ್ರೀ ಪುರುಷರಲ್ಲದೆ—ಜನರ ಕಣ್ಣಿಗೆ ಬೀಳದೆ, ಪ್ರಸಿದ್ಧಿಗೆ ಬರದೇ—ಸಂಸ್ಕೃತಿ, ಜ್ಞಾನ, ಮನೋವೈಶಾಲ್ಯ, ಸಾಹಸ, ದೇಶಭಕ್ತಿಗಳ ವಿಚಾರದಲ್ಲಿ ಆಧುನಿಕ ವಿದ್ಯಾಪಂತರನ್ನೂ ಮೀರಿಸಿದ ಜನರಿದ್ದಾರೆ. ಇಂತಹ ಜನಮಾಣಿಕ್ಯಗಳ, ಎಲೆಮರೆಯ ಕಾಯಿಗಳ, ಕಾನನದ ಬೆಂದಿಂಗಳಾಗಿ ಬೆಳಗಿ ಹೋದ ರತ್ನಗಳನ್ನು ಜನತೆಯ ಮುಂದಿಡು-ವುದು ನಮ್ಮ ಕರ್ತವ್ಯ. ಇಂತಹ ಐತಿಹಾಸಿಕ ಕತೆಗಳನ್ನು ಜಯಂತಿಯಲ್ಲಿ ಕಾಣಬಹುದು. ಆನಂದಕಂದರ 'ಕಂಕಣದ ಕೈ'ಯ ರಾಯಗೊಂಡನ ಶೌರ್ಯ, 'ಜೋಗತೀ ಕಲ್ಲಿನ' ಜೋಗತಿ ಚೆಂದಾನ ತ್ಯಾಗಗಳು ಕನ್ನಡ ನಾಡಿನ ಕೀರ್ತಿ ಕಲಶಗಳಾಗಿವೆ.

ಭಾರತದ ರಾಜಕೀಯ ಸಂಗತಿಗಳು ರಾಜಕೀಯವಾಗಿಯೇ ಉಳಿಯದೆ, ಸಾಹಿತ್ಯದಲ್ಲೂ ತನ್ನ ಪ್ರಭಾವವನ್ನು ಬೀರಿದುವು. ಕಾದಂಬರಿಗಳು ರಾಜಕೀಯದಿಂದ ಪುಷ್ಟಿಪಡೆದುವು. ೧೯೪೨ರ ಆಗಸ್ಟ್ ಕ್ರಾಂತಿ, ಹಿಂದೂ ಮುಸ್ಲಿಂ ಹೋರಾಟಗಳು ಸಣ್ಣಕತೆ-ಗಳಿಗೆ ಒಳ್ಳೆಯ ಆಹಾರವಾಯಿತು. ಆಗಸ್ಟ್ ಕ್ರಾಂತಿಯ ನಾನಾ ಬಗೆಯ ನೋಟಗಳನ್ನು ಅನೇಕ ಕಥೆಗಳಲ್ಲಿ ಕಾಣಬಹುದು. ನಿ. ವ್ಯಾ. ಬಲ್ಲಾಳರ "ಎಲ್ಲಿಂದ ಎಲ್ಲಿಗೆ" ಮತ್ತು ಎಲ್. ಎಸ್. ಶೇಷಗಿರಿರಾಯರ "ಪ್ರಣಯಿಗಳು" ಮೊದಲಾದುವು ಮತ್ತು ಇತರ ಕತೆಗಳಲ್ಲಿ ಕಾಣಬಹುದು. ಹಿಂದೂ ಮುಸ್ಲಿಂ ಐಕ್ಯತೆಯನ್ನು ಸಾಧಿಸುವ ಅನೇಕ ಕತೆಗಳನ್ನು ಜಯಂತಿಯ ಅನೇಕ ಸಂಚಿಕೆ-ಯಲ್ಲಿ ಕಾಣಬಹುದು. ಅಂತರರಾಷ್ಟ್ರೀಯ ವಿಚಾರಗಳನ್ನೊಳ-ಗೊಂಡ ಕತೆಗಳು ಅನೇಕ ಬಂದಿವೆ. ಕುಳಕುಂದ ಶಿವರಾಯರ ಕಥಾಸಂಗ್ರಹವೊಂದರಲ್ಲಿ ಭಾರತದ ರಾಜಕೀಯವು ಜನತೆಯ ಮೇಲೆ ಮಾಡಿದ ಪರಿಣಾಮಗಳ ನಾನಾ ದೃಶ್ಯಗಳನ್ನು ಕಾಣ-ಬಹುದು.

ಸಾಹಿತಿಗಳಿಗೆ ಮತ್ತಷ್ಟು ಪ್ರೋತ್ಸಾಹವು ದೊರೆತು, ಕನ್ನಡ ನಾಡದೇವಿಯ ಸಾಹಿತ್ಯಭಂಡಾರವು ಉತ್ತಮ ಕಥಾರತ್ನಗಳಿಂದ ತುಂಬಲಿ.

ನವಯುಗದ ಮಹಿಳೆಯರು

ಶ್ರೀಮತಿ ಇಂದಿರಾ ಗಲಗಲಿ, ಕರ್ಲೊಸ್ಕರವಾಡಿ

★

೧೯೫೦ ಜಾನೆವಾರಿ ೨೬ನೆಯ ದಿನಾಂಕಕ್ಕೆ, ಭಾರತದಲ್ಲಿ ನವಯುಗವು ಪ್ರಾರಂಭವಾಗಿ, ದೇಶದಲ್ಲೆಲ್ಲ ಕಡೆಗೂ ಸಂಪೂರ್ಣ ಪ್ರಜಾರಾಜ್ಯವು ನೆಲೆಗೊಂಡಿತು. ಈ ಹೊಸ ರಾಜ್ಯಘಟನೆಯು ಭಾರತೀಯ ಮಹಿಳೆಯರ ದೃಷ್ಟಿಯಿಂದ ಅತ್ಯಂತ ಮಹತ್ವವುಳ್ಳದ್ದಾಗಿದೆ. ಅಧಿಕಾರ, ಹಕ್ಕುಬಾಧ್ಯತೆ ಇವುಗಳ ಬಗೆಗೆ ಈ ಘಟನೆಯು ಸ್ತ್ರೀಪುರುಷರಲ್ಲಿ ಯಾವ ತಾರತಮ್ಯವನ್ನೂ ಒಪ್ಪುವದಿಲ್ಲ. ಸಾಕಷ್ಟು ಯೋಗ್ಯತೆಯಿದ್ದುದಾದರೆ ರಾಷ್ಟ್ರಾಧ್ಯಕ್ಷ ಪದವಿ ಕೂಡ ಭಾರತೀಯ ಮಹಿಳೆಗೆ ದೊರೆಯಬಹುದು! ಕೇವಲ ಸ್ತ್ರೀ ಎಂಬ ಒಂದು ಕಾರಣದಿಂದ, ಅವರಿಗೆ ಯಾವ ಕ್ಷೇತ್ರದಲ್ಲಿಯೂ ಪ್ರತಿಬಂಧವಿಲ್ಲ. ರಾಜ್ಯಘಟನೆಯ ೧೫ನೆಯ ಕಲಮಿನಲ್ಲಿ, ಈ ಮಾತನ್ನು ಸ್ಪಷ್ಟೀಕರಿಸಲಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ, ಈ ಘಟನೆಯು ಭಾರತೀಯ ಮಹಿಳೆಯರ ವ್ಯಕ್ತಿವಿಕಾಸಕ್ಕೆ ಸಂಪೂರ್ಣ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಈ ಸದವಕಾಶವನ್ನು ನಾವು—ಭಾರತೀಯ ಮಹಿಳೆಯರು—ನಮ್ಮ ಹಿತಕ್ಕಾಗಿ ಬಳಸಿಕೊಳ್ಳಬೇಡವೆ? ವಿವಿಧ ಕ್ಷೇತ್ರಗಳಲ್ಲಿ, ಹೊರನಾಡ ಅಕ್ಕತಂಗಿಯರು ನಡೆಯಿಸಿವ ಕಾರ್ಯವು ಅಭಿನಂದನೀಯವಾಗಿದೆ. ಇದು ಅದರ ಹಕ್ಕಿನೋಟ :

ಇಂಗ್ಲಂಡಿನ ವೀರ ಬಾಲಿಕೆಯರು. (ಬ್ರಿ. ಇ. ಸೆ.)

'ರಾಜತರಂಗಿಣಿ'

ಕಾಶ್ಮೀರದ ಕವಿಪುಂಗವನಾದ 'ಕಲ್ಹಣ'ನು ರಚಿಸಿದ 'ರಾಜತರಂಗಿಣಿ' ಎಂಬ ಕಾವ್ಯವನ್ನೇ ಆಧಾರವಾಗಿಟ್ಟುಕೊಂಡು ತಯಾರಿಸಲಾದ ಚಿತ್ರಪಟದಲ್ಲಿ, ಶ್ರೀಮತಿ ವಿಜಯಲಕ್ಷ್ಮೀ ಪಂಡಿತರ ಮಗಳಾದ ರಿತಾ ಪಂಡಿತ ಇವರು ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ರಿತಾ ಈಗ ಸ್ವಿತ್ಸರ್ಲಂಡದ ರಾಜಧಾನಿಯಾದ ಜಿನಿವಾ ಪಟ್ಟಣದಲ್ಲಿ ಅಭಿನಯಕಲೆಯು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಅಭಿನಯದಲ್ಲಿ ಅವರಿಗೆ ಅಭಿರುಚಿ ಉಂಟಾಗಿದೆ. ಕಾಲೇಜಿನ ಹಲವಾರು ನಾಟಕ ಪ್ರಯೋಗಗಳಲ್ಲಿ ಅವರು ಭಾಗವಹಿಸಿದ್ದಾರೆ. ಒಂದು ಇಂಗ್ಲೀಷ್ ನಾಟಕದಲ್ಲಿ ಉತ್ತಮವಾಗಿ ಅಭಿನಯಿಸಿದ್ದಕ್ಕಾಗಿ, ಅಮೇರಿಕೆಯ ಒಂದು ಕಾಲೇಜ್ ಸಮಾರಂಭದಲ್ಲಿ ಅವರಿಗೆ ಸುವರ್ಣ ಪದಕವು ದೊರೆಯಿತು. 'ರಾಜತರಂಗಿಣಿ' ಕಾವ್ಯವನ್ನು ಆಂಗ್ಲ ಭಾಷೆಯಲ್ಲಿ ಭಾಷಾಂತರಿಸಿದವರು ಪಂಡಿತ ದಂಪತಿಗಳೇ; ಎಂದರೆ ವಿಜಯಲಕ್ಷ್ಮೀ ಹಾಗು ಅವರ ಪತಿಗಳಾದ ಶ್ರೀ ರಣಜಿತ ಪಂಡಿತರು. ಈ ಕಾವ್ಯವು ೪೦೦೦ ಶ್ಲೋಕಗಳುಳ್ಳದ್ದಾಗಿದೆ. ರಾಜಕುವರಿಯಾದ ಇಲಾ ಎಂಬ ಶೂರ ಮಹಿಳೆಯು, ತನ್ನ ನಾಡನ್ನು ಶತ್ರುಗಳ ದಾಳಿಯಿಂದ ಹೇಗೆ ರಕ್ಷಿಸಿದಳೆಂಬುದನ್ನು ಈ ಕಾವ್ಯದಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಬಣ್ಣಿಸಲಾಗಿದೆ.

ಕು. ಸ್ನೇಹ ಮಥುರ.

ಇವರು ಬರ್ಮ್ಯಾಕ್‌ಪುರದಿಂದ ಜಮ್‌ಶೇಟಪುರ, ಮುಂದೆ ಅಸ್ಸನ್‌ಸೋಲ್ ಹೀಗೆ ಇಳಗ ಮೈಲಿನ ವೈಮಾನಿಕ ಉಡ್ಡಾಣದಲ್ಲಿ ಒಂದನೆಯ ಬಹುಮಾನವನ್ನು ಪಡೆದರು. ಕುಮಾರಿ ಮಥುರರು ಕಾನಪುರದವರು. ೨೫ ವರ್ಷದ ಪ್ರಾಯ. ವಿಮಾನದಲ್ಲಿ ಪ್ರಯಾಣ ಮಾಡಲು ಕೂಡ ಎಷ್ಟೋ ಗಂಡಸರು ಹೆದರುತ್ತಿರುವಾಗ, ಅದನ್ನು ನಡೆಯಿಸುವ—ಅಷ್ಟೇ ಅಲ್ಲ—ಪ್ರಥಮಶ್ರೇಣಿಯಲ್ಲಿ ಹೆಸರು ಪಡೆವ ಕು. ಸ್ನೇಹ ಮಥುರರನ್ನು ನೋಡಿದಾಗ, ಯಾವ ಭಾರತೀಯ ಮಹಿಳೆಗೆ ಸದಭಿಮಾನವೆನಿಸದು?

'ನಿಮಗೆ ಏನು ಬೇಕು?' ಎಂದು ಅಮೇರಿಕನ್ ಹೆಂಗಳೆ

ಯರಿಗೆ—ಅರ್ಥಾತ್ ಮದುವೆಯಾಗದ ತರುಣಿಯರಿಗೆ—ಕೇಳಲಾಗಿತ್ತು. ಬಂದ ಲಕ್ಷಾವಧಿ ಉತ್ತರಗಳಲ್ಲಿ ನೂರಕ್ಕೆ ೯೯ಜನ ತರುಣಿಯರು ಗಂಡ ಬೇಕು ಎಂದೇ ಉತ್ತರಿಸಿದ್ದರು! 'ಕುಕರ್ ಬೇಕು,' ದ್ರೌಪದಿಯರಂತೆ ಸ್ವಯಂವರ ಮಾಡಿಕೊಳ್ಳುವವರೆಂದು ಸಾರಿದ್ದಾರೆ. ಈ ಸ್ವಯಂವರವನ್ನು ಜರುಗಿಸಲು ತಮಗೆ ಅಪ್ಪಣೆ ದೊರೆಯಬೇಕೆಂದು ಶಿವಸಾಗರ ಜಿಲ್ಲೆಯ ಡೆಪ್ಯೂಟಿ ಕಮೀಶನರ

ಧಾರವಾಡದಲ್ಲಿ ಮೊನ್ನೆ ಮೊನ್ನೆ ಜರುಗಿದ ಅಖಿಲ ಕರ್ನಾಟಕ ಔದ್ಯೋಗಿಕ ಮತ್ತು ಒಕ್ಕಲುತನದ ಪ್ರದರ್ಶನವ ಹೊಲಿಗೆಯ ವಿಭಾಗದಲ್ಲಿ ಭಾಗವಹಿಸಿದ್ದ ಮಹಿಳೆಯರು.

ಸರ್ ಕೋಟು ಬೇಕು—ಎಂದು ತಿಳಿಸಿದವರು ತೀರ ಕಡಿಮೆ!

ಆಸಾಮಿನ ಒಂದು ಊರ ಇಬ್ಬರು ತರುಣಿಯರು ತಾವು ಸೀತಾರನ್ನು ಕೇಳಿದ್ದಾರೆ. ಈ ತರುಣಿಯರು ಮ್ಯಾಟ್ರಿಕ್ ಪಾಸಾಗಿದ್ದು ಅಹೋಶ್ರ ಎಂಬ ಜಾತಿಗೆ ಸೇರಿದ್ದಾರೆ.

(೫೩ನೆಯ ಪುಟದಿಂದ ಮುಂದುವರಿದದ್ದು)

ಈ ಅವನ ಮೃತ್ಯುಪತ್ರದಲ್ಲಿ ಹಲವು ದೋಷಗಳಿದ್ದುವು. ಇದನ್ನು ಅವನು ತಾನೇ ಕನ್ನ ಹಸ್ತಾಕ್ಷರದಲ್ಲಿ ಬರೆದಿದ್ದನು. ಯಾವ ವಕೀಲನ ಮೇಲೂ ಅವನಿಗೆ ನಂಬಿಕೆಯಿರಲಿಲ್ಲ. ಅವನ ಮೃತ್ಯುಪತ್ರದ ವಿಶ್ವಸ್ತರೆಲ್ಲ ಸ್ವೀಡಿಶ್ ಜನರೇ ಆಗಿದ್ದರು. ಅವರೇ ವಿಶ್ವಾಸಪಾತ್ರರು ಎಂದು ಅವನು ನಂಬಿದ್ದನು. ನೋಬೆಲ್‌ನ ಮನೆತನದ ಎರಡು ಶಾಖೆಗಳವರು ಆಸ್ತಿಗಾಗಿ ಕೋರ್ಟಿನಲ್ಲಿ ವ್ಯಾಜ್ಯಹೂಡಿದರು; ಕೊನೆಗೆ ಅವನ ಮೃತ್ಯುಪತ್ರವೇ ಸ್ಥಿರೀಕರಿಸಲ್ಪಟ್ಟಿತು. ೫ ವರ್ಷದ ತರುವಾಯ ಈ ನೋಬೆಲ್ ಪಾರಿತೋಷಕದ ಏರ್ಪಾಡು ಜಾರಿಯಲ್ಲಿ ಬಂದಿತು.

ಡಿಸೆಂಬರ್ ೧೦ನೆಯ ದಿನಾಂಕ ನೋಬೆಲ್‌ನ ಪುಣ್ಯದಿನ. ಅಂದು ಸಾಯಂಕಾಲ ೫ ಗಂಟೆಗೆ ಸ್ಟಾಕ್‌ಹೋಮ್ ನಗರದಲ್ಲಿ ಈ ಪಾರಿತೋಷಕಗಳನ್ನು ಹಂಚಲಾಗುತ್ತದೆ. ಸ್ವೀಡನ್‌ದೇಶದ ಅರಸರಾದ ಗುಸ್ತಾವ್ ಇವನ್ನು ಹಂಚುತ್ತಾರೆ. ಆಗ ದೊಡ್ಡ ಸಮಾರಂಭ ನಡೆಯುತ್ತದೆ. ಗುಸ್ತಾವರಿಗೆ ಈಗ ೯೧ ವರ್ಷದ ವಯಸ್ಸು. ದೃಷ್ಟಿ ಮಂದವಾಗಿದೆ. ಕಳೆದ ವರ್ಷ ಅವರ ಪರವಾಗಿ ಅವರ ಕಾರ್ಯದರ್ಶಿಯೇ ಈ ಕಾರ್ಯವನ್ನು ನೆರವೇರಿಸಿದನು. ಈ ವರ್ಷ ಯುವರಾಜನಿಂದ ಈ ಸಮಾರಂಭವು ಕೊನೆಗೊಂಡಿತು.

ನೋಬೆಲ್ ಫೌಂಡೇಶನಿನ ಭವ್ಯವಾದ ಆರು ಅಂತಸ್ತಿನ ಕಟ್ಟಡ ಶುಭ್ರ ಶಿಲೆಯದಾಗಿದೆ. ವಿಶ್ವಸ್ತ ಮಂಡಲದಲ್ಲಿ ೬ ಜನ ಸಭಾಸದರಿದ್ದು, ಈ ಮಂಡಲದ ಅಧ್ಯಕ್ಷ—ಉಪಾಧ್ಯಕ್ಷರನ್ನು ಸ್ವೀಡನ ಸರಕಾರವೇ ನಿಯಮಿಸುತ್ತದೆ.

ಪ್ರತಿವರ್ಷ ಫೆಬ್ರುವರಿ ತಿಂಗಳ ೧೫ನೆಯ ತಾರೀಖಿಗೆ ಉಮೇದುವಾರರು ತಮ್ಮ ಹೆಸರುಗಳನ್ನು ಈ ಮಂಡಲದ ಕಡೆಗೆ ಕಳುಹಿಸಬೇಕಾಗುವುದು. ಯಾರೂ ಇನ್ನೊಬ್ಬರ ಹೆಸರನ್ನು ಸೂಚಿಸಬಹುದು. ಎಲ್ಲ ರಾಷ್ಟ್ರಗಳ ನಾಗರಿಕರಿಗೂ ತಮ್ಮ ಹೆಸರನ್ನು ಸೂಚಿಸುವ ಅಧಿಕಾರವಿದೆ.

ಭಾರತೀಯರಲ್ಲಿ ದಿ. ರವೀಂದ್ರನಾಥ ಟಾಗೋರರವರಿಗೆ ೪ ಗೌರವವು ದೊರೆಯಿತು. ಪ್ರಸಿದ್ಧ ಹಿಂದೀ ವೈಜ್ಞಾನಿಕರಾದ ಸರ ಸಿ. ವಿ. ರಾಮನರೂ ಈ ಗೌರವವನ್ನು ಪಡೆದಿದ್ದಾರೆ.

ನಮ್ಮ ಏಕೈಕ ಮುಂದಾಳುಗಳಾದ ಪಂಡಿತ ಜವಾಹರಲಾಲ ಹೆಸರನ್ನು ಈ ಸಲ ಸೂಚಿಸಲಾಗಿದೆ. ದೊರೆತರೆ ಭಾರತೀಯರಿಗೆ ಇನ್ನೊಂದು ಹೆಮ್ಮೆಯ ಮಾತು!

ಭಾವಜೀವಿ

(೩೬೦ ಸಾಲುಗಳ ಒಂದು ಖಂಡ ಕಾವ್ಯ)

ಶ್ರೀ. ಚೆನ್ನವೀರ ಕಣವಿಯವರು ಬರೆದುದನ್ನು ಧಾರವಾಡದ ಪ್ರಗತಿಶೀಲ ಸಾಹಿತ್ಯಮಾಲೆಯವರು ಪ್ರಕಟಿಸಿದ್ದಾರೆ.

ಶ್ರೀಮಾನ್ ಚೆನ್ನವೀರ ಕಣವಿಯವರು, ತರುಣ ಕವಿಗಳಾಗಿ ಸ್ಫುರಿಸಿ, ಈಗಾಗಲೆ ಪ್ರಕಟವಾಗಿರುವ ಅವರ ' ಶಾವ್ಯಾಕ್ಷಿ ' ಕವನ ಸಂಕಲನದ ಮೂಲಕ ಬಹುಜನ ಕಾವ್ಯಪ್ರಿಯರಿಗೆ ಪರಿಚಿತರಾಗಿ ಸ್ಫುರಿಸಿದ್ದಾರೆ. ಈ ಕಾವ್ಯಕ್ಕೆ ವಿಶದವಾಗಿ ಮುನ್ನುಡಿ ಬರೆದ ಪ್ರಿನ್ಸಿಪಾಲ್ ಗೋಕಾಕ ಅವರು ' ಭಾವಜೀವಿ— ಎಂಬ ಈ ಕೃತಿಯಲ್ಲಿ ಕವಿಯ ಸ್ಫೂರ್ತಿಯ ಉಗಮವನ್ನು ಗುರುತಿಸಲು ಹವಣಿಸಿ, ಅದರ ಪ್ರವಾಹವನ್ನು ಚಿತ್ರಿಸಿದ್ದಾರೆ ' ಎಂದು ಕವಿಯ ಕಾವ್ಯೋದ್ದೇಶವನ್ನು ಒಂದೆ ಮಾತಿನಲ್ಲಿ ಹೇಳಿದ್ದಾರೆ.

' ಒಂದಿಲ್ಲ ಒಂದು ದಿನ ಸಾನಂದ ಸುಂದರನು
ಎದೆಯ ಪೀಠಕೆ ವಿಜಯ ಗೈಯಬಹುದು;
ಭಾವಜೀವಿಯ ವಿಮಲ ಭಾವಾನುಭಾವದಲಿ
ಒಳನಿಧಾನದ ಪರಿಯ ತೋರಬಹುದು ? '

ಎಂಬ ಆದರ್ಶದ ಆಶಾವಾದಿ ಈ ಕವಿ. ಯಾವಾಗಲೂ ಭಾವಜೀವಿಗಳು ಆದರ್ಶವಾದಿಗಳು. ವಾಸ್ತವ-ವರ್ತಮಾನಗಳೆಲ್ಲ ಆದರ್ಶಸಿದ್ಧಿಯ ಸಾಧನಗಳೆಂದು ನಂಬಿರುವರವರು. ಈ ಮಾತನ್ನು ಶ್ರೀ. ಕಣವಿಯವರು :

' ಮನೆಯ ಕಟ್ಟುವ ಮೊದಲು ನಕ್ಷೆಯನು ತೆಗೆವಂತೆ
ಭಾವ ಕಾಣುವುದದನು ಕನಸಾಗಿಸಿ,
ಅ ಮೇಲೆ ಕಲ್ಲು-ಕಟ್ಟಿಗೆ-ಗಚ್ಚು-ಗಾರೆಯಲಿ
ಭದ್ರಗೊಳಿಸುವರದನು ರೂಪುಗೊಳಿಸಿ '

ಎಂಬ ಉಪಮೆಯ ಮಾತುಗಳಲ್ಲಿ ಅಂದವಾಗಿ ಹೇಳಿರುವರು. ಭಾವವಿಲ್ಲದ ಬುದ್ಧಿಜೀವಿಗೆ ಬೆಲೆಯಿಲ್ಲ; ಆದರಂತೆ ಬುದ್ಧಿಯಿಲ್ಲದ ಭಾವಜೀವಿಗೂ ಬೆಲೆಯಿಲ್ಲ. ಇದನ್ನರಿತು, ಸಾಂಪ್ರದಾಯಿಕ ಭಾವಜೀವಿಗಳು ಬುದ್ಧಿವಾದಿಗಳನ್ನು ಬೈಯುವುದನ್ನು ಬಿಡಬೇಕು ಅ [illegible] ಕೊಳ್ಳುವವರು ಭಾವಜೀವಿಗಳನ್ನು ತಿ [illegible] . ಆದರ್ಶವಾದನೆಂಬುದನ್ನು ಬುದ್ಧಿ- ಜೀ [illegible] ಕಟ್ಟುವರಾದರೂ, ಬುದ್ಧಿಜೀವಿ ಗಳ [illegible] ತು ಸುಖಜೀವನವಿಲ್ಲವೆಂಬುದನು ಮರೆತು ನಡೆಯಲಾಗದು. ಜೀವನದಲ್ಲಿಯ ಸುಖ-ಶಾಂತಿ ಬುದ್ಧಿಜೀವಿಗೂ ಬೇಕು; ಭಾವಜೀವಿಗೂ ಬೇಕು. ಬುದ್ಧಿವಂತ ಈ ಆದರ್ಶವನ್ನು ಲೆಕ್ಕಾಚಾರದಿಂದ ಸಾಧಿಸಲು ಪ್ರಯತ್ನಿಸಬಹುದು; ಭಾವಜೀವಿ ಸದ್ಭಾವನೆಗಳ ವಿಕಾಸದ ಮೂಲಕ ಇದನ್ನು ಸಾಧಿಸಲು ಪ್ರಯತ್ನಿಸಬಹುದು; ಇಷ್ಟೇ ಭೇದ. ಇಬ್ಬರೂ ಆದರ್ಶವಾದಿಗಳೆ. ಆದರೆ ಪ್ರಕೃತಿಮಾತೆ ಮಾನವಕುಲದಲ್ಲಿ ಬುದ್ಧಿಗಿಂತ ಭಾವದ ಬಂಡವಾಳವನ್ನು ಹೆಚ್ಚಾಗಿ ಇಟ್ಟಿರುವುದರಲ್ಲಿ, ಆಕೆಯ ದೊಂದು ಏನೋ ಉದ್ದೇಶವಿರಲೇಬೇಕು. ಬುದ್ಧಿಯ ಲೆಕ್ಕಾಚಾರಕ್ಕಿಂತ ಭಾವದ ಸುಂದರ ಕನಸುಗಳೇ ಲೋಕದಲ್ಲಿ ತೀವ್ರವಾಗಿ ಸುಖ-ಶಾಂತಿಗಳನ್ನು ಹರಡುವುವೆಂದು ಆವಳಿಗೆ ಮನವರಿಕೆಯಾಗಿರಬೇಕು.

ಜೀವನದ ಭೂತ-ವರ್ತಮಾನಗಳ ವಾಸ್ತವತೆಯೆ ಭವಿಷ್ಯತ್ತಿನ ಸೌಂದರ್ಯನಿರ್ಮಾಣಕ್ಕೆ ಹೇಗೆ ಕಾರಣವಾಗಿವೆಯೆಂಬುದನ್ನು ಈ ಖಂಡಕಾವ್ಯ ಸುಂದರವಾಗಿ ನಿರ್ವಚಿಸುತ್ತದೆ. ಮಾನವನಿಗೆ ಈ ವಾಸ್ತವತೆಗಳಲ್ಲಿ ಹುದುಗಿದ ರಹಸ್ಯಗಳನ್ನು ಅರಿಯುವ ಕಣ್ಣು ಮಾತ್ರ ಬೇಕು. ಅಂತಹ ಕಣ್ಣು ಇರುವವನೇ ಕವಿಯೆನಿಸಿಕೊಳ್ಳುವನು. ಒಬ್ಬ ಒಳ್ಳೆಯ ಕವಿ, ತನ್ನಕಾಲದ ವಾತಾವರಣವನ್ನು ತನ್ನಂತೆಯೆ ಎಚ್ಚರಿಸಿ ತೋರಿಸಬಲ್ಲ.

ಹಳ್ಳಿಯಲ್ಲಿ ಹುಟ್ಟಿ ಬೆಳೆದ ಈ ತರುಣ ಕವಿ, ಚಿಕ್ಕತನದಿಂದಲೂ ತೆರೆದ ಕಣ್ಣುಗಳಿಂದ ಜೀವಿಸಿಕೊಂಡು ಬಂದಿದ್ದಾನೆ. ಎಂತಲೆ

' ಚಿಕ್ಕಂದು ಯಾರಾದರೊಂದು ಬಿರುನುಡಿಯಾಡೆ
ಕಂಬನಿ ಕಪೋಲಗಳ ತೊಯಿಸುತ್ತಿತ್ತು;
ಹುಡುಗಾಟ ನಗೆಯಾಟ ಹೊಗೆಯಾಟವಾಗುತಿರೆ
ತಾರತಮ್ಯವನರಿಯದಾಗುತಿತ್ತು ! '

ಹಳ್ಳಿಯ ನಿಸರ್ಗಸೌಂದರ್ಯ, ಜೀವನದ ಸೌಂದರ್ಯ, ವಿಕೃತಿ, ಎಲ್ಲವನ್ನೂ ಕವಿ ಕಣ್ಣಿಟ್ಟು ಕಂಡುದನ್ನು ಕಣ್ಣಿಗೆ ಕಟ್ಟುವಂತಹ ಮಾತುಗಳಲ್ಲಿ ವಿವರಿಸಿದ್ದಾನೆ:

' ಜೋಳದಾ ಪಯಿರು ಹೊಡೆಹಾಯ್ದು ಹೊಂದಲೆಗೂಡೆ
ಅಕ್ಕಡಿಯ ಬಳ್ಳಿಗಳು ಹುಲುಸಾಗಿರೆ,
ಬನ್ನಿಗಿಡದಡಿಯಲ್ಲಿ ತತ್ರಾಣಿ ತಣ್ಣೀರ
ಕುಡಿದು ಬುತ್ತಿಯನುಂಡು ಸೊಂಪಾಗಿರೆ— '

ಕೊಲ್ಲಾರಿ ಚಕ್ಕಡಿಗೆ ಹೂಡಿರುವ ಎತ್ತುಗಳ
ಕೊರಳ ಗೆಜ್ಜೆಯ ಸರವು ಟೆಂಟೆಣಿಸಲು—
ಮೂಕೆಯಲಿ ಕುಳಿತಿರುವ ಆಳು ಲಾವಣಿ ಹಾಡೆ
ಕಿವಿಗೊಟ್ಟು ಕೇಳುವುವು ಬಾನು-ಬಯಲು. ?

ಆದರಂತೆಯೆ ಕಮ್ಮಾರ ಮಾನಪ್ಪನ ಕೆಂಗುಲುಮೆ, ಕುಂಬಾರ ಮುಲ್ಲಣನ ತಿಗುರಿ, ಮಾದರ ದುರಗೆನ ಕೆರವಿನ ಹೊಲೆತ, ದನ-

(ಕವ್ವರಿನ ೩ನೆಯ ಪುಟ ನೋಡಿರಿ)

ಸಾದರ ಸ್ವೀಕಾರ

★

೧೫೬. **ಶೋಭಾ** (ತ್ರೈಮಾಸಿಕ ಪತ್ರಿಕೆಯ ೧೨ನೆಯ ವರ್ಷದ ೧೨ನೆಯ ಸಂಚಿಕೆ). ಸಂಪಾದಕರು ಶ್ರೀ. ಶ್ರೀನಿವಾಸ ಪುರುಷೋತ್ತಮ ಭಟ್ಟ ಮತ್ತು ಶ್ರೀ. ತ್ರಿವಿಕ್ರಮ ಪುರುಷೋತ್ತಮ ಭಟ್ಟ; ಶೋಭಾ ಆಫೀಸ್, ರಥಬೀದಿ ಮಂಗಳೂರು. ಕ್ರೌ. ಅ. ೪೦ ಪುಟಗಳು. ವಾ. ಚಂ. ೧–೦–೦. ಬಿಡಿಸಂಚಿಕೆಗೆ ೦–೪–೦.

೧೫೭. **ಜೀವನ ಪಾಠಗಳು** (ಪ್ರಬಂಧ ಸಂಕಲನ) ಲೇಖಕರು ಪ್ರಿನ್ಸಿಪಾಲ್ ವಿ. ಕೃ. ಗೋಕಾಕ ಎಂ. ಎ. ಅವರು. ಧಾರವಾಡದ ಲಲಿತ ಸಾಹಿತ್ಯಮಾಲೆಯ ೫೦ನೆಯ ವರ್ಷದ ೪೦ನೆಯ ಕುಡಿ. ಕ್ರೌ. ಅ. ೯೨ ಪುಟಗಳು. ಬೆಲೆ ೧–೪–೦.

೧೫೮. **ದೋರಾ ಮತ್ತು ಇತರ ಕತೆಗಳು** (ಅನುವಾದಿತ ಕತಾ ಸಂಕಲನ) ಅನುವಾದಕರು ಶ್ರೀ. ಗೋ. ವೆಂ. ಚುಳಕಿ. ಮೇಲಿನ ಲಲಿತ ಸಾಹಿತ್ಯಮಾಲೆಯ ೪೦ನೆಯ ವರ್ಷದ ೫೦ನೆಯ ಕುಡಿ. ಕ್ರೌ. ಅ. ೪೪ ಪುಟಗಳು. ಬೆಲೆ ೧–೦–೮.

೧೫೯. **ರಾಷ್ಟ್ರೀಯ ಮಹಾಪುರುಷರು** (ವ್ಯಕ್ತಿ ಪರಿಚಯ ಸಂಕಲನ). ಬರೆದವರು ಶ್ರೀ. ಆರ್. ಜಿ. ಕಾರಜೋಳ, ಬಿ. ಎ., ಬಿ. ಟಿ. ಬಾಗಿಲುಕೋಟೆ ಪ್ರಕಾಶಕರು; ಮಹಾಂತೇಶ ಬುಕ್‌ಡಿಪೋ, ಬಾಗಿಲಕೋಟೆ. ಕ್ರೌ ಅ. ೧೭೪ ಪುಟಗಳು. ಬೆಲೆ ೧–೦–೦.

೧೬೦. **ಮಾಯಾ** (ಚಿಕ್ಕ ಕಾದಂಬರಿ) ಬರೆದವರು ಶ್ರೀ. ಕುಮಾರ ವೆಂಕಣ್ಣ. ಬೆಂಗಳೂರಿನ ಲಲಿತ ಸಾಹಿತ್ಯ ಗ್ರಂಥಮಾಲೆಯ ೧೨ನೆಯ ಪುಸ್ತಕ. ವಿಳಾಸ ೨೪೦ ಅರಳೇ ಪೇಟೆ, ಬೆಂಗಳೂರು ಸಿಟಿ. ಕ್ರೌ. ಅ ೫೬ ಪುಟಗಳು, ಬೆಲೆ ೦–೮–೦.

೧೬೧. **ಹೃದಯಗೀತೆ** (ಕವನ ಸಂಕಲನ) ಬರೆದವರು ಶ್ರೀ. ಕುಮಾರ ವೆಂಕಣ್ಣ. ಪ್ರಕಾಶಕರು ಪ್ರಗತಿಶೀಲ ಲೇಖಕ ಸಂಘ, ಬೆಂಗಳೂರು. ಕ್ರೌ. ಅ. ೩೮ ಪುಟಗಳು. ಬೆಲೆ ೦–೮–೦.

೧೬೨. **ಕನ್ನಡ ವೈರಾಗ್ಯ ತತಕ** (ಸಂಸ್ಕೃತ ಕವಿ ಭರ್ತೃಹರಿಯ ಕೃತಿಯ ಅನುವಾದ). ಅನುವಾದಕರು: ಶ್ರೀ. ಎಂ. ಎಸ್. ಸುಬ್ಬಣ್ಣ ಬಳ್ಳಾರಿ. ಪ್ರಕಾಶಕರು ಕಾಲವ ಸುಬ್ಬಣ್ಣ, ಮರ್ಚಂಟ್, ಸಭಾ-



ಪತಿ ಬೀದಿ, ಬಳ್ಳಾರಿ. ಕ್ರೌ. ಅ. ೧೮ ಪುಟಗಳು. ಬೆಲೆ ೦–೩–೦.

೧೬೩. **ಗದೀಚಾರು** (ಕಥಾಸಂಕಲನ). ಬರೆದವರು ಶ್ರೀ. ಕೊ. ಚೆನ್ನಬಸಪ್ಪ ಬಿ. ಎ, ಎಲ್ ಎಲ್. ಬಿ. ಬಳ್ಳಾರಿ. ಧಾರವಾಡದ ಪ್ರಗತಿಶೀಲ ಸಾಹಿತ್ಯಮಾಲೆಯ ೪೦ನೆಯ ಪುಸ್ತಕ. ಕ್ರೌ. ಅ. ೧೫೬ ಪುಟಗಳು. ಬೆಲೆ ೧–೮–೦.

೧೬೪. **ಪ್ರಜಾರಾಜ್ಯ** (ವಾರಪತ್ರಿಕೆ) ಹುಬ್ಬಳ್ಳಿಯಲ್ಲಿ ಹೊಸತಾಗಿಯೆ ಹೊರಟಿದೆ. ಸಂಪಾದಕರು ಶ್ರೀಮಾನ್ ಕರಿಯಣ್ಣನವರ ಅವರು.

ಸ್ವತಂತ್ರ ವಿಚಾರದಿಂದ ನಡೆಯಿಸಬೇಕೆಂದು ಈ ತರುಣ ಸಂಪಾದಕರ ಅಪೇಕ್ಷೆ. ಅವರ ಅಪೇಕ್ಷೆ ನೆರವೇರುವಂತೆ ಪ್ರಜಾರಾಜ್ಯ ಮೊದಲು ಶಕ್ತಿಪಡೆದು ಬದುಕಿ ಬಾಳಲಿ!

೧೬೫. **ಸಾಹಸಭೀಮ ವಿಜಯಂ** (ಕವಿರತ್ನನ ಗದಾಯುದ್ಧ ಕಾವ್ಯ) ಸಂಪಾದಕರು ಮತ್ತು ಪ್ರಕಾಶಕರು ವಿದ್ವಾನ್ ಕೆ. ವಿ. ಕೃಷ್ಣಭಟ್ಟ ಬಿ. ಎ. ಬಿ. ಓ. ಎಲ್., ಕಾವೇರಿಕಾನ, ಪೋ. ಆ. ಕುಂಬಳೆ, ಕ್ರೌ. ಅ. ೧೬+೧೬೦ ಪುಟಗಳು ಬೆಲೆ ೨–೦–೦.

೧೬೬. **ಹಳ್ಳಿಯ ಆರೋಗ್ಯ** (ಪರಿಷ್ಯಾತ್ಮಕ) ಲೇಖಕರು ಶ್ರೀಮಾನ್ ಎನ್. ಬಿ. ನಾಡಗೀರ ಬಿ. ಎ. ನಿವೃತ್ತ ಶಿಕ್ಷಣಾಧಿಕಾರಿಗಳು, ಮಾಳಮಡ್ಡಿ, ಧಾರವಾಡ. ಕ್ರೌ. ಅ. ೪೮ ಪುಟಗಳು. ಬೆಲೆ ೦–೮–೦.

೧೬೭. **ಕಲ್ಯಾಣ** (ಹಿಂದೀ ಮಾಸಪತ್ರಿಕೆಯ ಹಿಂದೂ ಸಂಸ್ಕೃತಿ ವಿಶೇಷಾಂಕ) ಗೋರಖಪುರದಲ್ಲಿ ಹೊಂಡುತ್ತಿರುವ ಈ ಸನಾತನ ಧರ್ಮಪ್ರಸಾರಕ ಪತ್ರಿಕೆಯು ಎಂದಿನಂತೆ ಕ್ರೌ. ೧೪ದ ಸುಮಾರು ೧೦೦೦ ಪುಟಗಳ ವಿಶೇಷಸಂಚಿಕೆಯನ್ನು ಪ್ರಕಟಿಸಿದೆ. ಅಭ್ಯಾಸಿಗಳಿಗೆ ತುಂಬ ಉಪಯುಕ್ತವಾಗಿದೆಯಲ್ಲದೆ, ಪ್ರತಿಯೊಂದು ಪುಸ್ತಕ ಭಾಂಡಾರದವರೂ ಸಂಗ್ರಹಿಸುವಂತಿದೆ.

(೫೬ನೇ ಪುಟದಿಂದ ಮುಂದು ವರಿದದ್ದು

ಕಾಯುವ ಗಿಂಗನ ಕೊಳಲೂದು, ಕೆಲಸಿಗರ ಕೆಂಚನ ಮೊಂಡುಗತ್ತಿ, ಲಮ್ಮಾಣಿಗಿತ್ತಿಯ ಗಿಲ್ ಗಿಲ್ ಗೆಜ್ಜೆ, ಇವೆಲ್ಲ ಕವಿಯ ಭಾವ-ವಿಕಾಸಕ್ಕೆ ಕಾರಣವಾಗಿವೆ. ತಂದೆ ಓದುತ್ತಿದ್ದ ' ಅನುಭವಾಮೃತ ' ಮುಪ್ಪಿನ ಷಡಕ್ಷರಿಯ ವಚನವನ್ನು ಹೇಳುವ ಜಂಗಮನ ತಂಬೂರಿ ನಾನ, ಸಾರುವಯ್ಯನ ಸುವ್ವಿಪದ—ಇವೆಲ್ಲ ಕವಿಯ ಹೃದಯವನ್ನು ಹದಗೊಳಿಸಿವೆ. ಇವೆಲ್ಲ ಚಿಕ್ಕತನದ ಪಾಠಗಳು ಕವಿಗೆ ಸೃಷ್ಟಿಯ ದ್ವಂದ್ವದೊಳಗಿಂದ ಸೌಂದರ್ಯವನ್ನು ಅವಿಷ್ಕರಿಸಿ ನೋಡುವು-ದನ್ನು ಕಲಿಸಿರುವುವು.

ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಬಂದಮೇಲೂ—ಪಟ್ಟಣದ ಮಿಶ್ರವಾತಾವರಣದಲ್ಲಿಯೂ—ಸೌಂದರ್ಯವನ್ನೇ ಆಯ್ದು ಅದರ ಸಹವಾಸದಲ್ಲಿರಲು ಹಚ್ಚಿದುದರಿಂದ, ಕವಿಯ ಸಂಸ್ಕಾರ-ಅನುಭ-ವಗಳು ಇನ್ನಿಷ್ಟು ವಿಶಾಲಗೊಂಡುವು. ಕಾವ್ಯದ ಕಡೆಗೆ ಮನಸ್ಸು ಒಲೆಯಿತು. ಅದರಂತೆಯೆ:

' ಲೆಕ್ಕವಿಲ್ಲದ ಜನರ ಹೊತ್ತು ತಿರುಗುತ್ತಿರುವ
ನೆಲದ ಹುಡಿಯಲ್ಲಿ ನಾನೊಂದು ಕಣವು !'
' ರಸವಂತಿ ವಾಸಂತಿ ಗುಣವಂತಿಯಾದಂದು
ಕೋಗಿಲೆಗು ಸವಿಹಾಡ ಕಲಿಸಬಹುದು ! '
' ಮಿಡಿಗಾಯನೊತ್ತಿಟ್ಟು ಹಸುಕಿ ಹಣ್ಣಿಸಬಹುದೆ ?
ಹಸಿಬಿಸಿಯು ರಸಪಾಕವಾಗಬಹುದೆ ? '

ಎಂಬ ಸತ್ಯಾನುಭವಗಳನ್ನೂ ಕಂಡಿತು. ತಮ್ಮ ಇದುವರೆಗಿನ ಜೀವನ ಹದಗೊಂಡ ಪರಿಯನ್ನು ಶ್ರೀ. ಚೆನ್ನವೀರ ಕಣವಿಯವರು ಈ ಕೃತಿಯಲ್ಲಿ ಸುಲಭ-ಸುಂದರವಾಗಿ ಹೇಳಿದ್ದಾರೆ. ಭಾಷೆಯಲ್ಲಿ ಶುದ್ಧತೆಯಿದ್ದು ಸರಲತೆಯೂ ಇದೆ. ಛಂದಸ್ಸು ವಿಷಯಕ್ಕೆ ತಕ್ಕುದಾಗಿದ್ದು ಎಲ್ಲಿಯೂ ಕುಂಟುವುದಿಲ್ಲ. ಇವರ ಕಾವ್ಯಕಲೆಯು ಸಂಪೂರ್ಣ ಜೀವನಾನುಭವಗಳಿಂದ ವಿಕಾಸಗೊಂಡು

' ಸೂರೆಸಾನದ ಹೂವ ಪುಷ್ಪಕವಿ ಮಾನದಲಿ
ಕುಳಿತು ಬಾಂದಳದಲ್ಲಿ ವಿರಬಹುದು ? '

—ಬಿ. ಪಿ. ಎಸ್. ರಾವ್.

ಕೋಲಂಬಿಯಾ ರೇಕಾರ್ಡಸ

ಕು. ಮೀರಾ ಗೋಳೇಕೇರಿ

GE 8521	ಸಂಸಾರ ರಹಿತ ಸಂಸಾರ ಎಲೋ ಹೀನ ಮನವೆ ಅರಿಯೋ

ಕು. ಮೀರಾ ಗೋಳೇಕೇರಿಯವರು ಗದುಗಿನವರು. ಕೈ. ಪಂಚಾಕ್ಷರಿ ಗವಾಯಿಗಳ ಪದ್ಧತಿಯ ಸಂಗೀತವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ. ಶಾಸ್ತ್ರೀಯ ಸಂಗೀತವಲ್ಲದೆ ಭಾವಗೀತೆಗಳನ್ನೂ ಸುಶ್ರಾವ್ಯವಾಗಿ ಹಾಡಬಲ್ಲರು.

GE 8491 ರಿಂದ 8493	ಮಹಾತ್ಮಾ ಬಸವೇಶ್ವರ ಭಾಗ ೧-೩
GE 8455 ರಿಂದ 8457	ಶರಣ ಬಸವ ೩ ಭಾಗಗಳು
GE 8342 ರಿಂದ 8344	ಅಕ್ಕಮಹಾದೇವಿ ೩ ಭಾಗಗಳು

ಶ್ರೀ. ಉಮರಜಿ

' ಶರಣ ಬಸವ ' ನಾಟಕದ ಧ್ವನಿಮುದ್ರಿಕೆಯನ್ನು ಕೇಳಿದವರು ಶ್ರೀ. ಉಮರಜಿಯವರ ಕೆಳಗಿನ ಧ್ವನಿಮುದ್ರಿಕೆಯನ್ನು ಕೇಳಿ ನಿಜವಾಗಿ ಆನಂದಪಡುವಿರಿ.

GE 8554	ಯಾರಿಗೆ ಯಾರಿಲ್ಲ ತನಗಿಲ್ಲದಾ ವಸ್ತು

ಶ್ರೀ. ಸೋನೂಬಾಯಿ ಹಾವೇರಿ

GE 8359	ಸಖಿಬಾರೆ ಪೋಗಿ ತಾರೆ ನಗಿಸವಾರಿ ಬಂದಿತು ಸ್ವಾರಿ

ಶ್ರೀ. ಸುಶೀಲಾ ಟೇಂಬೆ

GE 8092	ನೋಡೆ ಮಧು ವಸಂತವಿದು ಹಾ ನಲಿದು ಬಾರೆ ಮುರಲಿ
GE 8394	ಇದೇ ನಮ್ಮ ದೇವರ ಪೂಜೆ ಇದು ಸುದರ್ಶನ

ಕೋಲಂಬಿಯಾ ಗ್ರಾಫೋಫೋನ ಕಂ.

ಕಲಕತ್ತಾ ▲ ಮುಂಬಯಿ ▲ ಮದ್ರಾಸ ▲ ದಿಲ್ಲಿ ▲ ಲಾಹೋರ

ISSUED BY:—
COLUMBIA GRAPHOPHONE Co. Ltd.
CALCUTTA — BOMBAY — MADRAS — DELHI — LAHORE



Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar— 2328-50.

ಹೀರಕಮಹೋತ್ಸವವನ್ನು ಕಂಡ ಡಾ. ಪರ್ಡಿಕರರವರು.

ಜಯಂತಿ

JAYANTI

ಮೇ ೧೯೫೦

ವಾರ್ಷಿಕ ವರ್ಗಣಿ . . ೫—೦—೦

ಬಿಡಿಸಂಚಿಕೆ . . . ೦—೮—೦

ಸಂಚಿಕೆ ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ಸಂಪಾದಕರು— ಶ್ರೀ. ಬಿಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕ ಸಂಪಾದಕರು— ಶ್ರೀ. ಎಲ್.ಜಿ. ಬೇಂದ್ರೆ

ಪ್ರಕಾಶಕರು— ಶ್ರೀ ಎಮ್. ವಿ. ಮೆಳ್ಳಿಗಟ್ಟಿ

ಜಾಹಿರಾತಿನ ದರಗಳು

೧	ಪುಟ	ರೂ.	೪೦	ಒಂದು ಸಲ
½	,,	,,	೨೫	,,
¼	,,	,,	೧೫	,,
⅛	,,	,,	೮	,,

ಉಳಿದ ವಿವರಗಳಿಗಾಗಿ ಬರೆಯಿರಿ.

—೦—

Rates for Advertising in Jayanti

Full	Page	Rs.	40	Single Ins.
Half	,,	,,	25	,,
Quarter	,,	,,	15	,,
1/8	,,	,,	8	,,

Concession rates for long term Contracts.

For particulars write to

Advt: *Manager*, Jayanti; Dharwar

ಜಯಂತಿಗೆ—

ಎಲ್ಲ ಕಡೆಗೂ ಏಜಂಟರು ಬೇಕು.

ಸಂಪುಟ ೧೨ | ೧ನೆಯ ಮೇ ೧೯೫೦ | ಸಂಚಿಕೆ ೧೨

ಈ ಸಂಚಿಕೆಯಲ್ಲಿ:

ಮುರಲೀನಾದ (ಒಂದು ಹಾಡು)
'ಆನಂದಕಂದ' ೫೪೧

ಜಯಂತಿಯ ಕಷ್ಟ-ನಷ್ಟಗಳು (ಸಂಪಾದಕೀಯ)
ಸಂಪಾದಕರು ೫೪೨

ಕನ್ನಡ ಸೇನಾನಿ ಡಾ. ಹರಡೀಕರರು
'ವಿಹಂಗಮ' ೫೪೪

ಹಾಳುತೋಟ (ಒಂದು ನಗೆಯಾಟ)
ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ ... ೫೪೫

ಮಹಾತ್ಮ (ಕವನ)
ಶ್ರೀ ಗಂಗಾಧರ ಚಿತ್ತಾಲ ಎಂ ಎ ಮುಂಬಯಿ ೫೫೬

ನವಿಯ ತತ್ತ್ವಜ್ಞಾನ (ಕವನ)
ಶ್ರೀ. ಕೊಟ್ಟಲಗಿ ರಾಮಚಂದ್ರ, ಘಟಪ್ರಭಾ ೫೫೬

ಭಾರತ ಸರೋಜವೆ! (ಕವನ)
ಶ್ರೀ. ಎಸ್. ಕೆ. ಕುಲಕರ್ಣಿ ಎಂ. ಎ. ಬಿ. ಟಿ. ಧಾರವಾಡ ೫೫೬

ನಾಟಕದಲ್ಲಿ ವಾಸ್ತವತೆ (ವಿಮರ್ಶಾತ್ಮಕ ಭಾಷಣ)
ಶ್ರೀ ಕೋಟ ಶಿವರಾಮ ಕಾರಂತರು, ಪುತ್ತೂರು ೫೫೭

ನಾನು ಕಂಡ ನಾಡು (ಶಾಂತಿನಿಕೇತನ)
ಶ್ರೀ ಮಿರ್ಜಿ ಅಣ್ಣಾರಾಯರು, ಉಗಾರ ೫೬೨

ಆವಳ ಚಿತ್ರ (ಸಣ್ಣಕತೆ)
ಶ್ರೀ. ದೇವಳಿ ಕೃಷ್ಣರಾಯರು, ಬಿ. ಎ. ವಿಜಾಪುರ ೫೬೭

ಮುಲಪೆಯ ಪ್ರಾಶಸ್ತ್ಯ (ಪ್ರದೇಶ ಪರಿಚಯ)
ಶ್ರೀ. ಎಂ. ಗೋವಿಂದರಾವ್ ಎಂ.ಎ. ಮದರಾಸ್ ೫೭೧

ಜೀವನ ಶಿಕ್ಷಣ (ವೈ. ಪ್ರಬಂಧ)
ಶ್ರೀ. ಮಾನೇಶ್ವರ ನಾಯಕ ಬಿ. ಎಸ್ಸಿ. ಧಾರವಾಡ ೫೭೫

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ
ಶ್ರೀ. ಜಿ. ಎಸ್. ಮಹಕರ ಎಂ. ಎ., ಬಿ. ಟಿ. ಪುಣೆ.... ೫೭೮

ಬಿಳಿ ಬಿಲ್ಲ (ಕವನ)
ಶ್ರೀ. ಭುಜೇಂದ್ರ, ಮಹಿಷವಾಡಿಗಿ ೫೮೦

ಪುಸ್ತಕವಿಮರ್ಶೆ
ಶ್ರೀ. ಎನ್. ಎಸ್. ಗದಗಕರ ಮತ್ತು ಬಿ. ಸಿ. ಎಸ್

ಸಾದರಸ್ವೀಕಾರ

ವರ್ಷ ೧೨ ಸಂಚಿಕೆ ೧೨

ಸಂಕ್ರಾಂತಿ

ಮೇ ೧೯೫೦

ಮುರಲೀನಾದ

(ಒಂದು ಹಾಡು)

'ಆನಂದಕಂದ'

★

ಊದುತಿರುವ ಮುರಲಿ...ಶ್ರೀ.. ಯಾದವೇಂದ್ರನಿಂದು ;
ಕುಂಜವನದಿ ಬಂದು ನಿಂದು—ಊದುತಿರುವ ಮುರಲಿ!

ಹಿಮುತಿರಣ ನಭದಿ ಹೊಳೆಯೆ,
ಮುದುಪವನ ವನದಿ ಸುಳಿಯೆ,
ಸುಮಜಾತ ಸುರಭಿ ಸುರಿಯೆ
ರಮಣೀಯ ಭಾವ ಹರಿಯೆ—
ಊದುತಿರುವ ಮುರಲಿ! ॥ ೧ ॥

ಬೆಳುದಿಂಗಳಂದವೇನು...!
ಎಳನಗೆಯ ಸವಿಯ ಜೇನು!
ಕೊಳಗಳಲಿ ಕುವಮದಳುಲವು...
ಅರಳಿ ಬಾಯ್‌ಬೆರೆಯುತಿಹವು—
ಊದುತಿರುವ ಮುರಲಿ! ॥ ೨ ॥

ಮಾಧವನ ಮುರಲಿ ನಾದ
ಅಲಿಸುತ ನಲಿದು ರಾಧಾ...
ಮನನೀಡಿ ನಿಲಲು ಬೇಗ—
ಕೇಳಿಸಿತು ಪ್ರಣಯರಾಗ
ಊದುತಿರುವ ಮುರಲಿ! ॥ ೩ ॥

'ಬಾ ರಾಧೆ, ರಾಧೆ!' ಎಂದು
ಆ ರವವು ಕರೆಯುತಿಹುದು ;
ಮನೆ-ಮಾರುಗಳನೆ ತೊರೆದು
ನಡೆದಳು ಕೊಳಲುಲಿಯ ಹಿಡಿದು
ಊದುತಿರುವ ಮುರಲಿ! ॥ ೪ ॥

ನೋಡಿದಳು ರಾಧೆ ಬನವ—
ಕೂಡಿರುವ ಚೆಲುವು-ಧನವ,
ಬನವ ತರು-ಲತೆಗಳೆಲ್ಲಾ
ಬಿನದದಲಿವೆ ಕೇಳಿ ಕೊಳಲ—
ಊದುತಿರುವ ಮುರಲಿ! ॥ ೫ ॥

ಕೇಳುತಿದೆ ಮುನಲಿಹುಲಿಯು
ಕಾಣದಿದೆ ಪ್ರಿಯನ ನೆಲೆಯು ;
ಕಳವಳದಿ ಹುಡುಕುತಿಹಳು—
ಒಳಗೆ ಬಲು ನಿಡುಸುಯ್ತಿಹಳು...
ಊದುತಿರುವ ಮುರಲಿ! ॥ ೬ ॥

'ಎಲ್ಲಿರುವ ನನ್ನ ಶ್ಯಾಮಾ ?
ಎಲ್ಲಿಹನೊ ಪ್ರೇಮಧಾಮಾ ?'
ಬಾಯ್‌ಬಿಡುತಲಿಂತು ಮರುಗಿ—
ಸುಯ್ದು ಕುಳಿತಿರಲು ಸೊರಗಿ...
ಊದುತಿರುವೆ ಮುರಲಿ! ॥ ೭ ॥

ಶ್ಯಾಮನೆಲ್ಲಿಂದೊ ಬಂದ್ಹ—ಓ-
ರಾಮೆಯೆದುರಿನಲಿ ನಿಂದ ;
ಹಮ್ಮಯಿಸಿ ತನ್ನ ಮರೆತು
ಒಂದಾದಳು ಪ್ರಿಯನ ಬೆರೆತು...
ಊದುತಿರುವ ಮುರಲಿ! ॥ ೮ ॥

ಜಯಂತಿಯ ಕಷ್ಟ-ನಷ್ಟಗಳು

ಇದೀಗ ಜಯಂತಿಯ ಹನ್ನೆರಡನೆಯ ವರ್ಷದ ಕೊನೆಯ ಸಂಚಿಕೆ. ಜಯಂತಿಯ ಓದುಗರ ಕೈಗೆ ಇದನ್ನು ಸಲ್ಲಿಸಲು ತುಂಬ ಆನಂದವೆನಿಸುತ್ತದೆ.

ಹನ್ನೆರಡು ವರ್ಷದ ಕಾಲಾವಧಿಯೇನು ಕಡಿಮೆಯಲ್ಲ. ಆದರಲ್ಲಿಯೂ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿ ಬದುಕಬೇಕಾದವರಿಗೆ, ಇದೊಂದು ದೀರ್ಘವಾದ ಕಾಲಖಂಡವೆನಿಸದೆ ಹೋಗದು. ಈ ಅವಧಿಯಲ್ಲಿ ನಮ್ಮ ನಾಡಿನಲ್ಲಿ ಎಷ್ಟೋ ಪತ್ರಿಕೆಗಳು ತಲೆಯೆತ್ತಿದುವು; ಏನೇನೋ ಕಾರಣಗಳೊದಗಿ ಕಣ್ಮರೆಯಾದುವು. ಜಯಂತಿ ಎದುರಿಸುತ್ತ ಬಂದಿರುವ ಪ್ರತಿಕೂಲ ಪರಿಸ್ಥಿತಿಗಳನ್ನು ಲಕ್ಷ್ಯಕ್ಕೆ ತಂದು ನೋಡಿದರೆ, ಆದು ಹನ್ನೆರಡು ವರ್ಷ ಕಾಲ ಬದುಕಿದುದು ಒಂದು ಮಹತ್ತ್ವದ ಸಂಗತಿಯೆಂದೇ ಎನಿಸುವಂತಿದೆ.

* * * *

ಜಯಂತಿ ಹುಟ್ಟಿದ ಮರುವರ್ಷವೇ ಚಾಗತಿಕ ಮಹಾಯುದ್ಧ ಪ್ರಾರಂಭವಾಯಿತು. ಮುದ್ರಣಸಲಕರಣೆಗಳ ಬೆಲೆ ಒಂದಕ್ಕೆ ಹತ್ತು-ಹದಿನೈದರಷ್ಟು ಬೆಳೆಯಿತು. ಸರಕಾರದ ಕಾಗದ ನಿಯಂತ್ರಣ ಕಾನೂನಿನಿಂದ ಸೊರಗಿ ಸಣ್ಣಗಾದ ಜಯಂತಿ, ಜನರ ಮನಸ್ಸಿಗೆ ಹಿಡಿಸದೆ ಹೋಯಿತು. ಕಾಗದ ನಿಯಂತ್ರಣ ಕಾಲದಲ್ಲಿ—ದೊರೆತ ಹೆಚ್ಚಿನ ಕಾಗದವನ್ನು ಕಳ್ಳನೇಟಿಯಲ್ಲಿ ಮಾರಾಟಮಾಡಿಕೊಂಡು—ಹಣ ಸಂಪಾದನೆ ಮಾಡಿದ ಪತ್ರಿಕಾಸಂಪಾದಕರೂ ಆ ಕಾಲದಲ್ಲಿ ಆಗಿ ಹೋದರು. ಆದರೆ ಧಾರವಾಡದ ವಿಚಿತ್ರ ವಾತಾವರಣದ ಮೂಲಕ ಜಯಂತಿಗೆ ಆ ಲಾಭದ ಸಂದರ್ಭ ದೊರೆಯಲಿಲ್ಲವಿಷ್ಟೇ ಅಲ್ಲ; ಯಾವಾಗಲೂ ಕಾಗದವನ್ನು ಕಳ್ಳನೇಟಿಯಲ್ಲಿಯ ಹೆಚ್ಚಿನ ಬೆಲೆಕೊಟ್ಟು ಕೊಳ್ಳಬೇಕಾಗುತ್ತಿತ್ತು. ಕೆಲವೊಂದು ತಿಂಗಳಂತೂ ಕಾಗದದ ಅಭಾವದ ಮೂಲಕ—ಕೇವಲ ಚಂದಾದಾರರ ಸಂಖ್ಯೆಯಷ್ಟೇ ಸಂಚಿಕೆಗಳನ್ನು ತೆಗೆದು, ಏಜನ್ಸಿಯ ವ್ಯವಹಾರವನ್ನು ನಿಲ್ಲಿಸಬೇಕಾಗಿ ಬಂದಿತು. ಹೇಗಾದರೂ ಮಾಡಿ ಜಯಂತಿಯನ್ನು ಬದುಕಿಸಿ, ಆ ದುಷ್ಕಾಲದಿಂದ ದಾಟಿಸಬೇಕೆಂದು ಜಯಂತಿಯ ಸಂಚಾಲಕ ಸಮಿತಿ ತುಂಬ ಪ್ರಯತ್ನಪಟ್ಟಿತು. ಕಾರ್ಯಕರ್ತರು ಅರೆಹೊಟ್ಟೆ-ಬರಿಹೊಟ್ಟೆಗಳಂದಲೆ ಕೆಲಸಮಾಡಿದರು. ಈ ಎಲ್ಲರ ಹಂಬಲ-ಹವಣಿಕೆಗಳಿಂದ ಜಯಂತಿ ಬದುಕಿ ಉಳಿಯಿತಾದರೂ ಸಂಚಾಲಕರ ತಲೆಯ ಮೇಲೆ ಸಾಲದ ಹೊರೆ ಕುಳಿತುಬಿಟ್ಟಿದೆ.

* * * *

ಹನ್ನೆರಡು ವರ್ಷಗಳ ಅವಧಿಯಲ್ಲಿ ಜಯಂತಿ ತನ್ನ ಸಮಯನಿಷ್ಠೆಯ ವ್ರತದಿಂದ ಚ್ಯುತವಾಗಿಲ್ಲ. ಎಂದೂ ಸಂಚಿಕೆ ಕಾಲ ಮೀರಿ ಹೊರಟಿಲ್ಲ. ಸಂಯುಕ್ತಾಂಕವನ್ನಾಗಿಸಿ ಹೊರಡಿಸುವ ಸಂದರ್ಭ ತಂದುಕೊಂಡಿಲ್ಲ. ಜಯಂತಿಯ ಇದುವರೆಗಿನ ಓದುಗರಿಗೆ ಈ ಮಾತನ್ನು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ.

* * * *

ಕಳೆದ ಕಾಲ ಕಷ್ಟದಲ್ಲಿ ಕಳೆಯಿತು; ಈಗ ಬಾಳುತ್ತಿರುವ ಕಾಲವಾದರೂ ಒಳ್ಳೆಯದಿದೆಯೆಂದು ಸಮಾಧಾನ ಪಡುವಂತಿದೆಯೇ? ಈಗ ಕಾಗದದ ನಿಯಂತ್ರಣ ಹೋಗಿದೆಯಾದರೂ ಬೆಲೆ ಮೊದಲಿನ ಕಾಲಕ್ಕಿಂತ ೪-೫ ಮಡಿ ಹೆಚ್ಚಿದೆ. ಹಿಂದೆ ೭೨ ಪುಟಗಳ ಸಂಚಿಕೆಗೆ ಕೊಡುತ್ತಿದ್ದ ಮುದ್ರಣದ ಬೆಲೆಗಿಂತ ಇಂದಿನ ೪೮ ಪುಟಗಳ ಸಂಚಿಕೆಗಾಗಿ ಮುಮ್ಮಡಿ ಬೆಲೆಯನ್ನು ಹೆಚ್ಚಿಗೆ ತೆರಬೇಕಾಗಿದೆ. ಇದೇ ಪ್ರಮಾಣದಲ್ಲಿ ಮಿಕ್ಕ ವೆಚ್ಚದ ಬಾಬುಗಳೂ ಬೆಳೆದಿವೆ. ಆದರೆ ಒಂದು ವಿಷಾದದ ಸಂಗತಿ: ವೆಚ್ಚದ ಪ್ರಮಾಣದಲ್ಲಿ ಆದಾಯವು ಬೆಳೆಯಲೊಲ್ಲದಾಗಿದೆ. ಅದಕ್ಕಾಗಿ ನಮ್ಮ ಸಂಚಾಲಕ ಸಮಿತಿಯು, ಪ್ರತಿವರ್ಷವೂ ೭೦೦-೮೦೦ ರಷ್ಟು ನಷ್ಟವನ್ನು ವಹಿಸಬೇಕಾಗುತ್ತಲಿದೆ. ಇದರಿಂದ, ಈ ೧೨ ವರ್ಷದ ಜಯಂತಿಯ ಲೆಕ್ಕಾಚಾರದಲ್ಲಿ, ಸುಮಾರು ೫೦೦೦ ರೂಪಾಯಿ ನಷ್ಟವಾದುದು ಗೊತ್ತಾಗುತ್ತದೆ. ಈಗ ಆಗಿರುವ ನಷ್ಟವೆಂದರೆ ಅಷ್ಟು ಜಯಂತಿಯ ತಲೆಯ ಮೇಲೆ ಸಾಲ. ಜಯಂತಿಯಂತಹ ಪತ್ರಿಕೆಯೊಂದು ನಾಡಿಗೆ ಬೇಕಾಗಿದೆಯೆಂದು ಕನ್ನಡಿಗರಿಗೆ ಎನಿಸುತ್ತಲಿದ್ದರೆ, ಅದು ಋಣಮುಕ್ತವಾಗುವಂತೆ ಏನಾದರೂ ಒಂದು ಯೋಜನೆ ಮಾಡಬೇಕಾದುದು ಇಂದು ಅತ್ಯಂತ ಅವಶ್ಯವಾದ ಮಾತಾಗಿದೆ.

* * *

'ಒಳ್ಳೆಯ ಪತ್ರಿಕೆ' ಎಂದು ಜಯಂತಿ ಹೊಗಳಿಸಿಕೊಳ್ಳುತ್ತಲಿದ್ದರೂ, 'ಚಂದಾದಾರರ ಸಂಖ್ಯೆಯೆಷ್ಟು?' ಎಂದು ಯಾರಾದರೂ ಕೇಳಿದಾಗ, ನಮಗೆ ನಾಚಿಕೆಯಿಂದ ತಲೆತಗ್ಗಿಸುವಂತಹ ಪರಿಸ್ಥಿತಿಯಿದೆ. ಏಜನ್ಸಿಯ ವ್ಯವಹಾರದಿಂದಂತೂ ನಮಗೆ ಯಾವಾಗಲೂ ಲಾಭವಿಲ್ಲವಿಷ್ಟೇ ಅಲ್ಲ; ಬಹಳ ಜನ ಏಜಂಟರ ಪ್ರಾಮಾಣಿಕತೆಯ ಅಭಾವದ ಮೂಲಕ, ಪ್ರತಿ ವರುಷವೂ ನೂರಾರು ರೂಪಾಯಿಗಳ ನಷ್ಟವನ್ನೇ ಹೊರಬೇಕಾಗುವುದು ಈ ವ್ಯವಹಾರದಲ್ಲಿ.

* * * *

ನಮ್ಮ ಜನರಲ್ಲಿ ವಾಚನಾಭಿರುಚಿ ಬೆಳೆದಿದೆಯೆಂಬುದರ ಅನುಭವ ನಮಗಿದೆ. ಆದರೆ ಹಣಕೊಟ್ಟು ಓದುವವರ ಸಂಖ್ಯೆ ತೀರ ಕಡಿಮೆ. ಸಾರ್ವಜನಿಕ ವಾಚನಾಲಕ್ಕೆ ಬರುತ್ತಿರುವ ಒಂದೆ

ಒಂದು ಪ್ರತಿಯನ್ನು ಓದಲು ಆತಿಸಿ ದಾರಿಕಾಯುತ್ತ ಕುಳಿತುಕೊಳ್ಳುವ ರಸಿಕವಾಚಕರು ನೂರಾರು ಜನರು. ಹೀಗೆ ಪುಕ್ಕಟೆಯಾಗಿ ಓದುವ ಜನರಿಂದಲೇ ಜಯಂತಿಯ ಸುಧಾರಣೆಗಳ ಏಗೆಗೆ—ಪರಭಾಷೆಯ ಪತ್ರಿಕೆಗಳ ಸಾಕ್ಷಿ ಕೊಟ್ಟು—ಸೂಚನೆಗಳೂ ಸಲವಾರು ಬರುತ್ತಿರುವುವು. ಈ ನಮ್ಮ ಹಿತಚಿಂತಕರು ಪರಭಾಷೆಯ ಪತ್ರಿಕೆಗಳ ಕಡೆಗೆ ಲಕ್ಷ್ಯಕೊಡುತ್ತಿರುವಂತೆ, ಅವುಗಳನ್ನು ಕೊಂಡು ಓದುವ ವಾಚಕರ ಸಂಖ್ಯೆಯ ಕಡೆಗೆ ಲಕ್ಷ್ಯಕೊಡುವುದೂ ಅವಶ್ಯವಿದೆಯೆಂಬುದನ್ನು ಮರೆಯಲಾಗದು. ಅವರು ಸಾಕ್ಷಿ ಕೊಡುತ್ತಿರುವ ಪತ್ರಿಕೆಗಳ ಚಂದಾದಾರರ ಸಂಖ್ಯೆಯ ೧ ದಷ್ಟು ಚಂದಾದಾರರು ನಮಗೆ ದೊರೆತರೂ, ಗಾತ್ರ-ಗುಣಗಳಲ್ಲಿ ಆ ಪರಭಾಷೆಯ ಪತ್ರಿಕೆಗಳಿಗೆ ಕಡಿಮೆಯೆನಿಸದಂತಹ ಸಂಚಿಕೆಗಳನ್ನು ಜಯಂತಿ ಖಂಡಿತವಾಗಿ ಪೂರಯಿಸಲು ಸಿದ್ಧವಿದೆ.

* * * *

ಸರ್ವಾಂಗಸುಂದರವಾದ ಪತ್ರಿಕೆಗಳು ನಾಡಿನಲ್ಲಿ ಹುಟ್ಟಿ ಬೆಳೆಯಬೇಕಾದರೆ ಬಂಡವಾಳದ ಬಲವು ಬೇಕು— ಇಲ್ಲವಾದರೆ ಬಹುಸಂಖ್ಯಾಕರ ಆರ್ಥಿಕನೆರವು ಬೇಕು. ಜಯಂತಿಗೆ ಮೊದಲಿನಿಂದಲೂ ಸ್ವಂತದ ಬಂಡವಾಳದ ಬಲವಿಲ್ಲ. ಆದುದರಿಂದ ಅದು ಓದುಗರ ನೆರವಿನಿಂದಲೇ ಬೆಳೆಯಬೇಕಾಗಿದೆ. ಆದರೆ ಹನ್ನೆರಡು ವರುಷಗಳಾದರೂ ನಮ್ಮ ಜನರಿಂದ—ಪ್ರೀತಿಯ ಮೆಚ್ಚಿಕೆಯ ಮಾತುಗಳಲ್ಲದೆ—ಆರ್ಥಿಕನೆರವು ಸಾಕಷ್ಟು ಸಿಕ್ಕುತ್ತಿಲ್ಲ. ಜಯಂತಿಯನ್ನು ಎಂತಹ ಪತ್ರಿಕೆಯನ್ನು ಮಾಡಬೇಕೆಂಬುದರ ಕಲ್ಪನೆ ಅದರ ಸಂಚಾಲಕರಿಗೆ ಸಾಕಷ್ಟು ಇದೆ; ಆದರೆ ಅವರ ಕಲ್ಪನೆ ಬರಿಗೈಯಿಂದ ಮೊಳಹಾಕುವಂತಹದಾಗಿದೆ. ಅವರ ಕಲ್ಪನೆಗೆ ಮೂರ್ತಸ್ವರೂಪ ಬರಬೇಕಾದರೆ, ಕನ್ನಡಿಗರ ದಾತೃತ್ವ ಜಾಗೃತಗೊಂಡು ನೆರವನ್ನು ಕೊಡಬೇಕು.

* * * *

'ನೆರವು' 'ನೆರವು' ಎಂದರೆ ಜಯಂತಿ ಎಂದೂ ಜನರಿಂದ ಹೆಚ್ಚಿನ ಹಣವನ್ನು ಬಯಸುತ್ತಿಲ್ಲ. ಕೇವಲ ಐದು ರೂಪಾಯಿಗಳನ್ನು ಕೊಟ್ಟು ೧೨ ಒಳ್ಳೆಯ ಸಂಚಿಕೆಗಳನ್ನು ಪಡೆವ ಚಂದಾದಾರರಾದರೆ ಸಾಕು. ಸುಮಾರು ೨ ಕೋಟಿಯಷ್ಟು ಕನ್ನಡ ಮಾತನಾಡುವವರಿರುವ ಕರ್ನಾಟಕದಲ್ಲಿ, ನಾವು ಬರೀ ೫೦೦೦ ಚಂದಾದಾರರನ್ನು ಬಯಸುವುದು ಮೇರೆಮೀರಿದ ಆತೆಯೆನಿಸದು. ಕನಿಷ್ಟ ಇಷ್ಟು ಜನರಾದರೂ ಚಂದಾದಾರರಾಗಿ ದೊರೆತರೂ ಸಂಚಾಲಕರಿಗೆ ಹೆಚ್ಚಿಗೆ ಕೆಲಸಮಾಡಿ ತೋರಿಸಲು ಉತ್ಸಾಹವೊದಗಿದಂತಾಗುತ್ತದೆ.

ನಾಡಿಗೆ ಅತ್ಯವಶ್ಯವಾಗಿದ್ದ ಒಳ್ಳೆಯ ಕೆಲಸವನ್ನು ಮಾಡಲು ಹೊರಟವರ ಯೋಗ-ಕ್ಷೇಮದ ಹೊಣೆಯನ್ನು ನಾಡಿಗರೇ ಹೊರಬೇಕಲ್ಲವೆ? ಸಾಮಾನ್ಯವಾದ ಆಹಾರಪದಾರ್ಥವಾದ ಹಾಲು-ತುಪ್ಪ ಬೇಕಾದರೂ ಹಸು ಎಮ್ಮೆಗಳನ್ನು ಸಾಕಬೇಕಾಗುವುದು; ಅವುಗಳ ಹೊಟ್ಟೆ-ನೆತ್ತಿಗಳನ್ನು ಚೆನ್ನಾಗಿ ನೋಡಿಕೊಳ್ಳಬೇಕಾಗುವುದು. ಅವುಗಳ ಆರೋಗ್ಯಕ್ಕಾಗಿಯೂ ಸುಖಜೀವನಕ್ಕಾಗಿಯೂ ಹಣವೆಚ್ಚಮಾಡಬೇಕಾಗುವುದು. ಹೀಗಿರುವಾಗ ನಾಡಿನ ಜನರ ಜೀವದ ಜೀವಾಳವಾದ ಸಾಂಸ್ಕೃತಿಕ ಆಹಾರವನ್ನು ಒದಗಿಸಿಕೊಳ್ಳಲಿಕ್ಕೆ ಅವರು ಹಣವನ್ನು ವೆಚ್ಚಮಾಡಬೇಕಾಗಿಲ್ಲವೇನು? ಅಂತಹ ಸಾಂಸ್ಕೃತಿಕ ಹಾಲು-ಬೆಣ್ಣೆಗಳನ್ನು ಒದಗಿಸಿಕೊಡುವ ಪತ್ರಿಕೆಗಳಿಗೆ ಆರ್ಥಿಕನೆರವನ್ನು ಕೊಡಬೇಕಾಗಿಲ್ಲವೇನು?

* * * *

ಜಯಂತಿಯ ಕಾರ್ಯಕರ್ತರು ನಾಡಿನ ಪ್ರೇಮದಿಂದ ಗಾಳಿತಿಂದು ನೀರು ಕುಡಿದು ಸಂಸ್ಕೃತಿಯ ಪ್ರಚಾರಕ್ಕಾಗಿ ದುಡಿಯಬಹುದು. ಜಯಂತಿಗೆ ಮನುಷ್ಯರ ಜೀವಿತ ಬೆಲೆಯಿಲ್ಲದೆ ಸಿಕ್ಕುತ್ತಲಿದ್ದರೂ, ಭೌತಿಕ ಉಪಕರಣಗಳು ಬೆಲೆ ಕೊಟ್ಟಾಗಲೇ ದೊರೆಯುತ್ತವೆ. ಇದಕ್ಕೆ ಸಾಲುವಷ್ಟಾದರೂ ಕನ್ನಡ ವಾಚಕರಿಂದ ಆರ್ಥಿಕನೆರವು ದೊರೆತರೆ, ಜಯಂತಿಗೆ ಶುಭಭವಿಷ್ಯವಿದೆಯೆಂದು ಬಾಯಿಬಿಟ್ಟು ಹೇಳಬೇಕಾದ ಸಂದರ್ಭವಿಂದು ಬಂದಿದೆ.

ಜಯಂತಿಯ ಈ ಮೊರೆಗೆ ಕನ್ನಡಿಗರಿಂದ ಒಳ್ಳೆಯ ಉತ್ತರವೇನಾದರೂ ದೊರೆಯುವುದೆ?

—ಸಂಪಾದಕರು

ಸಪ್ತರಂಗ

(ವ್ಯಕ್ತಿಪರಿಚಯಗಳ ಸಂಕಲನ)

ಲೇಖಕರು: ಎನ್. ಎಸ್. ಗದಗಕರ ಬಿ. ಎ.

ಅನಿರುದ್ಧರು ಮುನ್ನುಡಿ ಬರೆದಿದ್ದಾರೆ.

ಬೆಲೆ: ೦-೧೫-೦.

ಮುಖ್ಯ ಮಾರಾಟಗಾರರು:

ಮನೋಹರ ಗ್ರಂಥಭಾಂಡಾರ, ಧಾರವಾಡ.

ಕನ್ನಡ ಸೇನಾನಿ ಡಾ. ಹರಡೀಕರರಿಗೆ ಅನ್ನದೊಸಗೆ!

ಜಯಂತಿಯ ಒಲವಿನ ಮುಡಿಪು

★

ಡಾ. ಹರಡೀಕರರೆಂದರೆ ಕನ್ನಡನಾಡಿನ ಕಾರ್ಯಮೂರ್ತಿ. ಮಾಡುವ ಕಾರ್ಯ ತಮ್ಮೊಬ್ಬರ ಕಲ್ಯಾಣಕ್ಕಾಗಿ ಅಲ್ಲ; ಎಲ್ಲರ ಕಲ್ಯಾಣಕ್ಕಾಗಿ. ತಿಳಿವು ಮೂಡು-ಮೂಡುತಿರುವಾಗಲೇ ಇವರ ಕಣ್ಣಿಗೆ ಕಂಡುದು ಪರದಾಸ್ಯದಲ್ಲಿ ಸಿಕ್ಕಿ ದೈನ್ಯಳಾಗಿರುವ ಭಾರತ-ಮಾತೆಯ ಮೂರ್ತಿ. ಈ ಮಾತೆಯ ಸ್ವಾತಂತ್ರ್ಯಕ್ಕಾಗಿ ಹೆಣಗುವ ಸೈನಿಕರನ್ನು ಲೋಕಮಾನ್ಯ ಬಾಲಗಂಗಾಧರ ತಿಲಕರ ಕೂಗು ಕರೆಯುತ್ತಿದ್ದಿತು. ಎಳೆಯರಾಗಿರುವಾಗಲೆ ಹರಡೀಕರ ನಾರಾಯಣರಾಯರು ಆ ಕೂಗಿಗೆ ಓ ಕೊಟ್ಟು, ನಾಡಿನ ಸೈನಿಕರಾದರು. ಅಂದಿನಿಂದಲೂ ಇವರು ವೈಯಕ್ತಿಕ ಹಿತವನ್ನು ಮರೆತುಬಿಟ್ಟರು. ಆಡಿದರೆ ನಾಡಸೇವೆಯ ಆಟ; ಮಾಡಿದರೆ ನಾಡಿಗರೆಲ್ಲರ ಕಲ್ಯಾಣದ ಕಾರ್ಯ.

ಸೇವೆಮಾಡಬೇಕಾದರೂ ಒಂದು ವಿಶಿಷ್ಟವಾದ ವ್ಯಕ್ತಿತ್ವದ ಅವಶ್ಯಕತೆಯಿದೆಯೆಂಬುದರ ಅರಿವು ಮೂಡಿದಾಗ ಇವರು ಅದನ್ನು ಗಳಿಸಲು ಹವಣಿಸಿದರು. ಯಾವುದಕ್ಕೂ ಹಣದ ಬೆಂಬಲ ಬೇಕು. ಶ್ರೀ. ಹರಡೀಕರರಿಗೆ ಬಾಲ್ಯದಿಂದಲೂ ಅದರ ಅಡಚಣೆ. ಆದರೆ ಸಾಹಸಿಯಾದ ಜೀವಕ್ಕೆ ಕೊರತೆಯೇತರದು ? ಪ್ರಯತ್ನಪಟ್ಟು— ವೈದ್ಯಕವನ್ನು ಅಭ್ಯಾಸಿಸಲಿಕ್ಕೆಂದು— ಅಮೇರಿಕೆಗೆ ಹೋದರು. ಅಲ್ಲಿ ಬಡವಿದ್ಯಾರ್ಥಿಯಾಗಿ ಬಾಳಿ, ಶರೀರಶ್ರಮದಿಂದ ಹೊಟ್ಟೆ ಹೊರೆದುಕೊಂಡು, ಕೈಕೊಂಡ ಅಭ್ಯಾಸವನ್ನು ಮುಂದುವರಿಸಿದರು. ಇನ್ನೇನು, ಪರೀಕ್ಷೆ ಕೊಟ್ಟು ಪದವಿ ಪಡೆಯುವ ಸಂದರ್ಭ ಸಮೀಪಿಸಿದ್ದಿತು; ಆದರೆ ಹರಡೀಕರರ ಕರ್ತವ್ಯಬುದ್ಧಿ ಪದವಿಯ ಮೋಹವನ್ನು ಬಿಟ್ಟು, ದೇ. ಭ. ಲಾಲಾ ಲಜಪತರಾಯರ ಪ್ರಿಯ ಶಿಷ್ಯತ್ವವನ್ನು ವಹಿಸಿ, ಅಮೇರಿಕೆಯಲ್ಲಿ ಪರತಂತ್ರ ಭಾರತ-ವಿಷಯಕವಾಗಿ ಪ್ರಚಾರಕಾರ್ಯಮಾಡುತ್ತ ತಿರುಗಿದರು. ಇವರ ಈ ಕಾರ್ಯದ ಪರಿಣಾಮವಾದುದು ಅಷ್ಟು-ಇಷ್ಟೆಂದಲ್ಲ. ಅದು-ವರೆಗೆ, ಬ್ರಿಟಿಷರ ಏಕಮುಖ ಪ್ರಚಾರದ ಮೂಲಕ, ಭಾರತೀಯರ ವಿಷಯದಲ್ಲಿ ಅಮೇರಿಕೆಯಲ್ಲಿ ಪುರಭಿಪ್ರಾಯಗಳೇ ಹರಡಿ-ಕೊಂಡಿದ್ದುವು. ಲಾಲಾಜಿಯವರೊಂದಿಗಿನ ಶ್ರೀ. ಹರಡೀಕರರ ಪ್ರಚಾರಕಾರ್ಯ, ಅಮೇರಿಕೆಯಲ್ಲಿ ಇನ್ನೆಂದು ಮುಖದ ಅರಿವನ್ನು ಮಾಡಿಕೊಟ್ಟಿತು.

ಭಾರತವು ಬ್ರಿಟಿಷರೊಂದಿಗೆ ಅ ಸ ಹ ಕಾ ರ ಸಮರವನ್ನು ಹೂಡಿತು. ಸಮರಭೇರಿಯನ್ನು ಕೇಳಿ ಡಾ. ಹರಡೀಕರರು ಭಾರತಕ್ಕೆ ಮರಳಿದರು. ನಡೆದ ಯುದ್ಧದಲ್ಲಿ ಸಂಪೂರ್ಣ ಭಾಗ ವಹಿಸುವುದಾಗಿ ನಿರ್ಣಯಿಸಿದರು. ತಮ್ಮ ಹುಟ್ಟುನಾಡಾದ ಕರ್ನಾಟಕವನ್ನೇ ಕಾರ್ಯಕ್ಷೇತ್ರವನ್ನಾಗಿ ಆರಂಭಿಸಿ, ಅಜ್ಞಾತವಾದ ಕರ್ನಾಟಕವನ್ನು ಸಮಗ್ರಭಾರತಕ್ಕೆ ಪರಿಚಯಮಾಡಿ ಕೊಟ್ಟರು. ಇವರು ಸ್ಥಾಪಿಸಿ ನಡೆಯಿಸಿದ ಹಿಂದುಸ್ತಾನ ಸೇವಾದಲದ ಸುಸಂಘಟಿತ ಕಾರ್ಯದ ನೆರವು ಭಾರತವು ಹೂಡಿದ ಅಸಹಕಾರದ ಯುದ್ಧದಲ್ಲಿ ಸಂಪೂರ್ಣವಾಗಿ ಸಿಕ್ಕಿತು. ದೇಶದ ತರುಣರಿಗೆ ಶಿಸ್ತು-ಸಂಘಟನೆಗಳ ಸುಪರಿಣಾಮದ ಅನುಭವ ಕಂಡು ಬಂತು. ಹಿಂ. ಸೇ. ದಲದ ಮೂಲಕ ಕನ್ನಡದ ತರುಣ ಸೈನಿಕರು ಭಾರತದಲ್ಲೆಲ್ಲ ಕನ್ನಡನಾಡಿನ ಕೀರ್ತಿಯನ್ನು ಹರಡಿದರು.

ಉಗ್ರವಾದ ರಾಜಕೀಯ ಪರಿಸ್ಥಿತಿಯಲ್ಲಿ ಸೇವಾದಲದ ಕಾರ್ಯ-ಸ್ಥಗಿತವಾದರೂ ಡಾ. ಹರಡೀಕರರ ಸೇವಾಕಾರ್ಯ ಸ್ಥಗಿತವಾಗ-ಲಿಲ್ಲ. ಸರಕಾರದವರು ಒತ್ತಾಯದಿಂದ ಕಳುಹಿದಾಗ ಸೆರೆಮನೆ ಹೊರಗೆ ಬಿಟ್ಟಾಗ ಮತ್ತೆ ರಾಜಕೀಯ— ಸಾಮಾಜಿಕ ಚಟುವಟಿಕೆ. ಹೀಗೆಯೆ ಇದುವರೆಗಿನ ದಿನಗಳೆಲ್ಲ ಕಳೆದುವು. ಈಗ ಅನೇ ಜೀವನದ ಆದರ್ಶವಾದ ಭಾರತದ ಸ್ವಾತಂತ್ರ್ಯವು ಸಿದ್ಧಿಸಿತು ಈ ಸಂತೋಷದ ಕಾಲದಲ್ಲಿ ಅವರ ಅರುವತ್ತು ವರ್ಷದ ರನ್ನ ಮಹೋತ್ಸವವನ್ನು ನಾಡಿಗರು ಕೈಕೊಂಡುದು ಸಂತೋಷದ ಸಂಗತಿ. ಡಾ. ಹರಡೀಕರರ ಕಾರ್ಯಶಕ್ತಿ, ಚಟುವಟಿಕೆಯ ವೃತ್ತಿಗಳು ಅವರಿಗಾದ ವಯಸ್ಸನ್ನು ಮರೆಮಾಡುವಂತಹವು ಅವರ ಸತತೋದ್ಯಮವನ್ನು ನೋಡಿದರೆ ಯಾವ ತರುಣನೂ ನಾಚಿಕೆಯಿಂದ ತಲೆಬಾಗಿಸಬೇಕಾಗುವಂತಹದು. ಡಾ. ಹರಡೀಕರರ ಆರೋಗ್ಯ ಅಖಂಡವಾಗಿರಲಿ. ಅವರ ಉತ್ಸಾಹ ಹರಿ-ಹಿಂಗದಿರಲಿ. ಕನ್ನಡಿಗರಿಗೆ ಅವರ ಕಾರ್ಯಶಕ್ತಿ ಯಾವಾಗಲೂ ಆದರ್ಶವಾಗಿರಲಿ!

ಹಾಳುತೋಟ

(ಒಂದು ನಗೆಯಾಟ)*

ಶ್ರೀ. ಬೇಂದ್ರೆ ಲಕ್ಷ್ಮಣರಾಯರು, ಧಾರವಾಡ

★

[ಕೂಡುವ ಮನೆ. ಕಿಟಕಿಯೊಳಗಿಂದ ಹೊರಗಿನ ತೋಟ ಕಾಣುತ್ತಿದೆ. ಎರಡು ಬದಿಗೂ ಎರಡು ಮೇಜುಗಳು. ಒಂದರ ಮೇಲೆ ಲೇಖನ ಸಾಹಿತ್ಯ, ಕರೆಗಂಟೆ, ಇತ್ಯಾದಿ./ ಇನ್ನೊಂದರ ಮೇಲೆ ಹೂವಿನ ಪಾತ್ರೆ. ಒಂದೆರಡು ಕುರ್ಚಿಗಳು ಹತ್ತಿರ ಇಟ್ಟಿವೆ. ಶಚಿ ಪುಸ್ತಕವನ್ನೋದುತ್ತ ಒಂದರ ಮೇಲೆ ಕುಳಿತಿದ್ದಾಳೆ.]

★

ಶಚಿ :— ಈ ಪುಸ್ತಕ ಓದೋದಾದರೂ ಎಷ್ಟು ಸಲ? ಥು, ಬ್ಯಾಸರು ಬಂತು. (ಪುಸ್ತಕವನ್ನು ಮೇಜಿನ ಮೇಲೆ ಅಪ್ಪಳಿಸಿ) ಅಪ್ಪಗ ಇನ್ನೊಂದು ಪುಸ್ತಕಾ ಸಹಿತ ತರಲಿಕ್ಕಾಗೋದಿಲ್ಲ! (ಎದ್ದು ಹೋಗಿ ಇನ್ನೊಂದನ್ನು ಕುರ್ಚಿಯ ಮೇಲೆ ಕುಳಿತು, ಹೂವಿನ ಪಾತ್ರೆಯಲ್ಲಿಯ ಹೂವಿಗೆ ಕೈಹಚ್ಚಿ) ನಾಲ್ಕು ದಿವಸದ ಹಿಂದಿನ ಹೂ ಇವು! ಬಾಡಿ-ಹೋದರೂ ತಗಿಯುವವರಿಲ್ಲ! ಈ ಹರ್ಯಾ ಮಾಡೋದಾದರೂ ಏನು? (ಕರೆಗಂಟೆ ಕಿರ್ರೆನಿಸುತ್ತಾಳೆ. ಹರ್ಯಾ ಕೈಯಲ್ಲಿ ಒಂದು ಪತ್ರ ಹಿಡಿದುಕೊಂಡು ಬರುತ್ತಾನೆ.) ಹರ್ಯಾ, ದಿನಾ ತಾಜಾ ಹೂ ತಂದಿಡ್ತಿ ಹೋಗೂ ಅಂತ ಎಷ್ಟು ಸಾರೆ ನಿನಗ ಹೇಳಿದ್ದೇನು! ನೀ ಬರ್‌ಬರ್ತಿ ಬಹಳ ನಾಚಿಗ್ಗೇಡಿ ಆಗೀದಿ! ಹೋಗು, ತಾಜಾ ಹೂ ತೊಗೊಂಡು ಬಾ!

ಹರ್ಯಾ :— ಹೌದ್ರಿ, ಅಕ್ಕಾವರ, ರಾವಸಾಬರು ಇಲ್ಲೇನ್ರಿ ಮನ್ಯಾಗ?

ಶಚಿ :— ಇಲ್ಲ. (ಪತ್ರವನ್ನು ಕಂಡು ಆತುರದಿಂದೆದ್ದು) ಹರ್ಯಾ, ಕೈಯಾಗ ಪತ್ರ ಕಾಣಸ್ತತಿದಲ್ಲೋ! ಅಪ್ಪನ್ನ ಯಾರಾದರೂ ಕಾಣಲಿಕ್ಕೆ ಬರುವವರಿದ್ದಾರೇನು?

ಹರ್ಯಾ :— ಇದು ಆ ಪೈಕೀ ಕಾಗದ ಇತ್ಲಾಕಿಲ್ಲ ಬಿಡ್ರಿ!

ಶಚಿ :— (ಪುನಃ ಕುರ್ಚಿಯ ಮೇಲೆ ಕುಳಿತು) ಇದೊಂದು ಪೀಕಲಾಟ ಬಂದು ಕೂತತದ! ಇತ್ತೀಚೆಗೆ ಅಪ್ಪನ ವ್ಯವಹಾರೆಲ್ಲಾ ಪೋಷ್ಟಿನ ಮುಖಾಂತರ! ಯಾರಾದರೂ ಪ್ರತ್ಯಕ್ಷ ಬಂದಾರಂಬೋ ಮಾತತ ಇಲ್ಲ.

ಹರ್ಯಾ :— ಹೀಂಗಂತೂ ಆಗೈತ್ರಿ ಈಗ. ರಾವಸಾಬರಿಗೆ ಕಿವಿ ಕೇಳಸ್ಥಾಂಗ ಆದಾನ ಸುಟ್ಟು, ಯಾರೂ ಅವರ್ನ ಬೆಟ್ಟಿ ಆಗಾತ ವಲ್ಲರ್ರಿ! (ಬಾಡಿದ ಹೂಗಳನ್ನು ಕಿಟಕಿಯೊಳಗಿಂದ ಹೊರಗೆ ಒಗೆಯುತ್ತಾನೆ.) ಅಕ್ಕಾವರ, ನೀವು ನನ್ನ ಕಡೆ ನೋಡ್ರಿ! ನಾ ಹ್ಯಾಂಗ ಕಾಲಾ ಹಾಕ್ತಿದ್ದೇನು? ನನ್ನ ತುಕೂರಿ ಹೆಂತಾ ದನೀ ನೋಡಿ ರಾವಸಾಬರು, ಈಗೆರಡು ವರ್ಸದಿಂದ ನನ್ನ ಚಾಕರಿಗೆ ಇಟ್ಗೊಂಡರ್ರಿ! ಆಗಿನಿಂದ ಒಂದತ ಸವನತ ರಾವಸಾಬರ ಸಂಗತೀ ಓದರಿಕೊಣ್ಣೋದತ ಹತ್ತೈತ್ರಿ! ಓದರಿಕೊಣ್ಣೋದೇನ್ರಿ— ಬೇಶಾಂಗ ಹೊಯಿಕೊಣ್ಣೋದತರಿ— ಅಂದಾಗೇನರತ ತುಸು ಅವರ ಕಿವ್ಯಾಗ ಬಿದ್ದರ ನಸೀಬ ನಮ್ಮದು!

ಶಚಿ :— ಅಲ್ಲೋ, ಆ ಕಿವೀ ಡಾಕ್ಟರಗ ಬರದಿತ್ತಲ್ಲ? ಅವರಿಂದ ಏನು ಉತ್ತರ ಬಂತು?

ಹರ್ಯಾ :— ಅವರಿಂದಂತೂ ಉತ್ತರಾನತ ಬರಲಿಲ್ರಿ! ರಾವಸಾಬರ ಈ ರೋಗ ಎಲ್ಲಿಗೆ ಮುಟ್ಟೀತು—ಇದರ ಅಂದಾಜ್ ಕಟ್ಟೋದತ ಕಷ್ಟೈತ್ರಿ! ದಿನಾ ಒದರಿಕೊಂಡು ಒದರಿಕೊಂಡು, ನಂಮೂ ದನೀ ಒಳೊಳಗತ ಇಳಿಯಾಕ ಹತ್ತೈತ್ರಿ! ಇನ್ನ ಆರ್ತಿಂಗಳ ಮ್ಯಾಲ ಅದು ತಡದೀತು ಅಂತೇನೂ ಅನಸವಲ್ಲದರಿ! (ಶಚಿ ನಗತ್ತಾಳೆ) ನೀವೇನೋ ನಗತೀರಿ ಅಕ್ಕಾವರ! ನನ್ನ ಜೀವ ಹೋಕ್ಕೈತ್ರಿ ಇಲ್ಲೆ! ನನ್ನ ದನಿ ಹೋದರ ನಿಮಗ ಕುಶಿ ಅಕ್ಕೈತಲ್ರೆ?

ಶಚಿ :— ಅಲ್ಲೋ, ನನಗ ನಗಲಿಕ್ಕಾದರೂ ಒಂದು ಕಾರಣ ಬೇಕಲ್ಲ? ನೀನತ ನೋಡು—ನನಗೀಗ ಹತ್ತೊಂಬತ್ತು ವರ್ಷ ವಯಸ್ಸಾತ್ಯ! ಅಪ್ಪಂತೂ ನನ್ನ ಹೀಂಗ ಬಂಧನದೊಳಗಿಟ್ಟಾರ, ಏನು ಮಾಡಬೇಕಂತೀ?

ಹರ್ಯಾ :— ಹೌದ್ರಿ, ಅಕ್ಕಾವರತ! ನಿಮ್ಮದೂ ಒಂದು ಪೀಕಲಾಟದ ಪರ್ಸಂಗಾನತ ಐತಿರಿ! ನಿಮಗ ಕರೀ ಹೇಳ್ತೀನ್ರಿ— ನಿಮ್ಮ ಜಾಗಾದಾಗ ನಾ ಇದ್ದರ, ಎಂದಿಗೂ ಹೀಂಗ ಸುಮಾಕಿರ್ತಿದ್ದಿಲ್ರಿ! ರಾವಸಾಬರು ಒಂದಕಿ ಮಂತ್ರ ಜಪಸ್ತಾರ್ರಿ— 'ವರಾ ಮೆನಸಿನ ತಕ್ಯಾಂಗಿಲ್ಲ'! ಇವರ ಮನಸಿನ ತಕ್ಯಾಂಗ ಅಂದರೆ ಏನಿರಬೇಕೋ ಏನೋ!

ಶಚಿ :— ನಾತ ಆರೆ ಏನ ಹೇಳ್ಬೆ ಹೆರ್ಯೆ? ಅಪ್ಪ ಹೀಂಗತ ನಡಸಿದರು ಅಂದರ, ತುಸು ದಿವಸದಾಗ ನೋಡಲಿಕ್ಕೆ ಬರೋ ಮುಂದಿ ಸಹಿತ ಬರಧಾಂಗ ಆಗ್ತತದ! ನೊನ್ನೆ ನಾ ನಮ್ಮ ಸೋದರಮಾವನ ಮನೀಗೆ ಊಟಕ್ಕ ಹೋಗಿದ್ನೆಲ್ಲಾ....ಅಲ್ಲೆ....ಅ....

ಹರ್ಯಾ :— ಆ ಶ್ಯಾಮರಾಯರೂ ಏನೋ.... ಉಣ್ಣಾಕ.... ಬಂದಿದ್ದರು....ಅವರು ನಿಮ್ಮನ್ನ....ಕೇಳ್ಯಾಡಿದರು....ಹೌದಲ್ರಿ?

ಶಚಿ :— ಛಿ, ಹುಚ್ಚಾಮುಂಡೇಗಂಡಾ!

ಹರ್ಯಾ :— ಮತ್ತ ನೀವತ ಅಂತಿದ್ದಿಲ್ರೆ....ಅವರು ನೋಡಿ ಹೋಗಾಕ ಬರೋವರದಾರು ಅಂತ?

ಶಚಿ :— ನಾ ಎಲ್ಲೆ ಹೇಳಿದೆನೊ ಹಾಂಗ? ಮುಂಗಾಲ್-ಪುಟಗೀ ಮಾತಾಡಬ್ಯಾಡ! (ಉಸಿಗರೆದು) ಖರೇವಂದರೂ ಹರ್ಯಾ, ಬೇಜಾರ್ ಬಂತು ಜೀವಕ್ಕ!

(ತೆರೆಯಲ್ಲಿ ರಾವಸಾಹೇಬರ 'ಹರ್ಯಾ' ಎಂಬ ಕೂಗು.)

ಹರ್ಯಾ :— ಎಲಾ ಇವನ! ರಾವಸಾಬರತ ಬಂದರು!

ರಾವ್ :— (ಪುಸ್ತಕ ಓದುತ್ತ ಪ್ರವೇಶಿಸುವರು.) 'ಮನುಷ್ಯನ

* ಒಂದು ಫ್ರೆಂಚ್ ನಗೆಯಾಟದ ತೆರಳಲ್ಲಿ ರೂಪುಗೊಂಡುದು. ಲೇ.

ದೇಹಕ್ಕೆ ಅಂಟಿಕೊಳ್ಳುವ ಅನೇಕ ವ್ಯಾಧಿಗಳಲ್ಲಿ ಬಧಿರತ್ವ. ಬಧಿರತೆ, ಅಥವಾ ಕಿವುಡುತನ ಎಲ್ಲಕ್ಕೂ ಅತೀವ ದುಃಖದಾಯಕವಾದುದು.'

ಹರ್ಯಾ :— (ಪತ್ರವನ್ನು ರಾವ್‌ಸಾಹೇಬರ ಮೂಗಿಗೆ ಹಿಡಿದು, ಗಟ್ಟಿಯಾಗಿ) ರಾವ್‌ಸಾಬರ, ಇದೊಂದು ಕಾಗದ ಬಂದೈತ್ರಿ !

ರಾವ್ :— ಸೂಳೇಮಗನ! ನೆಟ್ಟಗ ಜೊಗಳಬೇಕು ಬಾಯಿಂದ– ರಾವ್‌ಸಾಬರ, ತಮ್ಮಡೊಂದು ಪತ್ರ ಬಂದೈತ್ರಿ '– ಅಂತ! ಅದನ್ನ ಬಿಟ್ಟು ಪತ್ರಾ ನನ್ನ ಮೂಗ್ಗೆ ಹಿಡೀತಾನ, ಮಗಾ.! (ಸುತ್ತಲೂ ನೋಡಿ) ಉಂ, ಇನ್ಯಾರಿದ್ದಾರ? ಶಚಿ! (ಕುರ್ಚಿಯ ಮೇಲೆ ಕುಳಿತು, ಲಕ್ಕೋಟೆಯನ್ನೊಡೆದು ಕಾಗದ ಹೊರಗೆ ತೆಗೆಯುವರು.)

ಶಚಿ :— (ಮೆಲ್ಲಗೆ) ಹರ್ಯಾ, ಕಳ್ಳಹೆಜ್ಜೇಲೆ ಅಪ್ಪನ ಹಿಂದೆ ಹೋಗಿ ಓದಲೇನು ಆ ಪತ್ರಾ ?

ಹರ್ಯಾ :— ಈಟೊಂದ್ಯಾಕ ತರಾಸ್ ತೊಗೊಂತೀರಿ ? ರಾವ್‌ಸಾಬರು ಏನಽ ಮನಸಿನ್ಯಾಗ ಓದಬೇಕಂದರೂ, ಕೇಳವರ ಕಿವಿಗಡಚಿಕ್ಕೋ ಹಾಂಗ ಕೂಗತಾರ್ರಿ ! ಈಗ ತಾನಽ ಗೊತ್ತಾ ಕ್ಯೆತ್ರಿ ! ಸುಮಾಕಿರ್ರಿ ! (ಶಚಿ ರಾವಸಾಹೇಬರ ಹಿಂದೆ ಬಂದು ನಿಲ್ಲುತ್ತಾಳೆ)

ರಾವ್ :— (ಹಿಂತಿರುಗಿ ನೋಡಿ) ಶಚಿ, ಈ ಪತ್ರ ನನ್ನನ್ನುದ್ದೇಶಿಸಿ ಬರೆದದ್ದು, ತಿಳೀತಽ ? (ಕುರ್ಚಿಯ ಮೇಲಿಂದ ಎದ್ದು ದೂರಹೋಗಿ ನಿಂತು) ಇದನ್ನು ಬರೆದವರು ತಮ್ಮ ಗುಟ್ಟನ್ನ ಏನಾದರೂ ಬರೆದು ತಿಳಿಸಿರಬೇಕು! ಯಾರಿಗೂ ಕೇಳಧಾಂಗ ಮೆಲ್ಲಗ ಓದಿಕೊಂಬೋಣ! (ಎಂದು ಗಟ್ಟಿಯಾಗಿ ಓದುವರು.) ' ಪರಮಪ್ರಿಯರಾದ ರಾವ್‌ಸಾಹೇಬರ ಸನ್ನಿಧಿಗೆ ಅನೇಕ ಪ್ರಣಾಮಗಳು. ತಮ್ಮ ಮಗಳ ಸಲುವಾಗಿ ನಾನೊಂದು ಉತ್ತಮ ವರನನ್ನು ನೋಡಿದ್ದೇನೆ. ಅವನು ರೂಪವಂತನೂ ಸುಶಿಕ್ಷಿತನೂ ಆಗಿರುವನಲ್ಲದೆ ಶ್ರೀಮಂತನೂ ಆಗಿದ್ದಾನೆ ... '

ಹರ್ಯಾ :— ನೋಡ್ರಿ ಅಕ್ಕಾವರ, ನಾ ಹೇಳಿದ ಮಾತು ಖರೆ ಆತಿಲ್ರಿ ?

ರಾವ್ :— ಏನಂತಾನಿವಽ ? ' ರೂಪವಂತ, ಸುಶಿಕ್ಷಿತ ಮತ್ತು ಶ್ರೀಮಂತ !....' ಇದ್ದಿದ್ದಾನು! ಆದರ ನನ್ನ ಅಳಿಯ ಆಗಬೇಕಾದರ ಯಾವ ಗುಣ ಅವಶ್ಯ, ಆ ಗುಣ ಏನೂ ಇವನಲ್ಲಿ ಇದ್ದಂತೆ ಕಾಣಲಿಲ್ಲ!

ಹರ್ಯಾ :— ಹೌದಽ ! ಇವರ ತಲ್ಯಾಗ ಹೊಕ್ಕ ದೆವ್ವ ಇನ್ನೂ ಆ ಜಾಗಾ ಬಿಟ್ಟೇ ಇಲ್ಲ !

ಶಚಿ:— ಕೇಳದ್ಯಾ ಹರ್ಯಾ? ರೂಪ, ಶಿಕ್ಷಣ ಮತ್ತು ಶ್ರೀಮಂತಿಕೆ, ಅಂದರ...ಆಪ್ಪಗ ಅದರ ಬೆಲೀನs ಇಲ್ಲ !

ಹರ್ಯಾ :— ಅಕ್ಕಾವರ, ತುಸು ದಮ್ಮು ಹಿಡೀರಿ !

ಶಚಿ:— ದಮ್ಮು ಹಿಡಿದು ಹಿಡಿದು ಈಗ ಶ್ವಾಸ ಹತ್ತೋ ಹೊತ್ತು ಬಂದಽನ! ಅಪ್ಪನ ಈ ಹಲ್ಲನಿ, ನಾ ಸಾಯೋ ತನಕಾ ಮುಗಿಯೋ ಲಕ್ಷಣಿಲ್ಲ! ಅಪ್ಪಂತೂ ನನ್ನ ಮದಿವೀ ಮಾಡೋದಿಲ್ಲ-ಅಂಬೋದು ಈಗ ಖಂಡಿತಾಧಾಂಗಾತ್ಯು! ಇನ್ನ ಈ ಮನಿಯೊಳಗ ನಾ ಇರೋದು ಸಾಧ್ಯವಿಲ್ಲ! ಏನ್ನ ಅದೃಷ್ಟ ನಾನಽ ಕಂಡುಕೋ ಬೇಕು.

(ಪಟ್ಟನಿಂದ ಕಾಲಕ್ಷೇಪಿಸುತ್ತ ಹೋಗುವಳು.)

ರಾವ್ :— ಉಪಯೋಗಿಲ್ಲದ ಪತ್ರ! (ಆದನ್ನು ಮಡಿಚಿ ಟೇಬಲ್‌ಮೇಲಿಸಿದು, ಪುಸ್ತಕ ತೆರೆದು ಓದತೊಡಗುವರು) " ಮನುಷ್ಯ ದೇಹಕ್ಕೆ ಅಂಟಿಕೊಳ್ಳುವ ಅನೇಕ ವ್ಯಾಧಿಗಳಲ್ಲಿ ಬಧಿರತ್ವ, ಬಧಿರತೆ ಅಥವಾ ಕಿವುಡುತನ ಎಲ್ಲಕ್ಕೂ ಅತೀವ ದುಃಖದಾಯಕವಾದುದು! " ಅಗದೀ ಖರೆ ಅದ. ಈ ಕಿವುಡು ನನಗ ನಡುವೇ ಬಂದ ವ್ಯಾಧಿ ಆದರೂ, ಆದರ ಬಾಧಿ ಏನೂ ಕಡಿಮಿಲ್ಲ! ಇದರಿಂದ ಎಂದ ಮುಕ್ತ ಆಗ್ತೀನೋ ಅನಿಸೇದ ! ಈ ನನ್ನ ವ್ಯಾಧಿ ಎಲ್ಲಾ ಡಾಕ್ಟರರಿಗೆ ಕೈಮೀರಿ ನಿಂತಿತು ಅಂತ, ಈಗ ವೈದ್ಯರ ಬೆನ್ನು ಬಿದ್ದೀನಿ ?! ಅವರಿಂದಾದರೂ ಗುಣಾ ಆದೀತೇನೋ ಅಂತ ಆಶಾ! ಇರಲಿ, ಈ ಪುಸ್ತಕದಾಗ ಮುಂದೇನು ಬರದಽದ ? :— ' ಕಿವಿಯಲ್ಲಿ ಒಂದು ತಿಳುವಾದ ಪರದೆಯಂಥ ಪರೆಯಿರುತ್ತದೆ. ಅದು ದಪ್ಪನಾಗಿದ್ದರೆ, ಇಲ್ಲವೆ ಅದಕ್ಕೆ ಸೂಕ್ಷ್ಮವಾದ ಛಿದ್ರ ಬಿದ್ದಿದ್ದರೆ, ಇಲ್ಲವೆ ಕರ್ಣರಂಧ್ರವು ಕೊಳೆಯಿಂದ ಮುಸುಕಿದ್ದರೆ (ಕಿವಿಯಲ್ಲಿ ಬೆರಳನ್ನು ತೂರಿಸಿ, ಅಲ್ಲಾಡಿಸಿ ನೋಡಿ, ಗೊಣುಹಾಕುತ್ತಾರೆ.) ಅಥವಾ ಕರ್ಣನಲಿಕೆಯಲ್ಲಿ ಏನಾದರೊಂದು ಪದಾರ್ಥ ಸೇರಿಕೊಂಡಿದ್ದರೆ'—ಈ ಕರ್ಣರಂಧ್ರ ತಿಳೀತು. ಆದರ ಈ ಕರ್ಣನಲಿಕೆ ಅಂದರ ಯಾವುದು ? (ಕಿವಿಯಲ್ಲಿ ಬೆರಳನ್ನು ಸೇರಿಸಿ ಕನ್ನಡಿಯಲ್ಲಿ ನೋಡಿಕೊಳ್ಳಲು ಯತ್ನಿಸುತ್ತಾರೆ.)

ಛೇ, ಹೀಂಗಾದರ ಕಾಣೋದಿಲ್ಲ. ಹರ್ಯಾ, ಏ ಹರ್ಯಾ...ಎಲೆ..... ಹರ್ಯಾ.....

ಹರ್ಯಾ :— ರಾವಸಾಬ್,

ರಾವ್:— ಕತ್ತೀ, ಒಂದs ಸವನ ಶಂಖಾ ಹೊಡೀತೀನಿ! ಏನ್ ಕಿವುಡು ಗಿವುಡಾದ್ಯೋ ಏನು ? ಉತ್ತರಾ ಯಾಕ ಕೊಡವಲ್ಲಿ ?

ಹರ್ಯಾ :— ಉತ್ತರಕ್ಯಾಕ ಈಟು ಅವಸರ, ರಾವಸಾಬರ ?

ರಾವ್ :— ಏನು ? ಕೋಟದಾಗ ಹೋಗಿದ್ಯಾ ? ಒಳ್ಳೇದು. ಹೀಂಗ ಹತ್ತರ ಬಾ ! ಮತ್ತ ನನ್ನ ಕರ್ಣನಲಿಕೆ—ತಿಳೀತೇನು ? ನನ್ನ ಕರ್ಣನಲಿಕೆಯಲ್ಲಿ ಏನಾದರೂ ಸೇರಿಕೊಂಡಽದೇನೋ ಅಹ್ಮ ನೋಡು !

ಹರ್ಯಾ :— (ಗಟ್ಟಿಯಾಗಿ ಕೂಗಿ) ಏನು ?' ಕರ್ಣ ?

ರಾವ್ :— ಹೌದೋ ಕರ್ಣ ! ಕುಂಭಕರ್ಣ !

ಹರ್ಯಾ :— ಕರ್ಣ! ನಿನ್ನೆ–ನಿನ್ನೆ ರಾತ್ರಿ ಆ ಬಿಟ್ಟೇ ಹನುಮಪ್ಪನ ಗುಡ್ಯಾಗ ಬಿಂಮೂರಾಯರ ಕೀರ್ತನ ನಡದಿತ್ತು ! ಅಲ್ಲೆ ಅವರ ಕತ್ಯಾಗ ಕರ್ಣನs ಬಂದಿದ್ದ ! ಅಂವ ಇಲ್ಲ್ಯಾಕ ಬಂದಿದ್ದಾನಪಾ ಈ ರಾವ್‌ಸಾಬರ ಕಿವ್ಯಾಗ ?

ರಾವ್ :— (ಕಿವಿ ಮುಂದೆಮಾಡಿ) ಇದು ನೋಡು–ಏನಾದರೂ ಕಾಣಸ್ತದೇನು ?

ಹರ್ಯಾ :— ಏನೇನೂ ಕಾಣೂದಿಲ್ರಿ !

ರಾವ್:— ಏನಂತೀ ?

ಹರ್ಯಾ :— (ಕರಗಿಕೊಂಡು) ಏನೂ ಇಲ್ರಿ !

ರಾವ್ :— ಹರ್ಯಾ, ನಿನ್ನ ದನಿ ಬರ್‌ಬರ್ತಾ ಇಳಕೋತ ನಡೀತು! ಮೊದಲಿನ್ಹಾಂಗ ಗಟ್ಟಿಸಿ ಮಾತಾಡೋದಾಗವೊಲ್ಲದು ನಿನ್ನಿಂದ! ಆದರೂ ಕೆಲಸದಿಂದ ಬಿಡಿಸೋದಿಲ್ಲ ನಿನ್ನ ತಿಳೀತೇನು? ಯಾರಿಂದರ ನಿನ್ನಂಥಾ ಹುಷಾರ್ ಆಳು.....

ಹರ್ಯಾ :— ಅದೀನ್ರಿ ಹಾಂಗ ಮತ್ತ !

ರಾವ್ :— ಸ್ವಾಮಾನಿಕ!

ಹರ್ಯಾ :— ಹೌದಽ !

ರಾವ್ :— ಮನಸು ತಿಳಕೊಂಡು ನಡಿಯುವನ !

ಹರ್ಯಾ :— ಆಹಾ, ಸಂಶಯೀನ್ರಿ !

ರಾವ್ :— (ಸ್ವಗತ) ಇಂದ ಊಟಕ್ಕ ಏನು ಮಾಡು ಅಂತ ಹೇಳಬೇಕು ಆಚಾರಿಗೆ ? ಮಸಾಲೀ ಕರಿಗಡಬು ಮಾಡಿಸಿ ಹೊಡದ-ರಾತ್ಯು ! ಹರ್ಯಾನ ಕಡಿಂದ ಹೇಳಿ ಕಳಿಸೋಣು ! (ಪ್ರಕಾಶವಾಗಿ) ಹರ್ಯಾ, ಇದು ನೋಡು—ಇಂದ ಊಟಕ್ಕ.....

ಹರ್ಯಾ :— (ಅವರ ಕಿವಿಯಲ್ಲಿ ಒದರಿ) ಮಸಾಲೀ ಕರಿಗಡಬು ಮಾಡಲಿಕ್ಕೆ ಹೇಳ್ತೀನ್ರಿ ಆಚಾರಿಗೆ !

ರಾವ್ :— (ಆಶ್ಚರ್ಯದಿಂದ) ಎಲಾ ಇವನ ! ನಿನಗ್ಹ್ಯಾಂಗ ಗೊತ್ತಾತೋ? ಹುಷಾರಿದ್ದೀ! ಹುಷಾರಿದ್ದೀ! ನನ್ನ ಮನಸಿನೊಳ-ಗಿದ್ದದ್ದನ್ನ ಊಹಾದಿಂದ ಕಂಡುಹಿಡಿದಿ ! ಹರ್ಯಾ, ನಂಬಿಗಿಯಿಂದ ನೀ ಕೆಲಸಾ ಮಾಡೋದಕ್ಕ, ನಾ ಸತ್ತ ಮ್ಯಾಲ ನಿನಗ ಇನಾಮು! ಅದು ಎಷ್ಟು ಅಂದೋದನ್ನ ಈಗ ಹೇಳೋದಿಲ್ಲ !

ಹರ್ಯಾ :— (ಮೆಲ್ಲಗೆ) ಅದಂತೂ ನನಗ ಎಂದೋ ತಿಳದ-ತೇಳ್ರಿ ! ಏನೂರು ರೂಪಾಯಿ ಸಿಗೋವದಾವು ! ಹಾಂಗಂತ ನಾನೂ ಮತ್ತ ನಿಮ್ಮಲ್ಲೆ ಚಾಕರಿಗದೀನು !

(ಪರದೆಯಲ್ಲಿ 'ಹಿಡೀರಿ' 'ಹಿಡೀರಿ' ಎನ್ನುವ ಗಲಿಬಿಲಿ ಕೇಳಬರುತ್ತದೆ.)

ಹರ್ಯಾ :— ಅಂ, ಏನಪಾ ಈ ಒದರ್ಯಾಟ ?

(ಕಿಟಕಿಯಲ್ಲಿ ಹಣಿಕಿ ಹಾಕುತ್ತಾನೆ. 'ಧಬ್ ಧಬ್' ಎಂದು ಡಬ್ಬಿ ಬಡಿದ ಸಪ್ಪಳ ಕೇಳಬರುತ್ತದೆ.)

ರಾವ್ :— ಹರ್ಯಾ, ಎಷ್ಟು ಗಟ್ಟ್ಯಾಗಿ ಸೀನ್‌ತೀಯೊ, ಕತ್ತೆ ? ಇಷ್ಟು ಜೋರ್ ನೆಗಡಿ ಯಾವಾಗ ಬಂತು ನಿನಗ ?

ಹರ್ಯಾ :— (ಕಿಟಕಿಯಲ್ಲಿ ಮುಖ ಇಟ್ಟು ಕೂಗುತ್ತಾನೆ.) ಎಲಾ ಇವನ ಮಂಜಾಳ್ಳೋಗಲಿ ! ನಮ್ಮ ತ್ವಾಟದಾಗ ಬ್ಯಾಟೀ ಆಡಾಕ ಯಾರು ಹೊಕ್ಕಾರಪಾ ? ಏ, ಏ, ಬ್ಯಾಟಗಾರ ಬಂಟಾ ! ಇಲ್ಲೆ ಬ್ಯಾಟೀ ಆಡಾಕ ಪರವಾನಿಗೀ ಇಲ್ಲ ! ಈಟಾಗಿ ಇದು ಬ್ಯಾಟೀ ಆಡೋ ತ್ವಾಟಕ ?

ರಾವ್:— (ಕಿಟಕಿಯ ಹತ್ತಿರ ಹೋಗಿ) ಏನೋ, ಏನ್ನಡವದ? ಯಾರ ಸಂಗತೀ ಮಾತಾಡ್ತೀದಿ ?

ಹರ್ಯಾ :— ರಾ ವ ಸಾ ಬ್, ನಮ್ಮ ತ್ವಾಟದಾಗ ಬ್ಯಾಟೀ ನಡದಂತ್ರಿ, ಬ್ಯಾಟ ! (ಮತ್ತೆ ಡಬ್ಬಿ ಬಡಿದ ಸಪ್ಪಳ) ಮುರೀತು ! ಗೇಟಿನ ಒಂದು ಪಡಕ ಮುರೀತು !

ರಾವ್ :— ಏ ಯಾವನಲೆ ನೀನು ?' ನಮ್ಮ ತೋಟದಾಗ ಹೊಕ್ಯಾಂವ ? ನಿಲ್ಲು ತೋರಸ್ತಿನಿ ನಿನ್ನಾಟಾ ! ಹರ್ಯಾ, ನನ್ನ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಸೋಟು ಎಲ್ಲವನ್ನೂ ? ಹಿಡೀರಿ, ಹಿಡೀರಿ ಆ ಕಳ್ಳನ್ನ ! ಹರ್ಯಾ ನೀ ಮುಂದಾಗು !

ಹರ್ಯಾ :— ನೀವು ಮುಂದಾಗ್ರಿ ! ದಣಿಗಳು ನೀವು ! ದಣೀ ಹಿಂದ ಚಾಕರ !

[ರಾವಸಾಹೇಬರು ಒಂದು ಬಡಿಗೆ, ಹರ್ಯಾ ಒಂದು ಕಸಬಾಗೆ ಹಿಡಿದುಕೊಂಡು ಹೊರಬೀಳುತ್ತಾರೆ. ಒಂದೆರಡು ನಿಮಿಷ ರಂಗಸ್ಥಳವು ಬರಿಯದಾಗುವುದು. ತರುವಾಯ ಶ್ಯಾಮರಾಯ ಕೈಯಲ್ಲಿ ಭಲ್ಲೆಯನ್ನು ಹಿಡಿದುಕೊಂಡು ಪ್ರವೇಶಿಸುತ್ತಾನೆ. ಒಳಗೆ ಬಾದೊಡನೆ, ಆತ್ತಿತ್ತ ಸುತ್ತಾಡಿ ಇಣಕಿಣಕಿ, ಕಣಿಪಣಿಕಿ ಎಲ್ಲ ಕಡೆಗೂ ನೋಡುತ್ತ ತನ್ನಷ್ಟಕ್ಕೆ ಮಾತು ಪ್ರಾರಂಭಿಸುವನು.]

ಶ್ಯಾಮು :— ನೊಲವ ಬೆನ್ನುಹತ್ತಿ ನಾ ಇವರ ಮನಿಯೊಳಗ ಬಂದೆ. ಇಲ್ಲಂತೂ ಅಮು ಕಾಣೋದೇ ಇಲ್ಲ ! ಹಂಗಾರ ಎಲ್ಲಿ ವನಾಯಾಗಿದ್ದೀತು ? (ಭಲ್ಲೆಯನ್ನು ಮೇಜಿನ ಮೇಲಿಟ್ಟು ಕೂಡುತ್ತಾನೆ.) ಉಶ್ಶಪ್ಪಶ್ಶ ! (ಜಿನರನ್ನಿರಸಿಕೊಳ್ಳುತ್ತ) ಅಲ್ಲಾ, ಈ ನೊಲಕ್ಕ ಬಾಳಾಂದರ ಹತ್ತು ಹನ್ನೆರಡಾಣೆ ಬೆಲಿ ಬೀಳಬಹುದಾಗಿತ್ತು ; ಅದಕ್ಕಂತ ಈಗ ಆರು ತಾಸಿನಿಂದ ಅಡಬರಸ್ತಾ ಇದ್ದೀನಿ! ಪಂಜರಾ ತೊಳಿಯುವಾಗ ಪುಟಕ್ಕನಕ ಬಿಗಿದು ಹೊರಬಿದ್ದ ನೊಲ, ಒಬ್ಬ ಹುಡುಗನ ಕೈಗೆ ಸಿಕ್ಕಿತು ! ಅಂವಗ ಒಂದು ರೂಪಾಯಿ ಕೊಟ್ಟು ಹಿಡಿದು ತರೋವಾಗ, ಕೈಯೊಳಗಿಂದ ಮೆಲ್ಲಗೆ ಜಾರಿಕೊಂಡು ಗಟಾರದಾಗೆ ಹೊಕ್ಕಿತು ! ಪುನಃ ಹಿಡೀಬೇಕು ಅಂದೋಪರಾಗೆ ಅದಕ್ಕೊಂದು ಬ್ಯಾಟೇ ನಾಯಿ ಬೆನ್ನು ಹತ್ತಿ, ಅದನ್ನ ಓಡಿಸಿಕೊಂಡು ಬೋತ್ಯು ! ನಾಯಿನ್ನ ಹೊಡೀಲಿಕ್ಕೆ ಬಂದೂಕು ತಂದರೆ, ಅದರ ಕುದುರೀನs ಏರಧಾಂಗಾತು ! ಅದನ್ನ ಬಿಟ್ಟು ಹತ್ಯಾರ ಹಿಡಿದರೆ, ಜಂಗುತಿಂದ ಹತ್ಯಾರದ ಎರಡು ತುಂಡs ಕೈಯಾಗ ಬಂದವು ! ಕೊನೀಗೆ ನೆರೆಮನಿಯವರ ಈ ಬರ್ಚೀ ಇಸಕೊಂಡು ಬೆನ್ನು ಹತ್ತಿದ್ದಾತು ! ಬರ್ಚಿ ನೋಡಾಗಿದ್ದರೂ ಹಿಂದಿನ ದಾಂಡಾ ಅದರೂ ಗಟ್ಟಿಮುಟ್ಟಾಗೇದ! ಇಷ್ಟೆಲ್ಲಾ ಹುಡದೀ ಹಾಕಿದರೂ ಮೊಲಾ ಕೈಗೆ ಹತ್ತಲಿಲ್ಲ ! ಹೋದರ ಹೋಗಲಿ, ಇಪ್ಪತ್ತಕ್ಕ ಇದು ಮುಗದರ ಪಾರಾದಿವಿ ! ಇಲ್ಲಾಂದರ ತೋಟದಾಗ ಅದ ನಷ್ಟ ನಮ್ಮ ತಲೀಮ್ಯಾಲs ಬೀಳೋದು ! ಎಂಟಾಣೇಕ್ಕ ಕೊಂಡ ಮೊಲಕ್ಕ ಎಂಟು-ನೂರು ತೆರುವ ಪ್ರಸಂಗ ! (ಹೆಜ್ಜೆಯ ಸಪ್ಪಳ ಕೇಳಿ) ಮನಿಯವರ್ಯಾರೋ ಬರೋಹಾಂಗ ಕಾಣಿಸ್ತದವ ! ನಾವಿನ್ನ ಇಲ್ಲಿಂದ ಕಾಲು ಕಿತ್ತಲೇ ಬೇಕು ! (ಬರ್ಚಿಯನ್ನು ತೆಗೆದುಕೊಂಡು ಬಾಗಿಲನ್ನು ತೆರೆಯಲಿಕ್ಕೆ ಹತ್ತಾನೆ, ರಾವ್‌ಸಾಹೇಬರು ಕಾಣುತ್ತಾರೆ. ಎರಡನೆಯ ಬಾಗಿಲನ್ನು ತೆರೆಯಲಿಕ್ಕೆ ಹತ್ತಾನೆ; ಹರ್ಯಾ ಕಾಣುತ್ತಾನೆ. ಮೂರನೆಯ ಬಾಗಿಲನ್ನು ತೆರೆಯಲಿಕ್ಕೆ ಹತ್ತಾನೆ. ತೋಟದ ಕಾವಲುಗಾರ ಕಾಣುತ್ತಾನೆ.)

ತೋ. ಕಾವಲುಗಾರ :— ರಾವಸಾಬ್, ಇವನs ಆ ತುಂಟ !

ಹರ್ಯಾ :— ಇನ್ನೆಲ್ಲಿ ಓಡ್ತೀ, ಮಗನ !

ರಾವ್ :— ಕಟ್ಟಿಹಾಕಿರಿ ಕಳ್ಳನ್ನ ! ನೋಡ್ತೀರೇನು ? ಏನ್ರೀ ನಮ್ಮ ಪರವಾನಿಗಿಲ್ಲದ ತೋಟದಾಗ ಹೊಕ್ಕು ಗಿಡಾ ಎಲ್ಲಾ ಹಾಳು ಮಾಡಿದಿರಿ ! ಏನಿದರರ್ಥ ? ಹೆಸರೇನ್ನಿಮ್ಮದು ?

ಹರ್ಯಾ :— ರಾಯರಿಗೇನಂತ ಕರೀತಾರ ?

ಶ್ಯಾಮು :— (ಸ್ವಗತ) ಏನ್ ಮಾಡದೇಕಿನ್ನ ? ಇವರಿಗೇನಂತಾ ಹೆಸರ್ಹೇಳ್ಬೇಕು ?

ಹರ್ಯಾ :— ಅಲ್ರೀ ನಾವಿಬ್ಬರೂ ಹೆಸರೇನೂ ಅಂತ ಗೊತ್ತಿಲ್ಲದವರು ಹರಿಯೋ ಹಾಂಗ ಕಿರ್ಚಿಕೊಂಡರೂ ನೀವು ಕಿವಿಗೊಡಲಿಲ್ಲ ಅಂದರ— ನಮ್ಮ ರಾವಸಾಬರ್ಹಾಂಗ—ಏನ್ ಕಿವುಡಗಿ ಅದೀರೋ ಏನು ಅಂತೀನಿ ?

ಶ್ಯಾಮು :— (ಸ್ವಗತ) ಅಂ, ಇದೊಂದು ಚೆಲೋ ಐಡಿಯಾನ ಕೈ ಹೇಳಿಕೊಟ್ಟ ! ನಾನೂ ಪಕ್ಕಾ ಕಿವುಡನ್ಹಾಂಗs ನಟಿಸ್ಲಿ ಹ್ಯಾಂಗಾದೀತು ?

ರಾವ್ :— ಏನಂತಾನೊ ಅಂವ ?

ಹರ್ಯಾ :— ಮನಸಿನ್ಯಾಗs ಏನೇನೊ ಗುಣಗುಟ್ಟಾಕ ಹತ್ಯಾನ್ರಿ-

ಶ್ಯಾಮು :— (ಸ್ವಗತ) ನೋಡೋಣ ಹಂಗಾರ ಈ ಯುಕ್ತಿ ಸಾಧಿಸಿದರ !

ಹರ್ಯಾ :— ಏನ್ರಿ ? ಏನ್ ಬೇಕು ನಿಮಗ ?

ಶ್ಯಾಮು :— ನನಗೊಂದು ಕಾಗದಾ ಕೊಟ್ಟಿರ....

ರಾಸ್ :— ಏನಂತಾನೊ ಹರ್ಯಾ ?

ಹರ್ಯಾ :— (ಓದಿ) ಅಂವಗ ಕಾಗದ ಬೇಕಂತರಿ.

ರಾಸ್ :— ಕಾಗದ ? ಮೃತ್ಯುಪತ್ರ ಮಾಡಾಂವಿದ್ದಾನ್ಯನ ಗಲಿ ! ಹರ್ಯಾ, ಕೊಡು ಒಂದು ಕಾಗದದ ತುಂಡು.

(ಹರ್ಯಾ ಕೊಡುತ್ತಾನೆ)

ಶ್ಯಾಮು :— (ಬರೆದು ಅದನ್ನು ರಾಸ್‌ಸಾಹೇಬರ ಕೈಯಲ್ಲಿ ಶ್ಯಾ.) ನೋಡಿರಿ !

ರಾಸ್ :— ಏನವಽ ಅರೆ ಏನಿದು ? (ಓದುವರ ಹುಟ್ಟು.... ಕಿವುಡ.... ನಿದ್ದೀನೆ.... ಕಾ.... ರ... ಣ (ಕಾ ಜೆಲ್ಲಿಕೊಟ್ಟು, ಹರ್ಷದಿಂದ) ಏನು, ನೀವೊ ಕಿವುಡ ಕಿವುಡರ ? ಪಕ್ಕಾ ಕಿವುಡರ ?

ಶ್ಯಾಮು :— ಹೌದು ರಾಯರ ! ಚಿಲೊ ಮರ ಹಿರೇಕಟ್ಟೀ ದೇಸಾಯರ ಮಗ ನಾನು !

ರಾಸ್ :— ಅವರ ಹೆಸರು ಕೇಳಿ ಬಲ್ಲೆ. ಏನ್ ಯರ ಮಕ್ಕಳ ? (ಸ್ವಗತ) ನನ್ನ ಮನಸಿನ ಮನಿತಪಕಾ ಬಂದಾನ !

ಶ್ಯಾಮು :— (ಸ್ವಗತ) ಇನ್ನ ಅಂಜಕೀ ಹೆಚ್ಚೀಹಾಂಗ ಕಾಣಸ್ತದ !

ರಾಸ್ :— ಏ ಹರ್ಯಾ, ಇವರ ಮಾತಾಡದೇಕಾಗೇದ; ನೀವಿಬ್ಬರ

ಹರ್ಯಾ :— ಹೂನ್ಸ್ರಿ ?

ರಾಸ್ :— ! ಆಗೇ ಹೋಗಲಿ !

ಶ್ಯಾ :— (ಬಾಗಿಲು ಬಡಿದು) ರಾಯರ, ರಾಯರ, ನ್ನ ಕಾಣಾಕ ಯಾರೋ ಬಂದಾರ್ರಿ !

ಶ್ಯಾಮು :— (ಬಾಗಿಲನ್ನು ತೆರೆದು, ಹೊರಗೆ ಬಂದು, ಆಶ್ಚರ್ಯದಿಂದ ಸ್ವಗತ) ಎಲೆ, ಈಕೆಯಂತೂ ಆಕೆ !

ಶಚಿ :— (ಸ್ವಗತ) ಎಲಾ ! ಇವರಂತೂ ಅವರು ! (ಪ್ರಕಾಶವಾಗಿ) ತಾವು ಇಲ್ಲೆ ಹ್ಯಾಂಗ ಬಂದಿರಿ ?

ಹರ್ಯಾ :— (ಸ್ವಗತ) ಎಲಾ ಇವನ ! ಇವೂ ಹಕ್ಕಿ ಕೂಡಿದಲ್ಲ ! ಇವರದೂ ಇವರದೂ ಮುಂಚಾಗ ಕೂನ ಇದ್ದಾಂಗೈತಲಾ! ಮುಗೀತಽ ಹಂಗಾರ !

ಶಚಿ :— ಅಂದು ನೀವು ನಮ್ಮ ಸೋದರಮಾವನ ಮನೀಗೆ ಊಟಕ್ಕ ಬಂದಿದ್ದಿರಲ್ಲಾ.....

ಶ್ಯಾಮು :— (ಸ್ವಗತ) ಕಿವುಡನ್ಹಾಂಗ ಸುಮ್ಮನಽ ನಿಂತುಬಿಡ್ತೀನಿ !

ಹರ್ಯಾ :— ಅಕ್ಕಾವರ, ಅವರಿಗೆ ಕಿವೀ ಬಾದರಂ ! ಕ್ವಾಟ ಕಾಳು !

ಶಚಿ :— ಏನೋ ಮೂರ್ಖಾ, ಯಾರು ಹೇಳಿದರು ನಿನ ಇವರು ಕಿವುಡರಿದ್ದಾರ ಅಂತ ?

ಹರ್ಯಾ :— ಹೇಳಾಕ ಯದಕ್ಕ ಬೇಕರಿ ! ಆಟು ಈಟು ಕಿವುಡಲ್ರಿ ! ಕಿವುಡತನದಾಗ ನಿಶಾನೀ ಹಚ್ಚ್ಯಾರ್ರಿ ! ಇವರದಕಟ ಗಮ್ಮತ್ ಮಾಡಲೇನ್ರಿ ! ನೀವು ಸುಮಾಕಿರ್ರಿ! (ಶ್ಯಾಮರಾಯರಿಗೆ) ಇದು ನೋಡ್ರಿ ರಾಯರ, ನೀವು ರಾವಸಾಬರ ಮನಸಿಗೆ ಬಂದಿದ್ರೂ ಅಕ್ಕಾನವರಿಗೆ ಒಪ್ಪಿಗಿ ಆಗಿಲ್ರಿ ! ಅದಕ ಸುಮಾಕs ಇನ್ನ ಹಾದಿ ಹಿಡೀರಿ !

ಶ್ಯಾಮು :— (ಶಚಿಗೆ) ಇದು ನಿಮ್ಮ ಮನೀ ಅಂಬೋದ ಗೊತ್ತಿರಲಿಲ್ಲ ! ಸಂತೋಷಾತ್ಯ ! (ಹರ್ಯಾ ಗಹಗಹಿಸಿ ನಗುತ್ತಾನೆ)

ಶಚಿ :— ಹರ್ಯಾ, ಕತ್ತೆ, ನಗಲಿಕ್ಕೇನಾತ್ಯೊ ?

ಹರ್ಯಾ :— ನಗಬ್ಯಾಡ ಅಂದರ ಏನ್ ಮಾಡ್ಲಿರಿ ? ನಾ ಮಾತಾಡಿದ್ದೀನು ? ಇವರು ಉತ್ತರಾ ಕೊಟ್ಟಬ್ಯಾಡೀನು ! ಒಂದಕ್ಕೊಂದು ಸಮ್ಮಂದ ?

ಶಚಿ :— (ಗಟ್ಟಿಯಾಗಿ) ಹರ್ಯಾ ಅನ್ನೋದೂಹಾಂಗ.....ನಿಮಗ ಕೇಳಿಸೋದಿಲ್ಲೇನು ?

ಶ್ಯಾಮು :— ಉಂ. ಹುಂ!

'ಬಗನ' ಬಾಲಾಮೃತ

ಮಕ್ಕಳ ಸಧೃಡತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಮುಖಾಂತರ ಮಕ್ಕಳ ಯಕೃತ ಮತ್ತು ಹೊಟ್ಟೆ ಸರಿಯಾಗಿ ಇರಬೇಕು. ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಸೋಟು ಎಲ್ಲದಕನೊ ? ಹಿಡೀರಿ, ಹಿಡೀರಿ ಆ ಕಳ್ಳನ್ನ ! ಹರ್ಯಾ ನೀ ಮುಂದಾಗು !

ಹರ್ಯಾ :— ನೀವು ಮುಂದಾಗ್ರಿ ! ದಣಿಗಳು ನೀವು ! ದಣೇ ಹಿಂದ ಚಾಕರ !

[ರಾವಸಾಹೇಬರು ಒಂದು ಬಡಿಗೆ, ಹರ್ಯಾ ಒಂದು ಕಸಬರಿಗೆ ಹಿಡಿದುಕೊಂಡು ಹೊರಬೀಳುತ್ತಾರೆ. ಒಂದೆರಡು ನಿಮಿಷ ರಂಗಸ್ಥಳವು ಬರಿಯದಾಗುವುದು. ತರುವಾಯ ಶ್ಯಾಮರಾಯ ಕೈಯಲ್ಲಿ ಭಲ್ಲೆಯನ್ನು ಹಿಡಿದುಕೊಂಡು ಪ್ರವೇಶಿಸುತ್ತಾನೆ. ಒಳಗೆ ಬಾದೊಡನೆ, ಅತ್ತಿತ್ತ ಸುತ್ತಾಡಿ ಇಣಿಕಿಣಿಕಿ, ಹಣಿಹಣಿಕಿ ಎಲ್ಲ ಕಡೆಗೂ ನೋಡುತ್ತ ತನ್ನಷ್ಟಕ್ಕೆ ಮಾತು ಪ್ರಾರಂಭಿಸುವನು.]

ಶ್ಯಾಮು :— ಮೊಲವ ಬೆನ್ನುಹತ್ತಿ ನಾ ಇವರ ಮನಿಯೊಳಗ ಬಂದೆ. ಇಲ್ಲಂತೂ ಅನು ಕಾಣೋದೇ ಇಲ್ಲ ! ಹಂಗಾರ ಎಲ್ಲಿ ಮಾಯಾಗಿದ್ದೀತು ? (ಭಲ್ಲೆಯನ್ನು ಮೇಜಿನ ಮೇಲಿಟ್ಟು ಕೂಡುತ್ತಾನೆ.) ಉಶ್ಶ್ಶ್ಶ್ ! (ಬೆವರನ್ನೊರಸಿಕೊಳ್ಳುತ್ತ) ಬಲ್ಲಾ, ಈ ಮೊಲಕ್ಕ ಬಾಳ ಜರ ಹತ್ತು ಹನ್ನೆರಡಾಣೆ ಬೆಲಿ ಬೀಳಬಹುದಾಗಿತ್ತು ; ಅದಕ್ಕಾಗಿ ಈಗ ಆರು ತಾಸಿನಿಂದ ಅಡಬರಸ್ತಾ ಇದ್ದೀನಿ ! ಪಂಜರಾ ತೊಳಿಯುವಾಗ ಪುಟ್ಟಕ್ಕನ ಜಿಗಿದು ಹೊರಬಿದ್ದ ನೊಲ, ಒಬ್ಬ ಅಳಿಯ ದೊರೀತಾನೆ ಅಂತ! ಹಾಂಗಃ ಆತ್ಯು! (ಹರ್ಯಾ ಬರುತ್ತಾನೆ

ಯಾರು ? ಹರ್ಯಾ ! ಏನೋ, ಕೈಯಾಗ ಚೀಟು ಯಾಕರದು ?

ಹರ್ಯಾ :— ನೋಡ್ರಿ, ನೀವಽ. (ಮೆಲ್ಲಗೆ) ನಿಮಗ ಬು
ಎದ್ದರ ಕಿವುಡಗ್ಯಾಕ ಮಗಳ್ನ ಕೊಡ್ತಿದ್ದಿರಿ !

ರಾವ್ :— (ಚೀಟಿಯನ್ನೋದಿ ಹರ್ಷದಿಂದ) ಅಲೆಲೆಲೆಲೆ !

ಕರ್ಯಾ :— ಏನಾತು ರಾವಸಾಬ್ ?

ರಾವ್ :— ಬಂದರು ! ಕೊನೀಗೆ ಬಂದೇ ಬಿಟ್ಟರು !

ಬರ್ಯಾ :— ಯಾರು ಬಂದರ್ರೀ ರಾವಸಾಬ್ ? (ಮೆಲ್ಲಗೆ) ತಲೀಗಿಲೀ ಕೆಟ್ಟಽತೊ ಏನೋ ಅಂತೀನಿ !

ರಾವ್ :— ಹೊ— ಹೊರಗಿನ್ನ ಪೋಲಿಯೊಳಗ ಕೂತಾರ ಕಾಣಸ್ತ ಪಾರಾದಿವಿ ! ಇಲ ವೈದ್ಯರು ! ಇವತ್ತ ಏನು ಯೋಗಾಯೊ ಮ್ಯಾಲಽ ಬೀಳೋಡನೆಂದದ ಮ್ಯಾಲ ಅನಂದ ! ಅನಂದದ ಮ್ಯಾ ನೂರು ತೆರುವ ಪ್ರಸ

ಕರ್ಯಾ :— ಬೋ(ಧಾವಿಸುತ್ತ ಹೋಗುವರು. ಕಚಿ ಬರುವಳು.) ಕಿತ್ತಲೇ ಬೇಕು ! (ಏನೋ ಹರ್ಯಾ ? ಹೀಂಗ್ಯಾಕ ಓಡಿದರು ಅಪ್ಪ ತ್ತಾನೆ, ರಾವ್‌ಸಾಹೇಬರೆ ಏನು ?

ಕಚಿ :— ಎತ್ತಾನೆ; ಹರ್ಯಾ ಕಾಣಿವರಿಗೆ ? ಅವರಿಗಿವತ್ತ ಅಳಿಯನ ಮಲರೊ ತೋಟದ ಕಾವಲುಗಾರ ಕಾಗ !

ಕೋ. ಕಾವಲುಗಾರ :— ನಿನ್ನ ನಾಲಿಗಿ ಬಹಳ ಉದ್ದಾಗಿ

ಹರ್ಯಾ :— ಇನ್ನೆಲ್ಲಿ ಓಡ್ತೀ,

ರಾವ್ :— ಕಟ್ಟಪಾಕಿರಿ ಕಳ್ಳನ್ ತೆಪ್ಪೈತ್ರಿ ಅಕ್ಕಾವರ ? ಆ ನಮ್ಮ ಪರವಾನಿಗಿಲ್ಲದ ತೋಟದಾಗ ಹೊಕ್ಕ ಅಳಿಯ ಸಿಗವಲ್ಲ, ಸಿಗವ ಮಾಡಿದಿರಿ ! ಏನಿದರರ್ಥ ? ಹೆಸರೇನ್ನಿಮ್ಮದು .

ಹರ್ಯಾ :— ರಾಯರಿಗೇನಂತ ಕರೀತಾರ ?

ಶ್ಯಾಮು :— (ಸ್ವಗತ) ಏನ್ ಮಾಡಬೇಕಿನ್ನ ? ಇವರಿಗೇನಂ ಹೆಸರೆತ್ತೇಳ್ಬೇಕು ?

ಹರ್ಯಾ :— ಅಲ್ರೀ ನಾವಿಬ್ಬರೂ ಹೆಸರೇನೂ ಅಂತ ಗ್ಯಾ ಹರಿಯೋ ಹಾಂಗ ಕಿರ್ಚಿಕೊಂಡರೂ ನೀವು ಕಿವಿಗೊಡಕ್ಕ ಅಂದರ— ನಮ್ಮ ರಾವಸಾಬರ್ಹಾಂಗ—ಏನ್ ಕಿವುಡ-ಗಿ ಆದೀರೋ ಏನು ಅಂತೀನಿ ?

ಶ್ಯಾಮು :— (ಸ್ವಗತ) ಅಂ, ಇದೊಂದು ಚೆಲೋ ಹೆಚ್ಚಿನ ಹೇಳಿಕೊಟ್ಟ ! ನಾನೂ ಪಕ್ಕಾ ಕಿವುಡನ್ಹಾಂಗs ನಟಿ ಹ್ಯಾಂಗಾದೀತು ?

ರಾವ್ :— ಏನಂತಾನೊ ಅಂವ ?

ಹರ್ಯಾ :— ಮನಸಿನ್ಯಾಗs ಏನೇನೊ ಗುಣಗುಟ್ಟಾಕ ಹತ್ಯಾನ್ರಿ

ಶ್ಯಾಮು :— (ಸ್ವಗತ) ನೋಡೋಣ ಹಂಗಾರ ಈ ಯುಕ್ತಿ ಸಾಧಿಸಿದರ !

ಹರ್ಯಾ :— ಏನ್ರಿ ? ಏನ್ ಬೇಕು ನಿಮಗ ?

ಶಚಿ :— ನನಗೇನು ಖರೇ ಕಾಣಿಸವಲ್ಲದು?!

ಹರ್ಯಾ :— ನನ್ನ ಮಾತು ನಂಬರಿ, ಅಕ್ಕಾವರ ! ದೇವರ ತನಕಾ ೬ರಿ !

ಶಚಿ :— (ದುಃಖದಿಂದ ಕಣ್ಣೊರಸಿಕೊಳ್ಳುತ್ತಾ) ಇಷ್ಟು ಅವರು ವುಡರಿದ್ದಾರ ? ಅವ್ವಾ ! ನಂದೇನು ಗತಿ ಆತ್ಮೋ ಅಂತೀನಿ ! ಷ್ಟು ದಿವಸ ನನ್ನ ಪ್ರೀತಿಯಿಂದ ಬೆಳಸಿ ಒಬ್ಬ ಕಿವುಡನ ಕೊರಳಿಗೆ ಷ್ಟ ಕಟ್ಟವರು ಇನ್ನ !

ಹರ್ಯಾ :— ಅಕ್ಕಾವರ, ಇನ್ನ ಹೆಣ್‌ಮಕ್ಕಳ್ಹಾಂಗ ಅಕ್ತು ಯಿದೆ ಇಲ್ರಿ ! ರಾವಸಾಬರು ಬೇಕಾದಟು ಚಾಲೊರದರೂ ಮ್ಮ ಕಬೂಲಿ ಇಲ್‌ದಿರಕ ಮಾಡವರೇನ್ರಿ ? ನೀವು ಈಗ ಒಂದು ಾತು ಗಟ್ಟಿ ಹಿಡೀರಿ—ಬೇಕಾದ್ದಾಗಲಿ, ಇವರ್ನ ಮಾಡಿಕೊಣ್ಣೂ ಂಗಿಲ್ಲ ಅಂತ !

ಶಚಿ :— ಹೌದು, ಹಾಂಗs ಮಾಡ್ತಿನಿ ! ಪ್ರಾಣಹೋದರೂ ಮದಿವಿಗೆ ಒಪ್ಪೋಹಾಂಗಿಲ್ಲ !

ಹರ್ಯಾ :— ಹಂಗಾರ, ನಿಮ್ಮನ್ನ ಯಾರಿಗೆ ಕೊಡಬೇಕು ಅಂತ ಾಡ್ಯಾರಲ್ರಿ—ಆ ರಾಯರು ಆ ಕ್ವಾಣ್ಯಾಗ ಅದಾರು—ಅವರನ್ನ ೂರಗ ಕರೀತೀನು, ಹೇಳಬಿಡ್ರಿ ಹಾಂಗs ಅಂತ !

ಶಚಿ :— ಹೇಳ್ಕಿಕ್ಕೆ ನಾ ಅಂಜತೀನೇನು ? ಅಪ್ಪನ ಒಪ್ಪಿಗಿಲ್ಲದ ಾ ಮದಿವೀ ಮಾಡಿಕೊಳ್ಳಲಾರೆ ಅಂತಿದ್ರ, ನನ್ನೊಪ್ಪಿಗಿಲ್ಲದ ಪ್ಪನರೆ ನನ್ನ ಮದಿವೀ ಹ್ಯಾಂಗ ಮಾಡ್ತಾರ ? ನಾ ಅಂತೂ ಂಡಿತ ಹೇಳೇ ಬಿಡ್ತೀನಿ !

ಹರ್ಯಾ :— ಹೀಂಗ ತುಸು ಜಿಗಟು ತೋರಸ್ರಿ ! ಹಂಗಾರ ರ್ನ ಹೊರಗ ಕರೀಲೇನ್ರಿ ?

ಶಚಿ :— ಕರಿ ! ಆಗೇ ಹೋಗಲಿ !

ಹರ್ಯಾ :— (ಬಾಗಿಲು ಬಡಿದು) ರಾ ಯ ರ, ರಾ ಯ ರ, ಮ್ಮನ್ನ ಕಾಣಾಕ ಯಾರೋ ಬಂದಾರ್ರಿ !

ಶ್ಯಾಮು :— (ಬಾಗಿಲನ್ನು ತೆರೆದು, ಹೊರಗೆ ಬಂದು, ಆಶ್ಚರ್ಯದ ಸ್ವಗತ) ಎಲೆ, ಈಕೆಯಂತೂ ಆಕಿ !

ಶಚಿ :— (ಸ್ವಗತ) ಎಲಾ ! ಇವರಂತೂ ಅವರು ! (ಪ್ರಕಾಶಗಿ) ತಾವು ಇಲ್ಲೆ ಹ್ಯಾಂಗ ಬಂದಿರಿ ?

ಹರ್ಯಾ :— (ಸ್ವಗತ) ಎಲಾ ಇವನ ! ಇವೂ ಹಕ್ಕಿ ಕೂಡಿದ್ದ ! ಇವರದೂ ಇವರದೂ ಮುಂಜಾಗ ಕೂನ ಇದ್ದಾಂಗೈತಲಾ! ಎೀತಽ ಹಂಗಾರ !

ಶಚಿ :— ಅಂದು ನೀವು ನಮ್ಮ ಸೋದರಮಾವನ ಮನೀಗೆ ಾಟಕ್ಕ ಬಂದಿದ್ದಿರಲ್ಲಾ.....

ಶ್ಯಾಮು:— (ಸ್ವಗತ) ಕಿವುಡನ್ಹಾಂಗ ಸುಮ್ಮನs ನಿಂತು ತ್ತೀನಿ !

ಹರ್ಯಾ :— ಅಕ್ಕಾವರ, ಅವರಿಗೆ ಕಿವೀ ಬಾದರಿ ! ಕ್ಯಾಟ ಳು !

ಶಚಿ :— ಏನೋ ಮೂರ್ಖಾ, ಯಾರು ಹೇಳಿದರು ನಿನಗ ಇವರು ಕಿವುಡರಿದ್ದಾರ ಅಂತ ?

ಹರ್ಯಾ :— ಹೇಳಾಕ ಯದಕ್ಕ ಬೇಕರಿ ! ಅಟು ಈಟು ಕಿವುಡಲ್ರಿ ! ಕಿವುಡತನದಾಗ ನಿಶಾನೀ ಹಚ್ಚ್ಯಾರ್ರಿ ! ಇವರದಟು ಗಮ್ಮತ್ ಮಾಡಲೇನ್ರಿ ! ನೀವು ಸುಮಾಕಿರ್ರಿ! (ಶ್ಯಾಮರಾಯರಿಗೆ) ಇದು ನೋಡ್ರಿ ರಾಯರ, ನೀವು ರಾವಸಾಬರ ಮನಸಿಗೆ ಬಂದಿದ್ರೂ ಅಕ್ಕಾವರಿಗೆ ಒಪ್ಪಿಗಿ ಆಗಿಲ್ರಿ ! ಅದಕ ಸುಮಾಕs ಇನ್ನ ಹಾದೀ ಹಿಡೀರಿ !

ಶ್ಯಾಮು :— (ಶಚಿಗೆ) ಇದು ನಿಮ್ಮ ಮನೀ ಅಂಬೋದು ಗೊತ್ತಿರಲಿಲ್ಲ ! ಸಂತೋಷಾತ್ಯ ! (ಹರ್ಯಾ ಗಹಗಹಿಸಿ ನಗುತ್ತಾನೆ.)

ಶಚಿ :— ಹರ್ಯಾ, ಕತ್ತೆ, ನಗಲಿಕ್ಕೇನಾತ್ಯೊ ?

ಹರ್ಯಾ :— ನಗಬ್ಯಾಡ ಅಂವರ ಏನ್ ಮಾಡ್ಲಿರಿ ? ನಾ ಮಾತಾಡಿದ್ದೇನು ? ಇವರು ಉತ್ತರಾ ಕೊಟ್ಟಿದ್ದೇನು ! ಒಂದಕ್ಕೊಂದು ಸಮ್ಮಂದ ?

ಶಚಿ :— (ಗಟ್ಟಿಯಾಗಿ) ಹರ್ಯಾ ಅನ್ನೋಹಾಂಗ.....ನಿಮಗ ಕೇಳಿಸೋದಿಲ್ಲೇನು ?

ಶ್ಯಾಮು :— ಉಂ. ಹುಂ!

'ಬಗನ' ಬಾಲಾಮೃತ

ಮಕ್ಕಳ ಸಧೃಡತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿ.

ಮುಂಜಾಗ್ರತಾ ಮಕ್ಕಳ ಯಾಕೃತ್ತು ಮತ್ತು ಹೊಟ್ಟೆ ಸರಿಯಾಗಿ ಇರಬೇಕು, ಎಂದರೆ ಅವರಿಗೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಶಚಿ :— ನಾವು ಮೊನ್ನೆ ಭೆಟ್ಟಿ ಆದಾಗ, ನಿಮಗ ನೆಟ್ಟಗ ಕೇಳಸ್ತ ಇತ್ತು ! ಇಷ್ಟರಾಗಽ ಹ್ಯಾಂಗ ಕಿವುಡರಾದಿರಿ ಎಲ್ಲಾ ಆಶ್ಚರ್ಯದ ಮಾತಽ !

ಹರ್ಯಾ :— ಹಾಂಗಽ ಐತಿರಿ ಇಸಮು !

ಶ್ಯಾಮು :— ಶಚಿ, ನಿಮ್ಮ ಸೋದರಮಾವನ ಮನೆಯಲ್ಲಿ ನಾವು ಪರಸ್ಪರರು ಭೆಟ್ಟಿ ಆಗಿದ್ದೆವಲ್ಲಾ—ಆಗ ನನಗ ನೆಟ್ಟಗ ಕೇಳಸ್ತ ಇತ್ತು. ಆದರ ಅನಂತರ—ಒಂದು ದಿನ ಟಾಂಗಾದ ಮ್ಯಾಲಿಂದ ಬಿದ್ದ ನಿಮಿತ್ತಾಗಿ, ತಲೀಗೆ ಪೆಟ್ಟು ಬಡಿದು, ನನ್ನ ಕಿವೀನೇ ಕೇಳಸದಂತಾದವು !

ಶಚಿ :— ಅಯ್ಯೋ ಪಾಪ !

ಶ್ಯಾಮು :— ಶಚಿ, ಬೇರೆಯವರ ಮಾತು ನನಗ ಕೇಳಸದಿದ್ದರೂ ನಿನ್ನೆ ಮಾತು ನಿನ್ನ ತುಟಿಮೇಲಿಂದಲೇ ಗುರುತಿಸ್ತೀನಿ !

ಶಚಿ :— ನಿಜವಾಗಿ ?

ಶ್ಯಾಮು :— ನೀನು ಈಗ 'ನಿಜವಾಗಿ' ಅನಲಿಲ್ಲ ?

ಶಚಿ :— ಹೌದು !

ಶ್ಯಾಮು :— ಹಂ, ಹ್ಯಾಂಗ ಗುರ್ತಿಸಿದೆ ?

ಶಚಿ :— ಅಧ್ಯಾಂಗ ಗುರ್ತಿಸಿದಿರಿ ?

ಶ್ಯಾಮು :— ನಿನ್ನ ಎಲ್ಲಾ ಮಾತೂ ನಿನ್ನ ತುಟಿ ಅಲ್ಲಾಡುವದರ ಮೇಲಿಂದ ಊಹಿಸ್ತೀನಿ !

ಹರ್ಯಾ :— (ಮೆಲ್ಲಗೆ) ಪಕ್ಕಾ ಶಾಣ್ಯಾ ಅದಾನಿವ ! ಹರಕತ್ತಿಲ್ಲ ! (ಪ್ರಕಾಶವಾಗಿ) ಅಕ್ಕಾವರ, ಇದರಾಗೇನು ಬಹಳಽಟು ಶಾಣೇತನ ಇಲ್ಲಬಿಡ್ರಿ ! ಕಳೇಹಿಡಿದೂ ಮಾತಾಡೋದ್ರಿ ! ಕಣ್ಣಿಗೆ-ಎಂದಽರಽ ಕಿವೀ ಕೆಲಸಾ ಮಾಡಾಕ ಆದೀತ್ರಿ ?

ಶಚಿ :— ನೀ ಹೇಳೋ ಹಾಂಗ ಖರೆ ಅಐತ ಹರ್ಯಾ ! (ಸ್ವಗತ) ಇವರ ಮ್ಯಾಲ ಮನಸು ಹರೀತದ! ಕಿವಿಯೊಂದು ಕೇಳಸ್ತಽ ಇದ್ದರ ಎಷ್ಟು ಒಳ್ಳೇದಿತ್ತು ! ಆದರ ಕಿವಿಯಿಲ್ಲದ ಎಲ್ಲಾ ಹಾಳು ! ಇಂಥ ಕಿವುಡರ್ನ ಕಟಗೊಂಡು ನಾ ಎಲ್ಲಿ ಸಾಯಲಿ ! ಬ್ಯಾಡ ನಂತಾಯಿ ! ನಾ ಮರ್ಯೋ ಒಲ್ಲೆ ! ಆದರೂ.....

(ಹೋಗುವಳು)

ಶ್ಯಾಮು :— ಎಲೆ, ಇದೆನಾತ್ಯು ! ಒಮ್ಮೆಲೆ ಗಾಳೀ ಹಾಂಗ ಹೋಗೇ ಬಿಟ್ಟಳು !

ಹರ್ಯಾ :— (ಅಣಕಿಸಿ) ಹೋಗೇ ಬಿಟ್ಟಳು ! ಹೋಗದಿದ್ದರ ನಿನ್ನಂಥಾ ಕೆಪ್ಪನ್ನ ಗಂಟುಹಾಕ್ಕೊಂಡು ಜೀವಾ ಕೊಡು ಅಂತೀಯೇನು ? ಅಲ್ಲೋ ಪೆದ್ದಾ, ನಿನಗ ಅಕಲುಽ ಗಿಕಲು ಕುಸು ಅರೀ ಐತೇನು ?

ಶ್ಯಾಮು :— (ಸಿಟ್ಟಾಗಿ ಹರ್ಯಾನ ಬೆನ್ನ ಮೇಲೆ ಗುದ್ದುತ್ತ) ಕತ್ತೆ, ನಾ ಪೆದ್ದ ? ಕೆಪ್ಪ ? ನನಗ ಅಕ್ಕಲಿಲ್ಲ ? ತೋರಸ್ತೀನಿ ? ನಿಲ್ಲು ನಿನಗ ಅಕ್ಕಲು ! (ಮತ್ತೆ ಏಟು ಹಾಕುವನು.)

ಹರ್ಯಾ :— ಸಾಯ್‌ತೀನ್ರಿ ರಾ ಯ ರ ! ಹೊಡೀಬ್ಯಾಡ್ರಿ ಬಿಡ್ರಿ ರಾಯರ ! ನಿಮ್ಮ ಕಾಲ್ ಬೀಳ್ತೀನಿ ! ಕೈಮುಗಿತೀನ್ರಿ ನಾ ಅನ್ನೋದಿಲ್ರಿ ಹಾಂಗ ! ನಿಮಗ ಕೇಳಸ್ತೈತ್ರಿ ಪಾಡಾಗಿ ನಾ ಕಬೂಲ್ ಮಾಡ್ತೀನ್ರಿ !

ಶ್ಯಾಮು :— ಹಾಂ, ಕೇಳಿಸದರೂ ಎಲ್ಲಾರ ಹಾಂಗ ಕೇಳಸೋದಲ್ಲ !

ಹರ್ಯಾ :— ಹಂಗಾರ ಹ್ಯಾಂಗ ಕೇಳಸ್ತೈತ್ರಿ ? ಬೇಕಾದಾಗ ಕೇಳಸ್ತೈತಿ, ಬ್ಯಾಡಾದಾಗ ಕೇಳಸೋದಿಲ್ಲ ! ಹೀಂಗ ಬ್ಯಾರೇ ಇತೇನ್ರಿ !

ಶ್ಯಾಮು :— ಮಗನಽ, ಹಾಂಗಲ್ಲ ! ರಾವಸಾಹೇಬರಿಗಷ್ಟಽ ನಾ ಕಿವುಡ ! ಉಳಿದವರ ಮುಟ್ಟಿಗೆ..... ...

ಹರ್ಯಾ :— ಎಲಾ ಇವನ ! ತಿಳದಾಂಗಾತು ಬಿಡ್ರಿ !

ಶ್ಯಾಮು :— ಆದರ ಲಕ್ಷ್ಯದಾಗಿಡು....ಇದನ್ನ ರಾವಸಾಬರಿಗೆ ತಿಳಿಗೊಟ್ಟೀ ಅಂದರ ನಿನ್ನ ತಲೀ ಬುರುಡಿ ಎರಡು ಹೋಳಽ !
(ಮತ್ತೆ ಹೊಡೆಯಲು ಹೋಗುತ್ತಾನೆ.)

ಹರ್ಯಾ :— ಬ್ಯಾಡ್ರಿ ಕಾಲುಬೀಳ್ತೀನಿ ! ನೀವು ಹೇಳಿದಾಂಗ ಕೇಳ್ತೀನ್ರಿ ! ಅಲ್ರಿ ರಾಯಽ, ನಿಮಗ ಕೇಳಸೋದಿಲ್ಲ ಅಂತ ನಾ ನಿಮ್ಮ ಯಿರುದ್ಧ ಮಾತಾಡಿದಿನ್ರಿ ! ನಮ್ಮಂಪಾಗಽ ನಿಮ್ಮ ಕೇಽ ಬೇಕಾದಾಂಗದಾವು ಅಂದಮ್ಯಾಲ, ನಾ ಈಗ ನಿಮ್ಮ ಕಡೇನರ್ರಿ ! ನೀವು ಹೇಳಿದಾಂಗ ಕೇಳ್‌ತೀನ್ರಿ !

ರಾವ್ :— (ಒಳಗಿನಿಂದ) ಹರ್ಯಾ ———

ಹರ್ಯಾ :— ರಾವಸಾಬರಽ ಬಂದರು ! ನೀವು ಮಾತ್ರ ಸುಮ್ಮಾ ಳಸ್ರಿ ! ಈ ನಿಮ್ಮ ಕಿವೀಗುಟ್ಟು ರಾವಸಾಬರಿಗೂ ತಿಳೀದಾಂ ಹುಶಾರಿರ್ರಿ ಆತು !

ಶ್ಯಾಮು :— ಅದರ ಚಿಂತೀ ಬಿಡು ! ಎರಡು ಹೆಜ್ಜೀ ಮ್ಯಾಲಿ ಮುಲುಖಮೈದಾನ ತೋಫಿನ ಸಪ್ಪಳ ಸಹಿತ ಕೇಳಿಸಲಿಲ್ಲಧಾಂ ಕೂತರಾತಿಲ್ಲೊ !

ರಾವ್ :— (ಒಳಗಿನಿಂದ) ಹರ್ಯಾ ———

ಹರ್ಯಾ :— ರಾಯರ, ರಾವಸಾಬರು ! ನೀವಿನ್ನ ಶ್ವಾಟದಾ ಹೋಗಿ ಓದಿಕೊಂತಽ ಕುಂತು ಬಿಡ್ರಿ ! ಎಲೀ ಬಡಿಸಿದರೂ ಅಂದ ನಾ ಎಲ್ಲಾ ಕರಿಯಾಕ ಬರ್ತೀನು ! ಹೋಗರಿ ನೀವು ! ನಾನ ಹೋಕ್ಕೀನು !

ಶ್ಯಾಮು :— ಒಳ್ಳೇದು.

(ಇಬ್ಬರೂ ಹೋಗುತ್ತಾರೆ. ರಾವ್‌ಸಾಹೇಬರು ಅನಂತ-ಶಂಕ್ರಮುಖ ಬರುತ್ತಾರೆ.)

ರಾವ್ :— ಅಹಹ ! ಪ್ರತ್ಯಕ್ಷ ಧನ್ವಂತರೀ ಅವತಾರ ! ಪ್ರತ್ಯಕ್ಷ ಧನ್ವಂತರೀ ಅವತಾರ ! ಇದುವರೆಗೆ ವೈದ್ಯರ ಮ್ಯಾಲ ನನಗ ನಂಬಿಕೆ ಇರಲಿಲ್ಲ ! ಆದರ ಈ ಭೈರವ ಶಾಸ್ತ್ರಿಗಳು ತೋರಿಸಿದ ಚಮತ್ಕಾರದಿಂದ ನಾನಂತೂ ಥಕ್ಕಾದೆ ! ಯಾವದೋ ಒಂದು ಹಿಮಾಲಯದ ದೊಳಗಿನ ಬೇರಂತ— ತೆಯಿದು, ಹೀಂಗ ರಸಾ ತೆಗೆದು ತೋ

ಹಿಂಡಿದರೋ ಇಲ್ಲೋ, ಹತ್ತು ನಿಮಿಷದಾಗ ಶಾಕೋಶಾಕ್ ಕಿವಿ ಉತ್ತಮ ಕೇಳಿಸಲಿಕ್ಕೆ ಹತ್ತಿದುವು! ಶಾಬಾಸ್ ಭೈರವಶಾಸ್ತ್ರಿಗಳೇ! ಧನ್ಯರು ನೀವು! ಆಹಹ! ನನ್ನ ಭಾಗ್ಯಕ್ಕ ಸೀಮಾನs ಇಲ್ಲ! ನನ್ನ ಭಾಗ್ಯಕ್ಕ ಸೀಮಾನs ಇಲ್ಲ! ನಾ ಎಂಥಾ ಧೈವಾನ! (ಆನಂದದ ಉದ್ಗಾರ, ನಗು.)

ಶಚಿ:— (ಪ್ರವೇಶಿಸಿ) ಅಂ, ಅಪ್ಪ ಹೀಂಗ ಹುಚ್ಚುಚ್ಚ-ನ್ಹಾಂಗ ಕೈ-ಬಾಯಿ ಯಾಕ ತಿರುವ್ಯಾಡಲಿಕ್ಕೆ ಹತ್ತ್ಯಾರ? ಇವರ ಪ್ರಕೃತಿಯೊಳಗ ಏನಾದರೂ ಹೆಚ್ಚು ಕಡಿಮಿ ಆಗಿದ್ದೀತೇನು? ಅಥವಾ ಕಿವುಡ ಅಳಿಯ ಸಿಕ್ಕ ಅಂತ ಹರ್ಷವಾಯು ಆಗೇದೋ ಏನ್ಮನ್ನೋ!

ರಾವ್:— ಬಾ ಮಗು. ನಿನಗೊಂದು ಬಹಳ ಆನಂದದ ಸುದ್ದಿ ಹೇಳೋದದ!

ಶಚಿ:— (ಸಿಟ್ಟಿನಿಂದ) ನೀವು ಹೇಳೋದೇನು ಬೇಕಾಗಿಲ್ಲ! ನನಗ ಆಗಽ ಗೊತ್ತಾಗೇದ!

ರಾವ್:— ಏನಂತೀಯೇನು, ಮಗು! ಈಗ ನಾ ಕಿವುಡನಿಲ್ಲ! ನನಗ ಎಲ್ಲಾರ್ಹಾಂಗs ನೆಟ್ಟಗ ಕೇಳಸ್ತsದ!

ಶಚಿ:— (ಆಶ್ಚರ್ಯದಿಂದ) ಅಪ್ಪಾ, ಇದೇನು? ನಿಮಗ ಛಲೋ ಕೇಳಸ್ತದಲ್ಲ! ಇದು ಚಾಷ್ಟಿ ಅಲ್ಲ ಹೌದಲ್ಲೊ?

ರಾವ್:— ಚಾಷ್ಟಿ? ಚಾಷ್ಟಿ ಯಾತಕ್ಕ ಮಗು! ನಿಜವಾಗಿ ಶಚಿ, ನನಗೀಗ ಸ್ಪಷ್ಟ ಕೇಳಸ್ತsದ! ಹದಿನೈದs ನಿಮಿಷ ಆಗಿದ್ದೀತು! ಆ ಭೈರವ ಶಾಸ್ತ್ರಿ! ವಾಹವಾ! ಪ್ರತ್ಯಕ್ಷ ಪರಮೇಶ್ವರನ ಅವತಾರ! ಒಂದು ಬೇರಿನ ರಸಾ ಕಿವಿಯೊಳಗ ಹಿಂಡಿ ನನ್ನ ಹನ್ನೆರಡು ವರ್ಷದ ಕಿವುಡು, ಹತ್ತು ನಿಮಿಷದಾಗ ಸಂಪೂರ್ಣ ಗುಣಪಡಿಸಿದ!

ಶಚಿ:— (ಗಟ್ಟಿಯಾಗಿ ಕೂಗಿ) ಇದು ಖರೇನs ಅಪ್ಪಾ?

ರಾವ್:— (ಕಿವಿಯ ಮೇಲೆ ಕೈಯಿಟ್ಟು) ಅಯ್ಯೋ! ಇದಕ್ಕೂ ತುಸು ಮೆಲ್ಲಗ ಮಾತಾಡವಾ! ನಾ ಮೊದಲಿನ್ಹಾಂಗ ಕಿವುಡ ಉಳಿದಿಲ್ಲ ಈಗ!

ಶಚಿ:— (ಗಟ್ಟಿಯಾಗಿ) ಆದರ ಇನ್ನೊಂದಪಾ.....

ರಾವ್:— ಅಯ್ಯೊ ರಾಮಾ! ತುಸು ಮೆತ್ತಗ ಮಾತಾಡವಾ!

ಶಚಿ:— ನಾ ಅರೇ ಏನ್ಮಾಡಲಿ? ಇಷ್ಟು ವರ್ಷದ ಅಭ್ಯಾಸ!

ರಾವ್:— ಇದಕ್ಕೂ ಮೆಲ್ಲಗ ಮಾತಾಡು! ಈ ಧನಿ ಸಹಿತ ನನಗ ಸಹನಾಗೋದಿಲ್ಲ!

ಶಚಿ:— ಆಗಲಿ! ಅಪ್ಪಾ, ಮತ್ತ ನಾ ಅವರ್ನ ನೋಡಿದೆ!

ರಾವ್:— ಯಾರ್ನ ನೋಡಿದಿ? 'ನೋಡಿದೆ' ಅಂದದ್ದು ಎಷ್ಟು ಸಲೀಸಾಗಿ ಕೇಳಸಿತು! ಯಾರನ್ನ ನೋಡಿದಿ ಮಗು?

ಶಚಿ:— ಅವರನ್ನ

ರಾವ್:— ಅವರನ್ನ! ನೋಡು, ಈ ಒಂದು ಶಬ್ದ ಸಹಿತ ಹ್ಯಾಂಗ ನಿಚ್ಚಳಾಗಿ ಕಿವಿಗೆ ಬಿತ್ತು! ಒಳ್ಳೇದು, ಅವರನ್ನ ಅಂದರ ಯಾರನ್ನ ಮಗು?

ಶಚಿ:— (ನಾಚಿಕೆಯಿಂದ) ನಾ ಹ್ಯಾಂಗ ಹೇಳ್ಲಿನ್ನ? ನೀನು ಯಾರ್ನ ನನಗಾಗಿ....ನನಗ ನಾಚಿಗಿ ಆನಸತsದ ಹೋಗಪಾ!

ರಾವ್:— ಹೌದು! ಹೌದು! ಇಷ್ಟೊತ್ತು ನಾ ಮರತsಬಿಟ್ಟದ್ದೆ ಅವರ್ನ! ಇದು ನೋಡು, ನಾ ಈಗ ನಿಶ್ಚಯಿಸಿದ್ದು ಅಂದರ.....

ಶಚಿ:— ಅಪ್ಪಾ, ಮೊದಲ ಇದರ ಬಗ್ಗೆ ನಿನ್ನ ಮ್ಯಾಲ ನನಗ ಬಹಳ ಸಿಟ್ಟು ಬಂದಿತ್ತು! ಆದರ ಅವರ್ನ ನೋಡಿದ ಮ್ಯಾಲ.....

ರಾವ್:— ಏನಾತ್ಯೆ? ನೋಡಿದ ಮ್ಯಾಲ ಏನಾತ್ಯೆ, ಮಗು?

ಶಚಿ:— ಅವರದು ನನ್ನದು ಮೊದಲಿನ ಗುರ್ತಾನs ಹತ್ತಿತು!

ರಾವ್:— ಹಾಂ, ಶಚಿ, ಅದನ್ನೆಲ್ಲಾ ಇನ್ನ ಮರತುಬಿಡು!

ಶಚಿ:— ಏಂದರ? ಅಂತೀಯಾದರೂ ಏನ್ನೀನು? ನೀನಾಗೇ ಅವರ್ನ ಅಳಿಯ ಅಂತ ಅರಿಸಿಕೊಂಡು.....

ರಾವ್:— ಹೌದು, ಆರಿಸಿದೆ; ಆದರ ಆ ನ ಮಾತು ಬ್ಯಾರೆ! ಆಗ ನಾ ಥೇಟ್ ಕಿವುಡನಿದ್ದೆ! ಈಗ ಕಾಣ್ಕಾಕಾಣಾ ಕಿವುಡಗ್ಯಾಕ ನಿನ್ನ ಕೊಡಲಿ?

ಶಚಿ:— ಅಪ್ಪಾ, ನಾನೂ ಹಾಂಗs ಅಂದುಕೊಂಡಿದ್ದೆ! ಆದರ ನಿನ್ನ ಕಿವುಡು ಗುಣ ಆದ್ಹಾಂಗs ಅವರದೂ ಗುಣ ಆದರ! ನಿನ್ನ ಗುಣಪಡಿಸಿದ ವೈದ್ಯನs ಇವರ್ನೂ.....

ರಾವ್:— ಛೇ, ಅವನ ಕಿವುಡೇನು ನೆಟ್ಟಗಾಗತsದ? ಶಚಿ, ಇನ್ನ ಮ್ಯಾಲ ಆ ಕೆಪ್ಪನ ಹೆಸರು ಕೂಡ ಎತ್ತಬ್ಯಾಡ! ಅಪ್ಪೇ ಅಲ್ಲ, ಅವನ ಕಣ್ಣಿಗೆ ಸಹ ಬೀಳಬ್ಯಾಡ!

ಶಚಿ:— (ನಿಟ್ಟುಸಿರು ಬಿಟ್ಟು ಸ್ವಗತ) ಇವರದೂ ಆಶಾ ಉಳೀಲಿಲ್ಲ!

ರಾವ್:— ಯಾಕ? ಉಸರುಗರೀತ ಯಾಕ ಹೀಂಗ, ಮಗು? ಮುದಿವ್ಹೀ ಬಗ್ಗೆ ಇಷ್ಟೊಂದು ಅಧೀರಳಾಗಬ್ಯಾಡ! ಶಚಿ, ಇವತ್ತ ಬೆಳಿಗ್ಗೇ ಒಂದು ಪತ್ರ ಬಂದsದ! ಉತ್ತಮ ವರಾ ಅದ!

೫೫ ವರ್ಷಗಳಿಂದ ಅನುಭವಪಟ್ಟ

ಕರೀರ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೪-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರೀರ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಶಚಿ :— ಅಪ್ಪಾ, ನಾ ಇನ್ನ ನಿನಗ ನಾಚಿಗೀ ಬಿಟ್ಟು ಹೇಳಬಿಟ್ತಿನಿ! ಇನ್ನ ಮ್ಯಾಲ ನನಗಾಗಿ ವರಾ ನೋಡೋ ಉಸಾಬರಿ ಮಾಡಬ್ಯಾಡ! ನನಗ ಬೇಕಾಗೋ ವರಾ ನಾನs ಹುಡಿಕ್ಕೋತೀನಿ?! ನೀ ಏನs ಹೇಳಿದರೂ ನಾ ಏನೂ ಇನ್ನ ಳಗೋ ಆಕಿ ಅಲ್ಲ!

ರಾವ್ :— ಎಂಥಾ ಕೆಟ್ಟ ಹಟಮಾರಿ ಹುಡಿಗಿ ಆದೆವಾ!

ಶಚಿ :— ನಾ ಕೆಟ್ಟ ಹಟಮಾರಿ, ಹೌದಲ್ಲೋ! ಅಗಲಿ, ನನ್ನ ವದಿವಿ ನನ್ನ ಮನಸಿನ ತಕ್ಕಹಾಂಗ ಆಗದಿದ್ದರ, ನಾ ಜನ್ಮ ಇರೋ ತನಕ ಕುಮಾರಿ ಆಗೇ ಇರ್ತೀನಿ!

(ಕಾಲಪ್ಪಳಿಸುತ್ತ ಹೋಗುವಳು.)

ರಾವ್ :— ತೀರಾ ಎಡವಟ್ಟು ಹುಡಿಗಿ! ಫೇಟ ತಾಯಿನ್ನs ಹೊತ್ತಾಳ! ಅದರ ಇಂದಿನ ತನಕ ಹುಡಿಗೀ ಹಟಾ ಈ ಥರಕ್ಕ ಮುಟ್ಟದ್ದಿಲ್ಲ. ಈ ಕಳ್ಳನs ಹುಡಿಗೀ ತಲಿ ಕೆಡಿಸಬ್ಯಾನ! ನಾ ಎಂಥಾ ಮುರ್ಖ! ಇಂವ ಯಾರು, ಎಂತು, ಏನು ಯಾವದೂ ವಿಚಾರ ಮಾಡದs, ಮಗಳ್ನ ಕೊಡೋದು ಅಂತ ನಿರ್ಧಾರಮಾಡಿ, ಅಂವಗ ಮನ್ಯಾಗ ಊಟಕ್ಕs ಇರು ಅಂತ ಹೇಳಿಡ್ತೀನಿ! ಏನು ನಮ್ಮ ಶಾಣೇತನ! ಅದದ್ದು ಆಗಿಹೋತ್ಯ್! ಇನ್ನ ಮ್ಯಾಲ ಅಂವನ ಜತಿಗೆ ಹೀಂಗ ಶಾಶ್ವತದಿಂದ ನಡಕೋತೀನಿ— ಅದನ್ನ ಸಹಿಸಲಾರದs ಅಂವ ತಾನಾಗೇ ಹೊರಟು ಹೋಗಿರ್ತಾನು! (ಗಂಟೆಯ ಸಪ್ಪಳ) ಗಂಟೇ ಸಪ್ಪಳ! ಸ್ಪಷ್ಟ ಕೇಳಿಸತು! ಪೂಜೇ ಬ್ರಾಹ್ಮಣ, ನೇವೇದ್ಯ ಇಟ್ಟು ಬಾರಿಸಿದ ಗಂಟೇ ಸಪ್ಪಳ ಇದು! (ಕೂಗಿ) ಏ, ಬಹಳ ಹೊತ್ತು ಗಂಟೇ ಬಾರಸಬ್ಯಾಡ್ರಿ! ನಾ ಬಂದs ಬಿಟ್ಟೆ! ಹರ್ಯಾ, ಏ ಹರ್ಯಾ, ನಮ್ಮ ಆ ಅತಿಥಿನ್ನ ಕರಿ! ತೋಟದಾಗ ಕೂತಾನೇನೊ ನೋಡು! ಊಟಕ್ಕ ಕರದ ಶಾಸ್ತ್ರಾ ಮಾಡಿ, ಹೊರಗ ಹಾಕೋಣು!

ಹರ್ಯಾ :— ಹೂನ್ರಿ!

ಪ್ರವೇಶ ೨

[ಭೋಜನಶಾಲೆ— ಹರ್ಯಾ ಊಟದ ಎಲೆಗಳನ್ನು ಸಿದ್ಧ ಪಡಿಸುವುದರಲ್ಲಿ ತೊಡಗಿದ್ದಾನೆ. ಬಂದೊಂದೇ ಪದಾರ್ಥವನ್ನು ಒಳಗಿಂದ ತಂದು ಇಡುತ್ತಿದ್ದಾನೆ. ರಾವ್‌ಸಾಹೇಬರು ಬರುತ್ತಾರೆ.]

ರಾವ್ :— ಹರ್ಯಾ, ಊಟದ ತಯಾರಿ ಇನ್ನೂ ಮುಗದs ಇಲ್ಲೇನು? ಮೂರ್ಖಾ!

ಹರ್ಯಾ :— (ಮೆಲ್ಲಗೆ) ಬುದ್ಧಿಗೇಡಿ ಮುದುವ! (ಗಟ್ಟಿಯಾಗಿ) ನೀರು ತರ್ತೀನ್ರಿ! (ಒಳಗೆ ಹೋಗುತ್ತಾನೆ.)

ರಾವ್ :— ಅಂ, ಇಂವ 'ಬುದ್ಧಿಗೇಡಿ, ಮುದುವ' ಅಂತ ಯಾರಿಗಂದ? ಇಲ್ಲಂತೂ ಬೇರೆಯವರ್ಯಾರೂ ಇಲ್ಲ!

ಹರ್ಯಾ :— (ಹೊರಗೆ ಬಂದು, ಮೆಲ್ಲಗೆ) ಮುದೋಡ್ಯಾ! ನಿನಗೇನು ತಿಳಿದೀತಾಗೈತಿ ನನ್ನ ಯೋಗ್ಯತಿ! (ಗಟ್ಟಿಯಾಗಿ) ಖೀಸಣೇ ತರ್ತೀನ್ರಿ! (ಒಳಗೆ ಹೋಗುತ್ತಾನೆ.)

ರಾವ್ :— ಅಂ, ಇಂವ ನನ್ನನ್ನ ಉದ್ದೇಶಿಸೇ ಈ ಹೊಲಸ ಮಾತು ಆಡ್ತಾನ! ಬಾ ಮಗನ, ನಿನ್ನ ಹೊರಣ ಈಗ ಹೊರ ಬಿತ್ತು! ಮಾಡ್ತೀನಿ ನಿನ್ನ ಪಾರುಪತ್ಯ!

ಶ್ಯಾಮು :— (ಪ್ರವೇಶಿಸಿ) ಏನ ಹೇಳ್ಕಿ ರಾವಸಾಹೇಬ್, ಇಂಥ ಹಸಿವೀಲೆ ಹೊಟ್ಟೆ ಕರಕರ ಆಂತಿದ ನೋಡ್ರಿ!

ರಾವ್ :— (ಮೆಲ್ಲಗೆ) ಕಮ್ಮದೂ ಪಾರುಪತ್ಯ ಚಿಲೋ ಆಗತಿ (ಗಟ್ಟಿಯಾಗಿ) ಬರ್ರಿ! ತಾವು ಬಂದs ಇದ್ದೀರಿ, ಅಂದಮ್ಯಾಲ ಬ ಆಂತ ಆನಲೇ ಬೇಕು!

ಶ್ಯಾಮು :— (ಸ್ವಗತ) ಅಂ, ಈ ಮುದುಕ ವಿಚಿತ್ರ ವಿಚಿತ್ರ ಮಾತಾಡಲಿಕ್ಕೆ ಸ್ಯಾರಂಭ ಮಾಡ್ಯಾನ! ಇಂವ ಹುಚ್ಚ ಅಂತು ಆಗಿರಲಿಕ್ಕಿಲ್ಲಲ್ಲ!

ರಾವ್ :— (ಮೆಲ್ಲಗ) ನಾ ಹುಚ್ಚನs? ನೀನs ಇದ್ದೀ ಕಿವುಡೇಶಿ! ಹರ್ಯಾ ನನ್ನ ಮ್ಯಾಲ ಮಾಡಿದ ಪ್ರಯೋಗನs ನ ನಿನ್ನ ಮ್ಯಾಲ ಯಾಕ ಮಾಡಬಾರದು? ಶತಮೂರ್ಖ! ನಿನ್ತ ತುರಂಗದಾಗs ಕೂಡಿಸಬೇಕಾಗಿತ್ತು!

ಶ್ಯಾಮು :— (ಸ್ವಗತ) ಇಂವಗ ಹುಚ್ಚs ಹಿಡೀತು (ಪ್ರಕಾಶವಾಗಿ) ನಾ ಈ ಎಲೀಮ್ಯಾಲ ಕೂಡ್ತೀನಿ!

ರಾವ್ :— ಅದು ನನ್ನೆಲಿ! ಬಾಜೂದ ಎಲೀಮ್ಯಾಲ ಕೂಡ್ರಿ

ಶ್ಯಾಮು :— (ಸ್ವಗತ) ಅಂ, ತಿಳೀತು! ಇದು ನನ್ನ ಪರೀಕ್ಷನ ನಡದsದ! ಈ ಪ್ರಸಂಗದಾಗ ನಾವು ಸಿಟ್ಟಿಗೆದ್ದು ಉಪಯೋಗಿಲ್ಲ ಇಂವ ನನಗ ಅಪಮಾನ ಮಾಡೋ ಉದ್ದೇಶ ಇಟಗೊಂಡಾನ ಅಂತs ಹೀಂಗ ಬೈಗುಳಾ ಸುರು ಮಾಡ್ಯಾನ! ನಾವೂ ಇದ ವ್ಯಾಳ್ಯಾಕ್ಕ ನಾಲ್ಕು ಬೈಕೊಂಡು ಬಿಡೋಣು! (ಗಟ್ಟಿಯಾಗಿ) ನಿನ್ನಂಥ ಹೆಡ್ಡ, ಅಸಭ್ಯ, ಅವಿವೇಕಿ.....

ರಾವ್ :— ಹೆಡ್ಡ, ಅಸಭ್ಯ, ಅವಿವೇಕಿ.....

ಶ್ಯಾಮು :— (ಸ್ವಗತ) ಎಲಾ ಇವನ! ಇಂವಗ ಛೆಲೆ ಕೇಳಿಸಿತಲ್ಲ!

ರಾವ್ :— ಕೇಳಿಸದ ಏನು! ನಿನ್ನಂಥಾ ಹೇಸರಗತ್ತಿಗೆ ಮಗಳ್ ಕೊಡೋದಕ್ಕಿಂತ ಕೆರ್ಯಾಗ ದೂಡೇನು, ಇಲ್ಲಾ ಆಕಿನ್ನ ಸಮುದ್ರ ದಾಗ ಮುಣುಗಿಸೇನು!

ಶ್ಯಾಮು :— (ಸ್ವಗತ) ಇಂವ ಕಿವುಡನೂ ಅಲ್ಲ, ಹುಚ್ಚನು ಅಲ್ಲ! ಇದು ಬುದ್ಧಿಪೂರ್ವಕ ನನ್ನ ಅಪಮಾನ ನಡದsದ ಬೇಕಾದ್ದಾಗಲಿ! ಇವನ ಕಿವುಡು ವರೀಗೆ ಹಚ್ಚೇ ಬಿಡೋದು ಬೆಕೀ ಕಿವುಡ!

ರಾವ್ :— (ಸ್ವಗತ) ಬೆಕೀ ಕಿವುಡ! ಹಾಂ! ಬೈಯಿ ಬೈಯಿ! ಮುಂದದ ನಿನ್ನಾಟಾ!

ಶ್ಯಾಮು :— (ಸ್ವಗತ) ಈ ಆಟಾ ಆಡಲಿಕ್ಕೇ ಬಂದೀನ್ನಾ (ಗಟ್ಟಿಯಾಗಿ) ಶಚಿ ಬರೋದಿಲ್ಲೇನು ಊಟಕ್ಕ?

ರಾವ್ :— (ಮೆಲ್ಲಗೆ) ಹಾಂ, ಶಚಿ ಬೇಕಲ್ಲs ನಿನಗ? ಇನ ಶಚೀ ಬದಲಾಗಿ ದೊಣ್ಣೇ ಪೆಟ್ಟs ನಿನಗ! (ಆಚಾರಿ ಬಡಿಸ

ಬರುತ್ತಾನೆ, ಅವನ ಮೇಲೆ ರೇಗಿ) ಏ ಆಚಾರಿ, ಬಿಸಿ ಅನ್ನ ನನ್ನ-ಎಲೀಗೆ ಬಡಿಸು. ಮಧ್ಯಾನ್ಹದಾಗಿನದೇನಾದರೂ ಉಳಿದಿದ್ದರ ಅವರ ಎಲ್ಯಾಗ ಒಗಿ!

ಶ್ಯಾಮು :— (ಮೆಲ್ಲಗೆ) ನೀನು ಶಚೀ ತಂದಿ ಆಗಿರದಿದ್ದರ ಇಲ್ಲಿಂದಿಲ್ಲೇ ನಿನ್ನ ಪಾತಾಳಕ್ಕs ಮೆಟ್ಟಿಸಿದ್ದೆ !

ರಾವ್ :— (ಮೆಲ್ಲಗೆ) ಹಿಂಗೇನು ಲಬ್ಯಾಕ್ಕ ! ನನ್ನ ಮೆಟ್ಟ-ತೀಯಾ ? ಈ ತಾಟು ನಿನ್ನ ತಲೀಗೆ ಅಪ್ಪಳಿಸಿ ನಿನ್ನ ತಲೀ ಬುರುಡೀನs ಒಡದೇನು !

ಶಚಿ :— (ಪ್ರವೇಶಿಸಿ) ಅಪ್ಪಾ, ಅಪ್ಪಾ ! ಏನಾತ್ಯ ? ಬಾಯಿ ಯಾಕ ಮಾಡ್ತೀರಿ ?

ರಾವ್ ;— ಬಾಯಿ ಒಂದs ಯಾಕ ! ಕೈ ಮಾಡೋ ಪ್ರಸಂ-ಗಾನೂ ಅದ !

ಶ್ಯಾಮು :— (ಆಶ್ಚರ್ಯದಿಂದ) ರಾವ್‌ಸಾಹೇಬ್, ನಿಮಗ ನೆಟ್ಟಗ ಕೇಳಸ್ತsದಲ್ಲ ! ನೀವು ಕಿವುಡರಲ್ಲs ಹಂಗಾರ ?

ರಾವ್ :— ನಾ ಯಾಕ ಕಿವುಡಾದೇನು ? ಕಿವುಡರು ನೀವು !

ಶ್ಯಾಮು :— ಶಚಿ, ನಿಮ್ಮಪ್ಪ ಕಿವುಡರಲ್ಲ, ಹಂಗಾರ ?

ಶಚಿ :— ಉಂಹುಂ ! ಅರ್ಧಗಂಟೆಗೆ ಮುಂಚೆ ಅವರು ಕಿವುಡ-ರಿದ್ದರು. ಈಗ ಅವರಿಗೆ ಸ್ಪಷ್ಟ ಕೇಳಸ್ತsದ ! ಇದು ಒಂದು ಜಾದೂಥಾಂಗs ಆಗೇದ !

ರಾವ್ :— ಶಚಿ, ನೀನು ಹೇಳಿದ್ದು ನನಗ ಕೇಳಿಸಿತು ! ಆದರ ಈ ಕಿವುಡಗೂ ಕೇಳಿಸಿತೇನು ?

ಶ್ಯಾಮು :— ರಾವಸಾಹೇಬ್, ನನಗೂ ಕೇಳಿಸಿತು ! ನಾನೂ ನಿಮ್ಮಂತೆ ಕಿವುಡನಲ್ಲ! ನೀವು ನನ್ನ ಬಗ್ಗೆ ಆಡಿಕೊಂಡದ್ದನ್ನೆಲ್ಲಾ ನಾ ಕೇಳಿದೆ ! ಒಂದೂ ಬಿಡದಂತೆ ಎಲ್ಲಾ—ಎಲ್ಲಾ ಕೇಳಿದೆ !

ಶಚಿ :— (ಶ್ಯಾಮರಾಯರಿಗೆ) ಅಲ್ಲಾ, ಇದೇನು ಚಮತ್ಕಾರ! ನೀವೂ ಕಿವುಡರಲ್ಲ ಹಂಗಾರ ?

ಶ್ಯಾಮು :— ಅಲ್ಲ, ಸರ್ವಥಾ ಅಲ್ಲ !

ರಾವ್ :— ನಿಮಗೂ ಕೇಳಸ್ತsದ ? ನಾ ಅಂತೂ ಪೂರಾ ಗೊಂದಲದಾಗs ಬಿದ್ದೀನಿ ?! ಇದರ ಖುಲಾಸ ಆಗಲೇ ಬೇಕು—. ಅಲ್ರಿ ರಾಯರ, ನೀವು ಇದುವರೆಗೆ ಕಿವುಡರಿದ್ದಿಲ್ಲ ?

ಶ್ಯಾಮು :— ನಾ ಎಂದೂ ಕಿವುಡನಿದ್ದಿಲ್ಲ !

ರಾವ್ :— ಹಂಗಾರ ನೀವು ಇಲ್ಲೀವರೆಗೆ ಮಾಡಿದ್ದೆಲ್ಲಾ ಸೋಗs ಅನ್ರಿ ?

ಶ್ಯಾಮು :— ಹೌದು! ನಿಮ್ಮ ಅಂಜಿಕೆಗೆ ನಾ ಮೊದಲು ಕಿವುಡನ ಸೋಗುಹಾಕಿದೆ! ಮತ್ತ ನಿಮ್ಮ ಆಳಯ ಆಗಬೇಕಂದೋ ಆಶೆ-ಯಿಂದ ಅದನ್ನ ಹಾಂಗs ಮುಂದರಿಸಿದೆ!

ರಾವ್ :— ಹಾಂ, ಆ ಆಶಾ ಇನ್ನ ಬಿಟ್ಬಬಿಡರಿ ! ನೀವು ನನಗ ಆಡಿದ ಮಾತು, ಮಾಡಿದ ಅಪಮಾನ ನಾ ಎಂದೂ ಮರೀಲಾರೆ!

ಶ್ಯಾಮು :— ಮೂವನವರ, ಅದೆಲ್ಲಾ ಚಾಪ್ಟಿಯೊಳಗ ಅಡಿದ್ದು! ಅದನ್ನ ತಮ್ಮಂಥ ತಿಳಿದವರು ಮನಸಿಗೆ ಹಚ್ಚಿಕೊಳ್ಳಬಾರದು! ಹಾಂಗ ನೋಡಿದರ ಮೊದಲ ತಾವs ಚಾಪ್ಟಿಗೆ ಪ್ರಾರಂಭ ಮಾಡಿದ್ದು. ಅದೇನs ಇರಲಿ. ನಾ ನಿಮ್ಮ ಕ್ಷಮಾ ಬೇಡ್ತೀನಿ! ತಪ್ಪಾತ್ಯ! ಸರ್ವಥಾ ತಪ್ಪಾತ್ಯ!

ರಾವ್ :— (ನಕ್ಕು) ಹಂಗಾರ, ನೀವು ಅಂದದ್ದನ್ನೆಲ್ಲ ತಿರಗ ತಕ್ಕೊಳ್ರಿ!

ಶ್ಯಾಮು :— ತಕ್ಕೊಂಡೆ!

ರಾವ್ :— ಮತ್ತ ನಾ ಆಡಿದ್ದನ್ನೆಲ್ಲ ನಾ ತಿರಗಿ ತಕ್ಕೋತೀನಿ! ಮತ್ತು ಈ ಚಾಪ್ಟಿಗೆ ನನ್ನಿಂದಲೇ ಪ್ರಾರಂಭಾಯ್ತು, ಆ ಪ್ರಾಯ-ಶ್ಚಿತ್ತಕ್ಕಾಗಿ ನನ್ನ ಶಚಿನ್ನ ನಿಮಗ—ಮಗ ಕೊಟ್ಟು ಬಿಡ್ತೀನಿ! ನಿಮಗ ಸಂತೋಷಾಗ್ತsದಲ್ಲ?

ಶ್ಯಾಮು :— ಆಗದೇನು ರಾಯರ! ಮೊದಲನೇ ಸಲ ನಾವು ಒಬ್ಬರ್ಕೊಬ್ಬರು ಕಂಡಾಗs ನಾವು ಮಾತಾಡಿಕೊಂಡು....

ಶಚಿ :— (ನಾಚಿಕೆಯಿಂಹ) ಹೋಗರಿ, ನೀವು ಆ ಮಾತೆಲ್ಲ ಈಗ ಹೇಳಬ್ಯಾಡ್ರಿ !

ರಾವ್ :— ಒಳ್ಳೆ ಬೇತಿನಿಂದ ಕೆಲಸಾ ಗೆದ್ದುಕೊಂಡಿರಿ! ಹಿಂದಕ್ಕ ಯುಧ್ಧಾ ಮಾಡಿ ಹೆಣ್ಣೆನ್ನ ಗೆದ್ದುಕೊಂಡು ಒಯ್ಯತಿದ್ದರು. ನೀವು ಚಾಪ್ಟೀಲೆ ಅದನ್ನ ಸಾಧಿಸಿದಿರಿ!

ಶ್ಯಾಮು :— ಎಲ್ಲಾ ಚಾಪ್ಟೀದು ಹಿಂಗ ಒಳ್ಳೇ ಪರಿಣಾಮs ಆದರ, ಈ ಮೃತ್ಯುಲೋಕ ಸ್ವರ್ಗ ಆಗಲಿಕ್ಕೆ ಏನೂ ಶಡ ಇಲ್ಲ!

ರಾವ್ :— ಖರೇ ಅದ! ಅಕ್ಷರಶಃ ಖರೆ ಅದ! ಎಲ್ಲಾರೂ ಇನ್ನು ಆನಂದದಿಂದ ಊಟಾ ಮಾಡೋಣು! ಮಸಾಲೀ ಕರಿ ಗಡಬು ದಾರೀ ನೋಡ್ತಾವ!

(ತೆರೆ ಬೀಳುವುದು.)

ಇದೀಗ ಪ್ರಕಟವಾಗಿದೆ!

ಹಾವಾಡಿಗನ ಮಗಳು

(ಶಿಗ್ಗಾಂವಿ ವೀರೇಶ್ವರರ ಕಥಾಸಂಗ್ರಹ)

೧೮೦ ಪುಟಗಳು ಬೆಲೆ: ೧—೦—೦

○ ಇದು ವಿಕಾಸ ಸಾಹಿತ್ಯಮಾಲೆಯ ಎರಡನೆಯ ಪುಸ್ತಕವಾದುದರಿಂದ ಚಂದಾದಾರರಾಗುವವರಿಗೆ ವಿಶೇಷ ಸವಲತ್ತು, ಕಾಣಿಕೆಗಳಿವೆ.

ಪತ್ರಿಕಾ ಏಜಂಟರಿಗೆ ಮಾರಾಟಗಾರರಿಗೆ ಕೈತುಂಬ ಕಮೀಶನ್ ವಿವರಗಳಿಗಾಗಿ ಇಂದೇ ಬರೆಯಿರಿ.

ವಿಕಾಸ ಸಾಹಿತ್ಯಮಾಲಾ, ಶಿಗ್ಗಾಂವಿ. (ಜಿ. ಧಾರವಾಡ.)

ಮಹಾತ್ಮ

ಶ್ರೀ. ಗಂಗಾಧರ ಚಿತ್ತಾಲ, ಮುಂಬಯಿ

ನಿನ್ನ ನೆತ್ತರು ನೆಲಕೆ ಬಿಲ್ಲಿದಂದು—
ಮಣ್ಣು ನಡುಗಿತು, ಹಗಲ ಹೂ ಬಾಡಿತು;
"ಸರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಉತ್ತಮರ ಬಲಿ ಇಲ್ಲಿ"—ಬಾನಾಡಿತು. ೧

ಮನುಕುಲದ ರಕ್ತಮಯ ಇತಿಹಾಸ ಕೂಗಿತ್ತು—
"ನೆಲವು ನಂದನವಾಗಲೇನು ಬೇಕು?
ತಿಳಿವು ತುಂಬಿದ ಕಣ್ಣು, ಒಲವು ತುಂಬಿದ ಎದೆಯು,
ಛಲವನರಿಯದ ಬದುಕು—ಇಷ್ಟೆ ಸಾಕು!" ೨

ಅಂತೆ ತನಕದಿ ಬಂದೆ, ಮನದ ಮಮತೆಯ ತಂದೆ
ಹಗೆಯ ಕಾಳೋರಗನ ತವಿಪೆನೆಂದೆ—
ಇತ್ತ ಹಾಲಾಹಲವು, ಅತ್ತ ಕೋಲಾಹಲವು!
ಅಮೃತಹಾಸದ ಬೀರಿ ನಡೆದೆ ಮುಂದೆ. ೩

ಬತ್ತಿದೆದೆಗಳಲು ಒಲವಿನ ತೇವು ಒಡೆದಿತ್ತು
ಶಾಂತಿ ಸಮರಸಕೆ ಇದು ಮೊದಲೆನಿಸಿತು
ಕಲ್ಲೆದೆಯು ಸೀಮೆಯಲು ಹೂ ಕುಸುರು; ಆಹ ಇದು
ಬರುವ ಭಾಗ್ಯದ ಯುಗದ ತೊದಲೆನಿಸಿತು. ೪

ನರನ ಕಾಡಿನ ನಡತೆ ಇನ್ನು ಮುಗಿದಿರಲಿಲ್ಲ;
ನಿನ್ನ ಬೇಟೆಗೆ ತಾಯಿವಾಣ್ ನಡುಗಿತು.
"ನರನು ಕೆರಳುವ ಹುಂಬ, ಬಾಳು ಯೂಪಸ್ತಂಭ
ಇಂಥ ಬಲಿ ಇನ್ನೇಸೊ?"—ಬಾನ್ ಗುಡುಗಿತು ೫

ನರಿಯ ತತ್ತ್ವಜ್ಞಾನ

ಶ್ರೀ. 'ರಾಮಚಂದ್ರ' ಘಟಪ್ರಭೆ

ಅಧಿಕಾರ, ಪದ, ಶ್ರೀಗಳೆಲ್ಲ ಬಂದಿರೆ ನಡೆವು
ಕಣ್ಣೆತ್ತಿ ನೋಡದವನೊಬ್ಬ ಹಿರಿಯ!
ಅದ ಪಡೆಯಲಸಮರ್ಥ ಬೇಡವೆನೆ ಕತೆಯಾಯ್ತು
ಹಣ್ಣು ಹುಳಿಯನೆ ಹಳಿದು ಹೊರಟ ನರಿಯ! ೧

ಬಯಕೆ ಬಾಡಿದೆಯೆಂಬ ನರಿಯ ಜಂಬವು ಬೇಡ
ಪಡೆವ ಸಾಹಸದೊರತೆ ಬತ್ತಿದಾಗ—
ನಿನಗಾತ್ಮ ವಂಚನೆಯ ಅರ್ಥವೇಂತಾದೀತು
ಈ ವಿರಾಗದ ನಿಶೆಯು ಮುತ್ತಿದಾಗ? ೨

ನಡೆದು ಬರುವರೆ ಲಕ್ಷ್ಮಿ ಮತ್ತೆ ವೀಣಾಪಾಣಿ
ಹುಲಿನೇಪದೀ ನರಿಯ ಪಾಂಗು ನೋಡಿ
ಹುದುಗಿದಾಸೆಯ ಕಿಚ್ಚನಾವರಿಸಿದೀ ಬೂದಿ-
ಗಿಂತ ಹಗುರಿದೆ ನೀನು ತಳೆದ ಮೋಡಿ! ೩

ಊದಿ ಹಾರಿಸು ಬೂದಿ ಬೆಳಗಿ ನಿಗಿನಿಗಿ ಕೆಂಡ
ಎದ್ದೆಯು ವೇದಿಕೆಯಲ್ಲಿ ಧಗಧಗಿಸಲಿ;
ಸುಪ್ತ ಮಾನಸದಾಸೆ ಪ್ರಜ್ವಲಿಸಿ ಕಿಡಿಕಾರಿ
ನಿಜ ಸತ್ತ್ವವನ್ನೆಲ್ಲ ಒಗುಮಿಗಿಸಲಿ ೪

ಎಲೆ ಪತಿತ ಜೀವನನೆ! ವಿಸ್ಮೃತಿಯ ತೆರೆಯೆತ್ತು
ನೆನಪಿನೀ ಹೊತ್ತಗೆಯ ಧೂಳನೊರಸು॥
ಬಾಳ ಪಣಕಿಟ್ಟವರ ಪದವಿಗೇರಿದ ಯಾವ
ಧೀರ ಕುಲ ಕುಡಿಯೆನಿಪ ಕತೆಯನರಸು! ೫

ಭಾರತ ಸರೋಜವೆ!

'ಎಸ್ಕೆ'

ನಮ್ಮ ನಾಡಿನ ಬೆಲುವ ಬೀಡಿನ ತೇಜಸಾರ ಸರೋಜವೆ,
ನಿನ್ನ ನಾಮವೆ ಕಾವ್ಯಧಾಮವು ನಿನ್ನ ಓಜವೆ ಓಜವು॥
ಭಾರತದ ಭಾಸ್ಕರನ ಕಿರಣಕೆ ನಿನ್ನ ಹೃದಯವು ಅರಳಿತು,
ಮುಧುವ ಬೀರುತ ಜಗವ ರಂಜಿಸಿ ಸಂಜೆಯಾಗಲು ತೆರಳಿತು॥
ನಿನ್ನ ಮುಖ ರಸವಾಣಿಯಾಗರ ಅದುವೆ ಪ್ರೇಮದ ಸಾಗರ
ದೇಶಸೇವೆಯೆ ಈಶ ಸೇವೆಯು ಎಂಬ ಯೋಗಿಯ ಉಸ್ಸಿರ!॥

ನಿನ್ನ ನುಡಿಯಲಿ ಕಿಡಿಗಳಡಗಿವೆ ಬಿಡಗು-ವಿನ್ಯಾಣಗಳವೆ;
ನಿನ್ನ ಕಂಠದಿ ಕೋಗಿಲೆಯೆ ಮನೆಮಾಡಿ ಮೋಕ್ಷವ ಪಡೆದಿದೆ.॥
ಬಳೆಯ ತೊಟ್ಟರು ಅಬಲೆಯಾದರು ಶಾಂತಿಸಮರದಿ ಧುಮುಕಿದೆ
ವೀರ ಪೆಣ್ಮಣಿ ಜಗದ ಕಣ್ಮಣಿ ಅಮರ ಪದವಿಯ ತಾಳಿದೆ.॥
ನಿನ್ನ ಕಬ್ಬವು ಜನಕೆ ಹಬ್ಬವು, ನಿನ್ನ ಜೀವನ ಪಾವನ;
ನಿನ್ನ ಸಾಧನ ನಮಗೆ ಬೋಧನ, ಕರ್ಮಯೋಗಿಯ ದರ್ಶನ!॥

ನಾಟಕದಲ್ಲಿ ವಾಸ್ತವತೆ

(ಸಾಹಿತ್ಯ ಪರಿಚಯ) *

ಡಿ. ಕೋ. ಶಿವರಾಮು ಕಾರಂತರು, ಪುತ್ತೂರು

★

ಕೇವಲ ಪೌರಾಣಿಕ ನಾಟಕಗಳೆಂಬ ಕಾರಣದಿಂದ ಅವು ಅವಾಸ್ತವವೆನಿಸವು; ಇಂದಿನ ಸಾಮಾಜಿಕ ನಾಟಕಗಳೆನಿಸಿಕೊಳ್ಳುವುವೆಲ್ಲವೂ ವಾಸ್ತವತೆಯಿಂದ ಕೂಡಿರವು. ಅವಾಸ್ತವ-ವಾಸ್ತವಗಳು, ನಾಟಕಗಳಲ್ಲಿ ಮೂಡಿಸಿದ ಪಾತ್ರಗಳ ಮಾನವ ಸಹಜ ಸ್ವಭಾವದ ಮೇಲೆ ಹೆಚ್ಚಾಗಿ ಅವಲಂಬಿಸಿರುತ್ತವೆ.

★

ವಾಸ್ತವತೆ, ಸಹಜತೆ,— ಎಂಬ ಮಾತುಗಳನ್ನು ನಾವು ಸಾಹಿತ್ಯಕಲೆಗಳನ್ನು ಕುರಿತಾಗಿ ಆಡುತ್ತಲಿದ್ದೇವೆ. ಇಂಗ್ಲೀಷಿನ Realism ಎಂಬುದಕ್ಕೆ ಸಮನಾದ ಕನ್ನಡದ ಪ್ರಯೋಗವಿದು. ವಸ್ತುಗಳನ್ನು ಇದ್ದಕ್ಕಿದ್ದಂತೆ ಬಣ್ಣಿಸುವುದು, ಸಂಗತಿಗಳನ್ನು ಇದ್ದಕ್ಕಿದ್ದಂತೆ ಹೇಳುವುದು, ಕಥಾನಕಗಳನ್ನು ನಿತ್ಯಜೀವನದಲ್ಲಿ ಸಂಭವಿಸಬಹುದಾದ ರೀತಿಯಲ್ಲೇ ನಿರೂಪಿಸುವುದು—ಎಂಬುದು ಈ ಮಾತಿನ ಹಿಂದಿನ ಅರ್ಥ; ವಿಶಾಲವಾದ ಅರ್ಥ. ಕಲೆ ಮತ್ತು ಸಾಹಿತ್ಯದ ಕೃತಿಗಳನ್ನು ತೂಗುವಾಗ, ಇಂಥ ಮಾತನ್ನು ಎಚ್ಚರದಿಂದ ಉಪಯೋಗಿಸಬೇಕಾಗುತ್ತದೆ. ಏಕೆಂದರೆ: ಅವುಗಳು ಸಹಜಜೀವನದ ಚಿತ್ರಗಳಂತೆ ಕಂಡರೂ, ತೀರ ಅವುಗಳ ತದ್ರೂಪ ಪ್ರತಿಗಳಲ್ಲ. ವಸ್ತುವನ್ನು ಇದ್ದಕ್ಕಿದ್ದಂತೆ ಚಿತ್ರಿಸುವುದಕ್ಕೆ—ವಾಕ್ಯಗಳನ್ನು ಇದ್ದಕ್ಕಿದ್ದಂತೆ ಹೇಳುವುದಕ್ಕೆ—ಇಂದು ಎಷ್ಟೋ ಯಂತ್ರೋಪಕರಣಗಳಿವೆ. ಕೆಮೆರಾ ಆ ಕೆಲಸ ಮಾಡುತ್ತದೆ—ಚಿತ್ರಗಳನ್ನು ಕೊಡುವಾಗ. ಡಿಕ್ಟೋಫೋನ್ ಆ ಕೆಲಸ ಮಾಡಬಹುದು— ಮಾತುಗಳ ವಿಚಾರದಲ್ಲಿ. ಬರಿಯ ಅಷ್ಟೊಂದು ಕೆಲಸಕ್ಕೆ ಸಾಹಿತಿಯೂ ಬೇಡ; ಕಲಾವಿದನೂ ಬೇಡ. ಆದರೆ ಈ ರೀತಿಯಲ್ಲಿ ಅನುಕರಣೆ ಮಾಡುವುದಕ್ಕೆ ಕಲೆ ಎನ್ನುವುದಿಲ್ಲ. ವಾಸ್ತವಿಕ ಜಗತ್ತಿನಲ್ಲಿ ಬಾಳಿ, ಕೇಳಿ, ನೋಡಿ, ಮೂಸಿ, ಆಸ್ವಾದಿಸಿ, ಮುಟ್ಟಿ ತೂಗುವ ಮನುಷ್ಯ—ತನ್ನದಾದ ಅನುಭವಗಳನ್ನು ಗಳಿಸಿ, ಯಾವುದೋ ಆಂತರಿಕ ಒತ್ತಡದಿಂದ ಪ್ರಕಟಿಸುವ ಬಗೆಯನ್ನು ನಾವು 'ಕಲೆ, 'ಸಾಹಿತ್ಯ' ಎನ್ನುತ್ತೇವೆ ಪ್ರೇರಣೆ ಕೊಡುವ ವಸ್ತುಗಳು, ಕೊಟ್ಟ ವಸ್ತುಗಳು— ಪ್ರಪಂಚದಲ್ಲಿ ಇರುವುವು; ಇದ್ದುವು. ಆ ಪ್ರೇರಣೆಗೆ ಗುರಿಯಾದವನು ಇರುವವನೇ. ಪ್ರೇರಣೆಯಿಂದ ಉದ್ಭವಿಸುವ ಫಲ-' ಇರಬೇಕು'— 'ಇದೆ'— ಎಂಬ ಭ್ರಮೆಯನ್ನು ಕಲ್ಪಿಸಿದರೂ, ಮೂಲವಸ್ತುವಿನ ಪ್ರತಿರೂಪವಲ್ಲ; ನಕಲಲ್ಲ. ಕಲೆ, ಸಾಹಿತ್ಯಗಳಲ್ಲಿ ಕಲಾವಿದನ ಸೃಷ್ಟಿಗಳು, ಅವನು ಬಳಸುವ ಸಾಮಗ್ರಿಗಳು ಸಹಜವಾದುವು; ನಿಜವಾದುವು. ಅವುಗಳಿಂದ ಮಾಡುವ ನಿರ್ಮಾಣ ಅವನ ಸ್ವತಂತ್ರದ್ದು. ಸ್ವಬುದ್ಧಿ, ಪ್ರೇರಣೆಗಳಿಂದ ಪಾಕಗೊಂಡದ್ದು. ಹೀಗಿರುತ್ತ 'ವಾಸ್ತವ' ಎಂಬ ಮಾತಿನ ಮಿತಿ ತಿಳಿಯಬೇಕಾದರೆ—ನಾವು ಇನ್ನಷ್ಟು ಆಳವಾಗಿ ಹೋಗಬೇಕು.

ಚಂದ್ರನನ್ನು ಬಣ್ಣಿಸುತ್ತಾನೆ— ಕವಿ: 'ಹೊನ್ನ ಚಂಡಿನಂತೆ ಮೂಡಿದ' ಎನ್ನುತ್ತಾನೆ. 'ನೀಲಾಕಾಶದಲ್ಲಿ ತೇಲುವ ಕಮಲ'— ಎಂದು ಅದನ್ನು ಕರೆಯುತ್ತಾನೆ. ಈ ಮಾತುಗಳು ವಾಸ್ತವಿಕತೆಯನ್ನು ಹೇಳುತ್ತವೆಯೇ? ಅದನ್ನು ಹೇಳುವುದಕ್ಕೆ ಚಂದ್ರಬಿಂಬದ ಗಾತ್ರ, ವ್ಯಾಸ, ಬಣ್ಣಗಳ ಅನ್ವಯಿಸುವ ಇನ್ನೊಂದು ಮಾತು ಬೇಕಾಗಬಹುದು. ಹಿಂದೆ ಹೇಳಿದ ಮಾತುಗಳು ಯಾವುವೂ ತಕ್ಕುವಲ್ಲ. ಇನ್ನೊಬ್ಬ ಕವಿ 'ಬಾನನ್ನು ಚುಂಬಿಸುವ ಬೆಟ್ಟ' ಎನ್ನುತ್ತಾನೆ—ಒಂದು ಪರ್ವತ ಶ್ರೇಣಿಯನ್ನು ಕುರಿತು. 'ಮುಖಾರವಿಂದ' ಎನ್ನುತ್ತಾನೆ. 'ಸಂಪಿಗೆಯ ಹೂವಿನಂಥ ಮೂಗು' ಎನ್ನುತ್ತಾನೆ— ತನ್ನ ಪ್ರೇಯಸಿಯ ಮುಖ-ಮೂಗುಗಳನ್ನು ಕಂಡು. ನಿತ್ಯದ ಮಾತಿನಲ್ಲೂ, ವಾಸ್ತವಿಕ ಸಂಭಾಷಣೆಗಳಲ್ಲೂ 'ಸೂಜಿ ಹಾಕುವಷ್ಟು ಎಡೆಯಿಲ್ಲ, ಕಣ್ಣು ಕುಕ್ಕಿದಂತೆ ಮಾತನಾಡಿದ, ಹೊಟ್ಟೆ ಬಿರಿಯುವಂತೆ ನಕ್ಕ'— ಎನ್ನುತ್ತೇವೆ ನಾವು. ಇವುಗಳಲ್ಲಿ ವಾಸ್ತವಿಕತೆ ಇದೆಯೇ? ಮುಖದ ವರ್ಣನೆ ಹೇಳಬೇಕಾದರೆ, ಕಣ್ಣು-ಮೂಗುಗಳ ಉದ್ದ, ಅಗಲ, ಬಣ್ಣ, ತಿಣ್ಣಹೇಳಬೇಕಾದೀತು.

ದೂಷಿತ ರಕ್ತವನ್ನು ಶುದ್ಧಿಗೊಳಿಸುವ ಸರ್ವಶ್ರೇಷ್ಠ
ಔಷಧಿ!
ಡಾ. ವಾಮನ ಗೋಪಾಳ
ಇವರ
ಸಾರ್ಸಾ ಪರಿಲ್ಲಾ

* ತಾ: ೨೦-೩-೫೦ ನೆಯ ಸಾಯಂಕಾಲ, ಧಾರವಾಡದ ಬಾನುಲಿಕಟ್ಟೆಯಿಂದ ಪ್ರಸಾರವಾದುದು, —ಸಂ.

ಸುಖಕರವಾದ ವಸತಿ! .... ರುಚಿಕರವಾದ ಊಟ!
ಇವುಗಳಿಗಾಗಿ ಯಾರೂ ತೊಂದರೆಪಡಬೇಕಾಗಿಲ್ಲ.

ಬಾಗಿಲುಕೋಟೆಯ

ಪದ್ಮನಾಭ ಭವನ

(Boarding & Lodging House)

***

ತಮಗೆ

ಇವನ್ನು ಒದಗಿಸಲು ಯಾವಾಗಲೂ ಸಿದ್ಧ

— ಮಿತವಾದ ದರಗಳು —

ಸ್ಥಳ ಕಾಯ್ದಿರಿಸಬೇಕಾದರೆ ಮೊದಲೇ ಬರೆಯಿರಿ.

ರೇಲ್ವೆ ಸ್ಟೇಶನ್ ಹಾಗೂ ಬಸ್ ಸ್ಟ್ಯಾಂಡಿಗೆ
ಸಮೀಪ, 'ಶಕ್ತಿ ಟಾಕೀಜ್' ಹತ್ತಿರ

ಒಡೆಯರು—ಎಲ್. ಪಿ. ಮಾರಕೋಡ

ಹಾಗೆ ಹೇಳಿದರೆ ಆ ರೀತಿಯ ವರ್ಣನೆಯನ್ನು ನಾವು ಸಾಹಿತ್ಯವೆಂದು ಒಪ್ಪಲಾರೆವು. 'ವಾಸ್ತವತೆ ಎನ್ನುವ ಮಾತಾದರೂ ಕಲಾದೃಷ್ಟಿಯಿಂದ, ಸಾಹಿತ್ಯದೃಷ್ಟಿಯಿಂದ ಬಾಹ್ಯ ಬಿಂಬಗಳ ತಾದ್ರೂಪಿಕ ಅನುಕರಣೆ' ಎಂದು ಎಂದೂ ಅರ್ಥವಾಗಬಾರದು. ಚಿತ್ರಕೃತಿಯಾಗಲೀ, ಸಾಹಿತ್ಯವಾಗಲೀ ಆ ರೀತಿಯ ಯಾಂತ್ರಿಕ ಅನುಕರಣೆಯನ್ನು ಪ್ರಕಟಿಸುವ ದಾರಿಗಳಲ್ಲ. ಚಿತ್ರನೋಡಿದಾಗ, ನಾಟಕವನ್ನು ಓದಿದಾಗ, ಹಾಡು ಕೇಳಿದಾಗ 'ಇದು ಸಂಭವನೀಯ'-ಎಂದು ಮನಸ್ಸಿನ ಒಪ್ಪಿಗೆ ಸೆಳೆಯುವ ಗುಣ ಅವುಗಳಲ್ಲಿರಬೇಕಾದುದು ಮುಖ್ಯ. ಇತರ ಕಲೆಗಳಿಗೂ, ಸಾಹಿತ್ಯಕ್ಕೂ ಅನ್ವಯಿಸುವ ಈ ತತ್ತ್ವ, ಸಾಹಿತ್ಯದಲ್ಲೊಂದಾದ ನಾಟಕಕ್ಕೂ ಅನ್ವಯಿಸುತ್ತದೆ.

ನಾಟಕದಲ್ಲಿ ವಾಸ್ತವತೆ ಎಂದರೇನು?—ಎಂಬುದನ್ನು ಇನ್ನು ಚರ್ಚಿಸುವ. ನಾಟಕ ಕೆಲವೊಂದು ಪಾತ್ರಗಳು ನಡೆಯಿಸುವ ಸಂಭಾಷಣೆಯ ಮೂಲಕವಾಗಿ ಯಾವುದೋ ಒಂದು ಪ್ರಧಾನ ರಸದ ಬೆಳೆವಣಿಗೆಯನ್ನೂ, ವ್ಯಕ್ತಿಗಳ ಮಾನಸಿಕ ಸಂಘರ್ಷಣೆಯನ್ನೂ, ಜೀವನದ ಒಂದು ಸಮಸ್ಯೆಯನ್ನೂ, ಚಿತ್ರಿಸುವ ಒಂದು ಸಾಧನವಿಶೇಷ. ಚಿತ್ರಿಸಿದ ಸಂಭಾಷಣೆಯು ಮುಖ್ಯ ಗುರಿಯನ್ನು ಪೋಷಿಸಿಕೊಂಡು 'ಈ ಪ್ರಸಂಗ ಹೀಗಾಗಿರಬೇಕು' 'ಇಂಥ ಸನ್ನಿವೇಶದಲ್ಲಿ ಈ ಬಗೆಯ ಮನೋಧರ್ಮವುಳ್ಳ ವ್ಯಕ್ತಿ ಹೀಗೆ ವರ್ತಿಸಿಯಾನು' 'ಹೀಗೆ ಮಾತಾಡಿಯಾನು'– ಎಂಬ ಭ್ರಮೆಯನ್ನು ಹುಟ್ಟಿಸಲು ಶಕ್ತವಾದಲ್ಲಿ ನಾಟಕದ ಕೆಲಸವಾಯಿತು. 'Drama should mirror life. 'Art is a mirror of life.' ಎನ್ನುವ ಸಿದ್ಧಾಂತಗಳ ಅರ್ಥವಾದರೂ ಇಷ್ಟೇ; ಇದಕ್ಕೂ ಹೆಚ್ಚಿಗಿಲ್ಲ.

ನಾಟಕದಲ್ಲಿ ಸಾಮಾನ್ಯವಾಗಿ— ನಾವು ಮಾನವಕುಲಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತೇವೆ. ದೇವ ದಾನವರನ್ನು ತರುವ ಪೌರಾಣಿಕ ಕತೆಗಳೂ ಉಂಟು. ಅವರುಗಳು ಬಂದ ಮಾತ್ರದಿಂದ–ನಾಟಕ ಅವಾಸ್ತವಿಕವಾಗಬೇಕಾಗಿಲ್ಲ. ಕಾರಣ– ಈ ತನಕ ಮಾನವನು ಚಿತ್ರಿಸಿದ ಯಾವತ್ತು ದಾನವರು, ದೇವರು, ದೇವತೆಗಳು–ಮಾನವಧರ್ಮದ ಮಟ್ಟವನ್ನು ಮೀರಿ ನಿಂತಿಲ್ಲ; ಮೀರುವುದು ಶಕ್ಯವೂ ಇಲ್ಲ. ನಿಜವಾದ ದೇವ-ದಾನವರಿದ್ದರೆ, ಅವರ ಪರಿಚಯ ಮಾನವನ ತಿಳಿವಿಗೆ ಇನ್ನೂ ಅತೀತವಾಗಿಯೇ ಉಳಿದಿದೆ. ರಾಮಾಯಣದ ಕತೆಗಳು, ಮಹಾಭಾರತದ ಕತೆಗಳು ಮಾನವೀಯ ಕತೆಗಳೇ. ಮನುಷ್ಯ ಪಟ್ಟರಲಾರದ ದುಃಖ, ಕರುಣ, ಆನಂದ. ಆಕ್ರೋಶಗಳನ್ನು ಅಲ್ಲಿಯ ಯಾವ ಪಾತ್ರಗಳೂ ತೋರುವುದಿಲ್ಲ. ಅಲ್ಲಿಯ ಗುಣಗಳು ಯಾವತ್ಕಾಲದ ಮಾನವೀಯ ಸ್ವಭಾವಗಳನ್ನು ತೋರುವುದರಿಂದ, ಅವು ವಾಸ್ತವಿಕವಾದುವುಗಳೇ. ಮಹಾಭಾರತದಲ್ಲಿಯ ದುಶ್ಶಾಸನನ ನೀತಿ ಅನಾಗರಿಕ; ಅದರಂತೆಯೆ ಭೀಮಸೇನನ ಸೇಡಿನ ಪ್ರತಿಜ್ಞೆಯೂ ಅನಾಗರಿಕ; ಅದನ್ನು ನೆರವೇರಿಸಿದ ಬಗೆಯೂ ಅನಾಗರಿಕವೇ. ಆದರೆ ಈ ಎರಡು ಶೀಲಗಳನ್ನು ಪ್ರಕಟಿಸಿದ ವ್ಯಕ್ತಿಗಳು, ಅವರ ಬಗೆಗಳು—ಇಂದಿಗೂ ಮಾನವೀಯ ಕೃತಿಗಳೇ. ಸರ್ವಸಾಮಾನ್ಯವಲ್ಲದುದರಿಂದ ಅಮಾನುಷವೆನಿಸಬಹುದು. ಮನುಷ್ಯ ಹೀಗಾದರೂ ಇರಬೇಕು—ಎಂದು ಬಯಸುವ ನಮ್ಮ ಆದರ್ಶಕ್ಕೆ ಕಡಿಮೆಯಾದ ನಡತೆಯನ್ನು ನಾವು 'ಅಮಾನುಷ' ಎನ್ನಬಹುದು. ಅದಕ್ಕೂ ಹೆಚ್ಚಿನ ನಡತೆಗಳನ್ನು ನಾವು 'ದೈವಿಕ' ಎನ್ನುತ್ತೇವೆ. ಆದರೂ ಅವು ಮಾನವೀಯ ಗುಣಗಳೇ.

ರಾಮಾಯಣದಲ್ಲಿ ರಾಮ ಬರುತ್ತಾನೆ. ಕವಿ, ರಾಮನನ್ನು ದೇವನನ್ನಾಗಿ ರಚಿಸಿದ್ದಾನೆ. ರಾವಣನನ್ನು ರಾಕ್ಷಸನನ್ನಾಗಿ ಮಾಡಿದ್ದಾನೆ. ಮಾನುಷವಾದ ಗುಣಗಳಿಂದ ಕೂಡಿದ ರಾಮನು ದೇವನೆನಿಸುತ್ತಾನೆ. ಸನ್ನಿವೇಶವೊಂದರಲ್ಲಿ ಸೀತೆಗಾಗಿ ಆತ ವಿಲಪಿಸುವ ಬಗೆ, ಸೀತೆಯ ಪಾವಿತ್ರ್ಯವನ್ನು ಸಂಶಯದಿಂದ ನೋಡುವ ಬಗೆ, ಭರತನನ್ನು ಭೇಟಿಯಾದ ವಾತ್ಸಲ್ಯ ಪೂರ್ಣ ಸನ್ನಿವೇಶ— ಇವೆಲ್ಲ. ಮಾನವನ ಗುಣಗಳನ್ನೇ ಹೇಳುತ್ತವೆ. ಕೆಲವಾದರೂ ಮನುಷ್ಯರಲ್ಲಿ ಕಾಣುವ ಗುಣಗಳನ್ನೇ ಹೇಳುತ್ತವೆ. ಅಂಥ ಗುಣ ಉದಯಿಸುವುದಕ್ಕೆ— ತಕ್ಕ ಗುರು, ತಕ್ಕ ತಾಯಿತಂದೆ, ತಕ್ಕ ಆವರಣ— ಕಲ್ಪಿಸಿದ ವಾಲ್ಮೀಕಿಯು, ವಾಸ್ತವಿಕತೆಯನ್ನೇ ಹೇಳಿದ್ದಾನೆ—ರಾಮಾಯಣದಲ್ಲಿ.

ರಾಮಾಯಣದ ರಾವಣ ಒಂದು ತಲೆಯವನಲ್ಲ—ಹತ್ತು ತಲೆಯವನು. ಇದು ಅವಾಸ್ತವಿಕ. ಆದರೆ ರಾವಣನ ಗುಣ-

ನಿರೂಪಣೆಗೆ ಇದು ಅವಶ್ಯವಾಯಿತು. ಒಂದು ಸಾಂಕೇತಿಕ ಸಾಹಿತ್ಯವಾಯಿತಷ್ಟೆ. ಅದಕ್ಕಾಗಿ ನಾವು ಮುನಿಸುಗೊಳ್ಳಬೇಕಿಲ್ಲ. ಅವನ ದುಷ್ಟತನವನ್ನೋ, ಶೌರ್ಯವನ್ನೋ ಅತಿಕರಿಸಿ ತೋರಿಸಲು—ದಶಶಿರಗಳು ಒಂದು ಸಲಕರಣೆಯಾಗಿವೆಯಷ್ಟೆ. ತಂಗಿಯ ಮಾನಭಂಗದಿಂದ ರೋಷಗೊಂಡು, ಸೀತೆಯ ರೂಪಕ್ಕೆ ಆಸೆಗೊಂಡು, ತಿರಸ್ಕೃತ ಪ್ರಣಯದಿಂದ ನೊಂದು, ಬೆಂದು,—ರಾಮನೊಡನೆ ಕಾಳಗಕ್ಕೆ ಹೋದ ರಾವಣ ಮನುಷ್ಯನೇ! ನಾಟಕದ ಲಾಗಲಿ, ಇನ್ನಾವುದರಲ್ಲಾಗಲೀ ವಾಸ್ತವಿಕತೆಯನ್ನು ನೋಡುವ ದಾರಿ ಇಡು. ತೀರ ಕೆಲವಂಲ್ಲೇ ಕಾಣುವ ದೌರ್ಜನ್ಯವನ್ನು ನಾವು ದಾನವತೆ ಎನ್ನಬಹುದು. ತಪ್ಪಿಲ್ಲ ಎಂದ ಮಾತ್ರಕ್ಕೆ ಅದು ಅವಾಸ್ತವಿಕವಾಗಬೇಕಿಲ್ಲ.

ನಮ್ಮ ಹಳೆಯ ನಾಟಕಗಳನ್ನು ನೋಡುವಾಗ ಕೆಲವೊಂದು ಅವಾಸ್ತವಿಕ ಸಾಧನಗಳನ್ನು ನಾವು ಕಾಣುತ್ತೇವೆ. 'ಅಶರೀರವಾಣಿ' ಅಂತಹದು. 'ಪುಷ್ಪಕ ವಿಮಾನ' ಅಂತಹದು. ಶಿಲೆಯು ಶಾಪವಿಮೋಚನೆಯಿಂದ ಸ್ತ್ರೀಯಾಗುವುದು ಅಂತಹದು. ಯಾವಲ್ಲಿ ತನಗೆ ದೊರಕತಕ್ಕ ಕಥಾನಕವನ್ನು ಹೇಳುವಾಗ ಅದರ ತಾಳಮೇಳವಿಲ್ಲದ ಭಾಗಗಳನ್ನು, ಕರ್ಮಫಲ ಸಿದ್ಧಾಂತಕ್ಕೆ ಹೊಂದಿಸಿ ಹೇಳಲು ನಾಟಕಕಾರನ ಅನುಭವ ಸಾಲದಾಯಿತೋ—ಆಗ ಅಂಥ ಪ್ರಸಂಗಗಳಿಂದ ಪಾರಾಗುವುದಕ್ಕೆ ನಮ್ಮ ಪ್ರಾಚೀನ ಸಾಹಿತಿಗಳು, ನಾಟಕಕಾರರು ಇಂಥ ನೆರವು ಪಡೆದಿದ್ದಾರೆ. ರಾಮನ ಮನಸ್ಸೂ ಸೀತೆಯನ್ನು ದೊರಕಿಸಿದ ಮರುಕ್ಷಣವೇ ನಂದಿಗ್ರಾಮವನ್ನು ಸೇರುವ ಹಂಬಲ ಮಾಡಿದ್ದಕ್ಕೆ, ಪುಷ್ಪಕ ವಿಮಾನ ಕರಿಸಿಕೊಟ್ಟರು. ಕುಲಶೀಲವರಿಯದ ಸ್ತ್ರೀಯೊಬ್ಬಳಲ್ಲಿ ಮೋಹಗೊಂಡು, ಮದುವೆಯಾಗಲು ಹಂಬಲಿಸಿದಾಗ, ಸಂಶಯ ನಿವಾರಣೆಗೆ, ಅವಳ ಕುಲಗೋತ್ರಗಳನ್ನು ಅಶರೀರವಾಣಿಯಿಂದ ಹೇಳಿಸಿದರು. ಯೋಗ್ಯವಾದ ದಾರಿಯಲ್ಲಿ ನಡೆದೂ, ದುಃಖಭಾಗಿಯಾದವನ ಸಲುವಾಗಿ ಸಮಾಧಾನ ಹೇಳಲಾರದ ಕವಿ, ಶಾಪದ ನಿಮಿತ್ತವನ್ನು ಹೇಳಿದ. ಇವಾವುವೂ ಮಹತ್ತ್ವದ ಸಂಗತಿಗಳಲ್ಲ; ಅವಾಸ್ತವಿಕವೆಂದು ಕಂಡರೂ ಅಲ್ಪ ಸಂಗತಿಗಳವು.

ನಾಟಕಗಳಲ್ಲಿ ಆತ್ಮಕಥನ ಬರುವ ರೂಢಿಯುಂಟು. ಸಂಭಾಷಣೆಯಿಂದಲೇ ನಿರ್ವಹಿಸಬೇಕಾದ ನಾಟಕದಲ್ಲಿ, ಮನುಷ್ಯ ಹುಚ್ಚನಂತೆ ತನ್ನಷ್ಟಕ್ಕೆ ಮಾತನಾಡುವುದು ಅಪಹಾಸ್ಯವಲ್ಲವೇ? ತೀರ ವಾಸ್ತವಿಕತೆಯ ದಾರಿಯಿಂದ ನೋಡಿದರೆ ಇದು ಅಪಹಾಸ್ಯವೇ! ಆದರೆ ಯಾವಲ್ಲಿ ಸಂಭಾಷಣೆಗೆ ನೆರವಾಗುವ ಇನ್ನೊಂದು ವ್ಯಕ್ತಿ ದೊರೆಯನೋ ಆಗ ಪಾತ್ರದ ಮನೋಧರ್ಮವನ್ನು ಚಿತ್ರಿಸಲು "ಆತ್ಮಗತ"ಕ್ಕೆ ಅವಕಾಶ ಕೊಟ್ಟಿದ್ದಾರೆ. ಒಂದು ಕತೆಯನ್ನು ಬಾಯಿಂದ ಕತೆಗೆ ವಿರೋಧಬಾರದಂತೆ, ನೆರವಾಗುವಂತೆ, ಮಾತನಾಡಬಹುದಾಗಿದ್ದೂ, ಸಂಭಾಷಣೆಗೆ ಯೋಗ್ಯನಾದ ಎದುರಿನ ವ್ಯಕ್ತಿ ಇರುವಾಗಲೂ, ಆತ್ಮಗತ ಭಾಷಣಮಾಡುವುದು, ಅವಾಸ್ತವಿಕ; ಅಯುಕ್ತ ಅಥವಾ ನಾಟಕದ ಪರಿಪೋಷಣೆಗೆ ನೆರವಾಗದಿದ್ದರೆ. ಸಭಿಕರನ್ನು ನಗಿಸುವ ಉದ್ದೇಶದಿಂದಲೇ ಬಡಬಡಿಸುವ ಕೃಷ್ಣಲೀಲೆಯ ವಿಜಯನ ಅನೇಕ ಆತ್ಮಗತದ ಅಪಲಾಪಗಳು ಅವಾಸ್ತವಿಕ. ಅಂಥ ಆತ್ಮಗತಗಳು—ಇಂದಿನ ಸಾಮಾಜಿಕ ನಾಟಕಗಳಲ್ಲಿ ಬಂದರೂ ಅವಾಸ್ತವಿಕವೆನಿಸಬಹುದು.

ಇಂದು ಪುರಾಣಕತೆಗಳಿಗೆ ನಾವು ಮಹತ್ತ್ವ ಕೊಡುತ್ತಲಿಲ್ಲ. ಕೊಡಬೇಕಾಗಿಯೂ ಇಲ್ಲ. ಆವರಣ, ಸಂಸ್ಕೃತಿ ಪರಿಚಯಗಳಿಂದ ನಮಗೆ ಗೊತ್ತಿರುವ ಸಮಾಜದ ಚಿತ್ರಗಳನ್ನೇ ನಾಟಕಗಳಲ್ಲಿ ತೆಗೆದುಕೊಳ್ಳುತ್ತೇವೆ. ಸಾಮಾಜಿಕ ನಾಟಕಗಳೆಂದು ಅವನ್ನು ಕರೆಯುತ್ತಿದ್ದೇವೆ. ಇಂಥ ಕತೆಗಳಲ್ಲಿ ಯಾವ ರೀತಿಯ ಅವಾಸ್ತವಿಕತೆ ಕಾಣಿಸಬೇಕಾದ ಪ್ರಮೇಯವಿಲ್ಲದಿದ್ದರೂ ಅವು ಕಾಣಿಸುತ್ತಿರುವುದೇ ಹೆಚ್ಚು. ಸ್ತ್ರೀ ವಿದ್ಯಾಭ್ಯಾಸ, B. A., M. A. ಮೊದಲಾದಂಥ ನಾಟಕಗಳನ್ನು ನೋಡುವಾಗ, ಆ ರೀತಿಯ ಸುಧಾರಕರೂ ವಿದ್ಯಾವಂತ ಮಹಿಳೆಯರೂ ಇರುತ್ತಾರೆಯೇ—ಎಂಬ ಭ್ರಮೆ ನಮಗೆ ಬಂದೇ ಬರುತ್ತದೆ. ನಾಟಕದ ವ್ಯಕ್ತಿಗಳೆಲ್ಲ ಕೃತಕ ಚರ್ಚಾಕೂಟದ ಮೆಂಬರರಂತೆ ಸ್ತ್ರೀವಿದ್ಯಾಭ್ಯಾಸ, ಸಮಾಜ ಸುಧಾರಣೆ, ವರದಕ್ಷಿಣೆ, ಸ್ತ್ರೀ ಪುನರ್ವಿವಾಹಗಳಂತಹ ಪ್ರಶ್ನೆಗಳನ್ನು ತೆಗೆದುಕೊಂಡು, ತಂತಮ್ಮ ಕುದುರೆಗಳಿಗೆ ಮೂರೇಕಾಲು

ZANDU

PROTOCASEN

(Whole Casein Hydrolysate)

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.

BOMBAY 14.

Sole Agents:—

M's. Pranlal and Sons

Chemists, Druggists

Station Road. HUBLI

(H. O. Bangalore City

ಎಂದು ಸಾರಿ, ವರ್ತಿಸುವಾಗ—ಅವರು ಉಟ್ಟ ಉಡಿಗೆ ನಿತ್ಯದ್ದಾದರೂ, ಆಡುವ ಮಾತು ಪರಿಚಯದ್ದಾದರೂ, ಸಂಭಾಷಣೆಗಳು ಕೃತಕವಾಗುತ್ತವೆ, ಅವಾಸ್ತವವೆನಿಸುತ್ತವೆ. ಪರಿಚಿತವಾದ ನಾಟಕ ಒಂದನ್ನು ನಿಮ್ಮ ಮುಂದೆ ತರಿಸುತ್ತೇನೆ. ಕೈಲಾಸಂರವರ "ಹುತ್ತದಲ್ಲಿ ಹುತ್ತ" ನಾಟಕವನ್ನು ನೋಡಿ, ಅಲ್ಲಿಯ ಮಾತಿನ ಚಮತ್ಕಾರವನ್ನೂ ಹಾಸ್ಯದ ಹಾರಾಟವನ್ನೂ ಕಂಡು—ನಾವು ಮುಗ್ಧರಾಗುತ್ತೇವೆ. ಆದರೂ ಇದು ವಾಸ್ತವಿಕವೇ?—ಎಂಬ ಪ್ರಶ್ನೆ ಮೂಡುತ್ತದೆ. ನಮಗೆ ಪರಿಚಿತವಾದ ಸಮಾಜದಲ್ಲಿ ಈ ಬಗೆಯ ಸನ್ನಿವೇಶಗಳು ಉಂಟಾಗುತ್ತವೆಯೇ? ಒಂದೊಂದಾಗಿ ಅಲ್ಲ—ಸರಮಾಲೆಯಾಗಿ ಅಂಥವು ಸಂಭವಿಸುವಾಗ, ನಾಟಕದ ಪ್ರತಿಯೊಂದು ಪಾತ್ರವೂ ಹಾಸ್ಯ ಹೊರಡಿಸುವ ಬಹುಭಾಷಾ-ವಿಶಾರದರಾಗಿ, ಪ್ರಾಸಗಳ ಮೇಲೆ ಕುಣಿದಾಡಿ—ನಗಿಸುವುದು, ವಾಸ್ತವಿಕವಾಗಿ ಕಾಣಿಸುತ್ತದೆಯೇ? ಇಲ್ಲಿಯ ಚಮತ್ಕಾರಿಕ ಸನ್ನಿವೇಶಗಳೂ, ವ್ಯಕ್ತಿಗಳೂ ನಮಗೆ ವಾಸ್ತವಿಕವೆನಿಸುತ್ತವೆಯೇ? ಇದೇ ನಾಟಕಕಾರರ "ಟೊಳ್ಳುಗಟ್ಟೆ"ಯ ರೀತಿಗೂ ಇದಕ್ಕೂ ಎಂಥ ವ್ಯತ್ಯಾಸ ಕಾಣುವುದಿಲ್ಲ. "ಟೊಳ್ಳುಗಟ್ಟೆ" ವಾಸ್ತವಿಕ ರೂಪದಲ್ಲಿ ಅವಾಸ್ತವಿಕ.

ನಗುವಿನ ಉದ್ದೇಶದಿಂದಲೇ ಎಂಬಂತೆ ಬರೆದ "ಉಂಡಾಡಿ ಗುಂಡ" ದಂತಹ ಕೆಲವೊಂದು ನಾಟಕಗಳು ರಂಗಮಂಟಪಕ್ಕೆ ಈಗೀಗ ಬರುತ್ತಲಿವೆ. ನಿತ್ಯಜೀವನದಲ್ಲಿ ಇಂತಹ ಪಾತ್ರಗಳು ಸಂಧಿಸಿದಲ್ಲಿ "ಹುಚ್ಚರು" ಎಂದು ಎನಿಸಿಕೊಳ್ಳಬಹುದಾಗಿದ್ದಾಗ, ನಾಟಕದಲ್ಲಿ ಅಂತಹ ಅರೇಳು ಮಂದಿ ಕಲೆತು, ನಮ್ಮನ್ನು ನಗಿಸಿದ ಮಾತ್ರಕ್ಕೆ ಅದು ವಾಸ್ತವಿಕ ನಾಟಕ ಆಗುತ್ತದೆಯೇ? ಈಗಿನ ಉಡಿಗೆ ಉಟ್ಟುಕೊಂಡುಬಂದರೂ ಈಗಿನ ಪ್ರಶ್ನೆಯನ್ನು ತೆಗೆದುಕೊಂಡರೂ, ಅನುಭವ ಸನ್ನಿವೇಶ, ಮನೋಧರ್ಮ, ರಸಪ್ರವಾಹಗಳಲ್ಲಿ ಸತ್ಯವನ್ನೇ ತೋರಲಾರದ ಇಂಥ ನಾಟಕ ವಾಸ್ತವಿಕ ನಾಟಕವಾಗಲಾರದು.

ಇಬ್ಸೆನನಂಥವರು "ಪಿಲರ್ಸ್ ಓಫ್ ಸೊಸೈಟಿ" "ಡಾಲ್ಸ್‌ಹೌಸ್" ನೊದಲಾದ ಸಮಸ್ಯಾತ್ಮಕ ನಾಟಕಗಳನ್ನು ಬರೆದಿದ್ದಾರೆ. ಅವನ್ನು ನಾವು ವಾಸ್ತವಿಕ ನಾಟಕಗಳೆಂದು ಒಪ್ಪುತ್ತಿದ್ದೇವೆ. ಅದರಂತೆ ಅಮೇರಿಕೆಯ ನಾಟಕಕಾರನಾದ ಯೂಜಿನ್ ಓನೈಲ್‌ನ ಕೆಲವೊಂದು ನಾಟಕಗಳಿವೆ. ಇವರ ನಾಟಕಗಳಲ್ಲಿ ಬರುವ ವ್ಯಕ್ತಿಗಳು ಆಯಾಯ ದೇಶದ, ಕಾಲದ ಆವರಣಗಳನ್ನು ಚಿತ್ರಿಸುತ್ತಾರೆ. ಅಲ್ಲಿಯ ಪ್ರಸಂಗಗಳನ್ನು ವ್ಯಕ್ತಿಗಳ ಮನೋಧರ್ಮವನ್ನು ತಕ್ಕುದಾದ ರೀತಿಯಲ್ಲಿ ವ್ಯಕ್ತಗೊಳಿಸುತ್ತಾರೆ. ಅವೇ ಕತೆಗಳನ್ನು ಹಿಂದೂ ದೇಶದ ಆವರಣಕೊಟ್ಟು ನಿರೂಪಿಸಲು ಹೋದರೆ, ನಮ್ಮ ಪಾಲಿಗೆ ಅವು ವಾಸ್ತವವಾಗಿ ಕಾಣಿಸಲಾರವು. ಅವರು ತೋರಿಸಿದ ಹಿನ್ನೆಲೆ ಇದ್ದಾಗ ಮಾತ್ರ, ಮುಂದಿನ ಸಮಸ್ಯೆಗಳು ತರ್ಕವಿತರ್ಕಗಳು ಸಹಜವಾಗಿ ಕಾಣಿಸುತ್ತವೆ. ನಮ್ಮ ಸಮಾಜದ ಹಿನ್ನೆಲೆಯಲ್ಲಿ ಅವೇ ಸಮಸ್ಯೆಗಳು ಅವೇ ರೂಪದಲ್ಲಿ ಮೂಡಲಾರವು; ಮೂಡಿದರೂ ನಮ್ಮ ಸಂಪ್ರದಾಯದ ದೆಸೆಯಿಂದ ವ್ಯಕ್ತವಾಗಬಹುದಾದ ಮನೋಧರ್ಮ ಬದಲಾಗಿ ಬಿಡುತ್ತದೆ. "ಉಂಡಾಡಿ ಗುಂಡ" ಎಂಬ ನಾಟಕ ಫ್ರೆಂಚ್ ನಾಟಕಕಾರನೊಬ್ಬ ಬರೆದ ಒಂದು ಕಥೆಯ ಕನ್ನಡ ರೂಪಾಂತರವಂತೆ. ಮಾವನ ಮನೆಗೆ ಹೋಗುವ ಅಳಿಯನೊಬ್ಬನ ಹಾಸ್ಯಮಯ ಕಥಾನಕವಿದು ಫ್ರೆಂಚ್ ನಾಟಕದ ಮಾವ "Inn keeper" ಆಗಿದ್ದರೆ ಕನ್ನಡದ ಮಾವ "ಹೋಟೇಲಿನ ಯಜಮಾನ" ಎಂದು ರೂಪಾಂತರಗೊಂಡಿದ್ದಾನೆ. ಪಾಶ್ಚಾತ್ಯರ "Inn keeping" ಪದ್ಧತಿ ನಮ್ಮಲ್ಲಿಲ್ಲ. ಗಂಡ ಹೊಟೇಲಿಟ್ಟು ಹೆಂಡತಿ ಮಕ್ಕಳೆಲ್ಲರು ಆಗಂತುಕರನ್ನು ಆಡಿಗೆ ಉಪಚಾರ, ಸಂಗೀತಗಳಿಂದ ಆ ಮಾದರಿಯಲ್ಲಿ ತೃಪ್ತಿಪಡಿಸುವ ರೂಢಿ ನಮಗೆ ವಿಚಿತ್ರವಾದದ್ದು. ಆದರೆ ನಾಟಕಕಾರರು ಫ್ರೆಂಚ್ ಆವರಣವನ್ನು ಕನ್ನಡದಲ್ಲಿಯೂ ಹಾಗೆಯೇ ಬಿಟ್ಟು ಇಳಿಸಿದ್ದಾರೆ. ನಮ್ಮ ಪಾಲಿಗೆ ಇದು ಸಹಜತೆಯ ವಿಪರ್ಯಾಸ. "ಪುಡಿಂಗ್"ನ ಬದಲು 'ಲಾಡು, ಜಿಲೇಬಿ' ಎಂದರೂ 'ಸಾರಾಯಿಯ' ಬದಲು ಕಾಫಿಯ ವರ್ಣನೆ ಬಂದರೂ ಸಮಾಜದ ಹಿನ್ನೆಲೆ ಬೇರೆಯಾದುದರಿಂದ ಪಾತ್ರಗಳ ನಡೆವಳಿಕೆ ನಮಗೆ ದೇಶೀಯವಾಗಿ ಎಂದೂ ಕಾಣಿಸವು. ಇಂಥಲ್ಲಿ ನಾಟಕಕಾರ ಮಾಡುವ ರೂಪಾಂತರ ಅವಾಸ್ತವತೆಯ ಪರಮಾವಧಿ ಎನಿಸುತ್ತದೆ.

ಇನ್ನೊಂದು ಬಗೆಯ ಅವಾಸ್ತವತೆ—ನಾಟಕಗಳಲ್ಲಿ ಉಂಟಾಗುವುದು—ಅನುರಕ್ತಿಯಿಂದ. ಅನುರಕ್ತಿಯೆಂಬುದನ್ನು Sentimentalism ಎಂಬ ಅರ್ಥದಿಂದ ಹೇಳುತ್ತಿದ್ದೇನೆ. ಯಾವುದೇ ಒಂದು ತತ್ತ್ವ ಇಲ್ಲವೇ ಧ್ಯೇಯ ಮುಂದಿಟ್ಟುಕೊಂಡು, ಅದರ ಸಾಧನೆಗಾಗಿ ಒಂದು ಸನ್ನಿವೇಶ ಕಲ್ಪಿಸಿ, ಆ ಧ್ಯೇಯ ಸಾಧನೆಗಾಗಿ ಪಾತ್ರಗಳ ಮಾತನ್ನೂ, ನಡತೆಯನ್ನೂ—ತನ್ನ ಇಷ್ಟಬಂದಂತೆ ನಾಟಕಕಾರ ಜಗ್ಗುವುದುಂಟು! ಧ್ಯೇಯಕ್ಕೂ ಹಿನ್ನೆಲೆಗೂ ನಿತ್ಯಜೀವನದಲ್ಲಿ, ವ್ಯವಹಾರವಲ್ಲಿ ಎಷ್ಟು ಎಷ್ಟು ಅಂತರವಿರುತ್ತದೆಯೋ ಅಷ್ಟಷ್ಟು ಪಾತ್ರಗಳ ಮಾತು ಅವಾಸ್ತವಿಕವಾಗಿ ಹೋಗುತ್ತದೆ. ಇಂಥ ಆವರಣದಲ್ಲಿ, ಇಂಥ ಸಮಾಜದಲ್ಲಿ ಬೆಳೆದ ಒಬ್ಬ ವ್ಯಕ್ತಿ, ಇಂಥ ಪ್ರಸಂಗ ಬಂದಾಗ—ಹೀಗೆ ಮಾತಾಡಿಯಾನೇ?—ಎಂಬುದಕ್ಕೆ ಸಮಂಜಸವಾದ ಉತ್ತರವನ್ನು ನಾವು ಕೊಡದೆ ಹೋದರೆ, ಅವಾಸ್ತವಿಕತೆಗೆ ಎಡೆಯಾಗುತ್ತದೆ. ಎಲ್ಲೆಲ್ಲಿಯೂ ಇಂದು ಬಂಡವಳಶಾಹಿಯು ತಲೆದೋರಿದೆ. ಒಂದು ರಾಜಕೀಯ ಪಂಗಡ ಅಥವಾ ಬರೆಹಗಾರರ ಗುಂಪು ಅದರ ನಿರ್ಮೂಲನಕ್ಕೆ ಹೊರಟಿದ್ದಾರೆ. ಅಂಥವರು ಪ್ರಚಾರಕ್ಕಾಗಿ ನಾಟಕವನ್ನು ಬಳಸತೊಡಗುತ್ತಾರೆ. ಬಂಡವಳಶಾಹಿಯ ಕೊರತೆಯನ್ನು ಹೇಳುವುದು ಅವರ ಗುರಿ. ಆ ಗುರಿಯನ್ನು ಸಾಧಿಸುವುದಕ್ಕೆ—ಒಬ್ಬ ಶ್ರೀಮಂತನನ್ನೂ ಕೆಲವು ಬಡವರನ್ನೂ ನಾಟಕದಲ್ಲಿ ಸೇರಿಸಿಕೊಳ್ಳುತ್ತಾರೆ. ಶ್ರೀಮಂತ, ಎಲ್ಲ ದುಷ್ಟ-ಗುಣಗಳಿಗೂ—ಮದ್ಯಪಾನ, ವ್ಯಭಿಚಾರ, ಜೂಜು, ಕ್ರೋಧ,

ಕೊಲೆ-ಪಾತಕಕತನ ಮೊದಲಾದ ಗುಣಗಳಿಗೆಲ್ಲ ತವರುಮನೆಯಾಗಿರುವಂತೆ ತೋರಿಸಿ, ಬಡವನೆಂಬವನು ಸಾತ್ವಿಕ, ಗುಣಶೀಲ, ಪ್ರೇಮಿ—ಎಂಬಂತೆ ತೋರಿಸುತ್ತಾರೆ. ಇವರಲ್ಲಿ ಸಂಗರ ತಂದೊಡ್ಡಿ ಬಡವನ ಮಗನಿಗೂ, ಆ ಶ್ರೀಮಂತನ ಮಗಳಿಗೂ ಪ್ರಣಯವನ್ನು ಗಂಟುಹಾಕುತ್ತಾರೆ. ಪ್ರಣಯವು ಪಂಗಡ ದಾಟಬಲ್ಲ ಶಕ್ತಿ ಎಂಬುದು ನಿಜ; ಆದರೆ ಆ ನೆಪದಿಂದ ಎರಡು ಪಂಗಡಗಳೊಳಗಿನ ವೈಷಮ್ಯ ಬೆಳೆಯಿಸಿ, ಗುರಿ-ಸಾಧಿಸಲು ಹೊರಟ ನಾಟಕಕಾರನ ದಾರಿ ಅಸಹಜವೆನಿಸಬಹುದು. ಸಾಲದುದಕ್ಕೆ ಬಡವರಿಗೊಪ್ಪುವ ಪ್ರೇಮಿಯನ್ನಾಗಿ ಮಾಡಲು ಕಥಾನಾಯಕೆಯನ್ನು ಕಟುವಾದ "ಸಮಾಜವಾದಿ" ಯನ್ನಾಗಿ ಮಾಡಿ, ಮಾರ್ಕ್ಸ್-ತತ್ತ್ವದ ಉಪದೇಶಿಯನ್ನಾಗಿ ಮಾಡುವುದನ್ನೂ, ಪಂಗಡದ ವೈಷಮ್ಯ ಹೆಚ್ಚಿಸುವುದನ್ನೂ ನಾವು ಕಾಣಬಹುದು. ಇಂಥ ನಾಟಕವು, ಆರಂಭದಲ್ಲಿಯೇ ತನ್ನ ಧ್ಯೇಯಕ್ಕಾಗಿ, ಪಾತ್ರಗಳ ಗುಣಗಳನ್ನು ಅಸಹಜವಾಗಿ ಚಿತ್ರಿಸಕೊಡಗುತ್ತದೆ. ಮುಂದಿನ ಬೆಳವಣಿಗೆ, ಸಂಭಾಷಣೆ, ಸನ್ನಿವೇಶಗಳೆಲ್ಲವೂ—ಒಂದಕ್ಕಿಂತ ವಿಚಿತ್ರವಾಗಿ ಕಾಣಿಸುತ್ತ, ಧ್ಯೇಯಾಂಧರಾದವರಿಗೆ ಭಾವಾವೇಶ ಕೆರಳತಕ್ಕ ಬಗೆಯಲ್ಲಿ ಸಾಗುತ್ತದೆ. ನಾಟಕದ ಕತೆ ಇಂದಿನದು; ಸಮಸ್ಯೆ ಇಂದಿನದು; ಪಾತ್ರಗಳ ಉಡಿಗೆ-ತೊಡಿಗೆ ತೀರ ಇಂದಿನವು; ಆದರೆ ನಾಟಕಕಲೆ ಇಷ್ಟಿದ್ದರೂ ಸಹಜವೆನಿಸಬೇಕಿಲ್ಲ. ಅನುಭವದ ಸತ್ಯ, ಪ್ರತಿಯೊಂದು ಪಾತ್ರಕ್ಕೂ ಮಾತಿಗೂ ನಡತೆಸನ್ನಿವೇಶಗಳಿಗೂ ಸಹಜತೆಯನ್ನು ಕೊಡುವತನಕ—ನಾಟಕ ವಾಸ್ತವವೆನಿಸುವುದು ಶಕ್ಯವಿಲ್ಲ; ನಾಟಕ ವಾಸ್ತವವಾಗಲು ಆಯಾಯ ವ್ಯಕ್ತಿಗಳ ದೃಷ್ಟಿಯಿಂದಲೇ ಅವರ ಮಾತುಗಾರಿಕೆ ಬೆಳೆಯಿಸಿ, ಸನ್ನಿವೇಶಗಳ ರಚನೆಯಾಗಬೇಕು. ನಾಟಕಕಾರನ ಮನಸ್ಸನ್ನೋ, ತತ್ತ್ವಪ್ರಚಾರ, ವನ್ನೋ ಹತ್ತುಜನರ ಬಾಯಿಂದ ಹಂಚಿಹೇಳಿದ ಮಾತ್ರಕ್ಕೆ ವಾಸ್ತವಿಕ ನಾಟಕ ಉಂಟಾಗಲಾರದು.

ಇಷ್ಟೆಲ್ಲ ಹೇಳಿದ ಬಳಿಕ, ವಾಸ್ತವಿಕತೆಗೆ ಸಂಬಂಧಿಸಿದಂತೆ ನಾಟಕ ಪ್ರದರ್ಶನವನ್ನು ಕುರಿತು ನಾಲ್ಕು ಮಾತು ಹೇಳಬಹುದು. ಮೊದಲಿಗೆ ರಂಗಮಂಟಪದ ಮಾತು ಬರುತ್ತದೆ. ಸಮನಾಗಿ ರಂಗಮಂಟಪ ಯೋಜಿಸಲು ಬರದಾತ, ಬೋಳುಪರದೆಗಳನ್ನು ತೂಗಿ ಅವರಣವೇನೆಂಬುದನ್ನು ಪ್ರೇಕ್ಷಕರ ಊಹೆಗೆ ಬಿಡುವುದು ಒಳತಾದ ಮಾತು. ನಮ್ಮ ವ್ಯವಸಾಯಿಗಳೂ ನಾಟ್ಯವಿಲಾಸಿಗಳೂ ಹೀಗೆ ಮಾಡದೆ, ತಾವು ಬಳಸುವ ತೆರೆಗಳಲ್ಲಿ ಅರಮನೆಯ ಉದ್ಯಾನಗಳನ್ನು, ಬೋಸ್ಟನ್‌ನಗರದ ಗೋಪುರಗಳನ್ನು, ಮುಂಬಯಿಯ ಬೀದಿಗಳನ್ನು ಎಂಥ ಕತೆಗಳಿಗೂ ಬಳಸುವುದನ್ನು ಕಂಡರೆ ಇಲ್ಲದ ಅವಾಸ್ತವಿಕತೆ ಎನಿಸುತ್ತದೆ. ಏನೂ ಅರ್ಥವಿಲ್ಲದ್ದು.

ಉಡಿಗೆ-ತೊಡಿಗೆಗಳಲ್ಲೂ ಈ ಬಗೆಯ ಅಪಹಾಸ್ಯ ಕಾಣುತ್ತದೆ. ಅನುಕೂಲವಿದ್ದವರೆಲ್ಲ—ಹಿಂದೀ ಸಾಮಾಜಿಕ ನಾಟಕಗಳಲ್ಲಿ ಯುರೋಪಿನ ಜನಗಳಂತೆ ಕೆಂಪಗಿನ ಬಣ್ಣ ಹೊಟ್ಟು ಬರುತ್ತಾರೆ. ಕಂದು ಬಣ್ಣದ ಜನಕ್ಕೆ ನಾಟಕದಲ್ಲಿ ಪ್ರವೇಶವೇ ಇಲ್ಲವೆಂಬಂತೆ ಕಾಣುತ್ತದೆ. ನಿತ್ಯದ ಮೈಬಣ್ಣ, ರಂಗಮಂಟಪದಲ್ಲಿ ವಿರಾಜಿಸಿದಾದರೂ 'ಇವರು ನಮ್ಮ ಜನ' ಎಂದು ಪ್ರೇಕ್ಷಕರು ಒಪ್ಪುವ ರೀತಿಯಲ್ಲಿ ಮುಖಕ್ಕೆ ಬಣ್ಣಸವರುವ ವಿಧಾನವನ್ನು ನಾವು ಕಲಿತಿಲ್ಲ. ಸಾಮಾಜಿಕ ನಾಟಕಗಳಲ್ಲೂ, ಪೌರಾಣಿಕ ನಾಟಕಗಳಲ್ಲೂ, ಐತಿಹಾಸಿಕ ನಾಟಕಗಳಲ್ಲೂ, ಸ್ತ್ರೀ ಭೂಮಿಕೆಗಳು ಉಟ್ಟ ಉಡಿಗೆಗಳನ್ನು ನೋಡಿದರೆ ಕಾಲ, ದೇಶ, ಕುಲ, ಸಂಸ್ಕಾರಗಳ ಕಲ್ಪನೆಯೇ ಹುಟ್ಟುವಂತಿಲ್ಲ. ಪ್ರೇಕ್ಷಕರ ಕಣ್ಣಿಗೆ ಜಿಂದ ಕಾಣಿಸುವಂತೆ ಬಂದರಾಯಿತು—ಎಂಬುದು ನಮ್ಮ ನಟರ ತಿಳಿವಳಿಕೆ. ಭೂಮಿಕೆ, ಅದರ ಸಂಸ್ಕಾರ—ಇವುಗಳ ಆಧಾರವಿಲ್ಲದ ಪಾತ್ರರೂಪ ವಾಸ್ತವಿಕತೆಯೆನಿಸಲಾರದು. ಒಂದೋ ಪಾತ್ರರೂಪವನ್ನೇ ಅವ ಸಹಜವಾಗಿ ತೋರಿಸಬೇಕು; ಇಲ್ಲವೆ ಸಂಕೇತ ಸೂಚನೆಗಳಿಂದ ಪ್ರೇಕ್ಷಕನ ಊಹೆ ಕೆಲಸಮಾಡುವುದಕ್ಕೆ ಅವು ಸಹಾಯಕವಾಗಬೇಕು.

ಒಟ್ಟಿನಲ್ಲಿ ಹೇಳುವುದಾದರೆ—ನಾಟಕದಲ್ಲಿ ವಾಸ್ತವಿ ಎಂಬುದು ನಾಟಕದ ಪ್ರತಿಯೊಂದು ಗುಣಕ್ಕೂ ಅನ್ವಯಿಸುವ ಮಾತು. ಹಿನ್ನೆಲೆಯಲ್ಲಿ ಸಹಜತೆ ಇರಬೇಕು. ಪಾತ್ರರಚನೆಯಲ್ಲಿ ಸಹಜತೆ ಇರಬೇಕು. ನಟನ ಮನೋಧರ್ಮಗಳಲ್ಲಿಯೂ ಅದಿರಬೇಕು. ನುಡಿ, ಉಡಿಗೆ ತೊಡಿಗೆ, ದೃಶ್ಯಾವಳಿ, ಮಾತುಗಾರಿಕೆ ಎಲ್ಲದರಲ್ಲೂ ಸಹಜತೆ ಬೇಕು. "ವಾಸ್ತವಿಕತೆ" ಸುಲಭದ ದಾರಿಯಲ್ಲ. ವಿಶಾಲ ಅನುಭವದಿಂದ ಆಳವಾದ ಪರಿಶೀಲನೆ-ಅಭ್ಯಾಸಗಳಿಂದ ನಾಟಕಕಾರನು, ನಟರು, ನಿರ್ದೇಶಕನೂ ಬೆಳೆಯಿಸಿಕೊಂಡು ಬರಬೇಕಾದ, ಸಾಧಿಸಬೇಕಾದ ಹಿರಿಯ ಗುಣ.

ಪ್ರಸಿದ್ಧ ಆಯುರ್ವೇದ ವಿದ್ವಾಂಸ ಬಿ. ಬಿ. ಪಂಡಿತ

ಮನೋಹರ {ಸೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್.

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯ ಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ಕಯಾರಾಗುವ ಕಾರ್ಖಾನೆ.

ನಾನು ಕಂಡ ನಾಡು

(ಪ್ರವಾಸ ಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

★

ಶಾಂತಿನಿಕೇತನ 'ದ ಹಿರಿಮೆಯ ಹೆಸರು ಜಗತ್ತಿನಲ್ಲೆಲ್ಲ ಮೊಳಗುತ್ತಿದ್ದರೂ, ಅದರ ಬಳಿಯ ರೈಲುನಿಲ್ದಾಣವಾದ ಬೋಲಪುರದಲ್ಲಿ ಕೇಳಿದರೆ, ಅದರ ಹೆಸರನ್ನೂ ಅರಿಯದವರು ಹಲವರು. ಆಶ್ಚರ್ಯ!

★

(೪) ಶಾಂತಿನಿಕೇತನ

ಬೋಲಪುರವು ಈಸ್ಟ್ ಇಂಡಿಯನ್ ರೇಲ್ವೆಯ ಚಿಕ್ಕ ಸ್ಟೇಶನ್ನು. ಅಲ್ಲಿಳಿದಾಗ, ' ಇಂಥ ಊರಲ್ಲಿ ಜಗತ್‌ಪ್ರಸಿದ್ಧವೆನಿಸಿದ ಶಾಂತಿನಿಕೇತನವಿರಬಹುದೆ ?'— ಎಂಬ ಸಂಶಯ ನನಗೆ. ನಿಲ್ದಾಣವನ್ನು ದಾಟಿ ಹೊರಗೆ ಬಂದರೆ ನಾಲ್ಕಾರು ಬಂಡಿಗಳು; ಒಂದೆರಡು ರಿಕ್ಷಾ. ಬಂಡಿಗಳು ಮನುಷ್ಯರನ್ನು ಕೂಡಿಸಿಕೊಂಡು ಹೋಗುವಂಥವೇನೂ ಅಲ್ಲ. ಬಡಕಲು ಎತ್ತನ್ನೋ ಕೋಣಗಳನ್ನೋ ಹೂಡಿಕೊಂಡು, ಉಗೆಬಂಡಿಗೆ ಒಳದೇಶಗಳಿಂದ ಸಾಮಾನು ತಂದು ಹಾಕುವ ಗಾಡಿಗಳವು. ರಿಕ್ಷಾದವರ ಹತ್ತಿರ ಹೋಗಿ ' ಶಾಂತಿನಿಕೇತನಕ್ಕೆ ಬರುವಿರಾ ? ' ಎಂದು ಕೇಳಿದರೆ, ಮೊಗದಿರುವಿ ಹೋಗಿಬಿಟ್ಟರು! ಆದರಿಂದ ಎತ್ತಿನ ಬಂಡಿಯವರಿಗೆ ನಾವು ಮೊರೆಹೋಗಬೇಕಾಯಿತು. ಅವರಲ್ಲಿ ಕೆಲವರಿಗಂತೂ ಶಾಂತಿನಿಕೇತನವೇ ಗೊತ್ತಿರಲಿಲ್ಲ. ಒಂದಿಬ್ಬರಿಗೆ ಬಾಡಿಗೆ ಬೇಕಿರಲಿಲ್ಲ; ಅವರು ಜೆನ್ನಾಗಿ ಮಾತನಾಡಲಿಲ್ಲ ಕೂಡ. ಹೀಗಾಗಿ ನಾವು ನಿರಾಧಾರರಾಗಿ ನಿಂತೆವು.

" ಇಷ್ಟು ದೊಡ್ಡ ಆಶ್ರಮವೆಂದು ಹೇಳುವಿ, ಯಾರೊಬ್ಬರೂ ಹೇಳವಲ್ಲರಲ್ಲ! ಇಲ್ಲೇ ಇದೆಯೋ, ಮತ್ತೆಲ್ಲಿಯಾದರೂ ಇದೆಯೋ ನೋಡು! "

ಹಿರಿಯರು ಸಂಶಯದ ಧ್ವನಿ ಎತ್ತಿದರು. ತಪ್ಪಿ ಎಲ್ಲಿಗೋ ಕರೆದು ತಂದನೇನೋ—ಎಂದು ಅವರ ಕಲ್ಪನೆಯಾಗಿತ್ತು.

" ಇಲ್ಲ, ಇಲ್ಲೇ ಇದೆ." ಎಂದೆ ನಾನು.

" ಇದ್ದರೆ ನಡೆಯಪ್ಪಾ ! " ಎಂದು ಸುಮ್ಮಗಾದರು.

ಇದೇನು ಹಿರಿಯರಿಗೆ ಯಾತ್ರೆಯ ಸ್ಥಳವಾಗಿರಲಿಲ್ಲ; ಆದರಿಂದ ಭಕ್ತಿ, ಆದರ, ಆತುರಗಳು ಅವರಲ್ಲಿ ಅಷ್ಟು ಇರಲಿಲ್ಲ. ಆದರೂ 'ದೊಡ್ಡ ಆಶ್ರಮವಿದೆ, ಅದನ್ನು ನೋಡಬೇಕು, ನಮ್ಮೂರ ಆಶ್ರಮಕ್ಕೂ ಅದಕ್ಕೂ ಹೋಲಿಸಬೇಕು' ಎಂಬ ಕುತೂಹಲವೇನೋ ಅವರಲ್ಲಿ ಇದ್ದಿತು. ಅದನ್ನೂ ತಡೆದುಕೊಂಡು ನಿಲ್ಮನೆಯ ನೆರಳಲ್ಲಿ ಹೋಗಿ ಕುಳಿತರವರು!

ನನಗೆ ಶಾಂತಿನಿಕೇತನವನ್ನು ಕಾಣುವ ಆತುರ ಹೆಚ್ಚಾಗಿದ್ದಿತು. ಅವರಿವರ ಹತ್ತಿರ ಕೇಳಿ, ಶಾಂತಿನಿಕೇತನಕ್ಕೆ ಹೋಗುವ ದಾರಿಯನ್ನು ಗೊತ್ತು ಹಚ್ಚಿದೆ. ನಮ್ಮ ಸಾಮಾನುಗಳನ್ನು ಹೊತ್ತು ಕೊಂಡು ಹೋಗಲಿಕ್ಕೆ ಇಬ್ಬರು ಹಮಾಲರನ್ನು ಹಿಡಿದುತಂದೆ. ಅವರೂ ಎಳೆಯ ಹುಡುಗರು, ಮುಸಲ್ಮಾನರು. ಕೂಲಿಯನ್ನು ಹೆಚ್ಚಿಗೆ ಕೇಳಬೇಕೆಂದು ಆಶ್ರಮವು ಬಹಳ ದೂರವಿದೆಯೆಂದು ಹೇಳಹತ್ತಿದರು.

ಆಗಲೇ ಮಧ್ಯಾಹ್ನವಾಗಿದ್ದಿತು. ಊಟದ ಹೊತ್ತು ಮೀರಿದ್ದಿತು. ನಾನು ಆಶ್ರಮದಲ್ಲಿ ಹೋಗಿಯೇ ಊಟದ ವ್ಯವಸ್ಥೆ ಮಾಡಿಕೊಳ್ಳುವುದೆಂದು ನಿರ್ಧರಿಸಿದ್ದೆ. ಪ್ರವಾಸದಲ್ಲಿ ಮಾಡುವುದೇ ದಿನಕ್ಕೊಂದು ಊಟ; ಅದನ್ನು ಯಾವಾಗ ಮಾಡಿದರೂ ಅಷ್ಟೇ— ಎಂದುಕೊಂಡೆ. ಆದರೆ ಹಿರಿಯರು ' ತುಸು ನೀರು ಕುಡಿದು ಹೋಗೋಣ! ' ಎಂದರು. ಆ ಬೋಲಪುರದ ಕೆಂಪು ಬಿಳಿ ಉಸುಕಿನ ಪ್ರದೇಶ, ಗಿಡಮರಗಳಿಲ್ಲದ ಬಯಲು, ಬೀಳುದಾರಿ, ಬಿಸಿಲು—ಮುಂಚಿನ ದಿನ ಮಳೆಯಾದುದರಿಂದ ಹೆಚ್ಚಿಗೆ ಕಾವೇರಿದ ನೆಲದ ಬಿಸಿಲು— ಬಿಸಿಗಾಳಿಗಳು, ಶಾಂತಿನಿಕೇತನದ ಹೆಸರನ್ನೇ ಅಲ್ಲಗಳೆಯುವಂತಿದ್ದುವು. ನನ್ನ ನಾಲಗೆಯನ್ನು ಒಣಗಿಸಿದ್ದುವು. ಆದರೂ ಆರೋಗ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ ಬಿಸಿನೀರು ಕುಡಿಯಬೇಕು ನಾವು! ಆದಕ್ಕಾಗಿ ಹಾಟೇಲಿನವನ ಹತ್ತರ ತಂಬಿಗೆ ತಕ್ಕೊಂಡು ಹೋದೆ. ಕ್ರಯಕ್ಕೆ ಒಂದು ತಂಬಿಗೆ ಬಿಸಿನೀರು ಕೇಳಿದೆ. ಒಂದು ' ತಂಬಿಗೆ ನೀರಿಗೆ ಐದಾಣೆ ಹೇಳಿದನಾತ. ಕೆರಳಿ ಹಿಂದಿರುಗಿದೆ. ಎದುರಿಗೇನೇ ಬಾವಿ. ಸಾಲದ್ದಕ್ಕೆ ಬೋರಿಂಗೊಂದು. ಇಷ್ಟಿದ್ದೂ ಹಾಟೇಲಿನವನ ಹತ್ತರ ನೀರು ಕೇಳಲಿಕ್ಕೆ ಹೋದ ನಾನೇ ಹುಚ್ಚನೆಂದು-

ಕೊಂಡೆ. 'ಆಧುನಿಕ ಯುಗದ ಸೌಕರ್ಯಗಳು ಮಾನವಹೃದಯವನ್ನು ಹೀಗೆ ಪರಾವಲಂಬಿಯನ್ನಾಗಿ ಮಾಡುತ್ತಿವೆಯಲ್ಲ!'— ಎಂದುಕೊಂಡು ಬಾವಿಗೆ ಹೋದೆ. ಅಲ್ಲಿಯೂ ಅದೇ ದೃಶ್ಯ. ಬಾವಿಯ ಸೀನೀರನ್ನೂ ಸೇದುವ ಶ್ರಮ ತಕ್ಕೊಳ್ಳದ್ದಕ್ಕೆ ಬೋರಿನ ಸವಳು ನೀರನ್ನೇ ಕುಡಿಯುವ ಜನ ಹೆಚ್ಚು. ಕೊನೆಗೆ ಬಾವಿಯಿಂದ ಒಂದು ಬಕೆಟ್ಟು ನೀರು ಸೇದಿ ತಂದೆ. ಎಲ್ಲರೂ ಕೈಕಾಲು ಮುಖ ತೊಳೆದುಕೊಂಡೆವು. ತಂದೆಯವರು ಒಂದು ತಂಬಿಗೆ ನೀರನ್ನು ತಕ್ಕೊಂಡು, ಹತ್ತಿರದ ಧರ್ಮಶಾಲೆಯ ಎದುರಿಗೆ ಅಡಿಗೆಗೆ ಒಲೆ ಹೂಡಿದ ಬಂಗಾಲಿ ಹೆಣ್ಣು ಮಗಳೊಬ್ಬಳ ಹತ್ತಿರ ಕಾಯಿಸಿ ತರಲಿಕ್ಕೆ ಹೋದರು. ಕಾಯಿಸಿಕೊಳ್ಳಲಿಕ್ಕೆ ಕುಸು ಬೆಂಕಿಯನ್ನು ಕೇಳಿದರೆ, ಅವಳು ಎರಡು ತಂಬಿಗೆ ಬಿಸಿ ನೀರನ್ನೇ ಕೊಟ್ಟಳು! ಇದು ಭಾರತೀಯ ಸಂಸ್ಕೃತಿಯ ಹೃದಯವು, ಅದು ಹಾಟೇಲಿನದು— ಪಾಶ್ಚಾತ್ಯ ಸಂಸ್ಕೃತಿಯ ಪರಿಣಾಮವು ಉಡಿಗೆ-ತೊಡಿಗೆಗಳಲ್ಲಿ ಬಂದು ನಿಂತ ಸುಸಂಸ್ಕೃತಿಯೆನ್ನುವುದರ ಅರ್ಥ ಅದು; ಹಳ್ಳಿಯ ಸಂಪ್ರದಾಯವಂತ ಹೆಣ್ಣಿನ ಹೃದಯ ಸಂಪನ್ನತೆಯ ಗುರುತಿದು. ಅವಳು ಅಕ್ಕರೆಯಿಂದ ಕೊಟ್ಟ ನೀರನ್ನು ಕುಡಿದು, ಇಂಥ ಪೂರ್ವ-ಪಶ್ಚಿಮ ಸಂಸ್ಕೃತಿಗಳ ನಿಜವಾದ ನೆಲೆಯನ್ನು ಕಂಡುಕೊಳ್ಳಲಿಕ್ಕೆ— ಕಂಡು ಬೆರಸಿ ಕಲಿಸಲಿಕ್ಕೆಂದು— ಕವೀಂದ್ರರಿಂದ ಸ್ಥಾಪಿಸಲ್ಪಟ್ಟ ಶಾಂತಿನಿಕೇತನದ ದಾರಿಯನ್ನು ಹಿಡಿದು ಸಾಗಿದೆವು.

ಬೋಲಪುರದ ಆ ಬಂಗಾಲದ ಭಾಗವು, ಬಯಲು ಸೀಮೆಯಾಗಿದೆ. ಅದರಲ್ಲೂ ಗೋದಿಯ ಬಣ್ಣದ ಉಸುಕಿನ ನಾಡದು. ಊರನ್ನು ದಾಟಿದರೆ ಗಿಡ ಮರಗಳಿಲ್ಲದ ಒಣಭೂಮಿಯು ವ್ಯಾಪಿಸಿದೆ. ದಾರಿಯ ಎಡಬಲಗಳಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳು—ಗುಡಿಸಿಲುಗಳು ಮಾತ್ರ ಕಾಣುತ್ತಿವೆ. ಇಂಥ ನಗ್ನ ನಿಸರ್ಗದ ಉಡಿಯಲ್ಲಿ ಹುಟ್ಟಿ ಕವೀಂದ್ರ—ರವೀಂದ್ರರು ತಮ್ಮ ಶಾಂತಿನಿಕೇತನವನ್ನು ನಿಲ್ಲಿಸಿದ್ದಾರೆ! ಕರ್ನಾಟಕದಲ್ಲಿ ಕುಳಿತು ಶಾಂತಿನಿಕೇತನದ ಸನ್ನಿವೇಶವನ್ನು ಕಲ್ಪಿಸುವಾಗ, ಅದು ಮಲೆನಾಡ ರಮಣಿಯ ಮಡಿಲಾಗಿರಬೇಕೆಂದು ಎನಿಸುವುದು. ಹಾಗಿರದಿದ್ದರೂ ಶಾಂತಿನಿಕೇತನದ ಆವರಣವು ಮಾತ್ರ ಗಿಡ-ಗಂಟೆಗಳಿಂದ ತುಂಬಿ, ಸುಂದರವಾಗಿದೆ. ದೂರದಿಂದ ಕೆಂಪು ಸಮುದ್ರದೊಳಗಿನ ಹವಿರು ನಡುಗಡ್ಡೆಯಂತೆ ಕಂಗೊಳಿಸುತ್ತದೆ. ನೆರಳನ್ನು ಕಾಣದೆ ಬಾಯಾರಿ ಬಿಸಿಲಲ್ಲಿ ಓಡುವ ಎರಳೆಗಳಂತೆ ನಾವು ಆಶ್ರಮದತ್ತ ಧಾವಿಸಿದೆವು:

ಬಹು ದೂರದ ವರೆಗೆ ಆಶ್ರಮದ ಹೊರವಲಯವನ್ನು ಸುತ್ತಿದಾಗ, ವಿಶ್ವಭಾರತಿಯ ದರ್ಶನವಾಗುವುದು, ಪ್ರವೇಶದ ದ್ವಾರ ಸಿಗುವುದು. ಇವನ್ನರಿಯದ ನಾವು, ಶಾಂತಿನಿಕೇತನವನ್ನು ಳದು ಮುಂದೆಲ್ಲಿ ನಡೆದೆವೋ ಎಂದುಕೊಂಡೆವು. ಸಂಗಡ ಬಂದ ಎಳ-ಮಕ್ಕಳೇನೋ 'ಇನ್ನೂ ಮುಂದೆ ಹೋಗಬೇಕು,' ಎಂದು ಹೇಳಿದರೂ ನಮಗೆ ವಿಶ್ವಾಸ ಹುಟ್ಟಲಿಲ್ಲ. ಅದರಿಂದ ಆವಾರದ ಮುಳ್ಳು ಬೇಲಿಯ ಹೊರಗೆ ನಿಂತುಕೊಂಡೇ ಆಶ್ರಮವಾಸಿಗಳೊಬ್ಬರನ್ನು ಕೇಳಿದೆವು:—

"ಶಾಂತಿನಿಕೇತನ ಎಲ್ಲಿ?"

"ಇದೇ; ಬನ್ನಿ!"

ಎಂದು ನಕ್ಕು ವಿಶ್ವಾಸದಿಂದ ಸ್ವಾಗತಿಸಿದರು. ಆದರೆ ನಮಗೆ ಒಳಗೆ ಹೋಗಲಿಕ್ಕೆ ಅಲ್ಲಿ ದಾರಿಯಿರಲಿಲ್ಲ. ಆದರೂ ನಮ್ಮ ಮುಖ ಅರಳಿತು, ಆದರಿಂದ ಹವಿವಿನ ಚಿಹ್ನೆಯೇನೋ ಅಡಗು.

ಭಾಯೋಟೋನಾ

ಇದರ ಸೇವನೆಯಿಂದ

ಮಕ್ಕಳು ಹೊದಲ್ಗೊಂಡು ಮುದುಕರವರೆಗೆ ಸ್ತ್ರೀಪುರುಷರು ಇದನ್ನು ಸೇವಿಸಬಹುದು. ತಿಮುಳಿಗೂ ಜೀವಾಣುಗಳಿಗೂ ಬಲವನ್ನೂ ಆರೋಗ್ಯವನ್ನೂ ಕೊಡುವ ಉತ್ತಮ ಉಪಾಯವೆಂದರೆ 'ಭಾಯೋ-ಟೋನಾ' ಸೇವಿಸುವದೇ ಆಗಿದೆ. ೪೦ ದಿವಸ ಸಾಕಾಗುವ ಬಾಟ್ಲಿಯ ಬೆಲೆ ರೂ. ೨. ಟಪಿರ್ಜು ಬೇರೆ. ಸೂಚಿಪತ್ರ ಪಡೆಯಬಹುದು.

ROY & CO. BOMBAY 2.

ಚಿತ್ರಕಲಾ ಪ್ರವೇಶ

೩ನೆಯ ಆವೃತ್ತಿ

ಅಚ್ಚಾಗುತ್ತಲಿದೆ.

ಬೇಗನೆ

ಪ್ರಕಟವಾಗುವುದು.

ಬರೆದವರು:

ಎ. ಜೆ. ಎಸ್. ಹುದ್ದಾರ

ಚ್ಯವನ ಪ್ರಾಶ

(ಅಷ್ಟವರ್ಗಯುಕ್ತ)

ಇವರ ಸೇವನೆಯಿಂದ :—

೧. ಬೇನೆಗಳಿಂದ ಬಂದ ದುರ್ಬಲತೆ ದೂರಾಗುವದು.

೨ ಪೋಷಕ ಆಹಾರದ ಅಭಾವದಿಂದ ಕ್ಷೀಣವಾದ ರಸ-ರಕ್ತಾದಿ ಧಾತುಗಳು ಬಲಗೊಳ್ಳುವವು.

೩. ಅತ್ಯಂತ ಮಾನಸಿಕ ಶಾರೀರಿಕ ಶ್ರಮದಿಂದುಂಟಾದ ವಿಸ್ಮರಣೆ ಮನೋದೌರ್ಬಲ್ಯ, ನಿರುತ್ಸಾಹಗಳು ಇವರ ಸೇವನೆಯಿಂದ ಕಡಿಮೆಯಾಗಿ, ಮೇಧಾ-ಶಕ್ತಿ ಉತ್ಸಾಹಗಳು ಹೆಚ್ಚಾಗುತ್ತವೆ.

೪ ದುರ್ಬಲವಾದ ರತಿಶಕ್ತಿಯನ್ನು ಸಬಲಗೊಳಿಸುತ್ತದೆ.

ದಿ ನೂತನ
ಆಯುರ್ವೇದ ಕಾರ್ಯಾಲಯ,
ಲಿ. ವಿಜಾಪೂರ.

ವಂತಿರಲಿಲ್ಲ. ಅದನ್ನು ಗುರುತಿಸಿಕೊಂಡೋ ಏನೋ, ಆಶ್ರಮವಾಸಿಗಳು ಕೇಳಿದರು :

" ಊರಲ್ಲಿ ಊಟ ತೀರಿಸಿಕೊಂಡು ಬರಲಿಲ್ಲವೆ ? "

" ಇಲ್ಲ ! "

" ಇಲ್ಲಿ ಸಾಯಂಕಾಲದ ವರೆಗೆ ಊಟ ಸಿಕ್ಕದು. ಊಟದ ಹೊತ್ತು ಮೀರಿ ಹೋಯಿತಲ್ಲ ! "

" ಇರಲಿ ; ನಮ್ಮ ಹತ್ತರ ಎಲ್ಲ ಸಾಹಿತ್ಯವಿದೆ ! "

ಅದಕ್ಕೆ ಅವರೇನೂ ಪ್ರತಿಯಾಗಿ ಹೇಳಲಿಲ್ಲ. ಮುಂದೆ ಸಾಗಿ, ಶಾಂತಿನಿಕೇತನದ ಅತಿಥಿಗೃಹದ ಸಂಚಾಲಕರನ್ನು ಕಾಣಲು ಸೂಚಿಸಿದರು. ನಮ್ಮ ಜೊತೆಗಿರುವ ಹುಡುಗರಿಗೆ, ಅವರ ಬಳಿ ಕರೆದು ಕೊಂಡು ಹೋಗಲಿಕ್ಕೆ ಹೇಳಿದರು.

ನಾವು ಮುಂದೆ ಸಾಗಿದೆವು. ನೇರವಾಗಿ ಅತಿಥಿಗೃಹಕ್ಕೇ ಹೋಗಿ ತಲುಪಿದೆವು. ಅದೊಂದು ಅರಮನೆಯಂತಿದೆ. ಹೊರಗಿನ ಬಂಕದಲ್ಲಿ ಗೋಡೆಗೆ, ಶಾಂತಿನಿಕೇತನದ ನಕ್ಷೆಯನ್ನು ಕನ್ನಡಿಯಲ್ಲಿ ಜಾಕಿ ಕೂಡಿಸಿದ್ದಾರೆ. ಅದನ್ನು ನೋಡಿ, ಆಶ್ರಮದ ಎಲ್ಲ ಭಾಗಗಳಲ್ಲಿಯೂ ಪೊಸಬರು ಹೋಗಿ ಬರಬಹುದು. ಅದನ್ನು ನೋಡುತ್ತ ನಿಲ್ಲಲಿಕ್ಕೆ ನನಗೆ ಆಗ ವೇಳೆಯಿರಲಿಲ್ಲ. ಅಂದರೂ ಸ್ವಲ್ಪ ಹೊತ್ತು ಮೈಮರೆತು ನಿಂತೆ. ನಮ್ಮ ಸಾಮಾನುಗಳನ್ನು ಬಂಕದಲ್ಲಿ ಇಳಿಸಿದ ಹುಡುಗರು ಹಣದ ಶಗಾದೆ ಹೆಚ್ಚಲು, ಎಚ್ಚತ್ತು ಮುಂದಿನ ವ್ಯವಸ್ಥೆಗೆ ತೊಡಗಿದೆ.

ಆಗ ಅತಿಥಿಗೃಹದ ಬಾಗಿಲು ಹಾಕಿದ್ದಿತು. ಜೂನ್ ತಿಂಗಳಲ್ಲಿ ಶಾಂತಿನಿಕೇತನವನ್ನು ಸಂದರ್ಶಿಸಲು ಬರುವ ಜನ ಕಡಿಮೆ. ಜುಲೈ ತಿಂಗಳಲ್ಲಿ ಅಲ್ಲಿ ಎಲ್ಲ ವರ್ಗಗಳು ಆರಂಭವಾಗುತ್ತವೆ. ನಾವು ಹೋದಾಗ 'ಶ್ರೀನಿಕೇತನ' ಮಾತ್ರ ನೋಡುವಂತಿದ್ದಿತು. ಅದಕ್ಕೆ ಬೇಸಗೆಯ ಬಿಸುವಿರಲಿಲ್ಲ ಉಳಿದ ವರ್ಗದ ವಿದ್ಯಾರ್ಥಿಗಳು ಬಿಡುವಿನಲ್ಲಿ ತಮ್ಮ ತಮ್ಮ ಊರಿಗೆ—ದೇಶಕ್ಕೆ—ಹೋದುದರಿಂದ, ಶಾಂತಿನಿಕೇತನ ಶೆರವಾಗಿದ್ದಿತು. ಈ ಸಮಯವನ್ನು ಸಾಧಿಸಿ, ಅಲ್ಲಿಯ ಶಿಕ್ಷಣಪ್ರೀತಿಯವರು ಚಿಕ್ಕನುಕ್ಕಳ ಶಿಕ್ಷಣದ ಪ್ರಾಯೋಗಿಕ ವರ್ಗಗಳನ್ನು ಆರಂಭಿಸಿದ್ದರು. ಹಾಗೆಯೇ ಸಮಾಜ ಶಿಕ್ಷಣ, ಬೇಸಿಕ್ ಶಿಕ್ಷಣಗಳ ತರಬೇತಿಯ ವರ್ಗಗಳೂ ಆರಂಭವಾಗಿದ್ದುವು ಆ ವರ್ಗಗಳ ನಿರ್ದೇಶಕರು, ಅತಿಥಿಭವನದ ಒಂದು ಭಾಗವನ್ನೇ ವ್ಯಾಪಿಸಿದ್ದರು. ಅವರ ಮುಖಾಂತರ ನಾವು ಅಲ್ಲಿಯ ಸಂಚಾಲಕರನ್ನು ಕಂಡೆವು

ಅತಿಥಿನಿವಾಸದ ಸಂಚಾಲಕರು ತುಂಬ ಒಳ್ಳೆಯದರು. ಅವರ ಮೊದಲ ಸಂದರ್ಶನದಿಂದಲೇ ಪ್ರವಾಸಿಕರ ದಣಿವೆಲ್ಲ ಕಳೆಯುವಂತಿರುತ್ತದೆ. ಸಂಘ-ಸಂಸ್ಥೆಗಳ ವಿಷಯಕ್ಕೆ ಹೊರಗಿನಿಂದ ಬಂದವರಲ್ಲಿ ಆದರ-ಅಭಿಮಾನಗಳನ್ನು ಹುಟ್ಟಿಸಲಿಕ್ಕೆ ಇಂತಹ ಅಡಳಿತಗಾರರು ಅತ್ಯವಶ್ಯವಾಗಿ ಬೇಕು. ಅವರು ಪದವೀಧರರಾಗಿದ್ದು, ಅತಿಥಿಭವನದ ಸಮೀಪದಲ್ಲಿಯೇ ಮನೆಮಾಡಿಕೊಂಡಿದ್ದಾರೆ. ನಾವು ಮೂರು ಮಂದಿ ಇದ್ದುದನ್ನು ನೋಡಿ, ನಮಗೆ ಶಕ್ಯವಾದ ಕೋಣೆಯೊಂದನ್ನು ತೆರೆದುಕೊಟ್ಟರು. ಅದರಲ್ಲಿ ಸಾಕಾಗುವಷ್ಟು ಕುರ್ಚಿ ಮೇಜುಗಳು, ಕನ್ನಡಿ ಕಪಾಟುಗಳು, ಮಂಚಗಳು ಇದ್ದುವು. ಅವುಗಳನ್ನೆಲ್ಲ ಕಂಡು ಹಿರಿಯರು :—

"ಇದು ಸಿರಿವಂತರ ಆಶ್ರಮವಪ್ಪ !" ಎಂದು ಉದ್ಗಾರ ತೆಗೆದರು. ಅದು ಸರಿಯೂ ಆಗಿದ್ದಿತು. ಅಲ್ಲಿ ಕಲಿಯುವ ವಿದ್ಯಾರ್ಥಿಗಳೆಲ್ಲ ದುಡ್ಡುಳ್ಳವರೇ ಆಗಿರುವರು. ದೇಶ-ವಿದೇಶಗಳಿಂದ ಬಂದು ಇಲ್ಲಿ ಕಲಿಯುವುದು ಸಾಮಾನ್ಯರಿಗೇನೂ ಸಾಧ್ಯವಾಗದ ಮಾತು. ಸುತ್ತಲಿನ ಹಳ್ಳಿಗಳ ಜನರಿಗೂ ಶಾಂತಿನಿಕೇತನದ ಉಪಯೋಗ ಆಗುವಂತೆ ತೋರುವುದಿಲ್ಲ. ಶಾಕೂರರಿರುವಾಗ ಮಾತ್ರ, ಶಾಂತಿನಿಕೇತನದ ವಿದ್ಯಾರ್ಥಿಗಳನ್ನು ಕಟ್ಟಿಕೊಂಡು ಸುತ್ತಲಿನ ಹಳ್ಳಿಗಳಿಗೆ ಹೋಗುತ್ತಿದ್ದರು; ಅಲ್ಲಿ ಮನೋರಂಜನೆಯ ಕಾರ್ಯಕ್ರಮಗಳನ್ನು ಜರುಗಿಸುತ್ತಿದ್ದರು; ಗ್ರಾಮನೈರ್ಮಲ್ಯವನ್ನು ಬೋಧಿಸುತ್ತಿದ್ದರು. ಇದಿಷ್ಟರಿಂದಲೇ ಆ ಸಂಸ್ಥೆಯು ಸುತ್ತಲಿನ ಜನಕ್ಕೆ ಬೆಳಕು ಬೀರಬೇಕು; ಹೆಚ್ಚಿಸದನ್ನು ಬಯಸಿದರೆ ಜನಸಾಮಾನ್ಯರಿಗೆ ಅದು ನಿಲುಕದ ವಿಷಯ. ಇದನ್ನರಿತೇ ಕವಿವರರು ಶ್ರೀನಿಕೇತನವನ್ನು ಆರಂಭವಮಾಡಿದರು. ಅದರಿಂದ ಗ್ರಾಮೈಕ್ಯಕಾರಿಕೆಗಳ ಬೆಳೆವಣಿಗೆಯು ಸಹಜವಾಗಿ ಸಾಧಿಸಬಹುದು. ಇದರ ಲಾಭವನ್ನು ಹಳ್ಳಿಗರು ಪಡೆಯಬಹುದು.

ನಾವು ಅಲ್ಲಿ ಹೋದ ಸ್ವಲ್ಪ ಹೊತ್ತಿನಲ್ಲಿ ಇನ್ನೊಬ್ಬ ಅತಿಥಿಗಳು ಶಾಂತಿನಿಕೇತನಕ್ಕೆ ಬಂದರು. ಅವರು ಬೆಂಗಳೂರಿನ ವ್ಯಾಪಾರಿಗಳು. ಜಾಮುರಾಜ ಎಂದು ಅವರ ಹೆಸರು. ಬಂಗಾಲದಿಂದ ಕರ್ನಾಟಕದ ದನಗಳಿಗೆ ಗೋದಿಯ ಹೊಟ್ಟನ್ನು (ಸೊಪ್ಪು) ಕೊಂಡು ಒಯ್ಯಲಿಕ್ಕೆ ಬಂದಿದ್ದರವರು! ಅದು ಅಲ್ಲಿ ಬಹಳ ಅಗ್ಗ ಸಿಕ್ಕುವುದೆಂದೂ ಅವರು ಹೇಳಿದರು. ಅದರ ವ್ಯವಹಾರಗಳೇ ಅವರು. 'ಅನೇಕ ಸಲ ಕಲಕತ್ತೆಗೆ ಬಂದು ಕೂಡ ಶಾಂತಿನಿಕೇತನದ ವರೆಗೆ ಬರುವುದಾಗಿರಲಿಲ್ಲ. ಈ ಸಲ ನೋಡಿಯೇ ಹೋಗೋಣ—ಎಂದುಕೊಂಡು ಬಂದೆ.' ಎಂದು ಹೇಳಿದರು. ಕನ್ನಡಿಗರೊಬ್ಬರು ಜೊತೆಯಲ್ಲಿ ಕೂಡಿದರು. ಅದರಿಂದ ಶಾಂತಿನಿಕೇತನವನ್ನು ನೋಡುವುದರಲ್ಲಿ ಇನ್ನಿಷ್ಟು ಉತ್ಸಾಹ ಉಂಟಾಯಿತು.

ಶಾಂತಿನಿಕೇತನದ ಅವಾರದಲ್ಲಿ ಅತಿಥಿಗಳಿಗೆ ಅಡಿಗೆಮಾಡಿಕೊಳ್ಳಲಿಕ್ಕೆ ಒಪ್ಪಿಗೆ ಕೊಡುವುದಿಲ್ಲ. ಅಲ್ಲಿಯ ಅಡಿಗೆಯ ಮನೆಯಲ್ಲಿಯೇ ಊಟ ಮಾಡಬೇಕು. ಪ್ರತಿಯೊಂದು ಊಟಕ್ಕೂ ಎರಡು ರೂಪಾಯಿ ಸಲ್ಲಿಸಬೇಕು. ಆದರೂ ಅದು ಸಾಯಂಕಾಲದ ವರೆಗೆ ನಮಗೆ ಸಿಕ್ಕುವಂತಿರಲಿಲ್ಲ. ಸ್ನಾನವನ್ನು ಮಾತ್ರ ಮಾಡಬಹುದಾಗಿತ್ತು. ಅಷ್ಟನ್ನು ತೀರಿಸಿಕೊಂಡು ನಾವು ಶ್ರೀನಿಕೇತನವನ್ನು ನೋಡಲಿಕ್ಕೆ ಹೋಗುವುದೆಂದು ನಿಶ್ಚಯಿಸಿದೆವು. ಅದರಂತೆ ಸಂಚಾಲಕರಿಗೂ ತಿಳಿಸಿದೆವು. ಅವರು ಕೂಡಲೆ ಫೋನಿನಿಂದ ಶ್ರೀನಿಕೇತನದ ಆಡಳಿತಗಾರರಿಗೆ ತಿಳಿಸಿದರು. ನಮ್ಮನ್ನು ಕರೆದು ಒಯ್ಯುವುದಕ್ಕಾಗಿ 'ರಿಕ್ಷಾ' ಕಳಿಸಲೂ ಹೇಳಿದರು. ಶಾಂತಿನಿಕೇತನದ ಎಲ್ಲ ವರ್ಗಗಳು ನಡೆವಾಗ ಒಂದು ಬಸ್ಸು—ವಿದ್ಯಾರ್ಥಿಗಳನ್ನು ಅಯಾ ವರ್ಗಗಳಿಗೆ ಒಯ್ದು ಬಿಡಲಿಕ್ಕೆಂದು—ಇರುವುದಂತೆ. ಆಗ ಅದರಲ್ಲಿ ಕುಳಿತು ಅತಿಥಿಗಳೂ ಹೋಗಬಹುದು. ನಾವು ಸ್ನಾನ ತೀರಿಸಿಕೊಂಡು ಬರುವಷ್ಟರಲ್ಲಿ ರಿಕ್ಷಾದವರು ಸಿದ್ಧರಾಗಿಯೇ ನಿಂತಿದ್ದರು. ಅವರು ನಮ್ಮನ್ನು ಕರೆದುಕೊಂಡು ಶ್ರೀನಿಕೇತನದ ಕಡೆಗೆ ಸಾಗಿದರು. ಹೊರಡುವ ಮುಂಚೆ ಸಂಚಾಲಕರು, ರಿಕ್ಷಾದವರು ನಿಮ್ಮನ್ನು ತಿರುಗಿ ಇಲ್ಲಿ ತಂದು ಬಿಟ್ಟಾಗ ಒಂದೊಂದು ರೂಪಾಯಿಯನ್ನು ಕೊಡಬೇಕಾಗುವುದೆಂಬುದನ್ನು ಸೂಚಿಸದೆ ಇರಲಿಲ್ಲ.

ಇಷ್ಟೆಲ್ಲ ಆಗುವ ವರೆಗೆ, ರವಿಯು ಆಕಾಶದ ಬಹುಭಾಗವನ್ನು ಸಂಚರಿಸಿ ಮುಗಿಸಿದ್ದನು. ಬಳಲಿಕೆಯಿಂದ ಅವನ ತೇಜವೂ ಸ್ವಲ್ಪ ಕಡಿಮೆಯಾದಂತಿದ್ದಿತು. ಅವನಿಗೆ ಎದುರಾಗಿ ನಾವು ಸಾಗಿದ್ದರೂ, ಅವನು ಅಷ್ಟೊಂದು ಕಷ್ಟವನ್ನು ನಮಗೆ ಕೊಡಲಿಲ್ಲ. ಆದರೆಲ್ಲೂ ಶಾಂತಿನಿಕೇತನದ ಆವರಣ ಎಲ್ಲವನ್ನು ಮರೆಯಿಸುವಂತಿದ್ದಿತು. ಒಂದೆಡೆಗೆ ಸಂಗೀತಶಾಲೆ, ಇನ್ನೊಂದೆಡೆಗೆ ವಿಶ್ವಭಾರತಿ, ಮತ್ತೊಂದೆಡೆಗೆ ನಾಟ್ಯರಂಗ, ಅಲ್ಲಲ್ಲಿ ಇರುವ ಸ್ವಾಧ್ಯಾಪಕರ ನಿವಾಸಗಳು, ತೋಟಗಳು ಮತ್ತು ಕವಿವರರ ನಿವಾಸಸ್ಥಳವಾದ 'ಉತ್ತರಾಯಣ' ಇವುಗಳನ್ನು ದೂರದಿಂದ ಕಾಣುತ್ತ, ಅವುಗಳ ಖ್ಯಾತಿಯನ್ನು ಕೇಳುತ್ತ, ಶ್ರೀನಿಕೇತನದ ಕಡೆಗೆ ಸಾಗಿದ್ದೆವು. ಆ ದಿನ ಸಂಜೆ ಸುಂದರವಾಗಿದ್ದಿತ್ತು, ಅಲ್ಲಾದಕರವಾಗಿತ್ತು.

ಶ್ರೀನಿಕೇತನದ ಸಂಚಾಲಕರು ನಮ್ಮನ್ನು ಬರಮಾಡಿಕೊಂಡು, ಅದರ ವಿವಿಧ ಶಾಖೆಗಳನ್ನು ತೋರಿಸಲಿಕ್ಕೆ ಒಳಗೆ ಕರೆದೊಯ್ದರು. ಅಲ್ಲಿ ಬಟ್ಟೆಯ ಕೆಲಸ, ಕಟ್ಟಿಗೆಯ ಕೆಲಸ, ಚರ್ಮದ ಕೆಲಸ, ಕೊಂಬಿನ ಕೆಲಸ, ಪುಸ್ತಕ ಬಾಯಿಂಡಿಂಗ್ ಕೆಲಸ— ಇತ್ಯಾದಿ ಕೆಲಸಗಳು ನಡೆಯುತ್ತವೆ. ಬಣ್ಣ, ಚಿತ್ರಗಳ ಕೈಗಾರಿಕೆಯೂ ಅಲ್ಲಿ ಇಲ್ಲದಿಲ್ಲ. ಮಣ್ಣಿನ ಕೆಲಸವನ್ನೂ ಕವಿವರರು ಮರೆತಿಲ್ಲ. ಕಲ್ಪನಾಲೋಕದಲ್ಲಿ ವಿಹರಿಸುವ ಭಾವಜೀವಿಯಾದ ಕವಿಯೊಬ್ಬನ ಈ ಕರ್ಮಕೌಶಲವನ್ನು ಕಂಡಾಗ, ಅವನ ಅಗಾಧ ಬುದ್ಧಿಯ ಅರಿವು, ಜೀವನಪ್ರಜ್ಞೆಯ ಕಲ್ಪನೆಗಳು ನಮಗೆ ಅಗದೆ ಇರುವುದಿಲ್ಲ.

ಶ್ರೀನಿಕೇತನದಲ್ಲಿ ನಡೆಯುವ ಹೋರಿ—ಜಲ್ಲಿ—ಅನ್ವೇಷಣೆಗಳೆಲ್ಲವೂ ಹಳ್ಳಿಯ ಉದ್ಯೋಗಗಳನ್ನು ಕುರಿತೇ ಸಾಗಿವೆ ಆದರೆ ಅವುಗಳ ತರಗತಿಯು ಬಹಳ ಮೇಲುಮೆಟ್ಟಿಲಿನದಾಗಿದೆ. ಹಳ್ಳಿಯ ಉದ್ಯೋಗಗಳು ಇದ್ದ ಸ್ಥಿತಿಯಲ್ಲಿಯೇ ಇರಬೇಕೆಂದು ಠಾಕೂರರ ಅಭಿಪ್ರಾಯವಾಗಿಲ್ಲ. ಅದರಲ್ಲಿ ಎಷ್ಟೋ ಸುಧಾರಣೆಗಳನ್ನು ಮಾಡಿದ್ದಾರೆ. ಚರ್ಮ ಹದಮಾಡುವುದರಲ್ಲಿಯೂ ಕೊಂಬಿನ ಕೆಲಸದಲ್ಲಿಯೂ ಎಷ್ಟೋ ಹೊಸಶನವನ್ನು ನಾವು ಕಾಣುತ್ತೇವೆ. ಅಲ್ಲಿ

ಕುಟುಂಬದೊಳಗಿನ ಬಿಲ್ಲರೆ ಬೇನೆ

ಬೇಸಿಕೆಗಳನ್ನು ಹೋಗಲಾಡಿಸುವದಕ್ಕಾಗಿ ಡಾಕ್ಟರ ಮತ್ತು ವೈದ್ಯರ ಶರಣು ಪ್ರತಿ ಸಾರಿ ಹೋಗುವದು ಕಷ್ಟವಿರುವದಿಲ್ಲ — ಮತ್ತು ಅಷ್ಟೊಂದು ಅವಶ್ಯಕತೆಯೂ ಇರುವುದಿಲ್ಲ. ಹೊಟ್ಟೆನೋವು, ಪಾಂಡು, ಅಜೀರ್ಣ, ಕೆಲಸ, ತಲೆನೋವು, ಹಲ್ಲುನೋವು, ಮಕ್ಕಳ ಕೆಲಸ ನಿಶಾಕ ಇತ್ಯಾದಿ ಅನೇಕ ಚಿಲ್ಲರೆ ಬೇನೆಗಳನ್ನು

ಜವೇರಿಯನ್ ಜೀವನ ಮಿಕ್ಶ್ಚರ್ ನಿಮ್ಮ ಅನುಭವಿಸಿದ ಸಾಮಾನ್ಯ ಪುಸ್ತಕವಿದೆ. ಕಾಲಾ ಮತ್ತು ಅನೇಕಾನೇಕ ಶಾಸ್ತ್ರಗಳಿಂದ ಹೊಂದಿ ರೋಗಗಳ ಮೇಲೆ ಅಗಾಧವಾಗಿ ಇದರ ಉಪಯೋಗವಾಗುತ್ತದೆ. ಪ್ರತಿಯೊಬ್ಬರಿಗೂ ಇದರ ಉಪಯೋಗವಾಗುವಂತೆ ಇದರ ಬೆಲೆ ಕೂಡ ಬಹಳ ಮಿತವಾಗಿದೆ. ಅಷ್ಟೊಂದು ಮನೆಯಲ್ಲಿಯೂ ಮತ್ತು ಪ್ರಯಾಣದಲ್ಲಿ ಪ್ರತಿಯೊಬ್ಬರು ಇಟ್ಟುಕೊಳ್ಳಲು (ಉಳಿಕ್ಕೆ ಮುಂಚಾಗಿ ಅಭಿಪ್ರಾಯಗಳಿಗೆ) ಮೂಲಿಕೆಗಳ ಲಕ್ಷಣಗಳಿವೆ. ಉಪಯೋಗವೂ (ಔಷಧ ಪ್ರಮಾಣ ಸಲ್ಲಿಸುವ) ಕಲ್ಪನೆಗಳಿಗೆ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ಜವೇರಿಯನ್ ಜೀವನ ಮಿಕ್ಶ್ಚರ್

ಮಲೇರಿಯಾ
ಇನ್ ಫ್ಲುಯೆಂಜಾ
ಮತ್ತು
ಯಾವತ್ತೂ ಜ್ವರಗಳು

ಒಡನೆ ವಾಸಿ ಹೊಂದುತ್ತವೆ.

ಶ್ರೀಮಂತರ–ಬಡಬಗ್ಗರ–ಕೂಲಿಕಾರರ ಎಲ್ಲರ ಸಲುವಾಗಿ
ಜ್ವರಗಳ ಮೇಲೆ ರಾಮಬಾಣ ಔಷಧ.

ಮಾದನ್ ಸನ್ಸ್ ಮತ್ತು **ಕಂ. ಕೆಮಿಸ್ಟ್ಸ್,**
ಮುಂಬಯಿ—೨.

ಸಿರಿವಂತರ ವಿಲಾಸವಸ್ತುಗಳೂ ಬಡವರ ನಿತ್ಯೋಪಯೋಗಿಯಾದ ವಸ್ತುಗಳೂ ಸಿದ್ಧವಾಗುತ್ತವೆ. ಅವೆಲ್ಲವುಗಳನ್ನೂ—ನಾವು ದೊಡ್ಡ ಭಂಡವಲುಗಳನ್ನು ಒತ್ತಟ್ಟಿಗೆ ಕೂಡಿಸದೆ—ನಮ್ಮ ನಮ್ಮ ಹಳ್ಳಿಗಳಲ್ಲಿ ಮಾಡಿಕೊಳ್ಳಲು ಸಾಧ್ಯವಿದೆ. ಅದರಿಂದ ಗ್ರಾಮಾಭಿವೃದ್ಧಿಯೂ ಆಗುವಂತಿದೆ. ಹೀಗೆ ಆದಾಗ ಹಳ್ಳಿಗರು ಸುಖಿಗಳೂ ಆಗುತ್ತಾರೆ. ಈ ಅಭಿಪ್ರಾಯದ ಪ್ರತೀಕವಾಗಿದೆ ಶ್ರೀನಿಕೇತನ. ಅದು ಬೆಳೆದುದು ಕಲಾಪೂರ್ಣ ಆವರಣದಲ್ಲಿ. ನೆಲದ ಮೇಲೆ ರಂಗವಲ್ಲಿ: ಗೋಡೆಗೆ ಸುಂದರ ಚಿತ್ರಗಳು. ಅಲ್ಲಿ ನೇಗಿಲಯೋಗಿ ರವೀಂದ್ರ ! ಗಿಡನೆಡುವ ಕವೀಂದ್ರ ! ಅವುಗಳಿಗೆ ಕಾವ್ಯದ ಕಟ್ಟು, ಒಪ್ಪು. ಇನ್ನೇನು ಬೇಕು ಮಾನವನ ಮನ ಅರಳಲಿಕ್ಕೆ, ಮಾನವತೆ ಕುದುರಲಿಕ್ಕೆ ?

ಅಲ್ಲಿಂದ ಹೊರಗೆ ಬಂದಾಗ ಶಾಂತಿನಿಕೇತನದ ನಲವತ್ತೇಳು ವರ್ಷಗಳ ಚರಿತ್ರೆಯ ಚಿತ್ರಪಟವೊಂದು ನನ್ನ ಬಗೆಗಣ್ಣಿನೆದುರಿಗೆ ಸುಳಿದು ಹೋಯಿತು. ಠಾಕೂರರು ೧೯೦೨ ರಲ್ಲಿ ಬ್ರಹ್ಮಚರ್ಯಾಶ್ರಮವೆಂದು ಇದನ್ನು ಆರಂಭಿಸಿದರು. ಆ ಚಿಕ್ಕ ಸಂಸ್ಥೆಯನ್ನು ಮುರಿದು ಬಿಡಬೇಕೆಂದು ಯತ್ನಿಸಿದ ಜನರೂ ಹಲವರು ! ಇವರ ಗುರುಕುಲ ಪದ್ಧತಿಯ ಶಿಕ್ಷಣಕ್ರಮವು ಪುರೋಗಾಮಿಗಳಾದ ಬಂಗಾಲಿಗಳಿಗೆ ಆಗ ಸೇರಲಿಲ್ಲ. ಅದಕ್ಕಾಗಿ ಆರ್ಥಿಕ ತೊಂದರೆಗೆ ತುತ್ತಾಗಬೇಕಾಯಿತು ಸಂಸ್ಥೆ. ಅಂಥ ಸಂದರ್ಭದಲ್ಲಿ ಆ ಮಹಾತಾಯಿ—ಕವಿವರನ ಅರ್ಧಾಂಗಿ—ತನ್ನ ಆಭರಣಗಳನ್ನೆಲ್ಲ ಕೊಟ್ಟು ಸಹಕರಿಸಿದಳು. ಅದರಂತೆ ಕವಿಯ ಕಾವ್ಯವೂ ಈರ್ತಾಯೂ ಶಾಂತಿನಿಕೇತನಕ್ಕೆ ಎಷ್ಟೋ ಧನಸಹಾಯವನ್ನು ಒದಗಿಸಿದೆ. ತಾನು ಕಟ್ಟಿದ ಸಂಸ್ಥೆಗಾಗಿ ದುಡ್ಡನ್ನು ಕೂಡಿಸಲಿಕ್ಕೆ, ಬಣ್ಣ ಬಳಿದುಕೊಂಡು, ನಾಟಕದ ಹಗಲೆಯ ಮುಂದೆ— ಮುಪ್ಪಿನಕಾಲದಲ್ಲೂ—ಕುಣಿದುದುಂಟು. ಅಂಥ ಸಂದರ್ಭದಲ್ಲಿ, ಮ. ಗಾಂಧೀಜಿಯವರ ಒಂದು ಮಾತಿನ ನೆರವಿನಿಂದಲೇ ಹತ್ತಿಪ್ಪತ್ತು ಸಾವಿರ ಧನಸಂಚಯವಾಗಿದೆ. ಅದರಂತೆ ಠಾಕೂರರು ದೇಶ-ವಿದೇಶಗಳಲ್ಲಿ ಸಂಚರಿಸಿ ಒಳ್ಳೆಯ ಕಲಾವಿದರನ್ನೂ ಶಿಕ್ಷಕರನ್ನೂ ಸಂಸ್ಕೃತಿಸಂವರ್ಧಕರನ್ನೂ ತಂದು ಸಂಸ್ಥೆಯ ಶಿಕ್ಷಣಕ್ಷೇತ್ರವನ್ನು ವಿಸ್ತರಿಸಿದ್ದೂ ಇದೆ. ವಿಶ್ವಭಾರತಿಯು ವಿಶ್ವವಿದ್ಯಾಲಯದ ಸಂಗೀತಶಾಲೆಯಲ್ಲಿ ವೀಣೆಯನ್ನು ನುಡಿಸುತ್ತ ಕವಿವರನ ಕಾವ್ಯಗಳನ್ನು ಹಾಡುತ್ತ ಕುಣಿಯುತ್ತಿದ್ದಾಳಿಲ್ಲಿ! ಕವಿವರನ ಕನಸು ನನಸಾಗುತ್ತಿದೆ ಶ್ರೀನಿಕೇತನದಲ್ಲಿ ! ಸಿರಿಸರಸತಿಯರಿಂದ ಕೂಡಿದ ಭಾರತದ ಈ ಶಾಂತಿನಿಕೇತನವು, ವಿಶ್ವಶಾಂತಿಸಾಧಕರ ಸಮ್ಮೇಳನ ಸ್ಥಳವಾಗುವುದರಲ್ಲಿ ಅಚ್ಚರಿಯೇನು ?

ಈ ವಿಚಾರದ ತೆರೆಯ ಮೇಲೆ ತೇಲುತ್ತ ಅತಿಥಿಭವನಕ್ಕೆ ಬಂದು ಸೇರಿದೆ. ಗ್ರಂಥಾಲಯವನ್ನು ಕಂಡೆ. ಅದರಂತೆ ಠಾಕೂರರ ಕೃತಿಗಳೆಲ್ಲ ಒತ್ತಟ್ಟಿಗೆ ಸಿಕ್ಕುವ ಗ್ರಂಥಭಾಂಡಾರವನ್ನು ನೋಡಿದೆ. ಬಾಲಕರು ಬಯಲಲ್ಲಿ, ಗಿಡಗಳ ನೆರಳಲ್ಲಿ ಕುಳಿತು ಕಲಿಯಲಿಕ್ಕೆಂದು ನಿರ್ಮಿಸಿದ ಸ್ಥಳಗಳನ್ನೂ ಕಂಡುಕೊಂಡೆ. ಅರ್ಧವರ್ತುಲಾಕಾರದಲ್ಲಿ ನುಕ್ಕಳು ಕೂಡಲಿಕ್ಕೆ ಸೀಮೆಂಟಿನ ಕಟ್ಟೆಗಳನ್ನು ಅಲ್ಲಿ ನಿರ್ಮಿಸಿದ್ದುಂಟು. ಅಲ್ಲಿ ಆಡುತ್ತ ಮಕ್ಕಳು ಚಕ್ಕಂದದಿಂದ ಪಾಠಗಳನ್ನು ಕಲಿಯುವರೆಂಬುದನ್ನು ಸಂಚಾಲಕರು ವಿವರಿಸಿದರು. ಅದರ ಜೊತೆಗೆ ಎಲ್ಲ ವರ್ಗಗಳು ಆರಂಭವಾಗುವ ವರೆಗೆ ತಿಂಗಳೊಪ್ಪತ್ತು ಅಲ್ಲಿ ನಿಲ್ಲಲಿಕ್ಕೂ ಹೇಳಿದರು. ಅವರ ಕೂಡ ಶಾಂತಿನಿಕೇತನದ ಸದ್ಯದ ಆಡಳಿತದ ವಿಷಯಕ್ಕೆ ಮಾತನಾಡಿದಾಗ, ಇಷ್ಟು ಸಂಗತಿ ತಿಳಿದು ಬಂತು:— ಈ ಸಂಸ್ಥೆಯನ್ನು ನಡೆಯಿಸಲಿಕ್ಕೆ ಒಂದು ಸಮಿತಿ ನಿರ್ಮಾಣವಾಗಿದೆ. ಆದರೆ ಅಧ್ಯಕ್ಷರು ಭಾರತ ಭೂಷಣರಾದ ಪಂಡಿತ ಜವಹರರಾಗಿದ್ದಾರೆ. ಸದ್ಯದಲ್ಲಿ ಶಾಂತಿನಿಕೇತನವನ್ನು ಸ್ವತಂತ್ರ ವಿಶ್ವವಿದ್ಯಾನಿಲಯವನ್ನಾಗಿ ಮಾಡುವ ವಿಚಾರ ನಡೆದಿದೆ ಸಂಸ್ಥೆಗೆ ದುಡ್ಡಿನ ಕೊರತೆಯಿಲ್ಲ. ಇರುವುದೂ ಸಾಧ್ಯವಿಲ್ಲ. ಒಂದು ದೇಶದ ಸರ್ಕಾರ– ಅದರ ಪ್ರಮುಖನಾಯಕ—ಸಂಸ್ಥೆಯ ಸೂತ್ರವನ್ನು ಕೈಗೆ ತಕ್ಕೊಂಡಾಗ, ಈ ಪ್ರಶ್ನೆಯನ್ನು ವಿಚಾರಿಸುವುದೇ ಅನುಚಿತವಲ್ಲವೇ ?

ಕರ್ನಾಟಕದಲ್ಲೊಂದು ಇಂಥ ಸಂಸ್ಥೆಯನ್ನು ಕಟ್ಟಿದಾಗ ಅದರ ಸೂತ್ರಧಾರನಾಗಿ ನಿಲ್ಲುವ ಕನ್ನಡವ್ಯಕ್ತಿ—ಭಾರತ ಸರಕಾರದ ಬಲವನ್ನೇ ಬೆನ್ನಿಗೆ ಕಟ್ಟಿಕೊಂಡು ಬರುವ ವ್ಯಕ್ತಿ—ಯಾರಾದರೂ ಇದ್ದಾರೆಯೆ ?—ಎಂಬ ಪ್ರಶ್ನೆಯು ಶಾಂತಿನಿಕೇತನವನ್ನು ಬಿಟ್ಟು, ಬಂಗಾಲವನ್ನು ದಾಟಿ, ಬಿಹಾರದಲ್ಲಿ ಮರಳಿಬರುವ ವರೆಗೂ ನನ್ನ ಮುಂದೆ ನಿಂತಿದ್ದಿತು.

ಅವಳ ಚಿತ್ರ

(ಒಂದು ಸಣ್ಣಕತೆ)

ಶೀ. ದೇವಳಿ ಕೃಷ್ಣರಾಯರು ಬಿ. ಎ. ವಿಜಾಪುರ

★

ಅಗಲಿದ ಮೇಲೆ ಪ್ರೇಮದ ಬೆಲೆ ತಿಳಿದರೆ ಪ್ರಯೋಜನವೇನು? ಅಹಂಕಾರ-ಸ್ವಾರ್ಥಗಳು ಪ್ರೇಮದ ಹೂವನ್ನು ತುಳಿಯುತ್ತಿರುತ್ತವೆ. ಸುಶೀಲೆಯೂ ಇಂತಹ ತುಳಿತಕ್ಕೆ ಸಿಕ್ಕ ಒಂದು ಹೂ!

★

ಆ ಚಿತ್ರ! ಲಗ್ನವಾದ ಮೇಲೆ ಕೆಲವೇ ದಿನಗಳಲ್ಲಿ, ಸುಖದ ಸವಿಗನಸುಗಳನ್ನು ಕಾಣುವಾಗ ತೆಗೆದ ಅವಳ ಮೋಹಕವಾದ ಭಾವಚಿತ್ರ, ಭರ್ರೆಂದು ಬೀಸುತ್ತಿದ್ದ ಹೊರಗಿನ ಬಿರುಗಾಳಿಗೆ ಗೋಡೆಯ ಮೇಲೆ ತೂಗಾಡುತ್ತಿತ್ತು.

ವಾಸಣ್ಣ ಮಿಂಚಿನಂತೆ ಓಡಿ ಬಂದು ಅದನ್ನು ಸರಿಪಡಿಸ ಹೋದ. ಹಿಂದು ಕೈಯಲ್ಲಿ ಬಂದಿತು. ಆತ ಆ ಚಿತ್ರದಲ್ಲಿ ನೆಟ್ಟ ದೃಷ್ಟಿಯನ್ನು ತೆಗೆಯಲಾರದವನಾದ.

'ಲಗ್ನವಾಗಿ ಇಂದಿಗೆ ಮೂರು ವರ್ಷ ಕೂಡ ಪೂರ್ಣವಾಗಿರಲಿಲ್ಲ! ಇದೆಂತಹದು ಸೃಷ್ಟಿಯ ನಿಯಮ! ವಿಧಿಲಿಖಿತವೆಂದರೇನು ಗೊಂಬೆಯ ಆಟವೇ? ಕಲ್ಪನೆಗೆ ನಿಲುಕದಂತಹ ಘೋರ ಆಜ್ಞೆ ಮಾಡಿದ ಪಾಷಾಣ ಪ್ರಪಂಚವನ್ನು ಏನೆಂದು ಬಗೆದು ನೋಡಲಿ?' ಎಂದು ಚಿಂತಿಸುವಾಗ, ವಾಸಣ್ಣನ ಕಣ್ಣುಗಳಲ್ಲಿ ಅಶ್ರುಗಳ ಧಾರೆ ತಾನೇ ತಾನಾಗಿ ಹರಿಯುತ್ತಿತ್ತು!

ಹೊರಗೆ ಸಿಡಿಲು-ಮಿಂಚಿನ ಸಿರಿವಂತಿಕೆಯೊಡನೆ ಮಳೆ 'ಧೋ ಧೋ' ಎಂದು ಸುರಿದು, ಪ್ರಳಯಕಾಲವನ್ನು ಆಮಂತ್ರಿಸುತ್ತಿತ್ತು.

ವಾಸಣ್ಣ ತನ್ನನ್ನು ತಾನು ಮರೆತ. ಅವಳ ಚಿತ್ರದಲ್ಲಿ ತನ್ಮಯನಾದ. "ನಿಜವಾಗಿ ನಾನು ಸ್ವತಂತ್ರಳೇ ಇನ್ನು?" ಎಂದು ಒಮ್ಮೆ ಕೇಳಿದಳು. ಮತ್ತೊಮ್ಮೆ "ಧಾವಿಸಬೇಡಿರಿ, ಜಾರಿ ಬಿದ್ದೇನು!" ಎಂದಳು. ಕಡೆಗೆ "ಏನು ನೆನಿಸುತ್ತಿದ್ದೀರಿ?" ಎಂದು ಕೇಳಿದಳು.

* * *

ಏನು ನೆನಸುತ್ತಿದ್ದ!

ಮೊದಲ ನೆನಪು: 'ಮೊದಲ ರಾತ್ರಿ'ಯಾಗಿ ಒಂದು ತಿಂಗಳಿಗೆ. ವಾಸಣ್ಣ ಸುಶೀಲೆಯನ್ನು ಕೆಣಕಿ ಪ್ರಶ್ನಿಸಿದ:

"ಸುಶೀ, ಅಂದಿನ ರಾತ್ರಿ ನೆನಪಾಗುತ್ತದೆಯೇ!"

"ನೆನಪಾಗದೆಯೇನು!" ಎಂದು ಲಜ್ಜೆತಳಾಗಿ ನಕ್ಕಳು. "ನಿಮ್ಮ ಮಿತ್ರರ ಅಂದಿನ ಕುಚೇಷ್ಟೆ, ನಿಮ್ಮ ತಾಯಿ ಅವರನ್ನು ಹೊಡೆದೋಡಿಸಿದ್ದು—ನೆನಪಾಗಿ ನಗೆಯೂ ಬರುತ್ತದೆ."

"ನಿನ್ನ ಅಬಚಿ ಮಾತ್ರ ಅಂದು ಮಧಾಹ್ನ ತುಂಟತನ ಮಾಡಿದಳು."

"ನಿಮ್ಮ ಜನರೆಲ್ಲಿ ಸುಮ್ಮನೆ ಕುಳಿತಿದ್ದರು! ಅವರೊಂದು ಮಾತಾಡಿದ್ದಕ್ಕೆ ಇವರೂ ಒಂದು ಮಾತಾಡಿದರು....."

"ಲಗ್ನ ಮಾಡಿಕೊಂಡವಳು ನೀನಿದ್ದಾಗ, 'ಕಪ್ಪು-ಕಪ್ಪು' ಎಂದು ನನ್ನನ್ನು ಟೀಕಿಸಿದಳಂತೆ!"

"ನಿಮ್ಮವರು ಮಾತ್ರ ನನ್ನನ್ನು 'ಹುಚ್ಚಿ, ಇಂಗ್ಲೀಷಿನ ಗಂಧವಿಲ್ಲದವಳು, ಹಳಬರ ಹೆಣ್ಣು' ಎಂದು ಮಾಲೆಯನ್ನು ಹೆಣೆದದ್ದು ಟೀಕೆಯಲ್ಲವೇನೊ!"

"ಅದರಲ್ಲಿ ಸುಳ್ಳೇನಿದೆ?"

"ನನ್ನ ಅಬಚಿ ಆಡಿದ್ದು ಸುಳ್ಳೇ ಹಾಗಾದರೆ?"

ವಾಸಣ್ಣ ಸುಶೀಲೆಯನ್ನು ನಿಟ್ಟಿಸಿ ನೋಡಿದ. "ಜಗಳಾಡ ಬೇಕಾಗಿದೆಯೇನು?" ಎಂದು ಕೇಳಿದ.

"ಪ್ರಾರಂಭ ಮಾಡಿದವರು ನೀವಲ್ಲವೇ?"

"ನಾನೇನು ನಿನಗೆ ಹೆಸರಿಡಲಿಲ್ಲ."

"ನಾನಾದರೂ ನೀವು ಕಪ್ಪು ಎಂದು ಟೀಕಿಸಲಿಲ್ಲ!" ಎಂದು ಸುಶೀಲೆ ನಾಲಗೆ ಕಚ್ಚಿದಳು. ಸ್ವಲ್ಪ ದೂರ ಸರಿದಳು.

ಕೆಲಹೊತ್ತು ಮೌನ.

ಸುಶೀಲೆ ವಾಸಣ್ಣನನ್ನು ಜಪ್ಪಿಕೊಂಡು, "ಸಿಟ್ಟು ಬಂದಿತೇನು? ಗಂಡಸರಿಗೆ ಸಿಟ್ಟು ಸಹಜವಾಗಿ ಮೂಗಿನ ತುದಿಯ ಮೇಲೇ ಕೂತಿರುವುದು" ಎಂದಳು. ಎಷ್ಟೋ ಹೊತ್ತು ಸರಸಸಲ್ಲಾಪಗಳಾದುವು. ಮಾತು-ಕತೆಗಳಾದುವು. ಮಾತಿನ ಭರದಲ್ಲಿ ವಾಸಣ್ಣ "ಸುಶೀ, ರಾಣೀ, ಇಂದಿನ ಸುಖವೇ ಸುಖ. ನರಲೋಕದಲ್ಲಿಯೂ ಸ್ವರ್ಗ ಸುಖವುಂಟೆಂದು ಒಪ್ಪುತ್ತೇನೆ. ಹೀಗೆಯೇ ನಿನ್ನ ಕಂಕುಳಲ್ಲಿ ಒಮ್ಮೆ...." ಎಂದೆನ್ನುವಾಗ ಸುಶೀಲೆ ಅವನ ಬಾಯನ್ನು ತನ್ನ ಕೈಯಿಂದ ಒತ್ತಿ ಹಿಡಿದಳು.

"ಗಂಡುಸರು ಹಾಗೆಲ್ಲಾ ಮಾತಾಡಬಾರದು; ತೀರೀತೇ? ದೈವ ಬಲವಾಗಿದ್ದರೆ ಚಿರಂಜೀವಿಯಾಗಿ ಸುಖಿಯಾಗಿರೋಣ. ಏನಾದರೂ ಆಗುವುದಿದ್ದರೆ ನನಗೇ ಆಗಲಿ—ನನಗಿಂತಲೂ ಸುಂದರಳಾಗಿರುವವಳನ್ನು ಲಗ್ನವಾಗಿ ಮತ್ತಿಷ್ಟು ಸುಖಿಯಾಗಿರುವಿರಂತೆ!"

ವಾಸಣ್ಣ ಸುಶೀಲೆಯ ಗಲ್ಲ ಚಿವುಟಿದ.

"ಇಶ್ಯ" ಎಂದು ಕೊಸರಿಕೊಂಡಳು.

* * *

ಎರಡನೆಯ ನೆನಪು: ಏಳೆಂಟು ತಿಂಗಳಿನ ಮೇಲೆ. ವಾಸಣ್ಣ 'ಟಾಯ್‌ಫಾಯಿಡ್' ನಿಂದ ಹಾಸಿಗೆ ಹಿಡಿದಿದ್ದ. ತವರುಮನೆ-

ಯಲ್ಲಿದ್ದ ಸುಶೀಲೆ ಧಾವಿಸಿ ಬಂದಳು. ರಾತ್ರಿ-ಹಗಲೆನ್ನದೆ ಔಷಧೋಪಚಾರ ಮಾಡಿದಳು. ದಿನಗಳು ಹೋದಂತೆ ವಾಸಣ್ಣ ಹಾಸಿಗೆಯ ಮೇಲೆ ಎದ್ದು ಕೂಡಹತ್ತಿದ.

ಒಂದು ದಿನ ಮೋಸಂಬಿಯ ರಸವನ್ನು ತೆಗೆದುಕೊಂಡು ಸುಶೀಲೆ ಅವನೆಡೆಗೆ ಬಾದಳು. ಕುಡಿಸುವಾಗ ವಾಸಣ್ಣ ಅವಳ ಕೈಗುನ್ನು ಸಹಜವಾಗಿ ಒತ್ತಿ ಹಿಡಿದ.

"ಸುಶೀ, ಮೈ ಬಿಸಿಯಾಗಿದೆಯಲ್ಲ! ಜ್ವರ ಬರುತ್ತಿದೆಯೇನೇ?" ಎಂದು ಕೇಳಿದ

" ಛೇ, ಛೇ, ಎಲ್ಲಿಯ ಜ್ವರ! ಸ್ವಲ್ಪ ಶ್ರಮವಾಗಿದೆ. " ಎಂದವಳೇ ಕೈ ಬಿಡಿಸಿಕೊಂಡು ಎದ್ದಳು.

" ಸುಶೀ, ನಿನ್ನ ಮೈಯಲ್ಲಿ ಜ್ವರವಿದೆ! "

" ಇಲ್ಲ ಎಂದು ಹೇಳಿದೆನಲ್ಲ. ಇಷ್ಟಕ್ಕೆಲ್ಲ ತ್ರಾಸ ಮಾಡಿಕೊಳ್ಳಬಾರದು. ಕತ್ತಲೆಯಾಗುತ್ತಿದೆ. ದೀಪ ಹಚ್ಚಿ ಬರುತ್ತೇನೆ..... ಅತ್ತೆಯವರ ಮುಂದೆ ಅನಬೇಡಿರಿ ಮತ್ತೆ.... " ಎಂದವಳೇ ಒಳಗೆ ಹೊರಟುಹೋದಳು.

× × × ×

ನೂರನೆಯ ನೆನಪು : ಒಂದು ವರುಷದನಂತರದ ಒಂದು ದಿವಸ.

" ಮದ್ರಾಸು, ಮೈಸೂರು ಒಬ್ಬರೇ ನೋಡಿಕೊಂಡು ಬಂದಿರಿ. ಈಗ ಮುಂಬಯಿಗೆ ಹೊರಟಿದ್ದೀರಿ. ನನಗೆ ಮುಂಬಯಿಯನ್ನಾದರೂ ತೋರಿಸಿರಲ್ಲ! " ಎಂದು ಸುಶೀಲೆ ಚಹದ ಕಪ್ಪನ್ನು ಮುಂದೆ ಸರಿಸುತ್ತ ಮಾತಾಡಿದಳು.

" ನಮಗೆಲ್ಲಾ ಇಪ್ಪತ್ತೆಂಟು ಕೆಲಸ. ನಿನ್ನನ್ನು ಸಂಗಡ ಕರೆದುಕೊಂಡು ಹೋದರೆ ಯಾವ ಕೆಲಸವೂ ಆಗುವುದು ಸಾಧ್ಯವಿಲ್ಲ. ಮೇಲಾಗಿ ೪-೫ ದಿನಗಳಲ್ಲಿ ಮುಂಬಯಿಯಂಥ ದೊಡ್ಡ ಊರನ್ನು ಹೇಗೆ ನೋಡಲಿಕ್ಕಾದೀತು! "

" ಆಜ್ಞೇ ಸಾಕು. ಈಗ ಶಪ್ಪಿದರೆ ಎಂದಿಗೂ ಸಾಧ್ಯವಾಗುವುದಿಲ್ಲ. ಈ ಸಾರಿ ಬಂದೇ ಬಿಡುವೆ. ಬೇಕಾದಷ್ಟು ಸಿಟ್ಟಿಗೇಳಿರಿ. ಈಗಂತೂ ಬರೀ ಸಿಟ್ಟೇ ಬರುತ್ತಿದೆ ನಿಮಗೆ. ನನಗೇನು ಆತೆಗಳಿಲ್ಲವೇ..... "

" ..... "

" ಯಾಕೆ ಸುಮ್ಮನೆ ಕೂತಿರಲ್ಲ? "

" ಯಾಕೂ ಇಲ್ಲ ನೀನು ಹಳಬರಂತೆ ಸೀರೆ ಉಟ್ಟು, ಚಪ್ಪಲಿಯಿಲ್ಲದೆ..... "

"ನಿಮಗೆ ಹೇಗೆ ಬೇಕೋ ಹಾಗೆ ಸೀರೆ ಉಟ್ಟುಕೊಳ್ಳುವೆ; ಚಪ್ಪಲಿಗಳನ್ನು ಹಾಕಿಕೊಳ್ಳುವೆ. ಅವು ಕಳೆಯದಂತೆ ಮಾತ್ರ ನೀವು ನೋಡಿಕೊಳ್ಳಬೇಕು. ಆಯಿತೋ? ಕರೆದುಕೊಂಡು ಹೋಗ್ತೀರಾ ಹೂಂ ಅನ್ರಿ!"

" ಹೂಂ! ಹೂಂ

ಸುಶೀಲೆಗೆ ಆತ್ಯಾನಂದವಾಯಿತು. ಬಡತನದಲ್ಲಿ ಬೆಳೆದು ಇದೀಗ ಸುಖದ ಕನಸು ಕಾಣುವುದರಲ್ಲಿದ್ದ ಅವಳಿಗೆ, ಮುಂಬಯಿ ಪಟ್ಟಣ ನೋಡುವುದೆಂದರೆ ಅದೇನು ಸಾಮಾನ್ಯವೇ? ಅದಕ್ಕೆ ಪುಣ್ಯಬೇಕು–ಎಂದೆನಿಸಿತು.

ಮರುದಿನ ಹೊರಡಬೇಕೆಂದು ಬಹು ಉತ್ಸಾಹದಿಂದ ಸಾಮಾನು-ಸಿದ್ಧ ಮಾಡಹತ್ತಿದಳು.

ಸಂಜೆಗೆ ವಾಸಣ್ಣ ಮನೆಗೆ ಬರುವಷ್ಟರಲ್ಲಿ, ಸುಶೀಲೆ ಹಾಸಿಗೆಯ ಮೇಲೆ ಮಲಗಿರುವುದನ್ನು ಕಂಡ.

" ಈಗೇಕೆ ಹಾಸಿಗೆಯ ಮೇಲೆ? " ಎಂದು ಕೇಳಿದ. ಮುಖದ ಮೇಲೆ ಬೇಜಾರದ ಚಿಹ್ನೆ ಮೂಡಿತ್ತು.

" ಏನೂ ಇಲ್ಲ..... ಏನೋ ನುಲಗಬೇಕೆನಿಸಿತು" ಎಂದು ಗಡಿಬಿಡಿಸಿ ಎದ್ದಳು.

ಮಧ್ಯಾಹ್ನ 'ಸತ್ಯನಾರಾಯಣ'ನೆಂದು ೨೫–೩೦ ಜನ ಅತಿಥಿಗಳಿಗೆ ಒಬ್ಬಳೇ ಅಡಿಗೆ ಮಾಡಿ ಬಡಿಸಿ ದಣಿದದ್ದನ್ನು ವಾಸಣ್ಣ ಮರೆತಿದ್ದ.

"ನಿನ್ನ ಮೈಯಲ್ಲಿ ನೆಟ್ಟಗಿಲ್ಲ. ಮೇಲಿಂದ ಮೇಲೆ ನಿನಗೇನಾಗುತ್ತದೆಯೋ ದೇವರೇ ಬಲ್ಲ. ನಾಳೆಗೆ ಊರಿಗೆ ಹೇಗೆ ಬರುವಿ?" ಎಂದು ಕೇಳಿದ. ಮುಖದ ಮೇಲೆ ಕೋಪ ಆಡುತ್ತಿತ್ತು. ಮೇಲಿಂದ ಮೇಲೆ ಇಲ್ಲದ ಕಾರ್ಯ ಹೂಡಿ ಇಪ್ಪತ್ತೆಂಟು ಜನರನ್ನೆಲ್ಲ ಕಳೆಹಾಕಿ, ನೀಗಲಾರದ ಕೆಲಸ ಹಚ್ಚುವಿರೆಂದು ಸುಶೀಲೆ ಮಾತಾಡಬಹುದಾಗಿತ್ತು; ಆದರೆ ಅವಳ ಸಹನಶೀಲತೆಯ ಸ್ವಭಾವ ಹಾಗೆನ್ನಗೊಡಲಿಲ್ಲ.

"ಏನೋ, ಸ್ವಲ್ಪಿದೆಯೆಂದು ಕಲ್ಪಿಸಿದರೂ ನಾಳೆ ಬೆಳಗಾಗುವುದರಲ್ಲಿ ಕಡಿಮೆಯಾಗುವುದು. ಇಷ್ಟರಿಂದ ಏನೂ ತ್ರಾಸವಾಗುವುದಿಲ್ಲ " ಎಂದಳು.

ಬೆಳಗಿನ ವರೆಗೆ ಸುಶೀಲೆಗೆ ನಿದ್ರೆ ಬರಲಿಲ್ಲ. ಮನಸ್ಸು ಕಟಿಯುತ್ತಿತ್ತು. ವಾಸಣ್ಣನ ತಿಗಿನ " ಲಹರಿ"ಯ ಸ್ವಭಾವವನ್ನು ನೆನೆದು ಹಲಬುತ್ತಲೂ ಇತ್ತು.

ಬೆಳಗಾಯಿತು. ಹೊರಡುವ ಸಿದ್ಧತೆಯಾಯಿತು. ವಾಸಣ್ಣ ಟಾಂಗೆಯನ್ನು ಕರೆದು ತಂದು ನಿಲ್ಲಿಸಿ ಒಳಗೆ ಬಂದ.

" ನೀನು ಹೀಗೆಯೇ ಬರುವಿಯಾ? " ಎಂದು ಸಿಡುಕಿನಿಂದ ಕೇಳಿದ.

" ಮುಂಬಯಿಯಲ್ಲಿ ಎಲ್ಲಾ ಸಜ್ಜಾಗಿ..... "

" ಊರೊಳಗಿನ ಜನ ಎಷ್ಟು ಶಿಸ್ತಾಗಿ ಓಡಾಡುವುದನ್ನು ಕಣ್ಣಿನಿಂದ ಕಂಡು ಕಂಡೂ, ನಿನ್ನ ಹಣೆಯಬರಹದಲ್ಲಿ ಒಕ್ಕಲಿಗರಂತೆ ಇರುವುದನ್ನು ಬೇಡಿಕೊಂಡು ಬಂದಿರುವಿ. ನಿನ್ನ ಮೈಯಲ್ಲಿ ನೆಟ್ಟಗಿಲ್ಲ. .... ಈ ಸಾರಿ ಬೇಡ. ನಾನೊಬ್ಬನೇ ಹೋಗಿ ಬರುತ್ತೇನೆ. "

ಸುಶೀಲೆ ಕೆಳಮುಖ ಮಾಡಿ ನಿಂತಳು. ಟಾಂಗಾ ಹೊರಟು ಹೋಯಿತು. ಅವಳಿಗೆ ಮೂರು ತಿಂಗಳಾಗಿದ್ದುವು.

ನಾಲ್ಕನೆಯ ನೆನಪು: ಸುಶೀಲೆ ಎಂಟು ತಿಂಗಳ ಗರ್ಭಿಣಿ. ಅವಳಿಗೆ ಶ್ರೀಮಂತ. ಅಂದು ಅವನಿಗೆ ಅವಳು ಮನೋಹರಳಾಗಿ ಕಂಡಳು. "ದೃಷ್ಟಿ ಹತ್ತೀತು! ಗಲ್ಲಕ್ಕೆ ಕಪ್ಪು ಹಚ್ಚಿಕೋ" ಎಂದು ವಾಸಣ್ಣ ಕೋಣೆಯೊಳಗೆ ಬಂದು ಮೂದಲಿಸಿದ. ನಾಲ್ಕೈದು ತಿಂಗಳಿಂದ ಅವಳಿಗೆ ವಾಸಣ್ಣನ ಮೇಲೆ ಏಕೋ ಸ್ವಲ್ಪ ಜುಗುಪ್ಸೆಯಾಗಿತ್ತು. "ನೀವಿದ್ದೀರಲ್ಲ!" ಎಂದು ಅವನ ಮಾತಿಗೆ ಉತ್ತರಿಸಿದಳು.

ವಾಸಣ್ಣ ಅವಳ ಅಂದಿನ ಸೌಂದರ್ಯವನ್ನು ಕಂಡು ಅತಿ ಮುಗ್ಧನಾದ.

"ಇಂದು ನೀನೆಷ್ಟು ಮುದ್ದಾಗಿರುವೆಯೇ!" ಎಂದು ಮತ್ತೆ ಪ್ರಾರಂಭಿಸಿದ.

"ಛೀ, ಇದೇನು ನಡಿಸಿದಿರಿ!"

"ನಿಜವಾಗಿ ನೀನು ರತಿಯಂತೆ ಕಾಣುತ್ತಿರುವಿ!"

ಸುಶೀಲೆಗೆ ನಗೆ ಬಂದಿತು.

"ರತಿಯನ್ನು ಎಂದಾದರೂ ನೋಡಿದ್ದೀರಾ?" ಎಂದು ಕೇಳಿದಳು.

"ನೋಡಿದ್ದೇನೆ!"

"ಯಾವ ಲೋಕದಲ್ಲಿ?"

"ಇದೇ — ಇದೇ ಲೋಕದಲ್ಲಿ!"

"ಎಂದು?"

"ಇಂದು!"

"ಎಲ್ಲಿ?"

"ಇಲ್ಲಿ!" ಎಂದವನೇ ವಾಸಣ್ಣ ಮುಗ್ಧನಾಗಿ ಅವಳ ಸಮೀಪಕ್ಕೆ ಓಡಿದ. ಕೋಣೆಯ ಬಾಗಿಲು ತೆರೆದಿತ್ತು. ಆಮಂತ್ರಿತ ಹೆಂಗಳೆಯರು ಬರುವುದು ಕಾಣುತ್ತಿತ್ತು. ಸುಶೀಲೆ ಸರ್ರೆಂದು ತಪ್ಪಿಸಿಕೊಂಡು ಓಡಿದಳು.

'ಧಡಲ್' ಎಂದು ಬಾಗಿಲಿಗೆ ಹಾಯ್ದಳು. ಧೊಪ್ಪನೆ ನೆಲಕ್ಕೆ ಬಿದ್ದಳು. ಎಚ್ಚರು ತಪ್ಪಿತು. 'ಇದೇನು ಮೂರ್ಖತನ ಮಾಡಿದೆ ನಾನು!' ಎಂದು ವಾಸಣ್ಣ ಹೌಹಾರಿ, ಅವಳನ್ನು ಹಿಡಿದೆತ್ತಿದ. ಕೆಲವು ನಿಮಿಷಗಳ ಮೇಲೆ 'ಎದೆ ನೋಯುತ್ತಿದೆ; ಹೊಟ್ಟೆಯಲ್ಲಿ ಕಳೆ ಬರುತ್ತಿವೆ' ಎಂದಳು. 'ಅಸಹ್ಯ ನೋವನೆಯಾಗಹತ್ತಿತು.

ಆಗ ರಾತ್ರಿ ೮ ಗಂಟೆ. ಹೊರಗೆ ಎಷ್ಟೋ ಹೆಂಗಳೆಯರು ಅವಳ ಆರತಿಗೆಂದು ಬಂದು ತುಂಬಿದ್ದರು. ಕೋಣೆಯಲ್ಲಿ ಸುಶೀಲೆ ಹಸಿರು ಸೀರೆ, ಗುಲಾಬಿಯ ಕುಪ್ಪಸ, ಸಂಪಿಗೆ ಹೂವಿನ ಮಾಲೆಗಳೊಡನೆಯೇ ಹಾಸಿಗೆಯ ಮೇಲೆ ಕಣ್ಣು ಮುಚ್ಚಿ ಮಲಗಿದ್ದಳು. ಮನೆಯ ಜನ ಹಾಸಿಗೆಯ ಬದಿಗೆ ಕುಳಿತಿದ್ದರು. ಡಾಕ್ಟರರು ಬಂದು ಹೋದರು. ವಾಸಣ್ಣ ಅವರೊಡನೆ ಹೋದ.

"ಎಲ್ಲಿದ್ದಾರಿ?" ಎಂದು ಕಣ್ಣು ತೆರೆದು ಕೇಳಿದಳು.

"ಈಗ ಬರುತ್ತಾನೆ. ಏನು ಬೇಕಾಗಿದೆ ತಾಯಿ" ಎಂದು ಸುಶೀಲೆಯ ಅತ್ತೆ ಕೇಳಿದಳು.

"ಅವರಿಗೆ ಬಹಳ ಹೌಸು. ನಾನೇನು....."

"ಹಾಗೆಲ್ಲ ಮಾತಾಡಬಾರದು; ಆಯಾಸವಾಗುವುದು."

"ನನಗೂ ಆಶೆಗಳು..... ಅವರು ಬರಲಿಲ್ಲವೇ?".... ನಮ್ಮ ಊರಿಗೂ ತಿಳಿಸಿ.....ಮತ್ತೆ.....ಅವರು ಬರಲಿಲ್ಲವೇ....."

ಬಾಯಾರಹತ್ತಿತು. ಮಾತಾಡುವುದಾಗಲಿಲ್ಲ. ಸುತ್ತಲೆಲ್ಲ ನೋಡಹತ್ತಿದಳು. ಅವಳಿಗೆ ಸಂಕಟವಾಗುತ್ತಿತ್ತು. ಮೆಲ್ಲನೆ ಕಣ್ಣುಗಳು ಮುಚ್ಚಹತ್ತಿದುವು.

ಕೋಣೆಯಲ್ಲಿಟ್ಟಿದ್ದ ಆರತಿಯ ದೀಪ ಮೆಲ್ಲಗೆ ಮಂದವಾಗುತ್ತಿತ್ತು.

* * *

ಐದನೆಯ ನೆನಪು: ಮರುದಿನ ರಾತ್ರಿ. ವಾಸಣ್ಣ ಹಾಸಿಗೆಯ ಮೇಲೆ ಕಣ್ಣು ಮುಚ್ಚಲಾರದೆ ಹಾಗೆಯೇ ಒರಗಿದ್ದ. ಮರ್ನಾ ರಾತ್ರಿಯೊಮ್ಮೆ ಅವನ ತಾಯಿ ಬಂದು ಅವನನ್ನು ಮಾತಾಡಿಸಿ ಹೋದಳು. ಮಾತಾಡಲಿಲ್ಲ. ನಿಂತು ನಿಂತು ಕಣ್ಣೊರಸಿಕೊಂಡು ತಿರುಗಿ ಹೋದಳು. ನಸುಕಿಗೆ ಎರಡು ತಾಸು ಉಳಿದಾಗ ವಾಸಣ್ಣ ಕಣ್ಣು ಮುಚ್ಚಿದ.

ಅದೇ ಸುಶೀಲೆ! ಅದೇ ಕೋಣೆ!

ಗಜಕರ್ಣ, ಹುರುಕು, ಇಸಬು
ಮುಂತಾದ ಚರ್ಮರೋಗಗಳನ್ನು ತಪ್ಪದೆ
ಗುಣಪಡಿಸುವ ಔಷಧ

ಗೋವಾ ಮಲಮ್
ಸ್ಟಾರ್ ಕಂಪನಿ,
ಬೆಳಗಾಂವಿ.

ಶಾಂತಿಸೇವಾ ಸದನದ ಸುಂದರ ಪ್ರಕಟನೆ!

" ಮಾಯಾ ಮಂದಿರ "

ಶ್ರೀ. ಭುಜೇಂದ್ರ ಮಹಿಷವಾಡಿ

ಅವರ

ಸರ್ವೋತ್ಕೃಷ್ಟ ಕವನ ಸಂಗ್ರಹ.

ಪ್ರೊ. ಮುಗಳಿ ಅವರು ಮುನ್ನುಡಿಯಲ್ಲಿ

ಹೀಗೆ ಬರೆಯುತ್ತಾರೆ:

' ಮಾಯಾ ಮಂದಿರ ' ದಿಂದ ಮೊದಲಾಗಿ ' ಶಾಂತಿ ' ಯಲ್ಲಿ ಕೊನೆಗೊಳ್ಳುವ ಈ ಸಂಗ್ರಹವು **ಭುಜೇಂದ್ರರ** ತಾತ್ವಿಕದೃಷ್ಟಿಗೆ ಸಾಕ್ಷಿಯಾಗಿದೆ. **ಭುಜೇಂದ್ರರಕವಿತಾಶಕ್ತಿ** ಅಜೇಯವಾದುದು, ಸಹಜವಾದುದು.' **ಬೆಲೆ: ೧-೮-೦**

ದೊರೆಯುವ ಸ್ಥಳ:

ಶ್ರೀ. ಮಿರ್ಜಿ ಅಣ್ಣಾರಾಯರು,

ಉಗಾರ (ಜಿಲ್ಲಾ ಬೆಳಗಾವ)

ವ್ಯಾಪಾರಿಗಳಿಗೆ ತುಂಬ ಸವಲತ್ತು ಇದೆ.

ಹಸಿರು ಸೀರೆಯನ್ನು ಉಟ್ಟು ಗುಲಾಬಿಯ ಕುಪ್ಪಸ ತೊಟ್ಟು, ಸಂಪಿಗೆಯ ಮಾಲೆಯನ್ನು ಹೆರಳಿಗೆ ಅಲಂಕರಿಸಿ, ಒಪ್ಪುವ ಚಪ್ಪಲಿಗಳನ್ನು ಧರಿಸಿ ಕೋಣೆಯೊಳಗೆ ಬಂದಳು.

ವಾಸಣ್ಣ ತೊಯ್ದ ಕಣ್ಣುಗಳನ್ನು ಒರಸುತ್ತ :

" ನೀನು....ನೀನು.. ಸುಶೀ....ಹೋಗಿಲ್ಲವೇ....." ಎಂದ.

" ನಾನೆಲ್ಲಿಗೆ ಹೋಗಿದ್ದೇನೆ! ನಿಮ್ಮನ್ನು ಬಿಟ್ಟು ಎಲ್ಲಿಗೆ ಹೋಗಲಿ?"

" ಹಾಗಾದರೆ ನನಗೇ ಕನಸು ಬಿದ್ದಿತ್ತೇನು! ನಾನೆಂಥ ಹುಚ್ಚ! ನಿಜವಾಗಿ ಅಗಲಿ ಹೋದಿ— ಎಂದು ತಿಳಿದುಕೊಂಡೆ. ಉರಿಯುತ್ತಿರುವ ಈ ದೀಪ, ನಿನ್ನೆ ನಾನು ಧಾವಿಸುತ್ತ ಬಂದಾಗ ಆರಿ ಹೋದಂತೆ ಕಂಡಿತು!...ಅದೇನು ದೃಶ್ಯ! ನಿನ್ನನ್ನು ಹೊತ್ತುಕೊಂಡು....ಛೇ....ಅದೆಂಥ ಮೂರ್ಖ ಜನ....ಗಳಗಳನೆ ಸುಮ್ಮನೆ ಅತ್ತು ಬಿಟ್ಟೆನು. ಅದೆಂಥ ವಿಚಿತ್ರ ಕನಸದು!...."

" ಕೂಸು ಎದೆಗೇರಿ ಸತ್ತು ಹೋದವಳು, ಮತ್ತು ಬದುಕಿದೆನೆಂದು ಹಳಹಳಿಸುತ್ತಿದ್ದೇನೆ."

" ಸುಶೀ, ಹಾಗೆ ಅಶುಭ ಮಾತಾಡಬೇಡ. "

" ಮಾತಾಡದಿದ್ದರೂ ಮನಸಿನಲ್ಲಿ ತುಂಬಿಕೊಂಡಿದ್ದೇನೆ. ನೀವು ನನ್ನ ಜೀವನಕ್ಕೆ ನಿಜವಾಗಿ ಬೇಸತ್ತಿದ್ದಿರಲ್ಲವೇ! ನಾನು ಓದು-ಬರಹ ಕಲಿಯದ ಹೆಂಡತಿಯಾದೆ. ಅತಿಥಿಸತ್ಕಾರದಲ್ಲಿ ಹಣ್ಣಾಗಿ ನೀರಿಂದ ಮೇಲೆ ಹಾಸಿಗೆಗೆ ಒರಗಿದಾಗ, ನೀವು — ನಿಮ್ಮ ಮನೆಯವರು ಚುಚ್ಚಿ-ಚುಚ್ಚಿ ಮಾತಾಡುತ್ತಿದ್ದಿರಿ! ನಾನೆಷ್ಟು ಸಹಿಸಿಕೊಂಡೆ ಗೊತ್ತಿ? ನನ್ನ ಸೌಜನ್ಯಕ್ಕೆ ನೀವು ಸೋತು ಮೋಹಿಸುತ್ತಿದ್ದರೂ, ನನ್ನ ನಿರಾಡಂಬರಕ್ಕೆ ಹೇಸಿದಿರಿ. ಅಂದು ಚಪ್ಪಲಿಗಳನ್ನು ಹಾಕಿಕೊಳ್ಳದ್ದಕ್ಕೆ ನನ್ನನ್ನು ಬಿಟ್ಟೇ ಮುಂಬಯಿ ಹೋದಿರಿ; ಎಷ್ಟು ವೇದನೆಯಾಗಿರಬೇಕು ನನಗೆ! ನೀವು ಮೂರು ಸಾರಿ ಘೋರವಾದ ಜಡ್ಡಿನ ಬಲೆಗೆ ಬಿದ್ದಾಗ, ರಾತ್ರಿ ಹಗಲು ಆರೈಕೆ ಮಾಡಿದೆ. ನನ್ನನ್ನೆಷ್ಟು ಹೊಗಳಿದಿರಿ ಆಗ! ನನ್ನ ಮಾತ್ರ ಹುಗುಳು-ನೆಗಡಿಯಾದೊಡನೆ ಸಿಡುಕು ಮಾತಾಡುತ್ತಿದ್ದಿರಿ ಕಡೆಕಡೆಗೆ ಅಲಂಕಾರದ ಉಪಾಸಕರಾಗಹತ್ತಿದಿರಿ. ನಿಮ್ಮ ಹುಚ್ಚಾಟಕ್ಕೆ, ನಿನ್ನೆ ಅಲಂಕೃತಳಾದ ನಾನು ಜಾರಿಬಿದ್ದೆ. ಇನ್ನೂ ಎದೆ ನೋಯುತ್ತಿದೆ! ನಿಮ್ಮ ಎದೆ?....."

"ಸುಶೀ-ಸುಶೀ, ಹೀಗೆ ನೀನು ಎಂದೂ ಮಾತಾಡಿರಲಿಲ್ಲ. ನೀನ ಎಲ್ಲ ವೇದನೆಗಳನ್ನು ನುಂಗಿಕೊಂಡು ಇರುತ್ತಿದ್ದೆಯೆಂದು ಒಪ್ಪುತ್ತೇನೆ. ನನ್ನಿಂದ ಎಷ್ಟೋ ತಪ್ಪಾಗಿವೆ.... ನೀನು ಹೇಗೊ ಇರು....ಚಪ್ಪಲಿಗಳನ್ನು ಹರಿದು ಹಾಕು....ಈಗಲೇ ಮುಂಬಯಿ ಹೊರಡುವಾ....ನೀನೇ ನೋಡು; ನಿನ್ನ ಸಲುವಾಗಿ ಎಷ್ಟು ಅರಿವೆ ಪುಸ್ತಕಗಳನ್ನು ಕೊಂಡಿದ್ದೇನೆ! ಏನೋ ನನ್ನದು ಹುಚ್ಚು ಸ್ವಭಾವ! ಏನೇನೋ ಆಕಾಂಕ್ಷೆಗಳು....ಆದರೆ ಅವೆಲ್ಲವನ್ನೂ ಇಂದಿಗೆ ಮರೆತೆ. ನೀನಿಂದು ಸರ್ವಸ್ವತಂತ್ರಳು.....ರಾ.....ಣೀ....'

" ಹೌದೇ! ನಾನು ಸರ್ವ ಸ್ವತಂತ್ರಳೇ! ನನ್ನ ಆಶೆಗಳೆಲ್ಲ ಪೂರೈಸುವುವೇ! ಇದೇನು ಕನಸಿಂಲಿಕ್ಕಿಲ್ಲವೇ! ಹಾಗೆ ನೋಡಬೇಡಿರಿ. ಮತ್ತೆ ಜಾರಿಬಿದ್ದೇನು!... ನಿಮ್ಮನ್ನು ಅಗಲಿ ಹೋದೇನು!"

ಸುಶೀಲೆ ಬಾಗಿಲಿನೆಡೆಗೆ ಹೊರಟಳು.

ಎಷ್ಟು ಪ್ರಯತ್ನಿಸಿದರೂ ವಾಸಣ್ಣನ ಕಾಲುಗಳು ಏಳದಾದುವು

" ಎಲ್ಲಿಗೆ ಹೊರಟೆ?" ಎಂದು ಒದರಹತ್ತಿದ.

" ಎಲ್ಲಿಯೇನು! ನಾನು ಸ್ವತಂತ್ರಳಲ್ಲವೇ.... ಮುಂಬಯಿ ಹೋಗುತ್ತೇನೆ. ಎಲ್ಲಿಯೂ ಹೋಗಬಹುದು....."

" ಸುಶೀ.....ಸುಶೀ... ....ಸು... ಸು...."

ವಾಸಣ್ಣನಿಗೆ ಎಚ್ಚರಾದಾಗ ನಸುಕು. ತಾಯಿ ಅವನ ಸಮೀಪಕ್ಕೆ ಕುಳಿತು ' ಹೀಗೇಕೆ ಗಾಬರಿಯಾಗಿರುವಿ? ' ಎಂದು ಕೇಳಿದಳು

ವಾಸಣ್ಣ " ಅವಳು ಬದುಕಿಲ್ಲನೇ! " ಎಂದು ರೋದಿಸಹತ್ತಿದ

* * *

ಅವಳ ಚಿತ್ರದಲ್ಲಿ ನೆಟ್ಟ ದೃಷ್ಟಿಯನ್ನು ವಾಸಣ್ಣ ತೆಗೆಯಲಿಲ್ಲ ಕಣ್ಣೀರಿನಲ್ಲಿ ಅದು ಒಂದೇ ಸವನೆ ತೊಯ್ಯುತ್ತಿತ್ತು. ಹೊರಗೆ ಮಳೆಯೊಡನೆ ರವಿಸುತ್ತಿದ್ದ ಗುಡುಗು-ಮಿಂಚಿನ ಘೋರ ದೃಶ್ಯಕ್ಕೆ ಹೆದರಿ ವಾಸಣ್ಣ, ಅವಳ ಚಿತ್ರವನ್ನು ಎದೆಗೆ ಅಮುಚಿಕೊಂಡ.

ಮಲಪೆಯ ಪ್ರಾಶಸ್ತ್ಯ

(ಸ್ಥಳ ಪರಿಚಯ)

ಶ್ರೀ. ಎಂ. ಗೋವಿಂದರಾವ್ ಎಂ ಎ. ಮದರಾಸು

★

ಇಂದಿಲ್ಲ ನಾಳೆ ಮಲವೆ ಕನ್ನಡನಾಡಿನ ಪ್ರಮುಖ ಬಂದರವಾಗಲಿದೆ. ಕನ್ನಡಿಗರಲ್ಲಿ ಮಲಪೆಯ ಹೆಸರನ್ನೂ ಕೇಳದವರು ಹಲವರು ಇರಬಹುದು. ಅಂತಹರು ಈ ಲೇಖನವನ್ನು ಓದಿ ನೋಡಲಿ!

ಮಲಪೆಯು ಈಗ ಒಂದು ಬೆಸ್ತರ ಹಳ್ಳಿಯಾಗಿದೆ. ಇದು ಉಡುಪಿಯಿಂದ ಸುಮಾರು ಮೂರು ಮೈಲು ಪಶ್ಚಿಮಕ್ಕೆ, ಪಡುಗಡಲ ದಂಡೆಯಲ್ಲಿ ಡೆಗೊಂಡಿದೆ. ಇಲ್ಲಿ ನೈಸರ್ಗಿಕವಾದ ಒಂದು ಬಂದರವಿದ್ದು, ಪಡುಗಡಲಲ್ಲಿ ಓಡಾಡುತ್ತಿರುವ ಹಡಗುಪಡೆಗಳು ಬಿರುಗಾಳಿಯ ಹೊಡೆತಕ್ಕೆ ಸಿಕ್ಕದೆ ರಕ್ಷಣೆಯನ್ನು ಪಡೆಯುವುದಕ್ಕೆ ಅನುಕೂಲವಾಗಿದೆ. ತೀರಕ್ಕೆ ಸ್ವಲ್ಪ ದೂರದಲ್ಲಿ ಸಮುದ್ರದಲ್ಲಿ 'ದರಿಯಾ ಬಾದರ್ ಗಡ'ಎಂಬ ಚಿಕ್ಕ ದ್ವೀಪಸರಣಿಯಿರುವುದರಿಂದ, ಈ ಬಂದರವು ಸಮುದ್ರದ ಅಲೆಗಳಿಂದ ರಕ್ಷಿತವಾಗಿದೆ. ಇಲ್ಲಿಗೆ ದೋಣಿಗಳೂ ಹಡಗುಗಳೂ ಬಂದು ಸುರಕ್ಷಿತವಾಗಿರುವುವು. ವೆಂಕಟಪನಕಾಲದಿಂದಲೂ ಇದು ಬಹಳ ಪ್ರಸಿದ್ಧವಾದ ಸ್ಥಳವೆಂಬುದು, ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವನ್ನು ಓದಿದವರಿಗೆ ಮಂದಟ್ಟಾಗುವುದು. ಯಾವುದೋ ಒಂದು ಮೂಲೆಯಲ್ಲಿದ್ದುದರಿಂದ ಇದರ ಯೋಗ್ಯತೆ ಅಧಿಕಾರಿಗಳ ಗಮನವನ್ನು ಸೆಳೆಯಲಿಲ್ಲ; ಇಲ್ಲದಿದ್ದರೆ ಎಂದೋ ಇದು ಒಂದು ದೊಡ್ಡ ಬಂದರವಾಗಿ ಪ್ರಪಂಚದ ಎಲ್ಲಾ ಭಾಗಗಳೊಡನೆಯೂ ವ್ಯಾಪಾರ-ವ್ಯವಹಾರಗಳನ್ನು ನಡೆಯಿಸುತ್ತ, ಸೌಭಾಗ್ಯದಿಂದ ಮೆರೆಯುವುದಕ್ಕೆ ಅವಕಾಶವುಂಟಾಗುತ್ತಿತ್ತು. ಆ ಸುಯೋಗವು ಇದುವರೆಗೆ ದೊರೆಯಲಿಲ್ಲ. ಈಗ ನಮ್ಮ ದೇಶವು ಸ್ವಾತಂತ್ರ್ಯವನ್ನು ಪಡೆದಿದೆ. ರಾಷ್ಟ್ರಧುರೀಣರು ಅಧಿಕಾರ ಸೂತ್ರವನ್ನು ಕೈಯಲ್ಲಿ ಹಿಡಿದಿದ್ದಾರೆ. ಜನರು ಕಣ್ಣನ್ನು ಚೆನ್ನಾಗಿ ತೆರೆದು ಜಾಗ್ರತೆಹೊಂದುತ್ತಲಿದ್ದಾರೆ. ಇನ್ನಾದರೂ ಮಲಪೆಯ ಸೌಭಾಗ್ಯದ ಬಾಗಿಲು ತೆರೆಯಲ್ಪಡಬಹುದೆಂದು ನಿರೀಕ್ಷಿಸುವುದಕ್ಕವಕಾಶವಿದೆ.

ನಮ್ಮ ದೇಶದಲ್ಲಿ ಬಂದರಗಳ ಸಂಖ್ಯೆಯು ಬಹಳ ಕಡಿಮೆಯೆಂಬುದು ಎಲ್ಲರಿಗೂ ತಿಳಿದ ವಿಷಯ. ಅದರಲ್ಲೂ ಸ್ವಾಭಾವಿಕವಾದ ಬಂದರಗಳು ಕೆಲವು ಮಾತ್ರವೇ ಇವೆ. ಒಂದು ದೇಶದ ಸಂಪತ್ಸಂವೃದ್ಧಿಗೂ, ಜನಜೀವನದ ಉತ್ಕರ್ಷತೆಗೂ ಬಂದರಗಳು ಎಷ್ಟು ಮುಖ್ಯವಾಗಿವೆಯೆಂಬುದನ್ನು ಪ್ರತಿಯೊಬ್ಬನೂ ಚೆನ್ನಾಗಿ ತಿಳಿದಿರಬೇಕು. ಸುರಕ್ಷಿತವಾದ ಬಂದರಗಳಿದ್ದರೆ ಜನರು ಹಡಗುಗಳನ್ನು ಕಟ್ಟಿ, ಸಾಗರಗಳ ಮೇಲೆ ಸಂಚಾರ ಮಾಡಿ, ವ್ಯಾಪಾರ-ವಹಿವಾಟುಗಳಿಂದ ದೇಶದ ಐಶ್ವರ್ಯವನ್ನು ಹೆಚ್ಚಿಸಬಹುದು. ಅವುಗಳಿಲ್ಲದಿದ್ದರೆ ಜನರು ಕೂಪಮಂಡೂಕಗಳಂತೆ ಇದ್ದಲ್ಲಿಯೇ ಇದ್ದು, ಪರದೇಶದ ವ್ಯಾಪಾರದಿಂದ ಪ್ರಯೋಜನ ಹೊಂದದೆ, ಬಡವರಾಗಿಯೇ ಇರುವರು. ಜನಜೀವನದ ಮೇಲೆ ಬಂದರಗಳು ವಿಶೇಷ ಪರಿಣಾಮವನ್ನುಂಟುಮಾಡುತ್ತವೆ. ಜನರಲ್ಲಿ ಸಾಹಸ, ಧೈರ್ಯ, ಉತ್ಸಾಹ ಮುಂತಾದ ಉತ್ತಮ ಗುಣಗಳುಂಟಾಗುವುದಕ್ಕೆ ಬಂದರಗಳೂ ಕಾರಣವಾಗಿವೆ.

ಈ ಬಂದರಗಳಲ್ಲಿ ಎರಡು ತೆರವುಂಟು. ಕೆಲವು ಸ್ವಾಭಾವಿಕವಾದ ಬಂದರಗಳು; ಇನ್ನು ಕೆಲವು ಕೃತಕವಾದ ಬಂದರಗಳು. ಸುತ್ತಲೂ ಸಮುದ್ರದ ಅಲೆಗಳಿಂದ ರಕ್ಷಿತವಾಗಿರುವ ಆಳವೆ, ಕೊಲ್ಲಿ ಮುಂತಾದುವು ಸ್ವಾಭಾವಿಕ ಬಂದರಗಳಾಗುತ್ತವೆ. ಅಲೆಗಳನ್ನು ತಡೆಯುವುದಕ್ಕಾಗಿ ದೊಡ್ಡ ದೊಡ್ಡ ಕಟ್ಟಡಗಳನ್ನು ಅಥವಾ ಗೋಡೆಗಳನ್ನು ಕಟ್ಟಿ ಸಿದ್ಧಗೊಳಿಸಿರುವ ಬಂದರಗಳು ಕೃತಕವಾದ ಬಂದರಗಳೆನಿಸುತ್ತವೆ. ಮಲಪೆಯಲ್ಲಿರುವುದು ಸ್ವಾಭಾವಿಕವಾದ ಬಂದರ. ಕೃತಕಬಂದರವು ಮದ್ರಾಸಿನಲ್ಲಿದೆ. ಮಲಪೆಯ ಬಂದರವನ್ನು ದೊಡ್ಡ ಬಂದರವನ್ನಾಗಿ ಮಾಡಬೇಕೇ ಬೇಡವೇ?—ಎಂಬ ವಿಚಾರವುಂಟಾಗಿ, ಕೊನೆಗಂತೂ ಅದನ್ನು ದೊಡ್ಡದಾಗಿ ಮಾಡಬೇಕೆಂಬ ತೀರ್ಮಾನವಾಗಿರುವುದೆಂದು ತಿಳಿದುಬರುತ್ತದೆ. ಆದರೆ ಸದ್ಯದಲ್ಲಿ ಹಣದ ಅಡಚಣೆಯಿಂದಾಗಿ ಈ ಕಾರ್ಯವನ್ನು ಕೂಡಲೇ ಕೈಕೊಳ್ಳಲಾಗುವುದಿಲ್ಲವೆಂದೂ ತಿಳಿದುಬಂದಿದೆ. ಇದನ್ನು ದೊಡ್ಡ ಬಂದರವಾಗಿ ಮಾಡಬೇಕಾದರೆ 'ದರಿಯಾ ಬಾದರ್ ಗಡ'ವನ್ನು ಬಲವಾದ ಪ್ರಾಕಾರಗಳಿಂದ ತೀರದೊಡನೆ ಜೋಡಿಸಬೇಕು; ಮತ್ತು ಮಲಪೆಯನ್ನು ರೈಲುಮಾರ್ಗದಿಂದ ಒಳಪ್ರದೇಶಗಳೊಡನೆ ಜೋಡಿಸಬೇಕು, ಪ್ರಕೃತ ಇಷ್ಟುಮಾಡಿದರೆ ಸಾಕು. ಆ ಮೇಲೆ, ಬಂದು ತಂಗುವ ಹಡಗುಗಳ ಸಂಖ್ಯೆಯೂ ಗಾತ್ರವೂ ಹೆಚ್ಚಿದಂತೆ ಅದನ್ನು ಆಗಾಗ ಉತ್ತಮಗೊಳಿಸಬಹುದು.

ಮಲಪೆಯು ಬಹಳ ಹಿಂದಿನಿಂದಲೂ ಚರಿತ್ರೆಯಲ್ಲಿ ಪ್ರಸಿದ್ಧವಾದ ಸ್ಥಳವಾಗಿದೆ. ಅದು ಬಹುಕಾಲದ ವರೆಗೆ ಕನ್ನ ಪ್ರಾಶಸ್ತ್ಯವನ್ನು ಉಳಿಸಿಕೊಂಡು, ಬೆಳಸಿಕೊಂಡು ಬಂದಿರುತ್ತದೆಂಬುದಕ್ಕೆ ಆಧಾರಗಳಿವೆ. ಅವುಗಳನ್ನು ಪರಿಶೀಲಿಸುವುದೇ ಈ ಲೇಖನದ ಉದ್ದೇಶ.

ಈಗ ಮಲಪೆಯು ಬರೇ ಹಳ್ಳಿಯಾಗಿರುವುದಾದರೂ, ಹಿಂದೆ-ಬಹಳ ಹಿಂದೆ– ಅದೊಂದು ಪ್ರಸಿದ್ಧವಾದ ನಗರವಾಗಿತ್ತು. ಕ್ರಿ. ಶ. ಒಂದನೆಯ, ಎರಡನೆಯ ಶತಮಾನಗಳಲ್ಲಿ ತುಳುವ ದೇಶವನ್ನು ಅಲೂಪ ವಂಶದ ರಾಜರು ಆಳುತ್ತಿದ್ದರು. ಈಗ ಬರೇ ಹಳ್ಳಿಯಾಗಿರುವ ಉದಯಾವರವು ಅವರ ರಾಜಧಾನಿಯಾಗಿತ್ತು. ಅವರ ಆಳಿಕೆಯಲ್ಲಿ ಮಲಪೆಯಲ್ಲಿ ಒಂದು ನಗರಸಭೆಯಿತ್ತೆಂದೂ, ಅದರ ಮುಖ್ಯಸ್ಥನಿಗೆ ನಾಯಕನೆಂಬ ಹೆಸರಿತ್ತೆಂದೂ ಚರಿತ್ರೆಯೇ ಇದೆ

ತೀರಾ ಬರುತ್ತದೆ. ಅಲೂಪ ರಾಜರು ಉಚ್ಚ್ರಾಯ ಸ್ಥಿತಿಯಲ್ಲಿರುವಾಗ, ಉದಯಾವರದ ಸಮೀಪದಲ್ಲಿಯೇ ದೊಡ್ಡದೊಂದು ಬಂದರಿತ್ತೆಂದೂ, ಅಲ್ಲಿಂದ ಬೇರೆ ಬೇರೆ ದೇಶಗಳೊಡನೆ ವ್ಯಾಪಾರ ನಡೆಯುತ್ತಿದ್ದಿತೆಂದೂ ತಿಳಿದುಬಂದಿದೆ. ಅದೇ ಮಲಪೆಯಾಗಿರಬೇಕು. ಭೂತಪಾಂಡ್ಯನ ಚರಿತ್ರೆಯಿಂದಲೂ ಉದಯಾವರದ ಸಮೀಪದಲ್ಲಿ ಬಂದರವೊಂದು ಇದ್ದಿತೆಂದು ತಿಳಿಯುತ್ತದೆ. ಅದು ಮಲಪೆಯಲ್ಲದೆ ಬೇರೆಯಾಗಿರಲಾರದು. ಈ ಕೆಳಗಿನ ಅಂಶವೂ ಈ ವಿಷಯವನ್ನು ವ್ಯಕ್ತಪಡಿಸುತ್ತದೆ :

ಈಜಿಪ್ಟ್ ದೇಶದ ಓಕ್ಸಿರಿಂಕೆಸ್ ಎಂಬ ಸ್ಥಳದಲ್ಲಿ ದೊರೆತಿರುವ ಒಂದು ಹಸ್ತಲಿಖಿತ ಗ್ರೀಕ್ ನಾಟಕದ ಪ್ರತಿಯಲ್ಲಿ ಹಲವು ಕನ್ನಡ ಶಬ್ದಗಳು ದೊರೆಯುತ್ತವೆಂದು ಸಂಶೋಧಕರು ಹೇಳುತ್ತಾರೆ ಮಾತ್ರವಲ್ಲದೆ, ಆ ಕಥೆ ನಡೆದ ಸ್ಥಳವು ಮಲಪೆಯೆಂಬುದಾಗಿ ವಿದ್ವಾಂಸರು ತೀರ್ಮಾನಿಸಿದ್ದಾರೆ. ಕಥಾಸಾರಾಂಶ ಹೀಗಿದೆ:— " ಒಬ್ಬ ಹಿಂದೂ ರಾಜನ ವಶದಲ್ಲಿ ಗ್ರೀಕ್ ನಾರಿಯೊಬ್ಬಳು ಸೆರೆಸಿಕ್ಕಿದ್ದಳು. ಅವಳನ್ನು ಬಿಡಿಸುವುದಕ್ಕಾಗಿ ಗ್ರೀಕರ ಹಡಗುಪಡೆಯೊಂದು ಬರುವುದು. ಆ ನಾವಿಕರು ಹಿಂದೂ ರಾಜನನ್ನೂ ಅವನ ಆಸ್ಥಾನಿಕರನ್ನೂ ಚೆನ್ನಾಗಿ ಕುಡಿಯುವಂತೆ ಮಾಡಿ ಪ್ರಜ್ಞೆತಪ್ಪಿಸಿ, ಆ ಸ್ತ್ರೀಯೊಡನೆ ತಪ್ಪಿಸಿಕೊಂಡು ಹೋದರು. "

ಈ ನಾಟಕದಲ್ಲಿ ಮಲಪೆಯ ನಾಯಕನ ಪ್ರಸ್ತಾಪ ಬಂದಿದೆ.

ಮಲಪೆಗೆ ನಾಯಕನೊಬ್ಬನಿದ್ದನೆಂಬ ವಿಷಯವನ್ನು ಈ ಹಿಂದೆಯೇ ಹೇಳಿರುವುದು. ಈ ಕತೆಯಲ್ಲಿ ಬಂದಿರುವ ರಾಜನೂ ನಾಯಕನೂ ಅಭಿನ್ನರೇ ಅಥವಾ ಬೇರೆ ಬೇರೆ ವ್ಯಕ್ತಿಗಳೇ ಎಂಬುದು ಗೊತ್ತಾಗುವುದಿಲ್ಲ. ಅದು ಹೇಗಿದ್ದರೂ ಇರಲಿ; ಈ ಕಥೆಯಿಂದ ಮಲಪೆಯು ದೊಡ್ಡ ಬಂದರವಾಗಿತ್ತೆಂಬುದನ್ನು ತಿಳಿಯಬಹುದಾಗಿದೆ. ಈ ವಿಷಯದಲ್ಲಿ ಡಾ. ಸಾಲತೋರರು ತಮ್ಮ " ಪ್ರಾಚೀನ ಕರ್ನಾಟಕ " ಎಂಬ ಪುಸ್ತಕದಲ್ಲಿ ಹೀಗೆ ಬರೆದಿರುತ್ತಾರೆ :—

" ಮಲಪೆಯು ಮೊದಲಶ್ರೇಣಿಯ ಬಂದರ ಆಗಿದ್ದುದೇ ಅದ ಕ್ಕೊಬ್ಬ ನಾಯಕನಿರುವುದಕ್ಕೆ ಕಾರಣವಾಗಿತ್ತು. ನಿಜವಾಗಿಯೂ ಅದನ್ನು ದುರಸ್ತಿಪಡಿಸದೆ ಅಲಕ್ಷ್ಯವಾಗಿ ಬಿಟ್ಟಿದ್ದರೂ, ಇಂದಿಗೂ ಅದು ಪಶ್ಚಿಮ ಕರಾವಳಿಯಲ್ಲಿ ಸಂಚರಿಸುವ ಹಡಗುಗಳಿಗೆ ಸುರಕ್ಷಿತವಾದ ಬಂದರಗಳಲ್ಲಿ ಒಂದಾಗಿರುವುದು. ಪ್ರಾಚೀನ ತುಳುವ ದೇಶದ ವ್ಯಾಪಾರದ ಕೇಂದ್ರಗಳಲ್ಲಿ ಅದೂ ಒಂದಾಗಿದ್ದುದೇ ಅದರ ದಡದಲ್ಲಿ ಗ್ರೀಕರು ಬಂದು ಕಾಣಿಸಿಕೊಳ್ಳುವುದಕ್ಕೆ ಕಾರಣವಾಗಿದೆ."

ಮಧ್ವಾಚಾರ್ಯರ ಕಾಲದಲ್ಲಿಯೂ ಮಲಪೆಯು ದೊಡ್ಡ ಬಂದರವಾಗಿತ್ತೆಂಬುದನ್ನು ಊಹಿಸುವುದಕ್ಕೆ ಆಸ್ಪದವಿದೆ. ಸಮುದ್ರದಲ್ಲಿ ಪ್ರಯಾಣ ಮಾಡುತ್ತಿದ್ದ ಹಡಗುಗಳು ಬಿರುಗಾಳಿಗೆ ಸಿಕ್ಕಿ ಕಷ್ಟಪಡುತ್ತಿರಲು, ಮಧ್ವಾಚಾರ್ಯರು ತಮ್ಮ ಕಾವೀಬಟ್ಟೆಯಿಂದ ಸಂಕೇತವನ್ನು ತೋರಿಸಿ, ಅವುಗಳು ಸುರಕ್ಷಿತವಾಗಿ ಬಂದರಕ್ಕೆ ಬರುವಂತೆ ಮಾಡಿದರು. ಅವರು ಮಾಡಿದ ಉದಕಾರಕ್ಕಾಗಿ ನಾವಿಕರು ಅವರಿಗೆ ಎರಡು ಗೋಪೀಚಂದನದ ಮುದ್ದೆಗಳನ್ನು ಕೊಟ್ಟು ಹೋದರು ಅವುಗಳೊಳಗೆ ಬಲರಾಮ ಕೃಷ್ಣರ ವಿಗ್ರಹಗಳಿದ್ದುವೆಂದೂ, ಅವುಗಳನ್ನು ಮಧ್ವಾಚಾರ್ಯರು ಒಡಭಾಂಡೇಶ್ವರದಲ್ಲಿಯೂ ಉಡುಪಿಯಲ್ಲಿಯೂ ಸ್ಥಾಪಿಸಿದರೆಂದೂ ತಿಳಿದೇ ಇದೆ.

ಕ್ರಿ. ಶ. ೧೬೮೦ ರಿಂದ ೧೭೫೫ರ ವರೆಗೆ ಆಳಿದ ಇಕ್ಕೇರಿ ರಾಜವಂಶಕ್ಕೆ ಸೇರಿದ ಬಸವಪ್ಪನಾಯಕನು, ಕ್ರಿ ಶ. ೧೭೪೩ರಲ್ಲಿ ಮಲಪೆಯ ಪ್ರಾಶಸ್ತ್ಯವನ್ನು ಕಂಡು, ಅದರ ಹತ್ತಿರವಿರುವ ಬಂಡೆಕಲ್ಲಿನ ಮೇಲೆ " ದರಿಯಾ ಬಹದ್ದೂರ ಗಡ " ಎಂಬ ಕೋಟೆಯನ್ನು ಕಟ್ಟಿಸಿದನು. ಈ ವಿಷಯ ಕೆಳದಿನೃಪವಿಜಯದಲ್ಲಿ ಹೀಗೆ ವರ್ಣಿತವಾಗಿದೆ:—

" ಉಡುಪಿನ ಬಳಿಯೊಳ್ಕಲಪಿನ ।
ಪೊಡವಿಯೊಳಂ ಪಶ್ಚಿಮಾಂಬುಧಿಯ ತೀರದೊಳು-
ಗ್ಗಡಮೆನೆ ದರಿಯಾಬಾದಿನ ।
ಗಡಮಂ ನಿರ್ಮಾಣಗೆಯ್ಸಿದಂ ಬಸವನೃಪಂ ॥

ಈ ಕೋಟೆಯನ್ನು ಮಾತ್ರವಲ್ಲದೆ ಈ ರಾಜನು ಇದರ ಆ ಕಡೆಗೊಂದು, ಈ ಕಡೆಗೊಂದು—ಹೀಗೆ ಬೇರೆ ಎರಡು ಕೋಟೆಗಳನ್ನೂ ಕಟ್ಟಿಸಿರುವನೆಂದು ಇದೇ ಗ್ರಂಥದಿಂದ ಗೊತ್ತಾಗುತ್ತದೆ :—

ಈ ಪರಿಯಲ್ಲದೆ ಪಡುವಣ- ।
ಕೂಪಾರದ ತೀರದೊಳ್ವಿರಾಜಿಸುತಿರ್ಪಾ ॥
ಕಾಪಿನ ಸಮೀಪದೊಳ್ತ- ।
ದ್ಭೂಪಂ ನೆಲೆಗೊಳಿಸಿದಂ ಮನೋಹರಗಡಮಂ ॥

ಇದು ಮಲಪೆಯ ದಕ್ಷಿಣಕ್ಕಿದೆ. ಉತ್ತರದಲ್ಲಿ—

ಭೂನುತ ಕಲ್ಯಾಣಪುರ- ।
ಸ್ಥಾನದೊಳತಿರಮ್ಯಮಾಗೆ ಬಸವ ಮಹೀಶಂ ॥
ತೋನಸೆಯೆಂಬ ಸುಕೋಟೆಯ ।
ಕಾನುರೆ ನಿರ್ಮಾಣಗೆಯ್ಸಿದಂ ಸಂತಸದಿಂ ॥

ಹೈದರನು ಮೈಸೂರಿನ ರಾಜನಾದ ಮೇಲೆಯೂ ಈ ಸ್ಥಳದ ಪ್ರಾಶಸ್ತ್ಯವು ಕಡಿಮೆಯಾಗಲಿಲ್ಲ. ಅವನು ಈ ಸ್ಥಳವನ್ನು ಕಂಡು, ಇಲ್ಲಿರುವ ಕೋಟೆಯನ್ನು ದುರಸ್ತಿ ಮಾಡಿದನು. ಬ್ರಿಟಿಷ್ ಸರಕಾರಕ್ಕೆ ಸೇರಿದ ಮೇಲೆ ಈ ಸ್ಥಳವು ಪಾಳುಬೀಳಲಾರಂಭವಾಯಿತು. ಈ ಬಂದರವನ್ನು ವಿಚಾರಿಸುವವರೇ ಇಲ್ಲದಂತಾಯಿತು. ಈಗ ಕಾಲವು ಬದಲಾಗಿದೆ. ದೇಶವು ಹೊಸತಾಗಿ ಗಳಿಸಿದ ಸ್ವಾತಂತ್ರ್ಯವನ್ನು ದಕ್ಕಿಸಿಕೊಳ್ಳಬೇಕಾದರೆ ಬಂದರಗಳ ಸಂಖ್ಯೆ ಹೆಚ್ಚಾಗಬೇಕು. ಪರದೇಶದವರೊಡನೆ ಸಂಸರ್ಗವು ಬೆಳೆಯಬೇಕು. ಆದುದರಿಂದ ಮಲಪೆಯನ್ನು ದೊಡ್ಡ ಬಂದರವನ್ನಾಗಿ ಮಾಡಿ, ಅದು ಕಳೆದುಕೊಂಡಿರುವ ಪ್ರಾಶಸ್ತ್ಯವನ್ನು ಮರಳಿ ಒದಗಿಸಿಕೊಡಬೇಕು. ದೇಶಭಕ್ತರು ಇದಕ್ಕಾಗಿ ಪ್ರಯತ್ನಿಸುವರೇ ?

ಜೀವನ ಶಿಕ್ಷಣ

ಶ್ರೀ. ಮಾಣೇಶ್ವರ ನಾಯಕ ತೊರ್ಕೆ ಬಿ. ಎಸ್‌ಸಿ.
ಧಾರವಾಡ

★

ಶಿಕ್ಷಣವು ಕೃತ್ರಿಮವಲ್ಲದ್ದೂ, ನಮ್ಮ ಜೀವನಕ್ಕೆ ನಿಕಟ ಸಂಬಂಧವುಳ್ಳದ್ದೂ, ವ್ಯಕ್ತಿವಿಕಾಸ-ಸಮಾಜದ ಉನ್ನತಿಗಳಿಗೆ ಕಾರಣವಾದುದೂ ಇರಬೇಕು. ಇಂತಹದೇ 'ಜೀವನ ಶಿಕ್ಷಣ'!

★

"ಲೋಕ ಸೃಷ್ಟಿಯಾಗಿ, ಅದೆಷ್ಟೋ ಕಾಲಕ್ಕೆ ಭೂಮಿ ಸೃಷ್ಟಿಯಾಗಿ, ಅದೆಷ್ಟೋ ಕಾಲದ ಮೇಲೆ ಜೀವಸೃಷ್ಟಿಯಾಗಿ, ಸೃಷ್ಟಿಯಾದ ಜೀವ ಅದೆಷ್ಟೋ ಕಾಲಕ್ಕೆ ಅಣುವಾಗಿದ್ದುದು ಕ್ರಿಮಿಯಾಗಿ ಕ್ರಿಮಿಯಾಗಿದ್ದುದು ಕೀಟಕವಾಗಿ ಹೀಗೆ ಒಂದು ರೂಪವನ್ನು ಬಿಟ್ಟು ಮತ್ತೊಂದು ರೂಪವನ್ನು ಧರಿಸುತ್ತಾ, ವಾನರನಾಗಿ, ಅರೆನರನಾಗಿ ನರನಾದದ್ದು!" ಮೇಲಿನ ಅವತರಣಿಕೆಯಿಂದ ಮನುಷ್ಯ ಪ್ರಾಣಿಯು ಉತ್ಕ್ರಾಂತಿಯ ತುತ್ತತುದಿಯ ಫಲವೆಂಬುದು ಸುಸ್ಪಷ್ಟವಿದೆ. ನರನು ಪ್ರಾರಂಭದಲ್ಲಿ ದಾನವನಾಗಿದ್ದವನು ಮಾನವನಾಗಿ, ದೇವತ್ವವನ್ನು ಹೊಂದಬೇಕಾಗಿದೆ. ಅದುದರಿಂದ ಮಾನವರಲ್ಲಿ ಜೀವತ್ವವು ಕ್ರಮೇಣ ಹೆಚ್ಚುತ್ತ ಹೋಗಿ ಉತ್ಕ್ರಾಂತಿಯ ಫಲವಾಗಿ, ದೇವತೆಗಳು ಅವತರಿಸಿ, ಈ ಜಗತ್ತೇ ಸ್ವರ್ಗವಾಗ ಬಹುದು.

ಮಾನವನೇನೋ ಎಲ್ಲ ಪ್ರಾಣಿಗಳಲ್ಲಿ ಹೆಚ್ಚಿನವ! ಅವನು ಉಳಿದೆಲ್ಲ ಪ್ರಾಣಿಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಬಲ್ಲನು; ಆದರೆ ಮಾನವ ಶಿಶು? ಉಳಿದೆಲ್ಲ ಪ್ರಾಣಿಗಳ ಬಾಲ್ಯಾವಸ್ಥೆಗಿಂತ ಮಾನವನ ಬಾಲ್ಯ ತೀರ ಅಸಹಾಯಕ ಸ್ಥಿತಿಯಲ್ಲಿರುತ್ತದೆಂಬ ಮಾತು ಎಲ್ಲರಿಗೂ ತಿಳಿದ ಸಂಗತಿಯದಾಗಿರುತ್ತದೆ. ಅದುದರಿಂದ ಪರಾವಲಂಬಿಯಾದ ಮಾನವಶಿಶುವು ತನ್ನ ಭಾವೀಜೀವನವು ಉಜ್ವಲವಾಗುವಂತೆ ಮಾಡಿಕೊಳ್ಳಬೇಕಾದರೆ, ಮುಂಬರುವ ಹೊಣೆಯನ್ನು ಯೋಗ್ಯ ರೀತಿಯಿಂದ ನಿರ್ವಹಿಸಲು, ಬಾಲ್ಯಾವಸ್ಥೆಯಿಂದಲೇ ತಕ್ಕ ಶಿಕ್ಷಣವನ್ನು ಪಡೆಯಬೇಕಾಗುತ್ತದೆ. ಅದುದರಿಂದ ಬಾಲಕನಿಗೆ ಶಿಕ್ಷಣವು ಅನಿವಾರ್ಯವೂ, ಅಗತ್ಯವೂ, ಅತ್ಯವಶ್ಯವೂ, ಆಗಿರುತ್ತದೆ.

ಈ ಸಂದರ್ಭದಲ್ಲಿ ನಾವು ಇನ್ನೊಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳುವದು ಒಳಿತು. ಉಳಿದೆಲ್ಲ ಪ್ರಾಣಿಗಳು ತಮ್ಮ ಆಯುಷ್ಯದ ಬಹುಭಾಗವನ್ನು ಹೊಟ್ಟೆ ಹೊರಕೊಳ್ಳುವುದರಲ್ಲಿ ಕಳೆಯುತ್ತವೆ. ಆದರೆ ಮಾನವನ ಮಾತು ಹಾಗಲ್ಲ. ಅವನು ಸಮಾಜಜೀವಿಯು. 'ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ' ಎಂಬ ಸಹಕಾರದ ಬೀಜಮಂತ್ರವನ್ನು ಮನದಂದು, ಸಮಾಜದ ಹೆಚ್ಚಳದಲ್ಲಿ ತನ್ನ ಅಭಿವೃದ್ಧಿಯನ್ನೂ ಕಂಡುಕೊಳ್ಳಲು ಹವಣಿಸುತ್ತಾನೆ.

ಹೀಗೆ ಸಮಾಜದ ಏಳಿಗೆಗೆ ಸಹಾಯವಾಗುವ ಹಾಗೂ, ತನ್ಮೂಲಕ ವ್ಯಕ್ತಿಯ ವಿಕಾಸಕ್ಕೆ ಸಹಕಾರಿಯಾಗುವ ಶಿಕ್ಷಣವನ್ನು, ದೇವತೆಯಾಗುವ ಮಾನವ ಮಗುವು ಪಡೆಯಬೇಕಾಗುತ್ತದೆ. ಅಂತಹ ಶಿಕ್ಷಣವೇ "ಜೀವನ ಶಿಕ್ಷಣ" ಎನಿಸುವುದು.

ನಿಜವಾದ ಶಿಕ್ಷಣವು ಮಾನವನ ಪ್ರಾಥಮಿಕ ಆವಶ್ಯಕತೆಗಳನ್ನಾದರೂ (Primary necessities of man) ಹೊಟ್ಟೆತುಂಬ ಹಿಟ್ಟು, ಮೈತುಂಬ ಬಟ್ಟೆ, ವಾಸಿಸಲು ಹಟ್ಟಿ ಬುಡುಡೆ ತುಂಬ ಬುದ್ಧಿ—ಪೂರಯಿಸುವ ಕಾರ್ಯದಲ್ಲಿ ಸಹಕಾರಿಯಾಗಬೇಕೆಂಬುದರಲ್ಲಿ ಅಭ್ಯಂತರವಿದ್ದಂತೆ ಕಂಡುಬರುವುದಿಲ್ಲ ಇಲ್ಲದಲ್ಲಿ ಆ ಶಿಕ್ಷಣವು "ಶಿಕ್ಷಣ" ಎಂಬ ಹೆಸರಿನ ವಿಡಂಬನೆಯೇ ಸರಿ.

ಯಾವುದಾದರೊಂದು ದೇಶದಲ್ಲಿ ಕೊಡಲ್ಪಡುವ ಶಿಕ್ಷಣವು ಆ ದೇಶಗಳ ಆಶೆ-ಆಕಾಂಕ್ಷೆಗಳಿಗನುಗುಣವಾಗಿರುತ್ತದೆ. ಜರ್ಮನಿಯಲ್ಲಿ

ಗರ್ಭನಿರೋಧದ ಸಾಧನಗಳು

ಗಂಡಸರ ಮರ್ಮಚೀಲ ಬಹಳ ತಾಳಿಕೆಯುಳ್ಳದ್ದು	೧ಕ್ಕೆ	೧-೪-೦
,, ,, ಸಾಧಾರಣ ,,	೧ಕ್ಕೆ	೧-೦-೦
,, ,, ಸಾದಾ ,,	೧ಕ್ಕೆ	೦-೮-೦
,, ,, ಮಣಿ ಕಂಚುಕ ,,	೧ಕ್ಕೆ	೦-೮-೦
ಪುರುಷೇಂದ್ರಿಯ ಬೆಳೆಯಿಸುವ, ಉದ್ರೇಕಿಸುವ ವ್ಹಾಕ್ಯೂಮ್ ಪಂಪು ಸುಂದರವಾದ ಪೆಟ್ಟಿಗೆಯಲ್ಲಿ	೧ಕ್ಕೆ	೨೫-೦-೦
ಬೀಜಾಂತಕ ತೈಲ	ಬಾ. ೧ಕ್ಕೆ	೧-೦-೦
ಹೆಂಗಸರಿಗೆ ಜಿಕ್ಕಪೆಸರಿ ನಂ. ೧		೧-೮-೦
,, ,, ನಂ. ೨		೧-೪-೦
,, ,, ನಂ. ೩		೧-೦-೦
ಜನನೇಂದ್ರಿಯ ತೊಳೆಯುವ ಜೀಕಳಿ		೧೨-೦-೦

ಬೆಲೆಯನ್ನೂ ಅಂಜೆ ವೆಚ್ಚವನ್ನೂ ೧೨ ಆಣೆ ಮುಂಗಡ ಕಳಿಸಬೇಕು. ವ್ಹಿ. ಪಿ. ಕಳಿಸಲಾರೆವು.

ಶ್ರೀಕಾಂತ ಮತ್ತು ಕಂಪನಿ

ಸುಭಾಸ ಬೀದಿ, ಧಾರವಾಡ

೧೦೦೦ ರೂಪಾಯಿ ಬಹುಮಾನ

೭೦ ವರ್ಷಗಳಿಂದ ಅನುಭವಸಿದ್ಧವಾದ— ವಿಜಯಿಯು ನೈಜ
ವಿ. ಎಸ್. ಕಾಪಸೇಯವರ
ಧಾತುಪೌಷ್ಟಿಕ ಮತ್ತು ರಕ್ತವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರವಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತೆಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ-ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿವೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬ ಮಿಶ್ರಿ-ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೭೧ ದಿನಗಳಿಗೆ ಸಾಲಬಹುದಾದ ಲಳ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೩-೦. ಶೀಘ್ರೋಗುಣಕಾರಿಯಾದ ಸ್ಪೆಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೩-೦. ೩ ಡಬ್ಬಿಗೆ ೧೫-೦-೦ ಅಂಚೆಯವೆಚ್ಚ ೨-೧೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ ಮುಂಗಡ ಕಳಿಸಬೇಕು.

ಮೂಲಕ: **ವಿ.ಎಸ್. ಕಾಪಸೇ** ಮು. ಪೋ. ಮಿರಜ

ಸೈನ್ಯ ಶಿಕ್ಷಣಕ್ಕೆ ಪ್ರಾಧಾನ್ಯವಿದ್ದರೆ, ಅಮೇರಿಕೆಯಲ್ಲಿ ಯಾಂತ್ರಿಕ ಶಿಕ್ಷಣಕ್ಕೆ ಹೆಚ್ಚಿನ ಸ್ಥಾನವಿದೆ. ಪೌರ್ವಾತ್ಯ ದೇಶಗಳಲ್ಲಿ ಅದರಲ್ಲಿಯೂ— ಭಾರತದಲ್ಲಿ, ಆಧ್ಯಾತ್ಮಿಕ ಶಿಕ್ಷಣಕ್ಕೆ ಹೆಚ್ಚಿನ ಸ್ಥಾನವಿದ್ದ ಕಾಲವೂ ಇತ್ತು. ಅಂತೆಯೇ ಮೊನ್ನೆ ಮೊನ್ನೆಯ ವರೆಗೂ ದಾಸ್ಯದಲ್ಲಿದ್ದ ನಮ್ಮ ದೇಶದ ಶಿಕ್ಷಣವು ನಮ್ಮ ಆಳರಸರ ಧೋರಣೆಗೆ ಅನುಗುಣವಾಗಿದ್ದು, ಅರಾಷ್ಟ್ರೀಯವಾಗಿತ್ತು. ಆ ಶಿಕ್ಷಣದ ಉದ್ದೇಶವು ಉತ್ತಮ ನಾಗರಿಕರನ್ನಾಗಲಿ, ಪ್ರತಿಭಾನ್ವಿತ ವ್ಯಕ್ತಿಗಳನ್ನಾಗಲಿ ತಯಾರಿಸುವುದಿರದೆ, ದಾಸ್ಯದಲ್ಲಿದ್ದ ಭಾರತದ ಮೇಲಿನ ತಮ್ಮ ಹಿಡಿತವನ್ನು ಬಲಪಡಿಸುವುದರಲ್ಲಿಯೂ ತಮ್ಮ ರಾಜ್ಯದಾಡಳಿತಕ್ಕೆ ಬೇಕಾಗುವ ಗುಮಾಸ್ತರನ್ನು ತಯಾರಿಸುವುದಕ್ಕಾಗಿಯೂ ಇತ್ತು. ಶಿಕ್ಷಣದ ಮಾಧ್ಯಮವು ಇಂಗ್ಲಿಷ್ ಇದ್ದುದರಿಂದ, ಅದನ್ನು ಕಲಿಯುವುದರಲ್ಲಿಯೇ ವಿದ್ಯಾರ್ಥಿದೆಸೆಯ ಬಹುಭಾಗವು ಕಳೆದು ಹೋಗುತ್ತಿತ್ತು. ಮೇಲಾಗಿ ಇಂಗ್ಲೀಜ ಕಲಿತವರೂ— ಮಧ್ಯಸ್ಥರೂ— ಹೊಸದೊಂದು ವರ್ಗವು ಅಸ್ತಿತ್ವದಲ್ಲಿ ಬಂದು, ವರ್ಗಕಲಹಕ್ಕೂ ಕಾರಣವಾಯಿತು. ಆ ಶಿಕ್ಷಣವು ಬಹುಮಟ್ಟಿಗೆ ಪುಸ್ತಕೀಯ ವಿದ್ಯೆಯಾಗಿರುವುದರಿಂದ, ಶಾರೀರಿಕ ಶಿಕ್ಷಣವು ಉಪೇಕ್ಷಿಸಲ್ಪಟ್ಟು, ಆ ಶಿಕ್ಷಣ ಪಡೆದವರು "ಪುಸ್ತಕ ಭಾಂಡಾರದಂತಿದ್ದರು." ಕೆವಲ ಶಣ್ಣನೆಯ ಉಗ್ರಾಣದಂತಿದ್ದರು. ವಿದ್ಯಾವಂತನು ವಿದ್ಯೆಯ ಆಲಯದಂತಿರಬೇಕು. ಕಲಿತವನು ಹಂಡೆಯಲ್ಲಿದ್ದ ನೀರಿನಂತಿರದೆ ಝರಿಯಂತಿರಬೇಕು. ಆ ಶಿಕ್ಷಣ ಪಡೆದವರು ಸ್ವಾವಲಂಬಿಗಳಾಗದೆ ಶಿಕ್ಷಣವು ಪೂರ್ತಿಯಾಗುವ ವರೆಗೂ, ತಮ್ಮ ಶಿಕ್ಷಣದ ಉದ್ದೇಶವೇನು? ಆ ಶಿಕ್ಷಣದಿಂದಾಗುವ ಲಾಭಗಳಾವು? ಮುಂತಾದ ವಿಚಾರಗಳನ್ನು ಸಹ ಕೊನೆಯ ವರೆಗೂ ಮಾಡದೆ, ನೌಕರಿಯನ್ನು ಬಿಟ್ಟು ಯಾವ ಕೆಲಸವನ್ನೂ ಮಾಡಲು ಬಾರದಂತಹರಾಗಿ, ನಿರುದ್ಯೋಗತನ ಬೆಳೆಯಲು ಕಾರಣರಾದರು.

ಇಂಗ್ಲಿಷ್ ಶಿಕ್ಷಣದ ಕುಂದು-ಕೊರತೆಗಳನ್ನೆಲ್ಲ ಲಕ್ಷ್ಯಕ್ಕೆ ತಂದು ನಮ್ಮ ಗಣರಾಜ್ಯದ ಆಶೆ-ಆಕಾಂಕ್ಷೆಗಳಿಗೆ ಅನುಗುಣವಾಗಿ ಎಲ್ಲರಿಗೂ ಸೌಖ್ಯಮಯವಾದ ಜೀವನವನ್ನು ಸಾಗಿಸಲು ಸಹಾಯವಾಗುವ ಕಡ್ಡಾಯದ ಹೊಸ ಶಿಕ್ಷಣವು ಸಾರ್ವತ್ರಿಕವಾಗಿಯೂ, ಪುಕ್ಕಟೆಯಾಗಿಯೂ ದೊರೆಯುವುದು ನಮ್ಮ ನವರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಅತಿ ಮಹತ್ವದ್ದಾಗಿದೆ. ಅಂತಹ ಶಿಕ್ಷಣವು ಕೃತ್ರಿಮವಲ್ಲದ್ದೂ, ನಮ್ಮ ಜೀವನಕ್ಕೆ ನಿಕಟಸಮ್ಬಂಧವುಳ್ಳದ್ದೂ, ವ್ಯಕ್ತಿವಿಕಾಸಕ್ಕೂ ಸಮಾಜದ ಹೆಚ್ಚಳಕ್ಕೂ ಕಾರಣವಾದದ್ದೂ, ಆಗಿರಬೇಕಾದ ಅಗತ್ಯವಿದೆ. ಅದೇ 'ಜೀವನ ಶಿಕ್ಷಣ.'

ನಮ್ಮದು ಭಾರತೀಯ ಸಂಸ್ಕೃತಿ. "ಹೊಸತೆಲ್ಲ ಹೊನ್ನು ಹಳೆಯದೆಲ್ಲ ಮಣ್ಣು" ಎನ್ನದೆ, ಇತರ ಸಂಸ್ಕೃತಿಗಳ ಒಳಿತನ್ನೆಲ್ಲ ರಕ್ತಗತನಾಡಿಕೊಂಡ ವೈಶಿಷ್ಟ್ಯ ಇದಕ್ಕಿದೆ. ಆದುದರಿಂದ ನಮ್ಮ ಜೀವನಶಿಕ್ಷಣವು ಉಳಿದೆಲ್ಲ ರಾಷ್ಟ್ರಗಳು ಮಾಡಿದ ಶಿಕ್ಷಣ ಪ್ರಯೋಗಗಳ ಒಳಿತನ್ನು ಒಳಗೊಂಡಿದ್ದು, ನಮ್ಮ ಮಕ್ಕಳಿಗೆ ಒಗ್ಗುವಂತಹದೂ, ನಮ್ಮ ಪರಿಸ್ಥಿತಿಗೆ ಅನುಗುಣವಾದದ್ದೂ, ನಮ್ಮ ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಕೈದೀವಿಗೆಯಂತಿರಬೇಕಾದುದೂ ಅಗತ್ಯ. ನಮ್ಮಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಿಗಿಂತ ಜನಬಲ ಹೆಚ್ಚಿದೆ. ಆದುದರಿಂದ ಅವರಿಗೆ ಹಿತವಾದ ಕೇಂದ್ರೀಕೃತ, ಯಾಂತ್ರಿಕ ಹಾಗೂ ತಾಂತ್ರಿಕಶಿಕ್ಷಣವು ನಮ್ಮ ದೇಶಕ್ಕೆ ಸರಿಬೀಳಲಾರದು. ಹೀಗೆ ಮಾಡುವುದು ನಿರುದ್ಯೋಗಿತನಕ್ಕೆ ಔತಣವಿತ್ತಂತೆ. ನಮ್ಮ ಪೂರ್ವಜರು ಆಧ್ಯಾತ್ಮಿಕವಿದ್ಯೆಗೆ ಬಹಳ ಮಹತ್ತ್ವವನ್ನು ಕೊಟ್ಟು ಭೌತಿಕವನ್ನು ಮರೆತರು. ನಾವು ಹಿಂದಿನವರ ತಪ್ಪುಗಳನ್ನು ತಿದ್ದಿಕೊಂಡು ಅವರ ಒಳಿತುಗಳನ್ನು ಅಳವಡಿಸಿಕೊಂಡು ಪರರಾಷ್ಟ್ರಗಳ ಒಳಿತನ್ನು ಅರಿಸಿಕೊಂಡು ಹೊಸ ಶಿಕ್ಷಣದ ರೂಪರೇಷೆಗಳನ್ನು ನಿರ್ಮಿಸಬೇಕಾಗಿದೆ. ಇವೆಲ್ಲ ಸಂಗತಿಗಳನ್ನು ಮನದಂದು, ಹೊಸ ಶಿಕ್ಷಣದ ಪುರಸ್ಕರ್ತರು ಕೆಳಗಿನ ನಾಲ್ಕು ತತ್ತ್ವಗಳನ್ನು ಜೀವನದ ಶಿಕ್ಷಣದ ಅಡಿಗಲ್ಲಾಗಿ ಇರಿಸಿದ್ದಾರೆ:

೧. ೭ರಿಂದ ೧೪ ವರ್ಷದವರೆಗೆ ಕಡ್ಡಾಯದ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಬೇಕು.

೨. ಮಾತೃಭಾಷೆಯೇ ಶಿಕ್ಷಣದ ಮಾಧ್ಯಮವಾಗಬೇಕು.

೩. ಶಿಕ್ಷಣವು ಚಟುವಟಿಕೆಗಳ ಮೂಲಕ ಕೊಡಲ್ಪಡಬೇಕು.

೪. ಶಿಕ್ಷಣವು ಸ್ವಾವಲಂಬಿಯಾಗುವಂತೆ ಪ್ರಯತ್ನಿಸಬೇಕು.

ಈ ನಾಲ್ಕು ಸಂಗತಿಗಳು ನಮ್ಮ ಜೀವನಶಿಕ್ಷಣದ ತಳಹದಿಯಾಗಬೇಕು. ಅವು ಒಂದಕ್ಕೊಂದು ಪೂರಕವಾಗಿದ್ದು ನಮ್ಮ ಶಿಕ್ಷಣವನ್ನು ಸಜೀವಶಿಕ್ಷಣವನ್ನಾಗಿಸಬಲ್ಲವು.

ಆಂಗ್ಲರು ೧೫೦ ವರ್ಷಗಳವರೆಗೆ ಆಡಳಿತ ನಡೆಯಿಸಿದರೂ, ನಮ್ಮ ದೇಶದ ಸಾಕ್ಷರತೆಯ ಪ್ರಮಾಣವು ೧೨/. ಮಾತ್ರ ಇತ್ತು. ಇದರ ಮೇಲಿಂದ ಶಿಕ್ಷಣಪ್ರಪಂಚದಲ್ಲಿ ನಾವು ಎಲ್ಲಿದ್ದೇವೆಂಬುದನ್ನು ಅರಿತುಕೊಳ್ಳಬಹುದಾಗಿದೆ. "ವಿದ್ಯೆ ಇಲ್ಲದವನು ಹದ್ದಿಗಿಂತ ಕಡೆ" ಎಂಬ ಮಾತು ಪ್ರಜಾಪ್ರಭುತ್ವದ ಪದ್ಧತಿಯ ಮೇಲೆ ಆಡಳಿತ ನಡೆಯಿಸಲಿರುವ ನಮ್ಮ ದೇಶಕ್ಕೆ ಅನ್ವಯಿಸುತ್ತದೆ. ಪ್ರೌಢ ಮತದಾನ ಪದ್ಧತಿಯಂತೆ ನಮ್ಮ ಚುನಾವಣೆಗಳಾಗಲಿವೆ. ಮತದಾನವನ್ನು ಸಹ ಮಾಡಲು ಬರದಿದ್ದ ಮೇಲೆ ಜಗತ್ತಿನಲ್ಲಿ ನಮ್ಮ ಸ್ಥಾನ ಮಾನಗಳೇನೆಂಬುದನ್ನು ಊಹಿಸಬಹುದು. ಆದುದರಿಂದಲೇ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿಯೂ, ಸಾರ್ವತ್ರಿಕವಾಗಿಯೂ, ಪುಕ್ಕಟೆಯಾಗಿಯೂ, ಮಾತೃಭಾಷೆಯಲ್ಲಿಯೇ ಕೊಡಬೇಕೆಂಬ ತತ್ತ್ವಕ್ಕೆ ಅಂಟಿಕೊಂಡದ್ದು.

ಇನ್ನು ಪ್ರಾಥಮಿಕ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಯ ವಯಸ್ಸು ೭-೧೪ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಈ ಅವಧಿಯು ಮನಶ್ಶಾಸ್ತ್ರದ ತತ್ತ್ವಕ್ಕೆ ಅನುಗುಣವಾಗಿರುತ್ತದೆ. ಈ ಅವಧಿಯಲ್ಲಿ ಬಾಲಕನ ಬುದ್ಧಿಯು ಬಹುಪ್ರಮಾಣದಿಂದ ವಿಕಾಸವಾಗುವ ಸಮಯವಿರುತ್ತದೆ. ಮುಂದುವರಿದ ದೇಶಗಳಲ್ಲಿ ೩-೬ ವಯಸ್ಸಿನವರ ಸಲುವಾಗಿ Nursery schools; Montessary schools ಎಂಬ ಹೆಸರಿನಲ್ಲಿ ಬಾಲವಾಡಿಗಳೂ, ಶಿಶುವಿಹಾರಗಳೂ ಅಸ್ತಿತ್ವದಲ್ಲಿವೆ. ನಮ್ಮಲ್ಲಿಯೂ ಬೆಂಗಳೂರು, ಮದ್ರಾಸು, ಮುಂಬೈಯಿಯಂತಹ ಕೆಲವೇ ಪಟ್ಟಣಗಳಲ್ಲಿ ಅಂತಹ ಶಾಲೆಗಳಿವೆ. ಅಂತಹ ಶಾಲೆಗಳ ಪ್ರಯೋಜನವು ಸಾರ್ವತ್ರಿಕವಾಗಬೇಕೆಂಬ ತತ್ತ್ವವು ಎಲ್ಲ ಶಿಕ್ಷಣ ತಜ್ಞರಿಗೆ ಮಾನ್ಯವಿದ್ದರೂ, ಹದಗೆಟ್ಟ ಆರ್ಥಿಕ ಪರಿಸ್ಥಿತಿಯಲ್ಲಿದ್ದ ನಮ್ಮ ದೇಶಕ್ಕೆ ಸುಲಭ ಸಾಧ್ಯವಾದ ಮಾತಲ್ಲ. ಕಶೋರಾವಸ್ಥೆಯಲ್ಲಿ ಬಾಲಕರಿಗೆ ಚಟುವಟಿಕೆಗಳೆಂದರೆ ಬಹಳ ಪ್ರೇಮವಿರುತ್ತದೆ. ಬರೀ ಪುಸ್ತಕೀಯ ಜ್ಞಾನವನ್ನು ತುಂಬುವುದೆಂದರೆ ಅವನ ನೈಜ ಪ್ರವೃತ್ತಿಗಳ ವಿಕಾಸಕ್ಕೆ ವಿರೋಧವಾದದ್ದೂ, ಘಾತಕವಾದದ್ದೂ ಎಂದು ಮನಶ್ಶಾಸ್ತ್ರದ ನಿಃಸಂದಿಗ್ಧವಾದ ಅಭಿಪ್ರಾಯವಾಗಿರುತ್ತದೆ. ಆದುದರಿಂದ ಚಟುವಟಿಕೆಗಳ ಮೂಲಕ ಶಿಕ್ಷಣದೊರೆತರೆ ಅವನ ಸರ್ವತೋಮುಖ ಏಳಿಗೆಗೆ ಕಾರಣವಾಗುವುದು. ಆ ಚಟುವಟಿಕೆಗಳು ಮಾತ್ರ ವಿಪುಲ ಶೈಕ್ಷಣಿಕ ಸಾಧನಗಳನ್ನೊಳಗೊಂಡಿದ್ದಿರಬೇಕು. ಅಂದರೆ ಮಾತ್ರ ವಿದ್ಯಾರ್ಥಿಯ ಕುತೂಹಲವು ಕೆರಳುತ್ತ ಹೋಗಿ, ಅವನ ಸರ್ವತೋಮುಖ ವಿಕಾಸವಾಗುವುದು. ನೂಲುವುದು, ನೇಯುವುದು, ಕೈತೋಟಗಾರಿಕೆ, ಒಕ್ಕಲತನ, ಕಾಗದ ಹಾಗೂ ರಟ್ಟಿನ ಕೆಲಸ, ಕಮ್ಮಾರಿಕೆ ಮೊದಲಾದುವು ಈ ಜಾತಿಗೆ ಸೇರಿದುವು. ಇಲ್ಲದಲ್ಲಿ ಓದುಗನ ಕುತೂಹಲವು ದಿನಗಳೆದಂತೆ ಕುಂದಿ ಅವನ

ಕೈಸೋಶಿನ್

ಎಂಥ ಕೆಮ್ಮಿದ್ದರೂ ಕೂಡಲೆ ಗುಣ ಪಡಿಸುವುದು.

ಏಜೆಂಟರು, ಸ್ಟಾಕಿಸ್ಟರು ಬೇಕು.

ಯದುಪತಿ

ಸ್ವತಂತ್ರ ಸಾಮಾಜಿಕ ಕಾದಂಬರಿ.

ಬರೆದವರು :

ಶ್ರೀಮಾನ್ ಸಾಲಿ ರಾಮಚಂದ್ರರಾಯರು

ಭಾರತದ ಸ್ವಾತಂತ್ರ್ಯ ಸಂವರ್ಧನೆಗೂ ಸಂರಕ್ಷಣೆಗೂ ಇಂದು ಆದರ್ಶಜೀವಿಗಳ ಅವಶ್ಯಕತೆ ತುಂಬ ಇದೆ. ಅಂತಹ ಸುಂದರ ಆದರ್ಶಗಳನ್ನು ಜನತೆಯ ಕಣ್ಣಿದುರು ಇರಿಸಬಲ್ಲ ನೂತನ ಕಾದಂಬರಿ. ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ಶ್ರೀಮಾನ್ ಆರ್. ಎ. ಜಾಗೀರದಾರರು ಮುನ್ನುಡಿ ಬರೆದಿದ್ದಾರೆ.

ವಿಳಾಸ : **ಶ್ರೀ. ಸಾಲಿ ರಾಮಚಂದ್ರರಾಯರು**
'ಶ್ರೀನಿಕೇತನ' ಧಾರವಾಡ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ★ ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಪ್ರೇರಣೆಗಳು ಕುಂದಿ ಕಮರಿ ಹೋಗುವವು. ಚಟುವಟಿಕೆಯೆಂದ ಮಾತ್ರಕ್ಕೆ ಕೂಲಿಯ ಕೆಲಸ, ಶಾರೀರಿಕ ಕ್ರಮ—ಎಂಬ ಭಾವನೆಗೆ ಎಡೆಗೊಡದೆ, ಅದು ಶಾರೀರಿಕ ಹಾಗೂ ಮಾನಸಿಕ ಕ್ರಮಗಳನ್ನೊಳಗೊಂಡದ್ದು, ತಲೆ-ಕೈ-ಎದೆಗಳ ಸಮನ್ವಯಗಳಿಗೆ ಸಹಕಾರಿಯಾದದ್ದು—ಎಂದು ತಿಳಿದುಕೊಳ್ಳುವುದು ಒಳಿತಾಗಿರುತ್ತದೆ.

ಇತ್ತೀಚಿನ ವರೆಗೆ ನಮ್ಮ ಶಿಕ್ಷಣವು ಕುಡಿತದಿಂದ ಬರುವ ಉತ್ಪನ್ನದ ಮೇಲೆ ಅವಲಂಬಿಸಿತ್ತೆಂಬುದನ್ನು ಹೇಳಲು ವಿಷಾದವೆನಿಸುತ್ತದೆ. ಶಿಕ್ಷಣದಂತಹ ಪವಿತ್ರಕಾರ್ಯವು ಮದ್ಯಪಾನದಂತಹ ಅಮಾನುಷ ಕೃತಿಯಮೇಲೆ ಅವಲಂಬಿಸುವುದೆಂದರೆ ತೀರ ದುರ್ದೈವದ ಸಂಗತಿ. ಇದೇ ಏಪ್ರಿಲ್ ೧ರಿಂದ ನಮ್ಮ ಮುಂಬಯಿ ರಾಜ್ಯ ಸರಕಾರವು ಪೂರ್ಣ ಪಾನನಿರೋಧಕ್ಕಾಗಿ ಟೊಂಕಕಟ್ಟಿದೆ. ಇತರ ಉತ್ಪನ್ನದ ಬಾಬುಗಳಿಂದ ಶಿಕ್ಷಣದ ವೆಚ್ಚ ಸಹಿಸಲು ಸಾಧ್ಯವಿಲ್ಲೆಂಬುದನ್ನು ಆ ಕಾಲದ ಸರಕಾರವು ಹೇಳಿದುದರಿಂದ, ಗಾಂಧೀಜಿಯವರೂ ಝಾಕೀರ್ ಹುಸೇನ ಸಮಿತಿಯವರೂ "ಶಿಕ್ಷಣವು ಸ್ವಾವಲಂಬಿಯಾಗಬೇಕು. —ಕನಿಷ್ಠ ಪಕ್ಷಕ್ಕೆ ಶಿಕ್ಷಕನ ಸಂಬಳವಾದರೂ, ಹುಡುಗರ ಶ್ರಮದಿಂದ ಬರುವ ಉತ್ಪನ್ನದ ಮೇಲೆ ಅವಲಂಬಿಸಬೇಕು"ಎಂದರು ಆದರೆ ಕಾಂಗ್ರೆಸ್ಸುಮಾತ್ರ ಈ ಕೊನೆಯ ಮಾತಿಗೆ ತನ್ನ ಒಪ್ಪಿಗೆಯನ್ನಿತ್ತಿಲ್ಲ. ಸಾವಿರಗಳು ಶ್ರಮಜೀವನ ಸಾಗಿಸುವ ಬಾಲಕರ ಕೊಂಡಾಡೆಗಳಾಗಿ ಪರಿಣಮಿಸುವವೋ ಎಂದು ಅವರ ಭಯವಿದ್ದಂತೆ ತೋರುತ್ತದೆ. ಕಾಂಗ್ರೆಸ್ಸು ಈ ಮಾತಿಗೆ ತನ್ನ ಅಧಿಕಾರಮುದ್ರೆಯನ್ನೊತ್ತದಿದ್ದರೂ, ತಾಲಿಮಿ ಸಂಘವು ಈ ತತ್ತ್ವಕ್ಕೆ ಅಂಟಿಕೊಂಡಿದೆ. ಮೂಲೋದ್ಯೋಗಗಳಿಂದ ಬರುವ ಉತ್ಪನ್ನವನ್ನು ಕಡೆಗಣಿಸಿದರೆ, ವಿದ್ಯಾರ್ಥಿಗಳಲ್ಲಿ ಅವನ್ನು ಮಾಡುವ ಪ್ರವೃತ್ತಿಯು ಕ್ರಮೇಣ ಕಡಿಮೆಯಾಗಿ ಅವರಲ್ಲಿರಬೇಕಾದ ಜಾಗರೂಕತೆ ವೈಜ್ಞಾನಿಕ ದೃಷ್ಟಿ ಮುಂತಾದ ಸದ್ಗುಣಗಳು ಕ್ರಮೇಣ ಮಾಯವಾಗಿ, ಜೀವನಶಿಕ್ಷಣವು ನಿರ್ಜೀವವಾಗಬಹುದು.

ಜೀವನ ಶಿಕ್ಷಣದಲ್ಲಿ ಶಿಕ್ಷಕನ ಸ್ಥಾನವು ಬಹಳ ಮಹತ್ತ್ವದ್ದು. ಅವನು ಸೂತ್ರಧಾರನಂತೆ ತೆರೆಯ ಮರೆಯಲ್ಲಿದ್ದುಎಲ್ಲ ಚಟುವಟಿಕೆಗಳಿಗೆ ಚಾಲನೆ ಕೊಡುವುದಲ್ಲದೆ, ಆ ಚಟುವಟಿಕೆಗಳು ಯಶಸ್ವಿಯಾಗಲು ಬೇಕಾದ ಸಮವಾಯ ಜ್ಞಾನವನ್ನು ಕೊಡುತ್ತಾನೆ. ಅದರಿಂದ ಅವನ ಹಾಗೂ ಬಾಲಕನ ವಿಕಾಸವು ಒಂದೇ ಕಾಲಕ್ಕೆ ಆಗುತ್ತದೆ. "ಆಚಾರ್ಯ" ನೆಂದರೆ ಆಚಾರವುಳ್ಳವನು. ಅವನ ನಡತೆ ಶಿಷ್ಯರಿಗೆ ಮಾರ್ಗದರ್ಶನ ಮಾಡಬೇಕಾದುದರಿಂದ, ಶಿಕ್ಷಕನಾದವನು ತನ್ನ ವಿಚಾರ, ಆಚಾರ, ಉಚ್ಚಾರ ಹಾಗೂ ಪ್ರಚಾರಗಳ ಬಗ್ಗೆ ಜಾಗರೂಕತೆಯಿಂದಿರಬೇಕು. ಅವನು ಜೀವನಶಿಕ್ಷಣದ ಹೃದಯವಿದ್ದಂತೆ.

ಹೀಗೆ ಜೀವನ ಶಿಕ್ಷಣವು ವಿದ್ಯಾರ್ಥಿ–ಚಟುವಟಿಕೆ–ಶಿಕ್ಷಕರ ನಿಕಟ ಸಮ್ಮಂಧವನ್ನೊಳಗೊಂಡದ್ದು! ಶಿರ-ಕರ-ಉರಗಳ ಸಮನ್ವಿತ ಸಹಕಾರದಿಂದೊಡಗೂಡಿದ ತ್ರಿವೇಣಿ ಸಂಗಮದಂತಿದ್ದು, ಶಿಕ್ಷಕ ಹಾಗೂ ಓದುಗರ ವಿಕಾಸಕ್ಕೆ ಸಾಧನವಾದದ್ದೂ, ಸ್ವಾವಲಂಬಿಯಾಗಲು ಸಾಮರ್ಥ್ಯ, ಆಧ್ಯಾತ್ಮಿಕ ಹಾಗೂ ಅಧಿಭೌತಿಕಗಳು ಸಮಂದರವಾಗಿ ಸಮನ್ವಯಗೊಂಡದ್ದೂ, ಈಗಿನ ಸ್ವತಂತ್ರ ಭಾರತಕ್ಕೆ ತಾರಕಮಂತ್ರದಂತಿದ್ದದ್ದೂ ಆಗಿದೆಯೆಂಬದನ್ನು ಎದೆತಟ್ಟಿ ಕೈಯೆತ್ತಿ ಹೇಳಬಹುದು.

ಆನಂದ ಗ್ರಂಥಮಾಲಾ, ಹುಬ್ಬಳ್ಳಿ.

ಮೊದಲನೆಯ ಪ್ರಕಟನೆ

ಶ್ರೀ. ಪಿ. ವೆಂಕೋಬಾಚಾರ್ಯರಿಂದ ಅನುವಾದಿತ

ಅರ್ಪಣ

[ಮೋಪಾಸಾನ ಕಥಾ ಸಂಕಲನ]

ಎರಡನೆಯ ಪ್ರಕಟನೆ ಎಪ್ರಿಲ್‌ನಲ್ಲಿ ಬರಲಿದೆ.

ಶ್ರೀ. "ಸೀತಾಪತಿ" ಇವರ

ಹೂ ಅರಳಿತು

[ಪ್ರಸಿದ್ಧ ತೆಲಗು ಲೇಖಕರ ಕಥಾಸಂಗ್ರಹ]

ವಾರ್ಷಿಕ ಚಂದಾ : ೬೦೦ ಪುಟಗಳಲ್ಲಿ ನಾಲ್ಕು ಪುಸ್ತಕಗಳಿಗೆ ರೂ. ೫—೪—೦.

ಮಾರಾಟಗಾರರಿಗೆ ವಿಶೇಷ ಸವಲತ್ : ವಿವರಗಳಿಗೆ: ಬೇಗ ಬರೆಯಿರಿ.

ಮುಂದಿನ ಸಂಚಿಕೆಗೆ ಜಯಂತಿಯ ಹೊಸವರ್ಷ ಪ್ರಾರಂಭವಾಗುವುದು. ಹೊಸ ವರ್ಷದ ಚಂದಾಹಣವನ್ನು ಎಲ್ಲರೂ M. O. ಮೂಲಕ ಕಳುಹುವುದು ಅನುಕೂಲ. ಅಂಚೆಯ ಆಫೀಸುಗಳಲ್ಲಿ V. P. ಗಳನ್ನು ಇರಿಸುವ ಅವಧಿಯನ್ನು ೫ ದಿನಕ್ಕೆ ಇಳಿಸಿದಾಗಿನಿಂದ, ಅಸ್ವೀಕೃತವಾಗಿ ಬರುವ V. P. ಗಳ ಸಂಖ್ಯೆ ಹೆಚ್ಚಾಗಿದೆ. ಆದುದರಿಂದ ಎಲ್ಲರೂ ಹಣವನ್ನು M. O. ಮೂಲಕ ಕಳುಹಬೇಕು.

—ವ್ಯ. ಜ.

ಸಾಹಿತ್ಯ ವಿಮರ್ಶೆಯ ವಿಹಂಗಮರಂಗ

ಕಳೆದ ಏಪ್ರಿಲ್ ಇಪ್ಪತ್ತೈರಡನೆಯ ದಿನಾಂಕ, ದಿವಂಗತ ಗಳಗನಾಥರವರ ಎಂಟನೆಯ ಪುಣ್ಯತಿಥಿ. ಕನ್ನಡನಾಡಿನಲ್ಲಿ ಅವರು ಮಾಡಿದ ವಾಙ್ಮಯ ನಿರ್ಮಿತಿ-ಪ್ರಚಾರಗಳ ಕಾರ್ಯ ಅವಿಸ್ಮರಣೀಯವಾದುದಾದರೂ, ಇತ್ತೀಚೆಗಿನ ತರುಣ ಕನ್ನಡ ಲೋಕದಲ್ಲಿ ಅದು ವಿಸ್ಮರಣೀಯವಾಗುತ್ತ ನಡೆದಿದೆ. ಗಳಗನಾಥರ ಸಾಹಿತ್ಯ ಒಂದು ವಿಶಿಷ್ಟ ಆದರ್ಶವನ್ನು ಕಣ್ಣಮುಂದೆ ಇರಿಸಿಕೊಂಡು ಹೊರಟುದು. ಇಂದಿನ ಹೊಸ ನೋಟಕ್ಕೆ ಅವರ ಆದರ್ಶ ಹಳೆಯ ಮಾತಾಗಿ ಕಂಡರೂ, ಆ ಆದರ್ಶಸಿದ್ಧಿಯಲ್ಲಿಯೂ ಶಾಂತಿ-ಸಮಾಧಾನಗಳನ್ನು ಪಡೆಯಬಹುದಾಗಿದೆ. ಅವರ ಪುಣ್ಯಸ್ಮರಣೆಗೆಂದೇ ಜಯಂತಿ ಈ ಸಲ ಅವರ ಕಾದಂಬರಿಗಳ ವಿಮರ್ಶೆಯನ್ನು ಮೇಲಾಟಕ್ಕಾಗಿ ಆಯ್ದುಕೊಂಡಿತು.

ನಮ್ಮ ಆಪೇಕ್ಷೆಯಂತೆ ಬೇರೆ ಬೇರೆ ಎಂಟು ಜನರಿಂದ ವಿಮರ್ಶೆಗಳು ಬಂದಿವೆ. ವಿಮರ್ಶಕರ ಅನುಕ್ರಮ ಹೀಗಿದೆ: ೧. ಶ್ರೀ. 'ವಾಜೆ' ಮಾರುತಿಗಲ್ಲಿ, ಬೆಳಗಾಂವಿ. ೨. ಶ್ರೀ. ಹೋಶ ಶ್ರೀಕಾಂತ, ಶಮನೇವಾಡಿ. ೩. ಶ್ರೀ. ಆ ರಾ. ರಾಜಪುರೋಹಿತ, ಹೊಂಬಳ. ೪. ಶ್ರೀ. ಸಂಜೀವ ಲಕ್ಷ್ಮೇಶ್ವರ, ಧಾರವಾಡ. ೫. ಶ್ರೀ. ಮಲ್ಲಿಕಾರ್ಜುನ ಎಫ್. ಬಸರಕೋಡ, ಗುಳೇದಗುಡ್ಡ. ೬. ಶ್ರೀ. ಎಸ್. ಶ್ರೀಕೃಷ್ಣ ಪೆರಡಾಲ. ೭. ಶ್ರೀಮತಿ ಪದ್ಮಾ, ಗವೀಪುರಂ—ಬೆಂಗಳೂರು ೧೯. ೮. ಶ್ರೀ. ಜಿ. ಎಸ್. ಮಹಕರ್ ಎಂ. ಎ., ಬಿ. ಟಿ. ಪುಣೆ.

ಜಯಂತಿಯ ಸಂಪಾದಕರೂ, ತರುಣ ಸಾಹಿತ್ಯಿಕರಾದ ಶ್ರೀಮಾನ್ ಕೀರ್ತಿ ಕುರ್ತಕೋಟಿಯವರೂ ಈ ಸಲದ ವಿಮರ್ಶೆಗಳನ್ನು ಪರೀಕ್ಷಿಸಿದರು. ಶ್ರೀ ಜಿ. ಎಸ್. ಮಹಕರ್ ಮತ್ತು ಶ್ರೀ. ಎಸ್. ಶ್ರೀಕೃಷ್ಣ ಪೆರಡಾಲ ಅವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀಮತಿ ಪದ್ಮಾ, ಶ್ರೀ. ಮ. ಫ. ಬಸರಕೋಡ ಇವರ ವಿಮರ್ಶೆಗಳು ಚೆನ್ನಾಗಿವೆ. ಶ್ರೀ. ಆ ರಾ. ರಾಜಪುರೋಹಿತರದೂ ಒಳ್ಳೆಯ ವಿಮರ್ಶೆ.

ಇಂದಿನ ತರುಣ ಕನ್ನಡಿಗರಿಗೆ ಗಳಗನಾಥರ ಕಾದಂಬರಿಗಳ ಪರಿಚಯ ಕಡಮೆಯಿರುವುದರಿಂದಲೂ ಶ್ರೀ. ಮಹಕರರ ವಿಮರ್ಶೆಯಲ್ಲಿ ವಿಶದ ಪರಿಚಯವಿರುವುದರಿಂದಲೂ ಅದನ್ನೇ ಇಲ್ಲಿ ಪ್ರಕಟಿಸಲಾಗಿದೆ. ಶ್ರೀ. ಶ್ರೀಕೃಷ್ಣ ಪೆರಡಾಲ ಅವರ ವಿಮರ್ಶೆ ಪ್ರಕಟನಾರ್ಹವಾಗಿದ್ದರೂ ಸ್ಥಳಸಂಕೋಚದ ಮೂಲಕ ಅನಿವಾರ್ಯವಾಗಿ ಬಿಡಬೇಕಾಯಿತು.

ಮುಂದಿನ ಸಲದ ವಿಮರ್ಶೆಯ ಮೇಲಾಟಕ್ಕೆ ಈ ಸಂಚಿಕೆಯಲ್ಲಿ ಪ್ರಕಟವಾದ 'ಹಾಳು ಕೋಟೆ' ಎಂಬ ನಗೆಯಾಟವನ್ನು ತೆಗೆದುಕೊಳ್ಳಬೇಕು.

—ಸಂಪಾದಕರು.

ದಿವಂಗತ ಗಳಗನಾಥರ ಕಾದಂಬರಿಗಳು

ಶ್ರೀ. ಜಿ. ಎಸ್. ಮಹಕರ, ಎಮ್. ಎ., ಬಿ. ಟಿ. ಪುಣೆ

★

ಶ್ರೀ ಗಳಗನಾಥರು ತಮ್ಮ ಅಮೋಘವಾದ ಶೈಲಿಯು ಸಹಾಯ ಮೊದಲು ಜನರಲ್ಲಿ ಓದುವ ಅಭ್ಯಾಸ, ವಿಷಯದ ಕುತೂಹಲವನ್ನು ಹುಟ್ಟಿಸಿ ಮುಂದೆ ಬರುಬರುತ್ತ ಧೈರ್ಯ, ಅಭಿಮಾನ, ತಂತ್ಯಪ್ರೀತಿ, ಸ್ವಾರ್ಥತ್ಯಾಗ ಮುಂತಾದವುಗಳ ಪ್ರೇರಣೆ-ತಿ, ಕೊನೆಗೆ ಪುರಾಣ-ಪ್ರವಚನಗಳಿಂದ ವೇದಾಂತವನ್ನು ಸಹ ಅವಗಾಹನೆಗೆ ತಂದು ನೀಡಿದರು." ಎಂದು ಶ್ರೀ. ಎಚ್. ಪಾಟೀಲರು "ಗಳಗನಾಥರ ಕೃತಿಗಳು" ಎಂಬ ತಮ್ಮ ಂಧದಲ್ಲಿ ಬರೆದಿರುವರು. ಅವರ ಈ ಉಕ್ತಿಯಲ್ಲಿ ಶ್ರೀ. ಗಳಗರೆ ವಾಙ್ಮಯದ ಸಾರವನ್ನು ಕಾಣಬಹುದು.

ಗಳಗನಾಥರ ಕಾಲದಲ್ಲಿ ಕನ್ನಡ ಶಿಕ್ಷಣ, ಕನ್ನಡ ಓದುವವರ ಸಂಖ್ಯೆ, ಕನ್ನಡಕ್ಕಾಗಿ ಅಭಿಮಾನ—ಎಲ್ಲವೂ ತೀರ ಸಣ್ಣಪ್ರಮಾಣದಲ್ಲಿದ್ದುವು. ಇಷ್ಟೇ ಏಕೆ? ಕನ್ನಡಿಗರು ಹೆಚ್ಚಾಗಿ 'ಕೇಸರಿ' 'ಕರಮಣಾಳ' ಮೊದಲಾದ ಮರಾಠೀ ಪತ್ರಿಕೆಗಳನ್ನೇ ಓದುತ್ತಿದ್ದರು. ಇದಕ್ಕೆ ಕಾರಣವೆಂದರೆ ಲೋಕಮಾನ್ಯ ಟಿಳಕ ಮತ್ತು ಹರಿನಾರಾಯಣ ಆಪಟೆಯವರ ಲೇಖನವೈಖರಿ. ಇದರಿಂದ ಗಳಗನಾಥರ ಮುಂದೆ ಈ ಪ್ರಶ್ನೆ ಬಂದು ನಿಂತಿತು: 'ಕನ್ನಡ ಜನತೆಗೆ ಬೇಕಾದುದು ಮರಾಠೀ ಭಾಷೆಯೋ, ಅಥವಾ ಅದರಲ್ಲಿ ಆಜ್ಞಾಗುತ್ತಲಿರುವ ವಿಚಾರವೋ? ಜನತೆಗೆ ಅದರಲ್ಲಿಯ ವಿಚಾರವು ಮೆಚ್ಚಿಗೆಯಾಗುತ್ತಲಿದ್ದರೆ, ಆ ವಿಚಾರವನ್ನು ಕನ್ನಡ ಭಾಷೆಯಲ್ಲಿ ಏಕೆ ಬರೆದು ಪ್ರಕಟಿಸಬಾರದು?' ಎಂದು ಗಳಗನಾಥರು ಮರಾಠಿ ವಾಙ್ಮಯವನ್ನು ಕನ್ನಡದಲ್ಲಿ ಭಾಷಾಂತರಿಸಹತ್ತಿದ್ದರು. ಮಾತೃಭಾಷಾಸೇವೆಯನ್ನು ಮಾಡುವುದಕ್ಕಾಗಿಯೇ ಶ್ರೀ. ಗಳಗನಾಥರು

ಕಾದಂಬರಿಗಳನ್ನು ಬರೆಯಬೇಕಾಯಿತು. 'ಪದ್ಮಹಯಣಾ' ಎಂಬ ಕಾದಂಬರಿಯ ಪ್ರಸ್ತಾವನೆಯಲ್ಲಿ ಅವರು ಹೀಗೆ ಹೇಳಿಕೊಳ್ಳುವರು:— "ಓದುವವನ ಯೋಗ್ಯತೆ ಇದ್ದಂತೆ ಬೇರೆಬೇರೆ ಜನರಿಗೆ ಬೇರೆಬೇರೆ ಪ್ರಕಾರದ ಗ್ರಂಥಗಳು ವಾಚನಾರ್ಹವಾಗುವುವು. ಶಾಸ್ತ್ರೀಯ ವಿಷಯಗಳ ಗ್ರಂಥಾವಲೋಕನವು ವಿದ್ವಾಂಸರಿಗೆ ಮಾತ್ರ ಸಾಧ್ಯವಾದುದು. ಸಾಧಾರಣ ಜನರಿಗೆ ಆ ಗ್ರಂಥಗಳು ದುರ್ಬೋಧವಾಗಿ ಅವರ ಓದುವ ಕಲವಲವಿಕೆಯು ನಷ್ಟವಾಗುವ ಸಂಭವ ಉಂಟು. ಕಾರಣ ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ ಉದ್ಯೋಗಾತಿಶಯದಿಂದ ಶ್ರಾಂತರಾದವರಿಗೆ ವಿಶ್ರಾಂತಿಯಲ್ಲಿ ಆನಂದಗೊಳಿಸಲಿಕ್ಕೂ ಮನೋರಂಜನೆಯಾಗಿ ನೀತಿ ಬೋಧವಾಗುವುದಕ್ಕೂ ಉತ್ತಮ ಕಾದಂಬರಿಗಳು ಬೇಕೇಬೇಕು." ಮಹಾರಾಷ್ಟ್ರದಲ್ಲಿಯ ದಿ. ಡಾಕ್ಟರ್ ಕೇತಕರರ ಕಾದಂಬರಿಗಳಲ್ಲಿ ಹೇಗೆ ತತ್ತ್ವಪ್ರತಿಪಾದನೆಯು ವಿಪುಲವಾಗಿ ಇರುವುದೋ ಹಾಗೆಯೇ ಗಳಗನಾಥರ ಕಾದಂಬರಿಗಳಲ್ಲಿ ತತ್ತ್ವಪ್ರತಿಪಾದನೆಯು ಇರುವುದು. ಉದಾಹರಣೆಗಾಗಿ 'ಮಾಧವ ಕರುಣಾವಿಲಾಸ' ಅಥವಾ ಬೇರೆ ಯಾವ ಕಾದಂಬರಿಯ ಹೆಸರುಗಳನ್ನೂ ಹೇಳಬಹುದು. ಡಾಕ್ಟರ್ ಕೇತಕರರ ಮತ್ತು ಗಳಗನಾಥರ ಕಾದಂಬರಿಗಳಲ್ಲಿಯ ಭೇದವು ಇಷ್ಟೇ: ಡಾಕ್ಟರರ ಕಾದಂಬರಿಗಳು ಸಾಮಾಜಿಕವಾದುವುಗಳು ಮತ್ತು ಸ್ವತಂತ್ರ; ಆದರೆ ಗಳಗನಾಥರವು ಭಾಷಾಂತರಿತ ಮತ್ತು ಇತಿಹಾಸಿಕ.

ಗಳಗನಾಥರ ಕಾದಂಬರಿಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು. ೧. **ಕನ್ನಡಿಗರಿಗೆ ಸಂಬಂಧಿಸಿದುವು. ೨. ಮರಾಠರಿಗೆ ಸಂಬಂಧಿಸಿದುವು. ೩. ರಜಪೂತರಿಗೆ ಸಂಬಂಧಿಸಿದುವು.**

ಕನ್ನಡಿಗರಿಗೆ ಸಂಬಂಧಿಸಿದ ಕಾದಂಬರಿಗಳು

೧. **ಮಾಧವ ಕರುಣವಿಲಾಸ**:— ಇದು ಕನ್ನಡಿಗರ ಆದರಕ್ಕೆ ಪಾತ್ರವಾದ ಗೌರವದ ತತ್ತ್ವಪ್ರಕಾಶಕ ಸ್ವತಂತ್ರ ಐತಿಹಾಸಿಕ ಕಾದಂಬರಿಯು. ಇದರಲ್ಲಿ ಮಾಧವಾಚಾರ್ಯರ ಕಥೆಯು ಇರುವುದು. ಇದೊಂದು ಕಾದಂಬರಿಯೆಂದು ಓದದೆ, ಅಭ್ಯಾಸ ಮಾಡತಕ್ಕ ಪುಸ್ತಕವೆಂದು ಓದಬೇಕಾಗುವುದು. ಈ ಕಾದಂಬರಿಯು ಎಸ್ಸೆಸ್ಸೆ. ಎ. ಪರೀಕ್ಷೆಗೆ ಕೆಲವು ವರ್ಷ ಪಠ್ಯಪುಸ್ತಕವಾಗಿತ್ತು. ಇದರಲ್ಲಿ ಶ್ರೀ. ಮಾಧವಾಚಾರ್ಯ, ಶ್ರೀ. ವಿರೂಪಾಕ್ಷಾರ್ಯ, ಕಾಶೀಮುಖಾನ್ ಮತ್ತು ದುರ್ಗಪ್ಪ ಎಂಬ ನಾಲ್ಕು ಪಾತ್ರಗಳನ್ನು ಯೋಜಿಸಿರುವುದರಲ್ಲಿ ಲೇಖಕರ ಲೋಕಸಂಗ್ರಹ ಬುದ್ಧಿಯ ಸರ್ವಸ್ವವನ್ನು ಕಾಣಬಹುದು. ಚಾತುರ್ವರ್ಣಾತ್ಮಕ ವೈದಿಕರನ್ನು ತೋರಿಸಲಿಕ್ಕೆ ಮಾಧವಾಚಾರ್ಯರೆಂಬ ಬ್ರಾಹ್ಮಣರೂ, ಎರಡನೆಯ ಏಕವರ್ಣಾತ್ಮಕ ವೈದಿಕರನ್ನು ತೋರಿಸಲಿಕ್ಕೆ ವಿರೂಪಾಕ್ಷಾರ್ಯರೆಂಬ ಜಂಗಮರೂ, ಈ ಕಾದಂಬರಿಯಲ್ಲಿ ಯೋಜಿಸಲ್ಪಟ್ಟಿರುವರು. ಅನೈದಿಕ ವರ್ಗವನ್ನು ತೋರಿಸಲಿಕ್ಕೆ ಕಾಶೀಮುಖಾನ್ ಪಾತ್ರವನ್ನು ಯೋಜನೆಯು ಆಗಿರುವುದು. ನಾಲ್ಕೂ ವರ್ಣದ ಜನರು ಸ್ವರಾಜ್ಯಕ್ಕಾಗಿ ಹೇಗೆ ಒಂದಾಗಬೇಕು— ಎಂಬುದನ್ನು ಈ ಕಾದಂಬರಿಯಲ್ಲಿ ಮಾಧವಾಚಾರ್ಯರು ತೋರಿಸುವರು.

೨. **ಕನ್ನಡಿಗರ ಕರ್ಮಕಥೆ**:— ಘನತರವಾದ ವಿಜಯನಗರ ಸಾಮ್ರಾಜ್ಯವು ತಾಳೀಕೋಟೆಯ ಕಾಳಗದಿಂದ ರಸಾತಳಕ್ಕೆ ಹೇಗೆ ಹೋಯಿತು— ಎಂಬುದರ ವರ್ಣನೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಈ ಕಾದಂಬರಿಯ ವಾಚನದಿಂದ ಕನ್ನಡಿಗರಲ್ಲಿ ಸ್ವಾಭಿಮಾನಮೂಲವಾದ ಹಲವು ವಿಚಾರಗಳೂ ಮತ್ತು ವಿಕಾರಗಳೂ ಉತ್ಪನ್ನವಾಗುವುವು. ಲೇಖಕರು ರಾಮರಾಜ, ತಿರುಮಲ, ವೆಂಕಟಾದ್ರಿ, ಮೆಹರ್ಜಾನ್, ರಣಮಸ್ತ್ ಖಾನ್ ಮೊದಲಾದವರ ಪಾತ್ರಗಳನ್ನು ಚೆನ್ನಾಗಿ ಚಿತ್ರಿಸಿರುವರು.

೩. "**ಕುಮುದಿನಿ**" ಕಾದಂಬರಿಯು ವಿಜಯನಗರದ ಇತಿಹಾಸಕ್ಕೆ ಸಂಬಂಧಿಸಿದ್ದು. ಇದು ಕರುಣಾರಸಪ್ರಾಧಾನ್ಯವಾದ ಕಾದಂಬರಿಯು. ಇದರ ಹನ್ನೆರಡನೆಯ ಪ್ರಕರಣವಾದ 'ಅಂತಕನ ಕೋಲಾಹಲ' ಎಂಬಲ್ಲಿ ಶೋಕಭಾವವು ಅತ್ಯುಚ್ಚ ಶಿಖರವನ್ನು ಮುಟ್ಟಿದೆ. ಓಬಲನ ಕ್ರೂರತನದ ವರ್ಣನೆ ಮತ್ತು ಚಂದ್ರಿಕೆಯ ಹೃದಯದ್ರಾವಕ ಪ್ರಸಂಗಗಳು, ನಿದುಳಿಗೆ ಧಕ್ಕೆಯನ್ನು ಕೊಡತಕ್ಕಂತಹವು.

ಮರಾಠಿಗರಿಗೆ ಸಂಬಂಧಿಸಿದ ಕಾದಂಬರಿಗಳು

೧. **ಈಶ್ವರೀಸೂತ್ರ ೨. ಕಮಲಕುಮಾರಿ ೩. ಮರಾಠರ ಅಭ್ಯುದಯ ೪. ಛತ್ರಪತಿ ೫. ಗೃಹಕಲಹ ೬. ಶಿವಪ್ರಭು-ಪಿನ ಪುಣ್ಯ ೭. ಕುರುಕ್ಷೇತ್ರ ೮. ಸ್ವರಾಜ್ಯಸುಗಂಧ.**

ಗಳಗನಾಥರು ಬರೆದಿರುವ ಕಾದಂಬರಿಗಳಲ್ಲಿ ಈ ಕಾದಂಬರಿಗಳು, ಅವರ ಅನುಭವದ ದೃಷ್ಟಿಯಿಂದಲೂ, ಕನ್ನಡಿಗರ ಸದಭಿಪ್ರಾಯದ ದೃಷ್ಟಿಯಿಂದಲೂ ಸ್ವಾಮಿಭಕ್ತಿಯ ಹಾಗೂ ಸ್ವಾಭಿಮಾನವನ್ನು ಅಭಿವೃದ್ಧಿಗೊಳಿಸುವಲ್ಲಿ ಅತ್ಯಂತ ಸಮರ್ಥವಾದುವುಗಳು.

೧. "**ಕಮಲಕುಮಾರಿ**":— ಈ ಕಾದಂಬರಿಯು ಶ್ರೀ. ಅಪಟೆಯವರ 'ಗಡ ಆಲಾ ಪಣ ಸಿಂಹ ಗೇಲಾ' ಎಂಬ ಮರಾಠಿ ಕಾದಂಬರಿಯ ಶಬ್ದಶಃ ಭಾಷಾಂತರವು. ಧರ್ಮಶ್ರದ್ಧೆ ಮತ್ತು ಧರ್ಮಲಂಡತನ ಇವುಗಳ ಅಂಕುರವು ಕಮಲಕುಮಾರಿ, ತಾನಾಜಿ, ಉದಯಭಾನು ಇವರ ವರ್ತನೆಯಲ್ಲಿ ಕಂಡುಬರುವುದು.

೨. "**ಈಶ್ವರಿಸೂತ್ರ**" ಎಂಬ ಕಾದಂಬರಿಯು ಆಪಟೆಯವರ "ಉಷಃಕಾಲ"ದ ಭಾಷಾಂತರವು. ಸಾಂಸಾರಿಕ ಕಾರ್ಯಗಳಾಗಲಿ, ಬೇರೆ ಯಾವ ಕಾರ್ಯಗಳಾಗಲಿ ಈಶ್ವರಿಸೂತ್ರದಿಂದಲೇನೇ ಆಗುತ್ತವೆಂಬ ಮಾತಿನ ಅನುಭವವನ್ನು ಈ ಕಾದಂಬರಿಯಲ್ಲಿ ಕಾಣಬಹುದು. ಶಿವಾಜಿಯು ತೋರಣಗಡವನ್ನು ತೆಗೆದುಕೊಂಡು ಸ್ವರಾಜ್ಯವನ್ನು ಕಟ್ಟಿದ ವರ್ಣನೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು.

೩. "**ಮರಾಟರ ಅಭ್ಯುದಯ**"ಎಂಬ ಕಾದಂಬರಿಯಲ್ಲಿ, ಶಿವಾಜಿಯು ರಾಜ್ಯವನ್ನು ಸ್ಥಾಪಿಸಿದ ಕೂಡಲೆ ಅದನ್ನು ನಾಶಮಾಡುವುದಕ್ಕಾಗಿ ವಿಜಾಪುರದ ಬಾದಶಹನು ಅಪಝುಲ್‌ಖಾನನೆಂಬ ಬಲಾಢ್ಯ ಸರದಾರನನ್ನು ದೊಡ್ಡ ಸೈನ್ಯದೊಡನೆ ಕಳಿಸಲು, ಶಿವಾಜಿಯು ಆತನನ್ನು ಯುಕ್ತಿಯಿಂದ ಕೊಲೆಗೈದ ಸಂಗತಿಯು ವರ್ಣಿಸಲ್ಪಟ್ಟಿದೆ.

೪. "**ಛತ್ರಪತಿ**" ಶಿವಾಜಿಯು ಆಯಕಟ್ಟಿನ ಸ್ಥಳವಾದ ಸಿಂಹಗಡವನ್ನು ತೆಗೆದುಕೊಂಡು ಬಲಿಷ್ಠನಾಗುವನು. ಇದನ್ನು ಔರಂಗಜೇಬನು ಸೈರಿಸದೆ, ರಾಜಾ ಜಯಸಿಂಗನೆಂಬ ತನ್ನರಜಪೂತ ಸರದಾರನನ್ನು ಶಿವಾಜಿಯ ಮೇಲೆ ಕಳುಹಿಸುವನು. ಆದರೆ ಶಿವಾಜಿಯು ದೂರದೃಷ್ಟಿಯಿಂದ ಜಯಸಿಂಗನ ಕೂಡ ಯುದ್ಧವನ್ನು ಮಾಡದಲೆ, ಆತನ ಸೂಚನೆಯಂತೆ ಬಾದಶಹನನ್ನು ಕಾಣಲು, ದಿಲ್ಲಿಗೆ ಹೋಗುವನು. ಆಗ ಬಾದಶಹನು ಆತನನ್ನು ಸೆರೆಯಲ್ಲಿ ಇಡಿಸುವನು ಆಗ ಶಿವಾಜಿಯು ತನ್ನ ಮಗನಾದ ಸಂಭಾಜಿಯೊಡನೆ ಪೆಟ್ಟಿಗೆಯಲ್ಲಿ ಕುಳಿತು ಪಾರಾಗುವನು. ಈ ಸಂಗತಿಯು ಈ ಕಾದಂಬರಿಯಲ್ಲಿ ವರ್ಣಿಸಲ್ಪಟ್ಟಿದೆ

೫ "**ಗೃಹಕಲಹ**" ಕಾದಂಬರಿಯು ಶೋಕಪರ್ಯವಸಾಯಿ. ಶಿವಾಜಿ ಮಹಾರಾಜರ ಮರಣ ಪ್ರಸಂಗದ ವರ್ಣನೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು ಗೃಹಕಲಹದ ಹೃದಯಭೇದಕವಾದ ದುಷ್ಪರಿಣಾಮದ ಚಿತ್ರವನ್ನು ಈ ಕಾದಂಬರಿಯಲ್ಲಿ ಕಾಣುವೆವು.

(೬) '**ಶಿವಪ್ರಭುವಿನ ಪುಣ್ಯ**':— ಶಿವಾಜಿಯ ಮಗನಾದ ಸಂಭಾಜಿಯನ್ನು ಔರಂಗಜೇಬನು ಅತಿ ಕ್ರೂರತನದಿಂದ ಕೊಲ್ಲಿಸಿದ ಪ್ರಸಂಗವು ಈ ಕಾದಂಬರಿಯಲ್ಲಿರುವುದು. ಶಿವಾಜಿಯ ಚಿಕ್ಕಮಗ ರಾಜಾರಾಮನು ಪರಿಪರಿಯ ಕಷ್ಟಗಳನ್ನು ಅನುಭವಿಸಿ, ಅಣ್ಣನ ಕಾಲದಲ್ಲಿ ನಾಶವಾದ ಮಹಾರಾಷ್ಟ್ರ ರಾಜ್ಯವನ್ನು ಮತ್ತೆ ಸ್ಥಾಪಿಸುವನು.

(೭) '**ಕುರುಕ್ಷೇತ್ರ**': ಪೇಶವೆ ಭಾವೂಸಾಹೇಬನು ಅತಿಗರ್ವದ ಬಾಧೆಯಿಂದ ಪಾನಿಪತ್ತದ ಕಾಳಗದಲ್ಲಿ ಪೇಶವೆಯವರ ಉತ್ಕರ್ಷವನ್ನು ಕುಗ್ಗಿಸಿದ ದುಃಖಕಾರಕ ಸಂಗತಿಯೇ ಈ ಕಾದಂಬರಿಯ ಸಂಗತಿಯು. ಮಹಾರಾಷ್ಟ್ರದ ಘನತರವಾದ ಪ್ರತಾಪದ ಮತ್ತು ಸಾಮರ್ಥ್ಯದ ವರ್ಣನೆಯನ್ನು ಈ ಕಾದಂಬರಿಯಲ್ಲಿ ಓದಬಹುದು.

(೮) '**ಸ್ವರಾಜ್ಯ ಸುಗಂಧ**':— ಇದು ರಹಸ್ಯಪೂರ್ಣ ಬೋಧಪ್ರದ ಕಾದಂಬರಿಯು. ಆಬಾಜಿ ಸೋನದೇವ, ನೇತಾಜಿ ಪಾಲಕರ, ಹಾಗೂ ವೆಂಕಾಜಿ ಪಾಲಕರ ಮೊದಲಾದವರು ಕಲ್ಯಾಣ ಕೋಟಿಯನ್ನು ಗೆದ್ದ ಸಂಗತಿಯು ಇದರಲ್ಲಿ ವರ್ಣಿತವಾಗಿದೆ.

ರಜಪೂತರಿಗೆ ಸಂಬಂಧಿದ ಕಾದಂಬರಿಗಳು.

(೧) **ವೈಭವ**:— ಚಾಣಕ್ಯ—ಚಂದ್ರಗುಪ್ತರಿಗೆ ಸಂಬಂಧಿಸಿದ ಕತೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು.

(೨) '**ಕ್ಷಾತ್ರತೇಜ**':— ಈ ಕಾದಂಬರಿಯಲ್ಲಿ ಔರಂಗಜೇಬನ ಹಾಗೂ ರಜಪೂತರ ಗುಣಸ್ವಭಾವಗಳ ವರ್ಣನೆಯನ್ನು ಕಾಣಬಹುದು. ಇದರಲ್ಲಿ ರೂಪಮತಿಯ ಕುಲೀನತೆ. ಇಂದಿರೆ-ಪದ್ಮೆ ದುರ್ಗಾದಾಸ ಇವರ ಸ್ವಾಮಿನಿಷ್ಠೆ, ಚಂದ್ರಾವತಿ ರಾಣಿಯ ತೇಜಸ್ವಿತೆ, ವೈಕುಂಠ ಯೋಗಿಗಳ ನಿಸ್ಪೃಹತೆ ಮೊದಲಾದುವುಗಳ ವರ್ಣನೆಯನ್ನು ಕಾಣಬಹುದು.

(೩) '**ಸತ್ತ್ವಸಾರ**':— ರಾಜ-ಪ್ರಜೆಗಳಿಬ್ಬರೂ ಏಕಜೀವರಾಗಿ ತಮ್ಮ ಗೌರವಕ್ಕೆ ಭಂಗವನ್ನುಂಟುಮಾಡುವ ಪ್ರಬಲ ಶತ್ರುವಿನೊಡನೆ ಕಷ್ಟ-ನಷ್ಟಗಳನ್ನು ಲೆಕ್ಕಿಸದೆ, ಕಾದಿ ಜಯಹೊಂದಿದ ಸಂಗತಿಯನ್ನು ಈ ಕಾದಂಬರಿಯಲ್ಲಿ ಕಾಣಬಹುದು. ರಾಣಾ ಪ್ರತಾಪಸಿಂಹನ ಸಲುವಾಗಿ ಮೇವಾಡದ ಪ್ರಜೆಗಳೂ, ಮೇವಾಡದ ಪ್ರಜೆಗಳ ಸಲುವಾಗಿ ರಾಣಾ ಪ್ರತಾಪಸಿಂಹನೂ ಪಟ್ಟ ಕಷ್ಟವು ಸಂಸ್ಮರಣೀಯವಾದುದು. ಪ್ರಸಂಗದಲ್ಲಿ ವಾಚಕರಿಗೆ ಪದ್ಮೋದಕ್ಕೆ ಅಸ್ಪದವು ದೊರೆಯಬೇಕೆಂದು, ಪ್ರತಾಪಸಿಂಹನಲ್ಲಿದ್ದ ಸತ್ತ್ವವನ್ನು ಸಾತ್ತ್ವಿಕೆಯೆಂತಲೂ, ಆತನು ಆಚರಿಸಿದ ತಪಸ್ಸನ್ನು ತಪೋಧನನೆಂತಲೂ ಕರೆದು, ಈ ಎರಡೂ ಕಾಲ್ಪನಿಕ ಪಾತ್ರಗಳ ದಾಂಪತ್ಯವನ್ನು ಪ್ರಧಾನಪಾತ್ರಗಳಾಗಿ ಲೇಖಕರು ಯೋಜಿಸಿರುವರು. ಕಾರ್ಯವು ಮಹಾತ್ಮರ ಸತ್ತ್ವದಿಂದಲೇನೆ ಆಗುವುದು, ಕೇವಲ ದ್ರವ್ಯಾದಿ ಉಪಕರಣಗಳಿಂದಲ್ಲ; ಸತ್ತ್ವವನ್ನು ಕಾಯ್ದುಕೊಳ್ಳುವವನು ಸದಾ ತಪಸ್ವಿಯಾಗಬೇಕು—ಎಂಬುದೇ ಈ ಕಾದಂಬರಿಯ ತಿರುಳು.

(೪) **ತಿಲೋತ್ತಮೆ**:— ಈ ಕಾದಂಬರಿಯಲ್ಲಿ ಲೇಖಕರು ಆಯೇಷಾ, ತಿಲೋತ್ತಮೆ, ಉಸ್ಮಾನ, ಜಗತ್ಸಿಂಗ ಮೊದಲಾದ ಸದ್ಗುಣದಿಂದ ಯುಕ್ತರಾದ ಪಾತ್ರಗಳ ಚಿತ್ರವನ್ನು ಚಿತ್ರಿಸಿರುವರು.

(೫) **ಮೃಣಾಲಿನಿ**:— ಇದೊಂದು ಚಿತ್ತಾಕರ್ಷಕವಾದ ಕಾದಂಬರಿಯು. ಬಂಗಾಲೀ ಲೇಖಕರಾದ ಬಂಕೀಮ ಚಂದ್ರರ ಕಾದಂಬರಿಯ ಅನುವಾದವು. ಮೃಣಾಲಿನೀ ರಾಣಿಯ ಚರಿತ್ರೆಯನ್ನು ಇದರಲ್ಲಿ ಕಾಣಬಹುದು.

(೬) '**ಧರ್ಮರಹಸ್ಯ**' ವು ಗಂಭೀರ ವಿಚಾರದ ಐತಿಹಾಸಿಕ ಕಾದಂಬರಿಯು. ಅಶೋಕರಾಜ, ಚಿದಾನಂದಸ್ವಾಮಿ, ಜಿತೇಂದ್ರ, ಮೊಗ್ಗಲೀಪುತ್ರ ಮೊದಲಾದ ನೀಚ, ಉಚ್ಚ ಪಾತ್ರಗಳ ವಕ್ರ, ಸರಲ ಗತಿಗಳ ಮತ್ತು ಅನುದಾತ್ತ-ಉದಾತ್ತ ಭಾವಗಳ ವರ್ಣನೆಯನ್ನು ಕಾಣಬಹುದು.

೭. "**ಸಂಸಾರಸುಖ**" ವು ಅಕಬರ ಬಾದಶಹನಿಗೆ ಸಂಬಂಧಿಸಿದ ಕಾದಂಬರಿಯು. ಈತನು ದೊಡ್ಡ ಬಾದಶಹನಾದರೂ, ಸಂಸಾರ ತಾಪದಿಂದ ಹಣ್ಣಾಗುವನು. ಅದರಂತೆಯೇ ಮಾನಸಿಂಹನ ಸೋದರಳಿಯನಾದ ಖುಸುರುವಿನ ದುರ್ದೈವದ ವರ್ಣನೆಯನ್ನು ಈ ಕಾದಂಬರಿಯಲ್ಲಿ ಕಾಣಬಹುದು. ರಾಜ್ಯತೃಷ್ಣೆಯು ಎಷ್ಟು ಅನರ್ಥಕಾರಕವಾದುದು ಎಂಬುದನ್ನು ಈ ಕಾದಂಬರಿಯಲ್ಲಿ ಕಾಣಬಹುದು.

೫. ' ರಾಣಾ ರಾಜಸಿಂಗ ' ಇದು ಔರಂಗಜೇಬನ ಕಾಲದ ಐತಿಹಾಸಿಕ ಕಾದಂಬರಿಯು. ಇದರಲ್ಲಿ ರಾಣಾರಾಜಸಿಂಹನ ಘನವಾದ ಯೋಗ್ಯತೆಯು, ಔರಂಗಜೇಬನ ಉದ್ದಾಮ ಮಹತ್ವಾಕಾಂಕ್ಷೆಯೂ, ಅಸಂಶಖರ್ಮರ ಸತ್ವವೂ, ಮೊಗಲ ಜನಾನಖಾನೆಯ ಸ್ಥಿತಿಯೂ ಚೆನ್ನಾಗಿ ಚಿತ್ರಿತವಾಗಿರುವದು.

೯. ''ಧಾರ್ಮಿಕತೇಜ'' ಎಂಬ ಕಾದಂಬರಿಯಲ್ಲಿ ಛತ್ರಸಾಲ ರಾಜನು ಔರಂಗಜೇಬನ ಕಾಲದಲ್ಲಿ ಬುಂದೇಲಖಂಡದ ಸ್ವಾತಂತ್ರ್ಯವನ್ನು ಸ್ಥಾಪಿಸಿದ ಕತೆಯನ್ನು ಕಾಣಬಹುದು. ಈ ಕಾದಂಬರಿಯನ್ನು ಓದುವಾಗ್ಗೆ, ನಮ್ಮ ಮನಸ್ಸು, ಪ್ರಾಣನಾಥ ಪ್ರಭುಗಳ ಮಹಿಮೆಯಲ್ಲಿಯೂ ದಲಪತರಾಯ, ಸಭಾಕರಣ–ಹೀರಾದೇವಿ–ಸುಖಲಾದೇವಿ– ಕಂಚುಕಿರಾಯ– ರಣದುಲ್ಲಾಖಾನ ಮೊದಲಾದ ನೀಚೋಚ್ಚ ಪಾತ್ರಗಳ ಚರಿತ್ರವಾಚನದಲ್ಲಿ ಕೊಡಗುವದು.

ಪ್ರಬುದ್ಧ ಪದ್ಮನಯನೆ

ಇದು ಗಳಗನಾಥರ ಪ್ರಥಮಕೃತಿಯು. ಕರ್ನಾಟಕ ವಿದ್ಯಾವರ್ಧಕ ಸಂಘದವರಿಂದ ಪಾರಿತೋಷಕವನ್ನು ಪಡೆಯುವುದಕ್ಕಾಗಿ ಬರೆದ ಕಾದಂಬರಿಯು. ಶೃಂಗಾರ, ವೀರ, ಶೋಕಾದ್ಭುತರಸವುಳ್ಳ ಕಾದಂಬರಿಯು.

ಗಳಗನಾಥರ ಎಲ್ಲ ಕಾದಂಬರಿಗಳು ಕನ್ನಡಿಗರಿಗೆ ಶುಂಬ ಪ್ರಿಯವಾದವು. ಅದುದರಿಂದ ಅವರ ' ಸದ್ಬೋಧಚಂದ್ರಿಕೆ ' ಗೆ ಏಳು ಸಾವಿರ ಚಂದಾದಾರರು ಕಲೆತಿದ್ದರು. ಗಳಗನಾಥರ ಕಾದಂಬರಿಗಳಲ್ಲಿ ಓರ್ವ ಸತ್ಪುರುಷನು ಇದ್ದೇ ಇರುವನು. ಅವನ ಯೋಗದಿಂದ ವಾಚಕರಿಗೆ ಸದ್ಬೋಧದ ಲಾಭವು ಆಗುವದು. ಇವರ ಕಾದಂಬರಿಗಳ ಗುಟ್ಟನ್ನು ಕೆಳಗಿನಂತೆ ಹೇಳಬಹುದು.

೧. ಪ್ರಸಿದ್ಧ ನಾಯಕರೇ ಇವರ ಕಾದಂಬರಿಯಲ್ಲಿರುವರು. ವಿಜಯನಗರದ ರಾಜ್ಯಸ್ಥಾಪಕರಾದ ಮಾಧವಾಚಾರ್ಯರು, ಮಹಾರಾಷ್ಟ್ರದ ರಾಜ್ಯಸ್ಥಾಪಕನಾದ ಶಿವಾಜಿ, ಅಕಬರನ ಕಾಲದಲ್ಲಿಯೂ ತನ್ನ ಸ್ವಾತಂತ್ರ್ಯವನ್ನು ಕಾದುಕೊಂಡ ಮಹಾರಾಣಾ ಪ್ರತಾಪಸಿಂಹ, ಪ್ರಾಚೀನ ಚಕ್ರವರ್ತಿಗಳಾದ ಅಶೋಕ–ಚಂದ್ರಗುಪ್ತರು, ಔರಂಗಜೇಬನಿಗೂ ತನ್ನ ಕೈತೋರಿಸಿದ ಸಾಧ್ವೀ ಚಂದ್ರಾವತಿರಾಣಿ, ಔರಂಗಜೇಬನ ಕಾಲದಲ್ಲಿಯೂ ಸ್ವಾತಂತ್ರ್ಯವನ್ನು ಸ್ಥಾಪಿಸಿದ ಛತ್ರಸಾಲ, ಕ್ಷತ್ರಿಯೋತ್ತಮನಾದ ರಾಣಾರಾಜಸಿಂಹ, ತಾಳಿಕೋಟೆ ಕಾಳಗದ ರಾಮರಾಜ ಇವರೇ ಮೊದಲಾದ ಪ್ರಸಿದ್ಧ ಐತಿಹಾಸಿಕ ಪುರುಷರು.

೨. ಗಳಗನಾಥರ ಭಾಷಾಪ್ರಭುತ್ವ ಮತ್ತು ವಿಷಯ ಯೋಜಕತೆಯ ಪ್ರಭುತ್ವವು ಅವರ ಕಾದಂಬರಿಗಳನ್ನು ಲೋಕಪ್ರಿಯವನ್ನಾಗಿ ಮಾಡಿದುವು. ಅವರದು ಜನಪ್ರಿಯವಾದ ಭಾಷೆಯು. ಸಮಾಜವು ಮೆಚ್ಚುವಂತಹ ಕಾದಂಬರಿಗಳನ್ನೇ ಆರಿಸಿ, ಕಾದಂಬರಿಗಳಲ್ಲಿಯ ವಿಷಯ ಯೋಜನೆಯನ್ನು ವಾಚಕರ ಅನುಭವಕ್ಕೆ ನೆಡುವಂತೆ, ಸಹಜಸರ್ಕವಾಗಿಯೂ ಸುಂದರವಾಗಿಯೂ ರಚಿಸಿರುವರು.

ಮೂರನೆಯ ಕಾರಣವೆಂದರೆ ಶ್ರೀ ಗಳಗನಾಥರು ವಾಚಕರಲ್ಲಿ ಒಂದುಗೂಡಿ ಕಾದಂಬರಿಯನ್ನು ಬರೆದದ್ದು. ತಾವು ವಾಚಕರಿಗಿಂತ ಶ್ರೇಷ್ಠರೆಂದಾಗಲಿ ಅಥವಾ ಕನಿಷ್ಠರೆಂದಾಗಲಿ ತಿಳಿದು ಕಾದಂಬರಿಗಳನ್ನು ಬರೆದಿಲ್ಲ. ಬರೆಯುವಾಗ ಅವರು ವಾಚಕರಾಗುವರು. ಓದುವಾಗ ವಾಚಕರು ಗಳಗನಾಥರಾಗುವರು.

ಶ್ರೀ. ಗಳಗನಾಥರು ಕೇವಲ ಭಾಷಾಂತರಕಾರರು ಎಂಬ ವಿಚಾರ ಸರಣಿಯು ಕೆಲವರಲ್ಲಿ ಇರುವುದು. ಅದರೆ ಇದು ನಿಜವಲ್ಲವೆಂದು ಹೇಳಬಹುದು. ಪದ್ಮನಯನೆ ಎಂಬ ಕಾದಂಬರಿಯ ಮುನ್ನುಡಿಯಲ್ಲಿ ಅವರು ಹೀಗೆ ಅಂದಿರುವರು : 'ಕಥಾಸಂವಿಧಾನವು ನನ್ನ ಸ್ವಂತ ಕಲ್ಪನೆಯದು ಇದ್ದು, ಅಂತರಿಕ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟವೆ. ಇಷ್ಟರ ಹೊರತು ಇದರಲ್ಲಿ ಬೇರೆ ಗ್ರಂಥಗಳ ವಿಚಾರವು ಬಹುತರವಾಗಿ ದೊರೆಯಲಾರದು.' ' ಅವರ ಉಳಿದ ಕಾದಂಬರಿಗಳಾದರೂ ಕೇವಲ ಭಾಷಾಂತರಿತವಾಗಿರದೆ ರೂಪಾಂತರಗಳಾಗಿರುವುವೆಂದು ಹೇಳಬಹುದು. 'ಸದ್ಗುರು ಪ್ರಭಾವ'ಎಂಬ ಪುಸ್ತಕದಲ್ಲಿ ಅವರು ಹೀಗೆ ಹೇಳಿರುವರು. " ನನ್ನ ಆಯುಷ್ಯದಲ್ಲಿ ನಾನು ಕೈ. ವಾ. ಆಪಟೆಯವರ 'ಕಮಲಕುಮಾರಿ' ಎಂಬ ಒಂದು ಕಾದಂಬರಿಯು ಹೊರತು ಯಾವ ಕಾದಂಬರಿಯನ್ನೂ ಅಕ್ಷರಶಃ ಭಾಷಾಂತರ ಮಾಡಿರುವುದಿಲ್ಲ. ಬೇಕಾದವರ ಕಾದಂಬರಿಯು ಇರಲಿ, ನಾನು ಹಾಗು ನನ್ನ ಕನ್ನಡಿಗರು ಎಂಬ ಜೋಡನ್ನು ಮರೆಯದೆ, ನಾನು ಕಾದಂಬರಿಯನ್ನು ಬೇಕಾದಲ್ಲಿ ಹಿಗ್ಗಿಸಿರುವೆನು; ಬೇಡವಾದಲ್ಲಿ ಕುಗ್ಗಿಸಿರುವೆನು. ಆ ಕಾದಂಬರಿಯೇ ನನ್ನ ಕೈಗೊಂಬೆಯಲ್ಲದೆ ನಾನು ಕಾದಂಬರಿಯ ಕೈಗೊಂಬೆಯಾಗಿರುವುದಿಲ್ಲ." ಅದುದರಿಂದ ಶ್ರೀ. ಗಳಗನಾಥರಲ್ಲಿ ಸ್ವತಂತ್ರ ಪ್ರತಿಭೆಯಿತ್ತೆಂದು ಹೇಳಬಹುದು. ಗಳಗನಾಥರು ಕಾದಂಬರಿಯನ್ನು ಬರೆದದ್ದು ಕಾತ್ತ್ವಿಕ ವಿಷಯಗಳೆಂಬ ಸಣ್ಣ ಕಹಿ ಗುಳಿಗೆಗಳನ್ನು ನವರಸಗಳ ಕಷಾಯದಲ್ಲಿ ಕೂಡಿಸಿ ಸರ್ವಗ್ರಾಹ್ಯವಾಗಿ ಮಾಡುವುದಕ್ಕೆ. ಅದುದರಿಂದ ಅವರ ಕಾದಂಬರಿಯೊಳಗಿನ ತತ್ತ್ವವು ಕಾದಂಬರಿಯಾಗಿಯೇ ಪರಿಣಮಿಸಿರುವುದು.

ಗಳಗನಾಥರ ಶೈಲಿ : " ನಿಮ್ಮ ಗದ್ಯದ ಶೈಲಿ, ಕನ್ನಡದ ಜನಕಿತ್ತ ದಿವ್ಯಕಾಣಿಕೆಯಾಯ್ತು. ಹೆಸರು ಶಾಸನವಾಯ್ತು." ಎಂದು ಕೃಷ್ಣಮೂರ್ತಿ ಪುರಾಣಿಕರು 'ಗಳಗನಾಥರಿಗೆ' ಎಂಬ ಸುನೀತದಲ್ಲಿ ಬರೆದಿರುವರು. ಶ್ರೀ. ಗಳಗನಾಥರದು ಗಂಡು ಶೈಲಿಯು. ಅವಶ್ಯಕವಾದ ಸಂಸ್ಕೃತ ಶಬ್ದಗಳ ಉಪಯೋಗವನ್ನು ಇವರ ಶೈಲಿಯಲ್ಲಿ ಕಾಣಬಹುದು. ಇವರು ಕನ್ನಡದ, ಹಳಗನ್ನಡದ ಶಬ್ದ ಸರಣಿಯನ್ನು ಲೇಖನ ಪರಂಪರೆಯನ್ನು ಕಾಪಾಡಿಕೊಂಡು ಬಂದಿರುವರು. ಮನೆಮಾತುಗಳು, ಪಡೆನುಡಿಗಳು

ಮತ್ತು ಗಾದೆಮಾತುಗಳನ್ನೂ ಇವರ ಕೃತಿಗಳಲ್ಲಿ ಕಾಣಬಹುದು. ಇವರ ಕಾಲದಲ್ಲಿ ಕನ್ನಡ ಭಾಷೆಯು ಒಂದು ವಿಶೇಷ ಸ್ವರೂಪವನ್ನು ತಾಳಿತು. ಇವರು ಉತ್ತರ ಕರ್ನಾಟಕದ ಬಳಕೆಯ ಭಾಷೆಯನ್ನು ಹಿಂದೆ ಮುಂದೆ ನೋಡದೆ ಬಳಸಿಕೊಂಡಿದ್ದರಿಂದ, ಇವರ ಶೈಲಿಯಲ್ಲಿ ಕೆಲಕೆಲವು ಕಡೆಗೆ ವ್ಯಾಕರಣದ ಬಿಗಿಕಟ್ಟು ಬಿಟ್ಟುಹೋಗಿದೆ. ಅನ್ಯದೇಶೀಯ ಶಬ್ದಗಳು ಕೆಲವೆಡೆಗೆ ಬರುತ್ತಲಿವೆ. ಇವರ ಬಳಕೆಯ ನುಡಿಯು ಕೆರೂರ ವಾಸುದೇವಾಚಾರ್ಯರಲ್ಲಿ ಹೆಚ್ಚು ನಯಗೊಂಡು, ಹದಗೊಂಡು, ಕನ್ನಡದ ಪಡೆನುಡಿಯ ಬೆಡಗನ್ನು ಕೂಡಿಕೊಂಡು, ಉತ್ತರ ಕರ್ನಾಟಕಕ್ಕೆ ಒಂದು ಉತ್ತಮ ವ್ಯಾದರಿ ಆಯಿತು. ಗಳಗನಾಥರು ವಿವಿಧ ಭಾವಗಳ, ವರ್ಣನೆಗಳ, ಪಾತ್ರಗಳ ಚಿತ್ರವನ್ನು ಸರಲವಾಗಿಯೂ, ಸಹಜವಾಗಿಯೂ ಮತ್ತು ಸರಸವಾಗಿಯೂ ಚಿತ್ರಿಸಬಲ್ಲರು. ಅದರಂತೆಯೇ ವೀರ ಕರುಣ, ಶೃಂಗಾರ ಮುಂತಾದ ರಸಗಳನ್ನು ರೂಪಿಸುವುದರಲ್ಲಿ ಅವರು ತೋರಿಸುವ ಶಬ್ದಗಳ ಜಾಣ್ಮೆಯು ಅಸಾಧಾರಣವಾದುದು. ಗಳಗನಾಥರ ಶಬ್ದಪ್ರವಾಹವು ಅನಿರುದ್ಧವಾದುದು. ಶಬ್ದಚಿತ್ರಗಳನ್ನು ಬರೆಯುವುದರಲ್ಲಿ ಅವರು ಅಸಾಧಾರಣವಾದ ಕೈಚಳಕವನ್ನು ಹದವನ್ನು ಮತ್ತು ಸಂಯಮವನ್ನು ತೋರಿಸುವರು. ಆದುದರಿಂದ ಅವರು ಚಿತ್ರಿಸುವ ವಿಷಯವು ಸುಂದರವಾಗಿ ಕಾಣುವುದಲ್ಲದೆ, ನಮ್ಮ ಮನದ ಮೂರ್ತಿಯಾಗಿ ಮತ್ತು ಆಲೋಚನೆಯ ಆದರ್ಶವಾಗಿ ನಿಲ್ಲುವುದು.

ಶ್ರೀ. ಗಳಗನಾಥರು ಓರ್ವ ಪ್ರಸಿದ್ಧರಾದ ಕಾದಂಬರಿಕಾರರು. ಉತ್ತರ ಕರ್ನಾಟಕದಲ್ಲಿ ಕನ್ನಡದ ಪ್ರಸಾರಮಾಡಲು ಕಾರಣೀಭೂತರಾದವರು. ಕನ್ನಡ ಕಾದಂಬರಿಕಾರರಲ್ಲಿ ಅವರಿಗೆ ಉನ್ನತಸ್ಥಾನವು ಸಿಗಬೇಕು. ಆದರೆ ಅವರು ಕೇವಲ ಪ್ರಾಥಮಿಕ ಶಾಲೆಯ ಶಿಕ್ಷಕರಾದುದರಿಂದ, ಅವರಿಗೆ ಯಾವ ರೀತಿಯ ಮರ್ಯಾದೆಯು ಸಿಗಬೇಕೋ ಅದು ಸಿಗಲಿಲ್ಲ. ಗಳಗನಾಥರ ವಾಙ್ಮಯದ ಅಭ್ಯಾಸವು ಅತಿ ಮುಖ್ಯವಾದುದು. ಅವರದು ನಿಜವಾದ ಕನ್ನಡಶೈಲಿಯು. ಅವರು ಇಂಗ್ಲೀಷ ಕಲಿಯದೆ ಇದ್ದುದರಿಂದ, ಅವರ ಶೈಲಿಯಲ್ಲಿ ಇಂಗ್ಲೀಷಶೈಲಿಯ ಪಡಿನೆಳಲು ತೋರಲಾರದು.

ಶ್ರೀ. ಗಳಗನಾಥರು ಮರಣಹೊಂದಿ ಇಂದಿಗೆ ಸುಮಾರು ಎಂಟು ವರ್ಷಗಳಾಗಿ ಹೋದುವು. ಅವರು ೧೯೪೨ನೆಯ ಇಸ್ವಿಯ. ಏಪ್ರಿಲ್ ತಿಂಗಳಿನ ೨೭ನೆಯ ತಾರೀಖಿನ ದಿನ ಮರಣಹೊಂದಿದರು. ಈ ಏಪ್ರಿಲ ತಿಂಗಳಿನ ವಿಮರ್ಶೆಯ ಶಿಕ್ಷಣರಂಗಕ್ಕೆ "ಗಳಗನಾಥರ ಕಾದಂಬರಿಗಳು" ಎಂಬ ವಿಷಯಗಳನ್ನು ಕೊಟ್ಟು ಜಯಂತಿಯ ಸಂವಾದಕರು ಬಹು ಔಚಿತ್ಯತೋರಿಸಿರುವರು. ಮತ್ತು ಉಪೇಕ್ಷಿತರಾದ ಕನ್ನಡ ಕಾದಂಬರಿಕಾರನ ನೆನಪನ್ನು ಕನ್ನಡಿಗರಿಗೆ ತಂದು ಕೊಟ್ಟಿರುವರು.

ಬೇವು-ಬೆಲ್ಲ

ಶ್ರೀ. ಭುಜೇಂಪ್ರ, ಮಹಿಷವಾಡಿ

ಬೇವು-ಬೆಲ್ಲವನೊಟ್ಟು ಸೇರಿಸಿ
ಸೃಷ್ಟಿಯಾಗಿದೆ ವಿಶ್ವವು !
ಕಾಮಪ್ರೇಮದ ಕೆಸರಿನಲ್ಲಿಯೆ
ರೂಪತಾಳಿದೆ ಜನ್ಮವು !
ಮೇಲು ಕೀಳನು ತಂದು ಜೋಡಿಸಿ
ಅಂದವಾಗಿದೆ ಭೂಮಿಯು !
ಒಳಿತು ಕೆಡುಕನ್ನೊಂದುಗೂಡಿಸಿ-
ಕೊಂಡು ನಿಂತಿದೆ ಬಾಳ್ವೆಯು ! ೧

ಭೀತಿ ಪ್ರೀತಿಯು ನಂಜು ಸೊದೆಗಳು
ಕಡಲಿನೊಡಲಲಿ ಜೊರೆವುವು !
ಕ್ರಾಂತಿ ಶಾಂತಿಯ ಜೆಂಕಿ ನೀರುಗ-
ಳಲ್ಲಿ ಒಳಗವಿತಿರುವುವು !
ಅಳುವು ನಗುವಿನ ಗುಡುಗುಮಿಂಚುಗ-
ಳಿಹವು ಮೋಡದ ಮರೆಯಲಿ !
ಕುಗ್ಗು ಹಿಗ್ಗಿನ ಏರು ಇರಿತಗ-
ಳಿಹವು ಬೆಟ್ಟದ ತುದಿಯಲಿ ! ೨

ಸುಳ್ಳು ಸತ್ಯದ ಮಣ್ಣು ಕಲ್ಲಿನ
ಗೋಡೆ ನಾಲ್ಕೂ ನಿಂತಿವೆ !
ಹುಟ್ಟು ಸಾವಿನ ಹಗಲು ಇರುಳಿನ
ಬಾಗಿಲೆರಡೂ ತೆರೆದಿವೆ !
ಪಾಪ ಪುಣ್ಯದ ಧೂಳಿ ಗಾಳಿಗೆ
ಕಿಟಕಿ-ಕಿಂಡಿಗಳಂಬಿವೆ !
ಸಿರಿಯು ಬಡತನ ಹೊನ್ನು ಹುಡಿಗಳು
ಬಿಡದೆ ಮನೆಯನೆ ತುಂಬಿವೆ ! ೩

ಸೋಲು ಗೆಲವಿನ ಬಿಸಿಲು ನೆಳಲಿನ
ತೆರೆಗಳಾಡುತಲಿರುವುವು !
ಸುಖದ ದುಃಖದ ಬೆಳಕು-ಕತ್ತಲೆ
ಬರುತ ಹೋಗುತಲಿರುವುವು !
ಬೇವು ಬೆಲ್ಲವನೊಟ್ಟು ಸೇರಿಸಿ
ಸೃಷ್ಟಿಯಾಗಿದೆ ವಿಶ್ವವು !
ದ್ವೈತದೊಳಗದ್ವೈತ ತೋರುತ
ಕುಣಿಯುತಿದೆ ಜನಜೆಲ್ಲವು ೪

ಪುಸ್ತಕ ವಿಮರ್ಶೆ

★

ದೋರಾ ಮತ್ತು ಇತರ ಕತೆಗಳು

ಅನುವಾದಕರು : ಶ್ರೀ ಗೊ. ಮೆ. ಚುಳಕಿ

ಲಲಿತ ಸಾಹಿತ್ಯಮಾಲೆಯ ೫೦ನೆಯ ಪುಸ್ತಕದ ೫೦ನೆಯ ಕುಡಿ

ಪ್ರಸ್ತುತ ಹೊತ್ತಿಗೆಎಂಟು ಅನುವಾದಿತ ಕತೆಗಳ ಅಚ್ಚುಕಟ್ಟಾದ ಸಂಗ್ರಹ. ಕತೆಗಾರರು ಒಂದೇ ದೇಶದವರಲ್ಲ. ಒಂದು ಕತೆ ಫ್ರಾನ್ಸ್ ದೇಶದ್ದು. ಒಂದು ಇಂಗ್ಲಂಡಿನದು. ನಾಲ್ಕು ರಶಿಯಾ ದೇಶದವು. ಎರಡು ಭರತಭೂಮಿಯವು. ಎಲ್ಲ ಮೂಲ ಲೇಖಕರ ಪರಿಚಯವನ್ನೂ ಅನುವಾದಕರು ತಮ್ಮ ಅರಿಕೆಯಲ್ಲಿ ಮಾಡಿಕೊಟ್ಟಿದ್ದಾರೆ. ಈ ಸಂಕಲನವನ್ನು ಇದಕ್ಕೂ ಹೆಚ್ಚು ಪ್ರಾತಿನಿಧಿಕವಾಗಿ ಮಾಡುವ ಉದ್ದೇಶವು ಪ್ರಕಾಶಕರಿಗೆ ಇದ್ದಿರಬಹುದೆಂಬುದು ಈ ವಿವಿಧ ಕತೆಗಳನ್ನೋದುವವರಿಗೆ ಭಾಸವಾಗದಿರದು.

ದೋರಾ, ನಿಚಲ, ಹಳ್ಳಿಯ ಶಾಲೆ, ಅಕ್ಕಾಅವ್ವ, ಪಿರಲಿ ಎಂಬ ಕತೆಗಳು ಸಾಮಾನ್ಯತಃ ಎಲ್ಲ ರುಚಿಯ ಓದುಗರ ಮನಹಿಡಿಯಬಹುದು ಎಂದು ನಿಃಸಂಕೋಚವಾಗಿ ಹೇಳಬಹುದು. ರಹಸ್ಯಮಯ ವಸ್ತು, ವಿಲಕ್ಷಣವಾದ ಉದ್ದ ಹೆಸರುಗಳ ಮೂಲಕ ಉಳಿದ ಮೂರು ಕತೆಗಳು ಉಕ್ತಿನ ಕಡಲೆಯಾಗಿ ಪರಿಣಮಿಸಬಹುದು.

ಮೇಲಿನ ಐದು ಕತೆಗಳ ವಸ್ತುಗಳು ಒಂದಿಲ್ಲೊಂದು ಬಗೆಯಿಂದ ಮನಸೆಳೆಯುವಂತಹವು. ಒಂದೆಡೆ ವಾತಾವರಣಕ್ಕೆ ಪ್ರಾಧಾನ್ಯ ಬಂದಿದ್ದರೆ, ಬೇರೊಂದೆಡೆ ಪಾತ್ರಪರಿಪೋಷಣೆಯ ಸೊಬಗಿದೆ. ಇನ್ನು ಮೂರನೆಯ ಕತೆಯಲ್ಲಿ ಜೀವನದ ನಿರಾಶೆ ಹಣಕಿಕ್ಕಿದೆ. ದೋರಾ ಎಂಬ ಕತೆಯಂತೂ ಹೊತ್ತಿಗೆಗೆ ತಲೆಬರೆಹವಾಗುವಷ್ಟು ಯೋಗ್ಯವಾಗಿದೆ. ನಿಚಲ ಎಂಬ ಕತೆಯಲ್ಲಿ ಉದಾಹೃತವಾದ ದೇಶಭಕ್ತಿ, ಓದುಗನ ಹೃದಯದಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡುವುದು. ಒಮ್ಮೊಮ್ಮೆ ಆನಂದೋರ್ಮಿಗಳು ಹುಟ್ಟುವುವು.

ಅನುವಾದಕರದು ಸಾಮಾನ್ಯತಃ ಮನೆಮಾತಿನ ಸಲಿಗೆಯ ಶೈಲಿ. ಆಗಾಗ ಕೆಲವೆಡೆ ಕವಿತ್ವದ ಮಟ್ಟ ಮುಟ್ಟಿದರೂ, ಒಟ್ಟು ಸ್ಪಷ್ಟತೆಯೇ ಅದರ ವೈಶಿಷ್ಟ್ಯವೆನ್ನಬಹುದು. ಪರದೇಶದ ಕತೆಗಳನ್ನು ಲೇಖಕರು ಎತ್ತಿಕೊಂಡು, ಆ ಆ ದೇಶಗಳ ಜೀವಾಳ. ವಾತಾವರಣ ಚಿತ್ರಿಸುವಾಗ ಅಸಹಜತೆ ತಲೆಯೆತ್ತಿಲ್ಲವೆಂಬುದು ಸಂತೋಷದ ಸಂಗತಿ. ಆದರೂ ಅನಿವಾರ್ಯವಾಗಿಯೋ ಅವಸರದಲ್ಲಿಯೋ ಚುಳಕಿಯವರು, ಹಲವೆಡೆ ಶಬ್ದಶಃ ಅನುವಾದಿಸಿರುವರೆಂಬುದನ್ನು ಒಪ್ಪಲೇಬೇಕು. ಹಾಗೆ ಆದಾಗ ಮಾತ್ರ ಶೈಲಿ ಶಕ್ತಿಯುತವಾಗಿಲ್ಲ. ಏನೇ ಆಗಲಿ, ಪ್ರಸ್ತುತ ಲೇಖಕರು ಪರಪ್ರಾಂತಗಳ ಪರದೇಶಗಳ ಇಂತಹ ಕತೆಗಳಿಂದ ಕನ್ನಡ ಸಾಹಿತ್ಯದ ಕಣಜವನ್ನು ಇನ್ನೂ ತುಂಬಲೆಂದು ನಮ್ಮ ಹಾರ್ದಿಕ ಹಾರೈಕೆ

—ಎಸ್. ಎಸ್. ಗದಗಕರ

ಯಾರು ಹೊಣೆ?

(ಕಥಾ ಸಂಕಲನ)

ಬರೆದವರು : ಶ್ರೀಮಾನ್ ಬಿ. ಆರ್. ವಾಡಪ್ಪಿ ಅವರು.

ಈ ಸಂಕಲನಕ್ಕೆ 'ಸಂಯುಕ್ತ ಕರ್ನಾಟಕ'ದ ಸಂಪಾದಕರಾದ ಶ್ರೀಮಾನ್ ವಿ. ಬಿ ನಾಯಕರು ಮುನ್ನುಡಿ ಬರೆದಿದ್ದು ಅದರಲ್ಲಿ ಅವರು "ಇಲ್ಲಿ ನಮ್ಮ ದೈನಂದಿನ ಜೀವನದಲ್ಲಿ ನಮಗೆ ಆಗಾಗ್ಗೆ ಎದುರಾಗುವ ಮಾದರಿಯ ಏಳು ವ್ಯಕ್ತಿಗಳ ಚಿತ್ರಗಳು ಜೆನ್ನಾಗಿ ಮೂಡಿವೆ. ಅವು ಕಥೆಗಳ ರೂಪವನ್ನು ತಳೆದಿರಬಹುದು. ಆದರೆ ಒಂದೊಂದರಲ್ಲಿಯೂ ಮನುಷ್ಯ ಜೀವಿತದ, ಸ್ವಭಾವದ ಒಂದೊಂದು ಮುಖವನ್ನು ಎತ್ತಿ ತೋರಿಸಲಾಗಿದೆ" ಎಂದು ಹೇಳಿರುವರು.

ಇತ್ತೀಚೆಗೆ ವ್ಯಕ್ತಿಚಿತ್ರ, ಸ್ವಭಾವಚಿತ್ರ, ಅನುಭವಚಿತ್ರ, ಹರಟೆ—ಇವೆಲ್ಲವೂ ಸಣ್ಣಕತೆಗಳ ಹೆಸರಿನಲ್ಲಿ ಪ್ರಕಟವಾಗುತ್ತಲಿವೆ. ನಮ್ಮ ತರುಣ ಲೇಖಕರು ಇವುಗಳಲ್ಲಿಯ ತಂತ್ರಭೇದವನ್ನು ಅರಿತುಕೊಂಡು ಬರೆಯುವುದು ಒಳ್ಳೆಯದು. ಒಂದೋ ಹಲವೋ ವ್ಯಕ್ತಿಸ್ವಭಾವಗಳು ಯಾವುದಾದರೊಂದು ವಿಶಿಷ್ಟ ಘಟನೆಗೆ ಕಾರಣವಾಗುವಂತೆ ರೂಪುಗೊಂಡಿದ್ದರೆ, ಆದು ಸಣ್ಣಕಥೆ ಎನಿಸುವುದು. ಒಂದೇ ವ್ಯಕ್ತಿಯ ಜೀವನದಲ್ಲಿಯ ಹಲವು ಚಿಕ್ಕಪುಟ್ಟ ಮಾತುಗಳು ಆ ವ್ಯಕ್ತಿಯ ಸ್ವಭಾವವನ್ನೋ ಸ್ವರೂಪವನ್ನೋ ರೇಖಿಸುತ್ತಲಿದ್ದರೆ ಅದು 'ವ್ಯಕ್ತಿಚಿತ್ರ' ಅಥವಾ 'ಸ್ವಭಾವಚಿತ್ರ' ಆಗುವುದು. ಲೇಖಕನ ಸ್ವಂತದ ಅನುಭವ ಅನೇಕ ಘಟನೆಗಳಿಂದ ಕೂಡಿ ಮನೋರಂಜಕವಾಗಿದ್ದರೂ ಆದು 'ಅನುಭವಚಿತ್ರ' ಎಂದು ಕರೆಯಿಸಿಕೊಳ್ಳುವುದು. ಲೇಖಕನಿಗೆ ಎನಿಸಿದ ಜೀವನ ತತ್ತ್ವವನ್ನು ರಂಜಕವಾದ ಉದಾಹರಣೆಗಳಿಂದ ಲಲಿತವಾದ ಭಾಷೆಯಲ್ಲಿ ಹೇಳಿದರೆ ಆದು ಹರಟೆಯೆನಿಸಿಕೊಳ್ಳುವುದು.

ಈ ಸಂಕಲನದಲ್ಲಿಯ 'ನಿಂಗನ ನಂಬಿಗೆ' 'ಗಂಗೆ ಅಳಿದ ಗಂಗಮ್ಮ' ಇವುಗಳಲ್ಲಿ ಸಣ್ಣ ಕತೆಯ ಹೊಳಹನ್ನು ನಾವು ಕಾಣುವೆವು. 'ಬೂಬಾನ ಬಾಳು' 'ಮೋಟರ ಮಹಮ್ಮದ' ಇವು ಸ್ವಭಾವಚಿತ್ರ—ವ್ಯಕ್ತಿಚಿತ್ರಗಳು. 'ಎರಡು ದೃಷ್ಟಿ' 'ಯಾರು ಹೊಣೆ?' ಇವುಗಳಲ್ಲಿ ಕತೆಗೆ ಬೇಕಾದ ಘಟನೆಗೆ ಎಡೆಯೇ ಇಲ್ಲ. ಇವೆರಡೂ ಅನುಭವ ಚಿತ್ರಗಳು. 'ಮೌನವು ಮುದ್ದಿಗಾಗಿ' ಎಂಬುದೂ ಅಷ್ಟೇ; ಗಂಡ-ಹೆಂಡಿರ ಸ್ವಭಾವಗಳೆರಡನ್ನು ಮೂಡಿಸಲು ಇಲ್ಲಿ ಪ್ರಯತ್ನಮಾಡಿದ್ದಾರೆ.

ಶ್ರೀ. ವಾಡಪ್ಪಿಯವರು ಕನ್ನಡ ಸಾಹಿತ್ಯವನ್ನು ಅಭ್ಯಸಿಸಿ ಎಂ. ಎ. ಪದವಿ ಪಡೆದವರು. ಕನ್ನಡದಲ್ಲಿ ಪ್ರೀತಿ-ಅಭಿಮಾನಗಳನ್ನಿರಿಸಿ, ಸಾಹಿತ್ಯನಿರ್ಮಾಣ ಕಾರ್ಯದಲ್ಲಿಯೂ ದುಡಿಯಲು ಮುಂದೆ ಬಂದವರು. ಅವರ ಅಭ್ಯಾಸ, ಉತ್ಕಟವಾದ ಆಶೆಗಳು ಕನ್ನಡ ರಸಿಕರ ಪ್ರೋತ್ಸಾಹಕ್ಕೆ ಪಾತ್ರವಾಗದಿರವೆಂದು ನಮ್ಮ ನಂಬುಗೆ.

—ಬಿ. ಪಿ. ಎಸ್. ರಾವ್

ಸಾದರ ಸ್ವೀಕಾರ

★

೧೬೮. **ಪುನರ್ಮಿಲನ** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀ. ರಘುನಾಥ ವಾಡೇದ, ಮಿಶ್ರೀಕೋಟಿ. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ೭ನೆಯ ವರ್ಷದ ೧೦ನೆಯ ಕಿರಣ. ಕ್ರೌ. ಅ. ೨೪೨ ಪುಟಗಳು. ಬೆಲೆ ೨-೮-೦.

೧೬೯. **ಬಾಳ್ನೋಟಗಳು** (ಜೀವನ-ಚಿತ್ರಸಂಕಲನ). ಬರೆದವರು ಶ್ರೀಯುತ ಡಾ. ಮೂ. ನಾಯಕರು. ಮೇಲಿನ ಪ್ರತಿಭಾ ಗ್ರಂಥಮಾಲೆಯ ೭ನೆಯ ವರ್ಷದ ೨ನೆಯ ಕಿರಣ. ಕ್ರೌ. ಅ. ೪೦ ಪುಟಗಳು. ಬೆಲೆ ೦-೬-೦.

೧೭೦. **ವೃಂದ** (ಅನುವಾದಿತ ಸಾಮಾಜಿಕ ಕಾದಂಬರಿ). ಅನುವಾದಕರು ಶ್ರೀ. ಪಿ. ವೆಂಕೋಬಾಚಾರ್ಯ ಬಿ.ಎ.ಬಿ.ಟಿ. ಹುಬ್ಬಳ್ಳಿ. ಇದು ಮೇಲಿನ ಗ್ರಂಥಮಾಲೆಯ ೭ನೆಯ ವರ್ಷದ ೩ನೆಯ ಕಿರಣ.

೧೭೧. **ಜಾದೂಗಾರ** (ಕವನ ಸಂಕಲನ). ಕರ್ತೃಗಳು ಶ್ರೀ. ಶ್ರೀ. ವೆಂ. ಗಲಗಲಿ ಮುಂಬಯಿ. ಪ್ರಕಾಶಕರು ಶ್ರೀನಿವಾಸ ಗಲಗಲಿ ೪೦. ಬ್ರಾಹ್ಮಣವಾಡಿ, ಮಾಟುಂಗಾ ಮುಂಬಯಿ ೧೯. ಕ್ರೌ. ಅ. ೩೨ ಪುಟಗಳು. ಬೆಲೆ ೦-೧೦-೦.

೧೭೨. **ಮಕ್ಕಳ ಸಚಿತ್ರ ಭಾರತ** (ಮಹಾಭಾರತ ಕಥಾಸಂಗ್ರಹ) ಮೂಲ ತೆಲುಗಿನಿಂದ ಅನುವಾದಿಸಿದವರು ಶ್ರೀಮತಿ ಎಚ್. ವೈ. ಸರಸ್ವತಮ್ಮ ಆವರು. ಪ್ರಕಾಶಕರು: ಮೈಸೂರು 'ಮಕ್ಕಳಕೂಟ, ಲಕ್ಷ್ಮೀಪುರಂ— ಮೈಸೂರು. ಪೂ. ಕ್ಯಾ. ಡಿ ದ ೧೧೬ ಪುಟಗಳು. ಬೆಲೆ ೨-೦-೦.

೧೭೩. **ಕಾರಾಗೃಹದ ನೆನಪುಗಳು** (ಕಥಾಸಂಕಲನ). ಬರೆದವರು ಶ್ರೀ. ನಾರಾಯಣ ಅವರು. ಪ್ರಕಾಶಕರು: ಹಿಂದ ಕಿತಾಬ್ ಲಿಮಿಟೆಡ್ (ಮುಂಬೈ) ಬೆಂಗಳೂರು ಷಾ. ಕ್ರೌ. ಅ. ೧೪೨ ಪುಟಗಳು. ಬೆಲೆ ೨-೦-೦.

೧೭೪. **ಕನ್ನಡ ಸಂಸ್ಕೃತಿ** (ಸಂಶೋಧನಾತ್ಮಕ ಗ್ರಂಥ). ಬರೆದವರು ಶ್ರೀಮಾನ್ ಎಂ. ಮರಿಯಪ್ಪ ಭಟ್ಟರು ಎಂ. ಎ., ಎಲ್. ಟಿ. ಮದ್ರಾಸ ವಿಶ್ವವಿದ್ಯಾಲಯ. ಪ್ರಕಾಶಕರು ಕರ್ನಾಟಕ ಸಂಘ, ಮದ್ರಾಸು. ಕ್ರೌ. ಅ. ೯೯ ಪುಟಗಳು. ಬೆಲೆ ೧-೪-೦.


ಡಬ್ಬಿನ ಕಾಟ
ಶಾಸ್ತ್ರೀಯ
ಉಪಾಯದಿಂದಲೇ ಕಡಿಯೋದು
ಪೇಟೆಯಲ್ಲಿಯ ಔಷಧದಿಂದಲ್ಲ. ಅವು ಬರೇ ಕ್ಷಣಿಕ ಗುಣಹೊಡುವಂಥವು. ಸ್ವಲ್ಪ ತಡೆದಿಟ್ಟ ಜಮ್ಮು ಹೆಚ್ಚಾಗುತ್ತ ಹೋಗುವುದು. ಆದರೆ ಪುರೋಹಿತ ಶ್ವಾಸಹಾರಿಯು ಅಂಥ ಔಷಧವಲ್ಲ. ಆದು ದಮ್ಮಿಗಾಗಿ ಶಾಸ್ತ್ರೀಯ ಉಪಾಯವೆಂದು ಎಲ್ಲ ಡಾಕ್ಟರರಿಗೂ ಎಷ್ಟೋ ವರ್ಷಗಳಿಂದ ಗೊತ್ತಿದ್ದ ಮಾತು.
ಪುರೋಹಿತ ಶ್ವಾಸಹಾರಿಯು ಸೂತ್ರ ಇಂಥ ಔಷಧವಿದೆ; ಅದನ್ನು ತೆಗೆದು ಕೊಳ್ಳಲು ಹತ್ತಿದ ಕೂಡಲೇ ಕೆಮ್ಮು ಕಡಿದು ಹೋಗಿ ತೇಕು ಕಡಿಮೆ ಆಗುವುದು. ಪಜನಕ್ರಿಯೆ ಹೆಚ್ಚುವುದು. ಶ್ವಾಸಕೋಶ ಗಟ್ಟಿಮುಟ್ಟಾಗಿ ದಮ್ಮು ಖಂಡಿತವಾಗಿ ಬಿಟ್ಟು ಹೋಗುವುದು.
೩-೪, ೬ ಮತ್ತು ೧೦ ರೂ. ಪ್ಯಾಕಿಂಗದಲ್ಲಿ ಎಲ್ಲ ಕಡೆಗೂ ಸಿಗುವದು. ಇಲ್ಲವೆ ಡಾ. ಪುರೋಹಿತ ಫಾರ್ಮಸಿ, ಕೊಲ್ಲಾಪುರ. ಇವರಿಂದ ತರಿಸಿ ಕೊಳ್ಳಬೇಕು.
ಪುರೋಹಿತ
ಶ್ವಾಸಹಾರಿ

೧೭೫. **ಧನ್ಯ ಕನ್ನಡತಾಯಿ** (ಗದ್ಯ ಪದ್ಯಮಯ ಕರ್ನಾಟಕ ವರ್ಣನೆ) ಬರೆದವರು ಮತ್ತು ಪ್ರಕಾಶಕರು: ಚೆನ್ನನಗೌಡ ಮಾಸ್ತರ್ ಬುಕ್‌ಸೇಲರ್ಸ್, ಯಲಬುರ್ಗಿ, ಜಿಲ್ಲಾ ಕೊಪ್ಪಳ; ಹೈದರಾಬಾದ್ ಕರ್ನಾಟಕ. ಕ್ರೌ. ಅ. ೨೦ ಪುಟಗಳು. ಬೆಲೆ ೦-೬-೦.

೧೭೬. **ದಿವಂಗತಾ ಸರೋಜಿನೀದೇವಿ ನಾಯಡೂರವರ ಲಾವಣಿಪದ** ಲೇಖಕರು ಮತ್ತು ಪ್ರಕಾಶಕರು ಮೇಲೆ ಬರೆದಿರುವ ಶ್ರೀಮಾನ್ ಚಿನ್ನನಗೌಡರೇ. ಕ್ರೌ. ಅ. ೬ ಪುಟಗಳು. ಬೆಲೆ ?

೧೭೭. **ಶ್ರೀ ಹರಿದಾಸವಾಣಿ** (ಧಾರ್ಮಿಕ ಮಾಸಪತ್ರಿಕೆ). ಬೆಂಗಳೂರಲ್ಲಿ ಇದೇ ಮಾರ್ಚ್ ತಿಂಗಳಿಂದ ಪ್ರಾರಂಭವಾಗಿದೆ. ಸನ್ಮಾನ್ಯ ಸಲಹೆಗಾರರು: ಹರಿದಾಸರತ್ನಂ ಶ್ರೀಯುತ ಗೋಪಾಲದಾಸರು. ಸಂಪಾದಕರು 'ಸನಾತನ ಧರ್ಮಸೇವಾನಿರತ' ಶ್ರೀ. ಜಿ. ಎಸ್. ಕೃಷ್ಣರಾವ್, ೯೨ ರಾಘವೇಂದ್ರ ಕಾಲನಿ ಬೆಂಗಳೂರು ೨.

೧೭೮. **ವೈಕುಂಠಮುತ್ತಿಗೆ** (ಸಂಗೀತ ನಾಟಕ) ಬರೆದವರು ಶ್ರೀ. ಅಚ್ಯುತರಾವ್ ಹುಯಿಲಗೋಳ. ಪ್ರಕಾಶಕರು ಶ್ರೀಗುರುರಾಜ ಗ್ರಂಥಮಾಲೆ, ವಕೀಲಚಾಳ, ಗದಗ. ಕ್ರೌ. ಅ. ೧೧೭ ಪುಟಗಳು. ಬೆಲೆ ೧-೮-೦.

೧೭೯. **ಧೂಮಕೇತುವಿನ ಸುದುವೆ** (ಕಥಾಸಂಕಲನ) ಲೇಖಕರು 'ಭಾರತೀಸುತ'. ಸಂಪಾದಕರು ಶ್ರೀಯುತರುಗಳಾದ ಬಿ. ಶಂಕರಭಟ್ಟರು ಮತ್ತು ಕೆ. ಎಂ. ಆರ್. ಶೆಟ್ಟಿ. 'ಕನ್ನಡ ಪ್ರಪಂಚ' ಪ್ರಕಾಶನ, ಗಣಪತಿ ಹೈಸ್ಕೂಲ್ ರಸ್ತೆ, ಮಂಗಳೂರು. ಕ್ರೌ. ಅ. ೧೧೪ ಪುಟಗಳು. ಬೆಲೆ ೧-೦-೦

೧೮೦. **ಚಿತ್ರವಾಣಿ** (ಮಾಸಪತ್ರಿಕೆ) ಸಂಪಾದಕರು ಶ್ರೀ. ಎಸ್. ರಾಮನಾಥನ್ ಪ್ರಕಾಶಕರು ಚಿತ್ರ ಪಬ್ಲಿಕೇಷನ್ಸ್ ೭೩ ಚಿಕ್ಕಪೇಟೆ ಬೆಂಗಳೂರು ೨. ಕ್ರೌ. ೧ ವಳಿ ಪುಟಗಳು. ವಾ. ಚಂ. ೪-೮-೦: ಬಿಡಿ ಸಂಚಿಕೆಗೆ ೦-೩-೦.

೧೮೧. **ನಂದಿನಿ** (ಕನ್ನಡ ತ್ರೈಮಾಸಿಕ ಪತ್ರಿಕೆಯ ಮೊದಲನೆಯ ಸಂಚಿಕೆ). ಸಂಪಾದಕರು ಶ್ರೀ. ಜಿ. ಆರ್ ಸುಬ್ಬರಾವ್; ಪ್ರಕಾಶಕರು ಶ್ರೀ. ಕೆ. ಕೇಶವಮೂರ್ತಿ, ಶಿವಮೊಗ್ಗಾ. ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ ಕಂ. ಲಿ. ಶಿವಮೊಗ್ಗಾ. ಕ್ರೌ. ೧ ದ ೬೦ ಪುಟಗಳು. ವಾ. ಚಂ. ೨-೪-೦. ಬಿಡಿ ಸಂಚಿಕೆಗೆ ೦-೮-೦

೧೮೨. **ಕೆಲವು ಸಣ್ಣ ಕಾವ್ಯಗಳು** (ನಾಲ್ಕು ಕಥನ ಕವನಗಳ ಸಂಕಲನ). ಕವಿಗಳು ಶ್ರೀ. ಸೇಡಿಯಾಪು ಕೃಷ್ಣಭಟ್ಟರು, ಸೈಂಟ್ ಎಲೋಶಿಯಸ್, ಕಾಲೇಜ್, ಮಂಗಳೂರು. ಕ್ರೌ. ಅ. ೭೦ ಪುಟಗಳು. ಬೆಲೆ ೧-೮-೦.

೧೮೩. **ಆನಂದಜ್ಯೋತಿ** (ಮಾಸಪತ್ರಿಕೆಯ ಯುಗಾದಿ ಸಂಚಿಕೆ.) ಸಂಪಾದಕರು ಮತ್ತು ಪ್ರಕಾಶಕರು ಶ್ರೀ. ಎಂ. ಸಮಯ್ಯ, ವಿಶ್ವೇಶ್ವರಪುರಂ, ಬೆಂಗಳೂರು, ಕ್ರೌ. ಅ. ೮೦ ಪುಟಗಳು. ಬೆಲೆ ೦-೬-೦.

೧೮೪. **ಯುದ್ಧರಂಗದಿಂದ** (ಕಥಾಸಂಕಲನ). ಲೇಖಕರು ಶ್ರೀ. ಆರ್. ಎ. ನ್. ಪ್ರಕಾಶಕರು ಸ್ವಾವಲಂಬನ ಕಾಶನಗರ್ಜ, ಸುಲ್ತಾನ್ ಬಝಾರ್, ಹೈದರಾಬಾದ್. ಕ್ರೌ. ೬೫೦ ಪುಟಗಳು. ೨೧-೪-೦

೧೮೫. **ನೀತಿಸಾಮಾನ್ಯನೀತಿ** (ನೈತಿಕ ವಿಚಾರ ಸಂಕಲನ). ಲೇಖಕರು ಮತ್ತು ಪ್ರಕಾಶಕರು ಶ್ರೀ. ಗಣೇಶ ರಾಮಯ್ಯ ಹಿಗಡೆ ಕಿಲಾರ, ಪೋ. ಸಿದ್ದಾಪುರ, ಉತ್ತರ ಕನ್ನಡ ಜಿಲ್ಲಾ. ಡೆ. ಅ. ೬೨ ಪುಟಗಳು. ಬೆಲೆ

೧೮೬. **ಬಳ್ಳಿಯ ಏಳಿಗೆ** (ಒಂದು ಪ್ರಬಂಧ). ಬರೆದವರು ಶ್ರೀ. ತಿರುಗ ವೀರಭದ್ರಪ್ಪನವರು, ಆಡೂರು. ಪ್ರಕಾಶಕರು ಶ್ರೀ. ಪಿ. ಸಿ. ಶಾಬಾದಿಮಠ, ಗದಗ. ಡೆ. ಆ. ೨೬ ಪುಟಗಳು. ಬೆಲೆ ೦-೧೨-೦.

೧೮೭. **ಶಾಂತಿಯ ಸಾರ್ವಭೌಮ** (ಬಾ ಮತ್ತು ಬಾಪುರವರ ಜೀವನ ಪರಿಚಯ) ಲೇ. ಶ್ರೀ. ನಾಡಿಗ ಕೃಷ್ಣಮೂರ್ತಿ ಗಳು, ಗೀತಾಸಾಹಿತ್ಯಮಂದಿರ, ಮಲ್ಲೇಶ್ವರಂ, ಬೆಂಗಳೂರು. ಕ್ರೌ. ಅ. ೧೫೨ ಪುಟಗಳು. ಬೆಲೆ ೨-೦-೦.

೧೮೮. **ಸಮ್ಮಾಗದಗಳು** (ಮೂವರು ಗೆಳೆಯರ ಪತ್ರ ಸಂಕಲನ). ಸಂಪಾದಕರು ಶ್ರೀ. ನಾಡಿಗ ಕೃಷ್ಣಮೂರ್ತಿ, ಗೀತಾಸಾಹಿತ್ಯಮಂದಿರ, ಮಲ್ಲೇಶ್ವರಂ—ಬೆಂಗಳೂರು. ಕ್ರೌ. ಅ. ೯೬ ಪುಟಗಳು. ಬೆಲೆ ೦-೧೨-೦.

೧೮೯. **ಕೊರವಂಜಿ** (ಮಾಸಪತ್ರಿಕೆಯ ವಾರ್ಷಿಕ ಸಂಚಿಕೆ). ಸಂಪಾದಕರು ಡಾ. ಶಿವರಾಮ, ಬೆಂಗಳೂರು ಡೆ. ಆ. ೧೧೬ ಪುಟಗಳು. ಬೆಲೆ ೦-೧೨-೦.

೧೯೦. **ತೋರಣ** (ಗದ್ಯ ಪದ್ಯ ಸಂಕಲನ). ಸಂಪಾದಕರು ಪಠ್ಯ ಪುಸ್ತಕ ಸಮಿತಿ, ಬೆಳಗಾಂವಿ. ಪ್ರಕಾಶಕರು ಸಮಿತಿಯ ಪರವಾಗಿ ಶ್ರೀ. ದ. ಬಾ. ಕುಲಕರ್ಣಿ, ಮನೋಹರ ಗ್ರಂಥಭಾಂಡಾರ, ಧಾರವಾಡ. ಕ್ರೌ. ಅ. ಸುಮಾರು ೨೦೦ ಪುಟಗಳು. ಬೆಲೆ ೧-೧೦ ೦.

೧೯೧. **ದ್ರೋಹಿ** (ಮೂರಂಕಗಳ ಸಾಮಾಜಿಕ ನಾಟಕ). ಲೇಖಕರು ಶ್ರೀ. ಹರಿದಾಸ 'ವಿದ್ವಾನ್.' ವೀಣಾ ಪ್ರಕಟನಾಲಯ, ತಿರ್ಥ. ದ. ಕ. ಜಿಲ್ಲಾ. ಕ್ರೌ. ಅ. ೮೮ ಪುಟಗಳು. ಬೆಲೆ ೧-೦-೦

೧೯೨. **ಯದುಪತಿ** (ಸಾಮಾಜಿಕ ಕಾದಂಬರಿಯ 'ಆತ್ಮವಿಕಾಸ' ಎಂಬ ೧ನೆಯ ಭಾಗ). ಬರೆದವರು ಶ್ರೀ. ಸಾಲಿ ರಾಮಚಂದ್ರರಾಯರು. ಪ್ರಕಾಶಕರು ಕರ್ನಾಟಕ ಪ್ರಾಗತಿಕ ಶಿಕ್ಷಣಸಂಘ, ಮುಂಬಯಿ. ಕ್ರೌ. ಅ. ೧೩೬ ಪುಟಗಳು. ಬೆಲೆ ೨-೦-೦.

೧೯೩. **ಶರಸ-ವಿರಸ** (ಕಥಾ ಸಂಕಲನ) ಬರೆದವರು ಶ್ರೀ.ಗಳಾದ ಜಿ. ಆರ್. ಬೆಲ್ಲದ ಮತ್ತು 'ಹುಬ್ಬಳ್ಳಿಯ ಹೂಗಾರ' ಹುಬ್ಬಳ್ಳಿಯ ಸುವಿಕಾಸ ಸಾಹಿತ್ಯ ಸಮಿತಿಯ, ೧ನೆಯ ಗ್ರಂಥ. ಕ್ರೌ. ಅ. ೭೨ ಪುಟಗಳು. ಬೆಲೆ ೦-೧೨-೦

೧೯೪. **ಶಕ್ತಿ** (ಸಾಹಿತ್ಯ ಮಾಸಪತ್ರಿಕೆ). ಸಂಪಾದಕೆ ಶ್ರೀಮತಿ ಎಲ್. ವಿ. ಕಾವೇರಮ್ಮ, ೨೬೮೮-೧ ಕಾಳಿದಾಸ ರಸ್ತೆ, ವಾಣೀವಿಲಾಸ ಮೊಹಲ್ಲಾ, ಮೈಸೂರು. ಕ್ರೌ. ಅ. ೪೮ ಪುಟಗಳು. ವಾ. ಚಂ. ೪-೮-೦. ಬಿಡಿ ಸಂಚಿಕೆಗೆ ೦-೬-೦.

೧೯೫. **ಜೀವನ ಗೀತಾಂಜಲಿ** (ಕವನ ಸಂಕಲನ). ಲೇಖಕರು ಶ್ರೀ. ಮಾರನಾಡು ವರ್ಧಮಾನ ಹೆಗ್ಗಡೆ 'ವಿಶಾರದ.' ಪ್ರಕಾಶಕರು ಶ್ರೀ. ವೀರಸೇವಾಸಂಘ, ಧರ್ಮಸ್ಥಳ, ದ. ಕ. ಜಿಲ್ಲಾ. ಕ್ರೌ. ಅ. ೧೧೮ ಪುಟಗಳು. ಬೆಲೆ ೧-೮-೦.

೧೯೬. **ಕರ್ನಾಟಕ ಕಾಲೇಜ್ ಮಿಸೆಲೆನಿ** (ಷಾಣ್ಮಾಸಿಕ) ಸಂಪಾದಕರು ಪ್ರೊ. ಲುಸಿಯೊ ರಾಡ್ರಿಗ್ಸ್. ಧಾರವಾಡದ ಕರ್ನಾಟಕ ಕಾಲೇಜಿನ ಪತ್ರಿಕೆ ಕ್ರೌ. ೧ ದ ೧೦೬ ಪುಟಗಳು.

೧೯೭. **ಐಸಾಕ್ ನ್ಯೂಟನ್** (ಜೀವನಚರಿತ್ರ) ಲೇಖಕರು ಶ್ರೀಯುತ ಎನ್. ಎಸ್. ವೀರಪ್ಪ ಬಿಎಸ್. ಸಿ. (ಆನರ್ಸ್). ಬಿ. ಟಿ. ಮೈಸೂರಿನ ಉಷಾ ಸಾಹಿತ್ಯಮಾಲೆಯ ಬಿಡಿ ಮುತ್ತು ೯. ಕ್ರೌ. ಅ ೨೮೬ ಪುಟಗಳು. ಬೆಲೆ ೩-೦-೦.

೧೯೮. **ದಿಲ್ಲಿಯ ಪತ್ರಗಳು** (ಪತ್ರಸಂಕಲನ) ಬರೆದವರು ಶ್ರೀ. ಎಸ್. ವಿ. ಕೃಷ್ಣಮೂರ್ತಿರಾವ್. ನ್ಯೂ ದಿಲ್ಲಿ. ಮೇಲಿನ ಉಷಾ ಸಾಹಿತ್ಯಮಾಲೆಯ ಬಿಡಿ ಮುತ್ತು ೧೦. ಕ್ರೌ. ಅ. ೧೯೬ ಪುಟಗಳು. ಬೆಲೆ ೧-೦-೦.